Digitization by eGangot Funding by MoE-IKS

ಚಂದ್ರಜ್ಞಾನಾಗಮ ವಿಚಾರರಶ್ಮಿ

ಸಂಪಾದಕರು
ಡಾ. ಎಂ. ಶಿವಕುಮಾರ ಸ್ವಾಮಿ

ವೀರಶೈವ ಅನುಸಂಧಾನ ಸಂಸ್ಥಾನ
'ನಾವೀನ್ಯ' 365/ಸಿ, 5ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ,
ವಿಜಯನಗರ 2ನೇ ಹಂತ, ಬೆಂಗಳೂರು – 560 040

CC0. In Public Domain ollection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಅನುಸಂಧಾನ ಸಂಸ್ಥಾನ ಕಿರಣ-೭

ಚಂದ್ರಜ್ಞಾನಾಗಮ ವಿಚಾರ ರಶ್ಮಿ

ಸಂಪಾದಕರು

ಡಾ|| ಎಂ. ಶಿವಕುಮಾರಸ್ವಾಮಿ

ಪ್ರಕಾಶಕರು

ವೀರಶೈವ ಅನುಸಂಧಾನ ಸಂಸ್ಥಾನ

'ನಾವೀನ್ಯ', ೩೬೫/ಸಿ, ೫ನೇ 'ಎ' ಮುಖ್ಯರಸ್ತೆ

ರೆಂಕೋ ಬಡಾವಣೆ, ವಿಜಯನಗರ ೨ನೇ ಹಂತ, ಬೆಂಗಳೂರು-೪೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CHANDRAJNANAGAMA VICHARA RASHMI - Edited by Dr. M. Sivakumara Swamy, Professor of Sanskrit (Retired) Bangalore University, No. 88, 4th Cross Diagonal Road, 8th Main Road, R.P.C. Layout, Bangalore-560 040. ☎ 3386938 Publisher : Veerashaiva Anusandhana Samsthan, 'Navinya', 365/C, 5th 'A' Main Road, Remco Layout, Vijayanagar II Stage, Bangalore- 560 040 ☎ 3302537

Page : XX+214

© Veerashaiva Anusandhana Samsthan, Bangalore

First Impression : 2001

Price : Rs. 100/-

D.T.P. by
Varshini Graphics, Bangalore-40 ☎ 3402575

Printers
Sneha Printers
22, 2nd Main Road,
Attiguppe, Vijayanagara II Stage
Bangalore-40 ☎ 3392814, 3302417
E-Mail-snehaprints@usa.net

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ
ಸಂಸ್ಥಾಪಕ ಅಧ್ಯಕ್ಷರು

ಶ್ರೀಮತ್ಕಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು
ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು

ಆಶೀರ್ವಚನ

ವೀರಶೈವ ಧರ್ಮವು ಭಾರತೀಯ ಸನಾತನ ಧರ್ಮಗಳಲ್ಲೊಂದಾಗಿದೆ. ಶೈವಾಗಮ ಸಾಹಿತ್ಯವು ಈ ಧರ್ಮದ ಮೂಲ ಸ್ರೋತವು. ಅನಂತರದ ವೀರಶೈವ ಧರ್ಮಗ್ರಂಥಗಳಿಗೆ ಶೈವಾಗಮಗಳೇ ಪ್ರಧಾನ ಆಕರ. ಆದ್ದರಿಂದ ಅವುಗಳ ಅಧ್ಯಯನ ಎಲ್ಲ ವೀರಶೈವರಿಗೂ ಹಾಗೂ ಭಾರತೀಯ ಧಾರ್ಮಿಕ ಇತಿಹಾಸದ ಸಂಶೋಧನೆಯಲ್ಲಿ ನಿರತರಾದವರಿಗೂ ಅತ್ಯಂತ ಅವಶ್ಯಕ.

"ಸಿದ್ಧಾಂತಶಬ್ದಃ ಪಂಕಜಾದಿಶಬ್ದವತ್ ಯೋಗರೂಢ್ಯಾ ಶಿವಪ್ರಣೀತೇಷು ಕಾಮಿಕಾದಿಷು ದಶಾಷ್ಟಾದಶತಂತ್ರೇಷು ಪ್ರಸಿದ್ಧಃ" (ಸಿದ್ಧಾಂತ ಎಂಬ ಶಬ್ದವು, ಪಂಕಜ=ಕೆಸರಿನಲ್ಲಿ ಹುಟ್ಟಿದ್ದು ಎಂಬುದು ಹೇಗೆ ಯೋಗರೂಢಿಯಿಂದ=ಪದದ ನಿಷ್ಪತ್ತಿಯಿಂದ ಮತ್ತು ಬಳಕೆಯಿಂದ ಕಮಲಕ್ಕೆ ಅನ್ವಯಿಸುವಂತೆ, ಶಿವನಿಂದ ಉಪದೇಶಿಸಲ್ಪಟ್ಟ ಕಾಮಿಕ ಮುಂತಾದ ಇಪ್ಪತ್ತೆಂಟು ಶೈವಾಗಮಗಳಿಗೆ ಅನ್ವಯಿಸುವಂತೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸಿದ್ಧವಾಗಿದೆ) ಎಂಬ ಅಘೋರ ಶಿವಾಚಾರ್ಯರ ಉಕ್ತಿಯಂತೆ ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು ಶಿವಾಗಮಗಳನ್ನು "ಸಿದ್ಧಾಂತ"ವೆಂಬುದಾಗಿ ಕರೆಯುತ್ತಾರೆ. ಆ ಶೈವಾಗಮಗಳ ಉತ್ತರ ಭಾಗದಲ್ಲಿ ವೀರಶೈವಧರ್ಮ-ದರ್ಶನಗಳು ಪ್ರತಿಪಾದಿಸಲ್ಪಟ್ಟಿವೆ; ಇದನ್ನೇ ಸಿದ್ಧಾಂತ ಶಿಖಾಮಣಿಯ (೫.೧೪) ಹೇಳುತ್ತದೆ:

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್॥

ಇಲ್ಲಿ ಉಲ್ಲೇಖಿಸಿದ ಸಿದ್ಧಾಂತ ಶಿಖಾಮಣಿಯಂತೂ ಶೈವಾಗಮ ಉತ್ತರ ಭಾಗಗಳ ಸಾರಸಂಗ್ರಹ. ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಉರಿಲಿಂಗ ಪೆದ್ದಿ ಮುಂತಾದ ಶರಣರು ತಮ್ಮ ವಚನಗಳಲ್ಲಿ ಶೈವಾಗಮಗಳನ್ನು ಉಲ್ಲೇಖಿಸಿದ್ದಾರೆ. ಹೀಗೆ ವೀರಶೈವ ಧರ್ಮ-ದರ್ಶನಗಳಿಗೆ ಶೈವಾಗಮಗಳು ಮೂಲ ಆಕರಗಳು. ಅವುಗಳ ಅಧ್ಯಯನದಿಂದ ವೀರಶೈವ ದೀಕ್ಷೆ, ಷಟ್‌ಸ್ಥಲಾತ್ಮಕ ಸಾಧನಮಾರ್ಗ, ಅಷ್ಟಾವರಣ-ಪಂಚಾಚಾರಗಳ ಮಹತ್ತ್ವ, ವೀರಶೈವ ದಾರ್ಶನಿಕ ತತ್ತ್ವಗಳು ಮುಂತಾದ ವಿಷಯಗಳ ಬಗ್ಗೆ ಮೂಲಭೂತವಾದ ವಿಚಾರಗಳು ಬೆಳಕಿಗೆ ಬರುತ್ತವೆ.

ಹಿಂದೊಂದು ಕಾಲದಲ್ಲಿ ಶೈವಾಗಮ ಸಾಹಿತ್ಯವು ವಿಪುಲವಾಗಿತ್ತು. ಆದರೆ ಕಾಲದ ಉಪ ಉಪಟಳದಿಂದ ಆ ವಿಪುಲ ಸಾಹಿತ್ಯವು ಅದೆಷ್ಟೋ ನಾಶವಾಗಿ ಈಗ ಅದು ಅತ್ಯಲ್ಪ ಪ್ರಮಾಣದಲ್ಲಿ ಅಲ್ಲಲ್ಲಿ ಉಪಲಬ್ಧವಾಗಿದೆ. ಅದಿಷ್ಟು ಉಳಿದದ್ದನ್ನೇ ಉಳಿಸಿಕೊಳ್ಳಬೇಕೆಂಬ ಸದುದ್ದೇಶದಿಂದ ಶ್ರೀಮತ್ ಕಾಶೀ ಜ್ಞಾನಸಿಂಹಾಸನ ಪೀಠ, ಜಂಗಮವಾಡಿ ಮಠ, ವಾರಣಾಸಿಯಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಸಂಸ್ಥಾಪಿಸಿ ಅದರ ಅಧೀನದಲ್ಲಿ ಅನೇಕ ಜನಕಲ್ಯಾಣ ಯೋಜನೆಗಳನ್ನು ರೂಪಿಸುವುದರ ಜೊತೆಗೆ "ಶೈವ ಭಾರತೀ ಶೋಧ ಪ್ರತಿಷ್ಠಾನ" ಎಂಬ ಶೈವಾಗಮಗಳ ಸಂಶೋಧನಾ ಕೇಂದ್ರವನ್ನು ಆರಂಭಿಸಿ ನಡೆಸಲಾಗುತ್ತಿದೆ. ಈಗ ಆರು ವರ್ಷಗಳಿಂದ ಈ ಪ್ರತಿಷ್ಠಾನವು ಗಣನೀಯವಾದ ಸಾಧನೆಯನ್ನು ಮಾಡಿದೆ. ಈ ಪ್ರತಿಷ್ಠಾನದಿಂದ ಈಗಾಗಲೇ ಚಂದ್ರಜ್ಞಾನಾಗಮ, ಮಕುಟಾಗಮ, ಸೂಕ್ಷ್ಮಾಗಮ, ಕಾರಣಾಗಮ, ಪಾರಮೇಶ್ವರಾಗಮ ಮತ್ತು ವೀರಶೈವ ಭಾಷ್ಯಗಳೊಂದಿಗೆ ಈಶ, ಕೇನ, ಸಿದ್ಧಾಂತಶಿಖೋಪನಿಷತ್ತುಗಳು ಹಿಂದಿ ಮತ್ತು ಇಂಗ್ಲಿಷ್ ಅನುವಾದಗಳೊಂದಿಗೆ ಪ್ರಕಟಗೊಂಡು ವಿದ್ವತ್ಸಮಾಜದಲ್ಲಿ ಮನ್ನಣೆಯನ್ನು ಪಡೆದಿವೆ. ಈ ಸಂಶೋಧನಾ ಕಾರ್ಯದ ಮುನ್ನಡೆಯನ್ನು ಅನುಲಕ್ಷಿಸಿ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ಶೈವಭಾರತೀ ಪ್ರತಿಷ್ಠಾನಕ್ಕೆ ಮಾನ್ಯತೆಯನ್ನು ನೀಡಿ ಪ್ರತಿವರ್ಷವೂ ಅನುದಾನವನ್ನು ಕೊಡುತ್ತಲಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಭಾಷೆಗಳಲ್ಲಿ ಅನುವಾದ ಹೊಂದಿ ಪ್ರಕಟವಾದ, ಪ್ರಕಟವಾಗುತ್ತಿರುವ ಮತ್ತು ಪ್ರಕಟವಾಗಲಿರುವ ಸಮಗ್ರ ಸಾಹಿತ್ಯವನ್ನು ಪ್ರಾಂತೀಯ ಭಾಷೆಯಲ್ಲಿ ಅನುವಾದಗೊಳಿಸುವ ಕಾರ್ಯವನ್ನು ಈಗ ಒಂದೆರಡು ವರ್ಷಗಳಿಂದ ಕೈಗೆತ್ತಿಕೊಳ್ಳಲಾಗಿದೆ. ಕನ್ನಡ ಭಾಷೆಗೆ ಅನುವಾದಗೊಳಿಸುವ ಉದ್ದೇಶದಿಂದ ಬೆಂಗಳೂರು ಮಹಾನಗರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ (ರಿ) ಇದರ ಶಾಖೆಯನ್ನು ಸ್ಥಾಪಿಸಿ, ಅದರ ಅಡಿಯಲ್ಲಿ "ವೀರಶೈವ ಅನುಸಂಧಾನ ಸಂಸ್ಥಾನ" ಎಂಬ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು ಅದರ ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವ ಡಾ।। ಎಂ. ಶಿವಕುಮಾರ ಸ್ವಾಮಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ನಿರ್ದೇಶನದಲ್ಲಿ ಅನೇಕ ಜನ ಸಂಸ್ಕೃತ ವಿದ್ವಾಂಸರು ಶೈವಾಗಮಗಳನ್ನು ಅನುವಾದಿಸುವ ಕಾರ್ಯವನ್ನು ಪ್ರಾರಂಭಿಸಿದ್ದಾರೆ.

ಇದಲ್ಲದೆ ಮೂಲ ಪ್ರತಿಷ್ಠಾನದ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಈ ವೀರಶೈವ ಅನುಸಂಧಾನ ಸಂಸ್ಥಾನವು ವೀರಶೈವ ಧರ್ಮ-ದರ್ಶನ-ಗ್ರಂಥಗಳ ಮೇಲೆ ವಿಚಾರ ಸಂಕಿರಣಗಳನ್ನು ನಡೆಸುವ ಕಾರ್ಯವನ್ನೂ ಹಮ್ಮಿಕೊಂಡಿದೆ. ಅದರಂತೆ ಇದೇ ೨೦೦೦ ಜುಲೈ ತಿಂಗಳ ೨೨ ಮತ್ತು ೨೩ರಂದು "ಚಂದ್ರಜ್ಞಾನಾಗಮದ ವಿಚಾರ ರಶ್ಮಿ" ಎಂಬ ವಿಚಾರ ಸಂಕಿರಣವನ್ನು ಹರಪನಹಳ್ಳಿಯಲ್ಲಿ ಏರ್ಪಡಿಸಲಾಗಿತ್ತು. ಆ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಇಷ್ಟು ಬೇಗ ಪ್ರಕಟಣೆಗೆ ಅಣಿಗೊಳಿಸಿರುವುದನ್ನು ನೋಡಿ ನಮಗೆ ಪರಮಸಂತೋಷವಾಗಿದೆ. ಈ ಕೃತಿಯನ್ನು ಸಮರ್ಥವಾಗಿ ಸಂಪಾದಿಸಿ ಕೊಟ್ಟ ವಿದ್ವಾಂಸರಾದ ಡಾ।। ಎಂ. ಶಿವಕುಮಾರ ಸ್ವಾಮಿ ಅವರಿಗೂ, ಪ್ರಬಂಧಗಳನ್ನು ರಚಿಸಿದ ವಿದ್ವಾಂಸರುಗಳಿಗೆ ಮತ್ತು ಇದರ ಪ್ರಕಾಶನಕ್ಕೆ ನೆರವಾದ ಷ।। ಬ್ರ।। ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಹಾಗೂ ಸಂಸ್ಥಾನದ ಪೋಷಕ ಮಂಡಲಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿಗಳು ಮತ್ತು ಸದಸ್ಯರುಗಳಿಗೆ ಮತ್ತು ಸಂಪಾದಕ ಮಂಡಲಿಯ ಸದಸ್ಯರುಗಳಿಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರು ಹಾಗೂ ಕಾಶೀ ಕ್ಷೇತ್ರನಾಥ ವಿಶ್ವನಾಥ, ಅನ್ನಪೂರ್ಣಾದೇವಿ, ವಿಶಾಲಾಕ್ಷಿದೇವಿಯವರು ಸಮಸ್ತ ಸನ್ಮಂಗಳ ಪರಂಪರೆಯನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ, ಮತ್ತು ಧರ್ಮಾಭಿಮಾನಿಗಳು ಹಾಗೂ ವಿದ್ವಾಂಸರು ಈ ಗ್ರಂಥದ ಪ್ರಯೋಜನವನ್ನು ಪಡೆಯಲಿ ಎಂದು ಆಶಿಸುತ್ತೇವೆ.

ಇತ್ಯಾಶಿಷಃ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಾನಿಗಳು

ಷ|| ಬ್ರ|| ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳವರು

ತತ್ತ್ವಜ್ಞಾನದ ತವರೆನಿಸಿದ ಭರತಖಂಡದಲ್ಲಿ ಸುಂದರ ಸೊಬಗಿನ ಬೀಡು ಕರ್ನಾಟಕ. ಕರ್ನಾಟಕದಲ್ಲಿ ಹರಪುರವೆಂದೇ ಪ್ರಸಿದ್ಧವಾಗಿದ್ದ ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿಯ ತೆಗ್ಗಿನಮಠವು ವೀರಶೈವ ಪಂಚಪೀಠಗಳಲ್ಲೊಂದಾದ ಶ್ರೀ ಮದ್ರಾಂಭಾಪುರಿ ಪೀಠದ ಶಾಖಾಮಠವಾಗಿದ್ದು ಧಾರ್ಮಿಕವಾಗಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ತಮ್ಮ ಪೂರ್ವಜರು ಆರಂಭಿಸಿದ ಸಾಹಿತ್ಯ, ಸಂಗೀತ, ಜ್ಯೋತಿಷ್ಯ, ವೈದಿಕ, ಔಷಧೋಪಚಾರ, ಅನ್ನದಾಸೋಹ ಇವುಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಕೀರ್ತಿ ಶ್ರೀ ಮಠದ ಇಂದಿನ ಪಟ್ಟಾಧ್ಯಕ್ಷರಾದ ಷ|| ಬ್ರ|| ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳವರಿಗೆ ಸಲ್ಲುತ್ತದೆ. ಶ್ರೀಗಳವರು ನಡೆದು ಬಂದ ದಾರಿಯ ಒಂದು ವಿಹಂಗಮ ನೋಟ ಇಲ್ಲಿದೆ.

ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳವರು ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕು ನಾಗತಿಬಸಾಪುರ ಎಂಬ ಗ್ರಾಮದಲ್ಲಿ ಶ್ರೀ ಪಿ. ತೆಗ್ಗಿಮಠದ ಶಿವಶಂಕರಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುಣ್ಯ ಗರ್ಭದಲ್ಲಿ ೧೯೩೭ ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲಿಯೇ ಪೂರೈಸಿ, ಪ್ರೌಢಶಿಕ್ಷಣವನ್ನು ಹರಪನಹಳ್ಳಿಯಲ್ಲಿ, ಬಿ.ಎ, ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ, ಸ್ನಾತಕೋತ್ತರ ಪದವಿಯನ್ನು (ಎಂ.ಎ., ತತ್ತ್ವಶಾಸ್ತ್ರ) ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ವೇದ-ಸಂಸ್ಕೃತಾಭ್ಯಾಸವನ್ನು ಬೆಂಗಳೂರು ಮಹಾನಗರದಲ್ಲಿ ಪಡೆದರು.

ವಿದ್ಯಾಭ್ಯಾಸದ ನಂತರ ಶ್ರೀಗಳವರು ೧೯೬೪ರಲ್ಲಿ ಗುಲಬರ್ಗಾದ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ, ರೀಡರ್ ಆಗಿ ಸೇವೆ ಸಲ್ಲಿಸಿದರು. ೧೯೭೦ರಲ್ಲಿ ಹರಿಹರದ ಎಸ್.ಜೆ.ವಿ.ಪಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ನೇಮಕಗೊಂಡು ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದರು.

ತ್ರಿಕಾಲ ವಂದನೀಯರೂ, ಪರಮ ತಪೋನಿಧಿಗಳೂ ಆಗಿದ್ದ ಶ್ರೀ ಮದ್ರಾಂಭಾಪುರಿ ಪೀಠದ ಜಗದ್ಗುರುಗಳಾಗಿದ್ದ ವೀರಗಂಗಾಧರ ಭಗವತ್ಪಾದರ ದಿವ್ಯ ಸನ್ನಿಧಿಯಲ್ಲಿ ೬-೨-೧೯೭೩ರಂದು ಹರಪನಹಳ್ಳಿಯ ತೆಗ್ಗಿನಮಠದ ಪಟ್ಟಾಧಿಕಾರಿಗಳಾದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ್ರಮೌಳೀಶ್ವರ ಸ್ವಾಮೀಜಿಯವರು ತೆಗ್ಗಿಮಠದ ಪೀಠಾಧಿಪತಿಗಳಾಗುತ್ತಿದ್ದಂತೆ ತಮ್ಮ ಸುತ್ತಲೂ ಕಂಡದ್ದು ಬಡತನ, ನಿರುದ್ಯೋಗ, ಅನಕ್ಷರತೆ, ಧರ್ಮಾಚರಣೆಯಲ್ಲಿ ನಿರಾಸಕ್ತಿ. ಅಲ್ಲಿನ ಪರಿಸ್ಥಿತಿ ಹಾಗೂ ಸಮಸ್ಯೆಗಳು ಹೀಗಿರುವಾಗ ತಮ್ಮ ದೂರದೃಷ್ಟಿ ಮತ್ತು ತಪೋಬಲಗಳಿಂದ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾದರು. ಟಿ.ಎಂ.ಎ.ಇ. ಸಂಸ್ಥೆ ಹರಪನಹಳ್ಳಿಯಂತೆಯೇ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ, ಉನ್ನತ ಶಿಕ್ಷಣದವರೆಗೆ ಅನೇಕ ಶಾಲಾ-ಕಾಲೇಜುಗಳನ್ನು ಆರಂಭಿಸಿ ಶಿಕ್ಷಣ ರಂಗದಲ್ಲಿ ಕ್ರಾಂತಿಯನ್ನೇ ಮಾಡಿದ್ದಾರೆ. ಈ ಸಂಸ್ಥೆಯ ಆಶ್ರಯದಲ್ಲಿ ೨ ಆಯುರ್ವೇದ ಕಾಲೇಜುಗಳು, ೨ ಔಷಧ ವಿಜ್ಞಾನ ಕಾಲೇಜು, ೭ ಪಾಲಿಟೆಕ್ನಿಕ್‌ಗಳು, ೨ ಬಿ.ಇಡಿ. ಕಾಲೇಜುಗಳು, ೧೧ ಐ.ಟಿ.ಐ ಗಳು, ೬ ಪ್ರೌಢಶಾಲೆಗಳು, ೩ ವಿದ್ಯಾರ್ಥಿನಿಲಯಗಳು, ೧ ಸಿ.ಪಿ.ಇಡಿ ಕಾಲೇಜು, ೧ ಟಿ.ಸಿ.ಎಚ್. ಕಾಲೇಜು, ಸಂಸ್ಕೃತ ಪಾಠಶಾಲೆ, ೧ ಅಂಗನವಾಡಿ ತರಬೇತಿ ಕೇಂದ್ರ -ಹೀಗೆ ಮೂವತ್ತಕ್ಕೂ ಹೆಚ್ಚು ಸಂಸ್ಥೆಗಳು ಹೆಮ್ಮರವಾಗಿ ಬೆಳೆದು ಸಮಾಜಕ್ಕೆ ತಮ್ಮ ಫಲವನ್ನು ನೀಡುತ್ತಿವೆ. ಶ್ರೀಗಳವರು ಹೊತ್ತಿಸಿದ ಜ್ಞಾನಜ್ಯೋತಿ ನಿರಂತರವಾಗಿ ಪ್ರಜ್ವಲಿಸುತ್ತದೆ.

ದಿನಾಂಕ: ೧,೨,೩ ನೇ ಸೆಪ್ಟೆಂಬರ್ ೧೯೯೭ ರಂದು ಚಂದ್ರಮೌಳೀಶ್ವರ ಸ್ವಾಮಿಗಳವರ ಷಷ್ಟ್ಯಬ್ಧಿಪೂರ್ತಿ ಸಮಾರಂಭವು ವೈಭವೋಪೇತವಾಗಿ ಜರುಗಿದರೆ, ೧೯೯೬ನೇ ಇಸವಿ ಮಾರ್ಚ್ ೭ ಮತ್ತು ೮ನೇ ದಿನಾಂಕಗಳಂದು ಪಂಚಪೀಠಾಧೀಶ್ವರರ ದಿವ್ಯಸಾನ್ನಿಧ್ಯದಲ್ಲಿ ಚಂದ್ರಮೌಳೀಶ್ವರ ಸ್ವಾಮೀಜಿಯವರ ಪೀಠಾರೋಹಣ ರಜತಮಹೋತ್ಸವ ಸಮಾರಂಭವು ವೈಭವೋಪೇತವಾಗಿ ಜರುಗಿತು. ಆ ಸಂದರ್ಭದಲ್ಲಿ ಸಹಸ್ರಾರು ಅಭಿಮಾನಗಳು ಹಾಗೂ ಭಕ್ತರು ಶ್ರೀಗಳವರ ಸಾಧನೆ-ಸಿದ್ಧಿಗಳನ್ನು ಒಳಗೊಂಡ 'ಕ್ರಿಯಾಶೀಲ' ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿದರಲ್ಲದೆ 'ಜ್ಞಾನದೀವಟಿಗೆ' ಎಂಬ ಸ್ಮರಣ ಸಂಚಿಕೆಯನ್ನೂ ಹೊರತಂದರು. ಈ ಸಮಾರಂಭಗಳ ಪ್ರಯುಕ್ತ ಶ್ರೀಗಳವರು ಹಲವಾರು ಯೋಜನೆಗಳನ್ನು ಪ್ರಕಟಿಸಿದ್ದರು, ಅವು ಈಗ ಒಂದೊಂದೇ ಜಾರಿಗೊಳ್ಳುತ್ತಲಿವೆ.

ತೆಗ್ಗಿನ ಮಠ ಗ್ರಾಮೀಣ ವಿಕಾಸ ಟ್ರಸ್ಟ್, ಹರಪನಹಳ್ಳಿ

ಶ್ರೀ ಚಂದ್ರಮೌಳೀಶ್ವರ ಸ್ವಾಮೀಜಿಯವರು ತಮ್ಮ ಷಷ್ಟ್ಯಬ್ಧಿ ಪೂರ್ತಿಯ ಸವಿನೆನಪಿಗಾಗಿ ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗಾಗಿ, ಸಾಮಾಜಿಕ ಕಾರ್ಯಗಳನ್ನು ಮಾಡುವ ಬಯಕೆಯಿಂದ ಶ್ರೀಮಠದಿಂದ ಒಂದು ಲಕ್ಷ ರೂಪಾಯಿಗಳ ದೇಣಿಗೆ ನೀಡಿ ಈ ಟ್ರಸ್ಟನ್ನು ಸ್ಥಾಪಿಸಿದರು. ನಂತರ ಶ್ರೀಗಳು ತಮ್ಮ ಅವಿರತ ಪ್ರಯತ್ನದಿಂದ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ನಿಧಿಯನ್ನಾಗಿ ಮಾಡಿದ್ದಾರೆ. ಈ ಟ್ರಸ್ಟ್ ಮೂಲಕ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವುದು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಡವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಶಿಷ್ಯವೇತನ ನೀಡುವುದು, ಪುಸ್ತಕ ಪ್ರಕಟಣೆ, ಸಮುದಾಯ ಭವನಗಳನ್ನು ನಿರ್ಮಾಣ ಮಾಡುವುದು, ಗ್ರಾಮಾಂತರ ಹೈನುಗಾರಿಕೆಗೆ ಸಹಾಯ ಒದಗಿಸುವುದು, ಸನಾತನ ವಿದ್ಯೆಗಳಾದ ವೇದ, ಜ್ಯೋತಿಷ್ಯ, ಸಂಸ್ಕೃತ ಹಾಗೂ ಕಂಪ್ಯೂಟರ್ ಶಿಕ್ಷಣ ಒಧಗಿಸುವುದು... ಹೀಗೆ ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತಾರೆ.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಕಾಶನ

ವೈಚಾರಿಕ, ವೈಜ್ಞಾನಿಕ, ಸೈದ್ಧಾಂತಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂದೇಶಗಳನ್ನು ಸಾರುವಂತಹ ಕೃತಿಗಳನ್ನು ನಾಡು-ನುಡಿಗೆ ನೀಡುವ ಸಲುವಾಗಿ ಶ್ರೀಗಳವರು ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಹೆಸರಿನಲ್ಲಿ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಈ ಸಂಸ್ಥೆಯು ಈ ದಿಶೆಯಲ್ಲಿ ಈಗಾಗಲೇ ಕ್ರಿಯಾಶೀಲವಾಗಿದ್ದು ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಪುರಾಣ, ವೀರಶೈವರಿಗೆ ಶಿವಾಚಾರ್ಯರ ಕೊಡುಗೆ, ವೀರಶೈವಧರ್ಮ, ವೀರಶೈವ ಧರ್ಮಗ್ರಂಥಗಳು, ವೀರಶೈವ ಅಧ್ಯಯನಗಳು, ಶರನ್ನವರಾತ್ರಿ ಮುಂತಾದ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ.

ಕೊಡುಗೈ ದೊರೆ – ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳವರು 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬ ನಾಣ್ಣುಡಿಯಲ್ಲಿ ಅಪಾರ ನಂಬಿಕೆಯುಳ್ಳವರು. ಸಮಾಜದಲ್ಲಿನ ಭಕ್ತರ ಉದಾರ ಸಹಾಯ-ಸಹಕಾರಗಳಿಂದ ಶ್ರೀಮಠ ಬೆಳೆದಿದೆ. ಈ ಸಂಪತ್ತನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸಬೇಕೆಂಬ ಮಹದಿಚ್ಛೆಯಿಂದ ಶ್ರೀಗಳವರು ಹಲವಾರು ಸಾಮಾಜಿಕ ಕಾರ್ಯಗಳಿಗೆ ಉದಾರವಾಗಿ ದಾನ ಮಾಡಿ ಕೊಡುಗೈ ದೊರೆಯೆನಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ- ಬೆಟ್ಟದ ಶ್ರೀ ಮಲ್ಲೇಶ್ವರ ಕ್ಷೇತ್ರದಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಲ್ಯಾಣ ಮಂಟಪದ ನಿರ್ಮಾಣ; ಹೂವಿನಹಡಗಲಿ ತಾಲ್ಲೂಕು ನಾಗತಿಬಸಾಪುರ ಗ್ರಾಮದಲ್ಲಿ ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸಮುದಾಯ ಭವನದ ನಿರ್ಮಾಣ; ಹರಪನಹಳ್ಳಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಸಜ್ಜಿತವಾದ ಕಲ್ಯಾಣ ಮಂಟಪದ ನಿರ್ಮಾಣ; ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ಮಂಗಲಭವನದ ನಿರ್ಮಾಣ; ಒಂದು ಲಕ್ಷ, ಕೇದಾರಪೀಠದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ, ಕಾಶಿಯ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಗದಗ ಶಾಖೆಯ ಪಾಠಶಾಲೆಯ ನಿರ್ಮಾಣಕ್ಕೆ, ಉಜ್ಜಯಿನಿ ವಟಕ್ಷೇತ್ರದ ಜೀರ್ಣೋದ್ಧಾರಕ್ಕೆ, ಕಾರ್ಗಿಲ್ ಯುದ್ಧ ಸಂತ್ರಸ್ತರ ಪರಿಹಾರ ನಿಧಿಗೆ ತಲಾ ೫೧,೦೦೦/- ರೂಪಾಯಿಗಳನ್ನು ನೀಡಿರುತ್ತಾರೆ. ಇವಲ್ಲದೆ ಐದು, ಹತ್ತು, ಹದಿನೈದು, ಇಪ್ಪತ್ತೈದು ಸಾವಿರ ರೂಪಾಯಿಗಳ ಕೊಡುಗೆಗಳು ನೂರಾರು ಸಂಖ್ಯೆಯಲ್ಲಿದ್ದು ಸಂಘ-ಸಂಸ್ಥೆಗಳು, ಮಠ-ಮಂದಿರಗಳು, ಸಾಮಾಜಿಕ ಸಂಘಟನೆಗಳು ಶ್ರೀಗಳವರನ್ನು ಕೇಳಿ ಇಲ್ಲ ಎನಿಸಿಕೊಂಡಿಲ್ಲವೆಂಬುದು ಶ್ರೀಗಳವರ ಹೆಗ್ಗಳಿಕೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀ ಜಗದ್ಗುರುಗಳಿಂದ 'ಸಿದ್ಧಾಂತ ಶಿಖಾಮಣಿ'ಯ ಆಧ್ಯಾತ್ಮಿಕ ಪ್ರವಚನ ಹಾಗೂ ಮಹಾಪೂಜಾನುಷ್ಠಾನದ ಆಯೋಜನೆ

ಹರಪನಹಳ್ಳಿಯಲ್ಲಿ ದಿನಾಂಕ ೧೭-೭-೨೦೦೦ ದಿಂದ ೩೧-೭-೨೦೦೦ ದವರೆಗೆ ಶ್ರೀ ಕಾಶೀ ಜಗದ್ಗುರುಗಳವರ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನ ಹಾಗೂ ಮಹಾಪೂಜೆಯನ್ನು ಆಯೋಜಿಸಿದ್ದರು. ೧೫ ದಿನಗಳ ಕಾಲ ಜರುಗಿದ ಈ ಕಾರ್ಯಕ್ರಮ ಹರಪನಹಳ್ಳಿಯ ಧಾರ್ಮಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲೆಂದೇ ಹೇಳಬೇಕು. ಇದೇ ಸಂದರ್ಭದಲ್ಲಿ ೨೨-೭-೨೦೦೦ ಮತ್ತು ೨೩-೭-೨೦೦೦ ದಿನಗಳಂದು ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಹರಪನಹಳ್ಳಿಯಲ್ಲಿ ನಡೆಸಿಕೊಟ್ಟ ಚಂದ್ರಜ್ಞಾನಾಗಮ ಕುರಿತ ವಿಚಾರ ಸಂಕಿರಣದ ಸಮಸ್ತ ವೆಚ್ಚದ ಹೊಣೆಯನ್ನು ಶ್ರೀಗಳು ಹೊತ್ತು, ಅಚ್ಚುಕಟ್ಟಾಗಿ ಕಾರ್ಯಕ್ರಮಗಳು ನಡೆಯುವಂತೆ ವ್ಯವಸ್ಥೆ ಮಾಡಿದ್ದರು. ತಮ್ಮ ಶ್ರೀಮಠದಲ್ಲಿ ಜರುಗಿದ ವಿಚಾರ ಸಂಕಿರಣದ ಅನಿರೀಕ್ಷಿತ ಯಶಸ್ಸಿನಿಂದಲೂ, ಅಲ್ಲಿನ ಜನತೆಯ ಮನಸ್ಸಿನ ಮೇಲೆ ವಿಚಾರ ಸಂಕಿರಣದಲ್ಲಿ ಚರ್ಚಿತವಾದ ವಿಷಯಗಳು ಪ್ರಭಾವ ಬೀರಿ ಫಲ ನೀಡುತ್ತಿರುವುದನ್ನು ಕಂಡು ಶ್ರೀಗಳವರು ಆನಂದತುಂದಿಲರಾಗಿದ್ದಾರೆ. ಆ ವಿಚಾರಸಂಕಿರಣದಲ್ಲಿ ಮಂಡನೆಯಾದ ವಿದ್ವತ್ಪ್ರಬಂಧಗಳ ಸಂಕಲನವೇ ಪ್ರಸ್ತುತ ಗ್ರಂಥವಾದ "ಚಂದ್ರಜ್ಞಾನಾಗಮ ವಿಚಾರ ರಶ್ಮಿ" ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳವರು ಈ ಗ್ರಂಥದ ಮುದ್ರಣದ ಸಮಸ್ತ ವೆಚ್ಚವನ್ನು ಭರಿಸುವುದರ ಮೂಲಕ ವಿಚಾರ ಸಂಕಿರಣದ ಯಶಸ್ಸಿನಿಂದ ತಮಗಾಗಿರುವ ಆನಂದವನ್ನು ಸಮಾಜದೊಂದಿಗೆ ಹಂಚಿಕೊಳ್ಳಲು ಬಯಸಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಡವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಶಿಷ್ಯವೇತನ ನೀಡುವುದು, ಪುಸ್ತಕ ಪ್ರಕಟಣೆ, ಸಮುದಾಯ ಭವನಗಳನ್ನು ನಿರ್ಮಾಣ ಮಾಡುವುದು, ಗ್ರಾಮಾಂತರ ಹೈನುಗಾರಿಕೆಗೆ ಸಹಾಯ ಒದಗಿಸುವುದು, ಸನಾತನ ವಿದ್ಯೆಗಳಾದ ವೇದ, ಜ್ಯೋತಿಷ್ಯ, ಸಂಸ್ಕೃತ ಹಾಗೂ ಕಂಪ್ಯೂಟರ್ ಶಿಕ್ಷಣ ಒಧಗಿಸುವುದು... ಹೀಗೆ ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತಾರೆ.

ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಕಾಶನ

ವೈಚಾರಿಕ, ವೈಜ್ಞಾನಿಕ, ಸೈದ್ಧಾಂತಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂದೇಶಗಳನ್ನು ಸಾರುವಂತಹ ಕೃತಿಗಳನ್ನು ನಾಡು-ನುಡಿಗೆ ನೀಡುವ ಸಲುವಾಗಿ ಶ್ರೀಗಳವರು ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಹೆಸರಿನಲ್ಲಿ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಈ ಸಂಸ್ಥೆಯು ಈ ದಿಶೆಯಲ್ಲಿ ಈಗಾಗಲೇ ಕ್ರಿಯಾಶೀಲವಾಗಿದ್ದು ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಪುರಾಣ, ವೀರಶೈವರಿಗೆ ಶಿವಾಚಾರ್ಯರ ಕೊಡುಗೆ, ವೀರಶೈವಧರ್ಮ, ವೀರಶೈವ ಧರ್ಮಗ್ರಂಥಗಳು, ವೀರಶೈವ ಅಧ್ಯಯನಗಳು, ಶರನ್ನವರಾತ್ರಿ ಮುಂತಾದ ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ.

ಕೊಡುಗೈ ದೊರೆ – ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳವರು 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬ ನಾಣ್ಣುಡಿಯಲ್ಲಿ ಅಪಾರ ನಂಬಿಕೆಯುಳ್ಳವರು. ಸಮಾಜದಲ್ಲಿನ ಭಕ್ತರ ಉದಾರ ಸಹಾಯ-ಸಹಕಾರಗಳಿಂದ ಶ್ರೀಮಠ ಬೆಳೆದಿದೆ. ಈ ಸಂಪತ್ತನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸಬೇಕೆಂಬ ಮಹದಿಚ್ಛೆಯಿಂದ ಶ್ರೀಗಳವರು ಹಲವಾರು ಸಾಮಾಜಿಕ ಕಾರ್ಯಗಳಿಗೆ ಉದಾರವಾಗಿ ದಾನ ಮಾಡಿ ಕೊಡುಗೈ ದೊರೆಯೆನಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ- ಬೆಟ್ಟದ ಶ್ರೀ ಮಲ್ಲೇಶ್ವರ ಕ್ಷೇತ್ರದಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಲ್ಯಾಣ ಮಂಟಪದ ನಿರ್ಮಾಣ; ಹೂವಿನಹಡಗಲಿ ತಾಲ್ಲೂಕು ನಾಗತಿಬಸಾಪುರ ಗ್ರಾಮದಲ್ಲಿ ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸಮುದಾಯ ಭವನದ ನಿರ್ಮಾಣ; ಹರಪನಹಳ್ಳಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುಸಜ್ಜಿತವಾದ ಕಲ್ಯಾಣ ಮಂಟಪದ ನಿರ್ಮಾಣ; ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದ ಮಂಗಲಭವನದ ನಿರ್ಮಾಣ; ಒಂದು ಲಕ್ಷ, ಕೇದಾರಪೀಠದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ, ಕಾಶಿಯ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಗದಗ ಶಾಖೆಯ ಪಾಠಶಾಲೆಯ ನಿರ್ಮಾಣಕ್ಕೆ, ಉಜ್ಜಯಿನಿ ವಟಕ್ಷೇತ್ರದ ಜೀರ್ಣೋದ್ಧಾರಕ್ಕೆ, ಕಾರ್ಗಿಲ್ ಯುದ್ಧ ಸಂತ್ರಸ್ತರ ಪರಿಹಾರ ನಿಧಿಗೆ ತಲಾ ೫೧,೦೦೦/- ರೂಪಾಯಿಗಳನ್ನು ನೀಡಿರುತ್ತಾರೆ. ಇವಲ್ಲದೆ ಐದು, ಹತ್ತು, ಹದಿನೈದು, ಇಪ್ಪತ್ತೈದು ಸಾವಿರ ರೂಪಾಯಿಗಳ ಕೊಡುಗೆಗಳು ನೂರಾರು ಸಂಖ್ಯೆಯಲ್ಲಿದ್ದು ಸಂಘ-ಸಂಸ್ಥೆಗಳು, ಮಠ-ಮಂದಿರಗಳು, ಸಾಮಾಜಿಕ ಸಂಘಟನೆಗಳು ಶ್ರೀಗಳವರನ್ನು ಕೇಳಿ ಇಲ್ಲ ಎನಿಸಿಕೊಂಡಿಲ್ಲವೆಂಬುದು ಶ್ರೀಗಳವರ ಹೆಗ್ಗಳಿಕೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಶೀ ಜಗದ್ಗುರುಗಳಿಂದ 'ಸಿದ್ಧಾಂತ ಶಿಖಾಮಣಿ'ಯ ಆಧ್ಯಾತ್ಮಿಕ ಪ್ರವಚನ ಹಾಗೂ ಮಹಾಪೂಜಾನುಷ್ಠಾನದ ಆಯೋಜನೆ

ಹರಪನಹಳ್ಳಿಯಲ್ಲಿ ದಿನಾಂಕ ೧೭-೭-೨೦೦೦ ದಿಂದ ೩೧-೭-೨೦೦೦ ದವರೆಗೆ ಶ್ರೀ ಕಾಶೀ ಜಗದ್ಗುರುಗಳವರ ಸಿದ್ಧಾಂತ ಶಿಖಾಮಣಿಯ ಆಧ್ಯಾತ್ಮಿಕ ಪ್ರವಚನ ಹಾಗೂ ಮಹಾಪೂಜೆಯನ್ನು ಆಯೋಜಿಸಿದ್ದರು. ೧೫ ದಿನಗಳ ಕಾಲ ಜರುಗಿದ ಈ ಕಾರ್ಯಕ್ರಮ ಹರಪನಹಳ್ಳಿಯ ಧಾರ್ಮಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲೆಂದೇ ಹೇಳಬೇಕು. ಇದೇ ಸಂದರ್ಭದಲ್ಲಿ ೨೨-೭-೨೦೦೦ ಮತ್ತು ೨೩-೭-೨೦೦೦ ದಿನಗಳಂದು ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನವು ಹರಪನಹಳ್ಳಿಯಲ್ಲಿ ನಡೆಸಿಕೊಟ್ಟ ಚಂದ್ರಜ್ಞಾನಾಗಮ ಕುರಿತ ವಿಚಾರ ಸಂಕಿರಣದ ಸಮಸ್ತ ವೆಚ್ಚದ ಹೊಣೆಯನ್ನು ಶ್ರೀಗಳು ಹೊತ್ತು, ಅಚ್ಚುಕಟ್ಟಾಗಿ ಕಾರ್ಯಕ್ರಮಗಳು ನಡೆಯುವಂತೆ ವ್ಯವಸ್ಥೆ ಮಾಡಿದ್ದರು. ತಮ್ಮ ಶ್ರೀಮಠದಲ್ಲಿ ಜರುಗಿದ ವಿಚಾರ ಸಂಕಿರಣದ ಅನಿರೀಕ್ಷಿತ ಯಶಸ್ಸಿನಿಂದಲೂ, ಅಲ್ಲಿನ ಜನತೆಯ ಮನಸ್ಸಿನ ಮೇಲೆ ವಿಚಾರ ಸಂಕಿರಣದಲ್ಲಿ ಚರ್ಚಿತವಾದ ವಿಷಯಗಳು ಪ್ರಭಾವ ಬೀರಿ ಫಲ ನೀಡುತ್ತಿರುವುದನ್ನು ಕಂಡು ಶ್ರೀಗಳವರು ಆನಂದತುಂದಿಲರಾಗಿದ್ದಾರೆ. ಆ ವಿಚಾರಸಂಕಿರಣದಲ್ಲಿ ಮಂಡನೆಯಾದ ವಿದ್ವತ್ಪ್ರಬಂಧಗಳ ಸಂಕಲನವೇ ಪ್ರಸ್ತುತ ಗ್ರಂಥವಾದ "ಚಂದ್ರಜ್ಞಾನಾಗಮ ವಿಚಾರ ರಶ್ಮಿ" ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳವರು ಈ ಗ್ರಂಥದ ಮುದ್ರಣದ ಸಮಸ್ತ ವೆಚ್ಚವನ್ನು ಭರಿಸುವುದರ ಮೂಲಕ ವಿಚಾರ ಸಂಕಿರಣದ ಯಶಸ್ಸಿನಿಂದ ತಮಗಾಗಿರುವ ಆನಂದವನ್ನು ಸಮಾಜದೊಂದಿಗೆ ಹಂಚಿಕೊಳ್ಳಲು ಬಯಸಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಪಣೆ



ಲಿಂ॥ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ
ಶ್ರೀ ಚರಣಂಗಳಿಗೆ 'ಚಂದ್ರಜ್ಞಾನಾಗಮ ವಿಚಾರ ರಶ್ಮಿ' ಗ್ರಂಥ ಕುಸುಮವನ್ನು
ಸಮರ್ಪಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಆಗಮದ ಪ್ರಕಟಣೆಗಾಗಿ ಶ್ರೀ ಷ॥ ಬ್ರ॥ ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳು
ತೆಗ್ಗಿನಮಠ, ಹರಪನಹಳ್ಳಿ ಆಶ್ರಯದಾತರಾಗಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಕಾಶೀ ಜಗದ್ಗುರುಗಳವರಿಂದ ಮಹಾಶಿವಲಿಂಗ ಪೂಜೆ. ಶ್ರೀ ಸಿದ್ಧಾಂತ ಶಿಖಾಮಣಿ ಕುರಿತು ಆಶೀರ್ವಚನ. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದ ಸಹಯೋಗದೊಂದಿಗೆ ೨೨-೭-೨೦೦೦ ಮತ್ತು ೨೩-೭-೨೦೦೦ದಂದು ನಡೆಸಿದ ಚಂದ್ರಜ್ಞಾನಾಗಮ ವಿಚಾರ ಸಂಕಿರಣದ ಕೆಲವು ನೆನಪುಗಳು.



CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಕಾಶೀ ಜಗದ್ಗುರುಗಳವರಿಂದ ಮಹಾಶಿವಲಿಂಗ ಪೂಜೆ. ಶ್ರೀ ಸಿದ್ಧಾಂತ ಶಿಖಾಮಣಿ
ಕುರಿತು ಆಶೀರ್ವಚನ. ಬೆಂಗಳೂರಿನ ವೀರಶೈವ ಅನುಸಂಧಾನ ಸಂಸ್ಥಾನದ
ಸಹಯೋಗದೊಂದಿಗೆ ೨೨-೭-೨೦೦೮ ಮತ್ತು ೨೩-೭-೨೦೦೦ದಂದು ನಡೆಸಿದ
ಚಂದ್ರಜ್ಞಾನಾಗಮ ವಿಚಾರ ಸಂಕಿರಣದ ಕೆಲವು ನೆನಪುಗಳು.



CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸುವರ್ಣಕ್ಕೆ ಕುಂದಣವಿಟ್ಟಂತಾಗಿದೆ.

'ಶಿವಾಚಾರ್ಯ ರತ್ನ'ರೆನಿಸಿದ ತೆಗ್ಗಿನಮಠಾಧ್ಯಕ್ಷರಿಗೆ ಶ್ರೀ ರಂಭಾಪುರಿ ಪೀಠಾಧೀಶ್ವರರು ಆತ್ಮೀಯತೆಯ ಆಶೀರ್ವಾದ ದಯಪಾಲಿಸುತ್ತಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



ನೂರುವರ್ಷ ಹರುಷದಿಂದ ಬಾಳಿರೆಂದು ಷಷ್ಠ್ಯಬ್ದಿ ಸಮಾರಂಭದಲ್ಲಿ ಉಜ್ಜಯಿನಿ ಜಗದ್ಗುರು ಸನ್ನಿಧಾನದವರು ರುದ್ರಾಕ್ಷಿ ಕಿರೀಟಧಾರಣೆ ಮಾಡಿ ಆಶೀರ್ವದಿಸುತ್ತಿರುವುದು.

ರಜತ ಮಹೋತ್ಸವದಲ್ಲಿ ಬೆಳ್ಳಿವಸ್ತುಗಳಿಂದ ಅಭಿಮಾನಿಗಳು ತುಲಾಭಾರ ಸೇವೆ ಸಲ್ಲಿಸಿ ಸಂತಸ ಹಂಚಿಕೊಳ್ಳುತ್ತಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುನ್ನುಡಿ

"ಚಂದ್ರಜ್ಞಾನಾಗಮ ವಿಚಾರ ರಶ್ಮಿ" ಎಂಬ ಈ ಹೊತ್ತಿಗೆಯು, ೨೨-೨೩, ಜುಲೈ ೨೦೦೦ ದಿನಾಂಕಗಳಂದು, ದಾವಣಗೆರೆ ಜಿಲ್ಲೆ ಹರಪನಹಳ್ಳಿ ಪಟ್ಟಣದಲ್ಲಿ ಶ್ರೀ ತೆಗ್ಗಿನ ಮಠದ ಆಶ್ರಯದಲ್ಲಿ, ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆದ ವಿಚಾರಸಂಕಿರಣದಲ್ಲಿ ಮಂಡಿಸಲಾದ, ಚಂದ್ರಜ್ಞಾನಾಗಮವನ್ನು ಕುರಿತಾದ ವಿವಿಧ ಲೇಖನಗಳ ಸಂಗ್ರಹವಾಗಿದೆ.

ಚಂದ್ರಜ್ಞಾನಾಗಮವು ಕಾಮಿಕದಿಂದ ವಾತುಲದವರೆಗಿನ ಇಪ್ಪತ್ತೆಂಟು ಶೈವಾಗಮಗಳಲ್ಲಿ ಒಂದು. ಶ್ರೀರುದ್ರನಿಂದ ಬೋಧಿಸಲ್ಪಟ್ಟ ಹದಿನೆಂಟು ಶೈವಾಗಮಗಳಲ್ಲಿ ಇದು ಒಂಬತ್ತನೆಯದು. ಶಿವಸಂಹಿತೆಗಳೆಂದು ಕರೆಯಲಾಗುವ ಮೊದಲ ಹತ್ತನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಆಗುವ ಒಟ್ಟು ಇಪ್ಪತ್ತೆಂಟು ಶೈವಾಗಮಗಳಲ್ಲಿ ಇದು ಹತ್ತೊಂಬತ್ತನೆಯದು. ಇದರಲ್ಲಿ ಅನಂತರುದ್ರನು ದೇವತೆಗಳ ಗುರುವಾದ ಬೃಹಸ್ಪತಿಗೆ ವೀರಶೈವದ ಆಚಾರ-ವಿಚಾರಗಳನ್ನು ಬೋಧಿಸಿದ್ದಾನೆ. ಇದು ಕ್ರಿಯಾಪಾದ ಮತ್ತು ಚರ್ಯಾಪಾದಗಳೆಂಬ ಎರಡು ಭಾಗಗಳನ್ನು ಒಳಗೊಂಡಿವೆ.

ಈ ಚಂದ್ರಜ್ಞಾನಾಗಮದ ಆರಂಭದಲ್ಲಿ ಬೃಹಸ್ಪತಿಯು ಅನಂತರುದ್ರನನ್ನು ಕುರಿತು ಮಾಡಿಕೊಳ್ಳುವ ವಿಜ್ಞಾಪನೆ ಹೀಗಿದೆ:

ಭಗವನ್ ಕರುಣಾಸಿಂಧೋ ಸರ್ವಜ್ಞಾನಸಮಾಶ್ರಯ।
ನಾವಿಷ್ಕೃತಾಶ್ಚೇದ್ ಭವತಾ ಸ್ಫುಟಮಾಗಮಸಂಹಿತಾಃ॥
ಜಗತ್ ಕಿಲಾಂಧತಾಮಿಶ್ರೇ ನಿಮಜ್ಜೇದ್ ಜ್ಞಾನವರ್ಜಿತಮ್॥
ಅವಿಜ್ಞಾಯೈವ ಯೋ ಲೋಕೇ ಭವದಾಗಮಸಂಹಿತಾಃ।
ವಿಪಶ್ಚಿತಂ ಸ್ವಂ ಮನುತೇ ನ ತಸ್ಮಾದ್ ವಿಧ್ಯತೇ ಪಶುಃ॥
ಭವತ್‌ಪ್ರಸಾದಸಂಪತ್ತ್ಯಾ ಭವದೀಯಾಗಮಾಮೃತಮ್।
ನಿಪೀಯೈವಾಮರಗುರುರಭವಂ ಸಿದ್ಧಸಾಧನಃ॥
ಆಕರ್ಣಿತಾ ಮಯಾ ಭಾಗಾಶ್ಚಂದ್ರಜ್ಞಾನಾಗತಾಃ ಶುಭಾಃ।
ಬಹವಸ್ತದಿಹ ಬ್ರೂಹಿ ಕೃಪಯಾ ಶಿವಶಾಸನಮ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೋಕ್ಷಧರ್ಮಾ ವಿಶೇಷೇಣ ತತ್ರೋಚ್ಯಂತೇ ಇತಿ ಶ್ರುತಮ್।
ಅಹಂ ಶ್ರುತೇನ ಯೇನ ಸ್ಯಾಂ ವಿದಿತಾಶೇಷವೇದನಃ॥"

"ಭಗವಂತನೇ, ಕರುಣಾಸಮುದ್ರನೇ, ಎಲ್ಲಾ ಜ್ಞಾನಗಳಿಗೆ ಆಶ್ರಯವಾದವನೇ, ನಿನ್ನಿಂದ ಆಗಮಸಂಹಿತೆಗಳು ಸ್ಪಷ್ಟವಾಗಿ ನಿರೂಪಿಸಲ್ಪಡದೇ ಹೋಗಿದ್ದರೆ ಈ ಜಗತ್ತು ಜ್ಞಾನವಿಲ್ಲದೆ ಗಾಢವಾದ ಕತ್ತಲಲ್ಲಿ ಮುಳುಗಿಹೋಗುತ್ತಿತ್ತು. ಈ ಲೋಕದಲ್ಲಿ ನಿನ್ನ ಆಗಮಸಂಹಿತೆಗಳನ್ನು ತಿಳಿಯದೇ ಯಾರು ತನ್ನನ್ನು ತಾನು ಜ್ಞಾನಿಯೆಂದು ತಿಳಿಯುತ್ತಾನೋ ಅವನಿಗಿಂತ ಪಶುವು (ಅಜ್ಞಾನಿಯು) ಇನ್ನೊಬ್ಬನಿಲ್ಲ. ನಿನ್ನ ಅನುಗ್ರಹದ ಸಂಪತ್ತಿನಿಂದ ನಾನು ನಿನ್ನ ಆಗಮಗಳ ಅಮೃತವನ್ನು ಸೇವಿಸಿ ಸಾಧನಗಳಿಂದ ಸಿದ್ಧಹಸ್ತನಾಗಿ ದೇವತೆಗಳ ಗುರುವಾಗಿರುವೆನು. ಚಂದ್ರಜ್ಞಾನಾಗಮದ ಮಂಗಲಕರವಾದ ಬಹಳ ಭಾಗಗಳನ್ನು ನಾನು ಕೇಳಿದ್ದೇನೆ. ಈಗ ದಯವಿಟ್ಟು ಅದರಲ್ಲಿನ ಶಿವಶಾಸನವನ್ನು ಹೇಳು. ಅದರಲ್ಲಿ ವಿಶೇಷವಾಗಿ ಮೋಕ್ಷಧರ್ಮಗಳು ಹೇಳಲ್ಪಟ್ಟಿವೆಯೆಂದು ಕೇಳಿದ್ದೇನೆ. ಅದನ್ನು ಕೇಳುವ ಮೂಲಕ ನಾನು ತಿಳಿಯಬೇಕಾದುದನ್ನು ಎಲ್ಲವನ್ನು ತಿಳಿದವನಾಗುತ್ತೇನೆ."

ಇಲ್ಲಿ ಚಂದ್ರಜ್ಞಾನಾಗಮದ ಬಗ್ಗೆ ಎರಡು ಮಾರ್ಮಿಕ ವಿಚಾರಗಳು ಪ್ರಸ್ತಾಪಿಸಲ್ಪಟ್ಟಿವೆ. ಮೊದಲನೆಯದಾಗಿ 'ಈ ಆಗಮಸಂಹಿತೆಗಳು ನಿರೂಪಿಸಲ್ಪಡದೇ ಇದ್ದಿದ್ದರೆ ಜಗತ್ತು ಗಾಢವಾದ ಅಜ್ಞಾನವೆಂಬ ಕತ್ತಲಲ್ಲಿ ಮುಳುಗಿಹೋಗುತ್ತಿತ್ತು' ಎಂಬ ಮಾತಿನಿಂದ ಚಂದ್ರಜ್ಞಾನವೆಂಬ ಹೆಸರಿನ ಔಚಿತ್ಯವು ಸ್ಪಷ್ಟವಾಗುತ್ತದೆ. ಈ ಆಗಮದಲ್ಲಿ ಅಡಕವಾಗಿರುವ ಜ್ಞಾನ ಚಂದ್ರನಂತೆ ಕಾಂತವೂ ಶಾಂತವೂ ಆಹ್ಲಾದಕರವೂ ಆಗಿದ್ದು ನಲವನ್ನುಂಟು ಮಾಡುವುದರ ಜೊತೆಗೆ ಅಜ್ಞಾನಾಂಧಕಾರವನ್ನೂ ದೂರಮಾಡುತ್ತದೆ. ಇದರಲ್ಲಿ ವೀರಶೈವವೆಂದು ಕರೆಯಲಾಗುವ ಪಾಶುಪತವ್ರತಕ್ಕೆ ಮೂಲಧಾರವಾದ ಅಷ್ಟಾವರಣ ಮತ್ತು ಪಂಚಾಚಾರಗಳ ವಿಚಾರವು ವಿವರಿಸಲ್ಪಟ್ಟಿದೆ. ಆದರಿಂದ ನಮ್ಮೊಳಗಿನ ಜ್ಞಾನಪ್ರಕಾಶವು ಬೆಳಗುವುದು. ಈ ದೃಷ್ಟಿಯಿಂದ ಈ ಆಗಮಕ್ಕೆ ಚಂದ್ರಜ್ಞಾಗಮವೆಂಬ ಹೆಸರು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಎರಡನೆಯದಾಗಿ, 'ಈ ಆಗಮಸಂಹಿತೆಗಳನ್ನು ಅರಿಯದೆ ನಾನು ಅರಿತವನೆಂದು ಬೀಗುವ ವ್ಯಕ್ತಿ ಪಶುವಿಗೆ ಸಮಾನ', ಎಂಬ ಮಾತು ಈ ಆಗಮದ ಮಹತ್ವವನ್ನು ಬಿಂಬಿಸುತ್ತದೆ. ಇದರ ಜ್ಞಾನವಿಲ್ಲದೆ ಯಾರ ಜ್ಞಾನಕ್ಕೂ ಪರಿಪೂರ್ಣತೆಯೆಂಬುದಿಲ್ಲ. ಮೋಕ್ಷಕ್ಕೇರುವ ಮೆಟ್ಟಲುಗಳನ್ನು ತೋರುವ ವೀರಶೈವದ ಆಚಾರ-ವಿಚಾರಗಳನ್ನು ತಿಳಿಸುವ ಈ ಆಗಮದ ಅಧ್ಯಯನ ಅಪರಿಹಾರ್ಯವೆಂಬುದು ಈ ಮಾತಿನ ಮರ್ಮ. ಅವನೇ ಹೇಳುವಂತೆ ಬೃಹಸ್ಪತಿಯೂ ಕೂಡ ಈ ಆಗಮಾಮೃತವನ್ನು ಆಸ್ವಾದಿಸಿ ಎಲ್ಲಾ ಸಾಧನ ಸಂಪತ್ತಿನಿಂದ ಕೂಡಿದವನಾಗಿ ದೇವಗುರುವಾಗುವ ಅರ್ಹತೆಯನ್ನು ಪಡೆದನು ಎಂಬುದೂ ಕೂಡ ಈ ಆಗಮದ ಮಹತ್ವವನ್ನೇ ಸಾರುತ್ತದೆ. ಈ ಆಗಮಕ್ಕೆ ಸಂಬಂಧಿಸಿದ ಮಂಗಲಕರವಾದ ಬಹಳ ಭಾಗಗಳನ್ನು ಬೃಹಸ್ಪತಿಯು ಮೊದಲೇ ಕೇಳಿದ್ದ. ಅಂದರೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ್ರಜ್ಞಾನಾಗಮದ ಪೂರ್ವಭಾಗದ ಪಟಲಗಳನ್ನು ಕೇಳಿದ್ದ. ಉಳಿದ ಭಾಗಗಳೆಂದರೆ ಚಂದ್ರಜ್ಞಾನಾಗಮದ ಉತ್ತರ ಭಾಗಕ್ಕೆ ಸೇರಿದ ಪಟಲಗಳು. ಇವುಗಳನ್ನೇ ಮೋಕ್ಷಧರ್ಮಗಳನ್ನು ಬೋಧಿಸುವ ಪಟಲಗಳೆಂದು ಬೃಹಸ್ಪತಿಯು ಕರೆದಿರುವುದು. ವೇದಕ್ಕೆ ವೇದಾಂತವು ತಿರುಳೆನ್ನಿಸುವಂತೆ ಶೈವಾಗಮಗಳಿಗೆ ಆಗಮಾಂತವೆನ್ನಿಸುವ ವೀರಶೈವವೇ ತಿರುಳು, ಅದರ ವಿಚಾರವೇ ಮೋಕ್ಷಧರ್ಮ.

ಈ ಹಿನ್ನೆಲೆಯಲ್ಲಿ ಚಂದ್ರಜ್ಞಾನಾಗಮದಲ್ಲಿ ಬರುವ ವಿಚಾರಗಳನ್ನು ಅವಲೋಕಿಸಬಹುದು. ಇದರಲ್ಲಿ ಕ್ರಿಯಾಪಾದ ಮತ್ತು ಚರ್ಯಾಪದ ಎಂಬ ಎರಡು ಭಾಗಗಳಿವೆ. ಕ್ರಿಯಾಪಾದವು ಹನ್ನೆರಡು ಪಟಲ (ಅಧ್ಯಾಯ)ಗಳನ್ನು ಒಳಗೊಂಡಿದ್ದರೆ, ಚರ್ಯಾಪಾದವು ಎಂಟು ಪಟಲಗಳನ್ನು ಒಳಗೊಂಡಿದೆ. ಕ್ರಿಯಾಪಾದದ ಹನ್ನೆರಡು ಪಟಲಗಳಲ್ಲಿ ಕ್ರಮವಾಗಿ (೧) ಪತಿ-ಪಶು-ಪಾಶಗಳೆಂಬ ಮೂರು ತತ್ತ್ವಗಳು (೨) ಗುರುತತ್ತ್ವ, ೩. ಲಿಂಗತತ್ತ್ವ, ೪. ಜಂಗಮತತ್ತ್ವ, ೫. ಪಾದತೀರ್ಥ ಪ್ರಸಾದ ಸ್ವರೂಪ, (೬) ಭಸ್ಮಸ್ವರೂಪ, (೭) ರುದ್ರಾಕ್ಷಧಾರಣ ಮಾಹಾತ್ಮ್ಯ, (೮) ಪಂಚಾಕ್ಷರ ಮಂತ್ರದ ಮಾಹಾತ್ಮ್ಯ (೯) ಪಂಚಾಚಾರಗಳ ಸ್ವರೂಪ, (೧೦) ಶೈವಭೇದಗಳು, (೧೧) ವೀರಶೈವರ ದೈನಂದಿನ ಆಚರಣೆಗಳು ಮತ್ತು (೧೨) ಜ್ಞಾನಕರ್ಮಸಮುಚ್ಚಯ ಎಂಬ ವಿಷಯಗಳು ನಿರೂಪಿಸಲ್ಪಟ್ಟಿವೆ. ಚರ್ಯಾಪಾದದ ಎಂಟು ಪಟಲಗಳಲ್ಲಿ ಕ್ರಮವಾಗಿ (೧) ಶಿವಮೇಧ ಪ್ರಶಂಸೆ, (೨) ಉತ್ಕ್ರಾಂತಿಸಮಯಾಚಾರ, (೩) ಉತ್ಕ್ರಾಂತಿಕಾರ್ಯಕರ್ತೃಕ್ರಮ, (೪) ಔರ್ಧ್ವದೇಹಿಕವಿಧಿ, (೫) ಪ್ರಕೀರ್ಣವಿಧಿ, (೬) ಆಶೌಚಶುದ್ಧಿ, (೭) ಪ್ರಾಯಶ್ಚಿತ್ತಶುದ್ಧಿ ಮತ್ತು (೧೮) ಮಹಾಪಾಪಾದಿ ಪ್ರಾಯಶ್ಚಿತ್ತ, ಎಂಬ ವೀರಶೈವನ ಅಂತಿಮಸಂಸ್ಕಾರಕ್ಕೆ ಸಂಬಂಧಪಟ್ಟ ವಿಷಯಗಳು ನಿರೂಪಿತವಾಗಿವೆ.

ಮೇಲ್ಕಂಡ ವಿಷಯಗಳನ್ನು ಕುರಿತಾದ ಲೇಖನಗಳನ್ನು ವಿವಿಧ ವಿದ್ವಾಂಸರು ರಚಿಸಿ ವಿಚಾರಸಂಕಿರಣದಲ್ಲಿ ಮಂಡಿಸಿದ್ದರು. ಅವುಗಳನ್ನು ಇಲ್ಲಿ ಸಂಪಾದಿಸಿ ಸಿದ್ಧಪಡಿಸುವ ಸೌಭಾಗ್ಯ ಶ್ರೀ ಶ್ರೀ ಶ್ರೀ ಜಗದ್ಗುರುಗಳ ಅನುಗ್ರಹದಿಂದ ನನ್ನದಾಗಿದೆ. ಮೊದಲಿಗೆ ಚಂದ್ರಜ್ಞಾನಾಗಮದಲ್ಲಿ ತತ್ತ್ವತ್ರಯ ವಿಚಾರ ಎಂಬ ನನ್ನ ಲೇಖನದಲ್ಲಿ ಶೈವ ಮತ್ತು ವೀರಶೈವವೆಂಬ ಎರಡು ಸಂಪ್ರದಾಯಗಳಿಗೂ ಸಂಮತವಾದ ಪತಿ, ಪಶು ಮತ್ತು ಪಾಶ ಎಂಬ ಮೂರು ತತ್ತ್ವಗಳ ವಿಚಾರವನ್ನು ಚಂದ್ರಜ್ಞಾನಾಗಮದ ಪ್ರಕಾರ ಪ್ರತಿಪಾದಿಸಿದ್ದೇನೆ. ಚರಾಚರ ಜಗತ್ತಿನ ಒಡೆಯನಾದ ಪರಶಿವನೇ ಪತಿ, ಬ್ರಹ್ಮನಿಂದ ಹಿಡಿದು ಸ್ಥಾವರಗಳವರೆಗೆ ಇರುವ ವ್ಯಕ್ತಚೈತನ್ಯಯುಕ್ತ ಹಾಗೂ ಗೂಢಚೈತನ್ಯಯುಕ್ತಗಳಾದ ಎಲ್ಲವೂ ಪಶುಗಳು ಮತ್ತು ಮಲ-ಮಾಯಾದಿಗಳು ಪಾಶಗಳು. ಇವುಗಳನ್ನು ಉಲ್ಲೇಖಿಸಿ ಚಂದ್ರಜ್ಞಾನಾಗಮವು ಪರಮಾತ್ಮನ ವಿಶ್ವವ್ಯಾಪಾರವನ್ನು ವರ್ಣಿಸುವ ಮೂಲಕ ಮೂರೂ ತತ್ತ್ವಗಳ ಸ್ವರೂಪವನ್ನು ನಿರೂಪಿಸಿದೆ. ಅದನ್ನೇ ಪ್ರಸ್ತುತ ಲೇಖನವು ಸವಿಮರ್ಶವಾಗಿ ಪ್ರತಿಪಾದಿಸುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುವಿನ ಸ್ವರೂಪ ಮತ್ತು ಮಹತ್ವ ಎಂಬ ಲೇಖನದಲ್ಲಿ ವಿದ್ವಾನ್ ಜಿ.ವಿ. ಶಿವಸ್ವಾಮಿಯವರು ಹಿಂದೂ ಸಂಪ್ರದಾಯದಲ್ಲಿ ಮತ್ತು ವಿಶೇಷವಾಗಿ ವೀರಶೈವ ಪರಂಪರೆಯಲ್ಲಿ ಇರುವ ಗುರುವಿನ ಉನ್ನತ ಸ್ಥಾನವನ್ನು ಗುರುತಿಸಿದ್ದಾರೆ. ಚಂದ್ರಜ್ಞಾನಾಗಮವನ್ನು ಆಧರಿಸಿ ಗುರುವಿನ ಮಹತ್ವವನ್ನು ವಿವರಿಸುತ್ತಾ ಹೇಗೆ ಹರ ಮುನಿದರೂ ಗುರು ಕಾಯ್ವನು ಎಂಬುದನ್ನು ನಿರೂಪಿಸಿ ಗುರುವಿನ ಮಹಿಮೆಯನ್ನು ಮನೋಹರವಾಗಿ ವರ್ಣಿಸಿದ್ದಾರೆ. ಮೋಕ್ಷಕ್ಕೆ ಅರ್ಹತೆಯನ್ನು ಗಳಿಸಿಕೊಡುವ ದೀಕ್ಷೆಗೆ ಗುರುವೇ ಅಧಿಕೃತನು. ಗುರುವು ಮತ್ತು ಶಿವನು ಬೇರೆಯಲ್ಲ, ಶಿವನ ವ್ಯಕ್ತ ಸ್ವರೂಪವೇ ಗುರುವು ಎಂಬುದನ್ನು ಪ್ರತಿಪಾದಿಸಿ ಗುರುವಿನ ಸ್ವರೂಪ, ಶಿಷ್ಯನ ಲಕ್ಷಣ, ಶಿಷ್ಯನು ಗುರುವನ್ನು ಸತ್ಕರಿಸುವ ರೀತಿ, ಗುರುಸೇವೆ, ಪ್ರದಕ್ಷಿಣೆ, ಗುರುಯಾತ್ರೆ, ಗುರುಸನ್ನಿಧಿಯಲ್ಲಿ ಶಿಷ್ಯನ ವರ್ತನೆ, ಗುರುವಿನ ಅನುಗ್ರಹದಿಂದ ದೊರೆಯುವ ಸತ್ಫಲ ಮುಂತಾದ ವಿಚಾರಗಳನ್ನು ಚಂದ್ರಜ್ಞಾನಾಗಮಾನುಸಾರ ಮಂಡಿಸಿ ಮುಖ್ಯಾಂಶಗಳನ್ನು ಗುರುತಿಸಿ ವಿಮರ್ಶಿಸಿದ್ದಾರೆ.

ಲಿಂಗತತ್ತ್ವ ನಿರೂಪಣೆ ಎಂಬ ಲೇಖನದಲ್ಲಿ ಚಂದ್ರಜ್ಞಾನಾಗಮದ ಪ್ರಕಾರ ಲಿಂಗದ ಸ್ವರೂಪ ಮತ್ತು ಮಹತ್ತ್ವವನ್ನು ನಿರೂಪಿಸಿದ್ದೇನೆ. ಲಿಂಗಶಬ್ದದ ನಿಷ್ಪತ್ತಿ; ಲಿಂಗವು ಬಿಂದು-ನಾದಾತ್ಮಕ, ಅದರಲ್ಲಿ ಬಿಂದುವೆಂದರೆ ಶಕ್ತಿ ಮತ್ತು ನಾದವೆಂದರೆ ಶಿವ, ಅದೇ ಜಗತ್ತಿಗೆ ಕಾರಣ; ಮಾತಾಪಿತೃಸ್ವರೂಪವಾದ ಆ ಲಿಂಗವು ಮೊದಲು ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂದು ಮೂರು, ಆ ಮೂರೇ ಎರಡೆರಡಾಗಿ ಮಹಾಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ ಮತ್ತು ಆಚಾರಲಿಂಗಗಳೆಂದು ಆರು ವಿಧ; ಮೂರು ದೀಕ್ಷೆಗಳ ಮೂಲಕ ಇಷ್ಟ, ಪ್ರಾಣ ಮತ್ತು ಭಾವ ಎಂಬ ಮೂರು ಲಿಂಗಗಳನ್ನು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ಸ್ಥಾಪಿಸುವ ಮೂಲಕ ಆಣವ, ಮಾಯೀಯ ಮತ್ತು ಕಾರ್ಮಿಕ ಎಂಬ ಮೂರು ಮಲಗಳ ನಾಶ, ಲಿಂಗದ ಆರಾಧನೆಯ ಮಹಿಮೆ, ಮುಂತಾದ ವಿಚಾರಗಳನ್ನು ಕುರಿತು ವೇದ, ಉಪನಿಷತ್ತು, ಇತರ ಆಗಮಗಳು ಮುಂತಾದವುಗಳ ಆಧಾರಗಳನ್ನು ಕೊಟ್ಟು ಮಾಡಿದ ಸವಿಮರ್ಶ ಅಧ್ಯಯನವನ್ನು ಈ ಲೇಖನದಲ್ಲಿ ನೋಡಬಹುದು.

ಡಾ|| ಸಿ. ಶಿವಕುಮಾರ ಸ್ವಾಮಿ ಅವರು ಜಂಗಮ-ಸ್ವರೂಪ ಮತ್ತು ಮಾಹಾತ್ಮ್ಯ ಎಂಬ ಲೇಖನದಲ್ಲಿ ಜಂಗಮ ಶಬ್ದದ ಅರ್ಥವನ್ನು ವಿವರಿಸಿ, ಜಂಗಮ ಶಬ್ದದ ಪರ್ಯಾಯ ಪದಗಳು, ಜಂಗಮರ ದ್ವೈವಿಧ್ಯ, ಅದರಲ್ಲಿ ಸಹಜ ಜಂಗಮರಲ್ಲಿ ಬ್ರಹ್ಮಚಾರಿ, ಗೃಹಸ್ಥ ಮತ್ತು ನಿರಾಭಾರಿಯೆಂಬ ತ್ರೈವಿಧ್ಯ; ವಿವಿಧ ಜಂಗಮರ ಲಕ್ಷಣಗಳು ಮತ್ತು ಅವರಿಗೆ ವಿಧಿಸಲಾದ ನಿಯಮಗಳು, ಜಂಗಮ ಭಕ್ತಿಯ ಚಿಹ್ನೆಗಳು, ಮುಂತಾದ ವಿಚಾರಗಳನ್ನು ನಿರೂಪಿಸಿರುವರು. ಬೇರೆ ಆಗಮಗಳು, ಸಿದ್ಧಾಂತಶಿಖಾಮಣಿ ಮುಂತಾದ ಗ್ರಂಥಗಳಲ್ಲಿ ಬರುವ ಜಂಗಮ ವಿಷಯಕವಾದ ವಿಚಾರಗಳನ್ನು ಉಲ್ಲೇಖಿಸಿ ತೌಲನಿಕವಾಗಿ ವಿಮರ್ಶಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಸ್ಮದ ಮಹತ್ವ, ನಿರ್ಮಾಣ ಮತ್ತು ಉಪಯೋಗ ಎಂಬ ಲೇಖನದಲ್ಲಿ ಶ್ರೀ ಸಿದ್ಧರಾಮ ದೇವರು, ಹಿರೇಮಠ, ಹಿಪ್ಪರಗಿ, ಅವರು ಭಸ್ಮನಿರ್ಮಾಣವಿಧಿ, ಭಸ್ಮದ ಪ್ರಭೇದಗಳು, ಭಸ್ಮಧಾರಣ ವಿಧಿ, ಭಸ್ಮಸ್ನಾನ, ತ್ರಿಪುಂಡ್ರಧಾರಣೆ ಮತ್ತು ಅದರ ಸ್ಥಾನಗಳು, ಭಸ್ಮಧಾರಣ ಫಲ ಮತ್ತು ಮಹಿಮೆ, ಎಂಬ ವಿಷಯಗಳನ್ನು ಚಂದ್ರಜ್ಞಾನಾಗ-ಮಾನುಸಾರವಾಗಿ ನಿರೂಪಿಸಿ ಇತರ ಆಧಾರಗಳ ಬೆಳಕಿನಲ್ಲಿ ವಿಮರ್ಶಿಸಿದ್ದಾರೆ.

ಷ॥ ಬ್ರ॥ ಶ್ರೀ ಡಾ॥ ಮಹಾದೇವ ಶಿವಾಚಾರ್ಯ ಸ್ವಾಮಿಗಳು, ಬಬಲೇಶ್ವರ, ಅವರು ರುದ್ರಾಕ್ಷದ ಉತ್ಪತ್ತಿ, ಧಾರಣವಿಧಿ ಹಾಗೂ ಮಹಿಮೆ ಎಂಬ ತಮ್ಮ ಲೇಖನದಲ್ಲಿ ಚಂದ್ರಜ್ಞಾನಾಗಮದ ಪ್ರಕಾರ ರುದ್ರಾಕ್ಷದ ಉತ್ಪತ್ತಿಗೆ ಸಂಬಂಧಿಸಿದ ಪೌರಾಣಿಕ ಕಥೆಯನ್ನು ನಿರೂಪಿಸಿ, ರುದ್ರಾಕ್ಷಗಳ ಪ್ರಕಾರಗಳು, ಧರಿಸಲು ಯೋಗ್ಯವಾದ ಹಾಗೂ ಯೋಗ್ಯವಲ್ಲದ ರುದ್ರಾಕ್ಷಿಗಳು, ಶಾಸ್ತ್ರೋಕ್ತ ರುದ್ರಾಕ್ಷಧಾರಣವಿಧಿ (ಸ್ಥಾನ ಮತ್ತು ಸಂಖ್ಯೆ), ಮುಖಭೇದದಿಂದ ರುದ್ರಾಕ್ಷದ ಮಹಿಮೆ ಮುಂತಾದ ವಿಚಾರಗಳನ್ನು ಇತರ ಆಗಮಗಳು, ಸಿದ್ಧಾಂತಶಿಖಾಮಣಿ ಮುಂತಾದವುಗಳನ್ನು ತುಲನೆಗಾಗಿ ಉಲ್ಲೇಖಿಸಿ, ವಿಮರ್ಶಿಸಿ, ಆಧುನಿಕ ಯುಗದಲ್ಲಿ ರುದ್ರಾಕ್ಷದ ಅವಶ್ಯಕತೆಯನ್ನು ಬಿಂಬಿಸಿದ್ದಾರೆ.

ಮಂತ್ರರಾಜ ಪಂಚಾಕ್ಷರೀ ಎಂಬ ಲೇಖನದಲ್ಲಿ ಶ್ರೀ ಶಂಭುಲಿಂಗ ದರೂರ ಅವರು ಪಂಚಾಕ್ಷರ ಮಂತ್ರದ ಸ್ವರೂಪ; ಅದರ ಹೆಸರುಗಳು; ಋಷಿ-ಛಂದಸ್ಸು-ದೇವತೆ-ಬೀಜ- ಶಕ್ತಿ-ಕೀಲಕಗಳು; ಮಂತ್ರನ್ಯಾಸದ ಪ್ರಕಾರಗಳು, ಜಪದ ವಿಧಾನ, ತ್ರಿವಿಧ ಜಪ, ಸಗರ್ಭ-ಅಗರ್ಭ ಜಪಗಳು; ಮಂತ್ರಪುರಶ್ಚರಣ ಕ್ರಮ; ಜಪದಲ್ಲಿ ಬೆರಳು ಮುಂತಾದವುಗಳ ಉಪಯೋಗ ಮತ್ತು ಅದರ ಮಹಿಮೆ; ಜಪಕಾಲದಲ್ಲಿ ವರ್ಜನೀಯವಾದವುಗಳು; ಮಂತ್ರದ ಮಹಿಮೆ, ಮುಂತಾದ ವಿಚಾರಗಳನ್ನು ವಿಮರ್ಶಿಸಿದ್ದಾರೆ.

ಡಾ॥ ಆರ್.ಎಸ್. ಸದಾಶಿವಯ್ಯ ಅವರು ಪಾದೋದಕ ಮತ್ತು ಪ್ರಸಾದ ಎಂಬ ವಿಷಯವನ್ನು ಕುರಿತು ಲೇಖನವನ್ನು ರಚಿಸಿದ್ದಾರೆ. ಆ ಲೇಖನದಲ್ಲಿ ಪಾದೋದಕ ಮತ್ತು ಪ್ರಸಾದಗಳ ಸ್ವರೂಪ, ಪ್ರಕಾರಗಳು, ಅವುಗಳ ಪ್ರಭಾವ ಮತ್ತು ಪರಿಣಾಮಗಳನ್ನು ಚಂದ್ರಜ್ಞಾನಾಗಮದ ಪ್ರಕಾರ ನಿರೂಪಿಸಿ, ಇತರ ಆಗಮಗಳು, ಸಿದ್ಧಾಂತಶಿಖಾಮಣಿ ಮುಂತಾದವುಗಳಲ್ಲಿ ಪಾದೋದಕ-ಪ್ರಸಾದಗಳ ಬಗ್ಗೆ ಬರುವ ವಿಚಾರಗಳೊಂದಿಗೆ ಹೋಲಿಸಿ ವಿಮರ್ಶಿಸಿದ್ದಾರೆ.

ಡಾ॥ ಮಲ್ಲಿಕಾರ್ಜುನ ಪರಡ್ಡಿ ಅವರು ಪಂಚಾಚಾರ ಮೀಮಾಂಸೆ ಎಂಬ ತಮ್ಮ ಲೇಖನದಲ್ಲಿ ವಿಶೇಷವಾಗಿ ಚಂದ್ರಜ್ಞಾನಾಗಮದ ಪ್ರಕಾರ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರವೆಂಬ ಐದು ಆಚಾರಗಳನ್ನು ಸಾಧಾರವಾಗಿ ನಿರೂಪಿಸಿದ್ದಾರೆ. ಲಿಂಗಾಚಾರಕ್ಕೆ ಸಂಬಂಧಿಸಿದಂತೆ ವೇಧಾ-ಮನು-ಕ್ರಿಯಾ ದೀಕ್ಷೆಗಳಲ್ಲಿ ಅಂತರ್ಗತವಾದ ಏಳೇಳು ಅವಾಂತರ ದೀಕ್ಷೆಗಳ ಅಂದರೆ ಒಟ್ಟು ೨೧ ಅವಾಂತರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೀಕ್ಷೆಗಳ ವಿಚಾರವನ್ನು ವಿಮರ್ಶಿಸಿದ್ದಾರೆ. ಸದಾಚಾರದ ಅಂತರ್ಗತವಾಗಿ ೮ ವಿಧವಾದ ಶೀಲಗಳನ್ನು ವಿವರಿಸಿದ್ದಾರೆ. ಶಿವಾಚಾರಾಂತರ್ಗತವಾಗಿ ೧೬ ಶುದ್ಧಿಗಳನ್ನು ವಿಶದೀಕರಿಸಿದ್ದಾರೆ. ಗಣಾಚಾರದ ಪ್ರಸ್ತಾವದಲ್ಲಿ ೬೪ ಶೀಲಗಳನ್ನು ನಿರೂಪಿಸಿ, ಅವುಗಳಲ್ಲಿನ ನಿಷ್ಠೆಯಿಂದ ಆಗುವ ಶಿವಸಾಯುಜ್ಯಪ್ರಾಪ್ತಿರೂಪದ ಫಲವನ್ನು ವರ್ಣಿಸಿದ್ದಾರೆ. ಭೃತ್ಯಾಚಾರದ ವೈಶಿಷ್ಟ್ಯವನ್ನು ವಿವರಿಸಿದ್ದಾರೆ.

ಶೈವ-ವೀರಶೈವ ಪ್ರಭೇದಗಳು ಎಂಬ ಲೇಖನದಲ್ಲಿ ಶ್ರೀ ಷಣ್ಮುಖಯ್ಯ ಅಕ್ಕೂರಮಠ ಅವರು ಶೈವ-ವೀರಶೈವ ಧರ್ಮಗಳ ಇತಿಹಾಸವನ್ನು ನಿರೂಪಿಸಿ, ಪಾಶುಪತ, ಕಾಳಾಮುಖ, ಕಾಪಾಲಿಕ, ಕಾಶ್ಮೀರಶೈವಗಳ ವಿಶೇಷ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಹೇಳಿ ಚಂದ್ರಜ್ಞಾನಾಗಮದ ಪ್ರಕಾರ ಶೈವ-ವೀರಶೈವ ಪ್ರಭೇದಗಳನ್ನು ವಿವರಿಸಿದ್ದಾರೆ. ಚಂದ್ರಜ್ಞಾನಾಗಮದಲ್ಲಿ ಬಂದಿರುವ ೮ ಪ್ರಕಾರದ ಪ್ರಭೇದಗಳನ್ನು ವಿಶದೀಕರಿಸಿ ಇತರ ಆಗಮಗಳಲ್ಲಿ ಆ ಬಗ್ಗೆ ಬಂದಿರುವ ವಿವರಗಳೊಂದಿಗೆ ತೌಲನಿಕವಾಗಿ ವಿಮರ್ಶಿಸಿದ್ದಾರೆ.

ವಿದ್ವಾನ್ ಬಿ. ರಾಜಶೇಖರಯ್ಯ ಅವರು **ಆಶೌಚ ಮತ್ತು ಪ್ರಾಯಶ್ಚಿತ್ತ** ಎಂಬ ವಿಷಯವನ್ನು ಕುರಿತು ಲೇಖನವನ್ನು ರಚಿಸಿದ್ದಾರೆ. ಜೀವಾತ್ಮನ ಶುದ್ಧತೆಗೆ ಸಂಸ್ಕಾರದ ಮುಖ್ಯತ್ವವನ್ನು ನಿರೂಪಿಸಿ, ಆಶೌಚ ಮತ್ತು ಪ್ರಾಯಶ್ಚಿತ್ತ ಪದಗಳ ನಿಷ್ಪತ್ತಿಯನ್ನು ಕೊಟ್ಟು ಅವುಗಳ ಅರ್ಥವನ್ನು ವಿವರಿಸಿದ್ದಾರೆ. ಅನಂತರ ಆಶೌಚದ ಆಚರಣೆ ಯಾರಿಗೆ ಉಂಟು ಮತ್ತು ಯಾರಿಗೆ ನಿಷಿದ್ದ ಎಂಬುದನ್ನು ಹೇಳಿ, ಚಂದ್ರಜ್ಞಾನಾಗಮದ ಪ್ರಕಾರ ಆಶೌಚ ಮತ್ತು ಪ್ರಾಯಶ್ಚಿತ್ತ ವಿಧಿಗಳನ್ನು ವಿವರಿಸಿ ವಿಮರ್ಶಿಸಿದ್ದಾರೆ.

ಅಂತ್ಯೇಷ್ಟಿವಿಧಿಯನ್ನು ಕುರಿತ ಲೇಖನವನ್ನು ವಿದ್ವಾನ್ ಕೋ.ರಂ. ಬಸವರಾಜು ಅವರು ಬರೆದಿದ್ದಾರೆ. ಅದರಲ್ಲಿ ಅಂತ್ಯೇಷ್ಟಿ ಶಬ್ದದ ನಿರ್ವಚನ, ಪರ್ಯಾಯ ಪದಗಳು ಇವುಗಳನ್ನು ವಿವರಿಸಿ, ಶಿವಮೇಧಾಪ್ರಶಂಸಾವಿಧಿ, ಉತ್ಕ್ರಾಂತಿಸಮಯಾಚಾರವಿಧಿ, ಸಮಾಧಿರಚನಾನಿಕ್ಷೇಪವಿಧಿ, ಔರ್ಧ್ವದೇಹಿಕ ವಿಧಿ ಮತ್ತು ಪ್ರಕೀರ್ಣಕ ವಿಧಿಯೆಂಬ ಐದು ವಿಷಯಗಳ ಅಂತರ್ಗತವಾಗಿ ಬರುವ ವಿವಿಧ ಆಚರಣೆಗಳ ಪದ್ಧತಿಗಳು, ಅವುಗಳಲ್ಲಿ ಪ್ರಯುಕ್ತವಾದ ಮಂತ್ರಗಳು ಮುಂತಾದ ಸಕಲ ವಿವರಗಳನ್ನು ವಿವಿಧ ಆಗಮಗಳು, ಇತರ ಆಧಾರಗಳು ಹಾಗೂ ವಿಶೇಷವಾಗಿ ಚಂದ್ರಜ್ಞಾನಾಗಮ, ಇವುಗಳ ಆಧಾರದ ಮೇಲೆ ವಿಮರ್ಶಿಸಿದ್ದಾರೆ.

ಕಡೆಯದಾಗಿ ಶ್ರೀಕರ ದೇವರು, ಹಿರೇಮಠ, ಬಿಜಾಪುರ, ಅವರು **ವೀರಶೈವರ ದೈನಂದಿನ ಆಚರಣೆಗಳು** ಎಂಬ ತಮ್ಮ ಲೇಖನದಲ್ಲಿ ವಿಶೇಷವಾಗಿ ಚಂದ್ರಜ್ಞಾನಾಗಮದ ಪ್ರಕಾರ ವೀರಶೈವರ ಆಹ್ನಿಕವಿಧಿಗಳನ್ನು ನಿರೂಪಿಸಿದ್ದಾರೆ. ಶಿವಭಕ್ತನ ಆಹ್ನಿಕವು ಬ್ರಾಹ್ಮೀಮುಹೂರ್ತದಿಂದ ಹಿಡಿದು ರಾತ್ರಿ ಮಲಗುವವರೆಗೆ ಹೇಗಿರುತ್ತದೆ, ಹೇಗಿರಬೇಕು ಎಂಬುದು ಆ ಲೇಖನದಲ್ಲಿ ನಿರೂಪಿಸಲ್ಪಟ್ಟಿದೆ. ಶೌಚವಿಧಿ, ಸ್ನಾನವಿಧಿ, ತ್ರಿಪುಂಡ್ರಧಾರಣ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಧ್ಯಾವಂದನ, ಗಾಯತ್ರೀ ಮಂತ್ರಾರ್ಥ, ಹೋಮವಿಧಿ, ಸಾಯಂವಿಧಿ, ಮಲಗುವ ಕ್ರಮ, ಎಂಬ ವಿಚಾರಗಳ ವಿವರಣೆಯು ಗಮನಾರ್ಹವಾಗಿದೆ.

ಹೀಗೆ ಲೇಖನಗಳನ್ನು ರಚಿಸಿಕೊಟ್ಟ ಎಲ್ಲಾ ವಿದ್ವಾಂಸರಿಗೂ ನಾನು ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಂಪಾದನ ಕಾರ್ಯದ ಸುಯೋಗವನ್ನು ಕಲ್ಪಿಸಿ ಆಶೀರ್ವಚನವನ್ನು ಅನುಗ್ರಹಿಸಿದ ಶ್ರೀಮತ್ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಪವಿತ್ರ ಚರಣಾರವಿಂದಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ. ಈ ಗ್ರಂಥದ ಪ್ರಕಟಣೆಗೆ ಆರ್ಥಿಕ ನೆರವನ್ನು ನೀಡಿ ಉಪಕರಿಸಿದ ಶ್ರೀಮತ್ ಹರಪನಹಳ್ಳಿ, ತೆಗ್ಗಿನ ಮಠದ ಗುರುಗಳಾದ, ವಿದ್ಯಾಪ್ರೇಮಿಗಳೂ-ವಿದ್ಯಾದಾನಿಗಳೂ ಆದ, ಹಲವಾರು ವಿದ್ಯಾಸಂಸ್ಥೆಗಳನ್ನು ಕಟ್ಟಿ ಬೆಳಸಿದ ಹಾಗೂ ಬೆಳೆಸುತ್ತಿರುವ ಷ।। ಬ್ರ।। ಶ್ರೀ ಚಂದ್ರಮೌಳಿ ಶಿವಾಚಾರ್ಯ ಸ್ವಾಮಿಗಳವರ ಪಾದಾರವಿಂದಗಳಲ್ಲಿ ಹಾರ್ದಿಕ ನಮನಗಳನ್ನು ಸಲ್ಲಿಸುತ್ತೇನೆ. ಈ ಗ್ರಂಥದ ಪ್ರಕಟಣೆಯ ಎಲ್ಲಾ ಹಂತಗಳಲ್ಲಿ ಗಮನವಿಟ್ಟು ಚಾಲನೆ ನೀಡಿದ ವೀರಶೈವ ಅನುಸಂಧಾನ ಸಂಸ್ಥಾನದ ಕಾರ್ಯದರ್ಶಿಗಳಾದ ಡಾ।। ಸಿ.ಯು. ಉಮಾದೇವಿ ಮತ್ತು ಶ್ರೀ ಸಿ. ಉಮಾಶಂಕರ್ ಅವರಿಗೆ ಅಭಿನಂದನೆಗಳು. ಡಾ।। ಸಿ. ಶಿವಕುಮಾರಸ್ವಾಮಿ ಅವರು ಈ ಗ್ರಂಥದ ಪ್ರಕಟಣೆಯ ಎಲ್ಲಾ ಹಂತದಲ್ಲಿ ನೆರವಾಗಿದ್ದಾರೆ. ಅವರಿಗೆ ನನ್ನ ಮೆಚ್ಚುಗೆಯ ಶುಭಾಶಯಗಳು ಸಲ್ಲುತ್ತವೆ. ಛಾಯಾಕ್ಷರ ಜೋಡಣೆ ಮಾಡಿದ "ವರ್ಷಿಣಿ ಗ್ರಾಫಿಕ್ಸ್" ಅವರಿಗೆ ಮತ್ತು ಅಂದವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ "ಸ್ನೇಹಾ ಪ್ರಿಂಟರ್ಸ್" ಅವರಿಗೆ ನನ್ನ ಕೃತಜ್ಞತೆಗಳು.

ಬೆಂಗಳೂರು	ಇತಿ
ಶಾ।। ಶ।। ೧೯೨೨ ವಿಕ್ರಮ ಸಂ।।	ಸಜ್ಜನವಿಧೇಯ
ಮಾರ್ಗಶಿರ ಶು।। ಪೂರ್ಣಿಮೆ	ಡಾ।। ಎಂ. ಶಿವಕುಮಾರ ಸ್ವಾಮಿ
೧೧-೧೨-೨೦೦೦	

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವ ಅನುಸಂಧಾನ ಸಂಸ್ಥಾನ

'ಸಾವೀನ್ಯ', 365/ಸಿ, 5ನೇ 'ಎ' ಮುಖ್ಯರಸ್ತೆ, ರೆಂಕೋ ಬಡಾವಣೆ
ವಿಜಯನಗರ 2ನೇ ಹಂತ, ಬೆಂಗಳೂರು-560 040.

ಸಂಸ್ಥಾಪಕ ಅಧ್ಯಕ್ಷರು : ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು
ಡಾ।। ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ವಾರಣಾಸಿ

ಅಧ್ಯಕ್ಷರು : ಶ್ರೀ ಬಿ.ಆರ್.ವಿ. ಗೌಡ್
ಪೋಷಕ ಮಂಡಲಿ

ಡಾ।। ಎಂ. ಶಿವಕುಮಾರ ಸ್ವಾಮಿ
ಸಂಪಾದಕ ಮಂಡಲಿ

ಉಪಾಧ್ಯಕ್ಷರು	:	ಶ್ರೀ ಎನ್.ಆರ್. ಪಂಡಿತಾರಾಧ್ಯ
		ಶ್ರೀ ಬಿ.ಎಸ್ ಶಿವಣ್ಣ
ಕಾರ್ಯದರ್ಶಿ	:	ಡಾ।। ಸಿ.ಯು. ಉಮಾದೇವಿ
ಸಹ ಕಾರ್ಯದರ್ಶಿ	:	ಶ್ರೀ ಸಿ. ಉಮಾಶಂಕರ್
ಖಜಾಂಚಿ	:	ಶ್ರೀ ಬಿ.ಎಸ್. ವಾಗೀಶ್ ಪ್ರಸಾದ್

ಪೋಷಕ ಮಂಡಳಿ ಸದಸ್ಯರು

ಶ್ರೀ ಬಿ.ಎಸ್. ಶಿವಪ್ಪಶೆಟ್ಟಿ
ಶ್ರೀ ಯಜಮಾನ್ ಶ್ರೀಕಂಠಪ್ಪ
ಶ್ರೀ ಆರ್.ಬಿ.ಎಸ್. ಚೆನ್ನಬಸವಾರಾಧ್ಯ
ಶ್ರೀ ಆರ್.ವಿ. ವಿಜಯಕುಮಾರ್
ಶ್ರೀ ವಿನಾಯಕ ಪತ್ರೆ
ಶ್ರೀ ಕೆ.ಎನ್. ಜಯಲಿಂಗಪ್ಪ
ಶ್ರೀ ಕೆ.ಜಿ. ಶಶಿಧರ್
ಶ್ರೀ ಎಸ್.ಎನ್. ವಿನೋದ್
ಶ್ರೀ ಟಿ.ಜಿ. ಮೃತ್ಯುಂಜಯ
ಶ್ರೀ ಸಿ. ವೀರಭದ್ರಯ್ಯ
ಶ್ರೀ ಎನ್.ಆರ್. ಜಗದೀಶಾರಾಧ್ಯ

ಸಂಪಾದಕ ಮಂಡಳಿ ಸದಸ್ಯರು

ಶ್ರೀ ಷಣ್ಮುಖಯ್ಯ ಅಕ್ಕೂರಮಠ
ಪ್ರೊ. ಎನ್. ಬಸವಾರಾಧ್ಯ
ವಿದ್ವಾನ್ ಜಿ.ವಿ. ಶಿವಸ್ವಾಮಿ
ಡಾ।। ಸಿ. ಶಿವಕುಮಾರಸ್ವಾಮಿ
ವಿದ್ವಾನ್ ಬಿ. ರಾಜಶೇಖರಯ್ಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯಾನುಕ್ರಮಣಿಕೆ

೧. ಚಂದ್ರಜ್ಞಾನಾಗಮದಲ್ಲಿ ತತ್ತ್ವತ್ರಯವಿಚಾರ ೧
-ಡಾ॥ ಎಂ. ಶಿವಕುಮಾರ ಸ್ವಾಮಿ

೨. ಗುರುವಿನ ಸ್ವರೂಪ ಮತ್ತು ಮಹತ್ತ್ವ ೧೪
-ವಿದ್ವಾನ್ ಜಿ.ವಿ. ಶಿವಸ್ವಾಮಿ

೩. ಲಿಂಗತತ್ತ್ವ ನಿರೂಪಣೆ ೩೦
-ಡಾ॥ ಎಂ. ಶಿವಕುಮಾರ ಸ್ವಾಮಿ

೪. ಜಂಗಮ ಸ್ವರೂಪ ಮತ್ತು ಮಾಹಾತ್ಮ್ಯ ೫೦
-ಡಾ॥ ಸಿ. ಶಿವಕುಮಾರ ಸ್ವಾಮಿ

೫. ಭಸ್ಮದ ಮಹತ್ತ್ವ, ನಿರ್ಮಾಣ ಮತ್ತು ಉಪಯೋಗ ೬೭
-ಶ್ರೀ ಸಿದ್ಧರಾಮ ದೇವರು ಹಿರೇಮಠ

೬. ರುದ್ರಾಕ್ಷದ ಉತ್ಪತ್ತಿ, ಧಾರಣವಿಧಿ ಹಾಗೂ ಮಹಿಮೆ ೮೦
-ಷ॥ ಬ್ರ॥ ಡಾ॥ ಮಹಾದೇವ ಶಿವಾಚಾರ್ಯ

೭. ಮಂತ್ರರಾಜ ಪಂಚಾಕ್ಷರೀ ೮೯
-ಶ್ರೀ ಶಂಭುಲಿಂಗ ದರೂರ

೮. ಪಾದೋದಕ ಮತ್ತು ಪ್ರಸಾದ ೧೦೫
-ಡಾ॥ ಆರ್.ಎಸ್. ಸದಾಶಿವಯ್ಯ

೯. ಪಂಚಾಚಾರಮೀಮಾಂಸೆ ೧೧೪
-ಡಾ॥ ಮಲ್ಲಿಕಾರ್ಜುನ ಪರಡ್ಡಿ

೧೦. ಶೈವ-ವೀರಶೈವ ಪ್ರಭೇದಗಳು ೧೪೦
-ಶ್ರೀ ಷಣ್ಮುಖಯ್ಯ ಅಕ್ಕೂರುಮಠ

೧೧. ವೀರಶೈವರ ಅಂತ್ಯೇಷ್ಟಿವಿಧಿ ೧೫೮
-ವಿದ್ವಾನ್ ಕೋ.ರಂ. ಬಸವರಾಜು

೧೨. ಆಶೌಚ ಮತ್ತು ಪ್ರಾಯಶ್ಚಿತ್ತಗಳು ೧೭೭
-ವಿದ್ವಾನ್ ಬಿ. ರಾಜಶೇಖರಯ್ಯ

೧೩. ವೀರಶೈವರ ದೈನಂದಿನ ಆಚರಣೆಗಳು ೧೯೪
-ಶ್ರೀ ಶ್ರೀಕರದೇವರು ಹಿರೇಮಠ

೧೪. ನಮ್ಮ ಲೇಖಕರು ೨೧೩

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಚಂದ್ರಜ್ಞಾನಾಗಮದಲ್ಲಿ ತತ್ತ್ವತ್ರಯವಿಚಾರ

-ಡಾ|| ಎಂ. ಶಿವಕುಮಾರಸ್ವಾಮಿ

ಶೈವಾಗಮಗಳ ಉತ್ತರಭಾಗದಲ್ಲಿ ವೀರಶೈವದ ಸಾಧನಮಾರ್ಗ ಮತ್ತು ತತ್ತ್ವವಿಚಾರಗಳು ನಿರೂಪಿಸಲ್ಪಟ್ಟಿವೆ. ಸಾಧನಮಾರ್ಗವೆಂದರೆ ಅಷ್ಟಾವರಣ-ಪಂಚಾಚಾರ-ಗಳನ್ನೊಳಗೊಂಡ ಷಟ್‌ಸ್ಥಲ ಮಾರ್ಗ. ಅದಕ್ಕೆ ಪೂರಕವಾಗಿ ಅವು ತತ್ತ್ವವಿಚಾರವನ್ನೂ ನಿರೂಪಿಸುತ್ತವೆ. ವಿಶೇಷವಾಗಿ ಪತಿ, ಪಶು ಮತ್ತು ಪಾಶ ಎಂಬ ಮೂರು ತತ್ತ್ವಗಳ ವಿಚಾರವು ಸೂಕ್ಷ್ಮಾಗಮ, ಸ್ವಾಯಂಭುವಾಗಮ, ಪಾರಮೇಶ್ವರಾಗಮ, ಚಂದ್ರಜ್ಞಾನಾಗಮಗಳಲ್ಲಿ ಬಂದಿದೆ. ಇದೇ ಶೈವ ಮತ್ತು ವೀರಶೈವಗಳೆರಡಕ್ಕೂ ಸಮಾನವಾದ ತತ್ತ್ವತ್ರಯವಿಚಾರ. ಪ್ರಸ್ತುತ ಲೇಖನದಲ್ಲಿ ಚಂದ್ರಜ್ಞಾನಾಗಮ ಉತ್ತರಭಾಗವನ್ನು ಅನುಸರಿಸಿ ತತ್ತ್ವತ್ರಯ ವಿಚಾರವನ್ನು ಮಾಡಲಾಗಿದೆ. ಅಲ್ಲಲ್ಲಿ ಬೇರೆ ಶೈವಾಗಮಗಳಲ್ಲಿ ಬರುವ ವಿಚಾರವನ್ನು ಹೋಲಿಕೆಗಾಗಿ ಕೊಡಲಾಗಿದೆ.

ಚಂದ್ರಜ್ಞಾನಾಗಮ ಉತ್ತರಭಾಗ ಕ್ರಿಯಾಪಾದ ಮೊದಲ ಪಟಲದಲ್ಲಿ ಬರುವ ತತ್ತ್ವತ್ರಯ ವಿಚಾರದಲ್ಲಿ ಪತಿ, ಪಶು ಮತ್ತು ಪಾಶಗಳ ಸ್ವರೂಪವನ್ನು ಸಾಮಾನ್ಯವಾಗಿ ತಿಳಿಸಿ, ವಿಶೇಷವಾಗಿ ಪತಿತತ್ತ್ವಸ್ವರೂಪನಾದ ಪರಶಿವನ ವಿಶ್ವವ್ಯಾಪಾರ-ಶಾಸನಗಳನ್ನು ವರ್ಣಿಸಲಾಗಿದೆ. ಅಲ್ಲಿ ಬರುವ ತತ್ತ್ವತ್ರಯ ಸ್ವರೂಪ ಹೀಗಿದೆ:

ಬ್ರಹ್ಮಾದ್ಯಾಃ ಸ್ಥಾವರಾಂತಾಶ್ಚ ದೇವದೇವಸ್ಯ ಶೂಲಿನಃ।
ಪಶವಃ ಪರಿಕೀರ್ತ್ಯಂತೇ ಸಂಸಾರವಶವರ್ತಿನಃ॥
ತೇಷಾಂ ಪತಿತ್ವಾದ್ ವಿಶ್ವೇಶಃ ಶಿವಃ ಪಶುಪತಿಃ ಸ್ಮೃತಃ।
ಮಲಮಾಯಾದಿಭಿಃ ಪಾಶೈಃ ಸ ಬಧ್ನಾತಿ ಪಶೂನ್ ಪತಿಃ॥
ಸ ಏವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ॥[೧]

"ಬ್ರಹ್ಮನಿಂದ ಅಚರವಸ್ತುಗಳವರೆಗೆ ಎಲ್ಲವೂ ದೇವದೇವನಾದ ಶಿವನ ಪಶುಗಳು ಎಂದು ಕರೆಯಲ್ಪಡುತ್ತವೆ. ಅವು ಹುಟ್ಟು-ಸಾವುಗಳ ಚಕ್ರಕ್ಕೆ ವಶವಾಗಿವೆ. ಅವುಗಳ ಒಡೆಯನಾಗಿರುವುದರಿಂದ ವಿಶ್ವೇಶ್ವರ ಶಿವನು ಪಶುಪತಿಯೆನಿಸಿದ್ದಾನೆ. ಅವನು

---

೧. ಚಂದ್ರಜ್ಞಾನಾಗಮ, ಕ್ರಿಪಾ., ೧.೧೦-೧೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(ಒಡೆಯನು) ಪಶುಗಳನ್ನು ಮಲ, ಮಾಯೆ ಮುಂತಾದ ಪಾಶಗಳಿಂದ ಬಂಧಿಸುತ್ತಾನೆ. ಅವನೇ ಅವುಗಳಿಗೆ ಭಕ್ತಿಯಿಂದ ಸರಿಯಾಗಿ ಪೂಜಿಸಲ್ಪಟ್ಟು ಮುಕ್ತಿಯನ್ನು ನೀಡುವವನು." ಹೀಗೆ ತತ್ತ್ವತ್ರಯವನ್ನು ಹೇಳಿ ಚಂದ್ರಜ್ಞಾನಾಗಮವು ಮುಕ್ತಿಯ ಸೂಚನೆಯನ್ನೂ ನೀಡುತ್ತದೆ. ಈ ಮೂರು ತತ್ತ್ವಗಳ ಸ್ವರೂಪವನ್ನು ಇಲ್ಲಿ ವಿವರಿಸಲಾಗುವುದು.

ಪತಿತತ್ತ್ವ:

ಪರಮಾತ್ಮ ಪರಶಿವನು ಪತಿ, ಚರಾಚರ ಜಗತ್ತಿನ ಒಡೆಯ. ಅವನೇ ಜಗತ್ತಿನ ಸೃಷ್ಟಿಗೆ ಕಾರಣನು. ಜಗತ್ಸೃಷ್ಟಿಯೆಂದರೆ ಚರಾಚರ ಜಗತ್ತಿನ ಸೃಷ್ಟಿ. ಅದು ಸಮುದ್ರ-ತರಂಗನ್ಯಾಯದಂತೆ ಮೂವತ್ತಾರು ತತ್ತ್ವಗಳ ರೂಪದಲ್ಲಿ ಪರಮಾತ್ಮನ ಅಭಿವ್ಯಕ್ತಿ. ಈ ಸೃಷ್ಟಿಪ್ರಕ್ರಿಯೆಯಲ್ಲಿ ಚಂದ್ರಜ್ಞಾನಾಗಮವು ಪ್ರಕೃತಿಯಿಂದ ಹಿಡಿದು ಭೂಮಿಯವರೆಗಿನ ಇಪ್ಪತ್ನಾಲ್ಕು ತತ್ತ್ವಗಳ ಆವಿಷ್ಕಾರವನ್ನು ಮಾತ್ರ ವರ್ಣಿಸುತ್ತದೆ. ಅದು ಸಾಂಖ್ಯರ ಸೃಷ್ಟಿಪ್ರಕ್ರಿಯೆಯನ್ನು ಹೋಲುತ್ತದೆ. ಅದು ಈಶ್ವರನ ಆಜ್ಞೆಯಿಂದ ನಡೆಯುತ್ತದೆ ಎಂದು ಹೇಳಿರುವುದರಿಂದ ಅದನ್ನು ಸೇಶ್ವರ ಸಾಂಖ್ಯ ಸೃಷ್ಟಿಪ್ರಕ್ರಿಯೆಯನ್ನು ಹೋಲುತ್ತದೆ ಎಂದು ಹೇಳಬೇಕಾಗುತ್ತದೆ.

೨೪ ತತ್ತ್ವಗಳ ಉತ್ಪತ್ತಿ:

ಮಹೇಶ್ವರನ ಆಜ್ಞೆಯಂತೆ ಪ್ರಕೃತಿಯು ಪುರುಷನ (ಜೀವಾತ್ಮನ) ಉಪಭೋಗಕ್ಕೆ ಯೋಗ್ಯವಾದ ಬುದ್ಧಿಗೆ ಜನ್ಮ ಕೊಡುತ್ತಾಳೆ. ಆ ಬುದ್ಧಿಯು ಅಹಂಕಾರಕ್ಕೆ ಜನ್ಮ ಕೊಡುತ್ತದೆ. ಅಹಂಕಾರದಿಂದ ಮನಸ್ಸು, ಐದು ಜ್ಞಾನೇಂದ್ರಿಯಗಳು ಮತ್ತು ಐದು ಕರ್ಮೇಂದ್ರಿಯಗಳೆಂಬ ಹನ್ನೊಂದು ಇಂದ್ರಿಯಗಳು ಮತ್ತು ಐದು ತನ್ಮಾತ್ರಗಳು (ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿಗಳ ಸೂಕ್ಷ್ಮಾಂಶಗಳು) ಉತ್ಪನ್ನವಾಗುತ್ತವೆ.[೨]

ಹೀಗೆ ಚಂದ್ರಜ್ಞಾನಾಗಮವು ಕೇವಲ ಇಪ್ಪತ್ನಾಲ್ಕು ತತ್ತ್ವಗಳ ವಿಚಾರವನ್ನು ಹೇಳುತ್ತದೆ. ಶೈವಾಗಮ ಪರಂಪರೆಯಲ್ಲಿ ಹೇಳಿದ ಮೂವತ್ತಾರು ತತ್ತ್ವಗಳಲ್ಲಿ ಈ ಇಪ್ಪತ್ನಾಲ್ಕು ಅಶುದ್ಧತತ್ತ್ವಗಳೆಂಬ ಹೆಸರಿನಿಂದ ಕರೆಯಲ್ಪಡುತ್ತವೆ. ಇವು ಮೂರನೆ ವರ್ಗಕ್ಕೆ ಸೇರಿದವುಗಳು. ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ ಎಂಬ ಮೊದಲ ಐದು ತತ್ತ್ವಗಳು ಮೊದಲ ವರ್ಗಕ್ಕೆ ಸೇರಿದ ಶುದ್ಧತತ್ತ್ವಗಳು. ಅನಂತರ ಬರುವ ಮಾಯಾ-ಕಲಾ-ವಿದ್ಯಾ-ರಾಗ-ಕಾಲ-ನಿಯತಿ-ಪುರುಷ ಎಂಬ ಏಳು ತತ್ತ್ವಗಳು ಎರಡನೆ ವರ್ಗಕ್ಕೆ ಸೇರಿದ ಶುದ್ಧಾಶುದ್ಧ ತತ್ತ್ವಗಳು.[೩] ಇಲ್ಲಿ ಹೇಳಿರುವ ಇಪ್ಪತ್ನಾಲ್ಕು ಅಶುದ್ಧತತ್ತ್ವಗಳೇ ಪುರುಷನನ್ನು (ಜೀವಾತ್ಮನನ್ನು) ಬಂಧಿಸುವ ಪಾಶಗಳು. ಈ ದೃಷ್ಟಿಯಿಂದಲೇ ಇಲ್ಲಿ ಇವಿಷ್ಟನ್ನೇ ಹೇಳಿರುವುದು. ಈ ವಿವರಣೆಯನ್ನು ಕೇವಲ ಸ್ಥೂಲವರ್ಣನೆಯೆಂದು ಭಾವಿಸಬೇಕು. ಇದರ ವಿಶ್ಲೇಷಣೆಯು

---

೨. ಅದೇ, ಕ್ರಿ.ಪಾ., ೧.೧೪-೧೭.
೩. ಸೂಕ್ಷ್ಮಾಗಮ, ಕ್ರಿ.ಪಾ., ೧೦.೪-೩೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇತರ ಆಗಮಗಳಲ್ಲಿ ಮತ್ತು ಶಾಸ್ತ್ರಗ್ರಂಥಗಳಲ್ಲಿ ವಿಶೇಷವಾಗಿ ಬರುತ್ತದೆ. ಅದನ್ನು ತಿಳಿದುಕೊಂಡರೆ ಮಾತ್ರ ಸೃಷ್ಟಿಪ್ರಕ್ರಿಯೆಯ ಪೂರ್ಣಚಿತ್ರವು ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಸೃಷ್ಟಿಪ್ರಕ್ರಿಯೆ:

ಪರಶಿವನು ಸೃಷ್ಟಿಗೆ ಮನಸ್ಸು ಮಾಡಿದಾಗ ಅವನಲ್ಲಿ ಅವಿನಾಭಾವ ಸಂಬಂಧದಿಂದಿದ್ದ ಶಕ್ತಿಯು ಸ್ಪಂದಿಸಿದಳು. ಅದರ ಪರಿಣಾಮವಾಗಿ ಮೊದಲು ಪರಾಶಕ್ತಿ, ಅದರಿಂದ ಆದಿಶಕ್ತಿ, ಅದರಿಂದ ಇಚ್ಛಾಶಕ್ತಿ, ಅದರಿಂದ ಒಂದು ಅಂಶವಾಗಿ ಜ್ಞಾನಶಕ್ತಿ, ಅದರಿಂದ ಒಂದು ಅಂಶವಾಗಿ ಕ್ರಿಯಾಶಕ್ತಿ, ಹೀಗೆ ಒಂದೇ ಶಕ್ತಿಯು ಐದು ರೂಪಗಳನ್ನು ಧರಿಸಿತು.[೪] ಪರಶಿವನು ಜ್ಞಾನಶಕ್ತಿಯಲ್ಲಿ ಬೆರೆತು 'ನಾನು ಸರ್ವಜ್ಞ' ಎಂದುಕೊಂಡಾಗ ಶಿವತತ್ತ್ವ(೧) ಉತ್ಪನ್ನವಾಯಿತು. ಇದೇ ಭಾವಿ ಪ್ರಪಂಚಕ್ಕೆ ನಿಮಿತ್ತ ಕಾರಣ. ಪರಶಿವನು ಕ್ರಿಯಾಶಕ್ತಿಯಲ್ಲಿ ಬೆರೆತು 'ನಾನು ಸರ್ವಕರ್ತೃವು' ಎಂದುಕೊಂಡಾಗ ಶಕ್ತಿತತ್ತ್ವ(೨)ವಾಯಿತು. ಇದು ಭಾವಿ ಪ್ರಪಂಚಕ್ಕೆ ಉಪಾದಾನ ಕಾರಣ. ಈ ಶಕ್ತಿತತ್ತ್ವವು ಜ್ಞಾನಶಕ್ತಿಯಲ್ಲಿ ಪ್ರವೇಶಿಸಿ ನೆನೆಹಾಕಿದ ಕಡಲೆಯಂತೆ ಉಬ್ಬಿ ಭಾವಿ ಪ್ರಪಂಚದ ಬಗ್ಗೆ 'ನಾನು ಈ ಪ್ರಪಂಚವು' ಎಂದುಕೊಂಡಾಗ ಸದಾಶಿವತತ್ತ್ವ (೩)ವೆನಿಸಿತು. ಅದೇ ಶಕ್ತಿತತ್ತ್ವವು ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ ಬಿತ್ತಿದ ಬೀಜ ಮೊಳಕೆಯೊಡೆದಂತೆ ಮೊಳಕೆಯೊಡೆದ ಪ್ರಪಂಚವನ್ನು ಕುರಿತು 'ನಾನೇ ಈ ಪ್ರಪಂಚ' ಎಂದುಕೊಂಡಾಗ ಈಶ್ವರತತ್ತ್ವ (೪)ವಾಯಿತು. ಈ ಶಕ್ತಿತತ್ತ್ವವು ಮತ್ತೆ ಸಾಗರ-ತರಂಗ ನ್ಯಾಯದಂತೆ 'ತಾನು' ಎಂಬ ಅಹಂಕಾರಕ್ಕೂ 'ಇದು' ಎಂಬ ಪ್ರಪಂಚಕ್ಕೂ ಅಭೇದಜ್ಞಾನವನ್ನು ಹೊಂದಲು ಶುದ್ಧವಿದ್ಯಾತತ್ತ್ವ (೫)ವಾಯಿತು.

ಹೀಗೆ ಶುದ್ಧವಿದ್ಯಾತತ್ತ್ವವಾದ ಶಕ್ತಿತತ್ತ್ವವು, ನವಿಲಿನ ತತ್ತಿಯ ರಸದಲ್ಲಿ ನವಿಲಿನ ಎಲ್ಲಾ ವೈಚಿತ್ರ್ಯಗಳು ಸೂಕ್ಷ್ಮರೂಪದಲ್ಲಿರುವಂತೆ ತನ್ನಲ್ಲಿ ಅಡಗಿದ ಪ್ರಪಂಚದ ಸೂಕ್ಷ್ಮವೈಚಿತ್ರ್ಯಗಳ ಬಗ್ಗೆ ಭೇದಬುದ್ಧಿಯನ್ನು ತಾಳಿದಾಗ ಮಾಯಾತತ್ತ್ವ(೬)ವಾಗುವುದು. ಪರಶಿವನ ಇಚ್ಛಾಶಕ್ತಿಯ ಸಂಯೋಗದಿಂದ ಹುಟ್ಟಿದ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ ಪುರುಷತತ್ತ್ವ (೭)ವೆನಿಸಿಕೊಳ್ಳುವುದು. ಮಾಯಾಮಲ ಸಂಬಂಧದಿಂದ ಈ ಪುರುಷನು ಸಂಸಾರಿಯೆನಿಸುವನು. ಮಾಯಾಮಲದಿಂದ ಪುರುಷನು ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಶಕ್ತಿಗಳನ್ನು ಕಳೆದುಕೊಂಡು ಕಿಂಚಿತ್‌ಕರ್ತೃತ್ವ, ಕಿಂಚಿಜ್ಞತ್ವ, ಮುಂತಾದವುಗಳಿಂದ ಕೂಡಿಕೊಳ್ಳುವನು. ಕಿಂಚಿತ್ಕರ್ತೃತ್ವಶಕ್ತಿಯೇ ಕಲಾತತ್ತ್ವ (೮)ವೆನಿಸುವುದು. ಕಿಂಚಿಜ್ಞತ್ವಶಕ್ತಿಯೇ ವಿದ್ಯಾತತ್ತ್ವ(೯)ವಾಗುವುದು. ಅಪೂರ್ಣತ್ವಶಕ್ತಿಯೇ ರಾಗತತ್ತ್ವ (೧೦)ವೆನಿಸುವುದು. ಅನಿತ್ಯತ್ವಶಕ್ತಿಯೇ ಕಾಲತತ್ತ್ವ (೧೧)ವಾಗುವುದು. ಅವ್ಯಾಪಕತ್ವಶಕ್ತಿಯೇ ನಿಯತಿತತ್ತ್ವ(೧೨)ವೆನಿಸುವುದು. ೮ ರಿಂದ ೧೨ರವರೆಗಿನ ಐದು ಪುರುಷನ ಕಂಚುಕಗಳು.

---

೪. ಅದೇ, ಕ್ರಿ.ಪಾ., ೧.೨೦-೨೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾರ್ಯೋನ್ಮುಖವಾದ ಇಚ್ಛಾಶಕ್ತಿಯು ತನ್ನಲ್ಲಿಯ ಜ್ಞಾನಶಕ್ತಿ-ಕ್ರಿಯಾಶಕ್ತಿಗಳಲ್ಲಿನ ಭೇದಬುದ್ಧಿಯಿಂದ ಕೂಡಿದ ಮಾಯಾತತ್ತ್ವದಲ್ಲಿ ಪ್ರತಿಸ್ಫುರಿಸಲು **ಪ್ರಕೃತಿತತ್ತ್ವ** (೧೩) ವೆನಿಸುವುದು. ಪ್ರಕೃತಿತತ್ತ್ವವಾಗಿ ಪರಿಣಮಿಸಿದ ಶಕ್ತಿತತ್ತ್ವವೇ 'ಹೀಗೆಯೇ ಸರಿ' ಎಂಬ ನಿಶ್ಚಯಕ್ಕೆ ಕಾರಣವಾಗಿ **ಬುದ್ಧಿತತ್ತ್ವ** (೧೪)ವೆನಿಸುವುದು. ಬುದ್ಧಿತತ್ತ್ವವಾದ ಶಕ್ತಿತತ್ತ್ವವು 'ನಾನು-ನನ್ನದು' ಎಂಬ ಅಹಂಕಾರ-ಮಮಕಾರಗಳಿಗೆ ಕಾರಣವಾಗಿ **ಅಹಂಕಾರತತ್ತ್ವ** (೧೫)ವಾಗುವುದು. ಅಹಂಕಾರತತ್ತ್ವವಾದ ಅದೇ ಸಂಕಲ್ಪ-ವಿಕಲ್ಪಗಳಿಗೆ ಕಾರಣವಾಗಿ **ಮನಸ್ತತ್ತ್ವ** (೧೬)ವೆನಿಸುವುದು. ಬುದ್ಧಿ, ಅಹಂಕಾರ, ಮನಸ್ತತ್ತ್ವಗಳು ಅಂತಃಕರಣ-ವೆನಿಸುವವು. ಈ ಅಂತಃಕರಣರೂಪವಾದ ಶಕ್ತಿತತ್ತ್ವವೇ ಬಾಹ್ಯಶರೀರವನ್ನು ಅವಲಂಬಿಸಿ ಶಬ್ದಜ್ಞಾನಕ್ಕೆ ಸಾಧನವಾಗಿ **ಶ್ರೋತ್ರತತ್ತ್ವ** (೧೭)ವೆಂದೂ, ಸ್ಪರ್ಶಜ್ಞಾನಕ್ಕೆ ಸಾಧನವಾಗಿ **ತ್ವಕ್‌ತತ್ತ್ವ** (೧೮)ವೆಂದೂ, ರೂಪಜ್ಞಾನಕ್ಕೆ ಸಾಧನವಾಗಿ **ನೇತ್ರತತ್ತ್ವ** (೧೯)ವೆಂದೂ, ರಸಜ್ಞಾನಕ್ಕೆ ಕಾರಣವಾಗಿ **ಜಿಹ್ವಾತತ್ತ್ವ** (೨೦)ವೆಂದೂ, ಗಂಧಜ್ಞಾನಕ್ಕೆ ಸಾಧನವಾಗಿ **ಘ್ರಾಣತತ್ತ್ವ** (೨೧)ವೆಂದೂ ಕರೆಯಲ್ಪಡುವುದು. ಇವು ಜ್ಞಾನಶಕ್ತಿಯಿಂದ ಕೂಡಿರುವುದರಿಂದ ಜ್ಞಾನೇಂದ್ರಿಯಗಳು.

ಜ್ಞಾನೇಂದ್ರಿಯರೂಪದಲ್ಲಿ ಪರಿಣಮಿಸಿದ ಆ ಶಕ್ತಿತತ್ತ್ವವೇ ಉಚ್ಚಾರಣಕ್ರಿಯೆಗೆ ಸಾಧನವಾಗಿ **ವಾಕ್ತತ್ತ್ವ** (೨೨)ವೆಂದೂ, ದಾನ-ಆದಾನ ಮುಂತಾದ ಕ್ರಿಯೆಗಳಿಗೆ ಸಾಧನವಾಗಿ **ಪಾಣಿತತ್ತ್ವ** (೨೩)ವೆಂದೂ, ಹೋಗುವುದು, ಬರುವುದು ಮುಂತಾದ ಕ್ರಿಯೆಗಳಿಗೆ ಸಾಧನವಾಗಿ **ಪಾದತತ್ತ್ವ** (೨೪)ವೆಂದೂ, ಮಲವಿಸರ್ಜನೆಗೆ ಸಾಧನವಾಗಿ **ಪಾಯುತತ್ತ್ವ** (೨೫), ವೀರ್ಯ, ಮೂತ್ರ ವಿಸರ್ಜನೆಗೆ ಸಾಧನವಾಗಿ **ಉಪಸ್ಥತತ್ತ್ವ** (೨೬)ವೆಂದೂ ಕರೆಯಲ್ಪಡುವುದು. ಇವು ಕ್ರಿಯಾಶಕ್ತಿಯಿಂದ ಕೂಡಿರುವುದರಿಂದ ಕರ್ಮೇಂದ್ರಿಯಗಳು. ಈ ಶಕ್ತಿತತ್ತ್ವವೇ ಕಿವಿಯಿಂದ ಗ್ರಹಿಸಲ್ಪಡುವ **ಶಬ್ದತತ್ತ್ವ** (೨೭) ರೂಪವಾಗಿಯೂ, ತ್ವಗಿಂದ್ರಿಯದಿಂದ ಗ್ರಹಿಸಲ್ಪಡುವ **ಸ್ಪರ್ಶತತ್ತ್ವ** (೨೮) ರೂಪವಾಗಿಯೂ, ಕಣ್ಣಿನಿಂದ ಗ್ರಹಿಸಲ್ಪಡುವ **ರೂಪತತ್ತ್ವ** (೨೯) ರೂಪವಾಗಿಯೂ, ನಾಲಿಗೆಯಿಂದ ಗ್ರಹಿಸಲ್ಪಡುವ **ರಸತತ್ತ್ವ** (೩೦) ರೂಪವಾಗಿಯೂ, ಮೂಗಿನಿಂದ ಗ್ರಹಿಸಲ್ಪಡುವ **ಗಂಧತತ್ತ್ವ** (೩೧) ರೂಪವಾಗಿಯೂ ಪರಿಣಮಿಸುವುದು. ಈ ಶಬ್ದ ಮುಂತಾದ ಐದು ವಿಭಾಗಗಳಿಲ್ಲದೆ ಸಾಮಾನ್ಯರೂಪದಲ್ಲಿ ಇರುವುದರಿಂದ ಅವುಗಳಿಗೆ ಶಬ್ದಾದಿತನ್ಮಾತ್ರಗಳೆಂದು ಹೆಸರು. ಅದೇ ಶಕ್ತಿತತ್ತ್ವವು ಶಬ್ದವೊಂದನ್ನೇ ಗುಣವಾಗಿ ಉಳ್ಳ **ಆಕಾಶತತ್ತ್ವ** (೩೨)ವಾಗಿಯೂ, ಸ್ಪರ್ಶವೆಂಬ ಒಂದೇ ಗುಣವುಳ್ಳ **ವಾಯುತತ್ತ್ವ** (೩೩)ವಾಗಿಯೂ, ರೂಪವೆಂಬ ಒಂದು ಗುಣವುಳ್ಳ **ತೇಜಸ್ತತ್ತ್ವ** (೩೪)ವಾಗಿಯೂ, ರಸವೆಂಬ ಒಂದು ಗುಣವುಳ್ಳ **ಜಲತತ್ತ್ವ** (೩೫)ವಾಗಿಯೂ, ಗಂಧವೆಂಬ ಮುಖ್ಯಗುಣವುಳ್ಳ **ಪೃಥ್ವೀತತ್ತ್ವ** (೩೬)ವಾಗಿಯೂ ಪರಿಣಮಿಸಿತು. ಇವೇ ಆಗಮ ಪ್ರಸಿದ್ಧವಾದ ಮೂವತ್ತಾರು ತತ್ತ್ವಗಳು. ಇವುಗಳ ಅಭಿವ್ಯಕ್ತಿಯೇ ಸೃಷ್ಟಿಯ ಪ್ರಕ್ರಿಯೆ. ಚರಾಚರಾತ್ಮಕವಾದ ಜಗತ್ತು ಮೂವತ್ತಾರು ತತ್ತ್ವಗಳಿಂದ ಕೂಡಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನ ಶಾಸನದಿಂದಲೇ ಎಲ್ಲವೂ ನಡೆಯುವುದು:

ಬ್ರಹ್ಮನಿಂದ ಹಿಡಿದು ಸ್ಥಾವರ ವಸ್ತುಗಳವರೆಗೆ ಎಲ್ಲವೂ ಪತಿಯಾದ ಪರಶಿವನ ಪಶುಗಳು ಮತ್ತು ಮಲ, ಮಾಯಾ ಮುಂತಾದವು ಅವುಗಳನ್ನು ಬಂಧಿಸುವ ಪಾಶಗಳೆಂದು ಹೇಳಿದ ಚಂದ್ರಜ್ಞಾನಾಗಮ ಉತ್ತರಭಾಗದಲ್ಲಿ ಎಲ್ಲಾ ತತ್ತ್ವಗಳ ಉತ್ಪತ್ತಿ, ಬುದ್ಧಿ ಮುಂತಾದವುಗಳ ಕಾರ್ಯಗಳು, ಪಂಚಭೂತಗಳ ಉತ್ಪತ್ತಿ, ದಿಕ್ಪಾಲಕರ ಪ್ರವೃತ್ತಿ, ಬ್ರಹ್ಮ-ವಿಷ್ಣು-ಹರರ ಸೃಷ್ಟಿ-ಸ್ಥಿತಿ-ಲಯವೆಂಬ ಕಾರ್ಯಗಳು, ಕಾಲ ಮುಂತಾದವುಗಳ ಪ್ರವರ್ತನೆ, ಮುಂತಾದವು ಎಲ್ಲವೂ ಪರಶಿವನ ಶಾಸನದಿಂದಲೇ ನಡೆಯುತ್ತವೆ ಎಂಬ ಪಾರಮಾರ್ಥಿಕ ಸತ್ಯವು ಮನಂಬುಗುವಂತೆ ನಿರೂಪಿಸಲ್ಪಟ್ಟಿದೆ:

ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ।
ತತ್ಸರ್ವಂ ಶಂಕರಸ್ಯಾಜ್ಞಾಬಲೇನೈವ ಸಮಧಿಷ್ಠಿತಮ್॥

ಆಜ್ಞಾಬಲಾತ್ತಸ್ಯ ಧರಾ ಸ್ಥಿತೇಹ
ಧಾರಾಧರಾ ವಾರಿಧರಾಃ ಸಮುದ್ರಾಃ।
ಜ್ಯೋತಿರ್ಗಣಾಃ ಶಕ್ರಮುಖಾಶ್ಚ ದೇವಾಃ
ಸ್ಥಿರಂ ಚರಂ ವಾ ಚಿದಚಿದ್ಯದಸ್ತಿ॥[೫]

'ಈ ಜಗತ್ತಿನಲ್ಲಿ ಏನೆಲ್ಲಾ ಕಂಡುಬರುತ್ತದೆಯೋ, ಏನೆಲ್ಲಾ ಕೇಳಿಬರುತ್ತದೆಯೋ' ಅದೆಲ್ಲವೂ ಶಂಕರನ ಆಜ್ಞೆಯ ಬಲದಿಂದಲೇ ನೆಲೆಗೊಂಡಿದೆ. ಭೂಮಿ, ಪರ್ವತಗಳು, ಮೋಡಗಳು, ಸಮುದ್ರಗಳು, ನಕ್ಷತ್ರಗಳು, ಇಂದ್ರ ಮೊದಲಾದ ದೇವತೆಗಳು, ಸ್ಥಿರ-ಚರಗಳು, ಚೈತನ್ಯಸ್ವರೂಪದ್ದು ಮತ್ತು ಅಚೇತನವಾದುದು ಯಾವುದಿದೆಯೋ ಅದೆಲ್ಲಾ ಆತನ ಆಜ್ಞಾಬಲದಿಂದಲೇ ಇಲ್ಲಿ ನಿಂತಿವೆ.'

ಹೀಗೆ ವಿಶ್ವವೆಲ್ಲವೂ ಪರಮಾತ್ಮನ ಆಜ್ಞಾಬಲದಿಂದಲೇ ನಿಂತಿವೆ. ವಿಶ್ವವೆಲ್ಲ ಪರಮಾತ್ಮನ ನಿಯಂತ್ರಣಕ್ಕೆ ಒಳಗಾಗಿ ನಡೆಯುತ್ತದೆ. ಪರಮಾತ್ಮನ ವಿಶ್ವವ್ಯಾಪಾರದಲ್ಲಿ, ವಿಶ್ವಲೀಲೆಯಲ್ಲಿ ಪ್ರಧಾನವಾದ ಭಾಗವೆಂದರೆ ಪಶುಗಳೆಂದು ಕರೆಯಲ್ಪಡುವ ಜೀವರುಗಳ ಬಂಧ-ಮೋಕ್ಷಗಳ ವಿತರಣೆ. ಇದನ್ನು ಚಂದ್ರಜ್ಞಾನಾಗಮವು ಮಾರ್ಮಿಕವಾಗಿ ಹೇಳುತ್ತದೆ:

ಏತಾವತಾಂ ಪಶೂನಾಂ ಹಿ ದ್ವಿಪದಾಂ ಚ ಚತುಷ್ಪದಾಮ್।
ಈಶಃ ಶಿವೋ ಬಂಧಮೋಕ್ಷೌ ತದ್ವಶೇ ತಿಷ್ಠತೋ ಧ್ರುವಮ್॥[೬]

'ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಈ ಎಲ್ಲಾ ಪಶುಗಳ ಒಡೆಯನೆಂದರೆ ಶಿವನೇ. ಅವುಗಳ ಬಂಧನ ಮತ್ತು ಮುಕ್ತಿ ಎರಡೂ ನಿಶ್ಚಿತವಾಗಿ ಅವನ ವಶದಲ್ಲಿವೆ.' ಈ ಹಿಂದೆ

---

೫. ಚಂದ್ರಜ್ಞಾನಾಗಮ, ಕ್ರಿ.ಪಾ., ೧.೪೨-೪೩.

೬. ಅದೇ, ಕ್ರಿ.ಪಾ. ೧.೪೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿದ 'ಸ ಏವ ಮೋಚಕಸ್ತೇಷಾಂ ಭಕ್ತ್ಯಾ ಸಮ್ಯಗುಪಾಸಿತಃ'[೭] ಎಂಬ ಮಾತೂ ಇದನ್ನೇ ಸಮರ್ಥಿಸುತ್ತದೆ. ಕರ್ಮವಶದಿಂದ ಜೀವರುಗಳು ಬಂಧನಕ್ಕೆ ಅಂದರೆ ಸಂಸಾರದ ಸುಖ-ದುಃಖಗಳಿಗೆ ಒಳಗಾಗುತ್ತಾರೆ. ಅದೂ ಕೂಡ ಪರಮಾತ್ಮನ ಪಂಚಕೃತ್ಯಗಳಲ್ಲಿ ಒಂದಾದ 'ತಿರೋಧಾನ'ವೆಂಬ ಲೀಲೆಯ ಅಂಗವಾಗಿ ಉಂಟಾಗುತ್ತದೆ. ಹಾಗೆ ಬಂಧನಕ್ಕೊಳಗಾದ ಜೀವನು ಸುಖ-ದುಃಖಗಳನ್ನು ಅನುಭವಿಸುವ ಮೂಲಕ ಕರ್ಮವನ್ನು ಸವೆಸುತ್ತಾನೆ. ಆಗಲೇ ಪರಮಾತ್ಮನು ತನ್ನ 'ಅನುಗ್ರಹ'[೮] ರೂಪದ ಲೀಲೆಯ ಅಂಗವಾಗಿ ಭಕ್ತಿರೂಪದ ಶಕ್ತಿಯನ್ನು ದಯಪಾಲಿಸುತ್ತಾನೆ. ಅದಕ್ಕೆ 'ಶಕ್ತಿಪಾತ'ವೆಂದು ಕರೆಯುತ್ತಾರೆ. ಇದನ್ನು ವಿಸ್ತರಿಸಿ ಸೂಕ್ಷ್ಮಾಗಮವು ಹೇಳುತ್ತದೆ:

ಏವಂರೂಪಃ ಪರಾತ್ಮಾ ಹಿ ಪಶುಪಾಶವಿಮೋಚಕಃ।
ಶಂಭುಃ ಕದಾಚಿನ್ನಿಜಯಾ ಪ್ರಕೃತ್ಯಾ ಲೀಲಯಾ ಸ್ವಯಮ್॥
ಸೃಷ್ಟ್ಯರ್ಥಂ ಸರ್ವತತ್ತ್ವಾನಾಂ ಜಗದುತ್ಪತ್ತಿಕಾರಣಮ್।
ಯೋಗಿನಾಮುಪಕಾರಾಯ ಸ್ವೇಚ್ಛಯಾಽಚಿಂತಯಚ್ಛಿವಃ॥[೯]

'ಇಂತಹ ಪರಮಾತ್ಮನೇ ಪಶುಗಳ (ಜೀವರುಗಳ) ಪಾಶವನ್ನು ಬಿಡಿಸುವವನು. ಆ ಶಂಭುವು ಒಮ್ಮೆ ತನ್ನದೇ ಆದ ಶಕ್ತಿಯ ಲೀಲೆಯ ಸ್ಪಂದನದ ಮೂಲಕ ಜಗತ್ತಿನ ಉತ್ಪತ್ತಿಗೆ ಕಾರಣವಾದ ಎಲ್ಲಾ ತತ್ತ್ವಗಳ ಸೃಷ್ಟಿಗೋಸ್ಕರ, ಯೋಗಿಗಳ ಉಪಕಾರಕ್ಕಾಗಿ ಸ್ವತಃ ತಾನು ಧ್ಯಾನಿಸಿದನು.' ಇದರಿಂದ ವೀರಶೈವ ಸಿದ್ಧಾಂತದ ಮೂಲಭೂತ ಸಿದ್ಧಾಂತವಾದ 'ಪರಮಾತ್ಮನು ಶಕ್ತಿವಿಶಿಷ್ಟನು' ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಇದರಿಂದ ಪರಮಾತ್ಮನ ಶಕ್ತಿಯ ಲೀಲೆಯಿಂದ ಹೊಮ್ಮಿದ ಸೃಷ್ಟಿಯು ಜೀವಾತ್ಮರುಗಳ ಮೋಕ್ಷಕ್ಕಾಗಿಯೇ ಎಂಬ ಅಂಶವೂ ಸಿದ್ಧವಾಗುತ್ತದೆ.

ಹೀಗೆ ಪತಿತತ್ತ್ವಸ್ವರೂಪನಾದ ಪರಮಾತ್ಮ ಪರಶಿವನ ಸ್ವರೂಪವನ್ನು ಚಂದ್ರಜ್ಞಾನಾಗಮವು ಗುಣವರ್ಣನೆಯ ಮೂಲಕ ಮಾಡದೆ, ಆತನ ಕೃತ್ಯಗಳ, ವಿಶ್ವಲೀಲೆಯ, ವಿಶ್ವವ್ಯಾಪಾರದ ವರ್ಣನೆಯ ಮೂಲಕ ಮಾಡುತ್ತದೆ. ಇದೇ ವರ್ಣನೆಯ ಮೂಲಕವೇ ನಮಗೆ ಪಶು ಮತ್ತು ಪಾಶ ತತ್ತ್ವಗಳ ಸ್ವರೂಪವೂ ಸೂಚಿತವಾಗುತ್ತದೆ.

ಪಶುತತ್ತ್ವ

ಪಶುವೆಂದರೆ ಜೀವ; ಅವನ ಸ್ವರೂಪವನ್ನು ಶೈವಾಗಮಗಳು ಹೀಗೆ ವರ್ಣಿಸುತ್ತವೆ:

---

೭. ಅದೇ, ಕ್ರಿ.ಪಾ. ೧-೧೧.

೮. 'ಜಗಜ್ಜನ್ಮಸ್ಥಿತಿಧ್ವಂಸತಿರೋಭಾವವಿಮುಕ್ತಯಃ। ಕೃತ್ಯ ಸಕಾರಕಫಲಂ ಜ್ಞೇಯಮಸ್ಯೈತದೇವ ಹಿ॥' ಜಗತ್ತಿನ ಜನ್ಮ, ಸ್ಥಿತಿ, ಲಯ, ತಿರೋಧಾನ, ಮುಕ್ತಿ (ಅನುಗ್ರಹ) -ಇವು ಪರಮಾತ್ಮನ ಪಂಚಕೃತ್ಯಗಳು (ಲೀಲೆಗಳು) -ಮೃಗೇಂದ್ರಾಗಮ, ೨.೩.

೯. ಸೂಕ್ಷ್ಮಾಗಮ, ಕ್ರಿ.ಪಾ., ೧.೧೮-೧೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನ ವ್ಯಾಪಕೋ ನ ಕ್ಷಣಿಕೋ ನೈಕೋ ನಾಪಿ ಜಡಾತ್ಮಕಃ।
ನಾಕರ್ತಾ ಭಿನ್ನಚಿದ್ಯೋಗೀ ಪಾಶಾಂತೇ ಶಿವತಾಶ್ರುತೇಃ॥[೧೦]

ದೇಹಾನ್ಯೋಽನಶ್ವರೋಽವ್ಯಾಪೀ ವಿಭಿನ್ನಃ ಸಮಲೋ ಜಡಃ।
ಸ್ವಕರ್ಮಫಲಭುಕ್ಕರ್ತಾ ಕಿಂಚಿಜ್ಞಃ ಸೇಶ್ವರಃ ಪಶುಃ॥[೧೧]

'ಪಶುವೆಂದರೆ ಅವ್ಯಾಪಕ, ಅಕ್ಷಣಿಕ, ಅನೇಕ, ಚೈತನ್ಯಾತ್ಮಕ, ಕರ್ತೃ, ಭಿನ್ನನು, ಚಿಚ್ಛಕ್ತಿಯುಕ್ತನು, ಪಾಶದಿಂದ ಮುಕ್ತನಾದಾಗ ಯೋಗಿಯಾಗಿ ಶಿವತ್ವವನ್ನು ಹೊಂದುವವನು. ಅವನು ದೇಹಕ್ಕಿಂತ ಬೇರೆಯಾದವನು, ಅನಶ್ವರನು, ಅವ್ಯಾಪಿಯು, ವಿಭಿನ್ನನು, ಮಲತ್ರಯಯುಕ್ತನು, ಚೈತನ್ಯಾತ್ಮಕನು, ತನ್ನ ಕರ್ಮಫಲವನ್ನು ಅನುಭವಿಸುವವನು. ಕಿಂಚಿಜ್ಞನು, ಈಶ್ವರನ ಅಂಶವಾದವನು.' ವಿಶೇಷವಾಗಿ ಚಂದ್ರಜ್ಞಾನಾಗಮವು ಬ್ರಹ್ಮಾದಿ-ಸ್ಥಾವರಾಂತವಾಗಿ ಎಲ್ಲವೂ ಪಶು ಎಂದು ಹೇಳಿ ಪಶುತತ್ತ್ವದ ವ್ಯಾಪ್ತಿಯನ್ನು ಗುರುತಿಸಿದೆ. ಮುಂದೆ ಬುದ್ಧಿ ಮುಂತಾದ ೨೪ ತತ್ತ್ವಗಳ ವ್ಯಾಪಾರವನ್ನು ಹೇಳುವ ಮೂಲಕ ಹೇಗೆ ಪಶುಗಳು ಪಾಶಬದ್ಧವಾಗುತ್ತವೆಯೆಂಬುದನ್ನು ತಿಳಿಸುತ್ತದೆ:

ಅಧ್ಯವಸ್ಯತಿ ವೈ ಬುದ್ಧಿರಹಂಕಾರೋಽಭಿಮನ್ಯತೇ।
ಚಿತ್ತಂ ಚೇತಯತೇ ಚಾಪಿ ಮನಃ ಸಂಕಲ್ಪಯತ್ಯಪಿ॥
ಶ್ರೋತ್ರಾದೀನಿ ಚ ಗೃಹ್ಣಂತಿ ಶಬ್ದಾದೀನ್ ವಿಷಯಾನ್ಪೃಥಕ್।
ಸ್ವಾನೇವ ನಾನ್ಯಾನ್ ದೇವಸ್ಯ ದಿವ್ಯೇನಾಜ್ಞಾಬಲೇನ ವೈ॥
ವಾಗಾದೀನ್ಯಪಿ ಯಾನ್ಯಾಸಂಸ್ತಾನಿ ಕರ್ಮೇಂದ್ರಿಯಾಣಿ ಚ।
ಯಥಾ ಸ್ವಂ ಕರ್ಮ ಕುರ್ವಂತಿ ನಾನ್ಯತ್ಕಿಂಚಿಚ್ಛಿವಾಜ್ಞಯಾ॥
ಶಬ್ದಾದಯೋಽಪಿ ಗೃಹ್ಯಂತೇ ಕ್ರಿಯಂತೇ ವಚನಾದಯಃ।
ಅವಿಲಂಘ್ಯಾ ಹಿ ಸರ್ವೇಷಾಮಾಜ್ಞಾ ಶಂಭೋರ್ಗರೀಯಸೀ॥[೧೨]

'ಬುದ್ಧಿಯು ನಿಶ್ಚಯ ಮಾಡುತ್ತದೆ. ಅಹಂಕಾರವು ತಾನು-ತನ್ನದು ಎಂದು ಅಭಿಮಾನಪಡುತ್ತದೆ. ಚಿತ್ತವು ಚೇತನವನ್ನು ಕೊಡುತ್ತದೆ. ಮನಸ್ಸು ಸಂಕಲ್ಪವನ್ನೂ ವಿಕಲ್ಪವನ್ನೂ ಉಂಟುಮಾಡುತ್ತದೆ. ಶ್ರೋತ್ರ ಮುಂತಾದವು ಬೇರೆ ಬೇರೆ ವಿಷಯಗಳನ್ನು ಗ್ರಹಿಸುತ್ತವೆ. ವಾಕ್ ಮುಂತಾದ ಕರ್ಮೇಂದ್ರಿಯಗಳು ತಮ್ಮ ತಮ್ಮ ಕಾರ್ಯ ಮಾಡುತ್ತವೆ. ಶಬ್ದ ಮುಂತಾದವು ಶ್ರೋತ್ರ ಮುಂತಾದ ಜ್ಞಾನೇಂದ್ರಿಯಗಳ ಮೂಲಕ ಗ್ರಹಿಸಲ್ಪಡುತ್ತವೆ. ವಚನ ಮುಂತಾದವುಗಳನ್ನು ವಾಕ್ ಮುಂತಾದ ಕರ್ಮೇಂದ್ರಿಯಗಳು ಮಾಡುತ್ತವೆ.'

---

೧೦. ಮೃಗೇಂದ್ರಾಗಮ, ೬.೭.

೧೧. ಪರಾಖ್ಯಾಗಮ, ಪಶುಪಟಲ, ೧೫.

೧೨. ಚಂದ್ರಜ್ಞಾನಾಗಮ, ಕ್ರಿ.ಪಾ., ೧.೧೮-೨೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಬುದ್ಧಿ ಮುಂತಾದವುಗಳ ವ್ಯಾಪಾರಗಳ ಮೂಲಕ ಪಶುಶಬ್ದವಾಚ್ಯರಾದ ಜೀವರುಗಳು ಸಂಸಾರದಲ್ಲಿ ತೊಡಗಿ ಸುಖ-ದುಃಖರೂಪದ ಅನುಭವಗಳನ್ನು ಹೊಂದುತ್ತಾರೆ.

ಪಶುವೈವಿಧ್ಯ:

ಚಂದ್ರಜ್ಞಾನಾಗಮವು ಮೊದಲು ಬ್ರಹ್ಮಾದಿ-ಸ್ಥಾವರಾಂತ ಪಶುಗಳು ಎಂದು ಹೇಳಿ ಅನಂತರ ಪಶುಗಳ ವೈವಿಧ್ಯವನ್ನೂ ಹೇಳಿದೆ. ಅವುಗಳ ವರ್ಗೀಕರಣವನ್ನು ಇಲ್ಲಿ ಗಣಿಸಬಹುದು. ಮೊದಲನೆಯ ವರ್ಗವೆಂದರೆ ಬ್ರಹ್ಮ, ವಿಷ್ಣು ಮತ್ತು ಹರ; ಅವರ ಕರ್ತವ್ಯಗಳೆಂದರೆ:

ಸೃಜತ್ಯಶೇಷಮೀಶಸ್ಯ ಶಾಸನಾಚ್ಚತುರಾನನಃ।
ತಿಸೃಭಿರ್ಮೂರ್ತಿಭಿಃ ಸ್ವಾಭಿಃ ಪಾತಿ ಚಾಂತೇ ನಿಹಂತಿ ಚ॥
ವಿಷ್ಣುಃ ಪಾಲಯತೇ ವಿಶ್ವಂ ವಿಶ್ವೇಶ್ವರನಿಯೋಗತಃ।
ಸೃಜತೇ ಗ್ರಸತೇ ಚಾಪಿ ಸ್ವಕಾಭಿಸ್ತನುಭಿಸ್ತದಾ॥
ಹರತ್ಯಂತೇ ಜಗತ್ ಸರ್ವಂ ಹರಸ್ತಸ್ಯೈವ ಶಾಸನಾತ್।
ಸೃಜತ್ಯಪಿ ಚ ವಿಶ್ವಾತ್ಮಾ ತ್ರಿಧಾ ಭಿನ್ನಸ್ತು ರಕ್ಷತಿ॥[೧೩]

'ಚತುರಾನನ ಬ್ರಹ್ಮನು ತನ್ನ ಮೂರ್ತಿಗಳಿಂದ ಎಲ್ಲವನ್ನೂ ಪರಮಾತ್ಮನ ಆಜ್ಞೆಯಂತೆ ಸೃಷ್ಟಿಸುವನು, ರಕ್ಷಿಸುವನು ಮತ್ತು ಕೊನೆಯಲ್ಲಿ ಸಂಹರಿಸುವನು. ವಿಶ್ವೇಶ್ವರನ ಆಜ್ಞೆಯಂತೆ ವಿಷ್ಣುವು ತನ್ನ ಮೂರು ಶರೀರಗಳಿಂದ ಪಾಲಿಸುವನು, ಸೃಷ್ಟಿಸುವನು ಮತ್ತು ನುಂಗುವನು. ಹಾಗೆಯೇ ಅವನ ಆಜ್ಞೆಯಂತೆಯೇ ಮೂರು ರೂಪದಲ್ಲಿ ಭಿನ್ನನಾಗಿ ಸರ್ವಜಗತ್ತನ್ನು ಸಂಹರಿಸುವನು ಮತ್ತು ಸೃಷ್ಟಿಸುವನು ಹಾಗೂ ರಕ್ಷಿಸುವನು.' ಇಲ್ಲಿ ಬ್ರಹ್ಮ, ವಿಷ್ಣು ಮತ್ತು ಹರರು ಒಬ್ಬೊಬ್ಬರೂ ಮೂರು ರೂಪಗಳನ್ನು ಧರಿಸಿ ಸೃಷ್ಟಿ-ಸ್ಥಿತಿ-ಲಯರೂಪ ವೈಶ್ವಿಕ ಕಾರ್ಯಗಳನ್ನು ಪರಮಾತ್ಮನ ಆಜ್ಞೆಯಂತೆ ಮಾಡುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ವೈಚಿತ್ರ್ಯವನ್ನು ಕಾಳಿದಾಸನು ತನ್ನ ಒಂದು ವರ್ಣನೆಯಲ್ಲಿ ನಿರೂಪಿಸಿದ್ದಾನೆ:

ಏಕೈವ ಮೂರ್ತಿರ್ಬಿಭಿದೇ ತ್ರಿಧಾ ಸಾ ಸಾಮಾನ್ಯಮೇಷಾಂ ಪ್ರಥಮಾವರತ್ವಮ್।
ವಿಷ್ಣೋರ್ಹರಸ್ತಸ್ಯ ಹರಿಃ ಕದಾಚಿದ್ ವೇಧಾಸ್ತಯೋಸ್ತಾವಪಿ ಧಾತುರಾದ್ಯೌ॥[೧೪]

'ಒಂದೇ ಮೂರ್ತಿ; ಅದೇ ಮೂರಾಗಿ ಭಿನ್ನವಾಯಿತು. ಅವುಗಳಿಗೆ ಮೊದಲಿನದು-ಅನಂತರದ್ದು ಎಂಬುದು ಸಾಮಾನ್ಯ. ವಿಷ್ಣುವಿಗೆ ಹರನು, ಹರನಿಗೆ ಹರಿಯು, ಒಮ್ಮೊಮ್ಮೆ ಬ್ರಹ್ಮನು ಅವರಿಬ್ಬರಿಗೆ ಮತ್ತು ಅವರಿಬ್ಬರು ಅವನಿಗೆ ಮೊದಲಿಗರು.'

---

೧೩. ಅದೇ, ಕ್ರಿ.ಪಾ. ೧.೩೨-೩೪.

೧೪. ಕುಮಾರಸಂಭವ, ೭.೪೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿಕ್ಪಾಲಕರು ಇನ್ನೊಂದು ವರ್ಗ. ಅವರಲ್ಲಿ ದೇವೇಂದ್ರನು ದೇವತೆಗಳನ್ನು ರಕ್ಷಿಸುವನು, ರಾಕ್ಷಸರನ್ನು ಸಂಹರಿಸುವನು, ಮೂರು ಲೋಕಗಳನ್ನು ರಕ್ಷಿಸುವನು. ಅವನು ಇದೆಲ್ಲವನ್ನೂ ಪರಶಿವನ ಮೀರಲಾಗದ ಆಜ್ಞೆಯಂತೆ ಮಾಡುವನು. ಯಮನು (ಧರ್ಮೇಶನು) ಅಧಾರ್ಮಿಕರಲ್ಲಿ ಜೀವಂತವಿರುವವರಿಗೆ ರೋಗಗಳಿಂದ ಸತ್ತವರಿಗೆ ಯಾತನೆಗಳಿಂದ ಪೀಡಿಸುತ್ತಾನೆ. ಅದೂ ಕೂಡ ಶಿವನ ಆಜ್ಞೆಯಂತೆ. ನಿರ್ಋತಿಯು ಶಿವನ ಆಜ್ಞೆಯಂತೆ ಧರ್ಮವಿಧಿಗಳನ್ನು ಬಿಟ್ಟವರಿಗೆ ಕರ್ಮಫಲಗಳನ್ನು ತಡೆಹಿಡಿಯುತ್ತಾನೆ ಮತ್ತು ರಾಕ್ಷಸರ ಅಧಿಪತಿತ್ವವನ್ನು ವಹಿಸುತ್ತಾನೆ. ಪರಮೇಶ್ವರನ ಶಾಸನದಂತೆ ವರುಣನು ನೀರಿನ ಅಧಿಪತಿತ್ವವನ್ನು ವಹಿಸುವನು ಮತ್ತು ಬಂಧನಕ್ಕೆ ಅರ್ಹರಾದವರನ್ನು ಪಾಶಗಳಿಂದ ಬಂಧಿಸುವನು. ಯಕ್ಷರ ಒಡೆಯನಾದ ಕುಬೇರನು ಪರಮಾತ್ಮನ ಆಜ್ಞೆಯಂತೆ ನಿತ್ಯವೂ ಧನವನ್ನು ದಾನ ಮಾಡುತ್ತಾನೆ, ಅದೂ ಎಲ್ಲ ಜೀವಿಗಳಿಗೆ ಅವರ ಪುಣ್ಯಕ್ಕೆ ಅನುಗುಣವಾಗಿ. ಶಿವನ ಶಾಸನದಂತೆಯೇ ಈಶಾನನು ಸಂಪತ್ತನ್ನು ಸೃಷ್ಟಿಸುವನು, ಬುದ್ಧಿವಂತರಿಗೆ ಜ್ಞಾನವನ್ನು ನೀಡುವನು ಮತ್ತು ಅಸಾಧು ಜನರನ್ನು ನಿಗ್ರಹಿಸುವನು. ಶಿವಾಜ್ಞೆಯಂತೆಯೇ ಶೇಷನು ಭೂಮಿಯ ಭಾರವನ್ನು ಹೊರುವನು.[೧೫]

ಕಾಲ ಮುಂತಾದವರು ಸೇರಿ ಒಂದು ವರ್ಗ. ಅವರೆಂದರೆ: ಕಾಲ, ಭಾನು, ಸೋಮ, ಆದಿತ್ಯರು, ವಸುಗಳು, ರುದ್ರರು, ಅಶ್ವಿನೀದೇವತೆಗಳು, ಮರುತರು, ಆಕಾಶ ಸಂಚಾರಿಗಳು, ಋಷಿಗಳು, ಸಿದ್ಧರು, ಸರ್ಪಗಳು, ಮನುಷ್ಯರು, ಮೃಗಗಳು. ಶಿವನ ಆಜ್ಞೆಯಂತೆ ಕಾಲನು ಎಲ್ಲವನ್ನೂ ಮಾಡುತ್ತಾನೆ. ಮೇಲೆ ಹೇಳಿದ ಬ್ರಹ್ಮ, ವಿಷ್ಣು, ರುದ್ರರ ಅಂಶಗಳಿಂದ ಕೂಡಿದ ಸೂರ್ಯ(ಭಾನು) ದೇವನು ಪರಶಿವನ ಆಜ್ಞೆಯಂತೆ ಇಡೀ ಪ್ರಪಂಚಕ್ಕೆ ಬೆಳಕು ಮತ್ತು ಮಳೆಗಳನ್ನು ದಯಪಾಲಿಸುತ್ತಾನೆ. ಶಿವನ ಆಜ್ಞೆಯಂತೆಯೇ ಚಂದ್ರದೇವನು ಎಲ್ಲಾ ಔಷಧಗಳಿಗೆ ಚೇತನವನ್ನು ನೀಡುತ್ತಾನೆ; ದೇವತೆಗಳು ಸೋಮರಸ ರೂಪದಲ್ಲಿ ಅವನನ್ನು ಆಸ್ವಾದಿಸುತ್ತಾರೆ; ಅವನು ಎಲ್ಲಾ ಪ್ರಾಣಿಗಳಿಗೂ ಆನಂದವನ್ನು ನೀಡುತ್ತಾನೆ. ಇಂದ್ರ, ಧಾತೃ, ಭಗ, ತ್ವಷ್ಟೃ, ಮಿತ್ರ, ವರುಣ, ಅರ್ಯಮನ್, ವಿವಸ್ವಾನ್, ಸವಿತೃ, ಪೂಷನ್, ಅಂಶುಮಾನ್ ಮತ್ತು ವಿಷ್ಣು ಎಂಬ ೧೨ ಆದಿತ್ಯರು, ಧರ, ಧ್ರುವ, ಸೋಮ, ವಿಷ್ಣು, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ (ಮಹಾಭಾರತದ ಪ್ರಕಾರ) ಅಥವಾ ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸ್ತು ಮತ್ತು ವಿಭಾವಸು (ಭಾಗವತದ ಪ್ರಕಾರ) ಎಂಬ ೮ ವಸುಗಳು, ಅಜ, ಏಕಪಾತ್, ಅಹಿರ್ಬುದ್ಧ್ಯ, ಪಿನಾಕಿನ್, ಅಪರಾಜಿತ. ತ್ರ್ಯಂಬಕ, ಮಹೇಶ್ವರ, ವೃಷಾಕಪಿ, ಶಂಭು, ಹರಣ ಮತ್ತು ಈಶ್ವರ ಎಂಬ ೧೧ ರುದ್ರರು, ಇಬ್ಬರು ಅಶ್ವಿನೀ ದೇವತೆಗಳು, ಆವಹ, ಪ್ರವಹ, ಮುಂತಾದ ೭ ವಾತಸ್ಕಂಧಗಳಿಂದ ಪ್ರತಿಯೊಂದರಿಂದ ಏಳೇಳರಂತೆ ಒಟ್ಟು ೪೯

---

೧೫. ಚಂದ್ರಜ್ಞಾನಾಗಮ, ಕ್ರಿ.ಪಾ., ೧.೨೬-೩೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮರುತರು, ಆಕಾಶಚಾರಿಗಳು, ಋಷಿಗಳು, ಸಿದ್ಧರು, ಸರ್ಪಗಳು, ಮನುಷ್ಯರು ಮತ್ತು ಮೃಗಗಳು ಇವರೆಲ್ಲಾ ಶಿವನ ಆಜ್ಞೆಯಂತೆ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.[೧೬]

ಇನ್ನೊಂದು ವರ್ಗ ಇನ್ನೂ ದೊಡ್ಡದು. ಅದೆಂದರೆ ಇವುಗಳ ಸಮುದಾಯ: ಪಕ್ಷಿಗಳು, ಪಶುಗಳು, ಕೀಟಗಳು, ಸ್ಥಾವರಗಳು, ನದಿಗಳು, ಸಮುದ್ರಗಳು, ಗಿರಿಗಳು, ಅರಣ್ಯಗಳು, ಸರೋವರಗಳು; ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ ಮತ್ತು ಜ್ಯೋತಿಷ ಎಂಬ ೬ ಅಂಗಗಳೊಂದಿಗೆ ನಾಲ್ಕು ವೇದಗಳು, ಶಾಸ್ತ್ರಗಳು, ಮಂತ್ರಗಳು, ಸೋಮಯಾಗ ಮುಂತಾದವು; ಕಾಲಾಗ್ನಿಯಿಂದ ಹಿಡಿದು ಅನುತ್ತರ ಶಿವನವರೆಗೆ ೨೨೪ ಭುವನಗಳು ಮತ್ತು ಅವುಗಳ ಆವರಣಗಳು; ವರ್ತಮಾನ, ಭೂತ, ಭವಿಷ್ಯತ್ಕಾಲಗಳಿಗೆ ಸೇರಿದ ಪದಾರ್ಥಗಳು; ದಿಕ್ಕುಗಳು, ವಿದಿಕ್ಕುಗಳು ಮತ್ತು ಕಲಾ ಮುಂತಾದ ಕಾಲಭೇದಗಳು.[೧೭]

ಇವೆಲ್ಲವುಗಳನ್ನೂ ಚಂದ್ರಜ್ಞಾನಾಗಮವು ಪಶುಗಳ ಸಮುದಾಯವೆಂದು ಪರಿಗಣಿಸುತ್ತದೆ. ಇವುಗಳಲ್ಲಿ ಸ್ಥಾವರಗಳಿಂದ ಹಿಡಿದು ಸರೋವರಗಳವರೆಗೆ ಅಚರ ಜಗತ್ತಿನ ಸಮುದಾಯ. ಅವುಗಳನ್ನೂ ಜೀವರುಗಳ ಮಧ್ಯೆ ಹೆಸರಿಸಿರುವುದಕ್ಕೆ ಕಾರಣ ಅವೂ ಕೂಡ ಚೈತನ್ಯವುಳ್ಳವುಗಳೇ ಎಂಬುದಿರಬೇಕು. ಅವುಗಳ ಚೈತನ್ಯ ವ್ಯಕ್ತವಲ್ಲ, ಗೂಢ. ವೇದ ಮುಂತಾದವುಗಳನ್ನು ಈ ಸಮುದಾಯಕ್ಕೆ ಸೇರಿಸಿರುವುದಕ್ಕೆ ಕಾರಣ ಬಹುಶಃ ಅವೆಲ್ಲವೂ ಪರಮಾತ್ಮನಾದ ಪತಿಯ ನಿಯಂತ್ರಣಕ್ಕೆ ಒಳಪಟ್ಟವುಗಳು ಎಂದಿರಬೇಕು. ಬೇರೆ ಆಗಮಗಳಲ್ಲಿ ಜೀವಗಳ (ಪಶುಗಳ) ಬೇರೊಂದು ರೀತಿಯ ವರ್ಗೀಕರಣವನ್ನು ಕಾಣಬಹುದು. ಉದಾಹರಣೆಗೆ ಪೌಷ್ಕರಾಗಮದಲ್ಲಿ ಪಶುಗಳು ಸಕಲ, ಪ್ರಲಯಾಕಲ ಮತ್ತು ವಿಜ್ಞಾನಾಕಲ ಎಂದು ಮೂರು ವಿಧ. ಮಲದಿಂದ ಬಂಧಿಸಲ್ಪಟ್ಟ ಚಿಚ್ಛಕ್ತಿಯುಳ್ಳವರಾಗಿ, ಕಲಾದಿ ಪಂಚಕಂಚುಕಯುಕ್ತರು ಸಕಲರು. ಕರ್ಮದ ಪರಿಪಾಕದಿಂದ ಕಲಾದಿ ಕಂಚುಕಗಳಿಲ್ಲದವರಾದರೂ ಭೋಗಕ್ಕಾಗಿ ಕಲಾದಿಗಳ ಸಂಬಂಧವನ್ನು ಸ್ವೀಕರಿಸಿದವರು ಪ್ರಲಯಾಕಲರು. ವಿಜ್ಞಾನಾದಿಗಳಿಂದ ಎಲ್ಲಾ ಕರ್ಮಗಳನ್ನೂ ಕಲೆಗಳನ್ನೂ ಬಿಟ್ಟು ಚಿಚ್ಛಕ್ತಿಯನ್ನು ಮುಸುಕಿದ ಮಲಮಾತ್ರದಿಂದ ಯುಕ್ತರಾದವರು ವಿಜ್ಞಾನಾಕಲರು.[೧೮]

ಪಾಶತತ್ತ್ವ

ಚಂದ್ರಜ್ಞಾನಾಗಮವು ಆರಂಭದಲ್ಲೇ ಮಲ, ಮಾಯೆ ಮುಂತಾದವುಗಳನ್ನು ಪಾಶಗಳೆಂದು ಕರೆದಿದೆ. ಮಲ, ಮಾಯಾ ಮತ್ತು ಕರ್ಮ ಎಂದು ಪಾಶ ಮೂರು ವಿಧವೆಂಬ ಉಲ್ಲೇಖವು ೧ನೇ ಪಟಲದ ೪೫ನೇ ಶ್ಲೋಕದಲ್ಲಿ ಮತ್ತೆ ಬರುತ್ತದೆ. ಕೆಲವು ಆಚಾರ್ಯರು ಶಿವನ ಪಂಚಕೃತ್ಯಗಳಲ್ಲಿ ಒಂದಾದ ತಿರೋಧಾನವನ್ನು ಪಾಶವೆಂದು ಗ್ರಹಿಸಿ

---

೧೬. ಅದೇ, ಕ್ರಿ.ಪಾ., ೧.೩೫-೩೮.

೧೭. ಅದೇ, ಕ್ರಿ.ಪಾ., ೧.೩೯-೪೧.

೧೮. ಪೌಷ್ಕರಾಗಮ, ಪಶುಪಟಲ, ೩.೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾಶಗಳು ನಾಲ್ಕು ವಿಧವೆಂದು ಹೇಳುತ್ತಾರೆ. ಬೇರೆಯವರು ಮಹಾಮಾಯೆಯನ್ನು ಪಾಶವೆಂದು ಪರಿಗಣಿಸಿ ಪಾಶಗಳನ್ನು ಐದೆಂದು ಹೇಳುತ್ತಾರೆ. ಆದರೆ ಕಾಶ್ಮೀರಶೈವ ಮತ್ತು ವೀರಶೈವಗಳಲ್ಲಿ ಈ ಪಾಶಗಳ ಸಂಖ್ಯೆ ಮೂರಾಗಿಯೇ ಉಳಿದುಕೊಂಡಿದೆ. ಇದನ್ನು ಚಂದ್ರಜ್ಞಾನಾಗಮವು ಈ ಪರಂಪರೆಗೆ ನೀಡಿದೆ. ಆದರೆ ಬೇರೆ ಆಗಮಗಳಲ್ಲಿ ಹೇಳಿರುವಂತೆ ಪಾಶಗಳೆಂದರೆ ಆಣವಮಲ, ತಿರೋಧಾಯಕ ಶಕ್ತಿ, ಬಿಂದು, ಮಾಯಾ ಮತ್ತು ಕರ್ಮ ಎಂಬ ಐದು:

ಆತ್ಮಾ ಮಲಾವೃತಃ ಸರ್ವಜ್ಞತ್ವೇ ಕಿಂಚಿಜ್ಞತಾಮತಾ।
ಲಯಾದಿಭೇದಃ ಪ್ರಾಗುಕ್ತೋ ಯದುಪಾಧೌ ಶಿವಸ್ಯ ತು॥
ಸ ಬಿಂದುರಿತಿ ಮಂತವ್ಯಃ ಸೈವ ಕುಂಡಲಿನೀ ಮತಾ।
ಕಿಂಚ ಮಾಯಾದ್ಯುಪಾದಾನಂ ದೇಹೇಂದ್ರಿಯಕರಂ ನೃಣಾಮ್॥[೧೯]

"ಆತ್ಮವು ಸರ್ವಜ್ಞತ್ವದಿಂದ ಕಿಂಚಿಜ್ಞತ್ವ ಸ್ಥಿತಿಗೆ ಬರುವುದಕ್ಕೆ ಕಾರಣವೇ ಆಣವಮಲ. ಶಿವನಿಗೆ ಲಯಾದಿಭೇದವುಂಟಾಗುವುದಕ್ಕೆ ಕಾರಣವಾದುದೇ ತಿರೋಧಾಯಕ ಶಕ್ತಿ. ಕುಂಡಲಿನೀ ಎನ್ನುವುದೇ ಬಿಂದು. ಮಾಯಾ ಮತ್ತು ಕರ್ಮಗಳೂ ಪಾಶಗಳು. ಇವುಗಳು ಮನುಷ್ಯರ ದೇಹ, ಇಂದ್ರಿಯಾದಿಗಳಿಗೆ ಕಾರಣ.

ಪಾಶಗಳಿಂದ ಮುಕ್ತಿ ಹೇಗೆ?

ಪಾಶಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ ಚಂದ್ರಜ್ಞಾನಾಗಮವು ಪಾಶಗಳಿಂದ ಮುಕ್ತಿ ಹೇಗೆ ಎಂಬುದನ್ನೂ ವಿಚಾರ ಮಾಡುತ್ತದೆ. ಶಾಂಭವವ್ರತವನ್ನು ಪಾಲಿಸುವುದೇ ಪಾಶಗಳಿಂದ ಮುಕ್ತಿಯನ್ನು ಪಡೆಯಲು ಇರುವ ಏಕೈಕ ಉಪಾಯ. ಅದಕ್ಕೆ ದೀಕ್ಷೆಯೇ ಮೊದಲ ಸೋಪಾನ:

ಅನಂತಜನ್ಮಮರಣಕಾರಣಾತ್ ಪಾಶಸಂಚಯಾತ್।
ಮುಮುಕ್ಷುರಾಚರೇದ್ದೀಕ್ಷಾಂ ಶಾಂಭವೀಂ ಪಾಶಕೃಂತಿನೀಮ್॥[೨೦]

"ಕೊನೆಯಿಲ್ಲದ ಜನನ-ಮರಣಗಳ ಸರಣಿಗೆ ಕಾರಣವಾದ ಪಾಶಸಮುದಾಯದಿಂದ ಮುಕ್ತಿಯನ್ನು ಬಯಸುವವನು ಪಾಶವನ್ನು ಕತ್ತರಿಸುವ ಶಾಂಭವೀ ದೀಕ್ಷೆಯನ್ನು ಸ್ವೀಕರಿಸಬೇಕು." ಶಾಂಭವವ್ರತದ ಲಕ್ಷಣವೆಂದರೆ:

ವೇಧಾಮನುಕ್ರಿಯಾಭಿಖ್ಯದೀಕ್ಷಾತ್ರಿತಯಶೋಭಿತಮ್।
ಷಡಧ್ವಶುದ್ಧಿಕಲಿತಂ ಗುರುಕಾರುಣ್ಯಸಂಭೃತಮ್॥
ಭಸ್ಮರುದ್ರಾಕ್ಷಶ್ರೀಲಿಂಗಧಾರಣಾತ್ಮಕಮುತ್ತಮಮ್॥

---

೧೯. ಅದೇ, ಪಶುಪಟಲ, ೧೨೫; ಬಿಂದುಪಟಲ, ೧೧೧.

೨೦. ಚಂದ್ರಜ್ಞಾನಾಗಮ, ಕ್ರಿ.ಪಾ., ೧.೪೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಂಭವವ್ರತಮೇತದ್ಧಿ ವೇದಶಾಸ್ತ್ರೈಕಚೋದಿತಮ್।
ಇದಂ ಶಿವಪ್ರಸಾದೈಕಕಾರಣಂ ಭವವಾರಣಮ್॥[೨೧]

"ವೇಧಾ, ಮನು (ಮಂತ್ರ) ಮತ್ತು ಕ್ರಿಯಾದೀಕ್ಷೆ ಎಂಬ ಮೂರು ದೀಕ್ಷೆಗಳಿಂದ ಶೋಭಿತವಾದ, (ವರ್ಣ, ಪದ, ಮಂತ್ರ, ಕಲಾ, ತತ್ತ್ವ ಮತ್ತು ಭುವನ ಎಂಬ) ಆರು ಅಧ್ವಗಳಿಂದ ಪವಿತ್ರವಾದ, ಗುರುವಿನ ಕರುಣೆಯಿಂದ ಓತಪ್ರೋತನಾದ ಮತ್ತು ಭಸ್ಮ, ರುದ್ರಾಕ್ಷ ಮತ್ತು ಶ್ರೀಲಿಂಗಗಳನ್ನು ಧರಿಸಿರುವಂತಹ ವೇದಶಾಸ್ತ್ರಗಳಿಂದ ಉಪದೇಶಿಸಲ್ಪಟ್ಟ ಉತ್ತಮವಾದ ಶಾಂಭವವ್ರತವೇ ಪುನರ್ಜನ್ಮವನ್ನು ತಡೆಯುವ ಶಿವನ ಅನುಗ್ರಹಕ್ಕೆ ಏಕಮಾತ್ರ ಕಾರಣ." ವೇಧಾ, ಮನು ಮತ್ತು ಕ್ರಿಯಾದೀಕ್ಷೆಗಳ ಸ್ವರೂಪವು ಕಾರಣಾಗಮದಲ್ಲಿ ವಿಶದವಾಗಿ ಬಂದಿದೆ. ಅವುಗಳ ಸ್ವರೂಪವು ಅಲ್ಲಿ ಹೀಗಿದೆ:

ಹಸ್ತಮಸ್ತಕಸಂಯೋಗಾದ್ ದೃಷ್ಟೇರ್ವೇಧೇತಿ ಕೀರ್ತ್ಯತೇ।
ಗುರುಣೋದೀರಿತಾ ಕರ್ಣೇ ಸಾ ಹಿ ಮಂತ್ರಾತ್ಮಿಕಾ ಭವೇತ್॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಭವೇತ್॥[೨೨]

"ಗುರುವು ತನ್ನ ಅಂಗೈಯನ್ನು ಶಿಷ್ಯನ ತಲೆಯ ಮೇಲಿಡುವ ಮತ್ತು ದೃಷ್ಟಿಯ ಮೂಲಕ ಮಾಡುವ ದೀಕ್ಷೆಯು ವೇಧಾದೀಕ್ಷೆ. ಗುರುವು ಶಿಷ್ಯನ ಕಿವಿಯಲ್ಲಿ ಮಂತ್ರವನ್ನು ಉಪದೇಶಿಸುವುದು ಮಂತ್ರದೀಕ್ಷೆ. ಶಿಷ್ಯನ ಅಂಗೈಯಲ್ಲಿ ಇಷ್ಟಲಿಂಗವನ್ನು ಸ್ಥಾಪಿಸುವ ದೀಕ್ಷೆ ಕ್ರಿಯಾದೀಕ್ಷೆ." ಗುರುವು ಶಿಷ್ಯನ ತಲೆಯ ಮೇಲೆ ತನ್ನ ಅಂಗೈಯನ್ನು ಇರಿಸಿ ದೃಷ್ಟಿಯನ್ನು ಶಿಷ್ಯನ ಮೇಲೆ ಕೇಂದ್ರೀಕರಿಸಿ ಧ್ಯಾನಿಸುತ್ತಾ ಶಿಷ್ಯನಲ್ಲಿ ಶಿವಭಾವವನ್ನು ವಿನಿವೇಶಗೊಳಿಸುವುದು ವೇಧಾದೀಕ್ಷೆ. ಗುರುವು ಶಿಷ್ಯನ ಬಲಗಿವಿಯಲ್ಲಿ ಬೇರೆಯವರಿಗೆ ಕೇಳದಂತೆ ರಹಸ್ಯವಾಗಿ ಶಿವಪಂಚಾಕ್ಷರೀ ಮಂತ್ರವನ್ನು ಉಪದೇಶ ಮಾಡುವುದು ಮಂತ್ರ ಅಥವಾ ಮನುದೀಕ್ಷೆ. ಕಲಶಸ್ಥಾಪನೆ ಮುಂತಾದ ಕ್ರಿಯೆಗಳನ್ನು ಮಾಡಿ ಲಿಂಗಸಂಸ್ಕಾರವನ್ನು ನೆರವೇರಿಸಿ, ಶಿಷ್ಯನ ಅಂಗೈಮೇಲೆ ಅದನ್ನು ಇಷ್ಟಲಿಂಗವನ್ನಾಗಿಸಿ ಧರಿಸುವುದೇ ಕ್ರಿಯಾದೀಕ್ಷೆ. ಈ ಮೂರು ದೀಕ್ಷೆಗಳು ಏಳೇಳು ಪ್ರಕಾರವಾಗಿವೆ.[೨೩]

ಹೀಗೆ ಚಂದ್ರಜ್ಞಾನಾಗಮವು ಪತಿ, ಪಶು, ಪಾಶ ಎಂಬ ಮೂರು ತತ್ತ್ವಗಳ ನಿರೂಪಣೆಯನ್ನು ಕೊಡುತ್ತದೆ. ಇದರಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶಗಳೆಂದರೆ:

೧. ಪತಿಯಾದ ಪರಶಿವನ ಸ್ವರೂಪ, ಮಹಿಮೆ, ಜಗತ್ತಿನ ಸೃಷ್ಟಿ ಮತ್ತು ಅದರ ಶಾಸನಗಳ ವಿಚಾರವೇ ಇಲ್ಲಿ ಪ್ರಧಾನವಾಗಿ ಬಂದಿದೆ. ಪಶುಗಳ ಮತ್ತು ಪಾಶಗಳ ಬಗ್ಗೆ ಬಹಳ ಸಂಕ್ಷಿಪ್ತವಾದ ನಿರೂಪಣೆಯಿದೆ.

---

೨೧. ಅದೇ, ೧.೪೭-೪೮.

೨೨. ಕಾರಣಾಗಮ, ಕ್ರಿ.ಪಾ., ೧.೧೪.

೨೩. ಅದೇ, ೧.೧೫, ೪೨-೧೨೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಪಶುವೆಂದು ಕರೆಯಲ್ಪಡುವ ಜೀವಾತ್ಮನ ಸ್ವರೂಪವನ್ನು ನೇರವಾಗಿ ಹೇಳದೆ, ಬುದ್ಧಿ ಮುಂತಾದ ೨೪ ತತ್ತ್ವಗಳ ವ್ಯಾಪಾರವನ್ನು ಹೇಳುವ ಮೂಲಕ ಪಾಶಗಳಿಂದ ಬಂಧಿಸಲ್ಪಟ್ಟ ಜೀವವೇ ಪಶುವೆಂಬ ಸೂಚನೆಯನ್ನು ನೀಡುತ್ತದೆ.

೩. ಪಶುಗಳ ವರ್ಗೀಕರಣವು ಇಲ್ಲಿ ವಿನೂತನವಾಗಿ ತೋರುತ್ತದೆ. ನೇರವಾಗಿ ಹೇಳದಿದ್ದರೂ ಶಿವನ ಶಾಸನದಂತೆ ವರ್ತಿಸುವ ಬ್ರಹ್ಮಾದಿ-ಸ್ಥಾವರಾಂತ ಎಲ್ಲವೂ ಪಶುಗಳೆಂದು ಹೇಳಿ ಅವುಗಳ ಕಾರ್ಯಾಚರಣೆ, ಶಿವನ ಶಾಸನಪಾಲನೆ ಮತ್ತು ಶಿವನಿಯಂತ್ರಣಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವರ್ಗೀಕರಿಸಿರುವುದನ್ನು ಕಾಣುತ್ತೇವೆ. ಬೇರೆ ಆಗಮಗಳಲ್ಲಿ ಜೀವಗಳ ವರ್ಗೀಕರಣ ಬೇರೊಂದು ರೀತಿಯಲ್ಲಿರುವುದನ್ನು ನೋಡಬಹುದು.

೪. ಪಾಶಗಳ ವಿಷಯದಲ್ಲಿ ಕೂಡ ಮಲ, ಮಾಯಾ ಮತ್ತು ಕರ್ಮಗಳನ್ನು ಮೂರು ವಿಧವಾದ ಪಾಶಗಳೆಂದು ಹೇಳಿರುವುದನ್ನು ಬಿಟ್ಟರೆ ಬೇರಾವ ವಿವರಗಳೂ ಇಲ್ಲ. ಅವುಗಳ ಸ್ವರೂಪವನ್ನು ತಿಳಿಯಲು ಬೇರೆ ಆಗಮಗಳನ್ನು ಅವಲಂಬಿಸಬೇಕು.

೫. ಪಾಶಗಳಿಂದ ಮುಕ್ತಿ ಹೇಗೆ ಎಂಬುದನ್ನು ತಿಳಿಸುತ್ತಾ ಚಂದ್ರಜ್ಞಾನಾಗಮವು ಶಾಂಭವ ವ್ರತದ ವರ್ಣನೆಯನ್ನು ಮಾಡುತ್ತದೆ ಅದೂ ಸೂಚ್ಯವಾಗಿದೆ. ವಿವರಗಳನ್ನು ಬೇರೆ ಆಗಮಗಳಿಂದಲೇ ತೆಗೆದುಕೊಳ್ಳಬೇಕಾಗುತ್ತದೆ.

೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಗುರು-ಸ್ವರೂಪ ಮತ್ತು ಮಹತ್ವ

-ವಿದ್ವಾನ್ ಜೆ.ವಿ. ಶಿವಸ್ವಾಮಿ

ಹಿಂದೂ ಸಂಪ್ರದಾಯದಲ್ಲಿ ಗುರುವಿಗೆ ಮಹೋನ್ನತ ಸ್ಥಾನವಿದೆ. ವೀರಶೈವ ಸಂಪ್ರದಾಯವೂ ಇದಕ್ಕೆ ಹೊರತಲ್ಲ. ವೀರಶೈವ ಸಂಪ್ರದಾಯಕ್ಕೆ ಮೂಲ ಆಕರಗಳಾದ ಶೈವಾಗಮಗಳ ಉತ್ತರಭಾಗಗಳಲ್ಲಿ ಷಟ್‌ಸ್ಥಲಗಳ ನಿರೂಪಣೆಯ ಅಂತರ್ಗತವಾಗಿ ವೀರಶೈವ ದೀಕ್ಷೆ, ಅಷ್ಟಾವರಣ, ಪಂಚಾಚಾರಗಳ ಬಗ್ಗೆ ವಿವರಣೆಗಳು ದೊರೆಯುತ್ತವೆ. ವಿಶೇಷವಾಗಿ ಚಂದ್ರಜ್ಞಾನಾಗಮದ ಉತ್ತರಭಾಗದಲ್ಲಿ ಅಷ್ಟಾವರಣ ಮತ್ತು ಪಂಚಾಚಾರಗಳ ವಿವರಣೆ ದೊರೆಯುತ್ತದೆ. ಹಾಗೆ ದೊರೆಯುವ ಅಷ್ಟಾವರಣಗಳ ಪಟ್ಟಿಯಲ್ಲಿ ಮೊದಲನೆಯ ಸ್ಥಾನ ಗುರುವಿನದು; ಅನಂತರ ಲಿಂಗ ಮತ್ತು ಜಂಗಮರೆಂಬ ಇತರ ಪೂಜ್ಯ ಆವರಣಗಳ ಉಲ್ಲೇಖ ಬರುತ್ತದೆ. ವೀರಶೈವ ಆಚಾರ ಮತ್ತು ತತ್ತ್ವವಿಚಾರಗಳೆರಡಕ್ಕೂ ಶ್ರೀಗುರುವೇ ಮಾರ್ಗದರ್ಶಕನಾಗಿದ್ದಾನೆ. ಗುರುವಿನ ಅನುಗ್ರಹದಿಂದಲೇ ದೀಕ್ಷೆ; ಭೋಗ ಮುಕ್ತಿ. ದೀಕ್ಷೆಯ ಮೂಲಕ ಲಿಂಗತ್ರಯ (ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗ) ಪ್ರಾಪ್ತಿ; ಅದರ ಅನಂತರವೇ ಇತರ ಆವರಣಗಳ ಸಂಪನ್ನತೆ. ಶಿಷ್ಯನ ಶ್ರದ್ಧೆ-ವಿಶ್ವಾಸಗಳನ್ನು, ಆಚಾರ-ವಿಚಾರಗಳನ್ನು ಗಟ್ಟಿಗೊಳಿಸಿ ರಕ್ಷಿಸುವವನು ಗುರುವು. ಹರಮುನಿದರೂ ಗುರುಕಾಯ್ವನೆಂಬ ಮಾತು ವೀರಶೈವರಲ್ಲಿ ಬಲವಾದ ನಂಬಿಕೆ. ಚಂದ್ರಜ್ಞಾನಾಗಮವು ಇದನ್ನು ಸ್ಪಷ್ಟವಾಗಿ ಹೇಳುತ್ತದೆ:

> ಶಿವೇ ರುಷ್ಟೇ ಗುರುಸ್ತ್ರಾತಾ ನ ರುಷ್ಟೇ ನಿಜಸದ್ಗುರೌ।
> ತ್ರಾತಾ ಶಿವಸ್ತದೇಸ್ಮಾದ್ ಗುರುಪೂಜಾರತೋ ಭವೇತ್॥
> ಯಃ ಸ್ವಸ್ಯ ಗುರುಪೂಜಾಂ ತು ತ್ಯಕ್ತ್ವಾ ಶಿವಪದಂ ಯಜೇತ್।
> ಪರಾಙ್ಮುಖಃ ಶಿವಸ್ತಸ್ಯ ನರಕಂ ಸಂಪ್ರಯಚ್ಛತಿ॥[೧]

'ಶಿವನು ಸಿಟ್ಟಾದರೆ ಗುರುವು ರಕ್ಷಿಸುವನು, ಆದರೆ ತನ್ನ ಸದ್ಗುರುವು ಕೋಪಗೊಂಡರೆ ಶಿವನೂ ಕೂಡ ರಕ್ಷಿಸಲಾರ. ಆದ್ದರಿಂದ ಗುರುಪೂಜೆಯಲ್ಲಿ ನಿರತನಾಗಬೇಕು. ಯಾರು ಗುರುಪೂಜೆಯನ್ನು ಬಿಟ್ಟು ಶಿವನನ್ನು ಪೂಜಿಸುವನೋ ಅವನಿಂದ ಶಿವನೂ ಕೂಡ ಮುಖ

---

೧. ಚಂದ್ರಜ್ಞಾನಾಗಮ, ಕ್ರಿಯಾಪಾದ, ೨.೮೨-೮೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿರುಗಿಸುತ್ತಾನೆ, ಅಲ್ಲದೆ ಅವನನ್ನು ನರಕಕ್ಕೆ ಕಳುಹಿಸುತ್ತಾನೆ.' ಇದರಿಂದ ಗುರುವಿನ ಮಹಿಮೆ ವ್ಯಕ್ತವಾಗುತ್ತದೆ. ಅದನ್ನೇ ಪ್ರಸ್ತುತ ಆಗಮವು ಬಿಂಬಿಸುತ್ತದೆ.

ಗುರುವಿನ ಮಹಿಮೆ:

> ಮೋಕ್ಷಸ್ಯ ದೀಕ್ಷಾಸಂಪ್ರಾಪ್ತ್ಯೈ ಗುರುಃ ಸ್ಯಾನ್ಮೂಲಕಾರಣಮ್।
> ನ ವಿನಾ ಗುರುಣಾ ಸಿದ್ಧ್ಯೈ ಸಾಧನಾನಿ ಭವಂತ್ಯಲಮ್॥[೨]

'ಮೋಕ್ಷಕ್ಕೆ ಮತ್ತು ದೀಕ್ಷೆಯನ್ನು ಪಡೆಯಲು ಗುರುವೇ ಮೂಲಕಾರಣ. ಗುರುವಿಲ್ಲದೆ ಯಾವ ಸಾಧನೆಗಳೂ ಸಿದ್ಧಿಸಲು ಶಕ್ತವಾಗುವುದಿಲ್ಲ.' ಹೀಗೆ ಮೋಕ್ಷಕ್ಕೆ ದಾರಿ ತೋರುವವನು ಗುರುವು. ಮೋಕ್ಷಕ್ಕೆ ದಾರಿಯೆಂದರೆ ಷಟ್‌ಸ್ಥಲ ಮಾರ್ಗ. ಅದಕ್ಕೆ ಪ್ರವೇಶವಾಗಬೇಕಾದರೆ ದೀಕ್ಷೆಯೆಂಬುದು ಬೇಕೇ ಬೇಕು. ಆ ದೀಕ್ಷೆಯನ್ನು ಮಾಡುವವನು ಗುರುವೇ. ಅದು ಅವನ ಅನುಗ್ರಹದ ಸಂಕೇತ. ಆದ್ದರಿಂದಲೇ ಆಗಮವು 'ದೀಕ್ಷಾಸಂಪ್ರಾಪ್ತ್ಯೈ ಗುರುಃ ಸ್ಯಾನ್‌ಮೂಲಕಾರಣಮ್' ಎಂದು ಹೇಳಿರುವುದು. ಇಲ್ಲಿ ಸಾಧನಗಳೆಂದರೆ ಅಷ್ಟಾವರಣಗಳು. ಇವುಗಳ ಸಿದ್ಧಿಗೂ ಕೂಡ ಗುರುವಿನ ಅನುಗ್ರಹವೇ ಮೂಲ ಎಂಬುದು ಇದರಿಂದ ಸಿದ್ಧ. ಗುರು ಮತ್ತು ಶಿವ ಇಬ್ಬರೂ ವಿದ್ಯಾಸ್ವರೂಪರಾದ್ದರಿಂದ ಅವರಿಬ್ಬರಲ್ಲಿ ಭೇದವಿಲ್ಲ. ಅವರಿಬ್ಬರೂ ಪರಸ್ಪರ ಒಂದೇ.

> ಯೋ ಗುರುಃ ಸ ಶಿವಃ ಪ್ರೋಕ್ತೋ ಯಃ ಶಿವಃ ಸ ಗುರುಃ ಸ್ಮೃತಃ।
> ಗುರುರ್ವಾ ಶಿವ ಏವಾಥ ವಿದ್ಯಾಕಾರೇಣ ಸಂಸ್ಥಿತಃ॥[೩]

'ಯಾರು ಗುರುವೋ ಅವನೇ ಶಿವನು, ಶಿವನೇ ಗುರು. ಗುರುವಾಗಲಿ ಶಿವನಾಗಲಿ ವಿದ್ಯೆಯ ಸ್ವರೂಪನಾಗಿ ನಿಂತಿದ್ದಾನೆ' -ಎಂಬ ಮಾತು ಗುರು-ಶಿವ ಇವರಲ್ಲಿ ಏಕೋಭಾವವಿರಬೇಕೆಂಬುದನ್ನು ಈ ಆಗಮವು ಒತ್ತಿ ಹೇಳುತ್ತದೆ. ಇದಕ್ಕೂ ವಿಸ್ತಾರವನ್ನು ನೀಡಿ ಗುರುವಿನ ಮಹಿಮೆಯನ್ನು ಬಿಂಬಿಸುತ್ತದೆ:

> ಯಥಾ ಶಿವಸ್ತಥಾ ವಿದ್ಯಾ ಯಥಾ ವಿದ್ಯಾ ತಥಾ ಗುರುಃ।
> ಶಿವವಿದ್ಯಾಗುರೂಣಾಂ ಚ ಪೂಜಯಾ ಸದೃಶಂ ಫಲಮ್॥
> ಸರ್ವದೇವಾತ್ಮಕಶ್ಚಾಸೌ ಸರ್ವಮಂತ್ರಮಯೋ ಗುರುಃ।
> ತಸ್ಮಾತ್ ಸರ್ವಪ್ರಯತ್ನೇನ ತಸ್ಯಾಜ್ಞಾಂ ಶಿರಸಾ ವಹೇತ್॥[೪]

'ಶಿವನಿದ್ದಂತೆ ಜ್ಞಾನ ಮತ್ತು ಜ್ಞಾನವಿದ್ದಂತೆ ಗುರು, ಹೀಗಾಗಿ ಶಿವ, ಜ್ಞಾನ ಮತ್ತು ಗುರುಗಳ ಪೂಜೆಯಿಂದ ಸಮಾನವಾದ ಫಲ ದೊರೆಯುತ್ತದೆ. ಗುರುವೆಂದರೆ ಸರ್ವದೇವಾತ್ಮಕನು

---

೨. ಅದೇ, ಕ್ರಿ.ಪಾ., ೨.೫.

೩. ಅದೇ, ಕ್ರಿ.ಪಾ., ೨.೭.

೪. ಅದೇ, ಕ್ರಿ.ಪಾ., ೨.೮-೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತು ಸರ್ವಮಂತ್ರ ಸ್ವರೂಪನು. ಆದ್ದರಿಂದ ಸರ್ವಪ್ರಯತ್ನದಿಂದ ಗುರುವಿನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ನೆರವೇರಿಸಬೇಕು.' ಇಂತಹ ಮಹಿಮಾನ್ವಿತನಾದ ಮಹಾತ್ಮನೇ ಗುರು. ಎಲ್ಲರೂ ಗುರುಗಳಲ್ಲ. ಈ ಮಾತನ್ನು ಚಂದ್ರಜ್ಞಾನಾಗಮವು ಅತ್ಯಂತ ಕಟುವಾಗಿ ಹೇಳುತ್ತದೆ:

> ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।
> ದುರ್ಲಭೋಽಯಂ ಗುರುರ್ಲೋಕೇ ಶಿಷ್ಯಹೃತ್ತಾಪಹಾರಕಾಃ॥[೫]

'ಭಕ್ತನ ಹಣವನ್ನು ಅಪಹರಿಸುವ ಗುರುಗಳು ಬಹಳ ಇದ್ದಾರೆ; ಆದರೆ ಈ ಲೋಕದಲ್ಲಿ ಭಕ್ತನ ಹೃದಯದ ಕುದಿಯನ್ನು ಪರಿಹರಿಸುವ ಗುರುವು ಮಾತ್ರ ದೊರೆಯುವುದು ಕಷ್ಟ.' ಈ ಮಾತಿನಿಂದ ಪ್ರಸ್ತುತ ಆಗಮವು ಗುರುವೆಂದರೆ ಹೇಗಿರಬೇಕು, ಹೇಗಿರಬಾರದು ಎಂಬ ಜಿಜ್ಞಾಸೆ ಮಾಡಿ ನಿರ್ಣಯವನ್ನು ಕೊಡುತ್ತದೆ.

ಗುರುವೆಂದರೆ ಯಾರು? ಯಾರು ಅಲ್ಲ?:

ಗುರುವೆಂದರೆ ಶಿಷ್ಯನಿಗೆ ಪರಮಸತ್ಯದ ಜ್ಞಾನವನ್ನು ಕೊಡುವವನಾಗಿರಬೇಕು. ಪರಮಜ್ಞಾನದ ಮೂಲವೇನು? ಹೇಗೆ ಗುರು ಶಿಷ್ಯನಿಗೆ ಅದನ್ನು ನೀಡಲು ಸಮರ್ಥನಾಗುತ್ತಾನೆ? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಅದಕ್ಕೆ ಉತ್ತರವನ್ನು ಈ ಆಗಮ ಕೊಟ್ಟಿದೆ:

> ಸಂವಿತ್ತಿಜನನಂ ಸತ್ಯಂ ಪರಾನಂದಸಮುದ್ಭವಮ್।
> ತತ್ತತ್ತ್ವಂ ವಿದಿತಂ ಯೇನ ಸ ಏವಾನಂದದರ್ಶಕಃ॥
> ಸ ಪುನರ್ನಾಮಮಾತ್ರೇಣ ಸಂವಿತ್ತಿರಹಿತಸ್ತು ಯಃ।
> ಅನ್ಯಂ ನ ತಾರಯೇದಜ್ಞಃ ಕಿಂ ಶಿಲಾ ತಾರಯೇಚ್ಛಿಲಾಮ್॥[೬]

'ಪರಮ ಜ್ಞಾನ (ಸಂವಿತ್ತಿ) ನಿಶ್ಚಿತವಾಗಿಯೂ ಪರಮ ಆನಂದದಿಂದ ಹುಟ್ಟುತ್ತದೆ. (ಅಂದರೆ ಯಾರು ಪರಮ ಆನಂದದಲ್ಲಿ ಮಗ್ನನಾಗಿರುವನೋ ಅವನು ಮಾತ್ರ ಬೇರೆಯವರಲ್ಲಿ ಪರಮಜ್ಞಾನವನ್ನು ಉಂಟುಮಾಡಬಲ್ಲನು). ಈ ಸತ್ಯವನ್ನು ಯಾರು ತಿಳಿದಿರುವನೋ ಅಂತಹ ಗುರುವು ಮಾತ್ರ ಪರಮ ಆನಂದದ ಸಾಕ್ಷಾತ್ಕಾರವನ್ನು ಮಾಡಿಸಬಲ್ಲನು. ಅಂತಹ ಪರಮಜ್ಞಾನವಿಲ್ಲದೆ ಯಾರು ಕೇವಲ ಹೆಸರಿಗೆ ಮಾತ್ರ ಗುರುವಾಗಿರುವನೋ ಅಂತಹ ಅಜ್ಞಾನಿಯು ಬೇರೆಯವರನ್ನು ಉದ್ಧರಿಸಲಾರ. ಕಲ್ಲು ಕಲ್ಲನ್ನು ಉದ್ಧರಿಸಬಲ್ಲದೇನು?' 'ಕಿಂ ಶಿಲಾ ತಾರಯೇಚ್ಛಿಲಾಮ್' (ಕಲ್ಲು ಕಲ್ಲನ್ನು ಉದ್ಧರಿಸಬಲ್ಲದೇನು?) ಎಂಬ ಪ್ರಶ್ನೆಯಿಂದ ಕೆಲವು ದಾರ್ಶನಿಕರು ಹೇಳುವಂತೆ ಶಿಲಾಸದೃಶವಾದ ಮುಕ್ತಾವಸ್ಥೆಯೊಂದಿದೆ. ಅವರ ಬಗ್ಗೆ ಹೀಗೆ ವಿಶದವಾಗಿ ಹೇಳುತ್ತದೆ ಚಂದ್ರಜ್ಞಾನಾಗಮ:

---

೫. ಅದೇ, ಕ್ರಿ.ಪಾ., ೨.೫೪.
೬. ಅದೇ, ಕ್ರಿ.ಪಾ., ೨.೫೫-೫೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಷಾ ತನ್ನಾಮಮಾತ್ರೇಣ ಮುಕ್ತಿರ್ವೈ ನಾಮಮಾತ್ರಿಕಾ।
ಯೈಃಪುನರ್ವಿದಿತಂ ತತ್ತ್ವಂ ತೇ ಮುಕ್ತಾ ಮೋಚಯಂತ್ಯಪಿ॥
ತತ್ತ್ವಹೀನೇ ಕುತೋ ಬೋಧಃ ಕುತೋ ಹ್ಯಾತ್ಮಪರಿಗ್ರಹಃ।
ಪರಿಗ್ರಹವಿನಿರ್ಮುಕ್ತಃ ಪಶುರಿತ್ಯಭಿಧೀಯತೇ॥
ಪಶುಭಿಃ ಪ್ರೇರಿತಶ್ಚಾಪಿ ಪಶುತ್ವಂ ನಾತಿವರ್ತತೇ।
ತಸ್ಮಾತ್ತತ್ತ್ವಂ ವಿದಿತ್ವೇಹ ಮುಕ್ತೋ ಮೋಚಕ ಇಷ್ಯತೇ॥
ಸರ್ವಲಕ್ಷಣಯುಕ್ತೋಽಪಿ ಸರ್ವಶಾಸ್ತ್ರಂ ವಿದನ್ನಪಿ।
ಸರ್ವೋಪಾಯವಿಧಿಜ್ಞೋಽಪಿ ತತ್ತ್ವಹೀನಸ್ತು ನಿಷ್ಫಲಃ॥[೭]

'ಶಿಲಾಸದೃಶ ಮುಕ್ತಿಯೆಂಬುದು ಕೇವಲ ಹೆಸರಿಗೆ ಮಾತ್ರ ಮುಕ್ತಿ. ಯಾರಿಗೆ ತತ್ತ್ವವು ತಿಳಿದಿದೆಯೋ ಅವರು ಮುಕ್ತರು, ಅಂತಹ ಮುಕ್ತರೇ ಮೋಕ್ಷದ ದಾರಿಯನ್ನು ತೋರಬಲ್ಲರು. ತತ್ತ್ವರಹಿತನಿಗೆ ಶಿವಜ್ಞಾನ (ಬೋಧ) ಹೇಗೆ ಉಂಟಾಗಬಲ್ಲದು? ಅವನಿಗೆ ಆತ್ಮನ ಸ್ವರೂಪಜ್ಞಾನ ಹೇಗೆ ಉಂಟಾಗಬಲ್ಲದು? ಅಂತಹ ಆತ್ಮಸ್ವರೂಪಜ್ಞಾನವಿಲ್ಲದವನು ಪಶುವೆಂದು ಕರೆಯಲ್ಪಡುತ್ತಾನೆ. ಪಶುಗಳಿಂದ ಪ್ರೇರಣೆ ಪಡೆದವನು ಪಶುತ್ವದಿಂದ ಮುಕ್ತನಾಗಲಾರ. ಎಲ್ಲಾ ಲಕ್ಷಣಗಳಿಂದ ಕೂಡಿದವನಾದರೂ ಸರ್ವಶಾಸ್ತ್ರಗಳನ್ನು ತಿಳಿದವನಾದರೂ ಎಲ್ಲಾ ಉಪಾಯಗಳನ್ನು ಮತ್ತು ವಿಧಿವಿಧಾನಗಳನ್ನು ಬಲ್ಲವನಾದರೂ ತತ್ತ್ವಜ್ಞಾನರಹಿತನಾದರೆ ಅವನು ಎಲ್ಲ ಫಲಗಳಿಂದ ವಂಚಿತನು.' ಹೀಗೆ ಪ್ರಸ್ತುತ ಆಗಮವು ತತ್ತ್ವಜ್ಞಾನ ಸಂಪನ್ನನು ಮಾತ್ರ ಗುರುವು ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ಹೇಳಿದೆ. ತತ್ತ್ವಜ್ಞಾನವಿಲ್ಲದವನು ಗುರುವಾಗಲು ಅರ್ಹನಲ್ಲ. ತತ್ತ್ವಜ್ಞಾನವುಳ್ಳ ಗುರುವು ಮುಕ್ತನು. ಅಂತಹ ಮುಕ್ತನೇ ಸಾಧಕನಿಗೆ ಮುಕ್ತಿಯ ಮಾರ್ಗವನ್ನು ತೋರಬಲ್ಲ.

ಯೋಗ್ಯ ಗುರುವನ್ನೇ ಆಯ್ದುಕೊಳ್ಳಬೇಕು:

ಯೋಗ್ಯ ಗುರುವು ಯಾರು ಎಂಬುದನ್ನು ಮೇಲೆ ಹೇಳಿದೆ. ಅದನ್ನೇ ವಿಸ್ತರಿಸಿ ಅಂತಹ ಗುರುವನ್ನೇ ಆಯ್ದುಕೊಳ್ಳಬೇಕು ಎಂದು ಚಂದ್ರಜ್ಞಾನಾಗಮವು ವಿಧಿಸುತ್ತದೆ:

ಯಸ್ಯಾನುಭವಪರ್ಯಂತಾ ಮತಿಸ್ತತ್ತ್ವೇ ಪ್ರತಿಷ್ಠಿತಾ।
ತಸ್ಯಾವಲೋಕಾದ್ಯೈಶ್ಚ ಪರಾನಂದೋಽಭಿಜಾಯತೇ॥
ತಸ್ಮಾದ್ಯಸ್ಯೈವ ಸಂಪರ್ಕಾತ್ ಪ್ರಬೋಧಾನಂದಸಂಭವಃ।
ಗುರುಂ ತಮೇವ ವೃಣುಯಾನ್ನಾಪರಂ ಮತಿಮಾನ್ನರಃ॥[೮]

'ಯಾರ ಬುದ್ಧಿಯು ತತ್ತ್ವದಲ್ಲಿ ನೆಲೆಗೊಂಡಿದ್ದು ಅದರ ಸಾಕ್ಷಾತ್ಕಾರವನ್ನು ಹೊಂದುವ ಸಾಮರ್ಥ್ಯವನ್ನು ಹೊಂದಿದೆಯೋ, ಅಂತಹವನ ದರ್ಶನಾದಿಗಳಿಂದ ಪರಮ ಆನಂದವು

---

೭. ಅದೇ, ಕ್ರಿ.ಪಾ. ೨.೫೭-೬೦.

೮. ಅದೇ, ೨.೬೫-೬೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹುಟ್ಟುತ್ತದೆ. ಆದ್ದರಿಂದ ಯಾರ ಸಂಪರ್ಕಮಾತ್ರದಿಂದ ಜ್ಞಾನದ ಆನಂದವು ಹುಟ್ಟುವುದೋ ಅಂತಹ ಗುರುವನ್ನೇ ಜಾಣನಾದವನು ಆಯ್ದುಕೊಳ್ಳಬೇಕೇ ಹೊರತು ಬೇರೆಯವನನ್ನಲ್ಲ.' ತತ್ತ್ವಜ್ಞಾನದಲ್ಲಿ ಯಾರ ಬುದ್ಧಿಯು ನೆಲೆಗೊಂಡಿದೆಯೋ ಅವನು ಮಾತ್ರ ತತ್ತ್ವಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಲ್ಲ. ಅವನು ಮಾತ್ರ ಪರಮಾನಂದವನ್ನು ನೀಡಬಲ್ಲ ಜ್ಞಾನವನ್ನು ಕೊಡಬಲ್ಲ. ಅಂತಹ ಗುರುವನ್ನೇ ಆಯ್ದುಕೊಳ್ಳಬೇಕು. ಹೆಸರಿಗೆ ಮಾತ್ರ ಗುರು ಎನಿಸಿಕೊಂಡವನನ್ನಲ್ಲ.

ಗುರುವಿನ ಲಕ್ಷಣ:

ಯಾರು ನಿಜವಾದ ಗುರು, ಯಾರು ಅಲ್ಲ; ಯೋಗ್ಯಗುರುವನ್ನೇ ಆಯ್ದುಕೊಳ್ಳಬೇಕೆಂದು ಹೇಳುವ ಚಂದ್ರಜ್ಞಾನಾಗಮವು ಗುರುವಿನ ಲಕ್ಷಣವನ್ನು ವಿಶೇಷವಾಗಿ ನಿರೂಪಿಸುತ್ತದೆ:

ಗುರುಶ್ಚ ಗುಣವಾನ್ ಪ್ರಾಜ್ಞಃ ಪರಮಾನಂದಭಾಸಕಃ।
ತತ್ತ್ವವಿಚ್ಛಿವಸಂಸಕ್ತೋ ಮುಕ್ತಿದೋ ನ ತು ಚಾಪರಃ॥
ಶೈವಸಿದ್ಧಾಂತತತ್ತ್ವಜ್ಞಃ ಪ್ರತಿಷ್ಠಾಮಂತ್ರಪಾರಗಃ।
ಮೋಕ್ಷದಃ ಕರುಣೋಪೇತೋ ವೀತರಾಗೋ ವಿಮತ್ಸರಃ॥
ಕ್ರಿಯಾದಿಜ್ಞಾನಪರ್ಯಂತಶಿವತತ್ತ್ವವಿನಿಶ್ಚಯಃ।
ಸಂಪ್ರದಾಯಾಗತಜ್ಞಾನೋ ಗುರುವಂಶಸಮುದ್ಭವಃ॥
ಲಿಂಗಾಂಗಸ್ಥಲಭೇದಜ್ಞಃ ಷಟ್‌ಸ್ಥಲಜ್ಞಾನತತ್ಪರಃ।
ದೀಕ್ಷಾಕರ್ಮಾದಿಕುಶಲಃ ಷಡಧ್ವಜ್ಞಾನವತ್ಸಲಃ॥
ಶಿವಸ್ಯ ಚ ಗುರೋರ್ಭಕ್ತಃ ಶಿವೈಕಾಹಿತಮಾನಸಃ।
ಶಿವಾರ್ಚನಾಸಕ್ತಚಿತ್ತಃ ಶಿವಧ್ಯಾನೈಕತತ್ಪರಃ॥[೯]

'ಗುರುವೆಂದರೆ ಗುಣವಂತ, ಪರಮಜ್ಞಾನಿ, ಪರಮಾನಂದದ ಅನುಭವವನ್ನು ಮಾಡಿಸುವವನು, ತತ್ತ್ವಜ್ಞಾನಿ, ಶಿವನಲ್ಲಿ ಭಕ್ತಿಯುಳ್ಳವನು, ಮುಕ್ತಿಯನ್ನು ಕೊಡುವವನಲ್ಲದೆ ಬೇರಲ್ಲ, ಶಿವಸಿದ್ಧಾಂತ ತತ್ತ್ವಗಳನ್ನು ಅರಿತವನು, ಲಿಂಗಾದಿ ಪ್ರತಿಷ್ಠೆಯ ವಿಧಿ ಮತ್ತು ಮಂತ್ರಗಳಲ್ಲಿ ನಿಷ್ಣಾತನು, ಮೋಕ್ಷದ ದಾರಿಯನ್ನು ತೋರುವವನು, ಕರುಣೆಯಿಂದ ಕೂಡಿದವನು, ವೈರಾಗ್ಯಸಂಪನ್ನನು, ಮತ್ಸರರಹಿತನು, ಕ್ರಿಯೆಯಿಂದ ಜ್ಞಾನದವರೆಗೆ ಎಲ್ಲಾ ವಿಷಯಗಳ ತತ್ತ್ವಗಳ ನಿಶ್ಚಿತವಾದ ಜ್ಞಾನವುಳ್ಳವನು, ಸಂಪ್ರದಾಯದಿಂದ ಬಂದ ಜ್ಞಾನವುಳ್ಳವನು, ಗುರುವಂಶದಲ್ಲಿ ಹುಟ್ಟಿದವನು, ಲಿಂಗಸ್ಥಲ ಮತ್ತು ಅಂಗಸ್ಥಲಗಳ ಭೇದವನ್ನು ಅರಿತವನು, ಷಟ್‌ಸ್ಥಲಜ್ಞಾನದಲ್ಲಿ ನಿರತನು, ದೀಕ್ಷೆ ಮುಂತಾದ ಆಚರಣೆಗಳಲ್ಲಿ ಕುಶಲನು, ಆರು ಅಧ್ವಗಳ ಜ್ಞಾನದಿಂದ ಸಂಪ್ರೀತನಾದವನು, ಶಿವ ಮತ್ತು ಗುರುಗಳಲ್ಲಿ

---

೯. ಅದೇ, ೨.೪೮-೫೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಕ್ತಿಯುಳ್ಳವನು, ಶಿವನಲ್ಲಿ ಏಕೋಭಾವದಿಂದಿರುವವನು, ಶಿವಪೂಜೆಯಲ್ಲಿ ಮಗ್ನವಾದ ಮನಸ್ಸುಳ್ಳವನು ಮತ್ತು ಶಿವಧ್ಯಾನವೊಂದರಲ್ಲೇ ನಿರತನಾದವನು.'

ಹೀಗೆ ಹೇಳಿದ ಗುರುಲಕ್ಷಣದಲ್ಲಿ ಈ ಮೊದಲೇ ಹೇಳಿದ ಅನೇಕ ಅಂಶಗಳು ಬಂದಿವೆ. ಗುರುವು ಪರಮಜ್ಞಾನಿ, ಪರಮಾನಂದದ ಅನುಭವವನ್ನು ನೀಡುವವನು, ಮುಕ್ತಿಯನ್ನು ಕೊಡುವವನು; ಶಿವಸಿದ್ಧಾಂತದಲ್ಲಿ ಬರುವ ಪತಿ, ಪಶು ಮತ್ತು ಪಾಶವೆಂಬ ಮೂರು ತತ್ವಗಳ ಮರ್ಮವನ್ನರಿತವನು. ಲಿಂಗ ಪ್ರತಿಷ್ಠೆ ಮುಂತಾದವುಗಳ ಪದ್ಧತಿಗಳು ಮತ್ತು ಪ್ರಯೋಗಿಸಬೇಕಾದ ಮಂತ್ರಗಳನ್ನು ತಿಳಿದವನು. ಕರುಣೆ, ವೈರಾಗ್ಯ ಮತ್ತು ನಿರ್ಮತ್ಸರಗಳಿಂದ ಮುಪ್ಪುರಿಗೊಂಡ ವ್ಯಕ್ತಿತ್ವವುಳ್ಳವನು. ಕ್ರಿಯೆಯಿಂದ ಜ್ಞಾನದವರೆಗೆ, ಎಂದರೆ ಕ್ರಿಯಾ, ಚರ್ಯಾ, ಯೋಗ ಮತ್ತು ಜ್ಞಾನವೆಂಬ ನಾಲ್ಕು ಶಿವಾಗಮ ಪಾದಗಳಲ್ಲಿ ಬರುವ ತತ್ವಗಳ ಸ್ವರೂಪವನ್ನು ಸರಿಯಾಗಿ ಅರಿತವನು. ಸಂಪ್ರದಾಯದಲ್ಲಿ ನಿರೂಢನಾದವನು. ಗುರುಪರಂಪರೆಯಲ್ಲಿ ಬಂದವನು, ಅಂದರೆ, ಉತ್ತಮ ವಂಶದಲ್ಲಿ ಹುಟ್ಟಿದವನು. ಅವನು ವಿಶೇಷವಾಗಿ ಲಿಂಗಕ್ಕೆ ಎಂದರೆ ಶಿವನಿಗೆ ಸಂಬಂಧಿಸಿದ ಸ್ಥಲಗಳಲ್ಲಿ ಮತ್ತು ಅಂಗಕ್ಕೆ ಆದರೆ ಜೀವನಿಗೆ ಸಂಬಂಧಿಸಿದ ಸ್ಥಲಗಳಲ್ಲಿನ ಭೇದವನ್ನು ಸ್ಪಷ್ಟವಾಗಿ ತಿಳಿದಿರುವವನು. ಲಿಂಗಾಂಗಸ್ಥಲಗಳಿಗೆ ಆಧಾರಭೂತವಾದ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಸ್ಥಲಗಳ ಜ್ಞಾನದಲ್ಲಿ ನಿಷ್ಠೆಯುಳ್ಳವನು. ಆದ್ದರಿಂದಲೇ ಗುರುವಿಗೆ ಷಟ್‌ಸ್ಥಲಬ್ರಹ್ಮಿಯೆಂಬ ಹೆಸರುಂಟು. ದೀಕ್ಷೆ ಮುಂತಾದ ಸಂಸ್ಕಾರಗಳನ್ನು ಮಾಡುವುದರಲ್ಲಿ ಸಿದ್ಧಹಸ್ತನು. ವರ್ಣಾಧ್ವ, ಪದಾಧ್ವ, ಮಂತ್ರಾಧ್ವ, ಕಲಾಧ್ವ, ತತ್ವಾಧ್ವ ಮತ್ತು ಭುವನಾಧ್ವಗಳೆಂಬ ಆರು ಅಧ್ವಗಳ ಸ್ವರೂಪವನ್ನು ಸರಿಯಾಗಿ ತಿಳಿದವನು ಗುರುವು. ಅವನ ವ್ಯಕ್ತಿತ್ವದಲ್ಲಿ ಶಿವ-ಗುರುಗಳೆಂಬ ಇಬ್ಬರಲ್ಲೂ ಭಕ್ತಿ, ಶಿವೈಕನಿಷ್ಠೆ, ಶಿವಾರ್ಚನಾಸಕ್ತಿ, ಶಿವೈಕಧ್ಯಾನತತ್ಪರತೆಗಳು ಹಾಸುಹೊಕ್ಕಾಗಿರುತ್ತವೆ. ಹೀಗೆ ಪ್ರಸ್ತುತ ಆಗಮವು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು (ಮೋಕ್ಷಗುರು)ವೆಂಬ ಗುರುತ್ರೈವಿಧ್ಯವನ್ನು ಸೂಚಿಸುತ್ತದೆ.

ಶಿಷ್ಯನ ಲಕ್ಷಣ:

ಗುರುವಿನ ಲಕ್ಷಣವನ್ನು ಹೇಳಿದ ಆಗಮವು ಶಿಷ್ಯನ ಪರೀಕ್ಷೆಯ ಸಂದರ್ಭವನ್ನು ಎತ್ತಿಕೊಂಡು ಶಿಷ್ಯನ ಲಕ್ಷಣವನ್ನೂ ಹೇಳುತ್ತದೆ. ಗುರುವಿನಲ್ಲಿ ಭಕ್ತಿ, ಗುರುಸೇವೆಯಲ್ಲಿ ನಿಷ್ಠೆ, ಇವು ಶಿಷ್ಯನ ಆದ್ಯಲಕ್ಷಣಗಳು. ಗುರುವು ಯಾವ ಕೆಲಸವನ್ನು ಹೇಳಿದರೂ ಶಿಷ್ಯನು ಅದನ್ನು ತಪ್ಪದೆ ಮೇಲು-ಕೀಳೆಂಬ ಭಾವನೆಯಿಲ್ಲದೆ ಮಾಡಬೇಕು. ಗುರುವು ಬೈದರೂ ಹಂಗಿಸಿದರೂ ಹೊಡೆದರೂ ಕೂಡ ಶಿಷ್ಯನು ಗುರುವಿನ ಬಗ್ಗೆ ಕೋಪಿಸಿಕೊಳ್ಳದೆ ಇರಬೇಕು.[೧೦] ಇವೆಲ್ಲಾ ಗುರುವು ಬೇಕೆಂತಲೇ ಅನುಸರಿಸುವ ಶಿಷ್ಯಪರೀಕ್ಷೆಯ ವಿಧಾನಗಳು. ಶಿಷ್ಯರೆಂದರೆ ಎಂಥವರು? ಇದಕ್ಕೆ ಉತ್ತರ:

---

೧೦. ಅದೇ, ೨.೭೭-೭೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಹಿಂಸಕಾ ದಯಾವಂತೋ ನಿತ್ಯಮುದ್ಯುಕ್ತಚೇತಸಃ।
ಅಮಾನಿನೋ ಬುದ್ಧಿಮಂತಸ್ತ್ಯಕ್ತಸ್ಪರ್ಧಾಃ ಪ್ರಿಯಂವದಾಃ॥
ಋಜವೋ ಮೃದವಃ ಸ್ವಚ್ಛಾ ವಿನೀತಾ ಸ್ಥಿರಚೇತಸಃ।
ಶೌಚಾಚಾರಸಮೋಪೇತಾಃ ಶಿವಭಕ್ತಾ ದ್ವಿಜಾತಯಃ॥
ಏವಂ ವೃತ್ತಸಮೋಪೇತಾ ವಾಙ್ಮನಃಕಾಯಕರ್ಮಭಿಃ।
ಶೋಧ್ಯಾ ಬೋಧ್ಯಾ ಯಥಾನ್ಯಾಯ್ಯಮಿತಿ ಶಾಸ್ತ್ರವಿನಿಶ್ಚಯಃ॥[೧೧]

ಹಿಂಸೆ ಮಾಡದವರು, ದಯೆಯುಳ್ಳವರು, ಯಾವಾಗಲೂ ಎಚ್ಚರವಾಗಿರುವ ಮನಸ್ಸಿನವರು, ದುರಭಿಮಾನವಿಲ್ಲದವರು, ಬುದ್ಧಿಶಾಲಿಗಳು, ಈರ್ಷ್ಯೆ-ದ್ವೇಷಗಳಿಲ್ಲ-ದವರು, ಪ್ರಿಯವಾಗಿ ಮಾತನಾಡುವವರು, ಸರಲಸ್ವಭಾವದವರು, ಮೃದುಭಾಷಿಗಳು, ಸ್ವಚ್ಛ ಮನಸ್ಸಿನವರು, ವಿನಯಶೀಲರು, ಸ್ಥಿರಬುದ್ಧಿಯವರು, ಶೌಚ ಮತ್ತು ಆಚಾರಗಳಲ್ಲಿ ನಿರತರಾದವರು, ಶಿವಭಕ್ತರು, ಸುಸಂಸ್ಕೃತ ದೀಕ್ಷಾಸಂಪನ್ನರು, ಸದಾಚಾರ ಸಂಪನ್ನರು, ಈ ರೀತಿಯ ಶಿಷ್ಯರ ಮಾತು, ಮನಸ್ಸು, ಶರೀರ ಮತ್ತು ಕ್ರಿಯೆಗಳನ್ನು ನ್ಯಾಯವಾದ ರೀತಿಯಲ್ಲಿ ಪರೀಕ್ಷಿಸಿ ತಿಳಿದುಕೊಳ್ಳಬೇಕು. ಇಂತಹ ಶಿಷ್ಯರು ಗುರುವಿಗೆ ತಕ್ಕವರು. ಅವರು ಮಾತ್ರ ದೀಕ್ಷಾದಿ ಸಂಸ್ಕಾರಗಳ ಮೂಲಕ ಗುರುವಿನ ಅನುಗ್ರಹಕ್ಕೆ ಯೋಗ್ಯರು. ಗುರುವು ಬಂದಾಗ ಅವರು ನಡೆಸುವ ಸೇವೆ ಮುಂತಾದ ಕರ್ತವ್ಯಗಳಿಂದ ಅವರ ನಿಜವಾದ ಗುರುಭಕ್ತಿ, ಸದ್ವರ್ತನೆಗಳು ಸ್ಪಷ್ಟವಾಗುತ್ತವೆ. ಈ ದೃಷ್ಟಿಯಿಂದ ಚಂದ್ರಜ್ಞಾನಾಗಮವು ಗುರುವಿನ ಸತ್ಕಾರದ ವಿಷಯವನ್ನು ವಿವರವಾಗಿ ಹೇಳುತ್ತದೆ.

ಗುರುವಿನ ಆಗಮನ ಮತ್ತು ಶಿಷ್ಯನ ಕರ್ತವ್ಯ:

ಗುರುವು ತನ್ನ ಮನೆಗೆ ಬಂದಾಗ ಶಿಷ್ಯನು ಭಕ್ತಿಯಿಂದ ನಡೆಸಬೇಕಾದ ಕರ್ತವ್ಯಗಳನ್ನು ಹೀಗೆ ಹೇಳಿದೆ: ಗುರುವು ಬಂದ ಕೂಡಲೇ ಅವರಿಗೆ ನಮಸ್ಕರಿಸಿ, ಆಸನವನ್ನು ಕೊಟ್ಟು, ಅವರು ಕುಳಿತುಕೊಂಡ ಮೇಲೆ ಅವರ ಅಪ್ಪಣೆ ಪಡೆದು ತಾನು ಕುಳಿತುಕೊಳ್ಳಬೇಕು. ಗುರುವಿನ ಪಾದಗಳನ್ನು ತೊಳೆದುಕೊಂಡ ನೀರನ್ನು ಸ್ವೀಕರಿಸಬೇಕು. ಹಾಗೆ ಗುರು ಪಾದೋದಕವನ್ನು ಸೇವಿಸುವುದರಿಂದ, ದೇಹದ ಮೇಲೆ ಹಚ್ಚಿಕೊಳ್ಳುವುದರಿಂದ ಎಲ್ಲಾ ಪಾಪಗಳೂ ನಾಶವಾಗುತ್ತವೆ. ಗಂಧ, ಅಕ್ಷತೆ, ಹೂವು, ಚಿನ್ನ, ತಾಂಬೂಲ ಮತ್ತು ಬಟ್ಟೆಗಳನ್ನು ಒಂದು ಪಾತ್ರೆಯಲ್ಲಿಟ್ಟು ಗುರುವಿಗೆ ಸಮರ್ಪಿಸಬೇಕು. ಇವುಗಳನ್ನು ಕೈಯಿಂದ ಕೊಡುವುದು ಪದ್ಧತಿಯಲ್ಲ. ಗುರುವಿಗೆ ಊಟ ಮಾಡಿಸಿ ಅನಂತರ ಶಿಷ್ಯ ತಾನು ಊಟ ಮಾಡಬೇಕು.[೧೨] ಈ ಬಗ್ಗೆ ಎಚ್ಚರಿಕೆ ನೀಡಿದೆ ಚಂದ್ರಜ್ಞಾನಾಗಮ:

---

೧೧. ಅದೇ, ೨.೭೯-೮೧.

೧೨. ಅದೇ, ೨.೨೧-೨೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಭೋಜಯಿತ್ವಾ ಸ್ವಗುರುಂ ಪಶ್ಚಾದ್ ಭುಂಜೀತ ಬುದ್ಧಿಮಾನ್।
ಗುರೋಃ ಪುರಸ್ತಾದ್ಯೋ ಭುಂಕ್ತೇ ಗುರುದ್ರೋಹೀ ಸ ಉಚ್ಯತೇ॥[೧೩]

"ತನ್ನ ಗುರುವಿಗೆ ಊಟ ಮಾಡಿಸಿ ಅನಂತರ ಶಿಷ್ಯನು ಊಟ ಮಾಡಬೇಕು. ಗುರುವಿಗಿಂತ ಮೊದಲೇ ಊಟ ಮಾಡುವವನು ಗುರುದ್ರೋಹಿಯೆಂದು ಕರೆಯಲ್ಪಡುವನು."

ಗುರುವು ಊಟ ಮಾಡಿದ ಬಳಿಕ ಉತ್ತಮವಾದ ತಾಂಬೂಲವನ್ನು ಒಂದು ತಟ್ಟೆಯಲ್ಲಿಟ್ಟು ಕೊಡಬೇಕು. ಅನಂತರ ಗುರುವಿಗೆ ಇಷ್ಟವಾದ ವಸ್ತುಗಳನ್ನು ಭಕ್ತಿಯಿಂದ ಸಮರ್ಪಿಸಿ, ಸಂತೈಸಿ ಅವರ ಅನುಗ್ರಹವನ್ನು ಪಡೆಯಬೇಕು. ವಿವಾಹ ಮುಂತಾದ ಎಲ್ಲಾ ಶುಭಕಾರ್ಯಗಳಲ್ಲಿ ಶಿಷ್ಯನು ಗುರುವನ್ನು ಭಕ್ತಿಯಿಂದ ಬಟ್ಟೆ ಮತ್ತು ಚಿನ್ನದ ಉಂಗುರಗಳಿಂದ ಸತ್ಕರಿಸಬೇಕು. ಬಡವನಾಗಿದ್ದರೂ ಕೂಡ ತನ್ನ ಶಕ್ತಿಯ ಬಗ್ಗೆ ವಂಚನೆ ಮಾಡದೆ ತನ್ನಲ್ಲಿರುವ ಧನದಿಂದ ಅವಶ್ಯವಾಗಿ ಸತ್ಕರಿಸಬೇಕು.[೧೪]

ಗುರುವಿನ ಸತ್ಕಾರದಲ್ಲಿ ವಿಶೇಷ ವೈಭವವಿರಬೇಕು. ಗುರುವನ್ನು ಮನೆಗೆ ಕರೆತರುವಾಗ ಯಥಾಶಕ್ತಿ ಪಲ್ಲಕ್ಕಿಯಲ್ಲೋ ಆನೆಯ ಮೇಲೋ ಕರೆತರುವ ಏರ್ಪಾಟು ಮಾಡಬೇಕು. ಶಿಷ್ಯನು ವಾದ್ಯಘೋಷಗಳೊಂದಿಗೆ ಸ್ವತಃ ತಾನೇ ಗುರುವು ಕುಳಿತ ಪಲ್ಲಕ್ಕಿಯನ್ನೋ ಆನೆಯನ್ನೋ ಹಿಂಬಾಲಿಸಬೇಕು. ಮನೆಗೆ ಕರೆದೊಯ್ದ ಮೇಲೆ ಗುರುವಿನ ಪಾದಗಳನ್ನು ತೊಳೆದು ಆ ನೀರನ್ನು ತನ್ನ ತಲೆಯ ಮೇಲೆ ಸಿಂಪಡಿಸಿಕೊಳ್ಳಬೇಕು ಮತ್ತು ತನ್ನವರೆಲ್ಲರ ಮೇಲೂ ಸಿಂಪಡಿಸಬೇಕು. ಗುರುವಿಗೆ ಹಸ್ತಾವಲಂಬನೆ ನೀಡಿ ಮನೆಯೊಳಗೆ ಕರೆದೊಯ್ಯಬೇಕು. ಶ್ರೇಷ್ಠವಾದ ಆಸನವನ್ನು ಸಿದ್ಧಗೊಳಿಸಿ ಅದರ ಮೇಲೆ ಕುಳಿತುಕೊಳ್ಳುವಂತೆ ಪ್ರೀತಿಯಿಂದ ವಿಜ್ಞಾಪಿಸಬೇಕು. ಅತ್ಯಂತ ಎಚ್ಚರಿಕೆಯಿಂದ ವಿಧಿಗೆ ಅನುಸಾರವಾಗಿ ಗುರುವನ್ನು ಪೂಜಿಸಬೇಕು. ತ್ರಯೋದಶೀ ಮುಂತಾದ ತಿಥಿಗಳಲ್ಲಿ ಗುರುವನ್ನು ಭವ್ಯವಾದ ಪೀಠದಲ್ಲಿ ಕುಳ್ಳಿರಿಸಿ, ನೂರಾಎಂಟೋ ಮೂವತ್ತಾರೋ ದೀಪಗಳನ್ನು ಶಕ್ತಿಗೆ ಅನುಗುಣವಾಗಿ ಹೊತ್ತಿಸಿ ಪೂಜೆ ಮಾಡಬೇಕು.[೧೫] ಗುರುವಿನ ಜೊತೆಯಲ್ಲೇ ಸಪತ್ನೀಕರಾದ ಮಾಹೇಶ್ವರರಿಗೆ ಊಟ ಮಾಡಿಸಬೇಕು.[೧೬] ಇಂತಹ ವೈಭವದ ಗುರುಪೂಜೆ ಶಿಷ್ಯನ ಭಕ್ತಿಯ ಪಾರಮ್ಯವನ್ನು ತೋರಿಸುತ್ತದೆ.

ಗುರುಸೇವೆ ಮತ್ತು ಪ್ರದಕ್ಷಿಣೆ:

ಗುರುಸೇವೆಯೆಂಬುದು ಶಿಷ್ಯನು ಅನುದಿನವೂ ಭಕ್ತಿಪೂರ್ವಕವಾಗಿ ಮಾಡಬೇಕಾದುದು. ಗುರುವಿನ ದರ್ಶನಕ್ಕೆ ಹೋಗುವಾಗ ಬರೀ ಕೈಯಲ್ಲಿ ಹೋಗಬಾರದು.

---

೧೩. ಅದೇ, ೨.೨೪.

೧೪. ಅದೇ, ೨.೨೫-೨೭.

೧೫. ಅದೇ, ೨.೮೭-೯೦.

೧೬. ಅದೇ, ೨.೯೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಜನ ಬಳಿಗೆ ಹೋಗುವಾಗ ಹೇಗೋ ಹಾಗೆಯೇ ಗುರುವಿನ ಬಳಿಗೆ ಹೋಗುವಾಗ ಹಣ್ಣು, ಹೂವು, ತಾಂಬೂಲ ಅಥವಾ ಇನ್ನೇನನ್ನಾದರೂ ವಸ್ತುವನ್ನು ಕೊಂಡೊಯ್ಯಬೇಕು. ಹಾಗೆ ಅವುಗಳಲ್ಲಿ ಯಾವುದನ್ನಾದರೂ ಕೊಂಡೊಯ್ದು ನಮಸ್ಕರಿಸಬೇಕು.[೧೭] ಗುರುವಿಗೆ ನಮಸ್ಕರಿಸುವುದರಲ್ಲೂ ಒಂದು ನಿಯಮವಿದೆ. ಅದೆಂದರೆ ದಂಡ ನಮಸ್ಕಾರ, ದಂಡದಂತೆ ನೆಲದ ಮೇಲೆ ಕೆಳಮುಖವಾಗಿ ಒರಗಿ ಹಣೆಯನ್ನು ನೆಲಕ್ಕೆ ಮುಟ್ಟಿಸಿ ಎರಡೂ ಕೈಗಳನ್ನು ಜೋಡಿಸಿ ಮುಂದಕ್ಕೆ ಚಾಚಿ ಮಾಡುವ ನಮಸ್ಕಾರ. ಈ ನಮಸ್ಕಾರ ಮಾಡುವಲ್ಲಿ ಯಾವುದೇ ಸಂಕೋಚವಿರಬಾರದು ಎಂಬುದು ಆಗಮದ ಉಪದೇಶ:

ಶ್ರೀಮಾನಪಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್।
ಕುರ್ಯಾದ್ದಂಡನಮಸ್ಕಾರಂ ನಿರ್ಲಜ್ಜೋ ಗುರುಸಂನಿಧೌ॥
ಉಪಚಾರೇಷು ಸರ್ವೇಷು ದ್ವಾವೇವಾತ್ಯಂತಶೋಭಿನೌ।
ಪ್ರಿಯವಾಣೀ ಪ್ರಣಾಮಶ್ಚ ತೌ ವಿನಾನ್ಯೇ ವೃಥಾ ಸ್ಮೃತಾಃ॥[೧೮]

"ಶ್ರೀಮಂತನಾಗಿರಲಿ, ತಪಸ್ವಿಯಾಗಿರಲಿ, ಶಾಸ್ತ್ರಜ್ಞಾನಿಯಾಗಿರಲಿ, ಉತ್ತಮಕುಲವೆಂಬ ಶೀಲವುಳ್ಳವನಾಗಿರಲಿ, ಯಾರೆ ಆಗಿರಲಿ ಗುರುವಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಬೇಕು. ಗುರುವಿನ ಸನ್ನಿಧಿಯಲ್ಲಿ ಯಾವುದೇ ಸಂಕೋಚವಿಲ್ಲದವನಾಗಬೇಕು. ಎಲ್ಲಾ ಉಪಚಾರಗಳಲ್ಲಿ ಎರಡು ಮಾತ್ರ ಅತ್ಯಂತ ಶೋಭೆಯುಳ್ಳವುಗಳು. ಅವೆಂದರೆ ಪ್ರಿಯವಾದ ಮಾತು ಮತ್ತು ನಮಸ್ಕಾರ. ಅವುಗಳಿಲ್ಲದೆ ಬೇರೆಲ್ಲವೂ ವ್ಯರ್ಥ."

ಹೀಗೆ ಗುರುಸೇವೆಯಲ್ಲಿ ಶಿಷ್ಯನು ಅಹಂಕಾರರಹಿತನಾಗಿ ತೊಡಗಬೇಕು. ಗುರುವಿನ ಪ್ರದಕ್ಷಿಣೆಯನ್ನು ಪ್ರಸ್ತುತ ಆಗಮವು ಹೇಳುತ್ತದೆ. ಅದರ ವಿಧಿಯೆಂದರೆ:

ಪ್ರದಕ್ಷಿಣೋ ಧೀಮಾನ್ ನ ತು ದೀರ್ಘಪದಂ ನ್ಯಸೇತ್।
ನ ಗಚ್ಛೇತ್ ತ್ವರಿತೋ ಧೀಮಾನ್ ನ ವದೇದಿತರೈಃ ಸಹ॥
ಪದೇ ಪದಾಂತರಂ ನ್ಯಸ್ಯ ಕರೌ ಚಲನವರ್ಜಿತೌ।
ಸ್ತುತಿಂ ವಾಚಾ ಹೃದಾ ಧ್ಯಾನಮೇವಂ ಕುರ್ಯಾತ್ ಪ್ರದಕ್ಷಿಣಮ್॥[೧೯]

"ಬುದ್ಧಿಶಾಲಿ ಶಿಷ್ಯನು ಪ್ರದಕ್ಷಿಣೆಯ ವಿಧಿಯನ್ನು ತಿಳಿದವನಾಗಿ ಉದ್ದವಾದ ಹೆಜ್ಜೆಗಳನ್ನು ಹಾಕಬಾರದು. ತ್ವರಿತವಾಗಿ ಹೋಗಬಾರದು. ಬೇರೆಯವರೊಂದಿಗೆ ಮಾತನಾಡಬಾರದು. ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡುತ್ತಾ, ಕೈಗಳನ್ನು ಅಲ್ಲಾಡಿಸದೆ, ಮಾತಿನಿಂದ ಸ್ತುತಿಯನ್ನೂ ಹೃದಯದಿಂದ ಧ್ಯಾನವನ್ನೂ ಮಾಡುತ್ತಾ ಗುರುವಿನ ಪ್ರದಕ್ಷಿಣೆಯನ್ನು ಮಾಡಬೇಕು."

---

೧೭. ಅದೇ, ೨.೩೧-೩೨.

೧೮. ಅದೇ, ೨.೩೩-೩೪.

೧೯. ಅದೇ, ಕ್ರಿಪಾ., ೨.೩೭-೩೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಯಾತ್ರೆ ಮತ್ತು ಗುರುಸನ್ನಿಧಿಯಲ್ಲಿ ವರ್ತನೆ:

ಗುರುಯಾತ್ರೆ, ದೇವಯಾತ್ರೆ ಮತ್ತು ತೀರ್ಥಯಾತ್ರೆ ಎಂಬ ಮೂರು ವಿಧ ಯಾತ್ರೆಗಳಲ್ಲಿ ಗುರುಯಾತ್ರೆಯ ಫಲವು ಅಧಿಕ.[೨೦] ಅಂತಹ ಗುರುಯಾತ್ರೆಯನ್ನು ಕೈಗೊಳ್ಳುವ ಶಿಷ್ಯನು ಪುಣ್ಯಾತ್ಮನು ಹಾಗೂ ದೇವಾತ್ಮನು ಎನಿಸುವನು:

> ಗುರುಸಂದರ್ಶನಾರ್ಥಾಯ ಭಕ್ತ್ಯಾ ಯಾತ್ರಾಂ ಕರೋತಿ ಯಃ।
> ಪುಣ್ಯದೇಹೀ ಸ ವಿಜ್ಞೇಯಃ ಸಮಸ್ತಾಮರವಲ್ಲಭಃ॥[೨೧]

ಗುರುವಿನ ದರ್ಶನಕ್ಕಾಗಿಯೇ ಭಕ್ತಿಯಿಂದ ಯಾವ ಶಿಷ್ಯನು ಯಾತ್ರೆಯನ್ನು ಮಾಡುತ್ತಾನೋ ಅವನು ಪುಣ್ಯಮಯ ಶರೀರವುಳ್ಳವನೆಂದೂ ಎಲ್ಲಾ ದೇವತೆಗಳ ಪ್ರಿಯನೆಂದೂ (ಒಡೆಯ ಇಂದ್ರನೆಂದೂ) ತಿಳಿಯಬೇಕು. ಹೀಗೆ ಗುರುಯಾತ್ರೆಯ ಫಲವನ್ನು ಹೇಳಿದ ಚಂದ್ರಜ್ಞಾನಾಗಮವು ಗುರುವನ್ನು ಹೇಗೆ ನೋಡಬೇಕೆಂಬುದನ್ನೂ ಹೇಳುತ್ತದೆ:

> ಶಿಷ್ಯೋ ಗುರುಸ್ಥಿತಂ ಗ್ರಾಮಂ ಪ್ರವಿಶನ್ ವಾಹನಾದಿಕಮ್।
> ವರ್ಜಯೇದ್ ಗೃಹಸಾಮೀಪ್ಯೇ ತಥಾ ವೈ ಪಾದುಕಾನಿ ಚ॥[೨೨]

ಗುರುವು ವಾಸವಾಗಿರುವ ಗ್ರಾಮವನ್ನು ಪ್ರವೇಶಿಸಿದ ಶಿಷ್ಯನು ಗುರುಮನೆಯ ಸಮೀಪದಲ್ಲಿಯೇ ವಾಹನ ಮುಂತಾದುವುಗಳನ್ನೂ ಪಾದರಕ್ಷೆಗಳನ್ನೂ ಬಿಡಬೇಕು. ಹೀಗೆ ವಿನಯಶಾಲಿಯಾಗಿ ಗುರುವಿನ ದರ್ಶನಕ್ಕೆ ಹೋಗಬೇಕು. ವಾಹನಾದಿಗಳನ್ನು ಏರಿ, ಪಾದರಕ್ಷೆಗಳನ್ನು ಧರಿಸಿಕೊಂಡು ಆಡಂಬರದಿಂದ ಗುರುವಿನ ದರ್ಶನಕ್ಕೆ ಹೋಗಬಾರದು ಎಂಬುದನ್ನಿಲ್ಲಿ ಗಮನಿಸಬೇಕು.

ಗುರುವಿನ ಸನ್ನಿಧಿಯಲ್ಲಿ ಶಿಷ್ಯನ ವರ್ತನೆಯು ಭಕ್ತಿಭಾವದಿಂದ ತುಂಬಿ ವಿನಯದಿಂದ ಕೂಡಿರಬೇಕು. ಆದ್ದರಿಂದಲೇ ಪ್ರಸ್ತುತ ಆಗಮವು ಹೇಳುತ್ತದೆ:

> ಸ್ವಗುರೋಃ ಪುರತಃ ಶಿಷ್ಯೋ ನೇತರಾನ್ ಕೀರ್ತಯೇಜ್ಜನಾನ್।
> ಅಸಹ್ಯಭಾಷಣಂ ಚೈವ ನ ವದೇದಿತರೇತರಮ್॥
> ನಾನೃತಂ ನಾಪ್ರಿಯಂ ವಾಕ್ಯಂ ನ ಗುಹ್ಯಂ ಚಾಪಿ ಭಾಷಯೇತ್।
> ನಾಪೃಚ್ಛನ್ನಮುಖೋ ಬ್ರೂಯಾದ್ ಗುರೋರಗ್ರೇ ಕದಾಚನ॥[೨೩]

"ಶಿಷ್ಯನು ತನ್ನ ಗುರುವಿನ ಮುಂದೆ ಬೇರೆ ಯಾವ ವ್ಯಕ್ತಿಯ ಬಗ್ಗೆ ಅನಾವಶ್ಯಕವಾಗಿ ಚರ್ಚಿಸಬಾರದು. ಅದೇ ರೀತಿ ಬೇರೆಯವರೊಂದಿಗೆ ಅಸಹ್ಯವಾದ ಮಾತುಗಳನ್ನು

---

೨೦. ಅದೇ, ಕ್ರಿ.ಪಾ., ೨.೨೮.

೨೧. ಅದೇ, ಕ್ರಿ.ಪಾ., ೨.೨೯.

೨೨. ಅದೇ, ಕ್ರಿ.ಪಾ., ೨.೩೦.

೨೩. ಅದೇ, ೨.೩೮-೩೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಡಬಾರದು. ಸುಳ್ಳನ್ನಾಗಲಿ, ಅಪ್ರಿಯವನ್ನಾಗಲಿ, ಗುಟ್ಟಿನ ಮಾತನ್ನಾಗಲಿ (ಕಿವಿಯೂದುವ ರೀತಿಯಲ್ಲಿ) ಆಡಬಾರದು. ಬಾಯಿಗೆ ಮರೆಮಾಡಿಕೊಳ್ಳದೆ ಎಂದೂ ಗುರುವಿನ ಮುಂದೆ ಮಾತನಾಡಬಾರದು". ಈ ನಿಯಮ ಅತ್ಯಂತ ಮಾರ್ಮಿಕ. ಗುರುವಿನ ದರ್ಶನಕ್ಕೆ ಹೋಗುವುದು ಅನುಗ್ರಹವನ್ನು ಪಡೆಯಲು, ಇತರ ರಾಜಕೀಯ ಮಾಡಲಿಕ್ಕಾಗಿ ಅಲ್ಲ. ಬೇರೆಯವರ ಬಗ್ಗೆ ಇಲ್ಲಸಲ್ಲದ ಮಾತನ್ನು ಹೇಳುವುದು ಬೇಕಾಗಿಲ್ಲ. ಗುರುವಿನ ದರ್ಶನಕ್ಕೆ ಬಂದ ಇತರರೊಂದಿಗೆ ಅಸಹ್ಯವಾದ ಮಾತುಗಳನ್ನಾಡುವುದೂ ಸಲ್ಲದ ವರ್ತನೆ. ಸುಳ್ಳು, ಅಪ್ರಿಯವಾದುದನ್ನು ಎಲ್ಲಾ ಕಡೆ ವರ್ಜಿಸಬೇಕು. ಗುರುವಿನ ಸನ್ನಿಧಿಯಲ್ಲಿ ಅವು ಅತ್ಯಂತ ವರ್ಜ್ಯ. ಏನೋ ಗುಟ್ಟು ಹೇಳಲು ಗುರುವಿನ ಕಿವಿಯಲ್ಲಿ ಪಿಸುಗುಟ್ಟುವ ಧಾರ್ಷ್ಟ್ಯವನ್ನು ಎಂದೂ ವಹಿಸಬಾರದು. ಬಾಯಿಗೆ ಕೈಯನ್ನು ಅಡ್ಡವಿಟ್ಟುಕೊಂಡು ಮಾತನಾಡುವುದು ಅತ್ಯಂತ ಆವಶ್ಯಕ, ಏಕೆಂದರೆ ಹಾಗೆ ಕೈಯಿಂದ ಮರೆಮಾಡದೆ ಮಾತನಾಡಿದರೆ ಶಿಷ್ಯನ ಬಾಯಿಂದ ಜೊಲ್ಲು ಗುರುವಿಗೆ ಸಿಡಿಯುವ ಸಂಭವವಿರುತ್ತದೆ.

ಗುರುವನ್ನು ಸಂಬೋಧಿಸುವಾಗ ಸ್ವಾಮಿ, ಭಟ್ಟಾರಕ, ಆಚಾರ್ಯ, ದೇವ, ಶ್ರೀ ಗುರುವೆ, ಎಂದು ಕರೆಯಬೇಕು. ಬೇರೆ ಯಾವ ಹೆಸರಿನಿಂದಲೂ ಗುರುವನ್ನು ಸಂಬೋಧಿಸಬಾರದು ಎಂದು ವಿಧಿಯಿದೆ. 'ನೀನು' ಎಂಬ ಶಬ್ದವನ್ನು ಎಂದೆಂದೂ ಪ್ರಯೋಗಿಸಬಾರದು.[೨೪]

ಗುರುವಿನ ಅನುಗ್ರಹದಿಂದ ದೊರೆಯುವ ಸತ್ಫಲ

ಗುರುವು ಸರ್ವದೇವಾತ್ಮಕನೂ ಸರ್ವಮಂತ್ರಾತ್ಮಕನೂ ಆದ್ದರಿಂದ ಶಿಷ್ಯನು ಅವನ ಆಜ್ಞೆಯನ್ನು ತಪ್ಪದೆ ಪಾಲಿಸಬೇಕು ಎಂದು ಚಂದ್ರಜ್ಞಾನಾಗಮವು ಸೂಚಿಸುತ್ತದೆ. ಶ್ರೇಯಸ್ಸನ್ನು ಇಚ್ಛಿಸುವವನು ಗುರುವಿನ ಆಜ್ಞೆಯನ್ನು ಮನಸ್ಸಿನಲ್ಲಿ ಕೂಡ ಮೀರಬಾರದು. ಗುರುವಿನ ಆಜ್ಞೆಯನ್ನು ಪಾಲಿಸುವವನು ಜ್ಞಾನವೆಂಬ ಸಂಪತ್ತನ್ನು ಹೊಂದುತ್ತಾನೆ. ಆದ್ದರಿಂದ ನಡೆಯುವಾಗ, ನಿಂತಾಗ, ಮಲಗುವಾಗ, ಊಟಮಾಡುವಾಗ, ಹೀಗೆ ಯಾವ ಯಾವ ಕರ್ಮವನ್ನು ಮಾಡಬೇಕೋ ಅದೆಲ್ಲವನ್ನು ಗುರುವಿನ ಸಮಕ್ಷಮ ಮಾಡುವಾಗ ಗುರುವಿನ ಅನುಮತಿಯನ್ನು ಪಡೆದು ಮಾಡಬೇಕು. ಗುರುವಿನ ಮನೆಯಲ್ಲಿ ಅಥವಾ ಅವನ ಎದುರಿನಲ್ಲಿ ಇಚ್ಛೆಬಂದಂತೆ ಆಸನದ ಮೇಲೆ ಕುಳಿತುಕೊಳ್ಳಬಾರದು. ಏಕೆಂದರೆ ಗುರುವೇ ದೇವರು, ಅವನ ಮನೆಯೇ ದೇವಮಂದಿರ.[೨೫] ಹೀಗೆ ಗುರುವಿನ ಸಮಕ್ಷಮದಲ್ಲಿ ಕಾಯೇನ, ವಾಚಾ, ಮನಸಾ ಶಿಷ್ಯನು ನಡೆದುಕೊಳ್ಳಬೇಕೆಂದು ಹೇಳಿದೆ. ಇದರಿಂದ ಶಿಷ್ಯನ ಸರ್ವಪಾಪವೂ ನಾಶವಾಗುತ್ತದೆ.

---

೨೪. ಅದೇ, ೨.೪೦-೪೧

೨೫. ಅದೇ, ಕ್ರಿ.ಪಾ., ೨.೧೦-೧೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಥೇಹ ವಹ್ನಿಸಂಪರ್ಕಾತ್ ಮಲಂ ತ್ಯಜತಿ ಕಾಂಚನಮ್।
ತಥೈವ ಗುರುಸಂಪರ್ಕಾತ್ ಪಾಪಂ ತ್ಯಜತಿ ಮಾನವಃ॥
ಯಥಾ ಪ್ರಜ್ವಲಿತೋ ವಹ್ನಿರ್ನಿಷ್ಕಾಂ ಕಾಷ್ಠಸ್ಯ ನಿರ್ದಹೇತ್।
ತಥಾಽಯಮಪಿ ಸಂತುಷ್ಟೋ ಗುರುಃ ಪಾಪಂ ಕ್ಷಣಾದ್ದಹೇತ್॥[೨೬]

ಹೇಗೆ ಬೆಂಕಿಯ ಸಂಪರ್ಕದಿಂದ ಚಿನ್ನವು ತನ್ನ ಮಲಿನತೆಯನ್ನು ತ್ಯಜಿಸುತ್ತದೆಯೋ ಹಾಗೆಯೇ ಗುರುವಿನ ಸಂಪರ್ಕದಿಂದ ಶಿಷ್ಯನು ತನ್ನ ಪಾಪವನ್ನು ತ್ಯಜಿಸುತ್ತಾನೆ. ಉರಿಯುವ ಬೆಂಕಿಯು ಕಟ್ಟಿಗೆಯ ಗಟ್ಟಿತನವನ್ನು ನಿಶ್ಶೇಷವಾಗಿ ಸುಡುವಂತೆ ಸಂತುಷ್ಟನಾದ ಗುರುವು ಶಿಷ್ಯನ ಪಾಪವನ್ನು ಕ್ಷಣಮಾತ್ರದಲ್ಲಿ ನಾಶಮಾಡುತ್ತಾನೆ. ಗುರುವು ಬೆಂಕಿಯಿದ್ದಂತೆ ಎಂಬುದು ಇನ್ನೊಂದು ರೀತಿಯಲ್ಲಿ ಸತ್ಯವೆಂಬುದನ್ನು ಚಂದ್ರಜ್ಞಾನಾಗಮವು ಗುರುವಿನ ಕೋಪದಿಂದ ಏನೇನಾಗುತ್ತದೆ ಎಂದು ಹೇಳುವ ಮೂಲಕ ಬಿಂಬಿಸುತ್ತದೆ.

ಮನಸ್ಸಿನಿಂದಾಗಲಿ, ಕೃತಿಯಿಂದಾಗಲಿ, ಮಾತಿನಿಂದಾಗಲಿ ಗುರುವಿಗೆ ಸಿಟ್ಟು ಬರುವಂತೆ ಮಾಡಬಾರದು. ಅವನ ಕ್ರೋಧದಿಂದ ಆಯುಷ್ಯ, ಸಂಪತ್ತು, ಜ್ಞಾನ, ಸತ್ಕ್ರಿಯೆಗಳು ಎಲ್ಲವೂ ಸುಟ್ಟು ಹೋಗುತ್ತವೆ:

ಮನಸಾ ಕರ್ಮಣಾ ವಾಚಾ ಗುರೋಃ ಕ್ರೋಧಂ ನ ಕಾರಯೇತ್।
ತಸ್ಯ ಕ್ರೋಧೇನ ದಹ್ಯಂತೇ ಹ್ಯಾಯುಃ ಶ್ರೀಜ್ಞಾನಸತ್ಕ್ರಿಯಾಃ॥[೨೭]

ಗುರುವಿಗೆ ಕೋಪಬರುವಂತೆ ನಡೆದುಕೊಂಡವನಿಗೆ ಎಲ್ಲಾ ಯಜ್ಞಗಳು, ಯಮ-ನಿಯಮಗಳು ಎಲ್ಲವೂ ನಿಷ್ಫಲವಾಗುವವು. ಹೀಗಿರುವಾಗ ಈ ಬಗ್ಗೆ ವಿಚಾರಮಾಡಬೇಕಾದ್ದಿಲ್ಲ. ಗುರುವಿನ ವಿರುದ್ಧ ಯಾರೂ ಎಂದೂ ಮಾತನಾಡಬಾರದು. ಹಾಗೆ ಮಾಡಿದ್ದೇ ಆದರೆ ನಿಶ್ಚಿತವಾಗಿ ದ್ರೋಹಿಯು ಅತ್ಯಂತ ಘೋರವಾದ ರೌರವ ನರಕದಲ್ಲಿ ಬೀಳುತ್ತಾನೆ.[೨೮] ಹೀಗೆ ಗುರುವಿನ ವಿರುದ್ಧ ಮಾತನಾಡಬಾರದು. ಅವನಿಗೆ ಕೋಪಬರುವಂತೆ ಕಾಯೇನ, ವಾಚಾ, ಮನಸಾ ನಡೆದುಕೊಳ್ಳಬಾರದು. ಗುರುವಿಗೆ ಹಿತವಾದ್ದನ್ನೂ ಪ್ರಿಯವಾದ್ದನ್ನೂ ಮಾಡಬೇಕು. ಎದುರಿಗಿದ್ದರೂ ಇಲ್ಲದಿದ್ದರೂ ಗುರುವಿನ ಕಾರ್ಯವನ್ನು ನೆರವೇರಿಸಬೇಕು.[೨೯]

ಗುರುಪೂಜೆಯೇ ಶಿವನ ಪೂಜೆ. ಗುರುವಿನ ಪ್ರಸಾದವೇ ಆತ್ಮಶುದ್ಧಿಕರ. ಹೀಗೆ ಗುರುಪೂಜೆ, ಗುರುಪ್ರಸಾದಗಳ ಮಹಿಮೆಯನ್ನು ಹೇಳಿದ ಪ್ರಸ್ತುತ ಆಗಮವು ಮುಕ್ತಿಗೆ ಗುರುವೇ ಮೂಲಕಾರಣವೆಂಬುದನ್ನು ಸುಂದರವಾಗಿ ನಿರೂಪಿಸುತ್ತದೆ:

---

೨೬. ಅದೇ, ಕ್ರಿ.ಪಾ., ೨.೧೪-೧೫.

೨೭. ಅದೇ, ೨.೧೬.

೨೮. ಅದೇ, ೨.೧೭-೧೮.

೨೯. ಅದೇ, ೨.೨೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಸ್ಮಾದ್ ಗುರುಮುಖಾತ್ ಕರ್ಮ ಜ್ಞಾನಂ ಚಾಪಿ ವಿಶೇಷತಃ।
ಜ್ಞಾತ್ವಾ ಕರ್ತವ್ಯಮಖಿಲಂ ಭೋಗಮೋಕ್ಷೋಪಲಬ್ಧಯೇ॥
ಗುರುಪ್ರಸಾದಪಾತ್ರಂ ಯಃ ಸ ಹಿ ಮೋಕ್ಷಾಯ ಕಲ್ಪತೇ।
ನ ಮುಕ್ತಿಮೂಲಮನ್ಯದ್ಧಿ ವಿಹಾಯ ಗುರುಸತ್ಕೃಪಾಮ್॥[೩೦]

"ಆದ್ದರಿಂದ ಗುರುಮುಖದಿಂದ ಕರ್ಮ ಮತ್ತು ಜ್ಞಾನಗಳ ಸ್ವರೂಪವನ್ನು ವಿಶೇಷವಾಗಿ ತಿಳಿದು ಎಲ್ಲವನ್ನೂ ಕರ್ತವ್ಯದೃಷ್ಟಿಯಿಂದ ಮಾಡುವುದು ಭೋಗ-ಮೋಕ್ಷಗಳಿಗೆ ಕಾರಣವಾಗುತ್ತದೆ. ಯಾರು ಗುರುವಿನ ಅನುಗ್ರಹಕ್ಕೆ ಪಾತ್ರನಾಗಿರುವನೋ ಅವನು ಮಾತ್ರ ಮೋಕ್ಷಕ್ಕೆ ಅರ್ಹನಾಗುತ್ತಾನೆ. ಗುರುಕೃಪೆಯನ್ನು ಬಿಟ್ಟರೆ ಬೇರೆ ಯಾವುದೂ ಮುಕ್ತಿಗೆ ಕಾರಣವಲ್ಲ." ವೀರಶೈವರ ಸಾಧನ ಮಾರ್ಗ ಜ್ಞಾನ-ಕರ್ಮ-ಭಕ್ತಿ ಸಮುಚ್ಚಯ ಸ್ವರೂಪದ ಮಾರ್ಗ. ಭಕ್ತಿಯಂತೂ ಮೂಲಭೂತವಾಗಿ ಬೇಕು. ಎಲ್ಲಾ ಪೂಜೆ ಮುಂತಾದ ಕರ್ಮಗಳಿಗೆ ಪ್ರೇರಕ. ಈ ಕರ್ಮಗಳಿಗೆ ಜ್ಞಾನವು ಹಿನ್ನೆಲೆಯಾಗಿರಬೇಕು. ಈ ದೃಷ್ಟಿಯಿಂದಲೇ ಪ್ರಸ್ತುತ ಆಗಮವು ಗುರುವಿನಿಂದ ಜ್ಞಾನ-ಕರ್ಮಗಳ ಮರ್ಮವನ್ನರಿತು ಆಚರಿಸಬೇಕು ಎಂದು ಹೇಳಿದೆ. ಭೋಗ ಇಹಲೋಕದಲ್ಲಿ ಸುಖವಾಗಿರುವುದು, ದುಃಖದ ಪರಿಶಮನವಾಗುವುದು. ಮೋಕ್ಷವೆಂದರೆ ಮತ್ತೆ ಹಿಂದಿರುಗಿ ಸಂಸಾರಕ್ಕೆ ಬರದಂತೆ ಪರಮಾತ್ಮನಲ್ಲಿ ಸಮರಸವಾಗಿ ಬೆರೆತು ಒಂದಾಗುವುದು. ಇವೆರಡಕ್ಕೂ ಗುರುವಿನ ಅನುಗ್ರಹ ಬೇಕು.

ಹೀಗೆ ಚಂದ್ರಜ್ಞಾನಾಗಮದಲ್ಲಿ ಗುರುವಿನ ಸ್ವರೂಪ ಮತ್ತು ಮಹತ್ತ್ವಗಳನ್ನು ನಿರೂಪಿಸಲಾಗಿದೆ. ಅದರಲ್ಲಿ ಬರುವ ಮುಖ್ಯಾಂಶಗಳನ್ನು ಹೀಗೆ ಗುರುತಿಸಬಹುದು:

೧. ಅಷ್ಟಾವರಣಗಳಲ್ಲಿ ಗುರುವಿಗೆ ಮೊದಲ ಸ್ಥಾನ. ಲೋಕದ ಅನುಗ್ರಹ ದೃಷ್ಟಿಯಿಂದ ಗುರುರೂಪವಾದುದೇ ಮೊದಲ ಆವರಣ: "ಗುರುರೂಪಂ ಸುರಾಚಾರ್ಯ ಲೋಕಾನುಗ್ರಹಕಾಂಕ್ಷಯಾ ಆದ್ಯಮಾವರಣಂ ಪ್ರೋಕ್ತಮ್."[೩೧] ಗುರುವೇ ಶಿವನು. ಗುರುವಾಗಲಿ ಶಿವನಾಗಲಿ ಜ್ಞಾನಸ್ವರೂಪವೆಂದು ತಿಳಿಯಬೇಕು. ಪರಮಾತ್ಮನೇ ಪ್ರತ್ಯಕ್ಷ ರೂಪದಲ್ಲಿ ಗುರುವು ಎಂದು ಹೇಳುವ ಸಿದ್ಧಾಂತಶಿಖಾಮಣಿಯು ಇದನ್ನೇ ಪ್ರತಿಧ್ವನಿಸುತ್ತದೆ:

ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ।
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ॥[೩೨]

"ಸ್ವಕೀಯ ಮಾಯೆಯಿಂದ ಎಲ್ಲರಿಗೂ ಮಹಾದೇವನು ಅಪ್ರತ್ಯಕ್ಷನು. ಆದರೆ ಭಕ್ತಿಯ ಸಿದ್ಧಿಗಾಗಿ ಅವನೇ ಗುರುರೂಪದಲ್ಲಿ ಪ್ರತ್ಯಕ್ಷನಾಗಿದ್ದಾನೆ." ಆದ್ದರಿಂದ ಗುರುವಿನ ಪೂಜೆಯೇ

---

೩೦. ಅದೇ, ೨.೯೫-೯೬.

೩೧. ಅದೇ, ೨.೯೭.

೩೨. ಸಿದ್ಧಾಂತ ಶಿಖಾಮಣಿ, ೯.೫೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವನಪೂಜೆ, (ಗುರುಪೂಜೈವ ಪೂಜಾಸ್ಯಾಚ್ಛಿವಸ್ಯ ಪರಮಾತ್ಮನಃ) ಎಂಬ ಪ್ರಸ್ತುತ ಆಗಮ ವಾಕ್ಯದಿಂದ ಪ್ರೇರಿತವಾದುದು ಸಿದ್ಧಾಂತಶಿಖಾಮಣಿಯ ಈ ಮಾತು:

ಗುರೋರಭ್ಯರ್ಚನಾದೇವ ಸಾಕ್ಷಾದಭ್ಯರ್ಚಿತಃ ಶಿವಃ।
ತಯೋರ್ನಾಸ್ತಿ ಭಿದಾ ಕಿಂಚಿದ್ ಏಕತ್ವಾತ್ ತತ್ತ್ವರೂಪತಃ॥[೩೩]

"ಗುರುವಿನ ಪೂಜೆಯಿಂದ ಸಾಕ್ಷಾತ್ ಶಿವನೇ ಪೂಜಿಸಲ್ಪಡುತ್ತಾನೆ. ಅವರ ಮಧ್ಯದಲ್ಲಿ ತಾತ್ತ್ವಿಕವಾಗಿ ಯಾವುದೇ ಭೇದವಿಲ್ಲ."

೨. ಭೋಗ-ಮೋಕ್ಷಗಳಿಗೆ ಗುರುವೇ ಕಾರಣನು. ಗುರುವಿನ ಅನುಗ್ರಹದಿಂದ ದೊರೆತ ದೀಕ್ಷೆಯ ಮೂಲಕವೇ ಮೋಕ್ಷಕ್ಕೆ ಬೇಕಾದ ಸಾಧನಮಾರ್ಗವು ತೆರೆದುಕೊಳ್ಳುತ್ತದೆ. ಇದರಿಂದ ದೀಕ್ಷೆಯನ್ನು ಕೊಡುವವನು ಗುರುವೇ ಎಂಬುದು ಸಿದ್ಧವಾಗಿ ಸಿದ್ಧಾಂತಶಿಖಾಮಣಿಯಲ್ಲಿ ದೀಕ್ಷಾಗುರುವಿನ ಸ್ವರೂಪವು ನಿರೂಪಿಸಲ್ಪಟ್ಟಿದೆ:

ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶಬಂಧನಮ್।
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ॥[೩೪]

"ಯಾವುದರಿಂದ ಪರಮಜ್ಞಾನವು ಕೊಡಲ್ಪಡುವುದೋ (ದೀಯತೇ=ದೀ) ಮತ್ತು ಯಾವುದರಿಂದ ಪಾಶಗಳ ಬಂಧನವು ಕ್ಷೀಣಿಸಲ್ಪಡುವುದೋ (ಕ್ಷೀಯತೇ=ಕ್ಷಾ) ಅದೇ ದೀಕ್ಷೆ. ಅದಕ್ಕೆ ಅಧಿಕೃತನಾದವನು ದೀಕ್ಷಾಗುರುವೆಂದು ಪರಿಗಣಿಸಲ್ಪಡುತ್ತಾನೆ." ದೀಕ್ಷೆಯನ್ನು ನೀಡುವ ಗುರುವು ದೀಕ್ಷಾಗುರುವೆನಿಸಿದರೆ ಅದೇ ಗುರು ಶಿಷ್ಯನ ತಪ್ಪುಗಳನ್ನು ತಿದ್ದಿ ಸರಿಯಾದ ಮಾರ್ಗವನ್ನು ತೋರಿಸುತ್ತಾನೆ "ನ ವಿನಾ ಗುರುಣಾ ಸಿದ್ಧ್ಯೈ ಸಾಧನಾನಿ ಭವಂತ್ಯಲಮ್" ಎಂಬ ಈ ಆಗಮದ ವಾಕ್ಯದಲ್ಲಿ ಗುರುವು ಹೇಗೆ ಭಕ್ತನಿಗೆ ಎಲ್ಲಾ ಸಾಧನಗಳ ಸಿದ್ಧಿಗೆ ಮಾರ್ಗದರ್ಶನ ಮಾಡುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಸಿದ್ಧಾಂತ ಶಿಖಾಮಣಿಯು ಶಿಕ್ಷಾಗುರುವಿನ ಸ್ವರೂಪದಲ್ಲಿ ನಿರೂಪಿಸುತ್ತದೆ:

ಬೋಧಕೋಽಯಂ ಸಮಾಖ್ಯಾತೋ ಬೋಧ್ಯಮೇತದಿತಿ ಸ್ಫುಟಮ್।
ಶಿಷ್ಯೇ ನಿಯುಜ್ಯತೇ ಯೇನ ಸ ಶಿಕ್ಷಾಗುರುರುಚ್ಯತೇ॥[೩೫]

"ಗುರುವು ಬೋಧಕನು. ಶಿವತತ್ತ್ವಜ್ಞಾನವು ಬೋಧ್ಯ (ತಿಳಿಯಬೇಕಾದುದು). ಅದನ್ನು ಬೋಧಿಸುವವನಾಗಿ ಗುರುವು ಶಿಷ್ಯನನ್ನು ಸಾಧನ ಮಾರ್ಗದಲ್ಲಿ ಯೋಜಿಸುತ್ತಾನೆ. ಆ ಗುರುವೇ ಶಿಕ್ಷಾಗುರುವು." ಶೈವಸಿದ್ಧಾಂತ ತತ್ತ್ವಗಳನ್ನು ತಿಳಿದ ಗುರುವು ಮೋಕ್ಷಾರ್ಥಿಗೆ ಆ ತತ್ತ್ವಗಳ ಜ್ಞಾನವನ್ನು ಕೊಟ್ಟು ಮುಕ್ತಿಗೆ ಕಾರಣನಾಗುತ್ತಾನೆ ಎಂಬ ಚಂದ್ರಜ್ಞಾನಾಗಮದ ಇಂಗಿತವನ್ನು ಸಿದ್ಧಾಂತಶಿಖಾಮಣಿಯಲ್ಲಿ ಜ್ಞಾನಗುರುವಿನ ಸ್ವರೂಪದಲ್ಲಿ ಕಾಣುತ್ತೇವೆ:

---

೩೩. ಅದೇ, ೬.೫೧.

೩೪. ಅದೇ, ೧೫.೭.

೩೫. ಅದೇ, ೧೫.೧೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಪದೇಷ್ಟೋಪದೇಶಾನಾಂ ಸಂಶಯಚ್ಛೇದಕಾರಕಃ।
ಸಮ್ಯಜ್‌ಜ್ಞಾನಪ್ರದಃ ಸಾಕ್ಷಾದೇಷ ಜ್ಞಾನಗುರುಃ ಸ್ಮೃತಃ॥[೩೬]

"ಉಪದೇಶವನ್ನು ನೀಡುವವನು, ಎಲ್ಲಾ ಸಂಶಯಗಳನ್ನು ನಿವಾರಿಸುವವನು ಮತ್ತು ಸಮ್ಯಗ್‌ಜ್ಞಾನವನ್ನು ನೀಡುವವನು ಅವನೇ ಸಾಕ್ಷಾತ್ ಜ್ಞಾನಗುರು." ಹೀಗೆ ಗುರುವು ದೀಕ್ಷೆ ನೀಡಿ ದೀಕ್ಷಾಗುರುವೂ, ಸಾಧನಮಾರ್ಗದಲ್ಲಿ ಮಾರ್ಗದರ್ಶಕನಾಗಿ ಶಿಕ್ಷಾಗುರುವೂ ಮತ್ತು ಮುಕ್ತಿಗಾಗಿ ಸಮ್ಯಗ್‌ಜ್ಞಾನವನ್ನು ನೀಡಿ ಜ್ಞಾನಗುರುವೂ ಎನಿಸುವನು.

೩. ಗುರುವಿನ ಲಕ್ಷಣವನ್ನು ಕೊಟ್ಟು ಯಾರು ಯೋಗ್ಯಗುರು, ಯಾರು ಹೆಸರಿಗೆ ಮಾತ್ರ ಗುರು, ಈ ವಿವರವನ್ನು ಚಂದ್ರಜ್ಞಾನಾಗಮವು ವಿವರವಾಗಿ ಕೊಡುತ್ತದೆ. ಗುಣವಂತನೂ, ಪರಮಜ್ಞಾನಿಯೂ, ಪರಮಾನಂದ ಅನುಭವವನ್ನು ಮಾಡಿಸುವವನೂ, ಮುಕ್ತಿಪ್ರದನೂ, ಆದವನು ಗುರುವೆಂದು ಸ್ಪಷ್ಟವಾಗಿ ನಿರೂಪಿತವಾಗಿದೆ. ಇದನ್ನೇ ಸಿದ್ಧಾಂತಶಿಖಾಮಣಿಯು ಶಿಕ್ಷಾಗುರುವಿನ ಸ್ವರೂಪ ನಿರೂಪಣೆಯ ಸಂದರ್ಭದಲ್ಲಿ ಹೇಳುತ್ತದೆ:

ದದಾತಿ ಯಃ ಪರಿಜ್ಞಾನಂ ಜಗನ್ಮಾಯಾನಿವರ್ತಕಮ್।
ಅದ್ವೈತವಾಸನೋಪಾಯಂ ತಮಾಚಾರ್ಯವರಂ ವಿದುಃ॥[೩೭]

"ಜಗತ್ತೆಂಬ ಮಾಯೆಯನ್ನು ನಿವಾರಿಸುವ ಸಮ್ಯಜ್‌ಜ್ಞಾನವನ್ನು, ಸ್ವಾತ್ಮಕ್ಕಿಂತ ಭಿನ್ನನಲ್ಲದ ಶಿವನ ಜ್ಞಾನವನ್ನು ನೀಡುವವನೇ ಶ್ರೇಷ್ಠ ಗುರುವು." ಚಂದ್ರಜ್ಞಾನಾಗಮದಲ್ಲಿನ ಗುರುವಿನ ಲಕ್ಷಣದಲ್ಲಿ ಬರುವ ಎಲ್ಲಾ ಅಂಶಗಳೂ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಕೊಟ್ಟ ವಿವರವಾದ ಗುರುಲಕ್ಷಣಗಳಲ್ಲಿ ಅಡಕವಾಗಿವೆ. ವಿಶೇಷವಾಗಿ ಈ ಅಂಶಗಳನ್ನು ನೋಡಬಹುದು: ಶಿವಸಿದ್ಧಾಂತತತ್ತ್ವಜ್ಞ, ಛಿನ್ನಸಂದೇಹವಿಭ್ರಮ, ಸರ್ವತಂತ್ರ ಪ್ರಯೋಗಜ್ಞ, ಕುಲಕ್ರಮಾಗತಾಚಾರ, ಶಿವಧ್ಯಾನ ಪರ, ಶಿವತತ್ತ್ವ ವಿವೇಕಿ, ಲಿಂಗಾಂಗಯೋಗ ತತ್ತ್ವಜ್ಞ, ನಿರೂಢಾದ್ವೈತ ವಾಸನ, ಲಿಂಗಾಂಗ ಸ್ಥಲಭೇದಜ್ಞ, ಇತ್ಯಾದಿ ಲಕ್ಷಣಗಳು[೩೮] ಚಂದ್ರಜ್ಞಾನಾಗಮದಲ್ಲಿ ಬರುವ ಗುರುಲಕ್ಷಣಗಳಿಗೆ ಸಂವಾದಿಯಾಗಿವೆ. ಸೂಕ್ಷ್ಮಾಗಮದಲ್ಲಿ ಗುರುವಿನ ಲಕ್ಷಣವನ್ನು ನೋಡಿ.[೩೯]

೪. ಶಿಷ್ಯನೂ ಯೋಗ್ಯನಾಗಿರಬೇಕು ಎಂಬ ಕಲ್ಪನೆಯಿಂದ ಶಿಷ್ಯನ ಲಕ್ಷಣವನ್ನೂ ಈ ಆಗಮವು ನೀಡುತ್ತದೆ. ಅಹಿಂಸೆ, ದಯೆ, ಎಚ್ಚರಿಕೆ, ದುರಭಿಮಾನವಿಲ್ಲದಿರುವುದು,

---

೩೬. ಅದೇ, ೧೫-೨೧.

೩೭. ಅದೇ, ೧೫.೧೫.

೩೮. ಶ್ರೀ ಸಿದ್ಧಾಂತಶಿಖಾಮಣಿ, ೬.೧-೬; ಚಂದ್ರಜ್ಞಾನಾಗಮ, ಕ್ರಿ.ಪಾ., ೨.೪೮-೫೨.

೩೯. ಸೂಕ್ಷ್ಮಾಗಮ, ಕ್ರಿ.ಪಾ., ೫.೪-೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೃದುತ್ವ, ಪ್ರಿಯವಾಗಿ ಮಾತನಾಡುವುದು, ಶಿವಭಕ್ತಿ ಮುಂತಾದ ಸದ್ಗುಣಗಳಿಂದ ಕೂಡಿದ ಶಿಷ್ಯನು ಮಾತ್ರ ಗುರುವಿನ ಅನುಗ್ರಹಕ್ಕೆ ಯೋಗ್ಯನು. ಅಂತಹ ಶಿಷ್ಯನು ಗುರುವಿನಲ್ಲಿಗೆ ಹೋಗಿ ದರ್ಶನ ಮಾಡುವಾಗ, ಗುರುವು ತನ್ನ ಮನೆಗೆ ಬಂದಾಗ, ಹೇಗೆ ವರ್ತಿಸಬೇಕು, ಹೇಗೆ ಸತ್ಕರಿಸಬೇಕು ಎಂಬುದನ್ನೂ ಪ್ರಸ್ತುತ ಆಗಮವು ಮನೋಹರವಾಗಿ ವರ್ಣಿಸುತ್ತದೆ. ಈ ಎಲ್ಲಾ ವಿವರಗಳು ಗುರು-ಶಿಷ್ಯ ಸಂಬಂಧದ ಚಿತ್ರವನ್ನು ಮನಂಬುಗುವಂತೆ ಮೂಡಿಸುತ್ತವೆ. ಶಿಷ್ಯನಿಗೆ ಗುರುವಿನ ಮಹತ್ತ್ವವನ್ನು ಮನದುಂಬಿಸಿ ಭಕ್ತಿಯಿಂದ ಗುರುಪೂಜೆ, ಸತ್ಕಾರಗಳನ್ನು ಹೇಗೆ ಮಾಡಬೇಕೆಂಬುದನ್ನು ತಿಳಿಸಿ ಹೇಳುತ್ತದೆ. ಸೂಕ್ಷ್ಮಾಗಮದ ಶಿಷ್ಯ ಲಕ್ಷಣದಲ್ಲಿಯೂ ಇವೇ ವಿಚಾರಗಳು ಬರುತ್ತವೆ.[೪೦]

೫. ಕಡೆಯದಾಗಿ ಚಂದ್ರಜ್ಞಾನಾಗಮದಲ್ಲಿ ಗುರುವಿನ ನಿರೂಪಣೆಯಲ್ಲಿ ಬರುವ ಒಂದು ಹೇಳಿಕೆಯ ಬಗ್ಗೆ ವಿಚಾರಮಾಡಬೇಕಾಗಿದೆ. ಅದೆಂದರೆ-

ಗುರುರ್ಗೃಹಸ್ಥ ಏವ ಸ್ಯಾನ್ನ ಕದಾಚಿದ್ಯತಿರ್ಗುರುಃ।
ವಾನಪ್ರಸ್ಥಯತೀನಾಂ ತು ಗುರುತ್ವಂ ನಿಷ್ಫಲಂ ಭವೇತ್॥[೪೧]

"ಗೃಹಸ್ಥನು ಮಾತ್ರ ಗುರುವು. ಯಾವಾಗಲೂ ಸಂನ್ಯಾಸಿಯು ಗುರುವಲ್ಲ. ವಾನಪ್ರಸ್ಥ ಯತಿಗಳ ಗುರುತ್ವವು ನಿಷ್ಫಲ" ಎಂಬುದು. ಗೃಹಸ್ಥ ಎಂದರೆ ಸಾಮಾಜಿಕವಾದ ಜವಾಬ್ದಾರಿ ಇರುವ ವ್ಯಕ್ತಿ ಎಂದರ್ಥ. ಸಾಮಾಜಿಕ ಜವಾಬ್ದಾರಿಯಿರುವ ವ್ಯಕ್ತಿಯು ಮಾತ್ರ ಗುರುವಾಗಲು ಯೋಗ್ಯ ಎಂಬುದು ಈ ಮಾತಿನ ಅರ್ಥ. ಗೃಹಸ್ಥ ಎಂದರೆ ವಿವಾಹಿತನಾಗಿ ಮನೆತನದ ಜವಾಬ್ದಾರಿಯನ್ನು ನಿರ್ವಹಿಸುವವನು ಎಂಬ ಅರ್ಥವಿದೆ. ಈ ಅರ್ಥದಲ್ಲಿ ತೆಗೆದುಕೊಂಡರೆ ಪ್ರಾಚೀನ ಕಾಲದಲ್ಲಿ ವೀರಶೈವ ಗುರುವು ಗೃಹಸ್ಥನಾಗಿದ್ದಿರಬೇಕು, ಅನಂತರ ಯಾವಾಗಲೋ ಭಕ್ತರ ಹಿತಕ್ಕಾಗಿ ತನ್ನನ್ನು ತಾನು ತೊಡಗಿಸಿಕೊಂಡ ಗುರುವು ನೈಷ್ಠಿಕ ಬ್ರಹ್ಮಚಾರಿಯಾಗಿರುವುದು ಯೋಗ್ಯ ಎನ್ನಿಸಿರಬೇಕು. ಆಗ ಈಗಿರುವಂತೆ ಮಠಾಧಿಕಾರಿಯಾದ ಗುರುವು ನೈಷ್ಠಿಕ ಬ್ರಹ್ಮಚಾರಿಯಾಗಿರುವುದು ರೂಢಿಯಲ್ಲಿ ಬಂದಿರಬೇಕು ಎಂದು ಭಾವಿಸಬೇಕಾಗುತ್ತದೆ.

೦

೪೦. ಅದೇ, ೫.೩೧-೩೩,೩೪-೪೧.

೪೧. ಚಂದ್ರಜ್ಞಾನಾಗಮ, ಕ್ರಿ.ಪಾ., ೨.೫೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಲಿಂಗತತ್ತ್ವ ನಿರೂಪಣೆ

-ಡಾ।। ಎಂ. ಶಿವಕುಮಾರ ಸ್ವಾಮಿ

ಅಷ್ಟಾವರಣಗಳಲ್ಲಿ ಲಿಂಗವು ಎರಡನೆ ಆವರಣ. ಲಿಂಗದ ಮೂಲ ಸ್ವರೂಪವೆಂದರೆ ಪರಶಿವಬ್ರಹ್ಮನೇ. ಲಿಂಗಶಬ್ದದ ನಿಷ್ಪತ್ತಿಯಲ್ಲೇ ಈ ಅರ್ಥ ಅಡಗಿದೆ. ಚಂದ್ರಜ್ಞಾನಾಗಮವು ಮೊದಲಿಗೆ ಲಿಂಗಶಬ್ದದ ನಿಷ್ಪತ್ತಿಯನ್ನು ಬೇರೆ ಬೇರೆ ರೀತಿಯಲ್ಲಿ ನೀಡಿ ಲಿಂಗದ ಸ್ವರೂಪ ಮತ್ತು ಮಹಿಮೆಯನ್ನು ನಿರೂಪಿಸುತ್ತದೆ. ಲಿಂಗದ ಸ್ವರೂಪವನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾ ಪ್ರಸ್ತುತ ಆಗಮವು ಅದರ ಮೇಲಿನ ಕೆಳಗಿನ ಭಾಗಗಳನ್ನು ಪರ-ಅಪರ ಬಿಂದು-ನಾದಾತ್ಮಕವೆಂದು ವಿವರಿಸುತ್ತದೆ. ಬಿಂದು-ನಾದಾತ್ಮಕವಾದ ಪರಶಿವ ಲಿಂಗವು ಹೇಗೆ ಶಿವಶಕ್ತ್ಯಾತ್ಮಕವೆಂಬುದನ್ನು ನಿರೂಪಿಸಿ, ಅದೇ ಹೇಗೆ ಚರಾಚರ ಸ್ವರೂಪವಾದ ಜಗತ್ತು ಎಂಬುದನ್ನು ಪ್ರತಿಪಾದಿಸುತ್ತದೆ. ಮುಂದೆ ಬಿಂದು-ನಾದಾತ್ಮಕವಾದ ಅದೇ ಜಗತ್ತಿಗೆ ಕಾರಣವೆಂಬುದನ್ನು ವಿವರಿಸುತ್ತದೆ. ಲಿಂಗವನ್ನು ಮಾತಾಪಿತೃಸ್ವರೂಪವೆಂದು ವರ್ಣಿಸಿ ಅದನ್ನು ಮಾತಾಪಿತೃಸ್ವರೂಪದಲ್ಲಿ ಪೂಜಿಸಬೇಕೆಂದು ಹೇಳುತ್ತದೆ. ಮಹಾಲಿಂಗದ ಸ್ವರೂಪವನ್ನು ವಿವರಿಸಿ ಅದು ಹೇಗೆ ಮೂರು ವಿಧವಾಗಿದೆ, ಮೂರರಲ್ಲಿ ಒಂದೊಂದೂ ಎರಡೆರಡು ಪ್ರಕಾರವಾಗಿ ಹೇಗೆ ಆರು ಲಿಂಗಗಳ ಆವಿರ್ಭಾವವಾಗುತ್ತದೆ ಎಂಬುದು ಪ್ರಸ್ತುತ ಆಗಮದ ಮುಂದಿನ ವಿಷಯ. ಮೂರು ಲಿಂಗಗಳ ಸ್ವರೂಪ, ಆರಾಧನೆ, ಮೂರು ದೀಕ್ಷೆಗಳ ಮೂಲಕ ಮೂರು ಶರೀರಗಳಲ್ಲಿನ ಮೂರು ಮಲಗಳನ್ನು ನಿರ್ಮೂಲನೆಗೊಳಿಸಿ ಮೂರು ಲಿಂಗಗಳನ್ನು ಸ್ಥಾಪಿಸುವ ಪ್ರಕ್ರಿಯೆ ಮತ್ತು ಮೂರು ಲಿಂಗಗಳ ಆರಾಧನೆಯ ಮಹಿಮೆ ಎಂಬ ವಿಷಯ ನಿರೂಪಣೆಯಿಂದ ಲಿಂಗತತ್ತ್ವನಿರೂಪಣೆಯು ಮುಕ್ತಾಯವಾಗುತ್ತದೆ. ಈ ಎಲ್ಲಾ ವಿಷಯಗಳ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಲಿಂಗಶಬ್ದದ ನಿಷ್ಪತ್ತಿ

ಲಿಂಗಶಬ್ದದಲ್ಲಿ 'ಲಿ', 'ಅನುಸ್ವಾರ' ಮತ್ತು 'ಗ' ಎಂದು ಮೂರು ಅಕ್ಷರಗಳಿವೆ. ಅವುಗಳಲ್ಲಿ ಪ್ರತಿ ಅಕ್ಷರವೂ ಅರ್ಥವತ್ತಾಗಿದೆ. 'ಲಿ' ಎಂಬುದು 'ಲೀಯತೇ' ಎಂಬ ಅರ್ಥವನ್ನು ನೀಡಿ, ಜಗತ್ತಿನ ಅಡಗಿದ ಸ್ಥಿತಿಯನ್ನು (ಅಂದರೆ ಲಯವನ್ನು) ಪ್ರತಿನಿಧಿಸುತ್ತದೆ. 'ಅನುಸ್ವಾರ'ವು 'ಅಸ್ತಿ' ಎಂಬ ಅರ್ಥದಲ್ಲಿ ಜಗತ್ತಿನ ಇರುವಿನ ಸ್ಥಿತಿಯನ್ನು ಹೇಳುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಗ' ಎಂಬುದು 'ಗಮ್ಯತೇ' ಎಂಬ ಅರ್ಥದಲ್ಲಿ ಜಗತ್ತಿನ ಉತ್ಪತ್ತಿಯನ್ನು ಪ್ರತಿನಿಧಿಸುತ್ತದೆ. ಹೀಗೆ-

> ಜಠರೇ ಲೀಯತೇ ಸರ್ವಂ ಜಗತ್ ಸ್ಥಾವರಜಂಗಮಮ್।
> ಪುನರುತ್ಪದ್ಯತೇ ಯಸ್ಮಾದ್ ತದ್‌ಬ್ರಹ್ಮ ಲಿಂಗಸಂಜ್ಞಕಮ್॥[೧]

"ಯಾವುದರ ಜಠರದಲ್ಲಿ ಸರ್ವ ಚರಾಚರಾತ್ಮಕವಾದ ಜಗತ್ತು (ಸೃಷ್ಟಿಗೆ ಮೊದಲು) ಲೀನವಾಗಿರುತ್ತದೆಯೋ ಮತ್ತು ಯಾವುದರಿಂದ ಹುಟ್ಟುತ್ತದೆಯೋ ಅದೇ ಲಿಂಗವೆಂದು ಕರೆಯಲ್ಪಡುವ ಪರಶಿವಬ್ರಹ್ಮ." ಪ್ರಸ್ತುತ ಆಗಮವು ಕೊಟ್ಟಿರುವ ಈ ಲಿಂಗಶಬ್ದ ನಿಷ್ಪತ್ತಿಯಲ್ಲಿ ಉಪನಿಷತ್ತುಗಳಲ್ಲಿ ನಿರೂಪಿಸಲ್ಪಟ್ಟ ಪರಶಿವಬ್ರಹ್ಮನ ಸ್ವರೂಪವೇ ಸ್ಪಷ್ಟವಾಗಿ ಕಾಣುತ್ತದೆ. ಉದಾಹರಣೆಗೆ ನೋಡಿ ತೈತ್ತಿರೀಯೋಪನಿಷತ್ತಿನ ಈ ವಾಕ್ಯವನ್ನು- "ಯತೋ ವಾ ಇಮಾನಿ ಭೂತಾನಿ ಜಾಯಂತೇ। ಯೇನ ಜಾತಾನಿ ಜೀವಂತಿ। ಯತ್ಪ್ರಯಂತ್ಯಭಿಸಂವಿಶಂತಿ। ತದ್ವಿಜಿಜ್ಞಾಸಸ್ವ। ತದ್‌ಬ್ರಹ್ಮ।"[೨] (ಯಾವುದರಿಂದ ಈ ಎಲ್ಲಾ ಚರಾಚರಾತ್ಮಕ ವಸ್ತುಗಳು ಹುಟ್ಟುತ್ತವೆಯೋ, ಯಾವುದರಿಂದ ಹುಟ್ಟಿದವು ಜೀವಿಸುತ್ತವೆಯೋ, ಯಾವುದರಲ್ಲಿ ಹೋಗಿ ಮತ್ತೆ ಲೀನವಾಗುತ್ತವೆಯೋ, ಅದನ್ನು ತಿಳಿದುಕೋ; ಅದೇ ಬ್ರಹ್ಮ). ಇದನ್ನೇ ಸಂಕ್ಷೇಪವಾಗಿ ಛಾಂದೋಗ್ಯೋಪನಿಷತ್ತಿನಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್ ಇತಿ ಶಾಂತ ಉಪಾಸೀತ"[೩] (ಇದೆಲ್ಲವೂ ಬ್ರಹ್ಮ; ಅದರಿಂದ ಜಗತ್ತು "ಜ"-ಜಾಯತೇ=ಹುಟ್ಟುತ್ತದೆ, "ಲ"-ಲೀಯತೇ= ಲೀನವಾಗುತ್ತದೆ ಮತ್ತು "ಅನ್"-ಅನತಿ=ಉಸಿರಾಡುತ್ತದೆ ಎಂಬ ಅರ್ಥದಲ್ಲಿ ಅದನ್ನು "ಜಲಾನ್" ಎಂಬ ಸ್ವರೂಪದಲ್ಲಿ ಶಾಂತವಾಗಿ ಉಪಾಸಿಸಬೇಕು) ಎಂದು ಹೇಳಿದೆ.

ಅದರ ಸ್ವರೂಪವನ್ನು ಪ್ರಸ್ತುತ ಆಗಮವು ಹೀಗೆ ವಿವರಿಸುತ್ತದೆ: ಪೂರ್ವಕಾಲದಲ್ಲಿ ಎಲ್ಲೆಡೆ ನೀರು ಮಾತ್ರ ತುಂಬಿಕೊಂಡು ಘೋರ ಗರ್ಜನೆ ಮಾಡುತ್ತಿತ್ತು. ಅದರಲ್ಲಿ ಚರ-ಅಚರ ಎಂಬ ಭೇದದಿಂದ ಕೂಡಿದ ಜಗತ್ತು ಎಲ್ಲವೂ ನಷ್ಟವಾಗಿತ್ತು. ಆ ಸಮುದ್ರದ ಮಧ್ಯದಿಂದ ತೇಜೋಮಯವಾದ ಶಿವಲಿಂಗವು ಪ್ರಕಟವಾಯಿತು. ಆ ಲಿಂಗವು ಜ್ವಾಲೆಯ ಮಾಲೆಯಿಂದ ಸುತ್ತುವರೆಯಲ್ಪಟ್ಟಿತ್ತು. ಅದು ದಿವ್ಯವೂ, ಅರಿವಿಗೆ ಮೀರಿದ್ದೂ, ಎಲ್ಲಾ ವ್ಯಾಧಿಗಳಿಂದ ನಿರ್ಮುಕ್ತವೂ ಆಗಿತ್ತು. ಕಲ್ಪದ ಅಂತ್ಯದಲ್ಲಿ ಎಲ್ಲ ದೇವತೆಗಳೂ ಅದರಲ್ಲೇ ಲೀನವಾದರು.[೪] ಅಂತಹ ಸ್ವರೂಪವುಳ್ಳದ್ದು ಪರಶಿವಲಿಂಗ. ಅದು ಸರ್ವದೇವಾತ್ಮಕ-ವಾಗಿತ್ತು. ಎಲ್ಲಾ ದೇವತೆಗಳು ಅದರಲ್ಲೇ ಅಡಗಿದ್ದರು. ಮರುಕಲ್ಪದ ಆರಂಭದಲ್ಲಿ ಅವರೆಲ್ಲಾ

---

೧. ಚಂದ್ರಜ್ಞಾನಾಗಮ, ಕ್ರಿ.ಪಾ., ೩-೮.

೨. ತೈತ್ತಿರೀಯೋಪನಿಷತ್, ೩.೧.

೩. ಛಾಂದೋಗ್ಯೋಪನಿಷತ್, ೩.೧೪.೧.

೪. ಚಂದ್ರಜ್ಞಾನಾಗಮ, ಕ್ರಿ.ಪಾ. ३.೫-೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮತ್ತೆ ಅದರಿಂದಲೇ ಹೊರಹೊಮ್ಮಿದರು. ಇಲ್ಲಿ ಋಗ್ವೇದ ಮತ್ತು ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಿರುವ 'ಹಿರಣ್ಯಗರ್ಭ'ವನ್ನು ತೇಜೋಮಯ ಲಿಂಗದ ರೂಪದಲ್ಲಿ ನಿರೂಪಿಸಲಾಗಿದೆ. ಋಗ್ವೇದದ ಹಿರಣ್ಯಗರ್ಭಸೂಕ್ತದಲ್ಲಿ ಹಿರಣ್ಯಗರ್ಭವು ನೀರಿನ ಮಧ್ಯದಿಂದ ಉತ್ಪನ್ನವಾಯಿತು ಎಂಬ ವರ್ಣನೆಯು ಹೀಗಿದೆ:

ಆಪೋ ಹ ಯದ್ ಬೃಹತೀರ್ವಿಶ್ವಮಾಯನ್
ಗರ್ಭಂ ದಧಾನಾ ಜನಯಂತೀರಗ್ನಿಮ್।
ತತೋ ದೇವಾನಾಂ ಸಮವರ್ತತಾಸುರ್
ಏಕಃ ಕಸ್ಮೈ ದೇವಾಯ ಹವಿಷಾ ವಿಧೇಮ॥[೫]

"ಅಗ್ನಿ ಮುಂತಾದ ಸಕಲಭೂತಗಳನ್ನು ಉತ್ಪಾದಿಸುವ ಸಲುವಾಗಿ, ಜಗತ್ತನ್ನು ವ್ಯಾಪಿಸಿರುವ ಮತ್ತು ಮಹತ್ತಮವಾದ ಉದಕಗಳು ಎಲ್ಲಾ ದೇವತೆಗಳ ಏಕೈಕ ಪ್ರಾಣರೂಪವಾದ ಹಿರಣ್ಯ ಗರ್ಭವನ್ನು ಧರಿಸಿದ್ದವು. ಆ ಹಿರಣ್ಯ ಗರ್ಭರೂಪ ಪ್ರಜಾಪಿತ ಪರಶಿವನಿಗೆ ಹವಿಸ್ಸನ್ನು ಅರ್ಪಿಸೋಣ." ಇದೇ ಶ್ವೇತಾಶ್ವತರೋಪನಿಷತ್ತಿನ "ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ"[೬] (ಹಿಂದೆ ಹಿರಣ್ಯಗರ್ಭನಿಗೆ ಜನ್ಮವಿತ್ತಿತು) ಎಂಬ ಮಾತಿನಲ್ಲಿ ಅಡಕವಾಗಿದೆ. ಆ ತೇಜೋಮಯ ಲಿಂಗದಲ್ಲಿ ಗಾಯತ್ರೀ ಸಹಿತ ಸರ್ವವೇದಗಳೂ ಲೀನವಾಗಿರುವವು:

ಹೃದಯೇ ಚೈವ ಗಾಯತ್ರೀ ಸರ್ವದೇವೋತ್ತಮೋತ್ತಮಾ।
ಲೀಯಂತೇ ಮೂರ್ಧ್ನಿ ವೈ ವೇದಾಃ ಷಷಡಂಗಪದಕ್ರಮಾಃ॥[೭]

"ಅದರ ಹೃದಯದಲ್ಲಿ ದೇವತೆಗಳಲ್ಲಿ ಶ್ರೇಷ್ಠಳಾದ ಗಾಯತ್ರಿಯು ನೆಲೆಗೊಂಡಿದ್ದಾಳೆ. ಅದರ ಶಿರಸ್ಸಿನಲ್ಲಿ ಆರು ಅಂಗಗಳಿಂದ ಮತ್ತು ಪದಕ್ರಮಪಾಠಪೂರ್ವಕವಾದ ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ ಮತ್ತು ಘನಗಳೆಂಬ ಎಂಟು ಪಾಠಕ್ರಮಗಳಿಂದ ಕೂಡಿದ ವೇದಗಳು ನೆಲೆಗೊಂಡಿವೆ." ಹೀಗೆ ಹೇಳುವ ಮೂಲಕ ಪ್ರಸ್ತುತ ಆಗಮವು ಗಾಯತ್ರೀ ಮಂತ್ರಸಹಿತವಾಗಿ ಎಲ್ಲಾ ವೇದಗಳೂ ಮತ್ತು ವೇದಾಂಗಗಳು ಆ ಮಹಾಲಿಂಗದ ಜ್ಞಾನಸ್ವರೂಪವಾಗಿವೆ ಎಂದು ಪ್ರತಿಪಾದಿಸಿ- ದಂತಾಯಿತು. ಅದೇ ಮಹಾಲಿಂಗವು ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣ:

ಅವ್ಯಕ್ತಂ ಲಿಂಗಮಾಖ್ಯಾತಮನಂತಮಜರಂ ಧ್ರುವಮ್।
ಗುಣತ್ರಯಂ ತದೇವೇಶಃ ಸೃಜತ್ಯವತಿ ಹಂತಿ ಚ॥[೮]

---

೫. ಋಗ್ವೇದ, ೧೦.೧೨೧.೭.

೬. ಶ್ವೇತಾಶ್ವತರೋಪನಿಷತ್ತು, ೩.೪.

೭. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೭.

೮. ಅದೇ, ೩.೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಅದೇ ಲಿಂಗಕ್ಕೆ ಅವ್ಯಕ್ತವೆಂದು ಕರೆಯುತ್ತಾರೆ. ಅದು ಅನಂತ, ಅಜರ ಮತ್ತು ಅವಿಕಾರವಾಗಿದೆ. ಅದೇ ಸತ್ತ್ವ, ರಜಸ್ ಮತ್ತು ತಮಸ್ಸೆಂಬ ಮೂರು ಗುಣಗಳಿಂದ ಕೂಡಿದ ರೂಪವನ್ನು ತಾಳಿ ಜಗತ್ತನ್ನು ಸೃಷ್ಟಿಸುತ್ತದೆ, ರಕ್ಷಿಸುತ್ತದೆ ಮತ್ತು ಸಂಹರಿಸುತ್ತದೆ." ಅದೇ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣವಾದ ಪರಶಿವಬ್ರಹ್ಮನ ಸ್ವರೂಪ.

ಶಿವಲಿಂಗವು ಬಿಂದುನಾದಾತ್ಮಕ:

ಅದೇ ಶಿವಲಿಂಗವನ್ನು ಕೆಳಗಿನ-ಮೇಲಿನ ಎರಡೆರಡು ಭಾಗಗಳ ಘಟಕಗಳಾಗಿರುವ ದೃಷ್ಟಿಯಿಂದ ನಾಲ್ಕು ವಿಧವೆಂದು ವರ್ಣಿಸಲಾಗಿದೆ:

> **ತದೇವ ಶಿವಲಿಂಗಂ ಹಿ ತಲ್ಲಿಂಗಂ ತು ಚತುರ್ವಿಧಮ್।**
> **ಪರಬಿಂದುಃ ಪರೋ ನಾದಶ್ಚಾಪರೌ ಬಿಂದು-ನಾದಕೌ॥[೯]**

"ಅದೇ ಪರಬ್ರಹ್ಮಲಿಂಗವೇ ಶಿವಲಿಂಗ. ಅದು ಪರಬಿಂದು, ಪರನಾದ, ಅಪರಬಿಂದು ಮತ್ತು ಅಪರನಾದವೆಂದು ನಾಲ್ಕು ವಿಧ." ಅದರ ವಿವರಣೆ ಹೀಗಿದೆ:

> **ಉಪರ್ಯಧೋಭಾಗನಿಷ್ಠಾಶ್ಚತ್ವಾರೋಽಪಿ ಸುರಾರ್ಚಿತ॥**
> **ಅಧಃ ಸ್ಯಾದಪರೋ ಬಿಂದುಸ್ತದೂರ್ಧ್ವಮಪರೋ ಧ್ವನಿಃ।**
> **ತದೂರ್ಧ್ವಂ ಪರಬಿಂದುಃ ಸ್ಯಾತ್ ಪರನಾದಸ್ತದೂರ್ಧ್ವಗಃ॥**
> **ಪ್ರಣವೋ ವೇದಿರಸ್ಯಾಯಂ ನಾದೋ ಲಿಂಗಾಕೃತಿರ್ಮುಖೇ।**
> **ಬಿಂದು-ನಾದಮಯೇ ಲಿಂಗೇ ನಿತ್ಯಂ ಸನ್ನಿಹಿತಃ ಶಿವಃ॥[೧೦]**

"ಈ ನಾಲ್ಕು ವಿಧ ಭಾಗಗಳು ಲಿಂಗದ ಮೇಲಿನ ಹಾಗೂ ಕೆಳಗಿನ ಅಂಶಗಳಿಗೆ ಸಂಬಂಧಿಸಿವೆ. ಅತ್ಯಂತ ಕೆಳಗಿನದು ಅಪರಬಿಂದು, ಅದಕ್ಕಿಂತ ಮೇಲಿನದು ಅಪರನಾದ, ಅದಕ್ಕೂ ಮೇಲಿನ ಭಾಗವು ಪರಬಿಂದು ಮತ್ತು ಅತ್ಯಂತ ಮೇಲಿನದು ಪರನಾದ. ಪ್ರಣವ ಅಂದರೆ ಓಂಕಾರವು ಅದರ ವೇದಿಕೆ (ಆಧಾರ), ಅದರ ಮೇಲೆ ನಾದವೇ ಲಿಂಗಾಕಾರವನ್ನು ತಾಳಿದೆ. ಹೀಗೆ ಬಿಂದು-ನಾದಾತ್ಮಕವಾದ ಲಿಂಗದಲ್ಲಿ ಸರ್ವದಾ ಶಿವನು ನೆಲೆಸಿದ್ದಾನೆ." ಜಗತ್ತಿನ ಸೃಷ್ಟಿಗೆ ಸಂಬಂಧಿಸಿದಂತೆ 'ಬಿಂದು'ವೆಂದರೆ ಸೃಷ್ಟಿಗೆ ಉಪಾದಾನ ಕಾರಣವಾದುದು. ಪರಬಿಂದುವೆಂದರೆ ಶುದ್ಧಸೃಷ್ಟಿಗೆ ಉಪಾದಾನ ಕಾರಣ. ಅಪರಬಿಂದುವೆಂದರೆ ಅಶುದ್ಧಸೃಷ್ಟಿಯೆಂದು ಕರೆಯಲಾಗುವ ಇತರ ಜಗತ್ತಿನ ಸೃಷ್ಟಿಗೆ ಉಪಾದಾನ ಕಾರಣ. ಎರಡೂ ಕೂಡ ಪರಮಾತ್ಮನ ಶಕ್ತಿಯ ರೂಪಗಳೇ. ಪರಮಾಯಾಶಕ್ತಿಯು ಪರಬಿಂದು. ಅದರ ಪರಿಣಾಮಗಳೇ ಶಕ್ತಿ-ಸದಾಶಿವ-ಈಶ್ವರ- ಶುದ್ಧವಿದ್ಯಾ ಎಂಬ ತತ್ತ್ವಗಳು. ಅಪರ ಬಿಂದುವೆಂದರೆ ತ್ರಿಗುಣಾತ್ಮಕವಾದ ಪ್ರಕೃತಿ ಶಕ್ತಿರೂಪದ ಉಪಾದಾನ ಕಾರಣ.

---

೯. ಅದೇ, ೩.೧೦.

೧೦. ಅದೇ, ೨.೧೦-೧೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ನಾದ'ವೆಂದರೆ ಜ್ಞಾನಶಕ್ತಿ. ಶುದ್ಧಸೃಷ್ಟಿಯಲ್ಲಿ ಅದು ಶುದ್ಧವಿದ್ಯಾರೂಪದಲ್ಲಿದೆ. ಅದಕ್ಕೆ ಪರನಾದ ಎಂದು ಹೆಸರು. ಪರಿಮಿತಜ್ಞಾನಶಕ್ತಿಯಾಗಿ ಜೀವಾತ್ಮನಲ್ಲಿರುವುದು ಅಪರ ನಾದ. ಮೂಲತಃ ಅಪರ ಬಿಂದು, ಅಪರನಾದ, ಪರಬಿಂದು ಮತ್ತು ಪರನಾದಗಳು ಕ್ರಮವಾಗಿ ಕೆಳಗಿನಿಂದ ಮೇಲಕ್ಕೆ ಶಿವಲಿಂಗದ ನಾಲ್ಕು ಭಾಗಗಳಾಗಿವೆ. 'ಬಿಂದು'ವನ್ನೇ ಮುಂದೆ ಪ್ರಣವ (ಓಂಕಾರ) ರೂಪದ ಲಿಂಗಪೀಠಿಕೆಯಾಗಿ ವರ್ಣಿಸಲಾಗಿದೆ. ಮೇಲಿನ ಲಿಂಗಾಕೃತಿಯೇ ನಾದ. ಹೀಗೆ ಬಿಂದು-ನಾದಗಳ ಸಮಾವೇಶವೇ ಲಿಂಗ. ಅದರಲ್ಲಿ ಪರಶಿವನು ಸದಾ ಸನ್ನಿಹಿತ. ಅಂದರೆ ಅದೇ ಪರಶಿವನು. ಶಿವನು ಅದರಲ್ಲಿ ಇರುತ್ತಾನೆ ಎಂಬುದು ಕೇವಲ ಔಪಚಾರಿಕ ಪ್ರಯೋಗ.

ಮೇಲೆ ಕೊಟ್ಟಿರುವ ಲಿಂಗಶಬ್ದ ನಿರ್ವಚನವು ಸೂಕ್ಷ್ಮಾಗಮದಲ್ಲಿ ಕೊಟ್ಟ ನಿರ್ವಚನಕ್ಕೆ ಸಂವಾದಿಯಾಗಿದೆ:

ಲಕಾರೋ ಲಯಬುದ್ಧಿಸ್ಥೋ ಬಿಂದುನಾ ಸ್ಥಿತಿರುಚ್ಯತೇ।
ಗಕಾರಾತ್‌ಸೃಷ್ಟಿರಿತ್ಯುಕ್ತಾ ಲಿಂಗಂ ಸೃಷ್ಟ್ಯಾದಿಕಾರಣಮ್॥೧೧

"ಲಿಂಗ ಶಬ್ದದಲ್ಲಿನ ಲಕಾರವು ಲಯವನ್ನು, ಅನುಸ್ವಾರವು ಸ್ಥಿತಿಯನ್ನು ಮತ್ತು ಗಕಾರವು ಸೃಷ್ಟಿಯನ್ನು ಸಂಕೇತಿಸುತ್ತವೆ. ಹೀಗೆ ಲಿಂಗವು ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣ." ಲಿಂಗಶಬ್ದದ ನಿಷ್ಪತ್ತಿಯನ್ನು ಮತ್ತೂಷ್ಟು ಬಂಧುರಗೊಳಿಸುವುದಕ್ಕಾಗಿ ಬಿಂದು-ನಾದ ಎಂಬ ಸೃಷ್ಟಿಕಾರ್ಯಸಂಬದ್ಧವಾದ ಪರಿಕಲ್ಪನೆಗಳನ್ನು ಚಂದ್ರಜ್ಞಾನಾಗಮವು ಲಿಂಗಪರಿಕಲ್ಪನೆ-ಯೊಂದಿಗೆ ಜೋಡಿಸುತ್ತದೆ. ಅದರಿಂದ ಹೊಮ್ಮುವ ಅಂಶವೆಂದರೆ ಜಗತ್ತೇ ಬಿಂದು-ನಾದಾತ್ಮಕ ಎಂಬುದು. ಅದರ ವಿವರಣೆ ಮುಂದೆ ಬಂದಿದೆ.

ಜಗತ್ತೂ ಬಿಂದು-ನಾದಾತ್ಮಕ:

ಬಿಂದುನಾದಾತ್ಮಕಂ ಸರ್ವಂ ಜಗತ್ ಸ್ಥಾವರಜಂಗಮಮ್।
ಬಿಂದುಃ ಶಕ್ತಿಃ ಶಿವೋ ನಾದಃ ಶಿವಶಕ್ತ್ಯಾತ್ಮಕಂ ಜಗತ್॥
ನಾದಾಧಾರಮಯಂ ಬಿಂದುರ್ಬಿಂದ್ವಾಧಾರಮಿದಂ ಜಗತ್।
ಜಗದಾಧಾರಭೂತೌ ಹಿ ಬಿಂದುನಾದೌ ವ್ಯವಸ್ಥಿತೌ॥
ಬಿಂದುನಾದಮಯಂ ಸರ್ವಂ ಸಕಲೀಕರಣಂ ಭವೇತ್।
ಸಕಲೀಕರಣಾಜ್ಜನ್ಮ ಜಗತ್ ಪ್ರಾಪ್ನೋತ್ಯಸಂಶಯಮ್॥೧೨

"ಚರಾಚರ ವಸ್ತುಗಳನ್ನೊಳಗೊಂಡ ಈ ಎಲ್ಲಾ ಜಗತ್ತು ಬಿಂದು-ನಾದಾತ್ಮಕವಾಗಿದೆ. ಇಲ್ಲಿ ಶಕ್ತಿಯೇ ಬಿಂದು, ಶಿವನೇ ನಾದ. ಹೀಗೆ ಜಗತ್ತು ಶಿವ-ಶಕ್ತಿಯರಿಂದ ಕೂಡಿದ್ದು,

---

೧೧. ಸೂಕ್ಷ್ಮಾಗಮ, ೬.೩

೧೨. ಚಂದ್ರಜ್ಞಾನಾಗಮ, ಕ್ರಿ.ಪಾ., ೧೩.೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಬಿಂದುವು ನಾದಕ್ಕೆ ಆಧಾರವಾಗಿದೆ. ಜಗತ್ತು ಬಿಂದುವನ್ನು ಆಧರಿಸಿದೆ. ಬಿಂದು-ನಾದಗಳು ಜಗತ್ತಿನ ಆಧಾರಗಳಾಗಿ ನಿಯಮಿತವಾಗಿವೆ. ಬಿಂದು-ನಾದಮಯ-ವಾದುದು ಎಲ್ಲವೂ 'ಸಕಲೀಕರಣ'ವನ್ನು ಹೊಂದುತ್ತದೆ. ಸಕಲೀಕರಣದಿಂದ ಜಗತ್ತು ನಿಃಸಂಶಯವಾಗಿ ಜನ್ಮತಾಳುತ್ತದೆ." ಸಕಲೀಕರಣವೆಂದರೆ ಬೇರೆ ಬೇರೆ ಮಂತ್ರಗಳ ಮೂಲಕ ಸಾಧಕನು ತನ್ನ ದೇಹವನ್ನು ವಿದ್ಯಾಮಯವಾಗಿ ಮಾಡಿಕೊಳ್ಳುವುದು. ಸಕಲೀಕರಣದ ಸ್ವರೂಪ: "ಹೃದಯಾದಿಕರಾಂತೇಷು ಕನಿಷ್ಠಾದ್ಯಂಗುಲೀಷು ಚ। ಹೃದಾದಿಮಂತ್ರವಿನ್ಯಾಸಃ ಸಕಲೀಕರಣಂ ಮತಮ್॥" (ಸೋಮಶಂಭು ಪದ್ಧತಿ, ಶ್ಲೋ.೧೪೫)- ಹೃದಯದಿಂದ ಕರದವರೆಗೆ ಮತ್ತು ಕನಿಷ್ಠ ಬೆರಳಿನಿಂದ ಎಲ್ಲಾ ಬೆರಳುಗಳಲ್ಲಿ ಹೃದಯಾದಿ ಮಂತ್ರಗಳ ವಿನ್ಯಾಸಕ್ಕೆ ಸಕಲೀಕರಣವೆಂದು ಹೆಸರು. ಅಂಗನ್ಯಾಸ, ದೇಹನ್ಯಾಸ, ಕರನ್ಯಾಸಗಳ ಮೂಲಕ ಈ ಸಕಲೀಕರಣ ಪ್ರಕ್ರಿಯೆ ನಡೆಯಬೇಕು. ಇದೇ ಪ್ರಕ್ರಿಯೆಯು ಜಗತ್ತಿನ ಹುಟ್ಟಿಗೆ ಮೂಲವಾಗಿದೆ. ವಿಶ್ವಸೃಷ್ಟಿಯಲ್ಲಿ ನಾದ-ಬಿಂದುಗಳ ಸಮಾವೇಶದಿಂದ ಈ ಪ್ರಕ್ರಿಯೆ ನಡೆದು ಪ್ರಪಂಚದ ಉತ್ಪತ್ತಿಯಾಗುವುದು.

ಹೀಗೆ ಬಿಂದುರೂಪ ಶಕ್ತಿ ಮತ್ತು ನಾದರೂಪ ಶಿವ, ಇವರ ಸಮಾವೇಶದಿಂದ ಜಗತ್ತಿನ ಸೃಷ್ಟಿಯಾಗುತ್ತದೆ ಎಂದು ಚಂದ್ರಜ್ಞಾನಾಗಮವು ಹೇಳುತ್ತದೆ. ಇದೇ ವಿಚಾರವನ್ನು ಸೂಕ್ಷ್ಮಾಗಮವು ಬೇರೊಂದು ರೀತಿಯಲ್ಲಿ ನಿರೂಪಿಸಿ ಲಿಂಗವನ್ನು ನಾದ-ಬಿಂದು-ಕಲಾತ್ಮಕವೆಂದು ವರ್ಣಿಸುತ್ತದೆ:

ನಾದರೂಪಃ ಶಿವಃ ಸಾಕ್ಷಾತ್ ಲಿಂಗಮಿತ್ಯಭಿಧೀಯತೇ।
ತತ್ಪೀಠಿಕಾ ಮಹಾಶಕ್ತಿಃ ಸಾ ಚ ವೈ ಬಿಂದುರೂಪಿಣೀ॥
ತಯೋಃ ಸಮ್ಮೇಲನಾದ್ದೇವಿ ಕಲಾ ತತ್ರ ಪ್ರತಿಷ್ಠಿತಾ।
ಸಾ ಕಲಾ ಪರಮಾ ಸೂಕ್ಷ್ಮಾ ವ್ಯಾಪ್ತಾ ಸರ್ವತ್ರ ಸರ್ವದಾ॥
ತಸ್ಮಾಲ್ಲಿಂಗಮಿತಿ ಖ್ಯಾತಂ ನಾದಬಿಂದುಕಲಾತ್ಮಕಮ್॥[13]

"ನಾದರೂಪ ಶಿವನೇ ಲಿಂಗ, ಬಿಂದುರೂಪ ಮಹಾಶಕ್ತಿಯೇ ಪೀಠ, ಇವೆರಡರ ಮಿಲನದಿಂದ ಕಲೆಯ ಉದಯವಾಗುತ್ತದೆ. ಆ ಕಲೆಯು ಅತ್ಯಂತ ಸೂಕ್ಷ್ಮರೂಪದಲ್ಲಿ ಎಲ್ಲೆಲ್ಲಿಯೂ ಯಾವಾಗಲೂ ವ್ಯಾಪಿಸಿರುತ್ತದೆ. ಆದ್ದರಿಂದ ಲಿಂಗವು ನಾದಬಿಂದು ಕಲಾತ್ಮಕವೆಂದು ಪ್ರಸಿದ್ಧವಾಗಿದೆ." ಆ ಲಿಂಗವೇ ಜಗತ್ಕಾರಣ. ಆದ್ದರಿಂದ ಜನ್ಮನಿವೃತ್ತಿಗಾಗಿ, ಅಂದರೆ, ಸಂಸಾರದಿಂದ ಮುಕ್ತಿಯನ್ನು ಪಡೆಯಲು ಜಗತ್ಕಾರಣವಾದ ಲಿಂಗವನ್ನೇ ಪೂಜಿಸಬೇಕು:

ಬಿಂದುನಾದಾತ್ಮಕಂ ಲಿಂಗಂ ಜಗತ್ಕಾರಣಮುಚ್ಯತೇ।
ತಸ್ಮಾಜ್ಜನ್ಮನಿವೃತ್ತ್ಯರ್ಥಂ ಶಿವಲಿಂಗಂ ಪ್ರಪೂಜಯೇತ್॥[14]

---

೧೩. ಸೂಕ್ಷ್ಮಾಗಮ, ೬.೩-೪.

೧೪. ಚಂದ್ರಜ್ಞಾನಾಗಮ, ಕ್ರಿಪಾ., ೩-೧೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಬಿಂದು-ನಾದಗಳ ಸ್ವರೂಪವಾದ ಲಿಂಗವು ಜಗತ್ತಿನ ಕಾರಣವೆಂದು ಹೇಳಲ್ಪಡುತ್ತದೆ. ಆದ್ದರಿಂದ ಜನ್ಮದಿಂದ ಮುಕ್ತಿಯನ್ನು ಹೊಂದಲು ಶಿವಲಿಂಗವನ್ನು ಪೂಜಿಸಬೇಕು." ಜಗತ್ತಿನ ತಂದೆ-ತಾಯಿಗಳ ಸ್ವರೂಪವಾದ ಲಿಂಗವನ್ನು ಪೂಜಿಸಿದರೆ ಮುಕ್ತಿ ದೊರೆಯುತ್ತದೆ.

ಲಿಂಗವು ಮಾತಾಪಿತೃ ಸ್ವರೂಪವಾಗಿದೆ:

ಮಾತಾ ದೇವೀ ಬಿಂದುರೂಪಾ ನಾದರೂಪಃ ಶಿವಃ ಪಿತಾ।
ಪಿತೃಭ್ಯಾಂ ದತ್ತಮೈಶ್ವರ್ಯಂ ಯಥಾಭೋಗಾಯ ಕಲ್ಪತೇ॥
ತಯೋರೈಶ್ವರ್ಯಲಾಭಾರ್ಥಂ ಶಿವಲಿಂಗಂ ಪ್ರಪೂಜಯೇತ್॥
ಸಾ ದೇವೀ ಜಗತಾಂ ಮಾತಾ ಸ ಶಿವೋ ಜಗತಃ ಪಿತಾ।
ಪಿತ್ರೋಃ ಶುಶ್ರೂಷಕೇ ನಿತ್ಯಂ ಕೃಪಾಧಿಕ್ಯಂ ಹಿ ವರ್ಧತೇ॥
ಕೃಪಯಾಽಂತರ್ಗತೈಶ್ವರ್ಯಂ ಪೂಜಕಸ್ಯ ದದಾತಿ ಹಿ॥
ತಸ್ಮಾದಂತರ್ಗತಾನಂದಲಾಭಾರ್ಥಂ ಮುನಿಪುಂಗವ।
ಪಿತೃಮಾತೃಸ್ವರೂಪಂ ಹಿ ಶಿವಲಿಂಗಂ ಪ್ರಪೂಜಯೇತ್॥[೧೫]

"ಬಿಂದುಸ್ವರೂಪಳಾದ ದೇವಿಯೇ (ಶಕ್ತಿಯೇ) ಮಾತೆ; ನಾದರೂಪನಾದ ಶಿವನೇ ತಂದೆ. ಹೇಗೆ ತಂದೆ-ತಾಯಿಗಳಿಂದ ಕೊಡಲ್ಪಟ್ಟ ಐಶ್ವರ್ಯ ಈ ಲೋಕದಲ್ಲಿ ಭೋಗಕ್ಕೆ ಸಾಧನವಾಗುತ್ತದೆಯೋ ಹಾಗೆಯೇ ಅವರ (ಅಂದರೆ ಶಿವ-ಶಕ್ತಿಯರ) ಐಶ್ವರ್ಯವನ್ನು ಪಡೆಯಲು ಶಿವಲಿಂಗವನ್ನೇ ಪೂಜಿಸಬೇಕು. ಆ ದೇವಿಯು ಜಗತ್ತುಗಳ ತಾಯಿ ಮತ್ತು ಶಿವನು ಜಗತ್ತಿನ ತಂದೆ. ಆ ತಂದೆ-ತಾಯಿಗಳ ಸೇವೆ ಮಾಡುವವರಿಗೆ ಅವರ ಕೃಪೆಯು ಅಧಿಕವಾಗಿ ಹೆಚ್ಚಾಗುತ್ತದೆ. ಅವರು ಕೃಪೆಯಿಂದ ಆಂತರಿಕವಾದ ಐಶ್ವರ್ಯವನ್ನು ಪೂಜಿಸುವವನಿಗೆ ನೀಡುತ್ತಾರೆ. ಆದ್ದರಿಂದ ಒಳಗಿನ ಆನಂದವನ್ನು ಪಡೆಯಲು ಮಾತಾಪಿತೃ ಸ್ವರೂಪಿಯಾದ ಲಿಂಗವನ್ನು ಪೂಜಿಸಬೇಕು."

ಇದೊಂದು ವಿಶಿಷ್ಟವಾದ ಪರಿಕಲ್ಪನೆ. ಜಗತ್ತಿನ ತಾಯಿ-ತಂದೆಯರಾದ ಶಕ್ತಿ-ಶಿವರ ಸ್ವರೂಪವೇ ಲಿಂಗ. ಅದೇ ಜಗದ್ರೂಪದಲ್ಲಿ ಅಭಿವ್ಯಕ್ತವಾಗಿದೆ. ಈ ಪರಿಕಲ್ಪನೆಯನ್ನು ಶ್ರೀ ಸಿದ್ಧಾಂತಶಿಖಾಮಣಿ ಈ ರೀತಿಯಲ್ಲಿ ಬಿಂಬಿಸುತ್ತದೆ:

ಪೀಠಿಕಾ ಪರಮಾ ಶಕ್ತಿರ್ಲಿಂಗಂ ಸಾಕ್ಷಾತ್ ಪರಃ ಶಿವಃ।
ಶಿವಶಕ್ತಿಸಮಾಯೋಗಂ ವಿಶ್ವಂ ಲಿಂಗಂ ತದುಚ್ಯತೇ॥[೧೬]

"ಸರ್ವೋತ್ಕೃಷ್ಟಳಾದ ಶಕ್ತಿಯು (ಅಂದರೆ ಕ್ರಿಯಾಶಕ್ತಿಯು) ಪೀಠ ಮತ್ತು ಸಾಕ್ಷಾತ್ ಪರಶಿವನು (ಅಂದರೆ ಜ್ಞಾನಶಕ್ತ್ಯಾತ್ಮಕನಾದ ಪರಶಿವನು) ಲಿಂಗ. ಶಿವ-ಶಕ್ತಿಯರ ಸಮಾಯೋಗವುಳ್ಳ

---

೧೫. ಅದೇ, ೩.೧೭-೧೯.

೧೬. ಶ್ರೀ ಸಿದ್ಧಾಂತಶಿಖಾಮಣಿ, ೧೧.೩೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಲಿಂಗವೇ ಸಕಲ ಜಗತ್ತಿನ ಸ್ವರೂಪ." ಇದಿಷ್ಟು ಲಿಂಗದ ಸ್ವರೂಪ. ಚಂದ್ರಜ್ಞಾನಾಗಮವು ಲಿಂಗದ ವಿಶಿಷ್ಟ ಸ್ವರೂಪವನ್ನು ಹೀಗೆ ನಿರೂಪಿಸಿ, ಅದನ್ನೇ ಮುಂದುವರೆಸಿ ಮಹಾಲಿಂಗದ ಸ್ವರೂಪವನ್ನೂ, ಅದು ಮೂರಾದುದನ್ನೂ ಮತ್ತೆ ಅದೇ ಆರಾದುದನ್ನು ವಿವರಿಸುತ್ತದೆ.

ಮಹಾಲಿಂಗದ ಸ್ವರೂಪ ಮತ್ತು ಭೇದಗಳು:

ಮಹಾಲಿಂಗದ ಸ್ವರೂಪವನ್ನು ಪ್ರಸ್ತುತ ಆಗಮವು ಹೀಗೆ ವರ್ಣಿಸುತ್ತದೆ:

ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್।
ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರಮಗೋಚರಮ್॥
ವಚಸಾಮಾತ್ಮಸಂವೇದ್ಯಂ ತನ್ಮಹಾಲಿಂಗಮುಚ್ಯತೇ॥
ಋತಂ ಸತ್ಯಂ ಪರಂ ಬ್ರಹ್ಮ ಸಚ್ಚಿದಾನಂದಲಕ್ಷಣಮ್।
ಅನನ್ಯಪರಮಂ ಬ್ರಹ್ಮ ತದತೋ ಧ್ಯೇಯಮಾಸ್ತಿಕೈಃ॥[೧೭]

"ಯಾವುದು ನಿಷ್ಕಲ, ಕ್ರಿಯಾರಹಿತ, ಶಾಂತ, ಅನಿಂದ್ಯ ಮತ್ತು ನಿರಂಜನ ಸ್ವರೂಪವಾಗಿದೆಯೋ, ಎಲ್ಲಾ ಭೇದಗಳು ಸಮಾಪ್ತವಾಗಿ ಯಾವುದು ಕೇವಲ 'ಸತ್ತಾ' (ಇರುವಿಕೆ) ಸ್ವರೂಪದಲ್ಲಿದೆಯೋ, ಯಾವುದು ಅಗೋಚರವೋ, ಯಾವುದು ಮಾತಿಗೆ ಪಕ್ಕಾಗದೆ ಕೇವಲ ಆತ್ಮಸಂವೇದ್ಯವೋ, ಅದೇ ಮಹಾಲಿಂಗವೆಂದು ಕರೆಯಲ್ಪಡುವುದು. ಅದೇ ಬ್ರಹ್ಮ, ಋತ ಮತ್ತು ಸತ್ಯ, ಸತ್-ಚಿತ್-ಆನಂದ ಸ್ವರೂಪ. ಅದಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ. ಆದ್ದರಿಂದ ಅದೇ ಎಲ್ಲಾ ಆಸ್ತಿಕರಿಗೆ ಧ್ಯೇಯವಾದ ಪರವಸ್ತು." ನಿಷ್ಕಲತ್ವ, ನಿಷ್ಕ್ರಿಯತ್ವ, ಶಾಂತತ್ವ, ನಿರವದ್ಯತ್ವ ಮತ್ತು ನಿರಂಜನತ್ವಗಳು ಆ ಮಹಾಲಿಂಗದ ಮೂಲಸ್ವರೂಪವನ್ನು ಪ್ರತಿನಿಧಿಸುತ್ತವೆ. ಅದರಲ್ಲಿ ಮೂಲತಃ ಯಾವ ಭೇದವೂ ಇಲ್ಲ. ಋತ ಮುಂತಾದುವೂ ಅದೇ ಮಹಾಲಿಂಗ. ಭೇದರಹಿತವಾದ ಆ ಲಿಂಗವೇ ಸಾಧಕರ ಉಪಾಸನೆಗಾಗಿ ಸ್ವಮಾಯೆಯಿಂದ ಭೇದವನ್ನು ತಾಳಿತು. ಅದನ್ನೇ ಪ್ರಸ್ತುತ ಆಗಮವು ನಿರೂಪಿಸುತ್ತದೆ:

ಮಹಾಲಿಂಗಂ ತ್ರಿಧಾ ಜಾತಂ ಸುಜನಾನುಜಿಘೃಕ್ಷಯಾ।
ಪ್ರಥಮಂ ಭಾವಲಿಂಗಂ ತು ದ್ವಿತೀಯಂ ಪ್ರಾಣಲಿಂಗಕಮ್॥
ತೃತೀಯಮಿಷ್ಟಲಿಂಗಂ ಸ್ಯಾದಿತ್ಯೇವಂ ತ್ರಿವಿಧಂ ಮತಮ್॥[೧೮]

"ಆ ಮಹಾಲಿಂಗವು ಸುಜನರ ಅನುಗ್ರಹಕ್ಕಾಗಿ ಮೂರು ವಿಧವಾಯಿತು. ಮೊದಲನೆಯದು ಭಾವಲಿಂಗ, ಎರಡನೆಯದು ಪ್ರಾಣಲಿಂಗ ಮತ್ತು ಮೂರನೆಯದು ಇಷ್ಟಲಿಂಗ. ಹೀಗೆ ಮಹಾಲಿಂಗವು ಮೂರು ವಿಧವಾಗಿದೆ." ಹೀಗೆ ಮೂರು ಲಿಂಗಗಳ ವಿಭಾಗವನ್ನು ಮೂಲತಃ ಚಂದ್ರಜ್ಞಾನಾಗಮ ಮತ್ತು ಇತರ ಆಗಮಗಳಲ್ಲಿ ಕಾಣಬಹುದು.

---

೧೭. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೨೦-೨೧.

೧೮. ಅದೇ, ೩.೨೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂಕ್ಷ್ಮಾಗಮದಲ್ಲಿ ಮೂರು ವಿಧವಾದ ಲಿಂಗಗಳನ್ನು ಏಕಸೂತ್ರಾನುಸಂಧಾನದಿಂದ ಪೂಜಿಸುವ ವಿಧಾನವು ಹೇಳಲ್ಪಟ್ಟಿದೆ:

ಭಾವಪ್ರಾಣೇಷ್ಟಲಿಂಗಾನಿ ಪೂಜಯೇದೇಕಭಾವತಃ।[೧೯]

"ಭಾವ-ಪ್ರಾಣ-ಇಷ್ಟಲಿಂಗಗಳನ್ನು ಏಕಸೂತ್ರಿತಗೊಳಿಸಿ ಪೂಜಿಸಬೇಕು." ಆ ಲಿಂಗಗಳನ್ನು ಪರಾತ್ಪರ-ಸೂಕ್ಷ್ಮ-ಸ್ಥೂಲಲಿಂಗಗಳೆಂದು ಶ್ರೀ ಸಿದ್ಧಾಂತ ಶಿಖಾಮಣಿಯು ವರ್ಣಿಸುತ್ತದೆ:

ಲಿಂಗಂ ತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಮ್।
ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ॥
ಪ್ರಾಣಲಿಂಗಮಿದಂ ಸೂಕ್ಷ್ಮಂ ಯದಂತರ್ಭಾವನಾಮಯಮ್।
ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ॥[೨೦]

"ಲಿಂಗವು ಸ್ಥೂಲ, ಸೂಕ್ಷ್ಮ ಮತ್ತು ಪರಾತ್ಪರವೆಂದು ಮೂರು ವಿಧ. ಹೊರಗೆ ದೇಹದ ಮೇಲೆ ಧರಿಸುವ ಇಷ್ಟಲಿಂಗವು ಸ್ಥೂಲ. ಒಳಗೆ ಭಾವನಾತ್ಮಕವಾಗಿರುವ ಪ್ರಾಣಲಿಂಗವು ಸೂಕ್ಷ್ಮ. ಪರಾತ್ಪರವೆಂದು ಕರೆಯಲ್ಪಡುವುದೇ ತೃಪ್ತಿಲಿಂಗ (ಭಾವಲಿಂಗ)ವೆಂದು ಕರೆಯಲ್ಪಡುವುದು." ಪ್ರಸ್ತುತ ಚಂದ್ರಜ್ಞಾನಾಗಮದ ಪ್ರಕಾರ ಮೂರು ಲಿಂಗಗಳ ಸ್ವರೂಪವು ಹೀಗಿದೆ:

ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಮ್।
ಪ್ರಾಣಲಿಂಗಂ ಮನೋಗ್ರಾಹ್ಯಂ ಭವೇತ್ ಸಕಲನಿಷ್ಕಲಮ್॥
ಸಕಲಂ ದೃಕ್ಕಲಾಗ್ರಾಹ್ಯಮಿಷ್ಟಲಿಂಗಂ ಪ್ರಕೀರ್ತಿತಮ್।
ಇಷ್ಟಸಿದ್ಧಿಕರಂ ಸಮ್ಯಗನಿಷ್ಟಪರಿಹಾರಕಮ್॥[೨೧]

"ಭಾವಲಿಂಗವು ನಿಷ್ಕಲವಾಗಿದೆ. ಅದು ಕೇವಲ ಭಾವಗೋಚರ. ಅದೇ ಪರಾತ್ಪರ ಲಿಂಗ. ಪ್ರಾಣಲಿಂಗವು ಸಕಲ-ನಿಷ್ಕಲ. ಅದು ಮನೋಗೋಚರ. ಇಷ್ಟಲಿಂಗವು ಸಕಲ. ಕಣ್ಣಿನ ಕಲೆಗೆ ಗೋಚರ. ಅದು ಇಷ್ಟಸಿದ್ಧಿಯನ್ನು ಕೊಡುವಂತಹದು ಮತ್ತು ಅನಿಷ್ಟವಾದುದನ್ನು ಪರಿಹರಿಸುವಂತಹದು." ನಿಷ್ಕಲವೆಂದರೆ ಭಾಗಗಳಿಲ್ಲದ್ದು, ಗುರುತಿಸಲು ಯಾವುದೇ ಚಿಹ್ನೆಗಳಿಲ್ಲದ್ದು. ಸಕಲವೆಂದರೆ ಭಾಗಗಳಿಂದ ಕೂಡಿರುವುದು, ಆಕಾರವುಳ್ಳದ್ದು. ಭಾವಲಿಂಗವು ಕೇವಲ ನಿಷ್ಕಲ. ಇಷ್ಟಲಿಂಗವು ಕೇವಲ ಸಕಲ. ಆದರೆ ಪ್ರಾಣಲಿಂಗವು ಸಕಲ-ನಿಷ್ಕಲ. ಅದಕ್ಕೆ ಯಾವುದೇ ಭಾಗಗಳಿಂದ ಕೂಡಿದ ಆಕಾರವಿಲ್ಲದಿದ್ದರೂ ಅದು ಜ್ಯೋತಿಃಸ್ವರೂಪವೆಂದು ಜ್ಞಾನಿಗಳು ಹೇಳುತ್ತಾರೆ. ಇಲ್ಲಿ ಭಾವಲಿಂಗವನ್ನು

---

೧೯. ಸೂಕ್ಷ್ಮಾಗಮ, ಕ್ರಿ.ಪಾ., ೬.೪೪.

೨೦. ಶ್ರೀ ಸಿದ್ಧಾಂತ ಶಿಖಾಮಣಿ, ೬.೪೯-೫೦.

೨೧. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೨೩-೨೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಾತ್ಪರಲಿಂಗವೆಂದು ಹೇಳಿರುವುದನ್ನು ಗಮನಿಸಿ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಇದಕ್ಕೆ ಸಂವಾದಿಯಾದ ಪರಿಕಲ್ಪನೆಯಿರುವುದನ್ನು ಮೇಲೆ ಗುರುತಿಸಲಾಗಿದೆ.

ಮೇಲೆ ಹೇಳಿದ ಮೂರು ಲಿಂಗಗಳು ಮತ್ತೆ ಎರಡೆರಡು ವಿಧವಾಗಿ ಒಟ್ಟು ಆರು ಲಿಂಗಗಳಾದವು:

ಭಾವಾದಿಲಿಂಗತ್ರಿತಯಂ ದ್ವಿವಿಧಂ ದ್ವಿವಿಧಂ ಭವೇತ್।
ಭಾವಲಿಂಗಂ ಮಹಾಲಿಂಗಪ್ರಸಾದಾಭಿಖ್ಯಕಂ ದ್ವಯಮ್॥
ಪ್ರಾಣಲಿಂಗಂ ತಥಾ ಚರಶಿವಲಿಂಗದ್ವಯಂ ಭವೇತ್।
ಇಷ್ಟಂ ತು ಗುರುಲಿಂಗಾಖ್ಯಮಾಚಾರಾಖ್ಯಂ ದ್ವಯಂ ಭವೇತ್॥[21]

"ಭಾವಲಿಂಗ ಮುಂತಾದ ಮೂರು ಲಿಂಗಗಳು ಎರಡೆರಡು ವಿಧವಾಗಿವೆ. ಭಾವಲಿಂಗವು ಮಹಾಲಿಂಗ ಮತ್ತು ಪ್ರಸಾದಲಿಂಗವೆಂದು ಎರಡು ವಿಧ. ಹಾಗೆಯೇ ಪ್ರಾಣಲಿಂಗವು ಚರಲಿಂಗ ಮತ್ತು ಶಿವಲಿಂಗವೆಂದು ಎರಡು ವಿಧ. ಮತ್ತೆ ಇಷ್ಟಲಿಂಗವು ಗುರುಲಿಂಗ ಮತ್ತು ಆಚಾರಲಿಂಗವೆಂದು ಎರಡು ವಿಧ." ಇವುಗಳು ಆರೋಹ ಕ್ರಮದಲ್ಲಿ ಹೀಗಿವೆ: ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ (ಚರಲಿಂಗ), ಪ್ರಸಾದಲಿಂಗ ಮತ್ತು ಮಹಾಲಿಂಗ, ಎಂದು. ಇವುಗಳ ಸ್ವರೂಪವೆಂದರೆ ಕ್ರಮವಾಗಿ ಪಂಚಬ್ರಹ್ಮರೆಂದು ಕರೆಯುವ ಪರಮಾತ್ಮನ ಪಂಚಮುಖಗಳ ಮತ್ತು ಅಖಂಡರೂಪದ ಸ್ವರೂಪ:

ಆಚಾರಲಿಂಗಮಾಖ್ಯಾತಂ ಸದ್ಯೋಜಾತಮುಖಾತ್ಮಕಮ್।
ಗುರುಲಿಂಗಂ ತಥಾ ವಾಮದೇವವಕ್ತ್ರಾತ್ಮಕಂ ಭವೇತ್॥
ಶಿವಲಿಂಗಂ ತಥಾಽಘೋರಮುಖರೂಪಂ ಭವೇತ್ಪುನಃ।
ಚರಲಿಂಗಂ ಭವತ್ಯೇವ ತತ್ಪುರುಷಮುಖಾತ್ಮಕಮ್॥
ಪ್ರಸಾದಲಿಂಗಂ ಕಥಿತಮೀಶಾನಮುಖಸಂಜ್ಞಿತಮ್।
ಮಹಾಲಿಂಗಂ ತಥಾಽಖಂಡಶಿವರೂಪಂ ಪ್ರಕೀರ್ತಿತಮ್॥[22]

"ಆಚಾರಲಿಂಗವು ಸದ್ಯೋಜಾತಮುಖ ಸ್ವರೂಪವುಳ್ಳದ್ದೆಂದು ಹೇಳಲ್ಪಟ್ಟಿದೆ. ಹಾಗೆಯೇ ಗುರುಲಿಂಗವು ವಾಮದೇವಮುಖ ಸ್ವರೂಪವುಳ್ಳದ್ದು. ಅದೇ ರೀತಿ ಶಿವಲಿಂಗವು ಅಘೋರಮುಖಾತ್ಮಕ. ಅಂತೆಯೇ ಚರಲಿಂಗವು ತತ್ಪುರುಷ ಮುಖಾತ್ಮಕವಾದುದು. ಮತ್ತೆ ಪ್ರಸಾದಲಿಂಗವು ಈಶಾನಮುಖ ಸ್ವರೂಪದ್ದೆಂದು ಹೇಳಲಾಗಿದೆ. ಮಹಾಲಿಂಗವು ಅಖಂಡಶಿವಸ್ವರೂಪವೇ ಆಗಿದೆ." ಹೀಗೆ ಚಂದ್ರಜ್ಞಾನಾಗಮದಲ್ಲಿ ಆರು ಲಿಂಗಗಳ ಸ್ವರೂಪನಿರ್ದೇಶವನ್ನು ಮಾಡಲಾಗಿದೆ. ಇವೇ ಆರು ಲಿಂಗಗಳು ಕ್ರಮವಾಗಿ ಭಕ್ತಸ್ಥಲ,

---

೨೧. ಅದೇ, ೩.೨೬-೨೭.

೨೨. ಅದೇ, ೩.೨೮-೩೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲವೆಂಬ ಆರು ಸ್ಥಲಗಳಿಗೆ ಸಂಬಂಧಿಸಿವೆ. ಆಯಾಯ ಸ್ಥಲದಲ್ಲಿ ಆಯಾಯ ಲಿಂಗಕ್ಕೆ ಆಯಾಯ ಸ್ಥಲದ ವಿಶಿಷ್ಟವಾದ ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ ಮತ್ತು ಸಮರಸವೆಂಬ ಭಕ್ತಿಯಿಂದ ಕ್ರಮವಾಗಿ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಮತ್ತು ಸಂಕಲ್ಪವೆಂಬ ಆರು ವಿಷಯಗಳನ್ನು ಸಮರ್ಪಿಸಿ ಅವುಗಳನ್ನೇ ಪ್ರಸಾದವಾಗಿ ಸ್ವೀಕರಿಸಬೇಕೆಂಬುದನ್ನು ಕಾರಣಾಗಮವು ಮನೋಹರವಾಗಿ ವರ್ಣಿಸಿದೆ."[೨೪]

ಮುಂದೆ ಚಂದ್ರಜ್ಞಾನಾಗಮವು ಆರೋಹಣ ಕ್ರಮದಲ್ಲಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ವರೂಪವನ್ನು ವರ್ಣಿಸಿ ಅವುಗಳ ಉಪಾಸನೆಯನ್ನು ವಿಧಿಸಿದೆ.

ಇಷ್ಟಲಿಂಗದಲ್ಲಿ ಶಿವನ ಪೂಜೆ:

ಪರಮಾತ್ಮನ ಅನುಗ್ರಹವನ್ನು ಪಡೆಯಲು ಇಷ್ಟಲಿಂಗದಲ್ಲಿ ಶಿವನನ್ನು ಪೂಜಿಸಬೇಕು. ಅದರ ದ್ವಾರಾ ಇತರ ಎರಡು ಆಂತರಿಕ ಲಿಂಗಗಳ ಪೂಜೆಯೆಂಬುದು ಇದರ ಸೂಚನೆ. ಇಷ್ಟಲಿಂಗದ ಪೂಜೆಯ ವಿಷಯ ಹೀಗೆ ನಿರೂಪಿಸಲ್ಪಟ್ಟಿದೆ:

ಲಿಂಗೇ ಸಂಪೂಜನಾದ್ ಧ್ಯಾನಾಚ್ಛಂಭುಃ ಸಮ್ಯಕ್ ಪ್ರಸೀದತಿ।
ಧ್ಯಾಯತೇ ಪೂಜ್ಯತೇ ಚೈವ ಲಿಂಗೇ ಸನ್ನಿಹಿತಃ ಶಿವಃ॥
ಇಷ್ಟಲಿಂಗೇ ತತೋ ನಿತ್ಯಂ ಪೂಜನೀಯಃ ಪರಃ ಶಿವಃ।
ಧ್ಯೇಯಶ್ಚ ಸತತಂ ವಿದ್ವನ್ ಲಿಂಗರೂಪೋಽಂಬಿಕಾಪತಿಃ॥[೨೫]

"ಲಿಂಗರೂಪದಲ್ಲಿ ಪೂಜಿಸುವುದರಿಂದ, ಧ್ಯಾನ ಮಾಡುವುದರಿಂದ ಶಿವನು ವಿಶೇಷವಾಗಿ ಪ್ರಸನ್ನನಾಗುತ್ತಾನೆ. ಲಿಂಗದಲ್ಲಿ ಧ್ಯಾನಿಸಲ್ಪಟ್ಟರೆ, ಪೂಜಿಸಲ್ಪಟ್ಟರೆ ಶಿವನು ಅಲ್ಲಿಯೇ ಸನ್ನಿಹಿತನಾಗಿರುತ್ತಾನೆ. ನಿತ್ಯವೂ ಇಷ್ಟಲಿಂಗದಲ್ಲಿ ಪರಶಿವನು ಪೂಜಿಸಲ್ಪಡಬೇಕು. ಶಕ್ತಿವಿಶಿಷ್ಟನಾದ ಶಿವನು ಲಿಂಗರೂಪದಲ್ಲೇ ಸತತವಾಗಿ ಧ್ಯಾನಿಸಲ್ಪಡಬೇಕು." ಹೀಗೆ ಇಷ್ಟಲಿಂಗವನ್ನು ಪೂಜಿಸಿ ಅದರ ಅನುಸಂಧಾನದ ಮೂಲಕವೇ ಪ್ರಾಣಲಿಂಗ ಮತ್ತು ಭಾವಲಿಂಗಗಳ ಸ್ವರೂಪಸಾಕ್ಷಾತ್ಕಾರಪೂರ್ವಕ ಪೂಜೆ-ಧ್ಯಾನಗಳನ್ನು ಮಾಡಬೇಕು.

ಪ್ರಾಣಲಿಂಗದ ಸ್ವರೂಪ ಮತ್ತು ಉಪಾಸನೆ:

ಪ್ರಾಣಲಿಂಗದ ಅನುಸಂಧಾನ ಮತ್ತು ಪೂಜೆಗಳು ಸಾಧಕನಿಗೆ ಅತ್ಯಂತ ಫಲಪ್ರದವೆಂದು ಚಂದ್ರಜ್ಞಾನಾಗಮವು ಪ್ರಾಣಲಿಂಗದ ಸ್ವರೂಪಸಾಕ್ಷಾತ್ಕಾರ ಮತ್ತು ಉಪಾಸನೆಗಳನ್ನು ವರ್ಣಿಸಿದೆ:

---

೨೪. ಕಾರಣಾಗಮ, ಕ್ರಿ.ಪಾ., ೭.೬೦-೬೫.

೨೫. ಚಂದ್ರಜ್ಞಾನಾಗಮ, ಕ್ರಿ.ಪಾ. ೩.೩೧-೩೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮ ಪ್ರಭಮ್।
ಭ್ರೂಮಧ್ಯೇ ದೀಪಸಂಕಾಶಂ ಪ್ರಾಣಲಿಂಗಂ ಪ್ರಕೀರ್ತಿತಮ್॥
ಜ್ಯೋತಿರ್ಲಿಂಗಮಿದಂ ವಿದ್ವನ್ ಧ್ಯಾನಸ್ಥಾನಂ ಮಹೇಶಿತುಃ।
ಜ್ಯೋತಿರ್ಲಿಂಗಂ ವಿಭಾವ್ಯೈವ ತತ್ರ ಧ್ಯೇಯಃ ಪರಃ ಶಿವಃ॥
ಪ್ರಾಣೇಷ್ವಂತರ್ಮನಃಸ್ಥಾನಂ ಹೃದಯಾಬ್ಜಗತಂ ಶಿವಮ್।
ಲಿಂಗಂ ಯತ್ ತದಿಹ ಗ್ರಾಹ್ಯಂ ಪ್ರಾಣಲಿಂಗಸಮಾಹ್ವಯಮ್॥
ಜ್ಯೋತೀರೂಪಂ ತದೇವ ಸ್ಯಾತ್ ಸ್ಥಾನಂ ಮುಖ್ಯಂ ಮಹೇಶಿತುಃ।
ತತ್ರ ನಿಧ್ಯಾಯಮಾನಂ ತು ಶಂಭುರ್ಮೋಚಯತೇಽಚಿರಾತ್॥[೨೬]

"ಮೂಲಾಧಾರ ಸ್ಥಾನದಲ್ಲಿ ಚಿನ್ನದ ಪ್ರಕಾಶದಂತೆ, ಹೃದಯದಲ್ಲಿ ಹವಳದ ಕಾಂತಿಯಂತೆ, ಹುಬ್ಬುಗಳ ಮಧ್ಯಭಾಗದಲ್ಲಿ ದೀಪಪ್ರಕಾಶದಂತೆ ಪ್ರಾಣಲಿಂಗವಿದೆಯೆಂದು ಹೇಳುತ್ತಾರೆ. ಇದನ್ನು ಜ್ಯೋತಿರ್ಲಿಂಗವೆಂದು ತಿಳಿದು, ಅದೇ ಮಹೇಶ್ವರನ ಧ್ಯಾನದ ಸ್ಥಾನವೆಂದು ಅರಿತು, ಜ್ಯೋತಿರ್ಲಿಂಗವನ್ನು ಭಾವಿಸಿ ಅಲ್ಲಿ ಪರಶಿವನನ್ನು ಧ್ಯಾನಿಸಬೇಕು. ಹೃದಯದಲ್ಲಿರುವ ಕಮಲದಲ್ಲಿ ಪ್ರಾಣಗಳ ಒಳಗಿನ ಮನಸ್ಸಿನ ಸ್ಥಾನದಲ್ಲಿ ಯಾವ ಜ್ಯೋತಿರ್ಮಯ ಲಿಂಗವಿದೆಯೋ ಅದೇ ಪ್ರಾಣಲಿಂಗವೆಂಬುದು. ಜ್ಯೋತಿರ್ಮಯವಾದ ಈ ಸ್ಥಾನವನ್ನೇ ಮುಖ್ಯಸ್ಥಾನವೆಂದು ಪರಿಗಣಿಸುತ್ತಾರೆ. ಅಲ್ಲಿಯೇ ಶಂಭುವನ್ನು ಭಾವಿಸಿ ಧ್ಯಾನ ಮಾಡುವುದರಿಂದ ಮುಕ್ತಿಯು ಪ್ರಾಪ್ತವಾಗುತ್ತದೆ." ಪ್ರಾಣಲಿಂಗದ ಸ್ಥಾನ ಮತ್ತು ಸ್ವರೂಪಗಳ ಬಗ್ಗೆ ಮೇಲಿರುವ ವಿಚಾರಕ್ಕೆ ಸಂವಾದಿಯಾಗಿ ಶ್ರೀ ಸಿದ್ಧಾಂತಶಿಖಾಮಣಿಯು ಸ್ವಲ್ಪ ಬದಲಾವಣೆಯೊಂದಿಗೆ ಹೀಗೆ ಹೇಳುತ್ತದೆ:

ಆಧಾರೇ ಕನಕಪ್ರಖ್ಯಂ ಹೃದಯೇವಿದ್ರುಮಪ್ರಭಮ್।
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ ವಿಭಾವಯೇತ್॥[೨೭]

ಭ್ರೂಮಧ್ಯ ಸ್ಥಾನದಲ್ಲಿನ ಪ್ರಾಣಲಿಂಗದ ಸ್ವರೂಪವಿಲ್ಲಿ ಸ್ಫಟಿಕದ ಕಾಂತಿಯೆಂದು ಹೇಳಿದೆ. ಆಗಮದಲ್ಲಿ ಅದು ದೀಪದಂತಿದೆ ಎಂದು ಹೇಳಿದೆ. ಪ್ರಾಣಲಿಂಗವನ್ನು ಈ ಸ್ವರೂಪದಲ್ಲಿ ಭಾವನೆ ಮಾಡಿ ಪೂಜಿಸಬೇಕು ಎಂಬುದನ್ನು ಪ್ರಸ್ತುತ ಆಗಮವು ವಿಧಿಸುತ್ತದೆ. ಅದರ ಪೂಜೆಯ ವಿವರಗಳನ್ನು ಶ್ರೀ ಸಿದ್ಧಾಂತಶಿಖಾಮಣಿಯಲ್ಲೇ ನೋಡಬಹುದು.[೨೮]

---

೨೬. ಅದೇ, ೩.೩೩-೩೬.

೨೭. ಶ್ರೀ ಸಿದ್ಧಾಂತಶಿಖಾಮಣಿ, ೬.೪೦.

೨೮. ಅದೇ, ೧೨.೧೬-೨೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವಲಿಂಗದ ಲಕ್ಷಣ ಮತ್ತು ಧ್ಯಾನ:

ಪರಾತ್ಪರಲಿಂಗವೆಂದೂ ನಿಷ್ಕಲವೆಂದೂ ಕರೆಯಲ್ಪಡುವ ಭಾವಲಿಂಗದ ಲಕ್ಷಣವು ಹೀಗಿದೆ:

ಸಚ್ಚಿತ್ಸುಖಮಯಂ ಶಾಂತಮಾದಿಮಧ್ಯಾಂತವರ್ಜಿತಮ್।
ನಿಷ್ಕಲಂ ಶಾಂಭವಂ ಯತ್ತದರೂಪಂ ರೂಪಮುಚ್ಯತೇ॥
ತದ್ಭಾವನಾಸ್ಪದಂ ವಿದ್ವನ್ ಭಾವಲಿಂಗಂ ಪ್ರಕೀರ್ತಿತಮ್।
ಭಾವಗ್ರಾಹ್ಯಂ ಮನೋಽತೀತಂ ಭಾವಾಭಾವಪರಂ ಶಿವಮ್।
ಕಲಾಸರ್ಗಕರಂ ಸತ್ಯಂ ಭಾವಲಿಂಗಂ ಪ್ರಕೀರ್ತಿತಮ್॥[೨೯]

"ಸತ್-ಚಿತ್-ಆನಂದಮಯವೂ, ಶಾಂತವೂ, ಆದಿ-ಮಧ್ಯ-ಅಂತಗಳಿಲ್ಲದುದೂ, ನಿಷ್ಕಲವೂ ಆದ ಶಿವನ ಆಕಾರರಹಿತ ಸ್ವರೂಪವೆಂದು ಯಾವುದು ಕರೆಯಲ್ಪಡುವುದೋ ಅದೇ ಭಾವಲಿಂಗವೆಂದು ವರ್ಣಿಸಲ್ಪಡುತ್ತದೆ; ಏಕೆಂದರೆ ಅದು ಭಾವನಾಗೋಚರ-ವಾಗಿದೆ. ಮನಸ್ಸಿಗೆ ಮೀರಿದ, ಭಾವ ಮತ್ತು ಅಭಾವಗಳಿಗೆ ಅತೀತವಾದ ಆ ಮಂಗಲಮಯ ಸ್ವರೂಪವು ಭಾವನಾಮಾತ್ರದಿಂದ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಅದೇ ಕಲೆಗಳ ಸೃಷ್ಟಿಗೆ ವಾಸ್ತವಿಕ ಕಾರಣ. ಆದ್ದರಿಂದ ಅದು ಭಾವಲಿಂಗವೆಂದು ಕರೆಯಲ್ಪಡುತ್ತದೆ." ಇಲ್ಲಿ ಕಲೆಗಳೆಂದರೆ ನಿವೃತ್ತಿಕಲಾ, ಪ್ರತಿಷ್ಠಾಕಲಾ, ವಿದ್ಯಾಕಲಾ, ಶಾಂತಿಕಲಾ ಮತ್ತು ಶಾಂತ್ಯತೀತಕಲಾ ಎಂಬ ಐದು ಕಲೆಗಳು ಮತ್ತು ಸದ್ಯೋಜಾತ ಮುಂತಾದ ಪಂಚಬ್ರಹ್ಮಮಂತ್ರಗಳಲ್ಲಿ ಗುರುತಿಸಲ್ಪಡುವ ೩೮ ಕಲೆಗಳು.[೩೦] ಈ ಎಲ್ಲಾ ಕಲೆಗಳ ಅಭಿವ್ಯಕ್ತಿಗೆ ಭಾವಲಿಂಗವೇ ಮೂಲ ಕಾರಣವೆಂದು ಹೇಳಲಾಗಿದೆ. ನಿವೃತ್ತಿ ಮುಂತಾದ ಐದು ಕಲೆಗಳು ಸೃಷ್ಟಿಗಾಗಿ ಶಿವನು ತಾಳಿದ ಶಿವಸಾದಾಖ್ಯ, ಅಮೂರ್ತಸಾದಾಖ್ಯ, ಸಮೂರ್ತಸಾದಾಖ್ಯ, ಕರ್ತೃಸಾದಾಖ್ಯ, ಕರ್ಮಸಾದಾಖ್ಯ ಎಂಬ ಪಂಚಸಾದಾಖ್ಯಗಳಿಗೆ ಸಂಬಂಧಿಸಿವೆ. ನಿವೃತ್ತಿ ಕಲೆಯು ಕರ್ಮಸಾದಾಖ್ಯಕ್ಕೂ, ಪ್ರತಿಷ್ಠಾಕಲೆಯು ಕರ್ತೃಸಾದಾಖ್ಯಕ್ಕೂ, ವಿದ್ಯಾಕಲೆಯು ಸಮೂರ್ತಸಾದಾಖ್ಯಕ್ಕೂ, ಶಾಂತಿಕಲೆಯು ಅಮೂರ್ತಸಾದಾಖ್ಯಕ್ಕೂ ಮತ್ತು ಶಾಂತ್ಯತೀತಕಲೆಯು ಶಿವಸಾದಾಖ್ಯಕ್ಕೂ ಸಂಬಂಧಿಸಿವೆ. ಈ ಕಲೆಗಳ ಮೂಲ ಐದು ಶಕ್ತಿಗಳು. ಅವೆಂದರೆ ನಿವೃತ್ತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ. ಈ ಐದು ಶಕ್ತಿಗಳ ಮೂಲಕವೇ ಶಿವನು ಸೃಷ್ಟಿಯ ಲೀಲೆಗಾಗಿ ಐದು ಸಾದಾಖ್ಯಗಳ ರೂಪವನ್ನು ತಾಳುತ್ತಾನೆ.[೩೧]

---

೨೯. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೩೭-೩೮.

೩೦. ನೇತ್ರತಂತ್ರ, ೨೨.೨೬-೩೪; ಲಿಂಗಧಾರಣಚಂದ್ರಿಕಾ, ಜಂಗಮವಾಡಿ ಮಠ ಆವೃತ್ತಿ, ಪು.೨೭೫.

೩೧. ಸೂಕ್ಷ್ಮಾಗಮ, ಕ್ರಿ.ಪಾ., ೧.೩೩-೫೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೇಲೆ ಹೇಳಿದ ನಿರಾಕಾರ ಸ್ವರೂಪವುಳ್ಳ ಭಾವಲಿಂಗವನ್ನು ಸಾಕ್ಷಾತ್ಕರಿಸಿಕೊಂಡು ಧ್ಯಾನ ಮಾಡುವುದು ಹೇಗೆ? ಇದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸುತ್ತದೆ:

ಪ್ರತ್ಯಾಹೃತೇಂದ್ರಿಯಗ್ರಾಮೈರಮನಸ್ಕಪದಾಸ್ಪದೈಃ।
ಪದೇ ತುರೀಯಾತೀತಾಖ್ಯೇ ಭಾವನೀಯಂ ತು ಯೋಗಿಭಿಃ॥
ವಿಸ್ಮೃತೇತರಭಾವಾನುಭಾವಿತಾಖಂಡತತ್ತ್ವಕೈಃ।
ಯೋಗಿಭಿರ್ಭಾವ್ಯತೇ ನಿತ್ಯಂ ಭಾವಲಿಂಗಂ ಮಹಾತ್ಮಭಿಃ॥[೩೨]

"ಇಂದ್ರಿಯಗಳ ಸಮೂಹವನ್ನು ಅಂತರ್ಮುಖವಾಗಿಸಿಕೊಂಡು, 'ಅಮನಸ್ಕಸ್ಥಿತಿ'ಯಲ್ಲಿ ಇದ್ದು, ತುರೀಯಾತೀತ ಎಂಬ ಸ್ಥಾನದಲ್ಲಿ ನಿಂತು ಯೋಗಿಗಳು ಭಾವಲಿಂಗವನ್ನು ಭಾವಿಸಿಕೊಳ್ಳಬೇಕು (ಧ್ಯಾನಿಸಬೇಕು). ಇತರೆಲ್ಲಾ ಸಾಂಸಾರಿಕ ಭಾವಗಳನ್ನು ಮರೆತು ಏಕಮಾತ್ರ ಅಖಂಡ ಶಿವತತ್ತ್ವದ ಭಾವನೆಯಲ್ಲಿ ಮಗ್ನರಾಗಿರುವ ಮಹಾತ್ಮರಾದ ಯೋಗಿಗಳು ಭಾವಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ." 'ಅಮನಸ್ಕಯೋಗ'ವೆಂಬುದು ಒಂದು ವಿಶಿಷ್ಟಯೋಗ. ಶೈವಶಾಸ್ತ್ರಗಳಲ್ಲಿ 'ಓಂ'ಕಾರವನ್ನು ವೈದಿಕ ಪ್ರಣವ, 'ಹ್ರೀಂ' ಎಂಬುದನ್ನು ಶಾಕ್ತಪ್ರಣವ ಮತ್ತು 'ಹೂಂ' ಎಂಬುದನ್ನು ಶೈವಪ್ರಣವವೆನ್ನುತ್ತಾರೆ. 'ಅ ಉ ಮ' ಎಂಬ ಸ್ಥೂಲ ಅಕ್ಷರಗಳಲ್ಲದೆ ಬಿಂದು, ಅರ್ಧಚಂದ್ರ, ರೋಧಿನೀ, ನಾದ, ನಾದಾಂತ, ಶಕ್ತಿ, ಸಮನಾ ಮತ್ತು ಉನ್ಮನಾ ಎಂಬ ಸೂಕ್ಷ್ಮನಾದದ ಬೇರೆ ಬೇರೆ ಅವಸ್ಥೆಗಳಿವೆ. ಅಂತಿಮ ಸ್ಥಿತಿಯಾದ 'ಉನ್ಮನಾ' ಸ್ಥಿತಿಯೇ 'ಅಮನಸ್ಕಯೋಗ'. ಹೀಗೆ ಭಾವಲಿಂಗದ ಧ್ಯಾನವನ್ನು ಮಾಡಲು ಯೋಗಿಗಳು ಯೋಗಮಾರ್ಗವನ್ನು ಅನುಸರಿಸುತ್ತಾರೆ. ಹಾಗೆ ಯೋಗದಿಂದ ಭಾವಲಿಂಗಾನುಸಂಧಾನ ಮಾಡಿಕೊಂಡ ಯೋಗಿಗಳು ಮುಕ್ತರೆಂದು ಅದೇ ಆಗಮವು ಕೊಂಡಾಡುತ್ತದೆ:

ಭಾವಲಿಂಗಾನುಭಾವಾತ್ತಪರಾನಂದಾಮೃತಾಬ್ಧಯಃ।
ನಿಸ್ಪೃಹಾ ನಿರ್ಭಯಾಃ ಶಾಂತಾ ಜೀವನ್ಮುಕ್ತಾ ನ ಸಂಶಯಃ॥[೩೩]

"ಭಾವಲಿಂಗದ ಅನುಸಂಧಾನದಿಂದ ಪಡೆದ ಪರಾನಂದವೆಂಬ ಅಮೃತಸಾಗರವಾದ ಯೋಗಿಗಳು ನಿಸ್ಪೃಹರು, ನಿರ್ಭಯರು, ಶಾಂತರು ಮತ್ತು ಅವರು ನಿಃಸಂಶಯವಾಗಿ ಜೀವನ್ಮುಕ್ತರು." ಹೀಗೆ ಇಷ್ಟಲಿಂಗದಲ್ಲಿ ದೃಷ್ಟಿಯೋಗ, ಪ್ರಾಣಲಿಂಗದಲ್ಲಿ ಮನೋಯೋಗ ಮತ್ತು ಭಾವಲಿಂಗದಲ್ಲಿ ಭಾವಯೋಗವನ್ನು ಏಕಕಾಲದಲ್ಲಿ ಸಾಧಿಸಿದ ಸಾಧಕರು ಮುಕ್ತರು. ಈ ಮೂರರ ಸಮನ್ವಯವೇ ಶಿವಯೋಗವೆಂಬುದು ಪ್ರಸ್ತುತ ಶೈವಾಗಮದ ಸಿದ್ಧಾಂತ. ಅದೇ ಶಿವಾರಾಧನೆಯ ಕ್ರಮ.

---

೩೨. ಚಂದ್ರಜ್ಞಾನಾಗಮ, ಕ್ರಿ.ಪಾ., ೩.೩೯-೪೦.

೩೩. ಅದೇ, ೩.೪೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗತ್ರಯಗಳ ಆರಾಧನೆ ಮತ್ತು ಅದರ ಮಹಿಮೆ:

ಲಿಂಗತ್ರಯದ ಸ್ವರೂಪವನ್ನು ಹೇಳಿದ ಚಂದ್ರಜ್ಞಾನಾಗಮವು ಆ ಲಿಂಗತ್ರಯದ ಆರಾಧನೆಯನ್ನೂ ಅದರ ಮಹಿಮೆಯನ್ನೂ ಸ್ಪಷ್ಟಪಡಿಸುತ್ತದೆ. ಮೊದಲು ಲಿಂಗತ್ರಯದ ಆರಾಧನೆಯು ಹೀಗೆ ನಿರೂಪಿಸಲ್ಪಟ್ಟಿದೆ.

ಜ್ಯೋತೀರೂಪಂ ಪ್ರಾಣಲಿಂಗಂ ಹೃದಯಾಬ್ಜೇ ಪ್ರತಿಷ್ಠಿತಮ್।
ಹೃದಯೇ ವಾ ಭ್ರುವೋರ್ಮಧ್ಯೇ ತುರೀಯೇ ಧ್ಯೇಯಮಾಸ್ತಿಕೈಃ॥
ಧ್ಯಾನಸ್ಯ ಶಂಭೋಃ ಪೂಜಾಯಾಃ ಸ್ಥಾನಮಿಷ್ಟಂ ಭವೇದ್ಬಹಿಃ।
ಜಾಗ್ರದ್ದಶಾಯಾಂ ಸಂಸೇವ್ಯಂ ಭೋಗಮೋಕ್ಷಫಲಾರ್ಥಿಭಿಃ॥
ತಥೈವಾಂತರಗಂ ಸ್ಥಾನಂ ಪ್ರಾಣಲಿಂಗಂ ಪ್ರಕೀರ್ತಿತಮ್।
ಸೇವ್ಯಮೇತತ್ ತುರೀಯೇ ಸ್ಯಾದ್ ಭವಬಂಧಮುಮುಕ್ಷುಭಿಃ॥[೬೪]

"ಜ್ಯೋತಿಸ್ವರೂಪಿಯಾದ ಪ್ರಾಣಲಿಂಗವು ಹೃದಯದಲ್ಲಿ ಪ್ರತಿಷ್ಠಿತವಾಗಿದೆ. ಅದನ್ನು ಆಸ್ತಿಕರು ಹೃದಯದಲ್ಲಿ, ಹುಬ್ಬುಗಳ ಮಧ್ಯದಲ್ಲಿ ತುರೀಯಾವಸ್ಥೆಯನ್ನು ತಲುಪಿ ಸಾಕ್ಷಾತ್ಕರಿಸಿ-ಕೊಳ್ಳಬೇಕು. ಶಂಭುವಿನ ಧ್ಯಾನಕ್ಕೆ ಮತ್ತು ಪೂಜೆಗೆ ಬಾಹ್ಯಸ್ಥಾನವೆಂದರೆ ಇಷ್ಟಲಿಂಗ. ಭೋಗ-ಮೋಕ್ಷರೂಪದ ಫಲವನ್ನು ಇಚ್ಛಿಸುವವರು ಜಾಗ್ರತ್ ಸ್ಥಿತಿಯಲ್ಲಿ ಅದನ್ನೇ ಪೂಜಿಸಬೇಕು. ಹಾಗೆಯೇ ಆಂತರಿಕವಾದ ಸ್ಥಾನವು ಪ್ರಾಣಲಿಂಗವೆಂದು ಕರೆಯುತ್ತಾರೆ. ಭವಬಂಧನದಿಂದ ಮುಕ್ತಿಯನ್ನು ಇಚ್ಛಿಸುವವರು ಅದನ್ನೇ ತುರೀಯಾವಸ್ಥೆಯಲ್ಲಿ ಧ್ಯಾನಿಸಬೇಕು." ಹೀಗೆ ಜಾಗ್ರತ್‌ಸ್ಥಿತಿಯಲ್ಲಿ ಇಷ್ಟಲಿಂಗದ ಆರಾಧನೆ ಮತ್ತು ತುರೀಯಾವಸ್ಥೆಯಲ್ಲಿ (ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಮೀರಿದ ನಾಲ್ಕನೆಯ ಅವಸ್ಥೆ, ಅದರಲ್ಲಿ) ಪ್ರಾಣಲಿಂಗದ ಆರಾಧನೆ, ಹೀಗೆ ಇಷ್ಟ-ಪ್ರಾಣಲಿಂಗಗಳ ಆರಾಧನೆಯನ್ನು ಮಾಡಬೇಕು. ಜೊತೆಗೆ ತುರೀಯಾತೀತ ಸ್ಥಿತಿಯಲ್ಲಿ ಭಾವಲಿಂಗವನ್ನು ಆರಾಧಿಸಬೇಕು ಎಂದು ಈಗಾಗಲೇ ಹೇಳಿದೆ. ಒಟ್ಟಿನಲ್ಲಿ ಲಿಂಗತ್ರಯದ ಆರಾಧನೆಯು ಇಲ್ಲಿ ಉಕ್ತವಾದಂತಾಯಿತು. ಇನ್ನು ಅದರ ಫಲಗಳನ್ನು ಹೇಳಬೇಕು.

ಅದಕ್ಕೂ ಮೊದಲು ಆ ಆರಾಧನೆಯ ಫಲವನ್ನು ಪಡೆಯಲು ಬೇಕಾದ ಅರ್ಹತೆಯನ್ನು ಸಾಧಕನು ಗುರುವಿನ ಅನುಗ್ರಹದ್ಯೋತಕವಾದ ದೀಕ್ಷೆಯ ಮೂಲಕವೇ ಹೊಂದಬೇಕು ಎಂಬುದನ್ನು ಸೂಚಿಸುತ್ತಾ ಪ್ರಸ್ತುತ ಆಗಮವು ಮೂರು ಶರೀರಗಳಿಗೆ ಸಂಬಂಧಿಸಿದಂತೆ ಮೂರುವಿಧ ದೀಕ್ಷೆಯ ಮೂಲಕ ಮೂರು ಮಲಗಳನ್ನು ನಾಶಪಡಿಸಿ ಮೂರು ಲಿಂಗಗಳನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಪ್ರತಿಪಾದಿಸುತ್ತದೆ.

---

೬೪. ಅದೇ, ೬.೪೨-೪೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂ ಸೂಕ್ಷ್ಮತನೋಃ ಸ್ಮೃತಮ್।
ಭಾವಾಖ್ಯಂ ಕಾರಣಸ್ಯೈವಂ ತನುತ್ರಯಗತಂ ತ್ರಯಮ್।।
ಆಣವಂ ಮಾಯಿಕಂ ಚೈವ ಕಾರ್ಮಿಕಂ ಚ ಯಥಾಕ್ರಮಮ್।
ಮಲತ್ರಯಮನಾದೀದಂ ತನುತ್ರಯಗತಂ ಭವೇತ್।।
ತನುತ್ರಯಗತಾನಾದಿಮಲತ್ರಯಮಿದಂ ಗುರುಃ।
ದೀಕ್ಷಾತ್ರಯೇಣ ನಿರ್ದಗ್ಧಾ ಲಿಂಗತ್ರಯಮುಪಾದಿಶೇತ್।।[೩೫]

"ಇಷ್ಟಲಿಂಗವು ಸ್ಥೂಲಶರೀರಕ್ಕೆ, ಪ್ರಾಣಲಿಂಗವು ಸೂಕ್ಷ್ಮಶರೀರಕ್ಕೆ ಮತ್ತು ಭಾವಲಿಂಗವು ಕಾರಣಶರೀರಕ್ಕೆ, ಹೀಗೆ ಮೂರು ಲಿಂಗಗಳು ಮೂರು ಶರೀರಗಳಿಗೆ ಸಂಬಂಧಿಸಿವೆ. ಆಣವಮಲ, ಮಾಯೀಯಮಲ ಮತ್ತು ಕಾರ್ಮಿಕಮಲ ಎಂಬ ಮೂರು ಅನಾದಿ ಮಲಗಳು ಕ್ರಮವಾಗಿ ಮೂರು ಶರೀರಗಳಿಗೆ ಅಂಟಿಕೊಂಡಿವೆ -ಹೀಗೆ ಮೂರು ಶರೀರಗಳಿಗೆ ಅಂಟಿಕೊಂಡ ಮೂರು ಮಲಗಳನ್ನು ಸಂಪೂರ್ಣವಾಗಿ ಸುಟ್ಟು ಮೂರು ಲಿಂಗಗಳನ್ನು ನೆಲೆಗೊಳಿಸಬೇಕು." ಹೀಗೆ ವೇಧಾದೀಕ್ಷೆ, ಮಂತ್ರದೀಕ್ಷೆ ಮತ್ತು ಕ್ರಿಯಾದೀಕ್ಷೆ ಎಂಬ ಮೂರು ದೀಕ್ಷೆಗಳ ಮೂಲಕ ಗುರುವು ಕಾರಣ, ಸೂಕ್ಷ್ಮ ಮತ್ತು ಸ್ಥೂಲಶರೀರಗಳಲ್ಲಿನ ಆಣವ, ಮಾಯೀಯ ಮತ್ತು ಕಾರ್ಮಿಕ ಮಲಗಳನ್ನು ನಾಶಗೊಳಿಸಿ ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳನ್ನು ನೆಲೆಗೊಳಿಸುವನು. ಹೀಗೆ ಮಲತ್ರಯನಾಶದಿಂದ ಪಕ್ವಭಕ್ತಿಯಿಂದ ಕೂಡಿದ ಸಾಧಕನು ಇಷ್ಟ-ಪ್ರಾಣ-ಭಾವ ಲಿಂಗಾನುಸಂಧಾನಪೂರ್ವಕ ಪೂಜೆ, ಧ್ಯಾನ, ಸಾಕ್ಷಾತ್ಕಾರಗಳಿಂದ ಲಿಂಗಾಂಗ ಸಾಮರಸ್ಯರೂಪ ಮೋಕ್ಷವನ್ನು ಹೊಂದುತ್ತಾನೆ. ಇದನ್ನೇ ಪ್ರಸ್ತುತ ಆಗಮವು ಲಿಂಗತ್ರಯದ ಆರಾಧನೆಯ ಮಹಿಮೆಯನ್ನು ಹೇಳುವ ನೆಪದಿಂದ ಸೂಚಿಸುತ್ತದೆ:

ಪೂಜಯನ್ನಿಷ್ಟಲಿಂಗಂ ತು ನಿಧ್ಯಾಯನ್ ಪ್ರಾಣಲಿಂಗಕಮ್।
ಭಾವಯನ್ ಭಾವಲಿಂಗಂ ವೈ ಮೃತ್ಯುಪಾಶಾಂಶ್ಛಿನತ್ತಿ ಸಃ।।
ಸರ್ವದೇವಮಯಂ ಲಿಂಗಂ ತಸ್ಮಿನ್ ಸಾಕ್ಷಾಚ್ಛಿವಃ ಸ್ವಯಮ್।
ಅನುಗ್ರಹಾಯ ವಸತಿ ತಸ್ಮಾಲ್ಲಿಂಗಂ ಪ್ರಪೂಜಯೇತ್।।
ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ।
ಲೀಯಂತೇ ಲಿಂಗಮೂಲೇ ತು ತಸ್ಮಾಲ್ಲಿಂಗಂ ಪ್ರಪೂಜಯೇತ್।।[೩೬]

"ಭಕ್ತನು ಇಷ್ಟಲಿಂಗವನ್ನು ಪೂಜಿಸುತ್ತಾ, ಪ್ರಾಣಲಿಂಗವನ್ನು ಧ್ಯಾನಿಸುತ್ತಾ ಮತ್ತು ಭಾವಲಿಂಗವನ್ನು ಭಾವಿಸುತ್ತಾ ತನ್ನ ಸಾವಿನ ಕಟ್ಟುಗಳನ್ನು ಕತ್ತರಿಸಿಕೊಳ್ಳುತ್ತಾನೆ. ಲಿಂಗವು ಸರ್ವದೇವಮಯ, ಶಿಷ್ಯರ ಅನುಗ್ರಹಕ್ಕಾಗಿ ಅದರಲ್ಲೇ ಶಿವನು ನೆಲೆಸಿದ್ದಾನೆ. ಆದ್ದರಿಂದ

---

೩೫. ಅದೇ, ೩.೪೫-೪೭.

೩೬. ಅದೇ, ೩.೪೮-೫೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗವನ್ನು ಏಕಾಗ್ರತೆಯಿಂದ ಪೂಜಿಸಬೇಕು. ಭೂಮಿಯ ಮೇಲೆ ಇರುವ ಎಲ್ಲಾ ತೀರ್ಥಗಳು, ಪುಣ್ಯಕ್ಷೇತ್ರಗಳು ಲಿಂಗಮೂಲದಲ್ಲೇ ಲೀನವಾಗಿವೆ. ಆದ್ದರಿಂದ ಲಿಂಗಪೂಜೆಯನ್ನು ಏಕಾಗ್ರತೆಯಿಂದ ಮಾಡಬೇಕು." ಹೀಗೆ ಇಷ್ಟಲಿಂಗವನ್ನು ಪೂಜಿಸಿ ಅದರಲ್ಲಿ ದೃಷ್ಟಿಯೋಗವನ್ನು ಸಾಧಿಸಿ, ಪ್ರಾಣಲಿಂಗದಲ್ಲಿ ಮನಸ್ಸನ್ನು ನೆಲೆಗೊಳಿಸಿ, ನಿರಾಕಾರ, ನಿಷ್ಕಲ-ಭಾವಲಿಂಗದ ಭಾವನೆಯನ್ನು ಬಲಿಸಿಕೊಂಡು ಮಹಾಲಿಂಗದಲ್ಲಿ ಒಂದಾಗಬೇಕು. "ತಸ್ಮಾಲ್ಲಿಂಗಂ ಪ್ರಪೂಜಯೇತ್" ಎಂಬ ಅನುರಣನೆಯು ಇದನ್ನೆ ಒತ್ತಿ ಒತ್ತಿ ಹೇಳುತ್ತದೆ. ಲಿಂಗವು ವಿಶ್ವದ ಆಕಾರದಲ್ಲಿದೆ, ವಿಶ್ವವು ಲಿಂಗಮಯ, ಎಂಬ ತತ್ತ್ವವನ್ನು ನಿರೂಪಿಸಿ ಲಿಂಗಾರಾಧನೆಯ ಮಹಿಮೆಯನ್ನು ಪ್ರಸ್ತುತ ಆಗಮವು ವರ್ಣಿಸುತ್ತದೆ:

> ಆಕಾಶಂ ಲಿಂಗಮಿತ್ಯಾಹುಃ ಪೃಥಿವೀ ತಸ್ಯ ಪೀಠಿಕಾ।
> ಆಲಯಃ ಸರ್ವಭೂತಾನಾಂ ಲಯನಾಲ್ಲಿಂಗಮುಚ್ಯತೇ॥
> ಸರ್ವೇ ಲಿಂಗಮಯಾ ಲೋಕಾಃ ಸರ್ವಂ ಲಿಂಗೇ ಪ್ರತಿಷ್ಠಿತಮ್।
> ತಸ್ಮಾತ್ ಪೂಜಯೇಲ್ಲಿಂಗಂ ಯದೀಚ್ಛೇತ್ ಸಿದ್ಧಿಮಾತ್ಮನಃ॥[೩೭]

"ಆಕಾಶವೇ ಲಿಂಗ ಭೂಮಿಯೇ ಅದರ ಪೀಠಿಕೆ ಎನ್ನುತ್ತಾರೆ. ಅದು ಎಲ್ಲಾ ಪ್ರಾಣಿಗಳ ಆಶ್ರಯವಾಗಿದೆ. ಎಲ್ಲವನ್ನೂ ತನ್ನಲ್ಲಿ ಲಯಗೊಳಿಸಿಕೊಂಡಿರುವುದೆಂದು ಅದು ಲಿಂಗವೆಂದು ಕರೆಯಲ್ಪಡುತ್ತದೆ. ಎಲ್ಲಾ ಲೋಕಗಳೂ ಲಿಂಗಮಯ. ಎಲ್ಲವೂ ಲಿಂಗದಲ್ಲಿಯೇ ನೆಲೆಯಾಗಿವೆ. ಆದ್ದರಿಂದ ಆತ್ಮಸಿದ್ಧಿಗಾಗಿ ಆ ಲಿಂಗವನ್ನು ಪೂಜಿಸಬೇಕು." ಆತ್ಮಸಾಕ್ಷಾತ್ಕಾರಕ್ಕೆ ಲಿಂಗಪೂಜೆಯು ಸಾಧನ. ಈ ವಿಶ್ವರೂಪದ ಲಿಂಗವನ್ನು ಪೂಜಿಸುವುದರಿಂದ ವಿಶ್ವಾತ್ಮನಾದ ಪರಶಿವನಲ್ಲಿ ಬೆರೆತು ಬೇರಾಗದಂತಹ ಕೌಶಲ ಸಿದ್ಧಿಸುತ್ತದೆ.

ಇದು ಚಂದ್ರಜ್ಞಾನಾಗಮವು ನಿರೂಪಿಸಿದ ಲಿಂಗತತ್ತ್ವದ ವಿಚಾರ. ಆ ವಿಚಾರದ ಮುಖ್ಯಾಂಶಗಳನ್ನು ಹೀಗೆ ಗುರುತಿಸಬಹುದು:

೧. ಲಿಂಗಶಬ್ದದ ನಿಷ್ಪತ್ತಿಯಂತೆ ಲಿಂಗವೆಂದರೆ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ಪರಶಿವಬ್ರಹ್ಮ. ಇದು ಶೈವಾಗಮಗಳಲ್ಲಿ ಘನೀಭೂತವಾದ ತತ್ತ್ವ. ಅದೇ ಶ್ರುತಿ (ಉಪನಿಷತ್) ಸಮ್ಮತವಾದ ನಿರೂಪಣೆ ಯೆಂಬುದನ್ನು ಈಗಾಗಲೇ ಗುರುತಿಸಿಯಾಗಿದೆ. ಹೀಗೆ ಚಂದ್ರಜ್ಞಾನಾಗಮದ ಈ ನಿರೂಪಣೆಗೆ ಶ್ರುತಿಯೇ ಆಧಾರ. ಇಲ್ಲಿ ಬಂದಿರುವ ವಿಶೇಷವೆಂದರೆ ನೀರೇ ನೀರಾಗಿದ್ದ ಜಗತ್ತಿನ ಪೂರ್ವಸ್ಥಿತಿಯಲ್ಲಿ ಹೇಗೆ ಜ್ವಾಲಾವೃತವಾದ ಲಿಂಗವು ಮೂಡಿಬಂದಿತು

---

೩೭. ಅದೇ, ೩.೫೧,೫೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬುದು. ಅದು ಋಗ್ವೇದದಲ್ಲಿ ಬರುವ 'ಹಿರಣ್ಯಗರ್ಭ' ತತ್ತ್ವಕ್ಕೆ ಸಂವಾದಿಯಾಗಿದೆ. ಅದನ್ನೂ ಅದೇ ಸಂದರ್ಭದಲ್ಲಿ ಗುರುತಿಸಲಾಗಿದೆ.

೨. ಗಾಯತ್ರೀಮಂತ್ರ ಸಹಿತವಾದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ ಮತ್ತು ಜ್ಯೋತಿಷವೆಂಬ ಆರು ಅಂಗಗಳಿಂದ ಕೂಡಿದ, ಪದಾದಿಪಾಠಯುಕ್ತವಾದ ಸಮಗ್ರ ವೇದವು ಲಿಂಗದಲ್ಲಿ ನೆಲೆಯಾಗಿದೆ ಎಂದು ಹೇಳುವ ಮೂಲಕ ಚಂದ್ರಜ್ಞಾನಾಗಮವು ಲಿಂಗದ ಜ್ಞಾನಮಯಸ್ವರೂಪವನ್ನು ಪ್ರತಿಪಾದಿಸುತ್ತದೆ. ಇದಕ್ಕೆ ಸಂವಾದಿಯಾದ ವಿಚಾರವನ್ನು ಸೂಕ್ಷ್ಮಾಗಮವು ಹೀಗೆ ಹೇಳಿದೆ:

ದೇವದಾನವಗಂಧರ್ವಾಃ ವೇದಾಃ ಸಾಂಗಾಃ ಸನಾತನಾಃ।
ಉತ್ಪದ್ಯಂತೇಽತ್ರ ಕಲ್ಪಾದೌ ಕಲ್ಪಾಂತೇ ಚ ಲಯಂ ಗತಾಃ॥
ದಕ್ಷಿಣಾಂಗಾತ್ ತತೋ ಬ್ರಹ್ಮಾ ವಿಷ್ಣುರ್ವಾಮಾಂಗತಸ್ತಥಾ।
ಸಮಸ್ತವೇದಜನನೀ ಗಾಯತ್ರೀ ಹೃದಯಾದಭೂತ್॥
ವೇದಾಃ ಶಿರಃಸಮುದ್ಭೂತಾಃ ಸಾಂಗೋಪಾಂಗಾ ಸಹಸ್ರಶಃ।
ಉತ್ಪದ್ಯತೇ ಲೀಯತೇ ಚ ಲಿಂಗೇಽಸ್ಮಿನ್ ಸಚರಾಚರಮ್॥[೩೮]

"ದೇವತೆಗಳು, ರಾಕ್ಷಸರು, ಗಂಧರ್ವರು, ಅಂಗಸಹಿತವಾದ ಪ್ರಾಚೀನ ವೇದಗಳು ಕಲ್ಪದ ಆರಂಭದಲ್ಲಿ ಅಲ್ಲಿಂದಲೇ (ಅಂದರೆ ಲಿಂಗದಿಂದಲೇ) ಉದ್ಭವಿಸಿದವು, ಮತ್ತೆ ಕಲ್ಪದ ಕೊನೆಯಲ್ಲಿ ಅದರಲ್ಲೇ ಲಯ ಹೊಂದಿದವು. ಲಿಂಗದ ಬಲಭಾಗದಿಂದ ಬ್ರಹ್ಮನು, ಎಡಭಾಗದಿಂದ ವಿಷ್ಣು ಮತ್ತು ಹೃದಯದಿಂದ ಸರ್ವವೇದಗಳ ಜನನಿಯಾದ ಗಾಯತ್ರಿಯು ಉತ್ಪನ್ನರಾದರು. ಅಂಗ-ಉಪಾಂಗಗಳಿಂದ ಕೂಡಿದ ವೇದಗಳು ಅದರ ಶಿರಸ್ಸಿನಿಂದ ಉದ್ಭವಿಸಿದವು. ಚರಾಚರ ಜಗತ್ತು ಇದೇ ಲಿಂಗದಿಂದ ಹುಟ್ಟುತ್ತದೆ ಮತ್ತು ಇದರಲ್ಲೇ ಲೀನವಾಗುತ್ತದೆ."

೩. ಪರಬಿಂದು, ಪರನಾದ, ಅಪರಬಿಂದು ಮತ್ತು ಅಪರನಾದಗಳೆಂದು ಲಿಂಗದ ನಾಲ್ಕು ಭಾಗಗಳನ್ನು ಗುರುತಿಸುವ ಚಂದ್ರಜ್ಞಾನಾಗಮವು ಲಿಂಗದ ಸ್ವರೂಪವನ್ನು ಬಿಂದು-ನಾದಾತ್ಮಕವೆಂದು ವರ್ಣಿಸುತ್ತದೆ. ಶಕ್ತಿಯೇ ಬಿಂದು ಮತ್ತು ಶಿವನೇ ನಾದ ಅಂದರೆ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳು, ಇವು ಲಿಂಗದ ಘಟಕಗಳು; ಆದ್ದರಿಂದ ಅವೇ ಲಿಂಗದಿಂದುತ್ಪನ್ನವಾಗುವ ಜಗತ್ತಿನ ಘಟಕಗಳು. ಬಿಂದುವೇ ಲಿಂಗದ ಪೀಠಿಕೆ, ನಾದವೇ ಮೇಲಿನ ಲಿಂಗದ ಆಕಾರ. ಹೀಗೆ ಬಿಂದು-ನಾದಗಳ ಸಮಾವೇಶವೇ ಲಿಂಗ, ಆ ಸಮಾವೇಶದಿಂದಲೇ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯ. ಇದಕ್ಕೆ ಸಂವಾದಿಯಾದ

---

೩೮. ಸೂಕ್ಷ್ಮಾಗಮ, ಕ್ರಿ.ಪಾ., ೬.೧೩-೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಚಾರವು ಸೂಕ್ಷ್ಮಾಗಮದಲ್ಲಿ ಬಂದಿದೆ. ಅದನ್ನು ಆ ಸಂದರ್ಭದಲ್ಲಿ ನಿರೂಪಿಸಲಾಗಿದೆ. ಲಿಂಗವನ್ನು ಮಾತಾಪಿತೃಸ್ವರೂಪವೆಂದು ವರ್ಣಿಸಿರುವುದು ಚಂದ್ರಜ್ಞಾನಾಗಮದ ವಿಶೇಷ ಅಂಶ.

೪. ಲಿಂಗವು ಮೂರಾದ ಮತ್ತು ಆರಾದ ಬಗೆಯನ್ನು ಚಂದ್ರಜ್ಞಾನಾಗಮವು ಸುಂದರವಾಗಿ ವರ್ಣಿಸಿದೆ. ಇದು ಹೇಗೆ ಶ್ರೀ ಸಿದ್ಧಾಂತಶಿಖಾಮಣಿಯ ಲಿಂಗತ್ರಯ ವಿಚಾರಕ್ಕೆ ಪ್ರೇರಕವಾಗಿದೆಯೆಂಬುದನ್ನು ಅದೇ ಸಂದರ್ಭದಲ್ಲಿ ಗುರುತಿಸಲಾಗಿದೆ. ಆರು ಲಿಂಗಗಳನ್ನು ಪರಮಾತ್ಮನ ಪಂಚಮುಖಗಳಾದ ಸದ್ಯೋಜಾತ ಮುಂತಾದ ಪಂಚಬ್ರಹ್ಮರ ಮತ್ತು ಅಖಂಡರೂಪದ ಪ್ರತೀಕಗಳೆಂದು ವರ್ಣಿಸಿರುವುದು ಅತ್ಯಂತ ಮಾರ್ಮಿಕವಾದ ವಿಚಾರ. ಈ ಆರು ಲಿಂಗಗಳ ಸ್ವರೂಪನಿರ್ದೇಶವು ಸೂಕ್ಷ್ಮಾಗಮ, ಕಾರಣಾಗಮ ಮುಂತಾದ ಇತರ ಆಗಮಗಳ ವಿಚಾರದೊಂದಿಗೆ ತೆಗೆದುಕೊಂಡಾಗ, ಭಕ್ತ ಮುಂತಾದ ಆರು ಸ್ಥಲಗಳಿಗೂ ಮತ್ತು ಆರು ಲಿಂಗಗಳಿಗೂ ಇರುವ ಸಂಬಂಧ ಮತ್ತು ಆಯಾಯ ಸ್ಥಲಗಳಲ್ಲಿ ಆಯಾಯ ಲಿಂಗಕ್ಕೆ ಶ್ರದ್ಧಾ ಮುಂತಾದ ಆಯಾಯ ಸ್ಥಲಸಂಬಂಧಿಯಾದ ಭಕ್ತಿಗಳಿಂದ ನಡೆಸಬೇಕಾದ ಉಪಾಸನೆಯ ಸಂಪೂರ್ಣ ಚಿತ್ರವು ಮೂಡಿಬರುತ್ತದೆ.

೫. ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳ ಆರಾಧನೆಯು ಚಂದ್ರಜ್ಞಾನಾಗಮದಲ್ಲಿ ಚನ್ನಾಗಿ ಬಂದಿದೆ. ಪ್ರಾಣಲಿಂಗದ ಸ್ವರೂಪ ನಿರ್ದೇಶವಂತೂ ಶ್ರೀ ಸಿದ್ಧಾಂತಶಿಖಾಮಣಿಗೆ ಮೂಲ ಪ್ರೇರಣೆಯಾಗಿದೆ. ಅದನ್ನು ಮನಸ್ಸಿನ ಸ್ಥಾನದಲ್ಲಿ ಜ್ಯೋತಿರ್ಲಿಂಗ ಸ್ವರೂಪದಲ್ಲಿ ಕಂಡು ಪೂಜಿಸಬೇಕು ಎಂದು ಹೇಳಿರುವುದು ಸೂಚ್ಯವಾಗಿದೆ. ಸೂಕ್ಷ್ಮಾಗಮದಲ್ಲಿ ಇದರ ವಿಸ್ತಾರವನ್ನು ಕಾಣುತ್ತೇವೆ:

ಸರ್ವವ್ಯಾಪಕಮೀಶಾನಂ ಪವಿತ್ರಂ ಪುಷ್ಟಿವರ್ಧನಮ್।
ಅರ್ಚಯೇದಾಂತರೈಃ ಪುಷ್ಪೈರ್ಮಾನಸೈರುಪಚಾರಕೈಃ॥
ಅಹಿಂಸಾ ಚೇಂದ್ರಿಯಜಯಃ ಸರ್ವಭೂತದಯಾ ಪರಾ।
ಕ್ಷಮಾ ಧ್ಯಾನಂ ತಪೋ ಜ್ಞಾನಂ ಸತ್ಯಂ ಚೈವ ತಥಾ ಪರಮ್॥
ಏಭಿಃ ಪುಷ್ಪೈರಹಿಂಸಾದ್ಯೈರ್ಮಾನಸ್ಯೈಃ ಶಿವಮರ್ಚಯೇತ್॥[೪೯]

"ಸರ್ವವ್ಯಾಪಕವೂ, ಪವಿತ್ರವೂ, ಪುಷ್ಟಿವರ್ಧಕವೂ ಆದ ಲಿಂಗವನ್ನು ಆಂತರಿಕ ಮಾನಸ ಪುಷ್ಪಗಳಿಂದ, ಉಪಚಾರಗಳಿಂದ ಪೂಜಿಸಬೇಕು. ಅಹಿಂಸೆ, ಇಂದ್ರಿಯಜಯ, ಸರ್ವಪ್ರಾಣಿಗಳಲ್ಲಿ ಅತ್ಯಂತ ದಯೆ, ಕ್ಷಮೆ, ಧ್ಯಾನ, ತಪಸ್ಸು, ಜ್ಞಾನ, ಸತ್ಯ ಇಂತಹ ಅಹಿಂಸಾ ಮುಂತಾದ ಮಾನಸ ಪುಷ್ಪಗಳಿಂದ ಲಿಂಗವನ್ನು (ಪ್ರಾಣಲಿಂಗವನ್ನು)

---

೪೯. ಅದೇ, ೬.೨೪-೨೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಚಿಸಬೇಕು." ಇದರ ಸ್ಫೂರ್ತಿಯಿಂದಲೇ ಶ್ರೀ ಸಿದ್ಧಾಂತಶಿಖಾಮಣಿಯು ಪ್ರಾಣಲಿಂಗಾರ್ಚನೆಯ ವಿವರವಾದ ವರ್ಣನೆಯನ್ನು ನೀಡಿದೆ ಎಂಬುದು ಸ್ಪಷ್ಟ.

೬. ಭಾವಲಿಂಗದ ಸ್ವರೂಪದ ವರ್ಣನೆಯಂತೂ ಚಂದ್ರಜ್ಞಾನಾಗಮದ ವಿಶೇಷ ಅಂಶ. ಭಾವಲಿಂಗದ ಧ್ಯಾನವು ತುರೀಯಾತೀತ ಸ್ಥಿತಿಯಲ್ಲಿ ನಡೆಯಬೇಕು. ಇದಕ್ಕೆ ಪೂರಕವಾಗಿ ಜಾಗ್ರತ್‌ಸ್ಥಿತಿಯಲ್ಲಿನ ಇಷ್ಟಲಿಂಗದ ಧ್ಯಾನ-ಪೂಜೆ ಮತ್ತು ತುರೀಯ-ಸ್ಥಿತಿಯಲ್ಲಿನ ಪ್ರಾಣಲಿಂಗದ ಧ್ಯಾನ-ಪೂಜೆಗಳು ಬಂದಿವೆ. ಇದರಿಂದ ತ್ರಿವಿಧಲಿಂಗಾನುಸಂಧಾನಪೂರ್ವಕ ಆರಾಧನೆಯ ಮಾರ್ಗವು ಸ್ಪಷ್ಟವಾಗುತ್ತದೆ. ಅದೇ ಮಾರ್ಗದಲ್ಲಿ ನಡೆವ ಸತತ ಅಭ್ಯಾಸವೇ ಸಮರಸಾತ್ಮಕ ಶಿವ-ಜೀವೈಕ್ಯ ವಿಜ್ಞಾನಕ್ಕೆ ಸಾಧನ.

○

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಜಂಗಮ-ಸ್ವರೂಪ ಮತ್ತು ಮಾಹಾತ್ಮ್ಯ

-ಡಾ।। ಸಿ. ಶಿವಕುಮಾರ ಸ್ವಾಮಿ

ಈ ಜಗತ್ತು ಸ್ಥಾವರ ಮತ್ತು ಜಂಗಮವೆಂದು ಎರಡು ಬಗೆಯಾಗಿದೆ.[೧] ಯಾವುದು ಒಂದೇ ಸ್ಥಳದಲ್ಲಿ ಯಾವಾಗಲೂ ಇರುತ್ತದೆಯೋ ಅದು ಸ್ಥಾವರ, ಸಂಚಾರಶೀಲ-ವಾದದ್ದು ಜಂಗಮ ಎಂಬುದು ಸಾಮಾನ್ಯವಾದ ವಿವರಣೆ. ವೀರಶೈವ ಸಿದ್ಧಾಂತದ ಪ್ರಕಾರ ಸಮಸ್ತ ಪ್ರಪಂಚವೂ ಶಿವಸ್ವರೂಪವೆಂದು ಸಿದ್ಧಾಂತ ಶಿಖಾಮಣಿಯ ಈ ಶ್ಲೋಕವು ಸ್ಪಷ್ಟಪಡಿಸುತ್ತದೆ-

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ।।[೨]

"ಎಲೆ, ರೆಂಬೆ ಮೊದಲಾದ ರೂಪದಿಂದ ಮರವು ಹೇಗೆ ಇದೆಯೋ ಹಾಗೆ ಭೂಮಿಯೇ ಮೊದಲಾದ ರೂಪದಿಂದ ಶಿವನೊಬ್ಬನೇ ವಿರಾಜಿಸುತ್ತಿದ್ದಾನೆ." ವೀರಶೈವ ಸಿದ್ಧಾಂತವು ಪೂರ್ವೋಕ್ತ ಸ್ಥಾವರ-ಜಂಗಮಗಳನ್ನು ಶಿವನ ಎರಡು ಸ್ವರೂಪಗಳೆಂದು ಪ್ರತಿಪಾದಿಸುತ್ತದೆ. ಈ ಪ್ರಕಾರ ಸ್ಥಾವರರೂಪಿ ಶಿವಲಿಂಗದ ಮತ್ತು ಜಂಗಮರೂಪಿಯಾದ ಶಿವಜ್ಞಾನಿಯ ಪೂಜೆಯು ವೀರಶೈವ ಧರ್ಮದಲ್ಲಿ ವಿಹಿತವಾಗಿದೆ.

ವೀರಶೈವ ಸಿದ್ಧಾಂತದ ಅಷ್ಟಾವರಣಗಳಲ್ಲಿ ಮೊದಲನೆಯ ಮೂರು ಆವರಣಗಳಾದ ಗುರು-ಲಿಂಗ-ಜಂಗಮ ಪೂಜನೀಯವಾದವುಗಳು. ಈ ಮೂರು ಹೇಗೆ ಪೂಜನೀಯಗಳೆಂಬುದನ್ನು ಸಿದ್ಧಾಂತ ಶಿಖಾಮಣಿಯ-

ಏಕ ಏವ ಶಿವಃ ಸಾಕ್ಷಾತ್ ಸರ್ವಾನುಗ್ರಹಕಾರಕಃ।
ಗುರುಜಂಗಮಲಿಂಗಾತ್ಮಾ ವರ್ತತೇ ಭುಕ್ತಿಮುಕ್ತಿದಃ।।[೩]

ಎಂಬ ಶ್ಲೋಕದಂತೆ ಸರ್ವಾನುಗ್ರಹಕಾರಕನಾದ ಶಿವನೊಬ್ಬನೇ ಗುರು-ಲಿಂಗ ಮತ್ತು ಜಂಗಮ ರೂಪದಿಂದ ಅವತರಿಸಿ ತನ್ನ ಭಕ್ತರಿಗೆ ಭುಕ್ತಿ-ಮುಕ್ತಿಗಳನ್ನು ನೀಡುತ್ತಾನೆ ಎಂಬ

---

೧. ಜಂಗಮಂ ಸ್ಥಾವರಂ ಚೇತಿ ಶಂಭೋ ರೂಪದ್ವಯಂ ಸ್ಮೃತಮ್।
-ಚಂದ್ರಜ್ಞಾನಾಗಮ, ಕ್ರಿ.ಪಾ., ೪.೪.

೨. ಸಿದ್ಧಾಂತ ಶಿಖಾಮಣಿ, ೧೦.೬೬.

೩. ಅದೇ, ೯.೫೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉಕ್ತಿಯಿಂದ ಸ್ಪಷ್ಟವಾಗುತ್ತದೆ. ಆದುದರಿಂದಲೇ "ಏಕಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂ ತು ಜಂಗಮಃ"[೪] ಎಂಬ ಮಾತೂ ಸಹ ಪ್ರಸಿದ್ಧವಾಗಿದೆ. ಆದುದರಿಂದ ವೀರಶೈವ ಸಿದ್ಧಾಂತದಲ್ಲಿ ಪರಮಾತ್ಮನ ಈ ಮೂರು ರೂಪಗಳನ್ನು ಸಮಾನ ಗೌರವದಿಂದ ಕಾಣಲಾಗುತ್ತಿದೆ. ಗುರು-ಲಿಂಗಗಳ ಸ್ವರೂಪಾದಿಗಳ ವಿವೇಚನೆಯು ಈಗಾಗಲೇ ನಿರೂಪಿತವಾಗಿದೆ. ಪ್ರಸ್ತುತ ಮೂರನೆಯ ಆವರಣವಾದ ಜಂಗಮದ ಸ್ವರೂಪ, ಜಂಗಮ ಶಬ್ದದ ವೀರಶೈವ ಪರಿಭಾಷೆ, ಜಂಗಮನ ಮಹಿಮೆ ಇತ್ಯಾದಿಗಳನ್ನು ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿ ನಿರೂಪಿತವಾಗಿರುವುದನ್ನು ಬೇರೆ ಆಗಮಗಳೊಂದಿಗೆ ತುಲನಾತ್ಮಕವಾಗಿ ಪ್ರಸ್ತುತ ಪಡಿಸುವುದು ಈ ಪ್ರಬಂಧದ ಮುಖ್ಯ ಉದ್ದೇಶ.

ಜಂಗಮ ಶಬ್ದದ ಅರ್ಥ:

"ಚರಿಷ್ಣು ಜಂಗಮಚರಂ ತ್ರಸಮಿಂಗಂ ಚರಾಚರಮ್"[೫] ಎಂಬ ಅಮರಕೋಶದ ವಾಕ್ಯಾನುಸಾರವಾಗಿ ಜಂಗಮ ಎಂದರೆ ಸಂಚರಿಸುವ, ಚಲಿಸುವ ಎಂದರ್ಥ. ಜಂಗಮ ಶಬ್ದವು ಗಮ್‌ಲೃ ಗತೌ ಎಂಬ ಧಾತುವಿನಿಂದ ನಿಷ್ಪನ್ನವಾಗಿದ್ದು ನಡೆದಾಡುವ, ಸಂಚರಿಸುವ ಎಂಬ ಅರ್ಥವನ್ನು ಹೊಂದಿದ್ದರೂ ಗಮ್‌ಲೃ ಗತೌ ಧಾತುವಿಗೆ ಜ್ಞಾನವೆಂಬ ಅರ್ಥವೂ ಇರುವುದರಿಂದ ಜಂಗಮ ಎಂದರೆ ಶಿವಜ್ಞಾನಸಂಪನ್ನ ಎಂದು ಅರ್ಥವಾಗುತ್ತದೆ. ಶ್ರೀ ರೇಣುಕ ಭಗವತ್ಪಾದರು ಸಿದ್ಧಾಂತ ಶಿಖಾಮಣಿಯಲ್ಲಿ ಜಂಗಮ ಶಬ್ದದ ಅರ್ಥವನ್ನು ಈ ರೀತಿಯಾಗಿ ನೀಡಿದ್ದಾರೆ-

ಜಾನಂತ್ಯತಿಶಯಾದ್ ಯೇ ತು ಶಿವಂ ವಿಶ್ವಪ್ರಕಾಶಕಮ್।
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ॥[೬]

"ಜಗತ್ತಿನ ಪ್ರಕಾಶಕನಾದ ಶಿವನನ್ನು ಯಾರು ತಮ್ಮ ಸ್ವರೂಪದಿಂದಲೂ ಅರ್ಥಾತ್ ತನ್ನನ್ನು ಶಿವನ ಅತಿಶಯವಾದ ರೂಪವೆಂದು ನಿಶ್ಚಯವಾಗಿ ತಿಳಿಯುತ್ತಾನೆಯೋ ಅವನೇ ಜಂಗಮ ಎಂದು ಕರೆಯಲ್ಪಡುತ್ತಾನೆ."

ವೀರಶೈವ ಸದಾಚಾರಸಂಗ್ರಹದಲ್ಲಿ ಜಂಗಮ ಶಬ್ದದ ನಿರ್ವಚನವನ್ನು ಈ ರೀತಿಯಾಗಿ ಪ್ರತಿಪಾದಿಸಲಾಗಿದೆ-

ಜಕಾರಾಜ್ಜನನಂ ದೂರಂ ಗಕಾರಾದ್ ಗತಿನಾಶನಮ್।
ಮಕಾರಾನ್ಮರಣಂ ನಷ್ಟಂ ಜಂಗಮಸ್ತ್ರ್ಯಕ್ಷರಾತ್ಮಕಃ॥
ಯಸ್ಯ ನಾಸ್ತಿ ಪುನರ್ಜನ್ಮ ಗತಿರ್ನಾಸ್ತಿ ಕದಾಚನ।
ಬಾಧತೇ ಯಂ ನ ಮರಣಂ ಶೃಣು ನಾಥೇ ಸ ಜಂಗಮಃ॥

---

೪. ಕಾಮಿಕಾಗಮ.

೫. ಅಮರಕೋಶ, ೧೧೧೯ (ಎನ್. ರಂಗನಾಥ ಶರ್ಮಾ).

೬. ಸಿದ್ಧಾಂತ ಶಿಖಾಮಣಿ, ೧೧.೩೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜರಾಮರಣಶೂನ್ಯತ್ವಾದ್ ಗಮಾಗಮವಿವರ್ಜನಾತ್।
ಮನುಷ್ಯಾಚಾರರಾಹಿತ್ಯಾಜ್ಜಂಗಮೋಽಯಮುದಾಹೃತಃ॥[೭]

'ಜ' ಎಂದರೆ ಜನನರಹಿತನು, 'ಗ' ಎಂದರೆ ಗಮನರಹಿತನು ಮತ್ತು 'ಮ' ಎಂದರೆ ಮರಣರಹಿತನು ಎಂದು ಪ್ರತಿಯೊಂದು ಅಕ್ಷರದ ಅರ್ಥಪ್ರತಿಪಾದನೆಯ ಮೂಲಕ ಜಂಗಮನು ಮುಪ್ಪು-ಸಾವುಗಳಿಲ್ಲದವನು. ಆದ್ದರಿಂದ ಆತನು ಜೀವನ್ಮುಕ್ತನೆಂದು ಪ್ರತಿಪಾದಿತನಾಗಿದ್ದಾನೆ.

ಜಂಗಮ ಶಬ್ದದ ಪರ್ಯಾಯ ಪದಗಳು:

ಜಂಗಮ ಎಂದರೆ ಶಿವಜ್ಞಾನಿ ಎಂದರ್ಥವೆಂಬ ಮೇಲಿನ ನಿರೂಪಣೆಯಿಂದ ಸ್ಪಷ್ಟವಾಗುವುದೇನೆಂದರೆ ಜಂಗಮ, ಶಿವಜ್ಞಾನಿ, ಶಿವಯೋಗಿ ಪದಗಳೆಲ್ಲವೂ ಪರ್ಯಾಯ ವಾಚಿಗಳೆಂದು ಅರ್ಥೈಸಬಹುದು. ಮಾಹೇಶ್ವರ, ಚರ, ಭಕ್ತ, ಶೈವ -ಇವೆಲ್ಲವೂ ಜಂಗಮ ಶಬ್ದದ ಪರ್ಯಾಯ ಪದಗಳೆಂದು ಚಂದ್ರಜ್ಞಾನಾಗಮದ ಈ ಶ್ಲೋಕದಿಂದ ತಿಳಿದುಬರುತ್ತದೆ-

ಮಾಹೇಶ್ವರಶ್ಚರೋ ಭಕ್ತಃ ಶೈವೋ ಜಂಗಮ ಇತ್ಯಪಿ।
ಸಹಜಸ್ಯಾಭಿಧಾನಾನಿ ಭವಂತೀಶ್ವರಶಾಸನಾತ್॥[೮]

ಸೂಕ್ಷ್ಮಾಗಮದಲ್ಲಿ ಜಂಗಮನನ್ನು ನಿರಾಭಾರೀ[೯] ಎಂದು ಕರೆಯಲಾಗಿದೆ. ಅವಧೂತ, ಸಂನ್ಯಾಸಿ, ಯೋಗಿ, ಪಾಶುಪತ, ಲಿಂಗಿ, ವೀರ, ವೀರಶೈವ, ವೀರಮಾಹೇಶ್ವರ, ಯತಿ -ಇವು ವೀರಶೈವಯೋಗಿಯ ಪರ್ಯಾಯ ಹೆಸರುಗಳೆಂದು ಪಾರಮೇಶ್ವರಾಗಮವು ತಿಳಿಸುತ್ತದೆ-

ಅವಧೂತಶ್ಚ ಸಂನ್ಯಾಸೀ ಯೋಗೀ ಪಾಶುಪತಃ ಶಿವಃ।
ಲಿಂಗೀ ವೀರೋ ವೀರಶೈವೋ ಮಹಾಮಾಹೇಶ್ವರೋ ಯತಿಃ॥
ಪರ್ಯಾಯನಾಮಾನ್ಯೇತಾನಿ ವೀರಶೈವಸ್ಯ ಯೋಗಿನಃ॥[೧೦]

ವೀರಶೈವ ಸದಾಚಾರಸಂಗ್ರಹದ ಪ್ರಕಾರ ವಿಶಿಷ್ಟವೀರ ಮತ್ತು ವೀರಮಾಹೇಶ್ವರ ಎಂಬ ಪರ್ಯಾಯ ಪದಗಳಿವೆ ಎಂಬುದು ಈ ಶ್ಲೋಕದಿಂದ ಸ್ಪಷ್ಟವಾಗುತ್ತದೆ-

ಅತೋ ವಿಶಿಷ್ಟವೀರೇತಿ ವೀರಮಾಹೇಶ್ವರೇತಿ ಚ।
ಪರ್ಯಾಯೋ ವರ್ತತೇ ದೇವಿ ಜಂಗಮಸ್ಯ ಮಹಾತ್ಮನಃ॥[೧೧]

---

೭. ವೀರಶೈವ ಸದಾಚಾರಸಂಗ್ರಹ, ೧೫.೬-೮.

೮. ಚಂದ್ರಜ್ಞಾನಾಗಮ, ಕ್ರಿ.ಪಾ. ೪.೭.

೯. ನಿವೃತ್ತಕರ್ಮಭಾರತ್ವಾನ್ನಿರಾಭಾರ ಇತಿ ಸ್ಮೃತಃ॥ -ಸೂಕ್ಷ್ಮಾಗಮ, ಕ್ರಿ.ಪಾ., ೭.೬೪.

೧೦. ಪಾರಮೇಶ್ವರಾಗಮ, ೧೦.೬೭-೬೮.

೧೧. ವೀರಶೈವ ಸದಾಚಾರಸಂಗ್ರಹ, ೧೧.೪೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಭಾರತದ ಅನುಶಾಸನಪರ್ವದಲ್ಲಿ ಜಂಗಮನನ್ನು ಲಿಂಗಿಬ್ರಾಹ್ಮಣ[೧೨] ಎಂದು ಕರೆಯಲಾಗಿದೆ.

ಪ್ರಚಲಿತವಿರುವ ಈ ಪರಂಪರೆಯ ಅವಲೋಕನದಿಂದ ತಿಳಿಯುವುದೇನೆಂದರೆ ಜಂಗಮ ವಂಶದಲ್ಲಿ ಬಹು ಪ್ರಾಚೀನ ಕಾಲದಿಂದಲೇ ಶಿವಜ್ಞಾನಿಗಳ ಪರಂಪರೆಯು ಬಂದಿದೆ. ಇಂದಿಗೂ ಕೂಡ ಆ ಬಗೆಯ ಶಿವಜ್ಞಾನಿಗಳಾದ ಜಂಗಮರು ಅಲ್ಲಲ್ಲಿ ಕಂಡುಬರುತ್ತಾರೆ. ಜಂಗಮ ವಂಶದಲ್ಲಿ ಜನಿಸಿದ ಎಲ್ಲರಿಗೂ ಈ ಬಗೆಯ ಜ್ಞಾನದ ಅಭಾವವಿದ್ದರೂ ಸಹ ಶಿವಜ್ಞಾನಿಗಳ ಸಂತತಿ ಎನ್ನುವ ಕಾರಣ ಇಂದಿಗೂ ಅವರ ಮಹಿಮೆಯು ಲೋಕದಲ್ಲಿದೆ. ಈ ಅವಸ್ಥೆಯು ಬ್ರಾಹ್ಮಣ ಪರಂಪರೆಯಲ್ಲಿಯೂ ಸಮಾನವಾಗಿದೆ. ಎಲ್ಲ ಬ್ರಾಹ್ಮಣರೂ ಬ್ರಹ್ಮಜ್ಞಾನಿಗಳಾಗಿರುವುದಿಲ್ಲ. ಆದರೂ ಸಹ ಬ್ರಹ್ಮಜ್ಞಾನಿಗಳ ಸಂತತಿ ಎನ್ನುವ ಕಾರಣದಿಂದ ಎಲ್ಲ ಬ್ರಾಹ್ಮಣರಿಗೂ ಗೌರವವಿದೆ. ಈ ಬಗೆಯ ವ್ಯಾವಹಾರಿಕ ದೃಷ್ಟಿಯಿಂದ ಜಂಗಮ-ಬ್ರಾಹ್ಮಣ ಶಬ್ದಗಳು ಸಮಾನಾರ್ಥಕಗಳು. ಆದುದರಿಂದ ಜಂಗಮರಿಗೆ ಲಿಂಗಿಬ್ರಾಹ್ಮಣ ಎಂಬ ವ್ಯವಹಾರವು ಲೋಕದಲ್ಲಿ ಪ್ರಚಲಿತವಿದೆ.[೧೩]

ಜಂಗಮ ಎರಡು ವಿಧ:

ಸಹಜಜಂಗಮ ಮತ್ತು ಮಾಂತ್ರಿಕಜಂಗಮ ಎಂದು ಜಂಗಮ ಎರಡು ವಿಧವಾಗಿದೆ. ಮಾಂತ್ರಿಕ-ಸಹಜಗಳೆಂಬ ವಿಶೇಷಣಗಳಿಂದಲೇ ಈ ಎರಡು ಬಗೆಯ ಜಂಗಮದ ಸ್ವರೂಪವೇನೆಂಬುದು ಸ್ಪಷ್ಟವಾಗುತ್ತದೆ. ಅದನ್ನು ಚಂದ್ರಜ್ಞಾನಾಗಮವು ಹೀಗೆ ನಿರೂಪಿಸುತ್ತದೆ:

ಜಂಗಮಂ ದ್ವಿವಿಧಂ ಪ್ರೋಕ್ತಂ ಮಾಂತ್ರಿಕಂ ಸಹಜಂ ತ್ವಿತಿ।
ಮಾಂತ್ರಿಕಂ ಮಂತ್ರಸಾಮರ್ಥ್ಯಾದಾವಾಹಿತಮುದೀರಿತಮ್॥
ಧ್ರಿಯಮಾಣಂ ಮಹಾಶೈವೈಶ್ಚರಲಿಂಗಾದಿಕಂ ಮುನೇ॥
ಸಹಜಂ ಜಂಗಮಂ ಮಾಹೇಶ್ವರ ಇತ್ಯಭಿಧೀಯತೇ।

---

೧೨. ಕಿಮಾಹುರ್ಭರತಶ್ರೇಷ್ಠ ವಿಪ್ರಾಃ ಪಾತ್ರಂ ಸನಾತನಮ್।
ಲಿಂಗಿನಂ ಬ್ರಾಹ್ಮಣಂ ಚೈವ ಬ್ರಾಹ್ಮಣಂ ಚಾಪ್ಯಲಿಂಗಿನಮ್॥
ಸದ್‌ವೃತ್ತಿಮಂತಂ ವಿಜ್ಞಾಯ ಲಿಂಗಿನೇ ಚೇತರಾಯ ಚ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ॥
-ಮಹಾಭಾರತ, ಅಶುಶಾಸನಪರ್ವ, ೨೨.೧-೨;

(ಉದ್ಧೃತ-ಶಕ್ತಿ ವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶ:, ಪು. ೧೭೭).

೧೩. ಡಾ॥ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು, ಶಕ್ತಿವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶ; ಪು. ೧೭೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಹೇಶ್ವರಶ್ಚರೋ ಭಕ್ತಃ ಶ್ಶೈವೋ ಜಂಗಮ ಇತ್ಯಪಿ।
ಸಹಜಸ್ಯಾಭಿಧಾನಾನಿ ಭವಂತೀಶ್ವರಶಾಸನಾತ್॥[೧೪]

"ಮಂತ್ರ ಸಾಮರ್ಥ್ಯದಿಂದ ಆವಾಹಿಸಲ್ಪಡುವ ಶಿವಸ್ವರೂಪಿಯಾದ ಜಂಗಮಲಿಂಗವನ್ನು (ಇಷ್ಟಲಿಂಗವನ್ನು) ಮಾಂತ್ರಿಕಜಂಗಮ ಎಂದು ಕರೆಯಲಾಗುತ್ತದೆ. ಮಹಾಶೈವರು ಅರ್ಥಾತ್ ವೀರಶೈವರು ಅದನ್ನು ಇಷ್ಟಲಿಂಗದ ರೂಪದಲ್ಲಿ ಧರಿಸುತ್ತಾರೆ. ಸಹಜಜಂಗಮನನ್ನು ಮಾಹೇಶ್ವರ, ಚರ, ಭಕ್ತ, ಶೈವ, ಜಂಗಮ ಎಂಬ ಅಭಿಧಾನಗಳಿಂದಲೂ ಕರೆಯಲಾಗುತ್ತದೆ."

ಸಹಜಜಂಗಮ ಮೂರು ವಿಧ:

ಸಹಜ ಜಂಗಮನು ಬ್ರಹ್ಮಚಾರೀ, ಗೃಹಸ್ಥ ಮತ್ತು ನಿರಾಭಾರೀ ಎಂದು ಮೂರು ವಿಧ. ಇವರಲ್ಲಿ ಉತ್ತರೋತ್ತರವಾದವನು ಶ್ರೇಷ್ಠನು ಅರ್ಥಾತ್ ಬ್ರಹ್ಮಚಾರಿಗಿಂತಲೂ ಗೃಹಸ್ಥ, ಗೃಹಸ್ಥನಿಗಿಂತಲೂ ನಿರಾಭಾರಿಯು ಶ್ರೇಷ್ಠನಾದವನು. ಈ ಮೂರೂ ಬಗೆಯ ಜಂಗಮರ ಪೂಜೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಬೇಕೆಂದು ತಿಳಿಸುತ್ತದೆ ಚಂದ್ರಜ್ಞಾನಾಗಮ-

ಬ್ರಹ್ಮಚಾರೀ ಗೃಹೀ ಚೈವ ನಿರಾಭಾರೀತಿ ತೇ ತ್ರಯಃ।
ಯಥೋತ್ತರಂ ವಿಶಿಷ್ಯಂತೇ ಪೂಜನೀಯಾ ಯಥಾವಿಧಿ॥[೧೫]

ಜಂಗಮನ ಲಕ್ಷಣಗಳು:

ಚಂದ್ರಜ್ಞಾನಾಗಮವು ಬ್ರಹ್ಮಚಾರೀ, ಗೃಹಸ್ಥ ಮತ್ತು ನಿರಾಭಾರೀ ಎಂದು ಸಹಜಜಂಗಮ ತ್ರಿವಿಧ ಎಂದು ನಿರೂಪಿಸಿ ಜಂಗಮನ ಹತ್ತು ಬಗೆಯ ಬಾಹ್ಯ ಲಕ್ಷಣಗಳನ್ನು ಮತ್ತು ಮೂರು ಅಂತರಂಗ ಲಕ್ಷಣಗಳನ್ನು ನಿರೂಪಿಸುತ್ತದೆ. ಆದರಂತೆ ಭಸ್ಮ-ರುದ್ರಾಕ್ಷ-ಇಷ್ಟಲಿಂಗವೇ ಮೊದಲಾದ ಶಿವಚಿಹ್ನೆಗಳನ್ನು ಆದರದಿಂದ ಧರಿಸಿಕೊಳ್ಳುವುದು, ಸದ್ಗುರುವಿನ ಸೇವೆ, ಶಿವಸ್ತುತಿ ಮಾಡುವುದು, ಶಿವನಾಮೋಚ್ಚಾರಣೆ, ಶಿವಪೂಜೆ, ಶಿವಾಗಮಗಳ ಅರ್ಥಾನುಸಂಧಾನ, ಶಿವಪುರಾಣಾದಿಗಳ ಶ್ರವಣ,

---

೧೪. ಚಂದ್ರಜ್ಞಾನಾಗಮ, ಕ್ರಿ.ಪಾ., ೪.೬-೭.

ಹೋಲಿಸಿ- ಲಿಂಗಂ ಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ।
ಅಜಂಗಮೇ ಯಥಾ ಭಕ್ತಿರ್ಜಂಗಮೇ ಚ ತಥಾ ಸ್ಮೃತಾ॥
ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಮ್।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಮ್॥
ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ।
ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ॥
-ಸಿ.ಶಿ, ೯.೬೧-೬೩.

೧೫. ಚಂದ್ರಜ್ಞಾನಾಗಮ, ಕ್ರಿ.ಪಾ., ೪.೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರು-ಜಂಗಮರಿಗೆ ನಮಸ್ಕಾರ, ಶಿವಭಕ್ತರ ಮನೆಯಲ್ಲಿಯೇ ಭೋಜನ ಮಾಡುವುದು ಅಥವಾ ಶಿವಭಕ್ತರಿಗೆ ಭೋಜನವನ್ನು ಏರ್ಪಡಿಸುವುದು ಮತ್ತು ತನ್ನ ಶಕ್ತ್ಯಾನುಸಾರವಾಗಿ ಗುರು-ಜಂಗಮರಿಗೆ ದಾನ ಮಾಡುವುದು- ಈ ಹತ್ತು ಜಂಗಮನ ಬಾಹ್ಯ ಲಕ್ಷಣಗಳು.[೧೬] ಹೀಗೆಯೇ ಮಾನಸೀ ಜಪ, ಮಾನಸೀ ಪೂಜೆ ಮತ್ತು ಸ್ವಾಂತಃ ಶಿವಸಾಕ್ಷಾತ್ಕಾರ -ಈ ಮೂರು ಜಂಗಮನ ಅಂತರಂಗ ಲಕ್ಷಣಗಳು.[೧೭]

ಇಲ್ಲಿ ನಿರೂಪಿತವಾಗಿರುವ ಲಕ್ಷಣಗಳು ಬ್ರಹ್ಮಚಾರಿ ಮತ್ತು ಗೃಹಸ್ಥರಾದ ಜಂಗಮರಿಗೆ ಅನ್ವಯವಾಗುತ್ತವೆ. ನಿರಾಭಾರಿ ಜಂಗಮನ ಲಕ್ಷಣಗಳನ್ನು ಈಗ ಗಮನಿಸೋಣ.

ನಿರಾಭಾರಿ ಜಂಗಮ:

ಚಂದ್ರಜ್ಞಾನಾಗಮ ಕ್ರಿಯಾಪಾದದ ಹತ್ತನೆಯ ಪಟಲದಲ್ಲಿ ನಿರೂಪಿತವಾಗಿರುವ ಎಂಟು ಬಗೆಯ ಶೈವ ಪ್ರಭೇದಗಳಲ್ಲಿ ವೀರಶೈವವೂ ಒಂದು.[೧೮] ಈ ವೀರಶೈವವು ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಮತ್ತು ನಿರಾಭಾರೀ ವೀರಶೈವ ಎಂದು ಮತ್ತೆ ಮೂರು ಬಗೆಯಾಗಿದೆ.[೧೯] ನಿರಾಭಾರಿಯನ್ನು ಪುನಃ ಸ್ವತಂತ್ರ ನಿರಾಭಾರಿ ಮತ್ತು ವೈದಿಕ ನಿರಾಭಾರಿ ಎಂದು ವಿಭಜಿಸಲಾಗಿದೆ. ಅದರಂತೆ ನಿರಾಭಾರಿ ಎಂದರೆ ಸಂನ್ಯಾಸಿ ಎಂದರ್ಥ. ಹೆಂಡತಿ, ಮಕ್ಕಳನ್ನು ತ್ಯಜಿಸಿ, ಕೇಶ ಮುಂಡನ ಮಾಡಿಸಿಕೊಂಡು ಅಥವಾ ಜಟೆಯನ್ನು ಬಿಟ್ಟು, ದಂಡ-ಕಮಂಡಲುಗಳನ್ನು ಕೈಯಲ್ಲಿ ಹಿಡಿದು, ಕಾಷಾಯ ವಸ್ತ್ರಗಳನ್ನು ಧರಿಸಿ ಭೂಮಂಡಲದಲ್ಲೆಲ್ಲ ಸಂಚಾರ ಮಾಡುವವನು ಸ್ವತಂತ್ರ ನಿರಾಭಾರಿ ಎನಿಸುತ್ತಾನೆ.[೨೦] ವೈದಿಕ ನಿರಾಭಾರಿಯು ಶಿಖೆಯನ್ನು ಬಿಟ್ಟಿದ್ದು, ಯಜ್ಞೋಪವೀತವನ್ನು ಧರಿಸಿ, ದಂಡ-ಕಮಂಡಲುಗಳನ್ನು ಹಿಡಿದು, ಕಾಷಾಯ ವಸ್ತ್ರವನ್ನು ಧರಿಸಿರುತ್ತಾನೆ. ಈ ಎರಡೂ ಬಗೆಯ ನಿರಾಭಾರಿಗಳು ಇಷ್ಟಲಿಂಗವನ್ನು ಸದಾ ಧರಿಸಿರುತ್ತಾರೆ.[೨೧] ಈ ರೀತಿಯಾಗಿ ಸ್ವತಂತ್ರ ಮತ್ತು ವೈದಿಕರೆಂಬ ಎರಡು ವಿಧ ನಿರಾಭಾರಿಗಳ ಸ್ವರೂಪವನ್ನು ನಿರೂಪಿಸಿ, ಈ ಇಬ್ಬರಿಗೂ ಸಾಮಾನ್ಯವಾಗಿರುವ ಲಕ್ಷಣಗಳನ್ನು ವಿವರಿಸುತ್ತದೆ ಚಂದ್ರಜ್ಞಾನಾಗಮ. ಅದರಂತೆ "ಆಶಾರಹಿತನೂ, ಇಷ್ಟಲಿಂಗದೊಡನೆ ಐಕ್ಯಭಾವನೆಯುಳ್ಳವನೂ, ಭಯರಹಿತನೂ ಆಗಿದ್ದು, ಭಿಕ್ಷಾಟನೆಯಿಂದ ಭೋಜನ ಮಾಡುವವನೂ, ಮೌನವಾಗಿದ್ದುಕೊಂಡು ಪ್ರಾಣಿಗಳ ವಿಷಯದಲ್ಲಿ ದಯೆಯಿಂದಿರುವ ನಿರಾಭಾರಿಯು

---

೧೬. ಅದೇ, ಕ್ರಿ.ಪಾ., ೪.೧೨-೧೬.

೧೭. ಅದೇ, ಕ್ರಿ.ಪಾ., ೪.೧೭-೧೯; ಹೋಲಿಸಿ- ಪಾರಮೇಶ್ವರಾಗಮ, ೯.೫೮-೬೩.

೧೮. ಚಂದ್ರಜ್ಞಾನಾಗಮ, ಕ್ರಿ.ಪಾ., ೧೦.೪-೭.

೧೯. ಅದೇ, ಕ್ರಿ.ಪಾ., ೧೦.೩೭.

೨೦. ಅದೇ, ಕ್ರಿ.ಪಾ., ೧೦.೪೨-೪೩.

೨೧. ಅದೇ, ಕ್ರಿ.ಪಾ., ೧೦.೪೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಂಥೆ-ಕಮಂಡಲುಗಳನ್ನು ಹಿಡಿದು, ಭಸ್ಮ-ರುದ್ರಾಕ್ಷಗಳನ್ನು ಧರಿಸಿರುವುದಲ್ಲದೆ, ದಂಡ-ಕೌಪೀನಧಾರಿಯಾಗಿರುತ್ತಾನೆ. ಇಂತಹ ಲಕ್ಷಣಗಳುಳ್ಳವನು ನಿರಾಭಾರಿ ಎಂದು ಕರೆಯಲ್ಪಡುತ್ತಾನೆ.[೨೨] ಈ ಪ್ರಕಾರ ನಿರಾಭಾರಿಯ ಸ್ವರೂಪವನ್ನು ಪ್ರತಿಪಾದಿಸಿ, ಯಾವ ರೀತಿಯಾಗಿ ಈತನು ದೀಕ್ಷೆಯನ್ನು ಪಡೆಯಬೇಕೆಂಬುದನ್ನು ತಿಳಿಸಲಾಗಿದೆ. ಅದರಂತೆ-

"ತಾನು ವಾಸಿಸುತ್ತಿರುವ ಆಶ್ರಮದಲ್ಲಿರುವ ಯಾವನಾದರೂ ನಿರಾಭಾರಿ ಜಂಗಮನ ಸಾನ್ನಿಧ್ಯದಲ್ಲಿ ಜಂಗಮ ದೀಕ್ಷೆಯನ್ನು ಪಡೆದು ಅವನಿಂದಲೇ ಪ್ರಣವ ಮಂತ್ರವನ್ನು ಸ್ವೀಕರಿಸಬೇಕು. ಒಂದು ವೇಳೆ ಅಂತಹ ನಿರಾಭಾರಿ ಜಂಗಮನು ದೊರೆಯದಿದ್ದಲ್ಲಿ ಶಿವಾಲಯದಲ್ಲಿಯಾಗಲೀ ಅಥವಾ ಬಿಲ್ವವೃಕ್ಷದ ತಳದಲ್ಲಾಗಲೀ ಶಾಸ್ತ್ರೋಕ್ತವಾಗಿ ದೀಕ್ಷೆಯನ್ನು ಪಡೆಯತಕ್ಕದ್ದು. ಸೂಕ್ಷ್ಮ ಪಂಚಾಕ್ಷರ ಮಂತ್ರದ ರೂಪದಲ್ಲಿರುವ ಪ್ರಣವಾಭ್ಯಾಸವನ್ನು ಮಾಡುವಾಗಲೂ ಸಹ ಸ್ಥೂಲ ಪಂಚಾಕ್ಷರ[೨೩] ಮಂತ್ರದ ಪಠಣವನ್ನು ಸಂನ್ಯಾಸಿಯಾದವನು ಬಿಡಬಾರದು."[೨೪]

ಚಂದ್ರಜ್ಞಾನಾಗಮವು ಪ್ರಸ್ತುತ ಪಡಿಸಿರುವ ವೈದಿಕ ನಿರಾಭಾರಿಯ ಲಕ್ಷಣಗಳಲ್ಲಿ ಒಂದು ವೈಶಿಷ್ಟ್ಯವು ಕಂಡುಬರುತ್ತದೆ. ಅದೇನೆಂದರೆ, ವೈದಿಕ ನಿರಾಭಾರಿಯು ಶಿಖೆಯನ್ನೂ ಸಹ ಬಿಟ್ಟಿದ್ದು, ಯಜ್ಞೋಪವೀತ ಮತ್ತು ಇಷ್ಟಲಿಂಗಗಳೆರಡನ್ನೂ ಧರಿಸಿರಬೇಕೆಂದು ಸಾರುತ್ತದೆ. ಬಹುಶಃ ಈ ಆಚರಣೆಯು ಶೈವಧರ್ಮದ ಪ್ರಭಾವದಿಂದಾಗಿರಬಹುದು. ಶೈವಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಒಮ್ಮೆಲೆ ಆ ಪರಂಪರೆಯನ್ನು ಬಿಡಲು ಸಾಧ್ಯವಾಗಿರುವುದಿಲ್ಲ. ಆದರೆ ವೀರಶೈವಧರ್ಮ ಪ್ರವರ್ಧಮಾನಕ್ಕೆ ಬಂದ ಮೇಲೆ ನಿರಾಭಾರಿಯು ಶಿಖೆ ಬಿಡುವುದು ಹಾಗೂ ಯಜ್ಞೋಪವೀತ ಧರಿಸುವ ಆಚರಣೆಗಳು ಗಲಿತವಾಗಿರುವುದು ಕಂಡುಬರುತ್ತದೆ.

ಚಂದ್ರಜ್ಞಾನಾಗಮ ಮತ್ತು ಸೂಕ್ಷ್ಮಾಗಮಗಳಲ್ಲಿ ಕಂಡುಬರದ ನಿರಾಭಾರಿಯ ಕೆಲವು ಲಕ್ಷಣಗಳು ಪಾರಮೇಶ್ವರಾಗಮದಲ್ಲಿ ಕಂಡುಬರುತ್ತವೆ. ಅವುಗಳನ್ನು ಈಗ ಗಮನಿಸೋಣ- "ನಿರಾಭಾರಿಯು ಜನವಸತಿಗಳಿರುವ ಗ್ರಾಮಗಳನ್ನು ತ್ಯಜಿಸಿ ಕಾಡಿನಲ್ಲಿಯೇ ವಾಸಿಸಬೇಕು. ನಗರಗಳಲ್ಲಿನ ಗೃಹಸ್ಥರ ಮನೆಗಳನ್ನು ಪ್ರವೇಶಿಸಬಾರದು. ಒಂದು ವೇಳೆ ಭಕ್ತರು ಆಹ್ವಾನಿಸಿ ಭಿಕ್ಷೆಯನ್ನು ನೀಡಿದರೆ ರುಚಿಯನ್ನಾಗಲಿ, ಸೌಖ್ಯವನ್ನಾಗಲಿ, ಹಿತವನ್ನಾಗಲಿ ಅಥವಾ ಅಹಿತವನ್ನಾಗಲಿ ಚಿಂತಿಸಬಾರದು. ಪೂಜೆ ಅಥವಾ ಅವಮಾನ, ನಿಂದನೆ-ಸ್ತುತಿಗಳನ್ನು ಲೆಕ್ಕಿಸದೆ[೨೫] ಧ್ಯಾನನಿರತನಾಗಿ ಬಾಲಕನಂತಿರಬೇಕು. ಹೆಂಗಸರ ಮುಖಗಳನ್ನು

---

೨೨. ಅದೇ, ಕ್ರಿ.ಪಾ., ೧೦.೪೫-೪೬.

ಹೋಲಿಸಿ- ಸೂಕ್ಷ್ಮಾಗಮ, ಕ್ರಿ.ಪಾ., ೭.೬೫-೬೭ (ಯಥಾವತ್ತಾಗಿವೆ.)

೨೩. ಸೂಕ್ಷ್ಮ-ಸ್ಥೂಲ ಪಂಚಾಕ್ಷರ ಮಂತ್ರಗಳ ವಿವರಣೆಗೆ ಚಂದ್ರಜ್ಞಾನಾಗಮ, ಕ್ರಿ.ಪಾ., ಪಟಲ-೧೧. ಶ್ಲೋಕ ೪೩-೪೬ ನೋಡಿ.

೨೪. ಚಂದ್ರಜ್ಞಾನಾಗಮ, ಕ್ರಿ.ಪಾ., ೧೦.೪೭-೪೯.

೨೫. ಹೋಲಿಸಿ- ನ ಸನ್ಮಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಮ್॥ (-ಸಿ.ಶಿ, ೧೫.೬೦).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಬಾರದು, ಅವರ ಹಾಸ್ಯಾದಿ ಮಾತುಗಳನ್ನು ಕೇಳಬಾರದು, ಸಾಮಾನ್ಯರೊಂದಿಗೆ, ಅನ್ಯರೊಂದಿಗೆ ಇಚ್ಛೆ ಬಂದಂತೆ ಸಂಚರಿಸಬಾರದು. ತುಂಬಿದ ನದಿಯನ್ನು ದಾಟಬಾರದು; .....ಶಯನಕ್ಕೆ ಮಂಚವನ್ನು ಉಪಯೋಗಿಸದೆ ನೆಲದ ಮೇಲೆ ಮಲಗಬೇಕು. ಆತನು ಕೇಶಮುಂಡನ ಮಾಡಿಸಿಕೊಂಡಿರಬಹುಮ, ಶಿಖಾಧಾರಿಯಾಗಿರಬಹುದು ಅಥವಾ ಬೆಲ್ಲಿದ ಕೂದಲುಗಳುಳ್ಳವನೂ ಆಗಿರಬಹುದು. ಕೇಶಮುಂಡನ ಮಾಡಿಸಿಕೊಂಡಿರುವವನು ಅಥವಾ ಶಿಖಾಧಾರಿಯು ಅಭ್ಯಂಗ ಸ್ನಾನವನ್ನು ಮಾಡಬಹುದು. ಆದರೆ ಜಟಾಧಾರಿಯು ಎಂದೆಂದಿಗೂ ಅಭ್ಯಂಗ ಸ್ನಾನವನ್ನು ಮಾಡಬಾರದು. ಮತ್ತು ಹಿಂದೆ ಜಟಾಧಾರಿ-ಯಾಗಿದ್ದರೆ ಅವನೆಂದಿಗೂ ಮತ್ತೆ ಕ್ಷೌರವನ್ನು ಮಾಡಿಸಿಕೊಳ್ಳಬಾರದು. ಅವನು ಸುಗಂಧ ದ್ರವ್ಯಗಳಿಂದ ಶರೀರಕ್ಕೆ ಮಾಲಿಷ್ ಮಾಡಿಸಿಕೊಳ್ಳಬಾರದು ...ನೃತ್ಯ, ಚಿತ್ರ ಮುಂತಾದವುಗಳನ್ನು ನೋಡಬಾರದು... ಇತ್ಯಾದಿ.[೨೬]

ಜಂಗಮನ ಭಕ್ತಿಯ ಚಿಹ್ನೆಗಳು:

ಪೂರ್ವೋಕ್ತ ಲಕ್ಷಣಗಳುಳ್ಳ ಜಂಗಮನಲ್ಲಿ ಭಕ್ತಿಯ ಆವೇಗದಿಂದ ಮತ್ತೆ ಶರೀರವಿಕಾರರೂಪಿಯಾದ ಭಕ್ತಿಯ ಚಿಹ್ನೆಗಳುಂಟಾಗುತ್ತವೆ. ಅವುಗಳನ್ನು ಚಂದ್ರಜ್ಞಾನಾಗಮ ಹೀಗೆ ನಿರೂಪಿಸುತ್ತದೆ:

ಕಂಠೇ ವಿಕಾರಃ ಪ್ರಥಮಂ ಗದ್ಗದಾಖ್ಯಂ ದ್ವಿತೀಯಕಮ್।
ಜಿಹ್ವಾಸ್ಪಂದಸ್ತೃತೀಯಂ ತು ಸ್ಫುರಣಂ ತ್ವೋಷ್ಠಯೋರಪಿ॥
ಕಂಪನಂ ಚ ಶರೀರಸ್ಯ ಚತುರ್ಥಂ ಭಕ್ತಿಲಕ್ಷಣಮ್।
ರೋಮಾಂಚಃ ಪಂಚಮಂ ಷಷ್ಠಂ ಸ್ವೇದಶ್ಚ ಕೀರ್ತಿತಮ್॥
ಸ್ಖಲನಂ ಸಪ್ತಮಂ ಜ್ಞೇಯಂ ಅಷ್ಟಮಂ ಬಾಷ್ಪನಿರ್ಗಮಃ।
ರೋದನಂ ನವಮಂ ಚಿಹ್ನಂ ದಶಮಂ ಪಾರವಶ್ಯಕಮ್॥
ಏತಾನಿ ದಶ ಚಿಹ್ನಾನಿ ಭಕ್ತೇರುಕ್ತಾನಿ ಶೂಲಿನಾ॥[೨೭]

"ಕಂಠದಲ್ಲಿ ಕರ್ಕಶ, ಗದ್ಗದ ಧ್ವನಿ, ನಾಲಿಗೆಯ ಸ್ಪಂದ (ಅದುರುವಿಕೆ), ತುಟಿಗಳ ಸ್ಫುರಣ (ನಡುಗುವಿಕೆ), ಶರೀರದ ಕಂಪನ, ರೋಮಾಂಚನ, ಬೆವರುವಿಕೆ, ಅಧೀರತೆ, ಕಣ್ಣೀರು ಸುರಿಸುವುದು, ಅಳುವುದು ಮತ್ತು ಪರವಶತೆ -ಈ ಹತ್ತು ಭಕ್ತಿಯ ಚಿಹ್ನೆಗಳು." ಇದೇ ರೀತಿಯಾಗಿ ಪಾರಮೇಶ್ವರಾಗಮದ ಹದಿನೇಳನೆಯ ಪಟಲದಲ್ಲಿ ಜಂಗಮನ ಎಂಟು ಬಗೆಯ ಭಕ್ತಿಯ ಚಿಹ್ನೆಗಳು ಹೀಗೆ ನಿರೂಪಿತವಾಗಿವೆ-

ಯ ಏವಂ ವರ್ತತೇ ಯೋಗೀ ಸ ವೈ ಮಾಹೇಶ್ವರೋತ್ತಮಃ।
ಅಷ್ಟಧಾ ಲಕ್ಷಣಂ ದೇವಿ ಶಿವಧರ್ಮಾಧಿಕಾರಿಣಃ॥

---

೨೬. ಪಾರಮೇಶ್ವರಾಗಮ, ೧೫.೫೯-೬೯.

೨೭. ಚಂದ್ರಜ್ಞಾನಾಗಮ, ಕ್ರಿ.ಪಾ., ೪.೨೦-೨೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಭಕ್ತೇಷು ವಾತ್ಸಲ್ಯಂ ಪೂಜಾಯಾಂ ಚಾನುಮೋದನಮ್।
ಸ್ವಯಮಭ್ಯರ್ಚನಂ ಚೈವ ತದರ್ಥಂ ಚಾಂಗಚೇಷ್ಟನಮ್॥
ತತ್ಕಥಾಶ್ರವಣೇ ಭಕ್ತಿಃ ಸ್ವರನೇತ್ರಾಂಗವಿಕ್ರಿಯಾಃ।
ಶಿವಾನುಸ್ಮರಣಂ ನಿತ್ಯಂ ಸರ್ವದಾ ತದಕೈತವಮ್॥
ಏತದಷ್ಟಗುಣಂ ಚಿಹ್ನಂ ಯಸ್ಮಿನ್ ಮ್ಲೇಚ್ಛೇಽಪಿ ದೃಶ್ಯತೇ।
ಸ ಏವಾತಿಪ್ರಿಯೋ ಭಕ್ತೋ ಮಮ ಯೋಗೀ ಸ ಏವ ಹಿ॥[೨೮]

"ಶಿವಭಕ್ತರಲ್ಲಿ ವಾತ್ಸಲ್ಯ, ಶಿವಪೂಜೆಗೆ ಪ್ರೋತ್ಸಾಹ ಮಾಡುವುದು, ಸ್ವಯಂ ಶಿವಪೂಜೆ ಮಾಡುವುದು, ಪೂಜೆಗಾಗಿ ಶಾರೀರಿಕ ಶ್ರಮ (ಪೂಜಾ ಸಾಮಗ್ರಿಗಳ ಸಂಗ್ರಹಕ್ಕಾಗಿ ಶರೀರವನ್ನು ದಂಡಿಸುವುದು), ಶಿವಕಥೆಯ ಶ್ರವಣದಲ್ಲಿ ಭಕ್ತಿ, ಭಕ್ತಿಯ ಆವೇಗದಿಂದ ಸ್ವರ-ನೇತ್ರ-ಅಂಗಗಳ ಕಂಪನ, ನಿತ್ಯವೂ ಶಿವನ ಸ್ಮರಣೆ ಮಾಡುವುದು. ಮತ್ತು ಕಪಟವಿಲ್ಲದಿರುವುದು- ಈ ಎಂಟು ಗುಣಗಳ ಚಿಹ್ನೆಯು ಯಾರಲ್ಲಿ ಕಂಡುಬರುತ್ತವೆಯೋ ಅವನು ಮ್ಲೇಚ್ಛನಾಗಿದ್ದರೂ ಸರಿ, ಅವನು ಶಿವನಿಗೆ ಪ್ರಿಯನಾದವನು. ಶಿವಯೋಗಿ ಎಂದರೆ ಅವನೇ" ಎಂದು ನಿರೂಪಿಸುತ್ತದೆ ಪಾರಮೇಶ್ವರಾಗಮ.

ಇಲ್ಲಿಯವರೆಗೆ ನಿರೂಪಿತವಾದ ಜಂಗಮನ ಲಕ್ಷಣಗಳು ಮತ್ತು ಜಂಗಮನ ಭಕ್ತಿಯ ಚಿಹ್ನೆಗಳೆಂಬ ವಿಷಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸ್ಪಷ್ಟವಾಗುವುದೇನೆಂದರೆ- ಚಂದ್ರಜ್ಞಾನಾಗಮವು ಜಂಗಮನ ಹತ್ತು ಬಾಹ್ಯ ಲಕ್ಷಣಗಳನ್ನು (೪.೧೨-೧೬) ಮತ್ತು ಮೂರು ಅಂತರಂಗ ಲಕ್ಷಣಗಳನ್ನು (೪.೧೭-೧೯) ನಿರೂಪಿಸಿದ ನಂತರ ಮತ್ತೆ ಜಂಗಮನ ಹತ್ತು ಚಿಹ್ನೆಗಳನ್ನು (೪.೨೦-೨೨) ಕುರಿತು ಹೇಳುತ್ತದೆ. ಪೂರ್ವೋಕ್ತ ಹತ್ತು ಬಾಹ್ಯ ಮತ್ತು ಮೂರು ಅಂತರಂಗ ಲಕ್ಷಣಗಳು ಹುಟ್ಟು ವೀರಶೈವ ವಂಶದಲ್ಲಿ ಜನಿಸಿದ ಜಂಗಮನಿಗೆ ಅನ್ವಯವಾದರೆ, ಜಂಗಮನ ಎಂಟು ಬಗೆಯ ಚಿಹ್ನೆಗಳೆಂದು ಉಕ್ತವಾಗಿರುವ ಲಕ್ಷಣಗಳು ಬೇರೆ ಪರಂಪರೆಯ ಜಂಗಮನಿಗೆ ಅನ್ವಯವಾಗುವಂತಹವುಗಳಾಗಿವೆ. ಇದೇ ಅಭಿಪ್ರಾಯವನ್ನು ಪಾರಮೇಶ್ವರಾಗಮವು "ಈ ಎಂಟು ಗುಣಗಳಿಂದ ಕೂಡಿದವನು ಶಿವಯೋಗಿ ಎಂದು ಹೇಳಿ, ಇಂತಹ ಗುಣಗಳುಳ್ಳವನು ಮ್ಲೇಚ್ಛನಾಗಿದ್ದರೂ ಸರಿ ಅವನು ಶಿವಯೋಗಿ"[೨೯] ಎಂದು ಘೋಷಿಸುತ್ತದೆ. ಚಂದ್ರಜ್ಞಾನಾಗಮೋಕ್ತಗಳಾದ ದಶವಿಧ ಭಕ್ತಿಯ ಚಿಹ್ನೆಗಳ ಪೈಕಿ ಭಕ್ತಿಯ ಆವೇಗದಿಂದುಂಟಾದ ಸ್ವರ, ನೇತ್ರ, ಅಂಗಗಳ ಕಂಪನವೂ ಒಂದಾಗಿದ್ದು, ಈ ಚಿಹ್ನೆಯು ಪಾರಮೇಶ್ವರಾಗಮೋಕ್ತ ಎಂಟು ಚಿಹ್ನೆಗಳ ಪೈಕಿ ಒಂದಾಗಿರುವುದನ್ನು ಗಮನಿಸಬೇಕು. ಅಲ್ಲದೆ ಪಾರಮೇಶ್ವರಾಗಮದ ಹದಿನೇಳನೆಯ ಪಟಲದಲ್ಲಿನ ಶೈವಪ್ರಭೇದಗಳ ನಿರೂಪಣೆಯ ಸಂದರ್ಭದಲ್ಲಿ- "ಈ ಶೈವಭೇದಗಳು

---

೨೮. ಪಾರಮೇಶ್ವರಾಗಮ, ೧೭.೮೩-೮೬.

೨೯. ಏತದಷ್ಟಗುಣಂ ಚಿಹ್ನಂ ಯಸ್ಮಿನ್ ಮ್ಲೇಚ್ಛೇಽಪಿ ದೃಶ್ಯತೇ।
ಸ ಏವಾತಿಪ್ರಿಯೋ ಭಕ್ತೋ ಮಮ ಯೋಗೀ ಸ ಏವ ಹಿ॥ -ಅದೇ, ೧೭.೮೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಚಾರಭೇದದಿಂದ ಮತ್ತು ಯಾವುದೇ ಜಾತಿಭೇದದಿಂದ ಉಂಟಾಗಿವೆ"[೩೦] ಎಂದು ಪ್ರತಿಪಾದಿಸುತ್ತದೆ.

ಒಟ್ಟಿನಲ್ಲಿ ಒಬ್ಬ ವ್ಯಕ್ತಿ ಯಾವುದೇ ಜಾತಿಯಿಂದ ಬಂದು ಗುರುವಿನಿಂದ ದೀಕ್ಷೆಯನ್ನು ಪಡೆದು ವೀರಶೈವನಾಗಿರಲಿ ಅಥವಾ ಹುಟ್ಟು ವೀರಶೈವನಾಗಿರಲಿ ಅವನು ಜಂಗಮನಾಗಬಹುದಿತ್ತೆಂಬುದು ಮೇಲಿನ ಚರ್ಚೆಯಿಂದ ಸ್ಪಷ್ಟವಾಗುತ್ತದೆ.

ಗುರುವಿನಿಂದ ಇಷ್ಟಲಿಂಗ ಪಡೆದು ಹೊಸದಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿದ ಭಕ್ತನು ಜಂಗಮನಾದ ವಿಷಯದಲ್ಲಿ ಚನ್ನಬಸವಣ್ಣನವರ ಈ ವಚನಗಳು ಅತ್ಯಂತ ಉಪಯುಕ್ತ ಮಾಹಿತಿಯನ್ನು ಕೊಡುತ್ತವೆ:

ಜಾತಿವಿಡಿದು ಜಂಗಮವ ಮಾಡಬೇಕೆಂಬ ಪಾತಕರು ನೀವು ಕೇಳಿರೋ,
ಜಾತಿ ಘನವೋ ಗುರುದೀಕ್ಷೆ ಘನವೋ?
ಜಾತಿ ಘನವಾದ ಬಳಿಕ ಆ ಜಾತಿಯ ಗುರುವಾಗಿರಬೇಕಲ್ಲದೆ
ಗುರುದೀಕ್ಷೆ ಪಡೆದು ಗುರುಕರಜಾತರಾಗಿ
ಜಾತಕವ ಕಳೆದು ಪುನರ್ಜಾತರಾದೆವೆಂಬುದ ಏತಕ್ಕೆ ಬೊಗಳುವಿರೊ?
ಆವ ಕುಲವಾದಡೇನು, ದೇವನೊಲಿದಾತನೆ ಕುಲಜ

ಅದೆಂತೆಂದಡೆ-

ದೀಯತೇ ಜ್ಞಾನಸಂಬಂಧಃ ಕ್ಷೀಯತೇ ಚ ಮಲತ್ರಯಂ।
ದೀಯತೇ ಕ್ಷೀಯತೇ ಯೇನಾ ಸಾ ದೀಕ್ಷೇತಿ ನಿಗದ್ಯತೇ।। ಎಂಬುದನರಿದು

ಜಾತಿ ನಾಲ್ಕುವಿಡಿದು ಬಂದ ಜಂಗಮವೇ ಶ್ರೇಷ್ಠವೆಂದು
ಅವನೊಡಗೂಡಿಕೊಂಡು ನಡೆದು ಜಾತಿ ಎಂಜಲುಗಳ್ಳರಾಗಿ
ಉಳಿದ ಜಂಗಮವ ಕುಲವನೆತ್ತಿ ನುಡಿದು, ಆವನ ಅತಿಗಳೆದು
ಕುಲವೆಂಬ ಸರ್ಪ ಕಚ್ಚಿ, ಎಂಜಲೆಂಬ ಅಮೇಧ್ಯವ ಭುಂಜಿಸಿ
ಹಂದಿ ನಾಯಂತೆ ಒಡಲ ಹೊರೆವ ದರುಶನ ಜಂಗುಳಿಗಳು
ಜಂಗಮ ಪಥಕ್ಕೆ ಸಲ್ಲರಾಗಿ
ಅವರಿಗೆ ಗುರುವಿಲ್ಲ, ಗುರುಪ್ರಸಾದವಿಲ್ಲ, ಲಿಂಗವಿಲ್ಲ, ಲಿಂಗಪ್ರಸಾದವಿಲ್ಲ
ಜಂಗಮವಿಲ್ಲ ಜಂಗಮಪ್ರಸಾದವಿಲ್ಲ
ಇಂತೀ ತ್ರಿವಿಧ ಪ್ರಸಾದಕ್ಕೆ ಹೊರಗಾದರ ನರಜೀವಿಗಳ
ಸ್ವಯ ಚರ ಪರವೆಂದಾರಾಧಿಸಿ, ಪ್ರಸಾದವ ಕೊಳಸಲ್ಲದು
ಕಾಣಾ ಕೂಡಲ ಚನ್ನಸಂಗಮದೇವ.

ಬೇರೆ ಬೇರೆ ಜಾತಿಗಳಲ್ಲಿ ಹುಟ್ಟಿ ವೀರಶೈವರಾದ ಮೇಲೆಯೂ ಕೂಡ ಸಾಮಾನ್ಯ ಜನ ಆ ಹಿಂದಿನ ಜಾತಿಯನ್ನು ಪರಿಗಣಿಸುವುದನ್ನು ಬಿಡುತ್ತಿರಲಿಲ್ಲ. ನ್ಯಾಯವಾಗಿ

---

೩೦. ತತ್ರ ವಿಭೇದೇನ ಜಾತಿಭೇದೇನ ಕೇನಚಿತ್।
ವರ್ತಂತೇ ಲಿಂಗಿನೋ ದೇವಿ ಜಾತಿಕರ್ಮಸಮಾಶ್ರಿತಾಃ।। -ಅದೇ, ೧೭.೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವರೆಲ್ಲರೂ ಸಮಾನರು, ಯಾವುದೇ ಜಾತಿಯ ಹಿನ್ನೆಲೆ ಅವನಿಗಿರಲಿ. ಇದು ಆದರ್ಶ. ಆದರೆ ಹುಟ್ಟು ವೀರಶೈವನಾದ ಜಂಗಮನು ಉತ್ತಮನಾಗುತ್ತಿದ್ದ. ಸಾಮಾನ್ಯ ಜಾತಿಯಲ್ಲಿ ಬಂದವನು ಸಾಮಾನ್ಯನಾಗುತ್ತಿದ್ದ. ಇದು ಜನಸಾಮಾನ್ಯರ ನಡವಳಿಕೆಯಲ್ಲಿ ಈ ಬಗೆಯ ಭೇದ ಜಂಗಮದ ವಿಷಯದಲ್ಲೂ ಕಾಣಿಸುತ್ತಿದ್ದುದರಿಂದ 'ಜಂಗಮದಲ್ಲಿ ಜಾತಿಯನ್ನು ಹುಡುಕಬೇಡಿ' ಎಂಬ ಮಾತು ವಚನಕಾರರಲ್ಲಿ ಹಲವೆಡೆ ಕಾಣಿಸುತ್ತದೆ. ಚನ್ನಬಸವಣ್ಣನವರು-

ಶ್ರೀ ಗುರು ಶಿಷ್ಯನ ಭವಿಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ
ಆ ಭಕ್ತ ಹೋಗಿ ಜಂಗಮವಾಗಿ ಗುರುವಿನ ಮಠಕ್ಕೆ ಬಂದಡೆ

....

ಇತ್ಯಾದಿ ವಚನದಲ್ಲಿ ಭವಿಯಾಗಿ ಹುಟ್ಟಿದವನು ದೀಕ್ಷೆಯಿಂದ ವೀರಶೈವನಾಗಿ ಮುಂದೆ ಜಂಗಮನಾಗುವ ವಿಷಯ ಇಲ್ಲಿ ಸ್ಪಷ್ಟವಾಗಿದೆ. "ಆ ಭಕ್ತ ಹೋಗಿ ಜಂಗಮವಾಗಿ ಮಠಕ್ಕೆ ಬಂದಡೆ" ಎಂಬ ಮಾತು ಹೊಸದಾಗಿ ವೀರಶೈವತ್ವವನ್ನು ಪಡೆದ ವ್ಯಕ್ತಿ ಜಂಗಮನಾಗುವ ವಿಷಯ ಇಲ್ಲಿ ಸ್ಪಷ್ಟವಾಗಿದೆ.*

ಜಂಗಮನ ಮಹಿಮೆ:

ಚಂದ್ರಜ್ಞಾನಾಗಮವು ಜಂಗಮನ ಮಹಿಮೆಯನ್ನು ಈ ರೀತಿಯಾಗಿ ನಿರೂಪಿಸುತ್ತದೆ-

ಐಹಿಕಾಮುಷ್ಮಿಕಾಭೋಗಾ ಮೋಕ್ಷಸ್ತತ್ಸಂಗತೋ ಭವೇತ್।
ಚರಸಂಗಸ್ತು ಸರ್ವೇಷಾಂ ಸರ್ವಕಾಮಫಲಪ್ರದಃ॥
ತತ್ಪಾದಪಾಂಸುಭಿಃ ಪೂತಂ ಭವನಂ ಚೇತರೇತ್ ವನಮ್।
ತದ್ಯಥಾಶಕ್ತಿ ಸಂಪೂಜ್ಯಾ ಜಂಗಮಾ ಹಿ ಹಿತೇಪ್ಸುನಾ॥
ಯದಮೀ ಮಾನುಷಾಕಾರಾಃ ಪ್ರತ್ಯಕ್ಷಪರಮೇಶ್ವರಾಃ॥[೨೧]

ಇದರ ತಾತ್ಪರ್ಯವೇನೆಂದರೆ "ಲೌಕಿಕ-ಪಾರಲೌಕಿಕ ಭೋಗಗಳು ಮಾತ್ರವಲ್ಲ, ಮೋಕ್ಷವೂ ಸಹ ಅವನಿಗೆ ಅನಾಯಾಸವಾಗಿ ದೊರೆಯುತ್ತದೆ. ಆದ್ದರಿಂದ ಜಂಗಮನ ಸಹವಾಸವನ್ನಪೇಕ್ಷಿಸುವವರೆಲ್ಲರ ಇಷ್ಟಾರ್ಥಗಳು ಫಲಪ್ರದವಾಗುತ್ತವೆ. ಜಂಗಮನ ಪಾದದೂಳಿನಿಂದ ಪವಿತ್ರವಾದುದೇ ಮನೆ, ಉಳಿದದ್ದೆಲ್ಲವೂ ಕಾಡು. ಆದುದರಿಂದ ಸ್ವಹಿತವನ್ನು ಬಯಸುವವನು ಯಥಾಶಕ್ತಿ ಜಂಗಮನನ್ನು ಪೂಜಿಸಬೇಕು. ಏಕೆಂದರೆ ಜಂಗಮನು ಮನುಷ್ಯರೂಪದಲ್ಲಿರುವ ಸಾಕ್ಷಾತ್ ಪರಮೇಶ್ವರನೇ ಸರಿ." ಅಂತೆಯೇ ಸೂಕ್ಷ್ಮಾಗಮವೂ ಸಹ ಜಂಗಮನ ಮಹಿಮೆಯನ್ನು ಹೀಗೆ ವರ್ಣಿಸುತ್ತದೆ-

ಷಟ್‌ಸ್ಥಲಜ್ಞಾನಸಂಪನ್ನಃ ಷಡಂಗಾಂಗಸಮಾಧಿಮಾನ್।
ಆತ್ಮವತ್ ಪರದ್ರುಷ್ಟಾ ಚ ಸ ಏವಾಹಂ ನ ಸಂಶಯಃ॥

---

* ಡಾ॥ ಎಂ. ಚಿದಾನಂದಮೂರ್ತಿ, ಲೇಖನ-ಗುರು-ಲಿಂಗ-ಜಂಗಮ ದೇಗುಲ ಸಿರಿ, ಪು.೮೬-೯೦ನ್ನುನೋಡಿ.

೨೧. ಚಂದ್ರಜ್ಞಾನಾಗಮ, ಕ್ರಿ.ಪಾ., ೪.೨೯-೩೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವಃ ಪರೋ ಯಸ್ತು ಯತ್ರ ತಿಷ್ಠತಿ ಪಾರ್ವತಿ।
ತತ್ತೀರ್ಥಂ ತತ್ತಪಃ ಶಾಂತಿಸ್ತತ್ರ ತಿಷ್ಠಾಮಿ ಸರ್ವದಾ॥[೩೨]

"ಷಟ್‌ಸ್ಥಲಜ್ಞಾನಸಂಪನ್ನನೂ, ಶಿವನ ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ಅನಂತಶಕ್ತಿ, ಮತ್ತು ಅಲುಪ್ತಶಕ್ತಿಗಳೆಂಬ ಷಡಂಗಗಳಲ್ಲಿ[೩೩] ಸಮಾಹಿತ ಮನಸ್ಸುಳ್ಳ, ತನ್ನಂತೆಯೇ ಇತರರನ್ನು ಕಾಣುವ ಅವನು ನಿಸ್ಸಂಶಯವಾಗಿಯೂ ಶಿವಸ್ವರೂಪಿಯೇ ಆಗಿರುತ್ತಾನೆ. ಇಂತಹ ಮಹಿಮೆಯುಳ್ಳ ಶ್ರೇಷ್ಠನಾದ ವೀರಶೈವನು ಎಲ್ಲಿರುವನೋ ಅದೇ ತೀರ್ಥ, ಅದೇ ತಪಸ್ಸು, ಅದೇ ಶಾಂತಿಯ ನಿವಾಸ ಮತ್ತು ಶಿವನು ಸದಾ ಅಲ್ಲಿಯೇ ನೆಲೆಸಿರುತ್ತಾನೆ." ಅಂತೆಯೇ ಯೋಗಜಾಗಮದಲ್ಲಿ-

ದರ್ಶನಾದರ್ಚನಾತ್ತಸ್ಯ ತ್ರಿಸಪ್ತಕುಲಸಂಯುತಾಃ।
ಜನಾಃ ಮುಕ್ತಿಪದಂ ಯಾಂತಿ ಕಿಂ ಪುನಸ್ತತ್ಪರಾಯಣಃ॥

"ಜಂಗಮನ ದರ್ಶನ ಮಾಡುವುದರಿಂದ ಮತ್ತು ಆತನನ್ನು ಪೂಜಿಸುವುದರಿಂದ ಇಪ್ಪತ್ತೊಂದು ತಲೆಮಾರಿನವರೆಗೆ ಆ ವಂಶದವರು ಮೋಕ್ಷವನ್ನು ಪಡೆಯುತ್ತಾರೆ. ಇನ್ನು ಭಕ್ತಿಯಿಂದ ಸದಾ ತಮ್ಮ ಮನಸ್ಸನ್ನೇ ಜಂಗಮಕ್ಕೆ ಸಮರ್ಪಿಸಿದವರಿಗೆ ಅದೆಂತಹ ಫಲ ದೊರಕುವುದಿಲ್ಲ? ಅರ್ಥಾತ್ ಬಹು ದೊಡ್ಡದಾದ ಫಲ ದೊರೆಯುತ್ತದೆ."

ಪೂರ್ವೋಕ್ತ ಆಗಮಗಳ ಅಭಿಪ್ರಾಯವನ್ನು ಸಿದ್ಧಾಂತ ಶಿಖಾಮಣಿಯು ಜಂಗಮ ಮಾಹಾತ್ಮ್ಯಸ್ಥಲದಲ್ಲಿ ಹೀಗೆ ಸಮರ್ಥಿಸುತ್ತದೆ-

ದುರ್ಲಭಂ ಹಿ ಶಿವಜ್ಞಾನಂ ದುರ್ಲಭಂ ಶಿವಚಿಂತನಮ್।
ಯೇಷಾಮೇತದ್ ದ್ವಯಂ ಚಾಸ್ತಿ ತೇ ಹಿ ಸಾಕ್ಷಾಚ್ಛಿವಾತ್ಮಕಾಃ॥
ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಮ್।
ತದೇವ ಸದನಂ ಪುಣ್ಯಂ ಪಾವನಂ ಗೃಹಮೇಧಿನಾಮ್॥
ಸರ್ವಸಿದ್ಧಿಕರಂ ಪುಂಸಾಂ ದರ್ಶನಂ ಶಿವಯೋಗಿನಾಮ್।
ಸ್ಪರ್ಶನಂ ಪಾಪಶಮನಂ ಪೂಜನಂ ಮುಕ್ತಿಸಾಧನಮ್॥
ಮಹತಾಂ ಶಿವತಾತ್ಪರ್ಯವೇದಿನಾಮನುಮೋದಿನಾಮ್।
ಕಿಂ ವಾ ಫಲಂ ನ ಸಿದ್ಧ್ಯೇತ ಸಂಪರ್ಕಾಚ್ಛಿವಯೋಗಿನಾಮ್॥[೩೪]

ಶಿವನೇ ಸರ್ವೋತ್ತಮನೆಂಬ ಜ್ಞಾನ ಪಡೆಯುವುದಾಗಲಿ, ನಾನು ಶಿವಸ್ವರೂಪನೇ ಆಗಿದ್ದೇನೆಂಬ ಶಿವಚಿಂತನೆಯನ್ನು ಮಾಡುವುದಾಗಲಿ, ಅತ್ಯಂತ ದುರ್ಲಭವಾದವುಗಳು.

---

೩೨. ಸೂಕ್ಷ್ಮಾಗಮ, ಕ್ರಿ.ಪಾ., ೭.೮೦-೮೧.

೩೩. ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ।
ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ॥
(ವಾಯುಪುರಾಣ, ೧೨.೩೩; ಅನುಭವಸೂತ್ರ, ೪.೨೦).

೩೪. ಸಿ.ಶಿ., ೧೧.೪೧-೪೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಮಾನ್ಯರಿಗೆ ದುರ್ಲಭಗಳಾದ ಈ ಶಿವಜ್ಞಾನ ಶಿವಚಿಂತನೆಗಳನ್ನು ಶಿವಯೋಗಿಯು ಪ್ರಾಪ್ತಮಾಡಿಕೊಂಡಿರುವುದರಿಂದ ಅವನು ಸಾಕ್ಷಾತ್ ಶಿವಸ್ವರೂಪನೇ ಆಗಿರುತ್ತಾನೆ. ಅಂತಹ ಪಾವನವಾದ ಶಿವಯೋಗಿಗಳ ಪಾದಧೂಳಿಯು ಯಾವ ಮನೆಗೆ ತಾಗುವುದೋ, ಆ ಗೃಹವೂ ಕೂಡ ಪಾವನವಾಗುತ್ತದೆ. ಶಿವಯೋಗಿಗಳ ದರ್ಶನವೂ ಮಾನವರಿಗೆ ಸರ್ವಸಿದ್ಧಿಯನ್ನುಂಟುಮಾಡುವಂಥಾದ್ದಾಗಿದೆ. ಅವರ ಪಾದಸ್ಪರ್ಶದಿಂದ ಪಾಪಗಳ ನಿವಾರಣೆಯಾದರೆ, ಅವರ ಪಾದಪೂಜೆಯನ್ನು ಮಾಡಿದರೆ ಮುಕ್ತಿಯ ಸಾಧನವಾಗಿ ಪರಿಣಮಿಸುತ್ತದೆ. ಶಿವರಹಸ್ಯವನ್ನು ಬಲ್ಲ, ಶಿವಾನುಭವವನ್ನು ಹೊಂದಿರುವ ಮಹಾಮಹಿಮಾಶಾಲಿಗಳಾದ ಶಿವಯೋಗಿ ಸ್ವರೂಪರಾದ ಜಂಗಮರ ಸಾನ್ನಿಧ್ಯವು ಪ್ರಾಪ್ತವಾಗಿರಲು ಎಲ್ಲ ಸಿದ್ಧಿಗಳು ಪ್ರಾಪ್ತವಾಗುತ್ತವೆ ಎಂದು ಶ್ರೀ ರೇಣುಕ ಭಗವತ್ಪಾದರು ಆದೇಶವಿತ್ತಿದ್ದಾರೆ. ಆದ್ದರಿಂದ ವೀರಶೈವರು ಗುರು-ಲಿಂಗಗಳಲ್ಲಿ ಭಯಭಕ್ತಿಯಿಂದಿರುವಂತೆ ಜಂಗಮನ ಬಗ್ಗೆಯೂ ಅದೇ ಭಾವನೆಯಿಂದಿರಬೇಕು. ಜಂಗಮರ ಮಾಹಾತ್ಮ್ಯವನ್ನರಿತೇ ಈ ಧರ್ಮದಲ್ಲಿ ಜಂಗಮಾರಾಧನೆಗೆ ಪ್ರಾಚೀನ ಕಾಲದಿಂದಲೂ ಮಹತ್ವವಿದೆ. ಸಿದ್ಧಾಂತ ಶಿಖಾಮಣಿಯ ಈ ಅಭಿಪ್ರಾಯವು ಚಂದ್ರಜ್ಞಾನಾಗಮದ ಅಭಿಪ್ರಾಯವನ್ನೇ ಸಮರ್ಥಿಸುತ್ತಿದೆ.

ತ್ರಿವಿಧ ಭಕ್ತಿ:

ಭಕ್ತಿಯು ಉತ್ತಮ, ಮಧ್ಯಮ ಮತ್ತು ಕನಿಷ್ಠವೆಂದು ಮೂರು ವಿಧವೆಂದು ಸಾರುತ್ತದೆ ಚಂದ್ರಜ್ಞಾನಾಗಮ- "ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿರುವುದು ಉತ್ತಮ ಭಕ್ತಿ; ಇಷ್ಟಲಿಂಗ ಮತ್ತು ಜಂಗಮರಲ್ಲಿ ಸಮಾನವಾದ ಭಕ್ತಿ ಮಧ್ಯಮ ಭಕ್ತಿ; ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಕಡಿಮೆ ಭಕ್ತಿಯಿಂದಿರುವುದು ಕನಿಷ್ಠಭಕ್ತಿ ಎನಿಸುತ್ತದೆ. ಹೀಗೆ ಮೂರು ವಿಧದ ಭಕ್ತಿಗಳನ್ನು ನಿರೂಪಿಸಿ, ಈ ಮೂರರಲ್ಲಿ ಮೊದಲನೆಯದಾದ ಉತ್ತಮಭಕ್ತಿಯನ್ನು ಕುಶಲನಾದವನು ಆಶ್ರಯಿಸುತ್ತಾನೆ" ಎಂದು ಪ್ರತಿಪಾದಿಸುತ್ತದೆ.[೩೫]

ಗುರು-ಲಿಂಗ-ಜಂಗಮರಲ್ಲಿ ಸಾಧಕನಿಗೆ ಸಮಾನ ಭಕ್ತಿಯಿರಬೇಕಾಗಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಜಂಗಮನ ಶ್ರೇಷ್ಠತ್ವವನ್ನು ನಿರೂಪಿಸಲು ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿಂದಿರುವುದು ಉತ್ತಮ ಭಕ್ತಿ ಎನ್ನುತ್ತದೆ ಚಂದ್ರಜ್ಞಾನಾಗಮ. ಇದಕ್ಕೆ ಕಾರಣವಿಷ್ಟು-ಲಿಂಗವು ಅಚರ ಮತ್ತು ಚರ ಎಂದು ಎರಡು ವಿಧ. ಇಷ್ಟಲಿಂಗವು ಅಚರಜಂಗಮ. ಅಚರಜಂಗಮವು ಎಲ್ಲಿಯೂ ಸ್ವತಂತ್ರವಾಗಿ ಸುಳಿದಾಡುವುದಿಲ್ಲ ಮತ್ತು ಯಾರಿಗೂ ಏನನ್ನೂ ಬೋಧಿಸುವುದೂ ಇಲ್ಲ. ಆದರೆ ಶಿವಯೋಗ ಸಿದ್ಧಿಯನ್ನು ಪಡೆದ

---

೩೫. ಚರೇಽಧಿಕಾ ಸ್ವೇಷ್ಟಲಿಂಗಾದುತ್ತಮಾ ಭಕ್ತಿರುಚ್ಯತೇ।
ಚರೇಷ್ಟಲಿಂಗಯೋಸ್ತುಲ್ಯಾ ಮಧ್ಯಮೇತಿ ನಿಗದ್ಯತೇ॥
ಚರೇ ನ್ಯೂನಾ ಸ್ವೇಷ್ಟಲಿಂಗಾತ್ ಕನಿಷ್ಠಾ ಭಕ್ತಿರುಚ್ಯತೇ।
ತಸ್ಮಾದ್ಧಿ ಕುಶಲೋ ನಿತ್ಯಮುತ್ತಮಾಂ ಭಕ್ತಿಮಾಶ್ರಯೇತ್॥

-ಚಂ.ಜ್ಞಾ. ಕ್ರಿ.ಪಾ., ೪.೩೧-೩೨.

CC0. In Public Domain. Jangamwadi Math Collection, Varanasi

ಜಂಗಮನು ಸುಳಿದಾಡುವ ಶಿವಲಿಂಗವೇ ಆಗಿದ್ದಾನೆ. ದೀಕ್ಷಾಕಾಲದಲ್ಲಿ ಗುರುವಿನಿಂದ ಕೊಡಲ್ಪಡುವ ಇಷ್ಟಲಿಂಗವು ಶಿಲಾನಿರ್ಮಿತವಾಗಿದ್ದು, ಶಿಲೆಯಲ್ಲಿನ ಜಡತ್ವವನ್ನು ದೂರೀಕರಿಸಿ ಶಿವಕಲೆಯನ್ನು ಸಂಯೋಜಿಸಲು ಆಗಮೋಕ್ತ ವಿಧಿವಿಧಾನಗಳಿಂದ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದಾಗ ಅದು ಪೂಜನೀಯವಾಗಿ, ಶಿವಸಾನ್ನಿಧ್ಯವು ಅದರಲ್ಲಿ ಪ್ರಾಪ್ತವಾಗುತ್ತದೆ. ಆದರೆ ಚರಲಿಂಗವೆಂದು ಕರೆಯಲ್ಪಡುವ ಶಿವಯೋಗಿಯಲ್ಲಿ ಶಿವನು ಸದಾ ಸನ್ನಿಹಿತನಾಗಿರುತ್ತಾನೆ. ಆದ್ದರಿಂದಲೇ ಚಂದ್ರಜ್ಞಾನಾಗಮವು ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಭಕ್ತಿಯಿಂದಿರುವುದು ಉತ್ತಮಭಕ್ತಿ ಎಂದು ಹೇಳಿ, ಕುಶಲನಾದ ಭಕ್ತನು ಉತ್ತಮವಾದ ಭಕ್ತಿಯನ್ನಾಶ್ರಯಿಸುತ್ತಾನೆ ಅರ್ಥಾತ್ ಇಷ್ಟಲಿಂಗಕ್ಕಿಂತಲೂ ಜಂಗಮನ ವಿಷಯದಲ್ಲಿ ಹೆಚ್ಚು ಭಕ್ತಿಯಿಂದಿರುತ್ತಾನೆ ಎಂದು ಪ್ರತಿಪಾದಿಸುತ್ತದೆ.[೩೬]

ಜಂಗಮ ಪೂಜೆಯ ಉತ್ಕೃಷ್ಟತೆ:

ಎಲ್ಲ ಪುಣ್ಯಕ್ಷೇತ್ರಗಳಲ್ಲಿನ ತೀರ್ಥಸ್ನಾನ, ಎಲ್ಲ ಬಗೆಯ ಯಜ್ಞಾನುಷ್ಠಾನ ಮತ್ತು ಸಮಸ್ತ ದೇವತೆಗಳ ಪೂಜೆ ಇವೆಲ್ಲವುಗಳಿಗಿಂತಲೂ ಜಂಗಮ ಪೂಜೆಯು ಮಿಗಿಲಾದುದು. ಜಂಗಮರು ಬರುತ್ತಿರುವುದನ್ನು ದೂರದಿಂದಲೇ ನೋಡಿದ ಭಕ್ತನು ಅವರ ಹತ್ತಿರ ಹೋಗಿ ನಮಸ್ಕರಿಸಿ ತನ್ನ ಮನೆಗೆ ಕರೆದುಕೊಂಡು ಬಂದು ಪೂಜಿಸಬೇಕು. ಜಂಗಮನು ಸಮಸ್ತ ಪ್ರಜೆಗಳಿಗೆ ಹಿತವನ್ನುಂಟುಮಾಡುತ್ತಾನೆ ಮತ್ತು ನಾನು ಆ ಜಂಗಮನ ಅವಶ್ಯಕತೆಗಳನ್ನು ಪೂರೈಸುವಲ್ಲಿ ಆಸಕ್ತಿಯುಳ್ಳವನು ಎಂಬ ಅಭಿಪ್ರಾಯವುಳ್ಳ ಭಕ್ತನು ಜಂಗಮನನ್ನು ಪೂಜಿಸಬೇಕು.[೩೭] ಜಂಗಮನನ್ನು ಪೂಜಿಸದೆ ಶಿವನನ್ನು ಪೂಜಿಸಿದ್ದೇ ಆದರೆ ಅಂತಹ ಪೂಜೆಯು ನಿಷ್ಫಲವಾಗುತ್ತದೆ ಎಂದು ಜಂಗಮನ ಉತ್ಕೃಷ್ಟತೆಯನ್ನು ಸಾರುತ್ತದೆ ಚಂದ್ರಜ್ಞಾನಾಗಮ.

ಜಂಗಮಾನಸಮರ್ಚ್ಯೈವ ಮತ್ಪೂಜಾ ಕ್ರಿಯತೇ ಯದಿ।
ಸಾ ಪೂಜಾ ವಿಫಲೈವ ಸ್ಯಾದಿತ್ಯೇತಚ್ಛಿವಶಾಸನಮ್॥[೩೮]

ಸಂಸಾರಸಾಗರೇಽಗಾಧೇ ದುಃಖಾವರ್ತಶತಾಕುಲೇ।
ಮಜ್ಜತಾಂ ಮನುಜಾನಾಂ ವೈ ಪೂಜಾ ಮಾಹೇಶ್ವರಸ್ಯ ನೌಃ॥

ಮಾಹೇಶ್ವರನೆಂಬ ಮತ್ತೊಂದು ಪರ್ಯಾಯವುಳ್ಳ ಜಂಗಮನ ಪೂಜೆಯೇ ಸಂಸಾರವೆಂಬ ಸಾಗರವನ್ನು ದಾಟಲು ಸಾಧ್ಯವೆಂದು ಹೇಳುವ ಮೂಲಕ ಶಂಕರಸಂಹಿತೆಯ ವಾಕ್ಯದ ಉಲ್ಲೇಖದಿಂದ ಜಂಗಮನ ಉತ್ಕೃಷ್ಟತೆಯನ್ನು ನಿರೂಪಿಸಿ ಕ್ರಿಮಿ, ಕೀಟ, ಪತಂಗಗಳಿಗಿಂತಲೂ ಪ್ರಾಣಿಗಳು ಹೆಚ್ಚು ಬುದ್ಧಿಶಾಲಿಗಳು, ಪ್ರಾಣಿಗಳಿಗಿಂತಲೂ ಮನುಷ್ಯರು, ಮನುಷ್ಯರಲ್ಲಿ ದ್ವಿಜರು, ದ್ವಿಜರಲ್ಲಿ ಲಿಂಗಾಂಗಸಂಗಿಗಳು ಮತ್ತು

---

೩೬. ಡಾ॥ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಪ್ರವಚನ ಪ್ರಭೆ, ಸಂ.೧, ಪು. ೨೧೪.

೩೭. ಚಂದ್ರಜ್ಞಾನಾಗಮ, ಕ್ರಿ.ಪಾ., ೪.೩೩-೩೫.

೩೮. ಅದೇ, ಕ್ರಿ.ಪಾ., ೪.೩೬.

Digitization by eGangotri and Sarayu Trust. Funding by MoE-IKS

ಲಿಂಗಾಂಗಸಂಗಿಗಳಲ್ಲಿಯೂ ಷಟ್‌ಸ್ಥಲಜ್ಞಾನಸಂಪನ್ನನಾದವನು ಬುದ್ಧಿಶಾಲಿಯೆಂದು ಉತ್ತರೋತ್ತರದ ಶ್ರೇಷ್ಠತೆಯನ್ನು ಪ್ರತಿಪಾದಿಸಿ- "ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ" (ಆದ್ದರಿಂದ ಮೂರು ಲೋಕಗಳಲ್ಲಿಯೂ ಷಟ್‌ಸ್ಥಲಜ್ಞಾನ ಸಂಪನ್ನನಾದವನಿಗಿಂತ ಶ್ರೇಷ್ಠನಾದವನು ಇರುವುದಿಲ್ಲ) ಎಂದು ಷಟ್‌ಸ್ಥಲಜ್ಞಾನಿಯಾದ ಜಂಗಮನ ಸರ್ವೋತ್ಕೃಷ್ಟತ್ವವು ವೀರಶೈವಾನಂದಚಂದ್ರಿಕೆಯಲ್ಲಿ ಘೋಷಿತವಾಗಿದೆ.[೩೯] ಸಿದ್ಧಾಂತ ಶಿಖಾಮಣಿಯಲ್ಲಿಯೂ ಸಹ-

ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಮ್।
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಮ್॥
ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ।
ಸದಾಕಾಲಂ ವಸತ್ಯೇವ ಚರಲಿಂಗೇ ಮಹೇಶ್ವರಃ॥[೪೦]

ಎಂದು ಚರಲಿಂಗ (ಜಂಗಮ) ಮತ್ತು ಅಚರಲಿಂಗ (ಸ್ಥಾವರಲಿಂಗ)ವೆಂದು ಲಿಂಗದ ಎರಡು ಪ್ರಕಾರಗಳನ್ನು ಪ್ರತಿಪಾದಿಸಿ, ಮಣ್ಣು-ಕಲ್ಲು ಮೊದಲಾದವುಗಳಿಂದ ನಿರ್ಮಿತವಾದ ಸ್ಥಾವರಲಿಂಗಕ್ಕಿಂತಲೂ ಶಿವಯೋಗಿಯ ರೂಪದಲ್ಲಿರುವ ಜಂಗಮಲಿಂಗದ ಶ್ರೇಷ್ಠತೆಯನ್ನು ದೃಷ್ಟಾಂತ ಸಹಿತ ಪ್ರತಿಪಾದಿಸಿದೆ. ಆದುದರಿಂದ ವೀರಶೈವಸಿದ್ಧಾಂತದಲ್ಲಿ ಇಷ್ಟಲಿಂಗಾರ್ಚನೆಗಿಂತಲೂ ಜಂಗಮಾರ್ಚನೆಗೆ ಪ್ರಾಶಸ್ತ್ಯವನ್ನು ಕೊಡಲಾಗಿದೆ ಎಂದು ತಿಳಿಯುತ್ತದೆ. "ಲಿಂಗಮುಖಂ ವೈ ಜಂಗಮಃ" (ಲಿಂಗದ ಮುಖವೇ ಜಂಗಮ) ಎಂಬ ಉಕ್ತಿಯಂತೆ ಜಂಗಮನು ಲಿಂಗದ ಮುಖವೆಂಬ ಅಭಿಧಾನದಿಂದ ಜಂಗಮನಿಗೆ ಅರ್ಪಿತವಾದ ಎಲ್ಲವೂ ಲಿಂಗಾರ್ಪಿತವಾಗುತ್ತದೆ. ಆದುದರಿಂದಲೇ ಶ್ರೀ ಜಗದ್ಗುರು ರೇಣುಕಾಚಾರ್ಯರು-

ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ।
ತತ್‌ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಮ್॥[೪೧]

---

೩೯. ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ।
ಪಶುಭ್ಯೋಽಪಿ ನರಾಃ ಶ್ರೇಷ್ಠಾಸ್ತೇಷು ಶ್ರೇಷ್ಠಾ ದ್ವಿಜಾತಯಃ॥
ದ್ವಿಜಾತಿಷ್ವಧಿಕಾ ವಿಪ್ರಾ ವಿಪ್ರೇಷು ಕೃತಬುದ್ಧಯಃ।
ಕೃತಬುದ್ಧಿಷು ಕರ್ತಾರಸ್ತೇಭ್ಯಃ ಸಂನ್ಯಾಸಿನೋಽಧಿಕಾಃ॥
ತೇಷು ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರಪೂಜಕಾಃ।
ತೇಷು ಶ್ರೇಷ್ಠಾ ಮಹಾಭಾಗಾ ಮಮ ಲಿಂಗಾಂಗಸಂಗಿನಃ॥
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ ಭವೇತ್।
ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ॥
ಸ ವಂದ್ಯಃ ಸರ್ವದಾ ಪೂಜ್ಯಃ ಸಂಸಾರವಿಜಿಗೀಷುಭಿಃ।
ತಸ್ಮೈ ದೇಯಂ ತತೋ ಗ್ರಾಹ್ಯಂ ಸ ಚ ಪೂಜ್ಯೋ ಯಥಾ ಹ್ಯಹಮ್॥
ವೀರಶೈವಾನಂದಚಂದ್ರಿಕೆ, ಪು. ೪೪೫; ಸ್ಕಂದ. ಶ.೮೪.೭೧-೭೫.

೪೦. ಸಿದ್ಧಾಂತ ಶಿಖಾಮಣಿ, ೯.೭೧-೭೨.

೪೧. ಸಿದ್ಧಾಂತ ಶಿಖಾಮಣಿ, ೯.೯೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

"ಜಂಗಮನ ತೃಪ್ತಿಯಿಂದ ಶಿವನ ಸಂತೃಪ್ತಿ ಮತ್ತು ಶಿವನ ಸಂತೃಪ್ತಿಯಿಂದ ಚರಾಚರ ಪ್ರಪಂಚದ ಸಂತೃಪ್ತಿ" ಎಂದು ಸಮರ್ಥಿಸಿದ್ದಾರೆ. ಬಸವಣ್ಣನವರು ಸಹ-

ಮರಕ್ಕೆ ಬಾಯಿಬೇರೆಂದು ತಳಕ್ಕೆ ನೀರೆರದರೆ ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ
ಮುಂದೆ ಸಕಲ ಪದಾರ್ಥವನೀವನು.
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.

ತಮ್ಮ ಈ ವಚನದಲ್ಲಿ ಅದೇ ಭಾವವನ್ನು ವ್ಯಕ್ತಪಡಿಸಿ ಜಂಗಮನ ಮಹತ್ವವನ್ನು ಕೊಂಡಾಡಿದ್ದಾರೆ. ಆದ್ದರಿಂದ ಜಂಗಮರನ್ನು ಶ್ರದ್ಧೆಯಿಂದ ಆದರಿಸಿ ಅವರ ಅನುಗ್ರಹವನ್ನು ಪಡೆದುಕೊಳ್ಳಬೇಕು.

ಜಂಗಮದ ಆವರಣ ಶಬ್ದ ವಾಚ್ಯತ್ವ:

ಪೂರ್ವೋಕ್ತ ಜಂಗಮ ಶಬ್ದದ ಅರ್ಥ, ಲಕ್ಷಣ, ಮಹಿಮೆ ಇತ್ಯಾದಿಗಳ ಅವಲೋಕನದಿಂದ ಸ್ಪಷ್ಟವಾಗುವುದೇನೆಂದರೆ ಶಿವಜ್ಞಾನ ಸಂಪನ್ನನಾದ ಜಂಗಮನು ಎಲ್ಲೆಡೆಯೂ ಸಂಚರಿಸುತ್ತಾ, ಭಕ್ತರಿಗೆ ಶಿವಜ್ಞಾನವನ್ನುಪದೇಶಿಸುತ್ತಾ ಕಾಮ-ಕ್ರೋದಾದಿ ಅರಿಷಡ್ವರ್ಗಗಳಿಂದ ಅವರನ್ನು ರಕ್ಷಿಸುತ್ತಾನೆ ಎನ್ನುವ ಕಾರಣದಿಂದ ಜಂಗಮನನ್ನು ವೀರಶೈವ ಸಿದ್ಧಾಂತದ ಅಷ್ಟಾವರಣಗಳಲ್ಲಿ ಮೂರನೆಯ ಆವರಣವನ್ನಾಗಿ ಪರಿಗಣಿಸಲಾಗಿದೆ. ಆದ್ದರಿಂದ ವೀರಶೈವರು ಗುರು-ಲಿಂಗಗಳಲ್ಲಿ, ಭಯ-ಭಕ್ತಿಗಳಿಂದಿರುವಂತೆ, ಜಂಗಮರ ಬಗ್ಗೆಯೂ ಗೌರವದಿಂದಿರಬೇಕು. ಜಂಗಮರ ಮಾಹಾತ್ಮ್ಯವನ್ನರಿತೇ ಈ ಧರ್ಮದಲ್ಲಿ ಜಂಗಮಾರಾಧನೆಗೆ ಅನಾದಿಕಾಲದಿಂದಲೂ ಮಹತ್ವವು ಪ್ರಾಪ್ತವಾಗಿದೆ.

ಪ್ರಬಂಧ ಮಂಡನೆಯ ಸಂದರ್ಭದಲ್ಲಿ ಜಿಜ್ಞಾಸುಗಳಿಂದ ಹಲವಾರು ಪ್ರಶ್ನೆಗಳು ಕೇಳಲ್ಪಟ್ಟವು. ಅವುಗಳಲ್ಲಿ ಮುಖ್ಯವಾದ ಎರಡು ಪ್ರಶ್ನೆಗಳಿಗೆ ಮಾತ್ರ ಶಾಸ್ತ್ರಾಧಾರದಿಂದ ಯಥಾಮತಿ ಉತ್ತರಿಸಲು ಬಯಸುತ್ತೇನೆ. ಅವುಗಳಲ್ಲಿ

ಪ್ರಶ್ನೆ ೧. ಗುರು-ಜಂಗಮರ ವ್ಯತ್ಯಾಸವೇನು?

ಉತ್ತರ : ಗುರು-ಜಂಗಮರ ವ್ಯತ್ಯಾಸವನ್ನು ಈ ರೀತಿಯಾಗಿ ಮಾಡಬಹುದು.
೧. ಸಂಸಾರದಲ್ಲಿಯ ಜೀವಿಗಳಿಗೆ ಶಿವದೀಕ್ಷಾ ಸಂಸ್ಕಾರವನ್ನು ಕೊಟ್ಟು ಅವರ ಜೀವನವನ್ನು ಪಾವನಮಾಡಿ ಅವರಿಗೆ ಪ್ರತ್ಯಕ್ಷದರ್ಶನವನ್ನು ಕೊಡುವುದಕ್ಕಾಗಿ ಶಿವನು ಗುರುವಾಗಿ ಅವತರಿಸಿದ್ದರೆ, ಭಕ್ತರ ಆತಿಥ್ಯವನ್ನು ಸ್ವೀಕರಿಸಿ ಅವರಿಗೆ ಜ್ಞಾನವನ್ನು ಬೋಧಿಸುವುದಕ್ಕಾಗಿ ಅವನು ಜಂಗಮನಾಗಿ ಅವತರಿಸಿದ್ದಾನೆ. ಆದ್ದರಿಂದಲೇ ವೀರಾಗಮದಲ್ಲಿ

ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಜಂಗಮನನ್ನು ವರ್ಣಿಸಲಾಗಿದೆ. ಹೀಗೆ ಗುರು-ಜಂಗಮ ಎಂಬ ವ್ಯತ್ಯಾಸವನ್ನು ಅವರ ಕರ್ತವ್ಯದ ಆಧಾರದ ಮೇಲೆ ಮಾಡಲಾಗಿದೆ.

೨. ಗುರುವು ಮತಧರ್ಮವನ್ನು ಬೋಧಿಸುವವನು, ಕೆಲವು ಧಾರ್ಮಿಕ ಆಚರಣೆಗಳನ್ನು ಹೇಳಿಕೊಡುವವನು; ಧರ್ಮದ ಆಚರಣೆ ಭಾಗದ (Rituals) ಸಂರಕ್ಷಕ. ಜಂಗಮನ ಕ್ಷೇತ್ರ ಮತ ಧರ್ಮ ಬೋಧನೆಗಿಂತ ಆಧ್ಯಾತ್ಮ ಬೋಧನೆ. ಜಂಗಮನು ಆಧ್ಯಾತ್ಮವನ್ನು ಬೋಧಿಸುತ್ತಾ ಜಗತ್ತಿನಲ್ಲಿ ಸಂಚರಿಸಿ ಜನರ ನೋವನ್ನು ಹಂಚಿಕೊಳ್ಳುವವನು. ಗುರುವಿನಂತಹ ನೆಲೆ ನಿಂತ ಜೀವನ ಅವನದಲ್ಲ.

೩. ಗುರುವು ಗುರುವಂಶದಲ್ಲಿಯೇ ಜನಿಸಿರಬೇಕೆಂಬ ಚಂದ್ರಜ್ಞಾನಾಗಮದ ವಾಕ್ಯವಿದೆ (ಸಂಪ್ರದಾಯಾಗತಜ್ಞಾನೋ ಗುರುವಂಶಸಮುದ್ಭವಃ, (ಕ್ರಿ.ಪಾ., ೨.೫೦). ಇದರಿಂದ ಅರ್ಥವಾಗುವುದೇನೆಂದರೆ ಗುರುವಾಗಬೇಕಾದವನು ಒಂದು ನಿರ್ದಿಷ್ಟ ಜಾತಿಯವನೇ ಆಗಿರಬೇಕಾಗುತ್ತದೆ. ಆದರೆ ಜಂಗಮನಾಗಲು ವ್ಯಕ್ತಿಯ ಜಾತಿ ಅಡ್ಡಿ ಬರುತ್ತಿರಲಿಲ್ಲ. ಒಬ್ಬ ವ್ಯಕ್ತಿ ಯಾವುದೇ ಜಾತಿಯಿಂದ ಬಂದು ಹೊಸದಾಗಿ ವೀರಶೈವನಾಗಿರಲಿ ಅಥವಾ ಹುಟ್ಟು ವೀರಶೈವನಾಗಿರಲಿ ಜಂಗಮನಾಗಬಹುದಿತ್ತು.

ಪ್ರಶ್ನೆ ೨. ಮುಕ್ತಿ ಎಂದರೇನು?

ಉತ್ತರ : ವೀರಶೈವ ಸಿದ್ಧಾಂತದಲ್ಲಿ ಲಿಂಗಧಾರಣಾತ್ಮಕವಾದ ಶಿವದೀಕ್ಷೆಯಿಂದ ಭವಿಯಾದ ಭಕ್ತನು ಅಷ್ಟಾವರಣ-ಪಂಚಾಚಾರ ಸಂಪನ್ನನಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಆರು ಸ್ಥಲಗಳ ಮೂಲಕ ಸಾಧನೆ ಮಾಡಿ ಜೀವನು ಶಿವನಲ್ಲಿ ಸಮರಸಭಾವದಿಂದ ಬೆರೆಯುವುದೇ ಮುಕ್ತಿ. ಇದಕ್ಕೆ ಲಿಂಗಾಂಗ ಸಾಮರಸ್ಯವೆಂದು ಕರೆಯುತ್ತಾರೆ.

ಇತಿ ಶಮ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫. ಭಸ್ಮ-ಮಹತ್ವ, ನಿರ್ಮಾಣ ಮತ್ತು ಉಪಯೋಗ

-ಶ್ರೀ ಸಿದ್ಧರಾಮ ದೇವರು ಹಿರೇಮಠ

ಚಂದ್ರಜ್ಞಾನಾಗಮದ ಪ್ರಕಾರ ಭಸ್ಮವು ಅಷ್ಟಾವರಣಗಳಲ್ಲಿ ಆರನೆಯ ಆವರಣ. ಭಸ್ಮವೆಂದರೆ ಪರಶಿವನ ಪ್ರಕಾಶ ಮತ್ತು ಗೋಮಯದಿಂದ ನಿರ್ಮಿತವಾದ ವಿಭೂತಿ ಎಂದು ಎರಡು ಅರ್ಥಗಳಾಗುತ್ತವೆ. "ಭಸ್ಮಜ್ಯೋತಿಃ ಸಮಾಮ್ನಾತಂ"[೧] "ಭಸ್ಮೇದಂ ಶಾಂಭವಂ ಜ್ಯೋತಿಃ"[೨] ಮುಂತಾಗಿ ಚಂದ್ರಜ್ಞಾನಾಗಮದಲ್ಲಿ ಭಸ್ಮ ಶಬ್ದವನ್ನು ಪರಶಿವ ಪ್ರಕಾಶವೆಂಬ ಅರ್ಥದಲ್ಲಿ ಪ್ರಯೋಗಿಸಲಾಗಿದೆ. "ಸ ಏಷ ಭಸ್ಮಜ್ಯೋತಿಃ"[೩] ಎಂದು ಉಪನಿಷತ್ತು ಕೂಡ ಇದನ್ನು ಸಮರ್ಥಿಸಿದೆ.

ಪರಶಿವನು ಪರಂಜ್ಯೋತಿಸ್ವರೂಪನಾಗಿದ್ದು, ಆತನ ಪ್ರಕಾಶದಿಂದಲೇ, ಪ್ರಪಂಚವೆಲ್ಲವು ಪ್ರಕಾಶಮಾನವಾಗುತ್ತದೆ. ಹೀಗೆ ವಿಶ್ವವನ್ನೆಲ್ಲ ಬೆಳಗುವ ಪ್ರಕಾಶವನ್ನು ತನ್ನಲ್ಲಿರಿಸಿಕೊಂಡು ಸ್ವಯಂಪ್ರಕಾಶನಾದ ಪರಶಿವನನ್ನು ಮನದಲ್ಲಿ ಸ್ಮರಿಸುವುದೇ ಚಿದ್ಭಸ್ಮಧಾರಣೆಯು. ಇದುವೆ ಪ್ರಮುಖವಾದ ಮತ್ತು ಅಂತರಂಗದ ಭಸ್ಮಧಾರಣೆಯು. ಅಂತೆಯೇ ರೇಣುಕ ಭಗವತ್ಪಾದರು-

ಮಹಾಭಸ್ಮೇತಿ ಸಂಚಿಂತ್ಯ ಮಹಾದೇವಂ ಪ್ರಭಾಮಯಮ್।
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ॥[೪]

ಎಂಬುದಾಗಿ ಪ್ರಭಾಮಯನಾದ ಪರಶಿವನನ್ನು ಮಹಾಭಸ್ಮವೆಂದು ಭಾವಿಸಿ ಸ್ಮರಿಸುವ ರೂಪವಾದ ಚಿದ್ಭಸ್ಮಧಾರಣೆಯೇ ಪ್ರಮುಖವಾದುದು ಎಂದು ತಿಳಿಸಿದ್ದಾರೆ. ಇದಕ್ಕೇನೆ ನಿರುಪಾಧಿಕ ಭಸ್ಮಧಾರಣೆಯೆಂತಲೂ ಕರೆಯುವುದುಂಟು. ಈ ಚಿದ್ವಿಭೂತಿಯ ವಿಷಯವನ್ನು ವಚನ ಸಾಹಿತ್ಯ ಮತ್ತು ನಿಜಗುಣರ ಸಾಹಿತ್ಯದಲ್ಲಿಯೂ ಕಾಣಬಹುದು. ಅಲ್ಲಮ ಪ್ರಭುದೇವರು "ಸರ್ವಾಂಗದಲ್ಲಿ ಚಿದ್ವಿಭೂತಿ..."[೫] ಎಂದೂ, ಚನ್ನಬಸವಣ್ಣನವರು "ಅಯ್ಯಾ ಕೂಡಲ ಚೆನ್ನಸಂಗಮದೇವ ಶ್ರೀ ಮಹಾವಿಭೂತಿಯೇ ಪರಂಜ್ಯೋತಿ ನೀವಾದಿರಾಗಿ ಎನಗೆ ವಿಭೂತಿಯೇ ಸರ್ವಸಾಧನ"[೬] ಎಂದೂ ಮತ್ತು ನಿಜಗುಣ ಶಿವಯೋಗಿಗಳು "ಶಿವನ ಮೈವೆಳಗು ತಾನಾದ ಭಸಿತವನು"[೭] ಎಂದು ಹೇಳಿದ್ದಾರೆ. ಈ ಭಸ್ಮಧಾರಣೆಯಿಂದ "ಭಸ್ಮಧಾರಣಾದ್ಯೈವ ಮುಕ್ತಿರ್ಭವತಿ"[೮] ಎಂಬ ಉಪನಿಷದುಕ್ತಿ-ಗನುಸಾರವಾಗಿ ಶಿವಸಾಯುಜ್ಯವು ಕೈಗೂಡುವುದು.

ಹೀಗೆ ಚಂದ್ರಜ್ಞಾನಾಗಮದಲ್ಲಿ ಪ್ರತಿಪಾದಿತವಾದ ಚಿದ್ಭಸ್ಮದ ವಿಷಯವು ಶ್ರೀ ಸಿದ್ಧಾಂತ ಶಿಖಾಮಣಿ ಮೊದಲಾದ ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ಕನ್ನಡ ಸಾಹಿತ್ಯದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅತ್ಯಂತ ಪ್ರಮುಖ ಅಂಗವಾದ ವಚನಸಾಹಿತ್ಯದಲ್ಲಿ ವ್ಯಾಪಕವಾಗಿ ನಿರೂಪಿಸಲ್ಪಟ್ಟಿರುವುದು ಕಂಡುಬರುತ್ತದೆ. ಇವೆಲ್ಲವುಗಳ ಪ್ರಕಾರ ಪರಶಿವ ಪ್ರಕಾಶವೇ ಭಸ್ಮ ಶಬ್ದದ ತಾತ್ವಿಕ ತಾತ್ಪರ್ಯವಾಗಿದ್ದು, ಅದು ಮಹಾಭಸ್ಮ, ನಿರುಪಾಧಿಕ ಭಸ್ಮ, ಚಿದ್ಭಸ್ಮ, ಭಸ್ಮಜ್ಯೋತಿ ಮೊದಲಾದ ನಾಮಗಳಿಂದ ಕರೆಯಲ್ಪಡುತ್ತದೆ.

ಭಸ್ಮನಿರ್ಮಾಣವಿಧಿ:

ಯಾವ ಆಕಳಿನ ಗೋಮಯದಿಂದ ಭಸ್ಮವನ್ನು ನಿರ್ಮಿಸಬೇಕಾಗಿದೆಯೋ ಆ ಆಕಳನ್ನು ಮತ್ತು ಅದರ ಆಹಾರವಾದ ಹುಲ್ಲನ್ನು ಹಾಗೂ ನೀರನ್ನು ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸಬೇಕು. ಭಸ್ಮ ತಯಾರಿಸುವ ವ್ಯಕ್ತಿಯು ಕೂಡ ಶುಕ್ಲಪಕ್ಷದ ಇಲ್ಲವೆ ಕೃಷ್ಣಪಕ್ಷದ ಚತುರ್ದಶಿಯಿಂದ ಉಪವಾಸ ವ್ರತವನ್ನಾಚರಿಸಿ ಮಾರನೆಯ ದಿನ ಪ್ರಾತಃ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಸ್ನಾನಾದಿಗಳನ್ನು ಮಾಡಿ ಮಡಿವಸ್ತ್ರವನ್ನು ಧರಿಸಿಕೊಂಡು ಶುಚಿರ್ಭೂತನಾಗಬೇಕು. ನಂತರ ಅವನು ಮಂತ್ರಪೂತವಾದ ಆ ಗೋವನ್ನು ಹಾಲು ಕರೆಯುವುದಕ್ಕೋಸುಗ (ಹಿಂಡುವುದಕ್ಕಾಗಿ) ಕರುವನ್ನು ಅದರ ಸಮೀಪ ಹಾಲು ಕುಡಿಯಲು ಬಿಡಬೇಕು. ಆ ಸಮಯದಲ್ಲಿ ಹಸು ಮೂತ್ರವಿಸರ್ಜನೆ ಮಾಡಿದರೆ ಅದನ್ನು ಗಾಯತ್ರಿಮಂತ್ರವನ್ನು ಪಠಿಸುತ್ತ ಬಂಗಾರ, ಬೆಳ್ಳಿ, ತಾಮ್ರ ಇಲ್ಲವೆ ಮಣ್ಣಿನ ಪಾತ್ರೆಗಳಲ್ಲಿ, ಅಥವಾ ಕಮಲದ ಎಲೆಗಳಿಂದ ಇಲ್ಲವೆ ಪಲಾಶಪತ್ರಗಳಿಂದ ನಿರ್ಮಿತವಾದ ಪಾತ್ರೆಯಲ್ಲಿ ಅಥವಾ ಗೋಶೃಂಗ (ಆಕಳ ಕೊಂಬು)ದಲ್ಲಿ ಹಿಡಿಯಬೇಕು. ಇದರಂತೆ ಗೋಮಯವನ್ನು ಅದು ಭೂಮಿಗೆ ಬೀಳುವ ಮುನ್ನ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತ ಮೇಲೆ ತಿಳಿಸಿದ ಪಾತ್ರೆಗಳಲ್ಲಿ ಸಂಗ್ರಹಿಸಬೇಕು. ನಂತರ ಹತ್ತು ಬಾರಿ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಗೋಮೂತ್ರವನ್ನೂ, ಎಂಟು ಸಲ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಗೋಮಯವನ್ನು ಪರಿಶುದ್ಧಗೊಳಿಸಬೇಕು. 'ಭವಾಯ ನಮಃ' ಎಂಬ ಮಂತ್ರವನ್ನು ಪಠಿಸುತ್ತ ಅವೆರಡನ್ನೂ ಕೂಡಿಸಿ ಕಲಸಬೇಕು. ಆ ಬಳಿಕ 'ಶರ್ವಾಯ ನಮಃ' ಎಂಬ ಮಂತ್ರವನ್ನು ಪಠಿಸುತ್ತ ಅದರಿಂದ ಹದಿನಾಲ್ಕು ಕುರುಳುಗಳನ್ನು ತಯಾರಿಸಿ, ಏಳು ಸಲ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತ ಅವುಗಳನ್ನು ಬಿಸಿಲಿನಲ್ಲಿ ಒಣಹಾಕಬೇಕು. ಒಣಗಿದ ನಂತರ ಅವುಗಳನ್ನು ಮೇಲೆ ತಿಳಿಸಿದ ಪಾತ್ರೆಗಳಲ್ಲಿ ಸಂಗ್ರಹಿಸಬೇಕು. ನಂತರ ಆಗಮೋಕ್ತ ವಿಧಿಯಂತೆ ಅಗ್ನಿಯನ್ನು ಪ್ರತಿಷ್ಠಾಪಿಸಿ, ಅದನ್ನು ಪೂಜಿಸಿ, ಓಂ ನಮಃ ಶಿವಾಯ ಸ್ವಾಹಾ, ಯ ವಾ ಶಿ ಮಃ ನ ಓಂ ಸ್ವಾಹಾ ಎಂಬುದಾಗಿ ಪಂಚಾಕ್ಷರಿ ಮಂತ್ರವನ್ನು ಅನುಲೋಮ-ವಿಲೋಮಕ್ರಮದಲ್ಲಿ ಪಠಿಸುತ್ತ ಆ ಅಗ್ನಿಯಲ್ಲಿ ಕುರುಳುಗಳನ್ನು ಹಾಕಬೇಕು. ನಂತರ ಷಡಕ್ಷರಮಂತ್ರವನ್ನು ಜಪಿಸುತ್ತ ಆಜ್ಯದ ಆಹುತಿಯನ್ನು ಕೊಡಬೇಕು (ತುಪ್ಪ ಹಾಕಬೇಕು). ಆಮೇಲೆ 'ನಿಧನಪತಯೇ ನಮಃ' ಎಂಬ ಮಂತ್ರದಿಂದ, ಸದ್ಯೋಜಾತಾದಿ ಪಂಚಬ್ರಹ್ಮ ಮಂತ್ರದಿಂದ್ ಮತ್ತು 'ನಮೋ ದೇವಾಯ ಶಂಭವೇ' ಎಂಬ ಮಂತ್ರದಿಂದ ಆಹುತಿಯನ್ನು ಕೊಡಬೇಕು. ಆ ಬಳಿಕ 'ಭವಾಯ ಶಿವಾಯ ನಮಃ, ಶರ್ವಾಯ ಶಿವಾಯ ನಮಃ, ಮೃಡಾಯ ಶಿವಾಯ ನಮಃ, ರುದ್ರಾಯ ಶಿವಾಯ ನಮಃ, ಹರಾಯ ಶಿವಾಯ ನಮಃ, ಶಂಭವೇ ಶಿವಾಯ ನಮಃ, ಮಹೇಶ್ವರಾಯ ಶಿವಾಯ ನಮಃ ಮತ್ತು ಶಿವಾಯ ಶಿವಾಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮಃ' ಎಂಬ ಎಂಟು ಮಂತ್ರಗಳಿಂದಲೂ ಆಹುತಿಯನ್ನು ಕೊಟ್ಟು, ಒಂದು ನೂರಾ ಎಂಟು (೧೦೮) ಬಾರಿ ಮೂಲ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತ ನೀರಿನಿಂದ ತರ್ಪಣ ಕೊಡಬೇಕು. ಹೀಗೆ ಹೋಮವಿಧಿಗನುಸಾರವಾಗಿ ನಿರ್ಮಾಣಗೊಂಡ ಆ ಭಸ್ಮವನ್ನು ಸದ್ಯೋಜಾತ ಮಂತ್ರದಿಂದ ಸಂಗ್ರಹಿಸಿ, ವಾಮದೇವ ಮಂತ್ರದಿಂದ ಚೂರ್ಣೀಕರಿಸಿ ಅದರಲ್ಲಿ ಸುಗಂಧಜಲ, ಕಸ್ತೂರಿ, ಚಂದನ ಮೊದಲಾದ ಸುಗಂಧ ದ್ರವ್ಯಗಳನ್ನು ಪ್ರಣವವನ್ನು (ಓಂ) ಜಪಿಸುತ್ತ ಕೂಡಿಸಿ ಕಲಸಬೇಕು. ನಂತರ ಅಘೋರ ಹಾಗೂ ಪಂಚಾಕ್ಷರ ಮಂತ್ರಗಳನ್ನು ಹತ್ತು ಬಾರಿ ಪಠಿಸುತ್ತ ಭಸ್ಮದ ಗೋಲಕಗಳನ್ನು (ಉಂಡೆಯಂತೆ) ಸಿದ್ಧಪಡಿಸಬೇಕು. ಸವಿಸ್ತಾರವಾದ ಈ ಭಸ್ಮನಿರ್ಮಾಣವಿಧಿಯು ಚಂದ್ರಜ್ಞಾನಾಗಮದಲ್ಲಿ[೧೦] ನಿರೂಪಿಸಲ್ಪಟ್ಟಿದೆ. ಇದೇ ಸಂದರ್ಭದಲ್ಲಿ ಇಷ್ಟು ವಿಸ್ತಾರವಾದ ವಿಧಿಯಿಂದ ಭಸ್ಮವನ್ನು ನಿರ್ಮಿಸುವುದು ಸಾಧ್ಯವಾಗದೇ ಇರುವವರು ಸಂಕ್ಷಿಪ್ತವಾಗಿ ಭಸ್ಮವನ್ನು ತಯಾರಿಸಿಕೊಳ್ಳ-ಲೆಂಬ ಉದ್ದೇಶದಿಂದ ಪ್ರಕಾರಾಂತರವಾಗಿ ಸಂಕ್ಷಿಪ್ತ ವಿಧಿಯನ್ನು ಚಂದ್ರಜ್ಞಾನಾಗಮದಲ್ಲಿ ಹೀಗೆ ಹೇಳಲಾಗಿದೆ-

> ಸದ್ಯೇನ ಗೋಶಕೃದ್ ಗ್ರಾಹ್ಯಂ ವಾಮೇನ ತ್ವಭಿಮಂತ್ರಯೇತ್।
> ಅಘೋರೇಣ ದಹೇತ್ ಪಿಂಡಂ ಗ್ರಾಹ್ಯಂ ತತ್ಪುರುಷೇಣ ತು॥
> ನಿತ್ಯಮೀಶಾನಮಂತ್ರೇಣ ಸ್ವಾಂಗೇ ಧಾರ್ಯಂ ಪ್ರಯತ್ನತಃ॥[೧೧]

ತಾತ್ಪರ್ಯವೇನೆಂದರೆ ಸದ್ಯೋಜಾತ ಮಂತ್ರವನ್ನುಚ್ಚರಿಸುತ್ತ ಗೋಮಯವನ್ನು ತಂದು, ವಾಮದೇವ ಮಂತ್ರವನ್ನು ಪಠಿಸುತ್ತ ಅದನ್ನು ಅಭಿಮಂತ್ರಿಸಿ, ಒಣಗಿಸಿ, ಅಘೋರ ಮಂತ್ರವನ್ನು ಹೇಳುತ್ತ ಅದನ್ನು ದಹಿಸಿ (ಸುಟ್ಟು), ತತ್ಪುರುಷ ಮಂತ್ರವನ್ನು ಜಪಿಸುತ್ತ ಅದನ್ನು ಸಂಗ್ರಹಿಸಬೇಕು. ಹೀಗೆ ನಿರ್ಮಿತವಾದ ಭಸ್ಮವನ್ನು ಈಶಾನ ಮಂತ್ರವನ್ನು ಜಪಿಸುತ್ತ ಶರೀರದಲ್ಲಿ ಧರಿಸಿಕೊಳ್ಳಬೇಕು.

ಈ ಭಸ್ಮ ನಿರ್ಮಾಣ ವಿಧಿಯನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಬರುವ ಗೋಮಯ ಸಂಗ್ರಹಣೆಯ ವಿಧಾನವನ್ನನುಸರಿಸಿ ಭಸ್ಮದ ಅನೇಕ ಭೇದಗಳು ಚಂದ್ರಜ್ಞಾನಾಗಮದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಅವುಗಳನ್ನಿಲ್ಲಿ ವಿವೇಚಿಸಲಾಗುವುದು.

ಗೋಮಯ ಸಂಗ್ರಹ ವಿಧಾನ ಮತ್ತು ಪ್ರಭೇದಗಳು:

ಗೋಮಯವನ್ನು ಹಿಡಿಯುವ ಪದ್ಧತಿಯೇ ಗೋಮಯ ಸಂಗ್ರಹಣೆಯೆಂದು ಕರೆಯಲ್ಪಡುತ್ತದೆ. ಈ ವಿಧಾನವನ್ನನುಸರಿಸಿ ಚಂದ್ರಜ್ಞಾನಾಗಮದಲ್ಲಿ ಶಾಂತಿಕ, ಪೌಷ್ಟಿಕ ಮತ್ತು ಕಾಮದವೆಂಬ ಮೂರು ವಿಧ ಭಸ್ಮಗಳು ಪ್ರತಿಪಾದಿಸಲ್ಪಟ್ಟಿವೆ.

೧. ಶಾಂತಿಕ ಭಸ್ಮ:

> ಗೋಮಯಂ ಯೋನಿಸಂಬದ್ಧಂ ಯದ್ಧಸ್ತೇನೈವ ಗೃಹ್ಯತೇ।
> ಬ್ರಹ್ಮಮಂತ್ರೈಶ್ಚ ಸಂದಗ್ಧಂ ತಚ್ಛಾಂತಿಕಮಿಹೋಚ್ಯತೇ॥[೧೨]

ಚಂದ್ರಜ್ಞಾನಾಗಮದ ಈ ಉಕ್ತಿಗನುಸಾರವಾಗಿ ಗೋಮಯವು ಕೆಳಗೆ ಬೀಳುವ ಮೊದಲೇ ಅದನ್ನು ಕೈಯಲ್ಲಿ ಹಿಡಿದು ಮೇಲೆ ತಿಳಿಸಿದ ವಿಧಿಯಿಂದ ತಯಾರಿಸಿದ ಭಸ್ಮವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಂತಿಕ ಭಸ್ಮವೆಂದು ಕರೆಯುವರು. ಹೀಗೆ ಸಂಗ್ರಹಿಸಿ ನಿರ್ಮಿಸಿದ ಭಸ್ಮವನ್ನು ಧರಿಸುವುದರಿಂದ ಮನದ ಶಾಂತಿಯುಂಟಾಗುವುದರಿಂದ ಇದಕ್ಕೆ ಶಾಂತಿಕ ಭಸ್ಮವೆನ್ನುವರು.

೨. ಪೌಷ್ಠಿಕ ಭಸ್ಮ:

ಸಾವಧಾನೇನ ಗೋಯೋನಿನಿಃಸೃತಂ ಗೋಮಯಂ ತು ಯತ್।
ಅಂತರಿಕ್ಷೇ ಗೃಹಿತ್ವಾ ತಂ ಷಡಂಗೇನ ದಹೇತ್ ತತಃ॥
......................................ಪೌಷ್ಠಿಕಂ ತು ಸಮಾಖ್ಯಾತಂ[೧೬]

ಈ ಆಗಮೋಕ್ತಿಯ ಪ್ರಕಾರ ಗೋಮಯವು ಗೋಯೋನಿಯ ಕೆಳಗೆ ಬಂದು ಭೂಮಿಯನ್ನು ತಲುಪುವ ಪೂರ್ವದಲ್ಲಿ ಅದನ್ನು ಹಿಡಿದು ಪೂರ್ವದಲ್ಲಿ ತಿಳಿಸಿದ ವಿಧಿಯಿಂದ ಭಸ್ಮವನ್ನು ನಿರ್ಮಿಸಲಾಗಿ ಅದನ್ನು ಪೌಷ್ಠಿಕ ಭಸ್ಮವೆನ್ನುವರು. ಇದನ್ನು ಧರಿಸುವವನ ಮೈಮನಗಳು ಪುಷ್ಟಿಗೊಳ್ಳುವುದರಿಂದ ಇದು ಪೌಷ್ಟಿಕಭಸ್ಮವೆನಿಸಿಕೊಳ್ಳುವುದು.

೩. ಕಾಮದ ಭಸ್ಮ:

ಸುಶುದ್ಧೇ ಭೂತಲೇ ದೈವಾತ್ ಪತಿತಂ ಗೋಮಯಂ ತು ಯತ್।
ಪ್ರಸಾದೇನ ದಹೇದೇವಮೇತತ್ ಕಾಮದಮುಚ್ಯತೇ॥[೧೭]

ಈ ಚಂದ್ರಜ್ಞಾನಾಗಮದ ಉಕ್ತಿಯಂತೆ ಪರಿಶುದ್ಧಗೊಳಿಸಿದ ಭೂಮಿಯಲ್ಲಿ ಬಿದ್ದ ಗೋಮಯದಿಂದ ನಿರ್ಮಿಸಿದ ಭಸ್ಮಕ್ಕೆ ಕಾಮದಭಸ್ಮವೆನ್ನುವರು. ಇದನ್ನು ಧರಿಸುವವನ ಕಾಮನೆಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯವು ಈ ಭಸ್ಮದಲ್ಲಿರುವ ಕಾರಣ ಇದಕ್ಕೆ ಕಾಮದಭಸ್ಮವೆಂದು ಹೆಸರು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿಯೂ ಈ ಭಸ್ಮಸಂಗ್ರಹಣೆಯ ಭೇದವನ್ನನು-ಸರಿಸಿಯೇ ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪಗಳೆಂದು ನಾಲ್ಕು ವಿಧವಾದ ಭಸ್ಮನಿರ್ಮಾಣ ವಿಧಿಗಳನ್ನು ಪ್ರತಿಪಾದಿಸಲಾಗಿದೆ.[೧೮] ಅದನ್ನು ಇದರೊಂದಿಗೆ ಹೋಲಿಸಬಹುದು.

ಒಟ್ಟಿನಲ್ಲಿ ಈ ಭಸ್ಮನಿರ್ಮಾಣವಿಧಿಯ ವಿಷಯಕವಾಗಿ ಚಂದ್ರಜ್ಞಾನಾಗಮ, ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಸಾಹಿತ್ಯಗಳ ಹಿನ್ನೆಲೆಯಲ್ಲಿ ಪರ್ಯಾಲೋಚಿಸಲಾಗಿ ತಿಳಿದು ಬರುವ ಅಂಶವೇನೆಂದರೆ, ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಕಲ್ಪಭಸ್ಮವಿಧಿಯನ್ನು ಪ್ರತಿಪಾದಿಸುವಾಗ ಆಗಮದ ವಿಧಿಯನ್ನೇ ಅನುಸರಿಸಲಾಗಿದೆ. ಗೋಮಯ ಸಂಗ್ರಹಣೆಯ ಸಂದರ್ಭದಲ್ಲಿ ಆಗಮದಲ್ಲಿ ಗೋಮಯವು ಭೂಮಿಯಲ್ಲಿ ಬೀಳುವವರೆಗಿನ ವಿಧಾನವನ್ನು ಮಾತ್ರ ಹೇಳಿದರೆ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಇದಕ್ಕಿಂತ ಮುಂದುವರೆದು ಅರಣ್ಯದಲ್ಲಿ ಬಿದ್ದಿರುವ ಕುರುಳುಗಳಿಂದಲೂ ಭಸ್ಮ ನಿರ್ಮಿಸುವ ಹಾಗೂ ಅಂಗಡಿಗಳಲ್ಲಿ ದೊರೆಯುವ ಭಸ್ಮವನ್ನು ಶೋಧಿಸುವ ವಿಧಾನವನ್ನು ತಿಳಿಸಲಾಗಿದೆ. ಆದರೆ ಶ್ರೇಷ್ಠತೆಯ ಪ್ರಶ್ನೆ ಬಂದಾಗ, ಆಗಮ ಸಮ್ಮತವಾದ ಕಲ್ಪಭಸ್ಮವೇ ಶ್ರೇಷ್ಠವೆನ್ನುವುದನ್ನು ಮತ್ತು ಕಲ್ಪವಿಧಾನ ಸಾಧ್ಯವಾಗದಿದ್ದಾಗ ಮಾತ್ರ ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪ ವಿಧಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಡಬೇಕಾದವುಗಳು ಎಂದು ಶ್ರೀ ಸಿದ್ಧಾಂತಶಿಖಾಮಣಿಯೇ ಹೇಳುತ್ತದೆ. ಚಂದ್ರಜ್ಞಾನಾಗಮದಲ್ಲಿ ಹೇಳಲಾದ ಶಾಂತಿಕ ಮೊದಲಾದ ಭಸ್ಮಸಂಗ್ರಹದ ಭೇದಗಳನ್ನು ಶ್ರೀ ಸಿದ್ಧಾಂತ ಶಿಖಾಮಣಿಯು ಕಲ್ಪಭಸ್ಮದಲ್ಲಿಯೇ ಅಂತರ್ಭಾವ ಮಾಡಿಕೊಂಡು ಪ್ರತ್ಯೇಕ ಅವುಗಳನ್ನು ಉಲ್ಲೇಖಿಸದೇ ಕೈಬಿಟ್ಟಿದೆ. ಇದೂ ಅಲ್ಲದೇ ಚಂದ್ರಜ್ಞಾನಾಗಮದಲ್ಲಿ ಹೇಳಿದ ಆಹುತಿಗಳು ಮತ್ತು ತರ್ಪಣಗಳು ಇಲ್ಲಿ ಕಂಡುಬರುವುದಿಲ್ಲ. ಆದರೆ "ಯಥಾ ಶಾಸ್ತ್ರೋಕ್ತವಿಧಿನಾ" ಮುಂತಾದ ವಾಕ್ಯಗಳಲ್ಲಿ ಭಸ್ಮನಿರ್ಮಾಣಮಾಡುವಲ್ಲಿ ಶಾಸ್ತ್ರವಿಧಿಯನ್ನು ಅನುಸರಿಸಬೇಕೆಂದು ಹೇಳಿರುವುದನ್ನು ಅವಲೋಕಿಸಿದಾಗ ಆಗಮ ಶಾಸ್ತ್ರದ ವಿಧಿಯು ಶ್ರೀ ಸಿದ್ಧಾಂತ ಶಿಖಾಮಣಿಗೆ ಸಮ್ಮತವಾಗಿದ್ದು ಗ್ರಂಥವಿಸ್ತಾರ ಭಯದಿಂದ ಅದನ್ನು ಪ್ರತಿಪಾದಿಸದೇ ಕೈಬಿಟ್ಟಂತೆ ತೋರುತ್ತದೆ. ಇನ್ನು ವಚನ ಸಾಹಿತ್ಯದಲ್ಲಿ ಆಗಮದಲ್ಲಿ ಇಲ್ಲವೆ, ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಲಾದ ಭಸ್ಮನಿರ್ಮಾಣವಿಧಿಯ ಭೇದಗಳನ್ನು ಪ್ರತ್ಯೇಕವಾಗಿ ಪ್ರತಿಪಾದಿಸದೆ ಎಲ್ಲವನ್ನು ಒಂದರಲ್ಲಿಯೇ ಅಂತರ್ಭಾವ ಮಾಡಿಕೊಂಡು ಒಂದೇ ವಿಧಾನವನ್ನು ಹೇಳಿರುವುದು (ನಮಗೆ ಕಂಡು ಬಂದ ಪ್ರಕಾರ) ಕಂಡುಬರುತ್ತದೆ. ಇವನ್ನೆಲ್ಲ ಆಲೋಚಿಸಲಾಗಿ ಭಸ್ಮನಿರ್ಮಾಣದ ವಿಸ್ತೃತವಾದ ವಿಧಾನವು ಕ್ರಮವಾಗಿ ಸಂಕುಚಿತಗೊಳ್ಳುತ್ತ ಬಂದುದು ತಿಳಿದುಬರುತ್ತದೆ. ಹೀಗೆ ಸಂಕುಚಿತಗೊಳ್ಳುತ್ತ ಬಂದರೂ ಸಹ ಚಂದ್ರಜ್ಞಾನಾಗಮದಲ್ಲಿ ಹೇಳಲಾದ ವಿಧಾನದ ಮೂಲ ಜಾಡನ್ನು ಮಾತ್ರ ಬಿಡದೇ ಅನುಕರಿಸುತ್ತ ಬಂದಿರುವುದು ಮಾತ್ರ ಶತಶಃ ಸತ್ಯ. ಭಸ್ಮವನ್ನು ಮಾಡುವ ವಿಧಾನದಲ್ಲಿ ಕೆಲವು ಸ್ಥೂಲವಾದ ವ್ಯತ್ಯಾಸಗಳು ಕಂಡುಬಂದರೂ ಗೋವಿನ ಗೋಮಯದಿಂದಲೇ ಭಸ್ಮವನ್ನು ತಯಾರಿಸಬೇಕೆಂಬ ವಿಷಯದಲ್ಲಿ ಯಾವುದೇ ಭಿನ್ನತೆ ಕಾಣುವುದಿಲ್ಲ.

ಭಸ್ಮಧಾರಣ ವಿಧಿ:

ಮೇಲೆ ತಿಳಿಸಿದ ವಿಧಾನದಿಂದ ನಿರ್ಮಿಸಲ್ಪಟ್ಟ ಭಸ್ಮವನ್ನು ಗುರುಪಾದೋದಕ ಮೊದಲಾದವುಗಳಿಂದ ಶುದ್ಧೀಕರಿಸಿ ಶಾಸ್ತ್ರೋಕ್ತವಿಧಿಯಿಂದ ಧರಿಸುವ ಪದ್ಧತಿಯೇ ಭಸ್ಮಧಾರಣವಿಧಿಯು. ಇದು ಭಸ್ಮೋದ್ಧೂಲನ, ಭಸ್ಮಾವಗುಂಠನ ಅಥವಾ ಭಸ್ಮಸ್ನಾನ ಮತ್ತು ತ್ರಿಪುಂಡ್ರಧಾರಣ ಎಂಬುದಾಗಿ ಮೂರು ವಿಧವಾದುದು.

ಭಸ್ಮೋದ್ಧೂಲನ:

> ಪಂಚಭಿರ್ಬ್ರಹ್ಮಭಿರ್ವಾಪಿ ಮೂಲಮಂತ್ರೇಣ ವಾ ಪುನಃ।
> ಸಮ್ಮಂತ್ರ್ಯ ನಿರ್ಜಲಂ ಭಸ್ಮ ತೇನ ಲಿಂಪೇತ್ ಸುಸಂಯುತಃ॥
> ಸರ್ವಾಂಗಮಾಪಾದಶಿಖಮುದ್ಧೂಲನಮಿದಂ ಸ್ಮೃತಮ್॥[೧೮]

ಎಂಬುದಾಗಿ ಚಂದ್ರಜ್ಞಾನಾಗಮದಲ್ಲಿ ಭಸ್ಮೋದ್ಧೂಲನದ ಪದ್ಧತಿಯನ್ನು ಪ್ರತಿಪಾದಿಸಲಾಗಿದೆ. ಈ ಉಕ್ತಿಯ ತಾತ್ಪರ್ಯವೇನೆಂದರೆ, ಪಂಚಬ್ರಹ್ಮಮಂತ್ರದಿಂದ ಅಥವಾ ಮೂಲ ಪಂಚಾಕ್ಷರ ಮಂತ್ರದಿಂದ ಅಭಿಮಂತ್ರಿಸುತ್ತ ಸರ್ವಾಂಗದಲ್ಲೆಲ್ಲ ಭಸ್ಮವನ್ನು ಪ್ರೋಕ್ಷಿಸಿಕೊಳ್ಳುವುದೇ ಭಸ್ಮೋದ್ಧೂಲನವೆಂದು ಕರೆಯಲ್ಪಡುತ್ತದೆ. ಈಶಾನ ಮಂತ್ರವನ್ನುಚ್ಚರಿಸುತ್ತ ಶಿರಸ್ಸಿನಲ್ಲಿ ಐದು ಸಾರೆ, ತತ್ಪುರುಷ ಮಂತ್ರದಿಂದ ಮುಖದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಲ್ಕು ಬಾರಿ, ಅಘೋರ ಮಂತ್ರವನ್ನು ಪಠಿಸುತ್ತ ಹೃದಯದಲ್ಲಿ ಎಂಟು ಸಲ, ವಾಮದೇವ ಮಂತ್ರವನ್ನು ಹೇಳುತ್ತ ಗುಹ್ಯದಲ್ಲಿ ಹದಿಮೂರು ಸಾರೆ ಮತ್ತು ಸದ್ಯೋಜಾತ ಮಂತ್ರವನ್ನುಚ್ಚರಿಸುತ್ತ ಪಾದಗಳಲ್ಲಿ ಎಂಟು ಬಾರಿ ಭಸ್ಮದ ಉದ್ಧೂಲನ ಮಾಡಿಕೊಂಡು ನಂತರ ಶರೀರದ ತುಂಬೆಲ್ಲ ಮೂಲಮಂತ್ರದಿಂದ ಭಸ್ಮವನ್ನು ಪ್ರೋಕ್ಷಿಸಿಕೊಳ್ಳಬೇಕು.[೧೭] ಈ ವಿಷಯವನ್ನೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ- "ಉದ್ಧೂಲಯೇತ್ ತೇನ ದೇಹಂ ತ್ರಿಪುಂಡ್ರಂ ಚಾಪಿ ಧಾರಯೇತ್"[೧೮] ಎಂಬುದಾಗಿ ಭಸ್ಮೋದ್ಧೂಲನವನ್ನು ಮಾಡಿಕೊಳ್ಳಲು ತಿಳಿಸಲಾಗಿದೆ. ಇದಲ್ಲದೆ- "ಸದ್ಭಕ್ತ ಶರಣಗಣಂಗಳು ಆಪಾದಮಸ್ತಕಪರಿಯಂತರ ಸ್ನಾನಧೂಳನವ ಮಾಡಿ"[೧೯] ಎಂಬುದಾಗಿ ಚೆನ್ನಬಸವಣ್ಣನವರೂ ಈ ಭಸ್ಮೋದ್ಧೂಲನದ ವಿಷಯವನ್ನು ತಮ್ಮ ವಚನದಲ್ಲಿ ಉಲ್ಲೇಖಿಸಿದ್ದಾರೆ. ಈ ಭಸ್ಮೋದ್ಧೂಲನದಿಂದ ಶರೀರದಲ್ಲಿರುವ ಪರಮಾಣುಗಳ ಪರಿವರ್ತನೆಯುಂಟಾಗುತ್ತದೆ. ಅಂತೆಯೇ ಬೃಹಜ್ಜಾಬಾಲೋಪನಿಷತ್ತಿನಲ್ಲಿ ಶಾಮವರ್ಣ ಹೊಂದಿದ ವಿಷ್ಣುವು ಈ ಭಸ್ಮೋದ್ಧೂಲನದಿಂದ ಶ್ವೇತವರ್ಣವನ್ನು ಪಡೆದುಕೊಂಡನೆಂಬ ಕಥೆಯು ಪ್ರತಿಪಾದಿಸಲ್ಪಟ್ಟಿದೆ. ಆದುದರಿಂದ ಸಾಧಕರು ಈ ಭಸ್ಮೋದ್ಧೂಲನ ಮಾಡಿಕೊಂಡು ಅಂತರಂಗ ಹಾಗೂ ಬಹಿರಂಗಗಳಲ್ಲಿ ಪರಿಶುದ್ಧರಾಗಬೇಕು.

ಭಸ್ಮಸ್ನಾನ:

> **ಭಸ್ಮಮುಷ್ಟಿಂ ಸಮಾದಾಯ ಸಂಹಿತಾಮಂತ್ರಮಂತ್ರಿತಮ್।**
> **ಮಸ್ತಕಾತ್ ಪಾದಪರ್ಯಂತಂ ಭಸ್ಮಸ್ನಾನಂ ಸಮಾಚರೇತ್॥**[೨೦]

ಎಂಬ ಉಕ್ತಿಯಂತೆ ಮುಷ್ಟಿಯಲ್ಲಿ ಭಸ್ಮವನ್ನು ತೆಗೆದುಕೊಂಡು ಸಂಹಿತಾಮಂತ್ರದಿಂದ ಅದನ್ನು ಶುದ್ಧೀಕರಿಸಿ, ಅದರಲ್ಲಿ ಸ್ವಲ್ಪ ನೀರನ್ನು, ಅದನ್ನು ಶರೀರದೆಲ್ಲೆಡೆಯಲ್ಲಿ ಧರಿಸಿಕೊಳ್ಳುವುದು ಭಸ್ಮಸ್ನಾನ. ನೀರಿನಲ್ಲಿ ಕೂಡಿಸದೇ ಕೇವಲ ಭಸ್ಮವನ್ನು ಪ್ರೋಕ್ಷಿಸಿಕೊಳ್ಳುವುದು ಭಸ್ಮೋದ್ಧೂಲನವಾದರೆ, ನೀರಿನಲ್ಲಿ ಕೂಡಿಸಿದ ಭಸ್ಮವನ್ನು ಲೇಪಿಸಿಕೊಳ್ಳುವುದು ಭಸ್ಮಸ್ನಾನ ಅಥವಾ ಭಸ್ಮಾವಗುಂಠನ ಎಂದು ಕರೆಯಲ್ಪಡುತ್ತದೆ. ಇದನ್ನೇ ಚಂದ್ರಜ್ಞಾನಾಗಮದಲ್ಲಿ-

> **ಭಸ್ಮನಾ ಮಂತ್ರಿತೇನೈವ ಸಜಲೇನಾನುಲೇಪನಮ್।**
> **ಅವಗುಂಠನಮಾಖ್ಯಾತಮ್...........॥**[೨೧]

ಈ ವಿಧವಾಗಿ ಹೇಳಲ್ಪಟ್ಟಿದೆ. ತ್ರಿಕಾಲಪೂಜಾನಿರತನಾಗುವ ಸಾಧಕನು ಮೂರು ಕಾಲಗಳಲ್ಲಿಯೂ ಅಂದರೆ ಪ್ರಾತಃ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿಯೂ ಈ ಭಸ್ಮಸ್ನಾನವನ್ನು ಮಾಡಿಕೊಳ್ಳಬೇಕು. ಅಂತೆಯೇ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ-

> **ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು।**
> **ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾಸಂಭವಮೇವ ವಾ॥**[೨೨]

ಎಂದು ತಿಳಿಸಲಾಗಿದೆ. ತಾತ್ಪರ್ಯವೇನೆಂದರೆ ತ್ರಿಕಾಲಗಳಲ್ಲಿ ಸ್ನಾನ ಮಾಡುವ ಸಂದರ್ಭದಲ್ಲಿ ಮೊದಲು ಸ್ವಚ್ಛ ಹಾಗೂ ಪವಿತ್ರವಾದ ನೀರಿನಿಂದ ಸ್ನಾನ ಮಾಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶುಚಿರ್ಭೂತನಾಗಿ ನಂತರ ಪವಿತ್ರವಾದ ಆಸನದಲ್ಲಿ ಕುಳಿತು, ಈ ಪೂರ್ವದಲ್ಲಿ ತಿಳಿಸಲಾದ ವಿಧಿವಿಧಾನಗಳಿಂದ ನಿರ್ಮಿಸಲ್ಪಟ್ಟ ಭಸ್ಮವೊಂದನ್ನು ತೆಗೆದುಕೊಂಡು ವಾಮಹಸ್ತ (ಎಡಗೈ)ದಲ್ಲಿರಿಸಿ, ಬಲಹಸ್ತದಿಂದ ಆ ಭಸ್ಮವನ್ನು ಮುಚ್ಚಿ ಬಲದೊಡೆಯ ಮೇಲೆ ಇರಿಸಿಕೊಂಡು, "ಮೌನೀ ಭಸ್ಮಾಭಿಮಂತ್ರಯೇತ್" ಎಂಬ ಶಿವಾಗಮೋಕ್ತಿಯಂತೆ ಮೌನವಾಗಿಯೇ ಪಂಚಾಕ್ಷರ ಮಂತ್ರದ ಮೂಲಕ ಎಂಟು ಬಾರಿ ಅಭಿಮಂತ್ರಿಸಿ ನಂತರ ಸರ್ವಾಂಗಗಳಲ್ಲಿ ಭಸ್ಮಸ್ನಾನವನ್ನು ಮಾಡಿಕೊಳ್ಳಬೇಕು.

ಧರ್ಮಶಾಸ್ತ್ರಗಳಲ್ಲಿ ಹೇಳಲಾದ ಮಾಂತ್ರ, ಭೌಮ, ಆಗ್ನೇಯ, ವಾಯವ್ಯ, ದಿವ್ಯ, ವಾರುಣ ಮತ್ತು ಮಾನಸವೆಂಬ ಸಪ್ತವಿಧ ಸ್ನಾನಗಳಲ್ಲಿ ಭಸ್ಮಸ್ನಾನವು ಅತ್ಯಂತ ಶ್ರೇಷ್ಠವಾದುದು. ಇವುಗಳಲ್ಲಿ "ಆಪೋ ಹಿ ಷ್ಠಾ" ಮುಂತಾದ ಮಂತ್ರಗಳನ್ನುಚ್ಚರಿಸುತ್ತ ಮಸ್ತಕದಲ್ಲಿ ಜಲವನ್ನು ಪ್ರೋಕ್ಷಿಸಿಕೊಳ್ಳುವುದು ಮಾಂತ್ರಸ್ನಾನ. ಗಂಗಾ ಮೊದಲಾದ ಪವಿತ್ರ ನದಿಗಳಲ್ಲಿಯ ಮಣ್ಣಿನಿಂದ ತಿಲಕವನ್ನು ಧರಿಸಿಕೊಳ್ಳುವುದು ಭೌಮಸ್ನಾನ. ಭಸ್ಮಸ್ನಾನವೇ ಆಗ್ನೇಯಸ್ನಾನ. ಗೋವಿನ ಧೂಳು ಮಿಶ್ರಿತವಾಗಿರುವ ವಾಯುವನ್ನು ಶರೀರಕ್ಕೆ ಸ್ಪರ್ಶ ಮಾಡಿಕೊಳ್ಳುವುದು ವಾಯವ್ಯಸ್ನಾನ. ಪ್ರಾತಃಕಾಲ ಅಥವಾ ಸಾಯಂಕಾಲದ ಸಮಯದಲ್ಲಿ ಬಿಸಿಲಿನಿಂದ ಕೂಡಿದ ಮಳೆಯ ನೀರಿನಿಂದ ಸ್ನಾನ ಮಾಡುವುದು ದಿವ್ಯಸ್ನಾನ. ನದಿ ಅಥವಾ ಸರೋವರಗಳಲ್ಲಿನ ಸ್ನಾನ ಮಾಡುವುದು ವಾರುಣಸ್ನಾನ. ಮನದಲ್ಲಿ ನಿರಂತರ ಭಗವತ್‌ಸ್ಮರಣೆಯನ್ನು ಮಾಡುವುದು ಮೌನಸ್ನಾನ.[೨೩] ಈ ಸಪ್ತಸ್ನಾನಗಳಲ್ಲಿ ಮಾನಸ ಸ್ನಾನವು ಕೇವಲ ಆಂತರಿಕ ದೋಷವನ್ನು ದೂರಗೊಳಿಸುವುದು. ಮಾಂತ್ರ, ಭೌಮ, ವಾಯವ್ಯ, ದಿವ್ಯ ಮತ್ತು ವಾರುಣಸ್ನಾನಗಳು ಕೇವಲ ಬಾಹ್ಯದೋಷಗಳನ್ನು ಇಲ್ಲವಾಗಿಸುವುವು. ಆದರೆ ಭಸ್ಮಸ್ನಾನವು ಆಂತರಿಕ ಹಾಗೂ ಬಾಹ್ಯದೋಷಗಳೆರಡನ್ನೂ ಉಪಶಮನಗೊಳಿಸುವುದು. ಆದುದರಿಂದ ಎಲ್ಲ ಸ್ನಾನಗಳಲ್ಲಿ ಭಸ್ಮಸ್ನಾನವೇ ಶ್ರೇಷ್ಠವಾದುದು. ಆದಕ್ಕಾಗಿಯೇ ರೇಣುಕ ಭಗವತ್ಪಾದರು-

ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಮ್।
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇತನ್ಮಲಾಪಹಮ್॥[೨೪]

ಎಂಬುದಾಗಿ ಭಸ್ಮಸ್ನಾನದ ಶ್ರೇಷ್ಠತೆಯನ್ನು ಉಪದೇಶಿಸಿದ್ದಾರೆ. ಇದಲ್ಲದೆ ಈ ಭಸ್ಮಸ್ನಾನದಿಂದ ಚರ್ಮದಲ್ಲಿ ಉಂಟಾಗುವ ಅನೇಕ ರೋಗಗಳು ಇನ್ನಿಲ್ಲವಾಗುತ್ತವೆ. ಏಕೆಂದರೆ ಗೋಮಯದಿಂದ ನಿರ್ಮಿತವಾದ ಈ ಭಸ್ಮದಲ್ಲಿ ಅನೇಕ ರೋಗಗಳ ರೋಗಾಣುಗಳನ್ನು ನಾಶಪಡಿಸುವ ಸಾಮರ್ಥ್ಯವಿರುತ್ತದೆ. ಹೀಗೆ ಈ ಭಸ್ಮಸ್ನಾನದಿಂದ ಆಧ್ಯಾತ್ಮಿಕವಾದ ಮತ್ತು ವೈಜ್ಞಾನಿಕವಾದ ಅನೇಕ ಲಾಭಗಳು ಉಂಟಾಗುವುದರಿಂದ ಇದು ಮಾನವರಿಗೆ ಎಲ್ಲ ರೀತಿಯಿಂದ ಉಪಯುಕ್ತವಾದುದು.

ತ್ರಿಪುಂಡ್ರಧಾರಣೆ ಮತ್ತು ಅದರ ಸ್ಥಾನಗಳು:

ತ್ರಿಪುಂಡ್ರಂ ಕಾರಯೇದ್ ಧೀಮಾನ್ ಬ್ರಹ್ಮವಿಷ್ಣುಶಿವಾತ್ಮಕಮ್।
ಮಧ್ಯಾಂಗುಲಿಭಿರಾದಾಯ ತ್ರಿಸೃಭಿರ್ಮೂಲಮಂತ್ರಿತಮ್॥[೨೫]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಬ ಚಂದ್ರಜ್ಞಾನಾಗಮದ ಉಕ್ತಿಯಂತೆ ಬ್ರಹ್ಮ, ವಿಷ್ಣು ಮತ್ತು ಶಿವನ ಸ್ವರೂಪವಾದ ತ್ರಿಪುಂಡ್ರವನ್ನು ಮಧ್ಯದ ಮೂರು (ಅನಾಮಿಕ, ಮಧ್ಯಮ ಮತ್ತು ತರ್ಜನಿ) ಬೆರಳುಗಳಿಂದ ಲಲಾಟ ಮೊದಲಾದ ಅಂಗಾಂಗಗಳಲ್ಲಿ ಮೂಲಮಂತ್ರವನ್ನು ಪಠಿಸುತ್ತ ಧರಿಸಬೇಕು. ಇದು ಭಸ್ಮೋದ್ಧೂಲನ ಮತ್ತು ಭಸ್ಮಸ್ನಾನಗಳಿಗಿಂತ ಉತ್ಕೃಷ್ಟವಾದುದು. ಅಂತೆಯೇ ಆಚಾರ್ಯರು- "ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ"[೨೬] ಎಂದು ಭಸ್ಮಧಾರಣೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿದ್ದಾರೆ.

ವಾಮಹಸ್ತದಲ್ಲಿ ಭಸ್ಮವನ್ನಿರಿಸಿಕೊಂಡು "ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ..."[೨೭] ಎಂಬ ಮಂತ್ರದಿಂದ ಅಭಿಮಂತ್ರಿಸಿ, "ಮಾ ನಸ್ತೋಕೇ ತನಯೇ ಮಾ ನ..."[೨೮] ಎಂಬ ಮಂತ್ರವನ್ನುಚ್ಚರಿಸುತ್ತ ಅದರಲ್ಲಿ ಜಲವನ್ನು ಮಿಶ್ರಣಗೊಳಿಸಿ (ಕಲೆಸಿ), ನಂತರ ಮೂಲಮಂತ್ರದಿಂದ ಎಂಟು ಬಾರಿ ಅಭಿಮಂತ್ರಿಸಿ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು. ಶಾಸ್ತ್ರಕೋವಿದರಾದ ಪಂಡಿತರು "ತ್ರ್ಯಾಯುಷಂ ಜಮದಗ್ನೇಃ..."[೨೯] ಎಂಬ ಮಂತ್ರವನ್ನು ಪಠಿಸುತ್ತ, ಬ್ರಹ್ಮಚಾರಿಗಳು "ಮೇಧಾವೀ ಭೂಯಾಸಮಜರಾಜರಿಷ್ಣು"[೩೦] ಎಂಬ ಮಂತ್ರವನ್ನುಚ್ಚರಿಸುತ್ತ, ಗೃಹಸ್ಥರು ಮತ್ತು ವಾನಪ್ರಸ್ಥರು "ತ್ರ್ಯಂಬಕಂ ಯಜಾಮಹೇ..."[೩೧] ಎಂಬ ಮಂತ್ರವನ್ನು ಹೇಳುತ್ತ ಮತ್ತು ಭಿಕ್ಷುಕರು (ಸನ್ಯಾಸಿಗಳು?) ಪ್ರಣವವನ್ನು ಜಪಿಸುತ್ತ ತ್ರಿಪುಂಡ್ರವನ್ನು ಧರಿಸಬೇಕು ಎಂದು ಶಿವಶಾಸ್ತ್ರವಿಧಾನವಿದೆ.[೩೨]

ಚಂದ್ರಜ್ಞಾನಾಗಮದಲ್ಲಿ[೩೩] ಈ ಭಸ್ಮ ಧರಿಸುವ ಸ್ಥಾನಗಳನ್ನು ಹೇಳುವ ಸಂದರ್ಭದಲ್ಲಿ ವಿಕಲ್ಪವಾಗಿ ಮೂವತ್ತೆರಡು, ಹದಿನಾರು, ಎಂಟು ಹಾಗೂ ಐದು ಸ್ಥಾನಗಳು ಹೇಳಲ್ಪಟ್ಟಿವೆ. ಅದಕ್ಕನುಸಾರವಾಗಿ ತಲೆ, ಹಣೆ, ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗುಗಳು, ಬಾಯಿ, ಕಂಠ, ಎರಡು ಭುಜಗಳು, ಎರಡು ತೋಳುಗಳು, ಎರಡು ಮಣಿಬಂಧಗಳು, ಹೃದಯ, ಎರಡು ಪಕ್ಕೆಗಳು, ನಾಭಿ, ಗುದ, ಗುಹ್ಯ, ಎರಡು ನಿತಂಬಗಳು, ಎರಡು ತೊಡೆಗಳು, ಎರಡು ಮೊಳಕಾಲುಗಳು, ಎರಡು ಜಂಘಾಗಳು (ಪಿಂಡ್ರಿಗಳು) ಮತ್ತು ಎರಡು ಕಾಲುಗಳು ಇವು ಮೂವತ್ತೆರಡು ಸ್ಥಾನಗಳು. ಶಿರ, ಹಣೆ, ಕಂಠ, ಎರಡು ಕಿವಿಗಳು, ಎರಡು ಭುಜಗಳು, ಎರಡು ತೋಳುಗಳು, ಎರಡು ಮಣಿಬಂಧಗಳು, ಹೃದಯ, ನಾಭಿ, ಎರಡು ಪಕ್ಕೆಗಳು ಹಾಗೂ ಬೆನ್ನು ಇವು ಹದಿನಾರು ಸ್ಥಾನಗಳು. ಶಿರ, ಹಣೆ, ಎರಡು ಕಿವಿಗಳು, ಹೃದಯ ಮತ್ತು ನಾಭಿ ಇವು ಎಂಟು ಸ್ಥಾನಗಳು. ಇದರಂತೆ ಹಣೆ, ಭುಜಗಳೆರಡು, ಹೃದಯ ಮತ್ತು ನಾಭಿ ಇವು ಐದು ಸ್ಥಾನಗಳು. ವಿಕಲ್ಪವಾಗಿ ಹೇಳಲ್ಪಟ್ಟ ಈ ಎಲ್ಲ ಸ್ಥಾನಗಳು ಬೃಹಜ್ಜಾಬಾಲೋಪನಿಷತ್[೩೪] ಹಾಗೂ ಶಿವಪುರಾಣ[೩೫] ಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ತಲೆ, ಹಣೆ, ಎರಡು ಕಿವಿಗಳು, ಕಂಠ, ಎರಡೂ ಭುಜಗಳು, ಹೃದಯ, ನಾಭಿ, ಬೆನ್ನು, ಎರಡು ಬಾಹುಗಳು, ಹೆಗಲು ಮತ್ತು ಎರಡು ಮಣಿಬಂಧಗಳು ಎಂಬುದಾಗಿ ಭಸ್ಮಧಾರಣೆಯ ಹದಿನೈದು ಸ್ಥಾನಗಳು ನಿರ್ದಿಷ್ಟವಾಗಿ ಹೇಳಲ್ಪಟ್ಟಿವೆ.[೩೬]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಭಸ್ಮಧಾರಣೆಯ ಸ್ಥಾನಗಳನ್ನು ತಿಳಿಸುತ್ತ ಚನ್ನಬಸವಣ್ಣನವರು-

ಅಯ್ಯಾ ವಿಭೂತಿ ಧರಿಸುವ ಭೇದವೆಂತೆಂದಡೆ
ಸಹಜಲಿಂಗಧಾರಕರು ಎಂಟು ಸ್ಥಾನದಲ್ಲಿ ಧರಿಸುವುದಯ್ಯ
ಕ್ರಿಯಾದೀಕ್ಷಾಸಮನ್ವಿತರಾದ ಉಪಾಧಿಭಕ್ತರು ಹದಿನಾರು ಸ್ಥಾನದಲ್ಲಿ ಧರಿಸುವುದಯ್ಯ
ಕ್ರಿಯಾದೀಕ್ಷೆ, ಮಂತ್ರದೀಕ್ಷೆಯುಕ್ತರಾದ ನಿರುಪಾದಿಭಕ್ತರು ಮೂವತ್ತೆರಡು ಸ್ಥಾನದಲ್ಲಿ ಧರಿಸುವುದಯ್ಯ
ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆಯುಕ್ತರಾದ ಸಹಜ ಭಕ್ತರು ಮೂವತ್ತಾರು ಸ್ಥಾನದಲ್ಲಿ ಧರಿಸುವುದಯ್ಯ
ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆ, ಸಚ್ಚಿದಾನಂದ ದೀಕ್ಷಾಯುಕ್ತರಾದ
ನಿರ್ವಂಚನ ಭಕ್ತರು ನಾಲವತ್ತು ನಾಲ್ಕು ಸ್ಥಾನದಲ್ಲಿ ಧರಿಸುವುದಯ್ಯ
ಕ್ರಿಯಾ-ಮಂತ್ರ-ವೇಧಾ-ಸಚ್ಚಿದಾನಂದ-ನಿರ್ವಾಣ ಪದದೀಕ್ಷಾ ಸಮನ್ವಿತರಾದ
ಸದ್ಭಕ್ತಶರಣಗಣಂಗಳು ಆಪಾದಮಸ್ತಕ ಪರಿಯಂತರ ಸ್ನಾನ ಧೂಳನವ ಮಾಡಿ,
ನಾಲವತ್ತೆಂಟು ಸ್ಥಾನದಲ್ಲಿ ಮಂತ್ರಸ್ಮರಣೆಯಿಂದ ತ್ರಿಪುಂಡ್ರವ ಧರಿಸುವುದಯ್ಯ
ಕೂಡಲ ಚೆನ್ನಸಂಗಮದೇವ.[illegible]

ಎಂಬುದಾಗಿ ಅಧಿಕಾರಿ ಭೇದದಿಂದ ಭಸ್ಮಧರಿಸುವ ಸ್ಥಾನಭೇದಗಳನ್ನು ನಿರ್ದೇಶಿಸಿರುವರು.

ಒಟ್ಟಿನಲ್ಲಿ ಚಂದ್ರಜ್ಞಾನಾಗಮದಲ್ಲಿ ಭಸ್ಮೋದ್ಧೂಲನ, ಭಸ್ಮಸ್ನಾನ ಮತ್ತು ತ್ರಿಪುಂಡ್ರಧಾರಣೆಯೆಂಬ ಮೂರು ಪ್ರಕಾರದ ಭಸ್ಮಧಾರಣವಿಧಿಯು ನಿರೂಪಿತವಾಗಿದ್ದು, ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಸಾಹಿತ್ಯದಲ್ಲೂ ಇವು ಪ್ರತಿಪಾದಿಸಲ್ಪಟ್ಟಿವೆ. ಆದರೆ ತ್ರಿಪುಂಡ್ರಧಾರಣೆಯ ಸ್ಥಾನಗಳ ವಿಷಯದಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಚಂದ್ರಜ್ಞಾನಾಗಮ ಮತ್ತು ಉಪನಿಷತ್ತುಗಳಲ್ಲಿ ಐದು, ಎಂಟು, ಹದಿನಾರು ಮತ್ತು ಮೂವತ್ತೆರಡು ಸ್ಥಾನಗಳು ಹೇಳಲ್ಪಟ್ಟರೆ, ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ನಿರ್ದಿಷ್ಟವಾಗಿ ಹದಿನೈದು ಸ್ಥಾನಗಳು ಮಾತ್ರ ಪ್ರತಿಪಾದಿಸಲ್ಪಟ್ಟಿವೆ. ಆದರೆ ವಚನ ಸಾಹಿತ್ಯದಲ್ಲಿ ಈ ಭೇದಗಳು ಇನ್ನಷ್ಟು ಅಗಲವಾಗಿ ಎಂಟು, ಹದಿನಾರು, ಮೂವತ್ತೆರಡು, ಮೂವತ್ತಾರು, ನಲವತ್ನಾಲ್ಕು ಮತ್ತು ನಾಲವತ್ತೆಂಟು ಸ್ಥಾನಗಳು ನಿರೂಪಿಸಲ್ಪಟ್ಟಿವೆ. ವಿಕಲ್ಪವನ್ನು ಹೇಳಿದಾಗ ಮನುಷ್ಯನು ಯಾವುದನ್ನು ಆಚರಿಸಬೇಕು ಯಾವುದನ್ನು ಬಿಡಬೇಕು ಎಂಬ ಸಂದೇಹವುಳ್ಳವನಾಗುವನು. ಆಗ ಹೆಚ್ಚು ಜನರು ಕನಿಷ್ಠವಾದುದನ್ನೇ ಆಚರಿಸತೊಡಗು-ವುದರಿಂದ ನಿರ್ದಿಷ್ಟವಾದ ಒಂದೇ ವಿಧಾನವನ್ನು ಹೇಳುವುದು ಸೂಕ್ತ ಎಂಬ ಉದ್ದೇಶದಿಂದ ಶ್ರೀ ಸಿದ್ಧಾಂತ ಶಿಖಾಮಣಿಯು ಆಗಮೋಪನಿಷತ್ತುಗಳಲ್ಲಿ ಪ್ರತಿಪಾದಿಸಿದ ಇತರ ವಿಕಲ್ಪ ಭೇದಗಳನ್ನು ಕೈಬಿಟ್ಟು, ನಿರ್ದಿಷ್ಟವಾದ ಹದಿನೈದು ಸ್ಥಾನಗಳನ್ನೇ ನಿರೂಪಿಸಿರಬಹುದೆಂದು ತೋರುತ್ತದೆ. ವಚನಸಾಹಿತ್ಯದಲ್ಲಿ ಈ ಸ್ಥಾನಭೇದಗಳು ಇನ್ನೂ ಅಧಿಕವಾಗಿ ಪ್ರತಿಪಾದಿಸಲ್ಪಟ್ಟಿದ್ದರೂ ಅವು ವಿಕಲ್ಪವಾಗಿರದೆ ಅಧಿಕಾರಿಭೇದದಿಂದ ಕೂಡಿಕೊಂಡವುಗಳು. ಆಯಾ ಅಧಿಕಾರಿಯೇ ಅವುಗಳನ್ನು ನಿರ್ದಿಷ್ಟವಾಗಿ ಧರಿಸಬೇಕೆಂಬುದಾಗಿ ಹೇಳಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ವೈವಿಧ್ಯಮಯವಾದ ಭಸ್ಮಧಾರಣ ಸ್ಥಾನಗಳು ಕಂಡುಬಂದರೂ ಇವೆಲ್ಲವುಗಳಿಗೆ ಮೂಲವಾದುದು ಆಗಮಸಾಹಿತ್ಯವೇ ಎಂಬ ವಿಷಯದಲ್ಲಿ ಯಾವುದೇ ಸಂಶಯವಿಲ್ಲ. ಈ ಚಂದ್ರಜ್ಞಾನಾಗಮದ ಮೂಲಕಲ್ಪನೆಯೇ ಸ್ವಲ್ಪ ಬೆಳೆಯುತ್ತ ಬಂದುದು ಇಲ್ಲಿ ಗಮನಾರ್ಹ ಸಂಗತಿ.

ಭಸ್ಮಧಾರಣ ಫಲ ಮತ್ತು ಮಹಿಮೆ:

ಈ ಪೂರ್ವದಲ್ಲಿ ಪ್ರತಿಪಾದಿಸಲಾದ ಭಸ್ಮನಿರ್ಮಾಣ ವಿಧಿಯನ್ನು ಅನುಸರಿಸಿ ನಿರ್ಮಿಸಲಾದ ಭಸ್ಮವನ್ನು ಶಿರ-ಕರ ಮುಂತಾದ ಸ್ಥಾನಗಳಲ್ಲಿ ಧರಿಸುವುದರಿಂದ ಸಕಲ ತೀರ್ಥಯಾತ್ರೆಯ ಫಲವು ದೊರೆಯುವುದಲ್ಲದೆ ಮನುಷ್ಯನು ಮಾಡಿದ ಅನಂತ ಪಾತಗಳು ನಷ್ಟವಾಗುವವು. ಅಂತೆಯೇ ಚಂದ್ರಜ್ಞಾನಾಗಮದಲ್ಲಿ-

> ಭಸ್ಮಸಂಧಾರಣಾದೇವ ಸರ್ವತೀರ್ಥಫಲಂ ಭವೇತ್।
> ಭಸ್ಮಸಂಧಾರಣಾತ್ ಸರ್ವಂ ಭಸ್ಮೀಭವತಿ ಕಿಲ್ಬಿಷಮ್॥[೬೮]

ಎಂಬುದಾಗಿ ಭಸ್ಮವು ಸರ್ವತೀರ್ಥಯಾತ್ರಾಫಲಪ್ರದಾಯಕವೂ ಮತ್ತು ಪಾಪನಾಶಕವೂ ಆದುದು ಎಂದು ಪ್ರತಿಪಾದಿಸಲಾಗಿದೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿಯೂ ಇದನ್ನೇ-

> ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರಪರಾಯಣಃ।
> ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸರ್ವಕಿಲ್ಬಿಷೈಃ॥[೬೯]

ಈ ವಿಧವಾಗಿ ಹೇಳಲಾಗಿದೆ. ತಾತ್ಪರ್ಯವೇನೆಂದರೆ. ನಾಸ್ತಿಕನೂ, ಶಾಸ್ತ್ರಮರ್ಯಾದೆಯನ್ನು ಮೀರಿದವನೂ, ದುರಾಚಾರಶೀಲನೂ ಆದ ವ್ಯಕ್ತಿಯು ಸಹ ಭಸ್ಮವನ್ನು ಧರಿಸಿದರೆ, ಸಮುಪ್ತಪಾಪಗಳಿಂದ ಮುಕ್ತನಾಗುವನು. ಇದನ್ನು ಸಮರ್ಥಿಸುತ್ತ ಜಗಜ್ಯೋತಿ ಬಸವೇಶ್ವರರು-

> ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ
> ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದಡೆ
> ಸಿಹಿಯಾಗದೆ ಮೂರು ದಿವಸಕ್ಕಯ್ಯಾ?
> ಹಲವು ಕಾಲ ಕೊಂದ ಸೋನೆಗಾರನ ಕತ್ತಿಯಾದಡೇನು
> ಪರುಷ ಮುಟ್ಟಲಿಕೆ ಹೊನ್ನಾಗದೇ ಅಯ್ಯಾ
> ಲಲಾಟದಲ್ಲಿ ಶ್ರೀ ವಿಭೂತಿಯ ಬರೆಯಲಿಕೆ ಪಾಪಪಲ್ಲಟವಾಗದೇ
> ಕೂಡಲಸಂಗಮದೇವ[೭೦]

ಎಂಬುದಾಗಿ ಸೋರೆಕಾಯಿಯ ಹಾಗೂ ಪರುಷಮಣಿಯ ಉದಾಹರಣೆಯ ಮೂಲಕ ಭಸ್ಮವು ಪಾಪಪರಿಹಾರಕವೆಂಬುದನ್ನು ನಿರೂಪಿಸಿರುವರು. ಇಂತಹ ಪಾಪನಿವಾರಕವಾದ ಭಸ್ಮದ ದರ್ಶನ ಮಾತ್ರದಿಂದಲೇ ಭೂತಪ್ರೇತ ಪಿಶಾಚಾದಿಗಳ ಬಾಧೆಗಳು ತೊಲಗುತ್ತವೆ. ಕ್ಲೇಶಕರವಾದ ರೋಗಗಳು ದೂರಾಗುತ್ತವೆ. ಮತ್ತು ಶಿವದರ್ಶನದ ಫಲವು ಪ್ರಾಪ್ತಿಯಾಗುತ್ತದೆ.[೭೧] ಅಂತೆಯೇ ಈ ಭಸ್ಮವನ್ನು ವಶಿಷ್ಠ ಮೊದಲಾದ ಮಹರ್ಷಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದಾಕಾಲ ಧರಿಸಿಕೊಳ್ಳುತ್ತಿದ್ದರು."[೨] ಇಂತಹ ಮಹಿಮಾನ್ವಿತವಾದ ಈ ಭಸ್ಮವು "ಕೂಡಲ ಸಂಗನ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ"[೩] ಎಂಬ ಬಸವಣ್ಣನವರ ಉಕ್ತಿಯಂತೆ ಶರಣರ ಲಲಾಟಕ್ಕೆ ಭೂಷಣಪ್ರಾಯವಾದುದು.

ಇಂತಹ ಕ್ರಿಯಾಪ್ರಧಾನವಾದ ಭಸ್ಮವನ್ನು ಧರಿಸುವುದರಿಂದ ತಾತ್ವಿಕ ಭಸ್ಮಸ್ವರೂಪವಾದ ಶಿವನ ಚಿದ್ರೂಪದ ಅರಿವು ಉಂಟಾಗುತ್ತದೆ. ಅರ್ಥಾತ್ ಈ ಭಸ್ಮವನ್ನು ಧರಿಸುವ ಜೀವನು ಸದಾ ಸದ್ವಿಚಾರ ಮತ್ತು ಸದಾಚಾರಗಳಿಂದ ಯುಕ್ತನಾಗಿದ್ದು ಶಿವನ ಚಿತ್‌ಸ್ವರೂಪವನ್ನು ಅರಿಯಲು ಪ್ರಯತ್ನಿಸಬೇಕು. ಆಗ ಭಸ್ಮವು ಶಿವನ ಚಿದ್ರೂಪದ ಅರಿವಿಗೆ ಕಾರಣವಾಗುತ್ತದೆ. ಅಂತೆಯೇ ಶರಣರು- "ಅಯ್ಯಾ ಶ್ರೀ ವಿಭೂತಿಯಿಂದ ಕಂಡೆ ನಿಮ್ಮ ಆ ನಿಮ್ಮ ದಿವ್ಯ ಬೆಳಗಿನ ಹೊಳಹ" ಎಂದಿರುವರು. ಒಟ್ಟಿನಲ್ಲಿ ಬಹಿರಂಗದ ಕ್ರಿಯಾಪ್ರಧಾನವಾದ ಭಸ್ಮಧಾರಣೆಯಿಂದ ತಾತ್ವಿಕ ಭಸ್ಮಧಾರಣೆಯು ಸಿದ್ಧಿಸುತ್ತದೆ. ತಾತ್ವಿಕ ಭಸ್ಮಧಾರಣೆಯಿಂದ ಕೈವಲ್ಯಪ್ರಾಪ್ತಿಯಾಗುತ್ತದೆ. ಹೀಗೆ ಕೈವಲ್ಯಪಥಕ್ಕೆ ಮಹಾದ್ವಾರವಾದ ಈ ಭಸಿತವನ್ನು ಧರಿಸಿ ಸಾಧಕರು ಪರಮಸಿದ್ಧಿಯಾದ ಮೋಕ್ಷವನ್ನು ಸಾಧಿಸಿಕೊಳ್ಳಬೇಕು.

ಒಟ್ಟಾರೆ ಈಗ ಉಪಲಬ್ಧವಿರುವ ಆಗಮಗಳಲ್ಲಿ ಚಂದ್ರಜ್ಞಾನಾಗಮದಲ್ಲಿ ದೊರೆಯುವ ಭಸ್ಮವಿಷಯಕವಾದ ವಿಚಾರವು ತುಂಬಾ ವಿಧಿವತ್ತಾಗಿ, ಸಕ್ರಮವಾಗಿ ಪ್ರತಿಪಾದಿಸಲ್ಪಟ್ಟಿದ್ದು ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಸಾಹಿತಿಗಳೂ ಸಹ (ಸಾಧಕರ ಅನುಕೂಲತೆಗಾಗಿ ಮಾಡಿಕೊಂಡ ಕೆಲವೇ ಕೆಲವು ವ್ಯತ್ಯಾಸಗಳನ್ನು ಹೊರತುಪಡಿಸಿದರೆ) ಅದರ ಆಧಾರದ ಮೇಲೆಯೇ ಭಸ್ಮದ ವಿಷಯವನ್ನು ಪ್ರತಿಪಾದಿಸಿವೆ. ಶ್ರೀ ಸಿದ್ಧಾಂತ ಶಿಖಾಮಣಿ ಮತ್ತು ವಚನಗಳು ಈ ವಿಷಯದಲ್ಲಿ ಚಂದ್ರಜ್ಞಾನಾಗಮದ ಮೂಲ ಜಾಡನ್ನು ಹಿಡಿದುಕೊಂಡು ಮತ್ತು ತಮ್ಮ ಅನುಭವಗಳನ್ನು ಅದರಲ್ಲಿ ಮಿಶ್ರಣಗೊಳಿಸಿ ವಿಷಯವನ್ನು ಪ್ರತಿಪಾದಿಸಿವೆ.

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೬೪.

೨. ಅದೇ, ೬.೬೬.

೩. ಬೃಹಜ್ಜಾಬಾಲೋಪನಿಷತ್, ೭.೨.

೪. ಶ್ರೀ ಸಿದ್ಧಾಂತ ಶಿಖಾಮಣಿ, ೭.೨.

೫. ಅಲ್ಲಮಪ್ರಭುದೇವರ ವಚನಸಂಗ್ರಹ, ೧೫೯೮.

೬. ಚನ್ನಬಸವಣ್ಣನವರ ವಚನ ಸಂಗ್ರಹ, ೯೩೩.

೭. ಕೈವಲ್ಯ ಪದ್ಧತಿ, ಯೋ.ಪ್ರ.ಸ್ಥ., ೩೦.

೮. ಬೃಹಜ್ಜಾಬಾಲೋಪನಿಷತ್, ೭.೨.

೯. "ಸದ್ಯೋಜಾತಂ ಪ್ರಪದ್ಯಾಮಿ", "ವಾಮದೇವಾಯ ನಮಃ", "ಅಘೋರೇಭ್ಯೋಽಥ ಘೋರೇಭ್ಯಃ", "ತತ್ಪುರುಷಾಯ ವಿದ್ಮಹೇ", "ಈಶಾನಃ ಸರ್ವವಿದ್ಯಾನಾಂ", (ತೈತ್ತಿರೀಯ ಆರಣ್ಯಕ, ೧೦.೪೩-೪೭). ಈ ಐದು ಮಂತ್ರಗಳು ಪಂಚಬ್ರಹ್ಮಮಂತ್ರಗಳೆಂದು ಪ್ರಸಿದ್ಧ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೬-೨೮.

೧೧. ಅದೇ, ೬.೨೯-೩೦.

೧೨. ಅದೇ, ೬.೩೧.

೧೩. ಅದೇ, ೬.೩೨.

೧೪. ಅದೇ, ೬.೩೩.

೧೫. ಶ್ರೀ ಸಿದ್ಧಾಂತಶಿಖಾಮಣಿ, ೭.೧೩-೧೭.

೧೬. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೪೧.

೧೭. ಅದೇ, ೬.೩೮-೩೯.

೧೮. ಶ್ರೀ ಸಿದ್ಧಾಂತಶಿಖಾಮಣಿ, ೭.೨೮.

೧೯. ಚನ್ನಬಸವಣ್ಣನವರ ವಚನ ಸಂಗ್ರಹ, ೯೪೯.

೨೦. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೩೭.

೨೧. ಅದೇ, ೬.೪೨.

೨೨. ಶ್ರೀ ಸಿದ್ಧಾಂತಶಿಖಾಮಣಿ, ೭.೧೮.

೨೩. "ಆಪೋ ಹಿ ಷ್ಠೇತಿ" ವೈ ಮಾಂತ್ರಂ ಮೃದಾಲಂಬಸ್ತು ಪಾರ್ಥಿವಮ್।
ಆಗ್ನೇಯಭಸ್ಮನಾ ಸ್ನಾನಂ ವಾಯವ್ಯಂ ಗೋರಜಃ ಸ್ಮೃತಮ್॥
ಯತ್ತು ಸಾತಪವರ್ಷೇಣ ಸ್ನಾನಂ ತದ್ದಿವ್ಯಮುಚ್ಯತೇ।
ವಾರುಣಂ ಚಾವಗಾಹ್ಯಂ ಚ ಮಾನಸಂ ವಿಷ್ಣುಚಿಂತನಮ್॥
(ಯಜ್ಞವಲ್ಕ್ಯ ವಚನಮ್, ಶ.ಕ., ಪು.೪೫೩).

೨೪. ಶ್ರೀ ಸಿದ್ಧಾಂತಶಿಖಾಮಣಿ, ೭.೨೨.

೨೫. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೪೩.

೨೬. ಶ್ರೀ ಸಿದ್ಧಾಂತಶಿಖಾಮಣಿ, ೭.೨೯.

೨೭. ಅಥರ್ವಶಿರ ಉಪನಿಷತ್, ೫.

೨೮. ತೈತ್ತಿರೀಯಸಂಹಿತಾ, ೪.೫.೧೦.

೨೯. ಮಾಧ್ಯಮಿಕಸಂಹಿತಾ, ೩.೬.೨.

೩೦. ಋಗ್ವೇದ ಖಿಲ, ೧೦.೧೫೧.೬.

೩೧. ತೈತ್ತಿರೀಯ ಸಂಹಿತಾ, ೧.೮.೬.೨.

೩೨. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೫೯-೬೩.

೩೩. ಅದೇ, ೬.೪೩-೫೭.

೩೪. ಬೃಹಜ್ಜಾಬಾಲೋಪನಿಷತ್, ೪.೧೨-೩೬.

೩೫. ಶಿವಪುರಾಣ, ವಿದ್ಯೇ ೨೪. ೯೮-೧೦೪.

೩೬. ಶ್ರೀ ಸಿದ್ಧಾಂತಶಿಖಾಮಣಿ, ೭.೩೧-೩೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩೭. ಚನ್ನಬಸವಣ್ಣನವರ ವಚನ ಸಂಗ್ರಹ, ೯೪೬.

೩೮. ಚಂದ್ರಜ್ಞಾನಾಗಮ, ಕ್ರಿ.ಪಾ., ೬.೭೫.

೩೯. ಶ್ರೀ ಸಿದ್ಧಾಂತಶಿಖಾಮಣಿ, ೬.೪೩.

೪೦. ಬಸವಣ್ಣನವರ ವಚನ ಸಂಗ್ರಹ.

೪೧. ಭಸ್ಮದರ್ಶನಾದೇವ ಶಿವದರ್ಶನಮಶ್ನುತೇ।
ಭೂತಪ್ರೇತಪಿಶಾಚಾಶ್ಚ ಮಹಾರೋಗಾಶ್ಚ ದುಃಸಹಾಃ॥
ಭಸ್ಮದರ್ಶನ ಮಾತ್ರೇಣ ಪಲಾಯಂತೇ ನ ಸಂಶಯಃ॥

-ಚಂದ್ರಜ್ಞಾನಾಗಮ, ಕ್ರಿ.ಪಾ., ೬.೭೬-೭೭.

೪೨. ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ।
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾ ಕೃತಮ್॥

-ಶ್ರೀ ಸಿದ್ಧಾಂತಶಿಖಾಮಣಿ, ೬.೪೧.

೪೩. ಬಸವಣ್ಣನವರ ವಚನಸಂಗ್ರಹ, ೧೦೦೯.

೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೬. ರುದ್ರಾಕ್ಷ ಉತ್ಪತ್ತಿ, ಧಾರಣವಿಧಿ ಹಾಗೂ ಮಹಿಮೆ

ಷ॥ ಬ್ರ॥ ಡಾ॥ ಮಹಾದೇವ ಶಿವಾಚಾರ್ಯ

ಕಾಮಿಕಾದಿ ವಾತುಲಾಂತ ಇಪ್ಪತ್ತೆಂಟು ಶಿವಾಗಮಗಳಲ್ಲಿ ಚಂದ್ರಜ್ಞಾನಾಗಮವೂ ಒಂದು. ಈ ಆಗಮದ ಉತ್ತರಭಾಗದಲ್ಲಿ ಬರುವ ಕ್ರಿಯಾಪಾದಾಂತರ್ಗತ ಸಪ್ತಮಪಟಲದಲ್ಲಿ ರುದ್ರಾಕ್ಷದ ಸ್ವರೂಪ ಕುರಿತು ವಿಸ್ತಾರವಾದ ವರ್ಣನೆ ಬರುತ್ತದೆ.

ಸಂದರ್ಭಾನುಸಾರ ಶಿಷ್ಯನಾದ ಬೃಹಸ್ಪತಿಯು ಮಹಿಮಾಶಾಲಿಯಾದ ಅನಂತ ರುದ್ರದೇವನನ್ನು ಕುರಿತು "ಹೇ ಕರುಣಾಮಯೀ ಮಹಾಗುರುದೇವಾ! ವೀರಶೈವರ ಅಷ್ಟಾವರಣಗಳಲ್ಲಿ ಕ್ರಮಪ್ರಾಪ್ತವಾದ ಚತುರ್ಥ ಆವರಣವಾದ ಭಸ್ಮದ ಅಚಿಂತ್ಯ ಮಹಿಮೆಯನ್ನು ಈವರೆಗೆ ಶ್ರವಣ ಮಾಡಿ ಧನ್ಯನಾದೆನು. ಈಗ ಪಂಚಮ ಆವರಣವಾದ ರುದ್ರಾಕ್ಷದ ಮಹಿಮೆಯನ್ನು ನನಗೆ ಬೋಧಿಸಿ ಅನುಗ್ರಹಿಸಿರಿ ಎಂದು ಪ್ರಾರ್ಥಿಸುತ್ತಾನೆ. ಆತನ ಪ್ರಾರ್ಥನೆಯ ಮೇರೆಗೆ ಅನಂತರುದ್ರದೇವರು ವರ್ಣಿಸಿದ ರುದ್ರಾಕ್ಷದ ಉತ್ಪತ್ತಿ, ಮಹಿಮೆಯ ಯಶೋಗಾಥೆಯನ್ನಿಲ್ಲಿ ಮಂಡಿಸಬಯಸುತ್ತೇವೆ.

ರುದ್ರಾಕ್ಷದ ಸ್ವರೂಪ:

ಒಂದು ವಿಶಿಷ್ಟ ಜಾತಿಯ ವೃಕ್ಷದ ಬೀಜಕ್ಕೆ ರುದ್ರಾಕ್ಷವೆನ್ನುತ್ತಾರೆ. "ರುದ್ರನೇತ್ರ ಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ". ಈ ಉಕ್ತಿಯಲ್ಲಿ ರುದ್ರಾಕ್ಷದ ಉತ್ಪತ್ತಿಯ ಬಗ್ಗೆ ಸಂಕೇತ ದೊರೆಯುತ್ತದೆ.

ರುದ್ರಾಕ್ಷಯ ಉತ್ಪತ್ತಿ:

ರುದ್ರಾಕ್ಷದ ಉತ್ಪತ್ತಿಯ ಸಂಬಂಧದಲ್ಲಿ ಒಂದು ಪ್ರಸಿದ್ಧ ಪೌರಾಣಿಕ ಕಥೆ ಇದೆ. ತಾರಕಾಕ್ಷ, ಕಮಲಾಕ್ಷ ಮತ್ತು ವೀರವಿದ್ಯುನ್ಮಾಲಿ ಎಂಬ ಮೂವರು ದಾನವರು ಘೋರ ತಪಸ್ಸನ್ನಾಚರಿಸಿ ಬ್ರಹ್ಮದೇವನನ್ನು ಒಲಿಸಿಕೊಂಡು ಅವನ ವರದಾನದಿಂದ ಅಂತರಿಕ್ಷದಲ್ಲಿ ಯಾರಿಂದಲೂ ನಾಶವಾಗದ ಸ್ವತಂತ್ರ ತ್ರಿಪುರಗಳನ್ನು ನಿರ್ಮಿಸಿಕೊಂಡು ಅಹಂಕಾರದಿಂದಿದ್ದರು. ಅವರು ತಮ್ಮ ಅವಿನಾಶದ ಅಹಂಕಾರದ ಅಮಲಿನಲ್ಲಿ ದೇವತೆಗಳ ಮೇಲೆ ಅತ್ಯಾಚಾರವೆಸಗುತ್ತ ಲೋಕಕಂಟಕರಾದರು. ಅವರ ಅನಂತ ಪೀಡೆಯಿಂದ ಸಂತ್ರಸ್ತರಾದ ದೇವತೆಗಳೆಲ್ಲ ಕೂಡಿ ತಮ್ಮ ರಕ್ಷೆಗಾಗಿ ಹಾಗೂ ತ್ರಿಪುರಗಳ ಸಂಹಾರಕ್ಕಾಗಿ ದೇವಾಧಿದೇವನಾದ ಶಿವರುದ್ರನನ್ನು ಕುರಿತು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮನ್ನಿಸಿ ಭಗವಾನ್ ರುದ್ರನು ತ್ರಿಪುರ ಸಂಹಾರಕ್ಕೋಸ್ಕರ ಆ ಮೂರು ಪುರಗಳು ಏಕರೇಖಾ ಕಕ್ಷೆಯಲ್ಲಿ ಬರುವವರೆಗೆ ದೀರ್ಘಾವಧಿ ಕಾಲದವರೆಗೆ ನಿರ್ನಿಮೇಷ ದೃಷ್ಟಿಯಿಂದ ತನ್ನ ತ್ರಿನೇತ್ರಗಳಿಂದ ವೀಕ್ಷಿಸುತ್ತ ಕುಳಿತುಕೊಂಡನು. ಆಗ ಅವನ ಮೂರೂ ನೇತ್ರಗಳಿಂದ ಅನೇಕ ಜಲಬಿಂದುಗಳು ಭೂಮಿಯ ಮೇಲೆ ಉದುರಿದವು. ಅಲ್ಲಿಯೇ ರುದ್ರಾಕ್ಷಗಿಡಗಳು ಕಾಣಿಸಿಕೊಂಡು ರುದ್ರಾಕ್ಷ ಫಲಗಳನ್ನು ಕೊಡತೊಡಗಿದವು.

ಇದರ ಸಂಬಂಧವಾಗಿ ಚಂದ್ರಜ್ಞಾನಾಗಮದಲ್ಲಿ ಅನಂತರುದ್ರೋಕ್ತಿಯ ಪ್ರಮಾಣವನ್ನು ಹೀಗೆ ಕೊಡಬಹುದು:

ತ್ರಿಪುರಾಣಾಂ ವಧಾರ್ಥಾಯ ವಿಭುನಾ ಶಂಭುನಾ ಪುರಾ।
ಉನ್ಮೀಲಿತಾನಿ ಚಕ್ಷೂಂಷಿ ದಿವ್ಯಂ ವರ್ಷಸಹಸ್ರಕಮ್॥
ಉಭಾಭ್ಯಾಂ ಚಾರುಪಕ್ಷ್ಮಭ್ಯಾಂ ಪತಿತಾ ಜಲಬಿಂದವಃ।
ತ ಏವ ಬಿಂದವೋ ಜಾತಾ ಮಹಾರುದ್ರಾಕ್ಷವೃಕ್ಷಕಾಃ॥
ಸ್ಥಾವರತ್ವಂ ಅನುಪ್ರಾಪುರ್ಭಕ್ತಾನುಗ್ರಹ ಕಾರಣಾತ್।[1]

"ಹಿಂದೆ ಮೂರು ಗಂಧರ್ವ ಪುರಗಳ ನಾಶಕ್ಕಾಗಿ ಶಿವನು ಸಹಸ್ರ ವರ್ಷಕಾಲ ಕಣ್ಣುಗಳನ್ನು ಅಗಲವಾಗಿ ತೆರೆದನು. ಎರಡೂ ಕಣ್ಣುಗಳಿಂದ ನೀರಿನ ಹನಿಗಳು ಬಿದ್ದವು. ಆ ಹನಿಗಳು ದೊಡ್ಡ ರುದ್ರಾಕ್ಷ ಮರಗಳಾದವು. ಅನಂತರ ಅವು ಭಕ್ತಾನುಗ್ರಹಕ್ಕಾಗಿ ಸ್ಥಿರವಾದವು." ಅದೇ ರೀತಿ ಶ್ರೀ ಸಿದ್ಧಾಂತ ಶಿಖಾಮಣಿಯು ಹೇಳುತ್ತದೆ-

ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜಗತಾಂ ಪತಿಃ।
ಉದಪಶ್ಯತ್ ಪುರಾ ಯೋಗಮುನ್ಮೀಲಿತವಿಲೋಚನಃ॥
ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ।
ತೇಭ್ಯೋ ಜಾತಾ ಹಿ ರುದ್ರಾಕ್ಷಾ ರುದ್ರಾಕ್ಷಾ ಇತಿ ಕೀರ್ತಿತಾಃ॥[2]

ಇದೆಲ್ಲಕ್ಕೆ ಮೂಲ ಆಕರವಾದ ಬೃಹಜ್ಜಾಬಾಲೋಪನಿಷತ್ತಿನಲ್ಲಿ ಹೀಗೆ ಸಂಕ್ಷಿಪ್ತವಾದ ನಿರೂಪಣೆಯಿದೆ:

ಸದಾಶಿವಃ ಸಂಹಾರಕಾಲೇ ಸಂಹಾರಂ ಕೃತ್ವಾ ಸಂಹಾರಾಕ್ಷಮ್।
ಮುಕುಲೀಕರೋತಿ ತನ್ನಯನಾಜ್ಜಾತಾ ರುದ್ರಾಕ್ಷಾ ಇತಿ॥[3]

ಹೀಗೆ ಚಂದ್ರಜ್ಞಾನಾಗಮವು ಪ್ರಾಚೀನ ಆಖ್ಯಾನವೊಂದನ್ನು ಉಲ್ಲೇಖಿಸಿ ರುದ್ರಾಕ್ಷದ ಉತ್ಪತ್ತಿಯ ಬಗ್ಗೆ ಹೇಳಿದೆ. ಇದಕ್ಕೆ ಮೂಲ ಬೃಹಜ್ಜಾಬಾಲೋಪನಿಷತ್ತಿನಲ್ಲಿರುವ

---

೧. ಚಂದ್ರಜ್ಞಾನಾಗಮ, ಕ್ರಿಯಾಪಾದ, ೭.೪-೫.

೨. ಸಿದ್ಧಾಂತ ಶಿಖಾಮಣಿ, ೭.೪೭-೪೮ [ಮ.ಸೋ.ಪ್ರ. ೧೯೮೦.].

೩. ಬೃಹಜ್ಜಾಬಾಲೋಪನಿಷತ್ತು, ೭. ಬ್ರಾಹ್ಮಣ ೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಕ್ಷಿಪ್ತವಾದ ಕಥೆ. ಶ್ರೀ ಸಿದ್ಧಾಂತ ಶಿಖಾಮಣಿಯು ಆಗಮೋಕ್ತ ಆಖ್ಯಾನವನ್ನೇ ಉಲ್ಲೇಖಿಸಿ ರುದ್ರಾಕ್ಷದ ಉತ್ಪತ್ತಿಯನ್ನು ನಿರೂಪಿಸುತ್ತದೆ.

ರುದ್ರಾಕ್ಷಿಯ ಉತ್ತಮಾದಿ ಭೇದಗಳು:

ಚಂದ್ರಜ್ಞಾನಾಗಮವು ಮೊದಲು ಗಾತ್ರದ ಪ್ರಕಾರ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಭೇದಗಳನ್ನು ಹೇಳುತ್ತದೆ. ನೆಲ್ಲಿಕಾಯಿ ಗಾತ್ರದ್ದು ಉತ್ತಮ; ಬಾರಿಹಣ್ಣಿನ ಗಾತ್ರದ್ದು ಮಧ್ಯಮ; ಮತ್ತು ಕಡಲೇಕಾಳು ಗಾತ್ರದ್ದು ಅಧಮ.[೪] ಆದರೆ ಈ ರುದ್ರಾಕ್ಷಗಳು ಉತ್ಪತ್ತಿಭೇದದಿಂದ ಮೂವತ್ತೆಂಟು ಪ್ರಕಾರದವುಗಳಿವೆ ಎಂದು ಶ್ರೀ ಸಿದ್ಧಾಂತ ಶಿಖಾಮಣಿಯು ಹೇಳುತ್ತದೆ. ಅಂತಲೇ ನಿಮ್ನ ಶ್ಲೋಕಗಳಲ್ಲಿ ಈ ರೀತಿ ಉಕ್ತವಾಗಿವೆ-

ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ।
ಅಷ್ಟತ್ರಿಂಶತ್ಪ್ರಭೇದೇನ ಭವಂತ್ಯುತ್ಪತ್ತಿಭೇದತಃ॥
ನೇತ್ರಾತ್ ಸೂರ್ಯಾತ್ಮನಃ ಶಂಭೋಃ ಕಪಿಲಾ ದ್ವಾದಶೋದಿತಾಃ।
ಶ್ವೇತಾಃ ಷೋಡಶ ಸಂಜಾತಾಃ ಸೋಮರೂಪಾದ್ವಿಲೋಚನಾತ್॥
ಕೃಷ್ಣಾ ದಶವಿಧಾ ಜಾತಾ ವಹ್ನಿರೂಪಾದ್ವಿಲೋಚನಾತ್।
ಏವಮುತ್ಪತ್ತಿಭೇದೇನ ರುದ್ರಾಕ್ಷಾ ಬಹುಧಾ ಸ್ಮೃತಾಃ॥[೫]

"ರುದ್ರನ ಕಣ್ಣಿನಿಂದ ಹುಟ್ಟಿದ ಲೋಕವನ್ನು ಪಾವನಗೊಳಿಸುವ ರುದ್ರಾಕ್ಷಗಳು ಉತ್ಪತ್ತಿಭೇದದಿಂದ ಮೂವತ್ತೆಂಟು ಬಗೆಯಾಗಿವೆ. ಶಿವನ ಸೂರ್ಯನೇತ್ರದಿಂದ ಕಪಿಲವರ್ಣ ಅಂದರೆ ಕಂದುಬಣ್ಣದ ಹನ್ನೆರಡು ಬಗೆಯ ರುದ್ರಾಕ್ಷಗಳು ಹುಟ್ಟಿದವು. ಚಂದ್ರನೇತ್ರದಿಂದ ಬಿಳಿಯ ವರ್ಣದ ಹದಿನಾರು ರುದ್ರಾಕ್ಷಗಳು ಹುಟ್ಟಿದವು. ಅಗ್ನಿನೇತ್ರದಿಂದ ಕಪ್ಪುವರ್ಣದ ಹತ್ತು ಬಗೆಯ ರುದ್ರಾಕ್ಷಗಳು ಹುಟ್ಟಿದವು. ಈ ಪ್ರಕಾರ ಉತ್ಪತ್ತಿಯ ವೈವಿಧ್ಯತೆಯಿಂದ ಅನೇಕ ಪ್ರಕಾರದ ರುದ್ರಾಕ್ಷಗಳು ಇವೆ." ಇನ್ನೂ ಸಾಮಾನ್ಯವಾಗಿ ಈ ರುದ್ರಾಕ್ಷಗಳು ಒಂದು ಮುಖದಿಂದ ಹದಿನಾಲ್ಕು ಮುಖಗಳುಳ್ಳವು ಇರುತ್ತವೆ. ಇವುಗಳಲ್ಲಿ ಏಕಮುಖೀ ರುದ್ರಾಕ್ಷ ದುರ್ಲಭವಾಗಿರುತ್ತದೆ. ಆದರ ಹೊರತಾಗಿ ಉಳಿದೆಲ್ಲ ಮುಖಗಳ ರುದ್ರಾಕ್ಷಗಳು ಸಹಸಾ ಪ್ರಾಪ್ತವಾಗುತ್ತವೆ.

ಮುಂದೆ ಚಂದ್ರಜ್ಞಾನಾಗಮವು ಇನ್ನೊಂದು ದೃಷ್ಟಿಯಿಂದ ರುದ್ರಾಕ್ಷಗಳನ್ನು ಉತ್ತಮ ಮತ್ತು ಮಧ್ಯಮವೆಂದು ಪರಿಗಣಿಸುತ್ತದೆ. ತನ್ನಷ್ಟಕ್ಕೆ ತಾನೇ ದಾರ ಪೋಣಿಸಲು ರಂಧ್ರಗಳುಳ್ಳವು ಶ್ರೇಷ್ಠ ರುದ್ರಾಕ್ಷಗಳೆಂದು ತಿಳಿಯಲ್ಪಡುತ್ತವೆ. ಇನ್ನು ಪುರುಷ ಪ್ರಯತ್ನದಿಂದ ಯಾವುದರಲ್ಲಿ ಛಿದ್ರವು ಮಾಡಲ್ಪಡುತ್ತದೆಯೋ ಆ ರುದ್ರಾಕ್ಷವು ಮಧ್ಯಮ ತರಗತಿಯದೆಂದು ಪರಿಗಣಿಸಲ್ಪಡುತ್ತದೆ. ಸಮಾನ ಆಕಾರದ ಸ್ನಿಗ್ಧ (ನುಣುಪಾದ) ಗಟ್ಟಿ ಹಾಗೂ ಗೋಲಾಕಾರದ

---

೪. ಚಂದ್ರಜ್ಞಾನಾಗಮ, ಕ್ರಿ.ಪಾ., ೭.೯-೧೦.

೫. ಸಿದ್ಧಾಂತ ಶಿಖಾಮಣಿ, ೭.೪೯-೫೧ [ಮ.ಸೋ.ಪ್ರ. ೧೯೯೦].

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರುದ್ರಾಕ್ಷ ಕಾಳುಗಳನ್ನು ವಿದ್ವಾಂಸನಾದ ಸಾಧಕನು ರೇಶ್ಮೆ ಧಾರದಲ್ಲಿ ಪೋಣಿಸಿ ಧರಿಸಬೇಕು. ಇನ್ನೂ ಸಾಮಾನ್ಯವಾಗಿ ಸರ್ವರೂ ಸಮಾನರೂಪದಿಂದ ಇಂಥ ಉತ್ತಮ ರುದ್ರಾಕ್ಷಗಳನ್ನು ಧರಿಸಬಹುದಾಗಿದೆ. ಅದೇ ರೀತಿ ವಿಶೇಷವಾಗಿ ಯಾವ ರುದ್ರಾಕ್ಷದ ಮೇಲ್ಮೈ ರೇಖೆಗಳು ಚಿನ್ನ ಪರೀಕ್ಷಿಸುವ ವರೆಗಲ್ಲಿನ ಮೇಲೆ ಮೂಡಿದ ಸುವರ್ಣರೇಖೆಯಂತೆ ತೋರುತ್ತಿರುತ್ತವೆಯೋ ಆ ರುದ್ರಾಕ್ಷಿಯು ಅತ್ಯುತ್ತಮವೆಂದು ಪರಿಗಣಿಸಲ್ಪಡುತ್ತದೆ. ಶ್ರದ್ಧಾವಂತ ಶಿವೋಪಾಸಕರು ಇಂಥ ರುದ್ರಾಕ್ಷಿಯನ್ನೇ ಧರಿಸಬೇಕು.[೬]

ಧರಿಸಲು ಯೋಗ್ಯವಾದ ರುದ್ರಾಕ್ಷಗಳು:

ರುದ್ರಾಕ್ಷಧಾರಣ ಗೈಯ್ಯುವ ಮುಂಚೆ ನಾವು ಉಪಯೋಗಿಸುವ ರುದ್ರಾಕ್ಷಿಯನ್ನು ಚನ್ನಾಗಿ ಪರೀಕ್ಷಿಸಿ ಗ್ರಹಿಸಬೇಕು. ತಾಮ್ರವರ್ಣದ-ಸ್ನಿಗ್ಧ-ಗಟ್ಟಿಯಾದ-ದೊಡ್ಡ ಆಕಾರದ ಕಂಟಕಗಳಿಂದ ಕೂಡಿದ ರುದ್ರಾಕ್ಷಿಗಳು ಧರಿಸಲು ಶುಭಕಾರಿಯಾಗಿರುತ್ತವೆ. ಇನ್ನು ಇದಕ್ಕೆ ವಿಪರೀತವಾಗಿ ಕ್ರಿಮಿಗಳಿಂದ ಕೊರೆಯಲ್ಪಟ್ಟ ಭಿನ್ನ-ಭಿನ್ನವಾದ, ಕಂಟಕರಹಿತವಾಗಿ ಹುಳುಕು ಹುಳುಕಾದ, ವಿಷಮ ಆಕಾರದ, ವಿಕೃತ ಈ ರೀತಿ ಆರು ಪ್ರಕಾರದ ನ್ಯೂನತೆ ಹೊಂದಿರುವ ರುದ್ರಾಕ್ಷಗಳನ್ನು ಅಂಗದ ಮೇಲೆ ಧರಿಸಲು ಉಪಯೋಗಿಸಕೂಡದು.[೭]

ಶಾಸ್ತ್ರೋಕ್ತ ರುದ್ರಾಕ್ಷಧಾರಣವಿಧಿಃ-ಸ್ಥಾನ ಮತ್ತು ಸಂಖ್ಯೆ:

ಚಂದ್ರಜ್ಞಾನಾಗಮದ ಪ್ರಕಾರ ರುದ್ರಾಕ್ಷ ಧಾರಣದ ಸ್ಥಾನ ಮತ್ತು ಸಂಖ್ಯೆ ಹೀಗಿವೆ: ಶಿಖೆಯಲ್ಲಿ ಒಂದು, ಶಿರದಲ್ಲಿ ಮೂವತ್ತು, ಕಂಠದಲ್ಲಿ ಮೂವತ್ತೆರಡು, ಬಾಹುಗಳಲ್ಲಿ ಹದಿನಾರು-ಹದಿನಾರು, ಮಣಿ-ಬಂಧಗಳಲ್ಲಿ ಹನ್ನೆರಡು-ಹನ್ನೆರಡು, ಹೆಗಲಮೇಲೆ ಐದುನೂರು, ಜಪಯಜ್ಞದಲ್ಲಿ ಜಪಕ್ಕೆ ಒಂದು ನೂರಾಎಂಟು, ಕಂಠದಲ್ಲಿ ಇಳಿಬಿಡಲು ಎರಡು, ಮೂರು, ಐದು, ಏಳು ಅಥವಾ ಹತ್ತು ಸರಗಳು, ಕಿರೀಟ, ಕೈಕಡಗ (ಕಂಕಣ) ಕರ್ಣಹಾರ, ಕರ್ಣಕುಂಡಲ, ಬಾಜೂಬಂಧ (ವಂಕಿ) ಹಾಗೂ ಕುಕ್ಷಿಬಂಧ (ಕಟಿಬಂಧ) ಮುಂತಾದ ಆಭರಣಗಳ ರೂಪದಲ್ಲಿ ಹೀಗೆ ಜಾಗ್ರತ್ ಸುಪ್ತ ಅವಸ್ಥೆಗಳಲ್ಲಿ ಸದಾಕಾಲ ರುದ್ರಾಕ್ಷಗಳನ್ನು ಧರಿಸಿಕೊಂಡಿರಬಹುದು. ಈ ರೀತಿಯಾಗಿ ತನ್ನ ಶರೀರದ ಮೇಲೆ ಕನಿಷ್ಠ ಮೂರುನೂರು ರುದ್ರಾಕ್ಷ ಧಾರಣ ಮಾಡುವವನು ಅಧಮಕೋಟಿಯವನು, ಐದು ನೂರು ಧಾರಣ ಮಾಡುವವನು ಮಧ್ಯಮನು ಹಾಗೂ ಒಂದು ಸಾವಿರ ರುದ್ರಾಕ್ಷ ಧಾರಣ ಮಾಡುವವನು ಉತ್ತಮ ಕೋಟಿಯ ಸಾಧಕ ಭಕ್ತನೆಂದು ಪರಿಗಣಿಸಲ್ಪಡುತ್ತಾನೆ.[೮] ಮಕುಟಾಗಮ ಮತ್ತು ಕಾರಣಾಗಮಗಳಲ್ಲಿಯೂ ಇದೇ ವಿಚಾರ ಬಂದಿದೆ.[೯]

---

೬. ಚಂದ್ರಜ್ಞಾನಾಗಮದಲ್ಲಿ, ಕ್ರಿ.ಪಾ., ೭.೧೫-೧೭.

೭. ಅದೇ, ೭.೧೪.

೮. ಅದೇ, ೭.೧೮-೨೨.

೯. ಹೋಲಿಸಿರಿ: ಮಕುಟಾಗಮ, ಕ್ರಿ.ಪಾ., ೨.೧೭-೧೯ ಮತ್ತು ಕಾರಣಾಗಮ, ಕ್ರಿ.ಪಾ., ೩.೫೦-೫೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿನ ಈ ವಿಚಾರದ ತಾತ್ಪರ್ಯವನ್ನು ಗ್ರಹಿಸಿದರೆ, ಮೇಲೆ ಹೇಳಿದ ಆಗಮಗಳ ಸಾರವೇ ಅಲ್ಲಿರುವುದು ಗೋಚರಿಸುತ್ತದೆ: ವೀರಶೈವನಾದವನು ತನ್ನ ಇಷ್ಟಲಿಂಗ ಪೂಜಾಕಾಲಕ್ಕೆ ಶಿಖೆಯ ಸ್ಥಾನದಲ್ಲಿ ಏಕಮುಖದ ರುದ್ರಾಕ್ಷವನ್ನು, ಶಿರದಲ್ಲಿ ಎರಡು ಮುಖ, ಮೂರು ಮುಖ ಹಾಗೂ ಹನ್ನೆರಡು ಮುಖದ ಒಂದೊಂದು ಹೀಗೆ ಮೂರು ರುದ್ರಾಕ್ಷಗಳನ್ನು, ಇನ್ನು ತಲೆಯ ಸುತ್ತಲೂ ಹನ್ನೊಂದು ಮುಖಗಳ ಮೂವತ್ತಾರು ರುದ್ರಾಕ್ಷಗಳು, ಎರಡೂ ಕಿವಿಗಳಲ್ಲಿ ಐದು ಮುಖ, ಏಳು ಮುಖ ಹಾಗೂ ಹತ್ತು ಮುಖದ ತಲಾ ಎರಡೆರಡು ಈ ರೀತಿ ಆರಾರು ರುದ್ರಾಕ್ಷಗಳನ್ನು, ಕಂಠದಲ್ಲಿ ಆರು ಮುಖಗಳ ಹದಿನಾರು ಮತ್ತು ಎಂಟು ಮುಖದ ಹದಿಮೂರು ಈ ಪ್ರಕಾರ ಮೂವತ್ತೆರಡು ರುದ್ರಾಕ್ಷಗಳನ್ನು, ವಕ್ಷಸ್ಥಲದಲ್ಲಿ ನಾಲ್ಕು ಮುಖಗಳ ಐವತ್ತು ರುದ್ರಾಕ್ಷಗಳನ್ನು; ಎರಡೂ ತೋಳುಗಳಲ್ಲಿ ಹದಿಮೂರು ಮುಖದ ಹದಿನಾರು-ಹದಿನಾರು ರುದ್ರಾಕ್ಷಗಳನ್ನು, ಎರಡೂ ಮಣಿಕಟ್ಟು ಅರ್ಥಾತ್ ಮುಂಗೈಗಳಲ್ಲಿ ಒಂಭತ್ತು ಮುಖದ ಹನ್ನೆರಡು-ಹನ್ನೆರಡು ರುದ್ರಾಕ್ಷಗಳನ್ನೂ ಮತ್ತು ಹದಿನಾಲ್ಕು ಮುಖದ ಒಂದುನೂರಾ ಎಂಟು ರುದ್ರಾಕ್ಷಗಳನ್ನು ಯಜ್ಞೋಪವೀತದಂತೆ ಧಾರಣ ಮಾಡಬೇಕೆಂಬ ವಿಧಾನವು ಹೇಳಲ್ಪಟ್ಟಿರುತ್ತದೆ.[೧೦]

ಮುಖಭೇದದಿಂದ ರುದ್ರಾಕ್ಷದ ಮಹಿಮೆ:

ಈ ಎಲ್ಲಾ ಪ್ರಕಾರದ ರುದ್ರಾಕ್ಷಗಳಲ್ಲಿ ಮುಖಭೇದವನ್ನು ಪರಿಗಣಿಸಿ ಧರಿಸುವುದರಿಂದ ಉಂಟಾಗುವ ಧಾರ್ಮಿಕ, ಆಧ್ಯಾತ್ಮಿಕ ಪ್ರಯೋಜನ ಕುರಿತು ಚಂದ್ರಜ್ಞಾನಾಗಮದಲ್ಲಿ ಹೀಗೆ ವಿವರಿಸಲಾಗಿದೆ: ಒಂದು ಮುಖದ ರುದ್ರಾಕ್ಷವು ಪರತತ್ತ್ವದ ಸ್ವರೂಪವಾಗಿರುತ್ತದೆ. ಅದನ್ನು ಧರಿಸುವುದರಿಂದ ಸಾಧಕನು ಜಿತೇಂದ್ರಿಯನಾಗಿ ಕೊನೆಯಲ್ಲಿ ಆ ಪರತತ್ತ್ವದಲ್ಲಿ ವಿಲೀನನಾಗುತ್ತಾನೆ. ಎರಡು ಮುಖದ ರುದ್ರಾಕ್ಷಿಯು ಅರ್ಧನಾರೀಶ್ವರನ ಸ್ವರೂಪವಾಗಿರುತ್ತದೆ. ಅದರ ಧಾರಣದಿಂದ ಅರ್ಧನಾರೀಶ್ವರ ಶಿವನ ಕೃಪೆಯು ಪ್ರಾಪ್ತವಾಗುತ್ತದೆ. ಮೂರು ಮುಖದ ರುದ್ರಾಕ್ಷಿಯು ಗಾರ್ಹಪತ್ಯ, ದಕ್ಷಿಣ ಮತ್ತು ಆಹವನೀಯ ಎಂಬ ಮೂರು ಪ್ರಕಾರದ ಅಗ್ನಿಯ ಸ್ವರೂಪವಾಗಿರುತ್ತದೆ. ಅದನ್ನು ಧರಿಸುವುದರಿಂದ ಅಗ್ನಿದೇವನ ಕೃಪೆಯುಂಟಾಗುವುದಲ್ಲದೆ ಸ್ತ್ರೀ ಹತ್ಯೆಯ ಪಾಪವು ಸುಟ್ಟು ಭಸ್ಮವಾಗುತ್ತದೆ. ನಾಲ್ಕು ಮುಖದ ರುದ್ರಾಕ್ಷಿಯು ಚತುರ್ಮುಖ ಬ್ರಹ್ಮನ ಸ್ವರೂಪವೇ ಆಗಿರುತ್ತದೆ. ಅದರ ಧಾರಣೆಯಿಂದ ಆತನ ಕೃಪೆಯು ದೊರೆಯುವುದು. ಐದು ಮುಖದ ರುದ್ರಾಕ್ಷಿಯು ಪಂಚಬ್ರಹ್ಮ ಸದಾಶಿವನ ಸ್ವರೂಪವಾಗಿರುತ್ತದೆ. ಅದರ ಧಾರಣೆಯಿಂದ ಸದಾಶಿವ ಸಂತುಷ್ಟನಾಗುತ್ತಾನೆ. ಆರು ಮುಖದ ರುದ್ರಾಕ್ಷಿಗೆ ಕಾರ್ತಿಕೇಯ ಮತ್ತು ವಿನಾಯಕರು ಅಧಿದೇವತೆಗಳಾಗಿರುತ್ತಾರೆ. ಅದರ ಧಾರಣೆಯಿಂದ ಎಲ್ಲ ವಿಘ್ನಗಳು ದೂರವಾಗುವುದಲ್ಲದೆ ಪರಮೈಶ್ವರ್ಯ ಪ್ರಾಪ್ತಿಯಾಗುತ್ತದೆ. ಏಳುಮುಖದ ರುದ್ರಾಕ್ಷಿಯ ಅಧಿದೇವತೆಗಳೆಂದರೆ ಸಪ್ತಮಾತೃಕೆಯರು. ಅದರ ಧಾರಣೆಯಿಂದ ಅವರು ಸಂತುಷ್ಟರಾಗಿ ಪ್ರತಿಯೊಂದು ಕಾರ್ಯದಲ್ಲಿ ವಿಜಯಪ್ರದಾನ ಮಾಡುತ್ತಾರೆ.

---

೧೦. ಶ್ರೀ ಸಿದ್ಧಾಂತ ಶಿಖಾಮಣಿ, ೭.೫೪-೫೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಟು ಮುಖದ ರುದ್ರಾಕ್ಷಿಗೆ ಅಷ್ಟದಿಕ್ಪಾಲಕರು ಅಧಿದೇವತೆಗಳಾಗಿರುತ್ತಾರೆ. ಧರಿಸಿದರೆ ಎಂಟು ವಸುಗಳು ಮತ್ತು ಗಂಗೆ ಪ್ರೀತರಾಗುತ್ತಾರೆ. ಅಂಥ ರುದ್ರಾಕ್ಷಿಯ ಧಾರಣೆಯಿಂದ ಇಷ್ಟ ಫಲ ಪ್ರಾಪ್ತವಾಗುತ್ತದೆ. ಒಂಭತ್ತು ಮುಖದ ರುದ್ರಾಕ್ಷಿಗೆ ದುರ್ಗೆ ಮೊದಲಾದ ನವಶಕ್ತಿಯರು ಅಧಿದೇವತೆಗಳಾಗಿದ್ದಾರೆ. ಅದರ ಧಾರಣೆಯಿಂದ ಶಕ್ತಿಯರೆಲ್ಲರು ಸಂತುಷ್ಟರಾಗುತ್ತಾರೆ. ಹತ್ತು ಮುಖದ ರುದ್ರಾಕ್ಷಿಯ ದೇವತೆಯೆಂದರೆ ಯಮರಾಜನಿರುತ್ತಾನೆ. ಅದನ್ನು ಧರಿಸುವುದರಿಂದ ಯಮನ ಅಂತಃಕರುಣೆ ದೊರೆಯುತ್ತದೆ ಅರ್ಥಾತ್ ಅಪಮೃತ್ಯುವಾಗುವುದಿಲ್ಲ. ಹನ್ನೊಂದು ಮುಖದ ರುದ್ರಾಕ್ಷಿಗೆ ಏಕಾದಶರುದ್ರ ಹಾಗೂ ಇಂದ್ರರು ಅಧಿದೇವತೆಗಳಾಗಿದ್ದಾರೆ. ಅದರ ಧಾರಣೆಯಿಂದ ಸಂಪತ್ತಿನ ಅಭಿವೃದ್ಧಿಯಾಗುತ್ತದೆ. ಹನ್ನೆರಡು ಮುಖಗಳ ರುದ್ರಾಕ್ಷಿಯು ಮಹಾವಿಷ್ಣುವಿನ ಸ್ವರೂಪವೆಂದು ಭಾವಿಸಲ್ಪಡುತ್ತದೆ. ದ್ವಾದಶಸೂರ್ಯರು ಅಂಥ ರುದ್ರಾಕ್ಷಿಯ ಅಧಿದೇವತೆಗಳಾಗಿದ್ದಾರೆ. ಅದರ ಧಾರಣೆಯಿಂದ ಅವರೆಲ್ಲ ಸಂತುಷ್ಟರಾಗುತ್ತಾರೆ. ಹದಿಮೂರು ಮುಖಗಳ ರುದ್ರಾಕ್ಷಿಯು ಕಾಮದೇವನ ಸ್ವರೂಪವಾಗಿರುತ್ತದೆ. ಅದರ ಧಾರಣೆಯಿಂದ ಕಾಮದೇವ ಸಂತುಷ್ಟನಾಗುತ್ತಾನೆ.

ಹದಿನಾಲ್ಕು ಮುಖದ ರುದ್ರಾಕ್ಷಿಯು ರುದ್ರನೇತ್ರದಿಂದ ಉತ್ಪನ್ನವಾಗಿರುತ್ತದೆ. ಅದರ ಧಾರಣೆಯಿಂದ ಎಲ್ಲ ಪ್ರಕಾರದ ರೋಗರುಜಿನಗಳಿಂದ ಮುಕ್ತರಾಗಿ ಅಖಂಡ ಆರೋಗ್ಯ ಪ್ರಾಪ್ತಿಯಾಗುತ್ತದೆ.[೧೧]

ಆಧುನಿಕ ಯುಗದಲ್ಲಿ ರುದ್ರಾಕ್ಷಿಯ ಅವಶ್ಯಕತೆ-ಆಕರ್ಷಣೆ:

ಮೇಲೆ ಹೇಳಿದ ವಿಚಾರಕ್ಕೆ ಪೋಷಕವಾಗಿ ಇಪ್ಪತ್ತೊಂದನೇ ಶತಮಾನದಲ್ಲಿ ಕಾಲಿರಿಸುತ್ತಿರುವ ಇಂದಿನ ವೈಜ್ಞಾನಿಕ ಯುಗದಲ್ಲಿ ಕೆಲವು ವೈಜ್ಞಾನಿಕ ಪ್ರಯೋಗ ಪರೀಕ್ಷಣೆಗಳಿಂದಲೂ ಸಿದ್ಧವಾಗಿರುವುದೇನೆಂದರೆ ಶಾಸ್ತ್ರೀಯ ಪದ್ಧತಿಯಿಂದ ರುದ್ರಾಕ್ಷಧಾರಣೆಗೈದರೆ ರಕ್ತದ ಒತ್ತಡ, ಹೃದಯ ವಿಕಾರ, ಅಸ್ಥಮಾ, ವಾಯುವಿಕಾರ-ಗಳಂಥ ಭಯಾನಕ ರೋಗಗಳುಂಟಾಗುವುದಿಲ್ಲವಂತೆ. ಈ ರೀತಿ ಇಂಥ ರುದ್ರಾಕ್ಷಿಯ ಗುಣಧರ್ಮಗಳನ್ನು ಅರಿತು ಪ್ರಭಾವಿತರಾಗಿ ಅಧಿಕಾಧಿಕ ಜನರು ರುದ್ರಾಕ್ಷಿಗಳನ್ನು ಖರೀದಿಸಿ ಒಳ್ಳೆ ಶ್ರದ್ಧೆಯಿಂದ ಧರಿಸುತ್ತಿದ್ದಾರೆ. ಆದ್ದರಿಂದ ಇತ್ತಿತ್ತಲಾಗಿ ರುದ್ರಾಕ್ಷಿಯ ಬೆಲೆ ಹೆಚ್ಚುತ್ತಿದೆ. ಬಹಳ ಹಣ ಖರ್ಚು ಮಾಡಿ ಹೆಚ್ಚು ರುದ್ರಾಕ್ಷಿಗಳನ್ನು ಖರೀದಿಸಲು ಅಸಮರ್ಥನಾದ ವ್ಯಕ್ತಿಯೂ ಕೂಡ ಕನಿಷ್ಠಪಕ್ಷ ಒಂದು ರುದ್ರಾಕ್ಷಿಯನ್ನಾದರೂ ಅವಶ್ಯವಾಗಿ ಧರಿಸಲೇಬೇಕು. ಅಂತಲೇ ಚಂದ್ರಜ್ಞಾನಾಗಮದಲ್ಲಿ ಹೇಳಿದ್ದೇನೆಂದರೆ,

ಯಸ್ಯಾಂಗೇ ನಾಸ್ತಿ ರುದ್ರಾಕ್ಷ ಏಕೋಽಪಿ ಬಹುಪುಣ್ಯದಃ।
ತಸ್ಯ ಜನ್ಮ ನಿರರ್ಥಂ ಸ್ಯಾತ್ ತ್ರಿಪುಂಡ್ರರಹಿತಂ ಯಥಾ॥[೧೨]

———

೧೧. ಚಂದ್ರಜ್ಞಾನಾಗಮ, ಕ್ರಿಯಾಪಾದ, ೭.೨೫-೩೮.

೧೨. ಅದೇ, ೭.೪೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾತ್ಪರ್ಯವೇನೆಂದರೆ - ಯಾವ ಪ್ರಕಾರ ತ್ರಿಪುಂಡ್ರರಹಿತ ಶರೀರವು ನಿರರ್ಥಕವೆಂದು ಸಾರಲ್ಪಟ್ಟಿದೆಯೋ ಅದೇ ಪ್ರಕಾರ ರುದ್ರಾಕ್ಷರಹಿತ ಶರೀರವುಳ್ಳ ಮನುಷ್ಯನ ಜನ್ಮವು ನಿರರ್ಥಕವಾಗಿರುತ್ತದೆ. ಇನ್ನು ಮುಂದುವರೆದು ರುದ್ರಾಕ್ಷಧಾರಣೆಯ ಮಹತಿಯನ್ನು ಹೀಗೆ ವರ್ಣಿಸಿದ್ದಾರೆ.

ಮೂರ್ಧ್ನಿ ವಿನ್ಯಸ್ಯ ರುದ್ರಾಕ್ಷಂ ಯಃ ಸ್ನಾತಿ ಮತಿಮಾನ್ನರಃ।
ಗಂಗಾಸ್ನಾನಫಲಂ ತಸ್ಯ ಜಾಯತೇ ನಾತ್ರ ಸಂಶಯಃ॥[೧೩]

ಅರ್ಥಾತ್ ಯಾವ ಮನುಷ್ಯನು ರುದ್ರಾಕ್ಷವನ್ನು ತನ್ನ ಶಿರಸ್ಸಿನ ಮೇಲೆ ಇಟ್ಟುಕೊಂಡು ಸ್ನಾನ ಮಾಡುತ್ತಾನೆಯೋ ಆತನಿಗೆ ಸಾಕ್ಷಾತ್ ಗಂಗಾನದಿಯಲ್ಲಿ ಸ್ನಾನ ಮಾಡಿದ ಫಲವು ದೊರೆಯುತ್ತದೆ.

ರುದ್ರಾಕ್ಷಧಾರಣೆ ಮಾಡುವವರ ಹಿರಿಮೆ ಹಾಗೂ ಧಾರಣೆ ಮಾಡದವರ ಕಿರಿಮೆ ಕುರಿತು ಮಹಾನುಭಾವಿ ಬಸವಣ್ಣನವರ ಒಂದು ವಚನ ಹೀಗಿದೆ.

ಶ್ರೀರುದ್ರಾಕ್ಷಿಯ ಧರಿಸಿದಾತನೆ ಲಿಂಗವೆಂಬೆ
ಶ್ರೀರುದ್ರಾಕ್ಷಿಯ ಧರಿಸಿದ ಅಧಮರನೆಭವಿಯೆಂಬೆ
ಕೂಡಲಸಂಗಮದೇವಯ್ಯಾ ಶ್ರೀರುದ್ರಾಕ್ಷಿಯ ಧರಿಸುವ ಭಕ್ತನೀನೆಂಬೆ

ಅರ್ಥಾತ್ ಶ್ರೀರುದ್ರಾಕ್ಷಿಯನ್ನು ಧರಿಸಿದ ಭಕ್ತರು ಲಿಂಗರೂಪಿಗಳು. ಅದನ್ನು ಧರಿಸದವರು ಅಧಮರು ಎಂಬುದಾಗಿ ಮಹಾತ್ಮಾ ಬಸವಣ್ಣನವರು ಈ ವಚನದ ಮೂಲಕ ಸಾರಿದ್ದಾರೆ. ಇಷ್ಟೇ ಅಲ್ಲ ಇವರ ಸಮಕಾಲೀನನಾದ ಮಹಾಶಿವಶರಣ ಆದಯ್ಯನೂ ಸಹ-

ಮುಖದಲ್ಲಿ ರುದ್ರನಿಪ್ಪನಯ್ಯಾ ನಾಭಿಯಲ್ಲಿ ವಿಷ್ಣುವಿಪ್ಪನಯ್ಯಾ
ಮೂಲದಲ್ಲಿ ಬ್ರಹ್ಮನಿಪ್ಪನಯ್ಯಾ ಕೇಶದಲ್ಲಿ ದೇವರ್ಕಳೆಲ್ಲ ಇಪ್ಪರಯ್ಯಾ
ಇಂತು ಪುಣ್ಯವೇ ಪುಂಜವಾಗಿ ಸೌರಾಷ್ಟ್ರ ಸೋಮೇಶ್ವರನ ಬರಿಸುವ
ರುದ್ರಾಕ್ಷಿಯ ಧರಿಸಿರಯ್ಯಾ ಭಕ್ತರಪ್ಪವರು.[೧೪]

ಈ ರೀತಿಯಾಗಿ ಶಿವಭಕ್ತರಾದವರಿಗೆ ತಪ್ಪದೇ ರುದ್ರಾಕ್ಷಧಾರಣ ಮಾಡಲು ಆಹ್ವಾನವಿತ್ತಿದ್ದಾನೆ.

ಚಂದ್ರಜ್ಞಾನಾಗಮದಲ್ಲಿ ಬರುವ ವಿಚಾರವನ್ನೇ ಶ್ರೀ ಸಿದ್ಧಾಂತ ಶಿಖಾಮಣಿಯು ನಿರೂಪಿಸಿ ಅದಕ್ಕೆ ವಿಸ್ತೃತರೂಪವನ್ನು ನೀಡುತ್ತದೆ:

ಭಸ್ಮೋದ್ಧೂಲಿತಸರ್ವಾಂಗಾ ಧೃತರುದ್ರಾಕ್ಷಮಾಲಿಕಾಃ।
ಯೇ ಭವಂತಿ ಮಹಾತ್ಮನಸ್ತೇ ರುದ್ರಾ ನಾತ್ರ ಸಂಶಯಃ॥[೧೫]

---

೧೩. ಅದೇ, ೭.೪೭.

೧೪. ವಚನ ಸಾಹಿತ್ಯ ಸಂಗ್ರಹ, ೬.೯೧.

೧೫. ಸಿದ್ಧಾಂತ ಶಿಖಾಮಣಿ, ೭.೬೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಾತ್ ಯಾವ ಭಕ್ತರು ಅಥವಾ ಜಂಗಮಪುಂಗವರು ತಮ್ಮ ಸರ್ವಾಂಗಗಳಲ್ಲಿ ಭಸ್ಮಲೇಪನ ಮಾಡಿಕೊಂಡು ಯಥಾಸ್ಥಾನ ರುದ್ರಾಕ್ಷ ಮಾಲೆಗಳನ್ನು ಧರಿಸಿಕೊಂಡಿರುತ್ತಾರೋ ಅವರು ಸಾಕ್ಷಾತ್ ರುದ್ರರೇ ಆಗುತ್ತಾರೆ. ಹಾಗೇ ಮುಂದುವರೆಯುತ್ತ ಶ್ರೀ ರೇಣುಕ ಭಗವತ್ಪಾದರು ಹೀಗೆ ಆದೇಶಿಸಿದ್ದಾರೆ-

ಗವಾಂ ಕೋಟಿಪ್ರದಾನಸ್ಯ ಯತ್ಫಲಂ ಭುವಿ ಲಭ್ಯತೇ।
ತತ್ಫಲಂ ಲಭತೇ ಮರ್ತ್ಯೋ ನಿತ್ಯಂ ರುದ್ರಾಕ್ಷಧಾರಣಾತ್॥
ಮೃತ್ಯುಕಾಲೇ ಚ ರುದ್ರಾಕ್ಷಂ ನಿಷ್ಪೀಡ್ಯ ಸಹ ವಾರಿಣಾ।
ಯಃ ಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ॥[೧೬]

ತಾತ್ಪರ್ಯವೇನೆಂದರೆ ಒಂದು ಕೋಟಿ ಗೋದಾನ ಮಾಡುವುದರಿಂದ ಯಾವ ಪುಣ್ಯಫಲವು ದೊರೆಯುತ್ತದೆಯೋ ಆ ಫಲವು ನಿತ್ಯ ರುದ್ರಾಕ್ಷ ಧಾರಣದಿಂದ ಪ್ರಾಪ್ತವಾಗುತ್ತದೆ. ಇಷ್ಟೇ ಅಲ್ಲ ಅಂತ್ಯಕಾಲದಲ್ಲಿ ಯಾವ ಮರಣೋನ್ಮುಖ ವ್ಯಕ್ತಿಯು ರುದ್ರಾಕ್ಷವನ್ನು ನೀರಿನೊಂದಿಗೆ ತೇಯ್ದು ರುದ್ರನನ್ನು ನೆನೆಯುತ್ತ ಕುಡಿಯುವನೋ ಅವನು ರುದ್ರ ಲೋಕಕ್ಕೆ ಹೋಗುತ್ತಾನೆ.

ದರ್ಶನಾತ್ ಸ್ಪರ್ಶನಾಚ್ಚೈವ ಸ್ಮರಣಾದಪಿ ಪೂಜನಾತ್।
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೇ ಪಾತಕೈರ್ಜನಾಃ॥
ಬ್ರಾಹ್ಮಣಾ ವಾಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ॥[೧೭]

ಉಪರ್ಯುಕ್ತ ಆಚಾರ್ಯೋಕ್ತಿಯ ಪ್ರಕಾರ ಈ ಲೋಕದಲ್ಲಿ ಅದೆಂಥ ಪಾತಕಿಗಳಾಗಿದ್ದರೂ ರುದ್ರಾಕ್ಷದ ದರ್ಶನ, ಸ್ಪರ್ಶನ, ಇಷ್ಟೇ ಅಲ್ಲ ಅದರ ಸ್ಮರಣ ಮಾತ್ರದಿಂದಲೇ ಅವರು ಪಾತಕಗಳಿಂದ ಮುಕ್ತರಾಗುತ್ತಾರೆ. ಇದೇ ರೀತಿ ಬ್ರಾಹ್ಮಣನಾಗಲೀ, ಅಸ್ಪೃಶ್ಯನಾಗಲೀ, ಮೂರ್ಖನಾಗಲಿ, ಪಂಡಿತನಾಗಲಿ ರುದ್ರಾಕ್ಷಧಾರಣ ಮಾತ್ರದಿಂದ ಸರ್ವ ಪಾಪರಹಿತನಾಗುತ್ತಾನೆ. ಆದ್ದರಿಂದ ಕೇವಲ ವೀರಶೈವರಷ್ಟೇ ಅಲ್ಲ ಯಾವುದೇ ಮತ, ಪಂಥ, ಜನಾಂಗದ ಜನರೆಲ್ಲ ಮಾನವ ಮಾತ್ರರೆನಿಸಿಕೊಂಡವರೆಲ್ಲ ಯಾವ ಭೇದವಿಲ್ಲದೇ ರುದ್ರಾಕ್ಷ ಧರಿಸಿ ಪಾವನರಾಗಿರೆಂಬ ಭಗವತ್ಪಾದಾಚಾರ್ಯರ ಮನೋಭಿಲಾಷೆಗೆ ಮಾರುಹೋದ ಈರ್ವರು ಮಹಾನುಭಾವೀ ಶರಣಶ್ರೇಷ್ಠರು ತಮ್ಮ ವಚನಗಳಲ್ಲಿ ಈ ರೀತಿ ಭಾವಪೂರ್ಣವಾಗಿ ಸ್ಪಂದಿಸಿದ್ದಾರೆ.

ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಪಾವನ;
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ;

---

೧೬. ಅದೇ, ೭.೬೩-೬೪.
೧೭. ಅದೇ, ೭.೬೧-೬೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಯ್ಯಾ ನಿಮ್ಮ ಪಂಚ ವಕ್ತ್ರಗಳೇ ಪಂಚಮುಖದ ರುದ್ರಾಕ್ಷಿಗಳಾದುವಾಗಿ,
ಅಯ್ಯಾ ಕೂಡಲಸಂಗಮದೇವಾ
ಎನ್ನ ಮುಕ್ತಿ ಪಥಕ್ಕೆ ಶ್ರೀ ರುದ್ರಾಕ್ಷಿಯೇ ಸಾಧನವಯ್ಯಾ।।[೧೮]

ಈ ರೀತಿಯಾಗಿ ಮೊದಲಿಗೆ ಭಕ್ತಿಭಂಡಾರಿ ಬಸವಣ್ಣನವರು ಉದ್ಗರಿಸಿದರೆ ಅದಕ್ಕೂ ಮುಂದುವರೆದು ಶ್ರೀ ಷಣ್ಮುಖ ಶಿವಯೋಗಿಗಳು

ಅಯ್ಯಾ ಎನಗೆ ರುದ್ರಾಕ್ಷಿಯೇ ಪುಣ್ಯದ ಪುಂಜ ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ಭಾಗ್ಯದ ನಿಧಿಯು ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ಸತ್ಯದ ಸದನ ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ನಿತ್ಯದ ನಿಲವು ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ಭಕ್ತಿಯ ಬೆಳಗು ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ಶಕ್ತಿಯ ಬಲವು ನೋಡಾ।
ಅಯ್ಯಾ ಎನಗೆ ರುದ್ರಾಕ್ಷಿಯೇ ಮುಕ್ತಿಯ ಸೋಪಾನ ನೋಡಾ।
ಇಂತಪ್ಪ ರುದ್ರಾಕ್ಷಿಯ ಎನ್ನಂತರಂಗ ಶುದ್ಧವಾಗಿ
ಅವಿರಳ ಭಕ್ತಿಯಿಂದ ಧರಿಸಿ ನಿಶ್ಚಿಂತ ಸಭ್ರಾಂತನಾಗಿರ್ದೆ-
ನಯ್ಯ ಅಖಂಡೇಶ್ವರಾ।।[೧೯]

ಹೀಗೆ ಒಂದೇ ವಚನದಲ್ಲಿ ರುದ್ರಾಕ್ಷದ ಸಾರ ಸರ್ವಸ್ವವನ್ನು ಜಗಕೆ ಸಾರಿದ್ದಾರೆ.

ಈ ಬಗೆಯಾಗಿ ಚಂದ್ರಜ್ಞಾನಾಗಮದ ಕ್ರಿಯಾಪಾದ ಸಪ್ತಮ ಪಟಲದ ಕೊನೆಯಲ್ಲಿ ಅನಂತರುದ್ರನು ಬೃಹಸ್ಪತಿಯನ್ನು ಉದ್ದೇಶಿಸಿ 'ಎಲೈ ನಿಷ್ಪಾಪಿಯೇ, ರುದ್ರಾಕ್ಷಿಯ ಮಹಿಮೆಯೇನೋ ಅಪಾರವಾಗಿದೆ. ಅದರಲ್ಲಿ ಅಲ್ಪಾಂಶವನ್ನು ನಿನಗೆ ಈವರೆಗೆ ವಿವರಿಸಿದ್ದೇನೆ' ಎಂದು ಹೇಳಿದ್ದಾನೆ.

ಈ ರೀತಿ ಚಂದ್ರಜ್ಞಾನಾಗಮದಲ್ಲಿ ಕ್ರಿಯಾಪಾದದ ಸಪ್ತಮಪಟಲದ ಈ ಕೊನೆಯ ಉಕ್ತಿಯೊಂದಿಗೆ ರುದ್ರಾಕ್ಷ ಉತ್ಪತ್ತಿ ಮಹಿಮೆಯ ಅಧ್ಯಾಯ ಸಮಾಪ್ತವಾಗುತ್ತದೆ.

○

---

೧೮. ವಚನ ಸಾಹಿತ್ಯ ಸಂಗ್ರಹ, ಪು.೮೯.

೧೯. ವಚನ ಸಾಹಿತ್ಯ ಸಂಗ್ರಹ, ಪು.೯೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ಮಂತ್ರರಾಜ ಪಂಚಾಕ್ಷರೀ

-ಶ್ರೀ ಶಂಭುಲಿಂಗ

ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್।
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಃಸ್ಸದಾ॥

ವೇದ (ನಿಗಮ) ಹಾಗೂ ವೇದ ಸಮ್ಮತವಾದ ಆಗಮ (ಸಿದ್ಧಾಂತ) ಇವು ಒಂದೇ ವಿಷಯ ಪ್ರತಿಪಾದಕಗಳಾಗಿರುವುದರಿಂದ ಪಂಡಿತರು ಇವೆರಡರ ಪ್ರಾಮಾಣ್ಯವನ್ನು ಸಮಾನವಾಗಿಯೇ ಗ್ರಹಿಸಬೇಕು. "ಸರ್ವವೇದೇಷು ಯದ್ದೃಷ್ಟಂ ತತ್ಸರ್ವಂತು ಶಿವಾಗಮೇ" -ವೇದಗಳಲ್ಲಿರುವುದೆಲ್ಲವೂ ಶಿವಾಗಮಗಳಲ್ಲಿ ಕಂಡುಬರುವುದರಿಂದ ವೇದಶಾಸ್ತ್ರ ಮತ್ತು ಸಿದ್ಧಾಂತ ಶೈವಶಾಸ್ತ್ರಗಳ ಪ್ರತಿಪಾದನೆಯಲ್ಲಿ ಅರ್ಥದ ವ್ಯತ್ಯಾಸವಿಲ್ಲ. ಅಜ್ಞಾತವಾದ ಅಥವಾ ಯಥಾರ್ಥವಾದ ಅರ್ಥವನ್ನು ತಿಳಿಸಿಕೊಡುವ ಸಾಧನಗಳೇ ಪ್ರಮಾಣಗಳು. ನಿಗಮಾಗಮಗಳು ವೀರಶೈವದ ಎರಡು ಕಣ್ಣುಗಳು. ತಾತ್ವಿಕ ವಿಚಾರಗಳನ್ನು ಆ ಎರಡೂ ಪ್ರಮಾಣಗಳಿಂದ ವಿಮರ್ಶಿಸಿ ನೋಡುವುದು ವೀರಶೈವದ ಹೆಗ್ಗುರುತುಗಳಲ್ಲಿ ಒಂದು.

ಗುರುಸ್ತವಮತಃ ಕೋ ವಾ ಗಲೇ ಯೇನಾವಬದ್ಧತೇ।
ಲಿಂಗಂ ಪಂಚಾಕ್ಷರೀ ಮಂತ್ರೋ ಯಸ್ಯೇಷ್ಟ ಉಪದಿಶ್ಯತೇ॥
ಸ ಗುರುಸ್ತತ್ರ ನಿರ್ಣೀತಸ್ಯ ಶಿಷ್ಯಸ್ಯ ವೈ ಸ ಚ॥[೧]

ಗುರು ಎಂದರೆ ಯಾರು? ಯಾರು ದೀಕ್ಷೆಯ ಮೂಲಕ ಶಿಷ್ಯನಿಗೆ ಇಷ್ಟಲಿಂಗವನ್ನು ದಯಪಾಲಿಸಿ ಮಂತ್ರದ ಉಪದೇಶ ಮಾಡುತ್ತಾನೆಯೋ ಅವನೇ ಗುರು ಎನಿಸುತ್ತಾನೆ. ಕೊಡಲ್ಪಟ್ಟ ಇಷ್ಟಲಿಂಗ ಮತ್ತು ಪಂಚಾಕ್ಷರಿ ಮಂತ್ರವನ್ನು ಗುರುವಿನಿಂದ ಪಡೆದುಕೊಳ್ಳುವಾತನೇ ಶಿಷ್ಯನೆಂದು ಕರೆಯಲ್ಪಡುತ್ತಾನೆ. ಇದು ಶಾಸ್ತ್ರದ ನಿರ್ಣಯವೆಂದು ಪರಮಾತ್ಮನು ಪಾರ್ವತಿದೇವಿಗೆ ಗುರುಶಿಷ್ಯರ ಪರಂಪರೆಯನ್ನು ತಿಳಿಸುವ ಪ್ರಸಂಗದಲ್ಲಿ ಹೇಳಿದ್ದಾನೆ.

ವೀರಶೈವನಿಗೆ ಅಷ್ಟಾವರಣಗಳೇ ಅಂಗ, ಪಂಚಾಚಾರಗಳೇ ಪ್ರಾಣ ಹಾಗೂ ಷಟ್‌ಸ್ಥಲಗಳೇ ಆತ್ಮ. ಗುರುವಿನಿಂದ ಪಡೆದಿರುವ ಮಂತ್ರವು ಅಷ್ಟಾವರಣಗಳಲ್ಲಿ

---

೧. ಪಾರಮೇಶ್ವರಾಗಮ, ೧೯.೧೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದಾಗಿದೆ. 'ಸಂಕೇತ-ಪದ್ಧತಿ' ಎಂಬ ಗ್ರಂಥದಲ್ಲಿ **"ಮನನಾತ್ ತ್ರಾಣಧರ್ಮಾಽಸೌ ಮಂತ್ರೋಽಯಂ ಪರಿಕೀರ್ತಿತಃ"** -ಮಾನಸಿಕ ಜಪರೂಪವಾದ ಮನನದಿಂದ ಸಾಧಕನನ್ನು ಸಂರಕ್ಷಿಸುವ ಕಾರಣ ಇದಕ್ಕೆ ಮಂತ್ರವೆಂದು ಕರೆಯಲಾಗಿದೆ. ಇದನ್ನು ರಕ್ಷಾಕವಚವೆಂದು ಪರಿಗಣಿಸಲಾಗಿದೆ. ಈ ಅರ್ಥವನ್ನು ಯೋಗಶಿಖೋಪನಿಷತ್ತೂ ಕೂಡ, **"ಮನನಾತ್ ತ್ರಾಣಾಚ್ಚೈವ ಮದ್ರೂಪಸ್ಯಾವಬೋಧನಾತ್ ಮಂತ್ರಮಿತ್ಯುಚ್ಯತೆ"** -ಮನನ ಮಾಡುವ ಮೂಲಕ ಸಾಧಕನನ್ನು ಜನನ ಮರಣಾತ್ಮಕ ಪ್ರಪಂಚದಿಂದ ಪಾರುಮಾಡುವುದರಿಂದ ಮಂತ್ರವೆನ್ನಲಾಗಿದೆ.

ಯಾವುದೇ ದೇವತೆಯ ಹೆಸರಿನ ಮೊದಲು "ಓಂ" ಅನಂತರ ಕೊನೆಗೆ "ನಮಃ" ಶಬ್ದ ಪ್ರಯೋಗಿಸಲು ಮಂತ್ರ ಸಿದ್ಧವಾಗುತ್ತದೆ. ಉದಾ: ಓಂ ಗಣಪತಯೇ ನಮಃ, ಓಂ ವಿಷ್ಣವೇ ನಮಃ ಇತ್ಯಾದಿ. ಮಂತ್ರ ಜಪದಿಂದ ಆಯಾದೇವತೆಗಳ ಕೃಪೆಯಿಂದ ಅಭೀಷ್ಟಾರ್ಥಗಳನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ವಿಭಕ್ತಿ ಪ್ರತ್ಯಯ ಸಹಿತವಾದ ಪರಮಾತ್ಮನ ಹೆಸರೇ ಮಂತ್ರವು. ಇದು ಪರಮಾತ್ಮನನ್ನು ಪರಿಚಯಿಸಿಕೊಡುತ್ತದೆ. ಅಥವಾ ಪರಮಾತ್ಮನ ಸ್ವರೂಪವೇ ಇದಾಗಿದೆ. ವಿಭಕ್ತಿ ಪ್ರತ್ಯಯ ರಹಿತವಾದ ಪರಮಾತ್ಮನ ಹೆಸರು ನಾಮವಾಗಿದೆ. ಮಂತ್ರಕ್ಕೂ ಹಾಗೂ ನಾಮಕ್ಕೂ ಇರುವ ಈ ಅಲ್ಪವಾದ ವ್ಯತ್ಯಾಸವನ್ನು ಗುರುತಿಸಿಕೊಳ್ಳಬೇಕು.

ಮಂತ್ರಗಳಲ್ಲಿ ಪ್ರಕಾರಗಳು ಮೂರು: ೧. ವೈದಿಕ ೨. ತಾಂತ್ರಿಕ ೩. ಸಾಬರಿ. ಒಂದಕ್ಷರದ ಮಂತ್ರಕ್ಕೆ ಪಿಂಡವೆಂದು, ಎರಡಕ್ಷರದ ಮಂತ್ರಕ್ಕೆ ಕರ್ತರಿಯೆಂದು, ಮೂರರಿಂದ ಒಂಭತ್ತು ಅಕ್ಷರ ಪರ್ಯಂತವಿರುವ ಮಂತ್ರಗಳಿಗೆ ಬೀಜವೆಂಧು, ಇಪ್ಪತ್ತಕ್ಕಿಂತ ಅಧಿಕ ಅಕ್ಷರಗಳುಳ್ಳ ಮಂತ್ರಗಳಿಗೆ ಮಾಲಾಮಂತ್ರವೆಂದೂ ಕರೆಯುತ್ತಾರೆ. ಮಂತ್ರದ ಕೊನೆಯಲ್ಲಿ "ವಷಟ್ ಅಥವಾ ಫಟ್" ಬಂದಿರುವುದೋ ಅದು ಪುಂ ದೇವತಾ ಮಂತ್ರ (ಸಾರಾ) ಎಂದೂ, "ವೌಷಟ್ ಅಥವಾ ಸ್ವಾಹಾ" ಮಂತ್ರದ ಕೊನೆಗೆ ಬಂದಿದ್ದರೆ ಸ್ತ್ರೀರೂಪ (ಸಾಮ್ಯಾ) ಎಂದೂ, "ಹುಂ ಮತ್ತು ನಮಃ" ಬಂದಿದ್ದರೆ ಆ ಮಂತ್ರವು ನಪುಂಸಕವೆಂದು ತಿಳಿಯಬೇಕು.[2]

ಪಂಚಾಕ್ಷರ ಮಂತ್ರದ ಸ್ವರೂಪ:

ಚಂದ್ರಜ್ಞಾನಾಗಮದಲ್ಲಿ ಕ್ರಿಯಾಪಾದದ ಅಷ್ಟಮ ಪಟಲದಲ್ಲಿ ಬೃಹಸ್ಪತಿಗೆ ಉತ್ತರಿಸುವಾಗ ಅನಂತ ರುದ್ರನು ಹೇಳುತ್ತಾನೆ:

ಆದೌ ನಮಃ ಪ್ರಯೋಕ್ತವ್ಯಂ ಶಿವಾಯೇತಿ ತತಃ ಪರಮ್।
ಸೈಷಾ ಪಂಚಾಕ್ಷರೀವಿದ್ಯಾ ಸರ್ವಶ್ರುತಿಶಿರೋಗತಾ॥
ಶಬ್ದಜಾತಸ್ಯ ಸರ್ವಸ್ಯ ಬೀಜಭೂತಾ ಸಮಾಸತಃ।
ಆದೌ ಶಿವಮುಖೋದ್ಗೀರ್ಣಾ ಸಾ ತಸ್ಯೈವಾತ್ಮವಾಚಿಕಾ॥[3]

---

೨. ನಾರದ ಪಂಚರಾತ್ರ, ೨.೭.

೩. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೫-೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲು 'ನಮಃ' ಪದವನ್ನಿಟ್ಟು ನಂತರ 'ಶಿವಾಯ' ಪದವನ್ನು ಪ್ರಯೋಗಿಸುವುದಕ್ಕೆ ಪಂಚಾಕ್ಷರಿ ವಿದ್ಯೆ ಎನ್ನುತ್ತಾರೆ. ಸರ್ವಶ್ರುತಿಗಳ ಶಿರೋಭಾಗವು ಇದರ ಸ್ಥಾನವಾಗಿದೆ. ಸಂಕ್ಷಿಪ್ತವಾಗಿ ಈ ಪಂಚಾಕ್ಷರಿ ವಿದ್ಯೆಯು ಎಲ್ಲ ಪ್ರಕಾರದ ಶಬ್ದಗಳ ಜನನಿಯಾಗಿದೆ. ಸೃಷ್ಟಿಯ ಪ್ರಾರಂಭದಲ್ಲಿ ಶಿವನ ಮುಖದಿಂದ ಹೊರಹೊಮ್ಮಿದ ಈ ವಿದ್ಯೆಯು ಭಗವಾನ್ ಶಿವನ ನಿಜಸ್ವರೂಪಬೋಧಕವಾಗಿದೆ:

> **ನಮಃ ಶಬ್ದಂ ವದೇತ್ ಪೂರ್ವಂ ಶಿವಾಯೇತಿ ತತಃ ಪರಮ್।**
> **ಮಂತ್ರಃ ಪಂಚಾಕ್ಷರೋ ಹ್ಯೇಷಃ ಸರ್ವಶ್ರುತಿಶಿರೋಗತಃ॥[೪]**

ಶ್ರೀ ಸಿದ್ಧಾಂತ ಶಿಖಾಮಣಿಯ ಪಂಚಾಕ್ಷರಸ್ಥಲದ ಈ ಉಪದೇಶದಂತೆ 'ನಮಃ' ಎಂಬ ಈ ಶಬ್ದವನ್ನು ಮೊದಲು ನುಡಿದು ನಂತರ 'ಶಿವಾಯ' ಎಂಬ ಶಬ್ದವನ್ನು ನುಡಿಯಬೇಕು. ಈ ಎರಡೂ ಪದಗಳ ಸಂಯುಕ್ತ ಸ್ವರೂಪವೇ ಪಂಚಾಕ್ಷರ ಮಹಾಮಂತ್ರವಾಗಿದೆ. ಇದರಲ್ಲಿಯ 'ನಮಃ' ಶಬ್ದವು ಜೀವಾತ್ಮನ ಅಥವಾ 'ತ್ವಂ' ಪದ ವಾಚಕವಾಗಿದೆ. 'ಶಿವ' ಪದವು ಪರಮಾತ್ಮನ ಅಥವಾ 'ತತ್' ಪದ ವಾಚಕವಾಗಿದೆ. 'ಅಯ' ಪದವು ಅವೆರಡರ ಅಭೇದ ಬೋಧಕವಾಗಿದೆ. ಜೀವ-ಶಿವರ ಏಕತ್ವವನ್ನು ಬೋಧಿಸುವ ಈ ಮಂತ್ರದ ನಿರಂತರ ಜಪದಿಂದ ಜೀವ-ಶಿವರ ಸಾಮರಸ್ಯವು ಸಹಜವಾಗಿಯೇ ಸಿದ್ಧಿಸುತ್ತದೆ. ಈ ಮಹಾಮಂತ್ರವು ಎಲ್ಲ ಭೇದಗಳ ಶಿಖಾಮಣಿಯಂತಿದ್ದು ಪಂಚಾಕ್ಷರವೆಂದು ಪ್ರಖ್ಯಾತಿ ಪಡೆದಿದೆ.

ಪಂಚಾಕ್ಷರ ಮಂತ್ರದ ಹೆಸರುಗಳು:

ಚಂದ್ರಜ್ಞಾನಾಗಮವು ಪಂಚಾಕ್ಷರ ಮಂತ್ರದ ಹೆಸರುಗಳನ್ನು ಹೀಗೆ ಪಟ್ಟಿ ಮಾಡಿದೆ:

> **ಮೂಲಂ ವಿದ್ಯಾ ಶಿವಂ ಚೈವ ಸೂತ್ರಂ ಪಂಚಾಕ್ಷರಸ್ತಥಾ।**
> **ನಾಮಾನ್ಯಸ್ಯ ವಿಜಾನೀಯಾದೋಂಕಾರೋ ಹೃದಯಂ ಮತಮ್॥[೫]**

ಪಂಚಾಕ್ಷರ ಮಂತ್ರಕ್ಕೆ ಮೂಲ, ವಿದ್ಯಾ, ಶಿವ, (ಶೈವ) ಸೂತ್ರ ಮತ್ತು ಪಂಚಾಕ್ಷರ ಎಂಬ ಈ ಐದು ಹೆಸರುಗಳಿವೆ. ಓಂಕಾರವು ಇದರ ಹೃದಯವಾಗಿದೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿಯೂ ಅದೇ ಹೆಸರುಗಳು ಬಂದಿವೆ:

> **ಮೂಲಂ ವಿದ್ಯಾ ಶಿವಃ ಶೈವಂ ಸೂತ್ರಂ ಪಂಚಾಕ್ಷರಸ್ತಥಾ।**
> **ಏತಾನಿ ನಾಮಧೇಯಾನಿ ಕೀರ್ತಿತಾನಿ ಮಹಾಮನೋಃ॥[೬]**

ಇಲ್ಲಿ ಬಂದಿರುವ ಪಂಚನಾಮಗಳು ಸಹೇತುಕಗಳಾಗಿವೆ. ತತ್ತ್ವಾತ್ಮಕವಾದ ಪ್ರಪಂಚಕ್ಕೆಲ್ಲ ಪರಶಿವನು ಮೂಲ ಕಾರಣನಾಗಿರುವಂತೆ ಅವನ ವಾಚಕವಾದ ಈ ಪಂಚಾಕ್ಷರ ಮಹಾಮಂತ್ರವಾದರೂ ಜಗತ್ತಿನ ಹಾಗೂ ಜಗತ್ತಿನಲ್ಲಿರುವ ವರ್ಣಸಮಾಮ್ನಾಯದ

---

೪. ಶ್ರೀ ಸಿದ್ಧಾಂತ ಶಿಖಾಮಣಿ, ೮.೭.

೫. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೧೭.

೬. ಶ್ರೀ ಸಿದ್ಧಾಂತ ಶಿಖಾಮಣಿ, ೮.೨೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾದುರ್ಭಾವಕ್ಕೆ ಮೂಲ ಕಾರಣವಾಗಿರುತ್ತದೆ. ಅಂತೆಯೇ, ಈ ಮಹಾಮಂತ್ರಕ್ಕೆ "ಮೂಲಂ" ಎಂಬ ಹೆಸರು ಪ್ರಾಪ್ತವಾಗಿರುತ್ತದೆ. ಅದೇ ಶ್ರೀ ಸಿದ್ಧಾಂತ ಶಿಖಾಮಣಿಯು ಹೇಳುತ್ತದೆ:

ಪಂಚಭೂತಾನಿ ಸರ್ವಾಣಿ ಪಂಚತನ್ಮಾತ್ರಕಾಣಿ ಚ।
ಜ್ಞಾನೇಂದ್ರಿಯಾಣಿ ಪಂಚಾಪಿ ಪಂಚಕರ್ಮೇಂದ್ರಿಯಾಣಿ ಚ॥
ಪಂಚಬ್ರಹ್ಮಾಣಿ ಪಂಚಾಪಿ ಕೃತ್ಯಾನಿ ಸಹಕಾರಣೈಃ।
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರಮಹಾಮನೋಃ॥[೭]

ಪೃಥಿವ್ಯಾದಿ ಪಂಚಮಹಾಭೂತಗಳು, ಗಂಧಾದಿ ಪಂಚತನ್ಮಾತ್ರಗಳು, ಕಣ್ಣು ಮೊದಲಾದ ಜ್ಞಾನೇಂದ್ರಿಯಗಳು, ವಾಕ್ ಮೊದಲಾದ ಪಂಚಕರ್ಮೇಂದ್ರಿಯಗಳು, ಸದಾಶಿವಾದಿ ಪಂಚಬ್ರಹ್ಮರು, ಸೃಷ್ಟ್ಯಾದಿ ಪಂಚಕೃತ್ಯಗಳು "ನಮಃ ಶಿವಾಯ" ಈ ಪಂಚಾಕ್ಷರ ಮಹಾಮಂತ್ರದ ಪಂಚವರ್ಣಗಳಿಂದ ಪ್ರಪಂಚದಲ್ಲಿಯ ಪಂಚಕಗಳೆಲ್ಲ ಪ್ರಾದುರ್ಭವಿಸಿವೆ.

ಸಪ್ತಕೋಟಿಮಹಾಮಂತ್ರಾ ರೂಪವಕ್ತ್ರೈರನೇಕಧಾ।
ಪಂಚಾಕ್ಷರೇ ಪ್ರಲೀಯಂತೇ ಪುನಸ್ತಸ್ಮಾದ್ವಿನಿರ್ಗತಾಃ॥[೭ಎ]

ಚಂದ್ರಜ್ಞಾನಾಗಮದ ಈ ಉಕ್ತಿಯಲ್ಲಿ ಸಪ್ತಕೋಟಿ ಮಂತ್ರಗಳ ಆವಿರ್ಭಾವ ಹಾಗೂ ವಿಲಯಗಳಿಗೆ ಪಂಚಾಕ್ಷರವೇ ಆಧಾರವೆಂಬುದಾಗಿ ನಿರೂಪಿಸಲಾಗಿದೆ. ಹೀಗೆ ಪ್ರಪಂಚದ ಉತ್ಪತ್ತಿಗೆ ಹಾಗೂ ಎಲ್ಲ ಮಂತ್ರಗಳ ಪ್ರಾದುರ್ಭಾವ-ವಿಲಯಗಳಿಗೆ ಈ ಮಂತ್ರವೇ ಮೂಲವಾದ್ದರಿಂದ "ಮೂಲಂ" ಎಂಬ ನಾಮವು ಪ್ರಾಪ್ತವಾಗಿದೆ. ಪಂಚಾಕ್ಷರಿ ಮಂತ್ರದ ಸರ್ವಕಾರಣತ್ವದ ವಿಷಯವು ಪ್ರತ್ಯಕ್ಷದ ಷೋಡಶರೂಪದ (೧೪-೪೧) ವರ್ಣನೆಯಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿದೆ.

ಈ ಮಹಾಮಂತ್ರವನ್ನು ವಿಧಿವತ್ತಾಗಿ ಜಪಮಾಡುವುದರಿಂದ ಶಿವ-ಜೀವರ ಐಕ್ಯಬೋಧಕವಾದ ಶುದ್ಧವಿದ್ಯೆಯು ಉದಯವಾಗುತ್ತದೆ. ಇಂತಹ ವಿದ್ಯೆಯ ಉದಯಕ್ಕೆ ಕಾರಣವಾದ ಮಂತ್ರಕ್ಕೆ 'ವಿದ್ಯಾ' ಎಂಬುದಾಗಿಯೂ ಕರೆಯಲಾಗಿದೆ. ಆಯುಷ್ಯ ವೃದ್ಧಿಗೆ ಕಾರಣವಾದ ತುಪ್ಪಕ್ಕೆ "ಆಯುರ್ವೈ ಘೃತಮ್" -ತುಪ್ಪವನ್ನೇ ಆಯುಷ್ಯವೆಂದು ಕರೆದಂತೆ ವಿದ್ಯೆಯ ಉದಯಕ್ಕೆ ಕಾರಣವಾದ ಈ ಮಹಾಮಂತ್ರಕ್ಕೂ 'ವಿದ್ಯಾ' ಎಂದೇ ಕರೆಯಲಾಗಿದೆ.

ಈ ಮಂತ್ರದ ಮನನದಿಂದ ಅನೇಕ ಕಲ್ಯಾಣ ಪರಂಪರೆಯು ಪ್ರಾಪ್ತವಾಗುವುದರಿಂದ ಇದಕ್ಕೆ 'ಶಿವ' ಎಂಬ ನಾಮವು ಸಂದಿದೆ. ಶಿವನ ಸಂಬಂಧಿಯಾದ ಸರ್ವ ವಿಷಯವು ಈ ಮಂತ್ರದಲ್ಲಿ ಸೂಕ್ಷ್ಮವಾಗಿ ನಿರೂಪಿತವಾಗಿರುವ ಕಾರಣ ಇದಕ್ಕೆ "ಶೈವ ಸೂತ್ರ"ವೆನ್ನಲಾಗಿದೆ. ಐದಕ್ಷರಗಳಿಂದಾಗಿ ಇದಕ್ಕೆ "ಪಂಚಾಕ್ಷರ"ವೆಂತಲೂ ಕರೆಯಲಾಗಿದೆ.

---

೭. ಅದೇ, ೮.೧೪-೧೫.

೭ಎ. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೪೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಕಾರಃ ಶಿರ ಉಚ್ಯೇತ ಮಕಾರಸ್ತು ಶಿಖೋಚ್ಯತೇ।
ಶಿಕಾರಃ ಕವಚಂ ತದ್ವದ್ ವಾಕಾರೋ ನೇತ್ರಮುಚ್ಯತೇ॥
ಯಕಾರೋಽಸ್ತ್ರಂ ನಮಃ ಸ್ವಾಹಾ ವಷಟ್ ಹುಂ ವೌಷಡಿತ್ಯಪಿ।
ಫಡಿತ್ಯಪಿ ಚ ವರ್ಣಾನಾಂ ಮಂತ್ರಾಂಗತ್ವಂ ಯಥಾ ತಥಾ॥[೮]

ಚಂದ್ರಜ್ಞಾನಾಗಮದ ಪ್ರಕಾರ ಈ ಮಂತ್ರಕ್ಕೆ ನಕಾರವು ಶಿರ, ಮಕಾರವು ಶಿಖೆ, ಶಿಕಾರವು ಕವಚ, ವಾಕಾರವು ನೇತ್ರ, ಯಕಾರವು ಅಸ್ತ್ರ, ನಮಃ, ಸ್ವಾಹಾ, ವಷಟ್, ಹುಂ, ವೌಷಟ್, ಫಟ್ ಈ ಅಕ್ಷರಗಳು ಯೋಗ್ಯತಾನುಸಾರ ಬೆರೆತು ಮಂತ್ರಲಿಂಗವೆನಿಸಿವೆ. ಸಾಂಗವರ್ಣನೆಯ ನಂತರ ಪ್ರತ್ಯೇಕ ಅಕ್ಷರಕ್ಕೂ ಷೋಡಶ [೧೬] ವಿಷಯಗಳನ್ನು ನಿರೂಪಿಸಲಾಗಿದೆ.

ನಕಾರದ ಷೋಡಶರೂಪಗಳು: ಇದರ ವರ್ಣವು ಪೀತ (ಹಳದಿ), ಚತುರ್ಮುಖ ಬ್ರಹ್ಮನು ಇದರ ದೇವತೆ, ಸಾವಿತ್ರಿ ಇದರ ಶಕ್ತಿ, ಪೃಥ್ವಿ ಇದರ ಆಧಾರ, ಇದರ ಛಂದ ಅನುಷ್ಟುಪ್ ಮತ್ತು ಋಷಿ ವಶಿಷ್ಠ, ಪಶ್ಚಿಮ ಮುಖವು ಇದರ ಸ್ಥಾನ ಮತ್ತು ಸದ್ಯೋಜಾತನು ಬ್ರಹ್ಮನಾಗಿದ್ದಾನೆ. ವಜ್ರವು ಆಯುಧ, ನಿವೃತ್ತಿ ಕಲೆಯು ಮತ್ತು ಗುಣವು ಕಠಿಣ, ಚತುರಾಕಾರ ಚಕ್ರ, ಉರಿಯುವ ಅಗ್ನಿಯಂತೆ ಇದರ ಪ್ರಕಾಶವು, ಮನವೆ ಕರಣ ಮತ್ತು ವಾಯು ಪ್ರಾಣವಾಗಿದೆ. ಜ್ಞಾನೇಂದ್ರಿಯವು ಘ್ರಾಣವಾಗಿದೆ.[೯]

ಮಕಾರದ ಷೋಡಶರೂಪಗಳು: ನೀರಿನಂತೆ ಶ್ವೇತವರ್ಣವು, ವಿಷ್ಣು ದೇವತೆ, ಶಕ್ತಿ ಲಕ್ಷ್ಮಿಯು ಮತ್ತು ಜಲವೇ ಆಧಾರ, ಛಂದ ತ್ರಿಷ್ಟುಪ್, ಋಷಿ ವಿಶ್ವಾಮಿತ್ರ, ಸ್ಥಾನ ಉತ್ತರ ವಕ್ತ್ರ ಮತ್ತು ವಾಮದೇವ ಬ್ರಹ್ಮ, ಪದ್ಮ ಆಯುಧ, ಪ್ರತಿಷ್ಠಾ ಕಲೆಯು, ದ್ರವ ಸ್ವಭಾವವೇ ಗುಣ ಮತ್ತು ಅರ್ಧಚಂದ್ರಾಕೃತಿಯೆ ಚಕ್ರವು. ಚಂದ್ರನಂತಹ ಪ್ರಕಾಶವು, ಬುದ್ಧಿಯು ಕರಣ ಮತ್ತು ಅಪಾನವಾಯುಯುಕ್ತವಾದ ಜಿವ್ಹೆ ಜ್ಞಾನೇಂದ್ರಿಯವಾಗಿದೆ.[೧೦]

ಶಿಕಾರದ ಷೋಡಶರೂಪಗಳು: ಜಿಂಕೆಯಂತಹ ರಕ್ತವರ್ಣ, ರುದ್ರ ದೇವತೆ, ಗೌರೀಶಕ್ತಿ ಮತ್ತು ಆಧಾರ ಅಗ್ನಿ, ಛಂದ ಉಷ್ಣಿಕ, ಋಷಿ ಜಮದಗ್ನಿ, ಸ್ಥಾನ ದಕ್ಷಿಣ ವಕ್ತ್ರ ಮತ್ತು ಬ್ರಹ್ಮ ಅಘೋರ, ಸ್ವಸ್ತಿಕ ಆಯುಧ, ವಿದ್ಯಾಕಲೆಯು, ಗುಣದೀಪ್ತಿ ಸಂವಲಿತ, ತ್ರಿಕೋಣಾಕಾರ ಚಕ್ರ, ವಿದ್ಯುತ್ತಿನಂತಹ ಪ್ರಕಾಶವು, ಅಹಂಕಾರ ಕರಣ, ವ್ಯಾನವಾಯು ಮತ್ತು ನೇತ್ರ ಜ್ಞಾನೇಂದ್ರಿಯವಾಗಿದೆ.[೧೧]

ವಾಕಾರದ ಷೋಡಶರೂಪಗಳು: ವಾಯುವಿನಂತೆ ಹರಿತ (ಹಸಿರು) ವರ್ಣ, ಈಶ್ವರ ದೇವತೆ, ಅಂಬಿಕೆ ಮಹಾಶಕ್ತಿ ಮತ್ತು ವಾಯು ಆಧಾರ, ಛಂದ ಬೃಹತಿ, ಋಷಿ ಕಶ್ಯಪ, ಸ್ಥಾನ ಪೂರ್ವ ವಕ್ತ್ರ ಮತ್ತು ಬ್ರಹ್ಮ ತತ್ಪುರುಷ, ಬಿಂದುಸ್ವರೂಪ ಆಯುಧ, ಕಲೆ

---

೮. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೧೮-೧೯.

೯. ಅದೇ, ೮.೨೨-೨೩.

೧೦. ಅದೇ, ೮.೨೬-೨೯.

೧೧. ಅದೇ, ೮.೩೦-೩೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಾಂತಿ ಮತ್ತು ಗುಣ ಸ್ಪರ್ಶ, ಚಕ್ರ ಷಡಾಕಾರ, ಇಂದ್ರನೀಲ ಮಣಿಯಂತಹ ಪ್ರಕಾಶ, ಚಿತ್ತಕರಣ, ಉದಾನ ವಾಯು ಮತ್ತು ಸ್ಪರ್ಶ ಜ್ಞಾನೇಂದ್ರಿಯ.[೧೨]

ಯಕಾರದ ಷೋಡಶರೂಪಗಳು: ಆಕಾಶದಂತೆ ನೀಲವರ್ಣ, ಸದಾಶಿವ ದೇವತೆ, ಉನ್ಮನೀ ಶಕ್ತಿ ಮತ್ತು ಆಕಾಶವೇ ಆಧಾರ, ಛಂದ ಜಗತಿ, ಋಷಿ ಭರದ್ವಾಜ, ಸ್ಥಾನ ಊರ್ಧ್ವಮುಖ ಮತ್ತು ಈಶಾನ ಬ್ರಹ್ಮ, ಆಯುಧ ತ್ರಿಶೂಲ, ಶಾಂತ್ಯಾತೀತ ಕಲೆ ಮತ್ತು ಗುಣಶೂನ್ಯ, ಚಂದ್ರಮಣಿಯಂಥ ಪ್ರಕಾಶ, ಪ್ರಕೃತಿ ಕರಣ, ಸಮಾನವಾಯು, ಶ್ರೋತ್ರವು ಜ್ಞಾನೇಂದ್ರಿಯ.[೧೩]

ಪಂಚಾಕ್ಷರೀ ಮಂತ್ರದ ಋಷಿ ಮುಂತಾದುವು:

ಯಾವುದೇ ಧಾರ್ಮಿಕ ಅನುಷ್ಠಾನವನ್ನು ಆಚರಿಸುವಾಗ ಶಾಸ್ತ್ರೋಕ್ತ ವಿಧಿಯನ್ನು ಅವಶ್ಯವಾಗಿ ಅನುಸರಿಸಬೇಕಾಗುವುದು. ಜಪಾನುಷ್ಠಾನಕ್ಕಾಗಿ ಶಾಸ್ತ್ರಗಳಲ್ಲಿ ಸ್ಥಾನ, ಆಸನ, ದಿಕ್ಕು, ಪ್ರಾಣಾಯಾಮ, ನ್ಯಾಸ ಮತ್ತು ದೇವತಾದಿಗಳ ವಿವರಣೆಯನ್ನು ಮಾಡಲಾಗಿದೆ. ಚಂದ್ರಜ್ಞಾನಾಗಮದಲ್ಲಿ-

> ವಾಮದೇವ ಋಷಿಶ್ಚಾಸ್ಯ ಪಂಕ್ತಿಶ್ಛಂದ ಉದಾಹೃತಃ।
> ದೇವತಾ ಸ ಶಿವಃ ಸಾಕ್ಷಾತ್ ಪ್ರಣವೋ ಬೀಜ ಉಚ್ಯತೇ॥
> ಉಮಾ ಶಕ್ತಿರಿತಿ ಪ್ರೋಕ್ತಾ ನ್ಯಾಸಶ್ಚೈವಂ ಷಡಕ್ಷರೈಃ॥[೧೪]

ಎಂದು ಹೇಳಿದೆ. ಈ ಮಹಾಮಂತ್ರಕ್ಕೆ ವಾಮದೇವನೆ ಋಷಿಯು, ಪಂಕ್ತಿಯೇ ಛಂದಸ್ಸು, ಸದಾಶಿವನೇ ದೇವತೆಯು, ಓಂಕಾರವೇ ಬೀಜವು, ಉಮೆಯೆ ಶಕ್ತಿಯು ಮತ್ತು ಶಿವನೇ ಕೀಲಕವೆಂಬುದಾಗಿ ನಿರೂಪಿಸಲಾಗಿದೆ. ಜಪವನ್ನು ಪ್ರಾರಂಭಿಸುವ ಪೂರ್ವದಲ್ಲಿ ಋಷ್ಯಾದಿಗಳನ್ನು ತನ್ನ ಶರೀರದಲ್ಲಿ ಭಾವನೆಯಿಂದ ನ್ಯಾಸಮಾಡಿಕೊಳ್ಳಬೇಕಾಗುತ್ತದೆ. ಲಿಂಗಧಾರಣ ಚಂದ್ರಿಕೆಯಲ್ಲಿ ಹೇಳಿದಂತೆ-

> ಋಷಿಂ ಮೂರ್ಧ್ನಿ ಮುಖೇ ಛಂದಃ ದೇವತಾಂ ಹೃದಿ ವಿನ್ಯಸೇತ್।
> ಆಧಾರೇ ಬೀಜಶಕ್ತಿಂ ಚ ಪಾದಯೋಃ ಕೀಲಕಂ ನ್ಯಸೇತ್॥[೧೫]

ಮಸ್ತಕದಲ್ಲಿ ಋಷಿಯನ್ನು, ಮುಖದಲ್ಲಿ ಛಂದಸ್ಸನ್ನು, ಹೃದಯದಲ್ಲಿ ದೇವತೆಯನ್ನು, ನಾಭಿಯಲ್ಲಿ ಬೀಜವನ್ನು, ಗುಹ್ಯದಲ್ಲಿ ಶಕ್ತಿಯನ್ನು, ಪಾದಗಳಲ್ಲಿ ಕೀಲಕವನ್ನು ಭಾವನೆಯಿಂದ ಶರೀರದ ವಿಭಿನ್ನ ಸ್ಥಾನಗಳಲ್ಲಿ ಸ್ಥಾಪಿಸಿಕೊಳ್ಳುವುದೇ ನ್ಯಾಸವು.

ನ್ಯಾಸ ಪ್ರಕಾರ:

ತನ್ನ ಬಲಗೈ ಮುಷ್ಟಿಯನ್ನು ಬಿಗಿದು ಅದರ ಅಂಗುಷ್ಠದಿಂದ ಮಸ್ತಕವನ್ನು ಮುಟ್ಟಿ ಅಲ್ಲಿ ಋಷಿಯನ್ನೂ, ಮುಷ್ಟಿಯನ್ನು ಬಿಚ್ಚಿ ಅಂಗುಷ್ಠ ಹಾಗೂ ತರ್ಜನಿ ಬೆರಳುಗಳಿಂದ

---

೧೨. ಅದೇ, ೮.೩೪-೩೭.

೧೩. ಅದೇ, ೮. ೩೩-೪೧.

೧೪. ಅದೇ, ೮.೧೧.

೧೫. ಲಿಂಗಧಾರಣ ಚಂದ್ರಿಕೆ, ಪು. ೨೩೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಖ (ಬಾಯಿ)ವನ್ನು ಮುಟ್ಟಿ ಛಂದಸ್ಸನ್ನು, ಅಂಗುಷ್ಠ ಹಾಗೂ ಮಧ್ಯಮಾ ಬೆರಳುಗಳಿಂದ ಹೃದಯವನ್ನು ಸ್ಪರ್ಶಿಸಿ ಅಲ್ಲಿ ದೇವತೆಯನ್ನು, ಅಂಗುಷ್ಠ ಮತ್ತು ಅನಾಮಿಕೆಗಳಿಂದ ನಾಭಿಯನ್ನು ಸ್ಪರ್ಶಿಸಿ ಅಲ್ಲಿ ಬೀಜವನ್ನು, ಅಂಗುಷ್ಠ ಮತ್ತು ಕನಿಷ್ಠೆಗಳಿಂದ ಗುಹ್ಯವನ್ನು ಸ್ಪರ್ಶಿಸಿ ಅಲ್ಲಿ ಶಕ್ತಿಯನ್ನೂ ಮತ್ತು ಎರಡೂ ಕೈಗಳ ತರ್ಜನಿ ಬೆರಳುಗಳನ್ನು ಹೊರತುಪಡಿಸಿ ಕಟ್ಟಿದ ಮುಷ್ಟಿಗಳಿಂದ ಕ್ರಮವಾಗಿ ಬಲಮುಷ್ಟಿಯನ್ನು ಎಡದಿಂದ ಬಲಕ್ಕೆ, ಎಡಮುಷ್ಟಿಯನ್ನು ಬಲದಿಂದ ಎಡಕ್ಕೆ ಮಸ್ತಕದ ಪರಿಕ್ರಮವನ್ನು ಮಾಡಿ ಬಲ ತರ್ಜನಿಯಿಂದ ಬಲಪಾದದ ಅಂಗುಷ್ಠವನ್ನು ಎಡ ತರ್ಜನಿಯಿಂದ ಎಡಪಾದದ ಅಂಗುಷ್ಠವನ್ನು ಸ್ಪರ್ಶಿಸುತ್ತಾ ಎರಡೂ ಪಾದಗಳಲ್ಲಿ ಕೀಲಕದ ನ್ಯಾಸವನ್ನು ಮಾಡಬೇಕು.

ಈ ನ್ಯಾಸಪ್ರಕ್ರಿಯೆಯು ದೇಹನ್ಯಾಸ, ಅಂಗನ್ಯಾಸ ಮತ್ತು ಕರನ್ಯಾಸವೆಂದು ಮೂರು ತೆರನಾಗಿದೆ. ಅದು ಮತ್ತೆ ಸೃಷ್ಟಿನ್ಯಾಸ, ಸ್ಥಿತಿನ್ಯಾಸ, ಸಂಹಾರನ್ಯಾಸವೆಂದು ಪ್ರಭೇದಗೊಂಡಿದೆ. ಗೃಹಸ್ಥರಿಗೆ ಸೃಷ್ಟಿನ್ಯಾಸ, ಬ್ರಹ್ಮಚಾರಿಗಳಿಗೆ ಸ್ಥಿತಿನ್ಯಾಸ ಮತ್ತು ಸಂನ್ಯಾಸಿಗಳಿಗೆ ಸಂಹಾರನ್ಯಾಸವೆಂದು ಯೋಜಿಸಲಾಗಿದೆ. ವೀರಶೈವ ಸಿದ್ಧಾಂತದಲ್ಲಿ ಆಶ್ರಮಭೇದದಿಂದ ನ್ಯಾಸಭೇದಕ್ಕೆ ಸಮ್ಮತಿ ಇಲ್ಲ. ತಮ್ಮ ಇಚ್ಛಾನುಸಾರ ಯಾವುದಾದರೂ ಒಂದು ನ್ಯಾಸ ಪದ್ಧತಿಯನ್ನು ಸ್ವೀಕರಿಸಬೇಕೆಂದು ನೀಲಕಂಠ ಶಿವಾಚಾರ್ಯರು 'ಕ್ರಿಯಾಸಾರ' ಎಂಬ ಗ್ರಂಥದಲ್ಲಿ ಹೇಳಿರುವ ವಿಚಾರವನ್ನು ಬಿಜಾಪೂರದ ಲಿಂ.ಶ್ರೀ.ಷ.ಬ್ರ. ಶಂಭುಲಿಂಗ ಶಿವಾಚಾರ್ಯರು ತಮ್ಮ 'ಅಷ್ಟಾವರಣ ವಿವೇಕ'ದಲ್ಲಿ ಪ್ರತಿಪಾದಿಸಿದ್ದಾರೆ.

ವಾರಾಣಸಿಯ ಜಂಗಮವಾಡಿ ಮಠದಿಂದ ಪ್ರಕಾಶಗೊಂಡಿರುವ ಚಂದ್ರಜ್ಞಾನಾಗಮದ 'ಪರಿಶಿಷ್ಟಾನಿ' ಭಾಗದಲ್ಲಿ ತಿಳಿಸಲಾದ ನ್ಯಾಸಕ್ರಮ ಈ ರೀತಿಯಾಗಿದೆ.

ಸೃಷ್ಟಿನ್ಯಾಸಕ್ರಮಃ (ಬ್ರಹ್ಮಚಾರಿಗಳಿಗೆ)

ಕರನ್ಯಾಸಃ

ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಅಙ್ಗುಷ್ಠಾಭ್ಯಾಂ ನಮಃ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ತರ್ಜನೀಭ್ಯಾಂ ನಮಃ।
ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಮಧ್ಯಮಾಭ್ಯಾಂ ನಮಃ।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ।
ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಕರತಲಕರ ಪೃಷ್ಠಾಭ್ಯಾಂ ನಮಃ

ದೇಹನ್ಯಾಸಃ

ಓಂ ಯಂ ಓಂ ಈಶಾನಾಯ ನಮಃ ಶಿರಸಿ।
ಓಂ ವಾ ಓಂ ತತ್ಪುರುಷಾಯ ನಮೋ ಮುಖೇ।
ಓಂ ಶಿಂ ಓಂ ಅಘೋರಾಯ ನಮೋ ಹೃದಯೇ।
ಓಂ ಮಂ ಓಂ ವಾಮದೇವಾಯ ನಮೋ ಗುಹ್ಯೇ।
ಓಂ ನಂ ಓಂ ಸದ್ಯೋಜಾತಾಯ ನಮಃ ಪಾದದ್ವಯೇ।
ಓಂ ಓಂ ಓಂ ಪ್ರಣವಾಯ ನಮಃ ಸರ್ವಾಙ್ಗೇ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗನ್ಯಾಸಃ

ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಹೃದಯಾಯ ನಮಃ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ಶಿರಸೇ ಸ್ವಾಹಾ।
ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಶಿಖಾಯೈ ವಷಟ್।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಕವಚಾಯ ಹುಂ।
ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಅಸ್ತ್ರಾಯ ಫಟ್।

ಸ್ಥಿತಿನ್ಯಾಸಕ್ರಮಃ (ಗೃಹಸ್ಥರಿಗೆ)

ಕರನ್ಯಾಸಃ

ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಮಧ್ಯಮಾಭ್ಯಾಂ ನಮಃ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ತರ್ಜನೀಭ್ಯಾಂ ನಮಃ।
ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ।
ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಕರತಲಕರಪೃಷ್ಠಾಭ್ಯಾಂ ನಮಃ।

ದೇಹನ್ಯಾಸಃ

ಓಂ ಶಿಂ ಓಂ ಅಘೋರಾಯ ನಮೋ ಹೃದಯೇ।
ಓಂ ವಾಂ ಓಂ ವಾಮದೇವಾಯ ನಮೋ ಗುಹ್ಯೇ।
ಓಂ ಯಂ ಓಂ ಸದ್ಯೋಜಾತಾಯ ನಮಃ ಪಾದದ್ವಯೇ।
ಓಂ ನಂ ಓಂ ಈಶಾನಾಯ ನಮಃ ಶಿರಸಿ।
ಓಂ ಮಂ ಓಂ ತತ್ಪುರುಷಾಯ ನಮೋ ಮುಖೇ।
ಓಂ ಓಂ ಓಂ ಪ್ರಣವಾಯ ನಮಃ ಸರ್ವಾಂಗೇ।

ಅಂಗನ್ಯಾಸಃ

ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಕವಚಾಯ ಹುಂ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್।
ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಅಸ್ತ್ರಾಯ ಫಟ್।
ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಹೃದಯಾಯ ನಮಃ।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಶಿರಸೇ ಸ್ವಾಹಾ।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಶಿಖಾಯೈ ವಷಟ್।

ಸಂಹಾರನ್ಯಾಸಕ್ರಮಃ (ವಾನಪ್ರಸ್ಥ ಮತ್ತು ಸಂನ್ಯಾಸಿಗಳಿಗೆ)

ಕರನ್ಯಾಸಃ

ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಮಧ್ಯಮಾಭ್ಯಾಂ ನಮಃ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ತರ್ಜನೀಭ್ಯಾಂ ನಮಃ।
ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಕರತಲಕರಪೃಷ್ಠಾಭ್ಯಾಂ ನಮಃ।

ದೇಹನ್ಯಾಸಃ

ಓಂ ನಂ ಓಂ ಸದ್ಯೋಜಾತಾಯ ನಮಃ ಪಾದದ್ವಯೇ।
ಓಂ ಮಂ ಓಂ ವಾಮದೇವಾಯ ನಮೋ ಗುಹ್ಯೇ।
ಓಂ ಶಿಂ ಓಂ ಅಘೋರಾಯ ನಮೋ ಹೃದಯೇ।
ಓಂ ವಾಂ ಓಂ ತತ್ಪುರುಷಾಯ ನಮೋ ಮುಖೇ।
ಓಂ ಯಂ ಓಂ ಈಶಾನಾಯ ನಮಃ ಶಿರಸಿ।
ಓಂ ಓಂ ಓಂ ಪ್ರಣವಾಯ ನಮಃ ಸರ್ವಾಂಗತೇ।

ಅಂಗನ್ಯಾಸಃ

ಓಂ ನಂ ಓಂ ಅಲುಪ್ತಶಕ್ತಿಧಾಮ್ನೇ ಅಸ್ತ್ರಾಯ ಫಟ್।
ಓಂ ಮಂ ಓಂ ಸ್ವತಂತ್ರಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್।
ಓಂ ಶಿಂ ಓಂ ಅನಾದಿಬೋಧಶಕ್ತಿಧಾಮ್ನೇ ಕವಚಾಯ ಹುಂ।
ಓಂ ವಾಂ ಓಂ ನಿತ್ಯತೃಪ್ತಿಶಕ್ತಿಧಾಮ್ನೇ ಶಿಖಾಯೈ ವಷಟ್।
ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ ಶಿರಸೇ ಸ್ವಾಹಾ।
ಓಂ ಓಂ ಓಂ ಅನಂತಶಕ್ತಿಧಾಮ್ನೇ ಹೃದಯಾಯ ನಮಃ।

ಜಪದ ಸ್ಥಾನ ವಿಷಯವಾಗಿ ಆಗಮ ಶಾಸ್ತ್ರದಲ್ಲಿ ಮನೆ, ಆಕಳ ಕೊಟ್ಟಿಗೆ, ಪುಣ್ಯಾರಣ್ಯ, ರಮ್ಯಪರ್ವತ, ನದೀತೀರ ಮತ್ತು ದೇವಾಲಯಗಳು ಉತ್ತರೋತ್ತರ ಶತ, ಸಹಸ್ರ, ಅಯುತ, ಲಕ್ಷ ಹಾಗೂ ಕೋಟಿ ಪಟ್ಟು ಹೆಚ್ಚಿನ ಫಲದಾಯಕಗಳೆಂದು ಹೇಳುತ್ತಾ ಪುನಃ ಚಂದ್ರಜ್ಞಾನಾಗಮದಲ್ಲಿ-

ಯದಿಷ್ಟಲಿಂಗಂ ಸಂಪಶ್ಯನ್ ವಾಮಹಸ್ತಸ್ಥಿತಂ ಪರಮ್।
ಜಪತೇ ತತ್ಫಲಂ ವಕ್ತುಂ ನ ಮಯಾ ಶಕ್ಯತೇ ಗುರೋ।।[೧೬]

ವಾಮಹಸ್ತದಲ್ಲಿರುವ ಇಷ್ಟಲಿಂಗದ ಸಾಕ್ಷಿಯಲ್ಲಿ ಮಾಡಿದ ಜಪದ ಫಲವು ಅಗಣಿತವೆಂಬುದಾಗಿ ನಿರೂಪಿಸಲಾಗಿದೆ. ಆದಕಾರಣ ವೀರಶೈವರು ಮೇಲೆ ಹೇಳಿದ ಯಾವುದೇ ಸ್ಥಾನದಲ್ಲಿ ಜಪಮಾಡಬೇಕಾದರೂ ಇಷ್ಟಲಿಂಗದ ಸಾಕ್ಷಿಯಲ್ಲಿ ಮಾಡುವುದು ಸರ್ವೋತ್ತಮವಾದುದು.

ಮಂತ್ರಜಪದ ವಿಧಾನ:

ಚಂದ್ರಜ್ಞಾನಾಗಮವು ಮಂತ್ರಜಪದ ವಿಧಾನವನ್ನು ಹೀಗೆ ನಿರೂಪಿಸುತ್ತದೆ.

---

೧೬. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೭೨-೭೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ನಾನಂ ಕೃತ್ವಾ ಶುಚೌ ದೇಶೇ ಬದ್ಧ್ವಾ ರುಚಿರಮಾಸನಮ್।
ಶಂಕರಂ ಹೃದಿ ಸಂಚಿಂತ್ಯ ಸ್ವಗುರುಂ ತದ್ಗುರೂಂಸ್ತಥಾ॥
ಪ್ರಾಙ್ಮುಖೋದಙ್ಮುಖೋ ವಾಪಿ ಮೌನೀ ಚೈಕಾಗ್ರಮಾನಸಃ।
ವಿಶೋಧ್ಯ ಪಂಚತತ್ವಾನಿ ದಹನಪ್ಲಾವನಾದಿಭಿಃ॥
ಮಂತ್ರನ್ಯಾಸಾದಿಕಂ ಕೃತ್ವಾ ಸಕಲೀಕೃತವಿಗ್ರಹಃ।
ದೇವಂ ದೇವೀಯುತಂ ಧ್ಯಾಯೇತ್ ಪ್ರಾಣಾಪಾನೌ ನಿಯಮ್ಯ ಚ॥
ವಿದ್ಯಾಂ ಸ್ಥಾನಂ ಸ್ವರಂ ರೂಪಂ ಋಷಿಂ ಛಂದೋಽಧಿದೈವತಮ್।
ಬೀಜಂ ಶಕ್ತಿಂ ತಥಾ ವಾಚ್ಯಂ ಸ್ಮೃತ್ವಾ ಪಂಚಾಕ್ಷರಂ ಜಪೇತ್॥[೧೭]

"ಸ್ನಾನ ಮಾಡಿ, ಶುದ್ಧವಾದ ಸ್ಥಾನದಲ್ಲಿ, ಅನುಕೂಲಕರವಾದ ಆಸನ (ಸುಖಾಸನ, ಪದ್ಮಾಸನ ಅಥವಾ ಯಾವುದೇ ಆಸನ)ವನ್ನು ಅಳವಡಿಸಿಕೊಂಡು, ಶಂಕರನನ್ನು ಹೃದಯದಲ್ಲಿ ಸ್ಮರಿಸಿ, ತನ್ನ ಗುರು ಮತ್ತು ಅವರ ಗುರುಗಳನ್ನು ನೆನೆದು, ಪೂರ್ವಾಭಿಮುಖವಾಗಿಯೋ ಉತ್ತರಾಭಿಮುಖವಾಗಿಯೋ ಕುಳಿತು, ಮೌನಿಯಾಗಿ, ಏಕಾಗ್ರಚಿತ್ತದಿಂದ, ಪೃಥಿವಿ ಮುಂತಾದ ಪಂಚತತ್ವಗಳನ್ನು ದಹನ ಮತ್ತು ಪ್ಲಾವನಗಳಿಂದ ಶುದ್ಧಗೊಳಿಸಿ, ಮಂತ್ರನ್ಯಾಸ ಮುಂತಾದವನ್ನು ಮಾಡಿ, ಸಕಲೀಕರಣ ಪ್ರಕ್ರಿಯೆಯಿಂದ ಪವಿತ್ರವಾದ ಶರೀರವುಳ್ಳವನಾಗಿ, ಶಕ್ತಿವಿಶಿಷ್ಟನಾದ ಶಿವನನ್ನು ಪ್ರಾಣಾಯಾಮ-ಪೂರ್ವಕವಾಗಿ ಧ್ಯಾನ ಮಾಡಬೇಕು. ವಿದ್ಯೆ, ಸ್ಥಾನ, ಸ್ವರ, ರೂಪ, ಋಷಿ, ಛಂದಸ್, ದೇವತೆ, ಬೀಜ, ಶಕ್ತಿ, ವಾಚ್ಯ ಈಶ್ವರರನ್ನು ಸ್ಮರಿಸಿ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು."

ತ್ರಿವಿಧ ಜಪ

ಉತ್ತಮೋ ಮಾನಸಃ ಪ್ರೋಕ್ತ ಉಪಾಂಶುರ್ಮಧ್ಯಮಸ್ತಥಾ।
ಅಧಮೋ ವಾಚಿಕಃ ಪ್ರೋಕ್ತ ಇತ್ಯೇತಚ್ಛಿವಶಾಸನಮ್॥[೧೮]

ಜಪವು ಮಾನಸ, ಉಪಾಂಶು ಹಾಗೂ ವಾಚಿಕವೆಂದು ತ್ರಿವಿಧವಾಗಿದೆ. ಅವುಗಳು ಅನುಕ್ರಮವಾಗಿ ಉತ್ತಮ, ಮಧ್ಯಮ ಮತ್ತು ಕನಿಷ್ಠವೆಂದು ಗಣಿಸಲ್ಪಟ್ಟಿವೆ.

ಪದ ಅಕ್ಷರಗಳು ಸ್ಪಷ್ಟವಾಗಿ ಉಚ್ಚರಿಸಲ್ಪಡುತ್ತಿದ್ದರೆ ಅದಕ್ಕೆ ವಾಚಿಕ ಜಪವೆನ್ನುತ್ತಾರೆ. ಯಾವುದರಲ್ಲಿ ನಾಲಿಗೆ ಮಾತ್ರ ಅಲುಗಾಡುತ್ತದೆಯೋ ಅಥವಾ ಮಂತ್ರಾಕ್ಷರಗಳ ಉಚ್ಚಾರವು ನಿಧಾನವಾಗಿರುತ್ತದೆಯೋ ಅನ್ಯರಿಗೆ ಕೇಳದಂತಿದ್ದು ಜಪ ಮಾಡುವವನಿಗೆ ಮಾತ್ರ ಕೇಳಿಸುವಂತಿದ್ದರೆ ಅದಕ್ಕೆ ಉಪಾಂಶು ಜಪವೆನ್ನುತ್ತಾರೆ. ಅಕ್ಷರಗಳ ಕ್ರಮವು ಕೇವಲ ಬುದ್ಧಿಯಲ್ಲಿ ಒಂದು ವರ್ಣದಿಂದ ಮತ್ತೊಂದಕ್ಕೆ ಮತ್ತು ಒಂದು ಪದದಿಂದ ಮತ್ತೊಂದಕ್ಕೆ ಸಾಗುತ್ತದೆಯೋ ಹಾಗೂ ಶಬ್ದಾರ್ಥದ ಚಿಂತನೆಯಲ್ಲಿಯೇ ಧ್ಯಾನವು ಕೇಂದ್ರೀಕೃತ-

೧೭. ಅದೇ, ೮.೫೨-೫೫.

೧೮. ಅದೇ, ೮.೫೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾಗಿರುತ್ತದೆಯೋ ಅದು ಮಾನಸಿಕ ಜಪವೆನಿಸುತ್ತದೆ. ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಬಂದಿರುವ ತ್ರಿವಿಧ ಜಪದ ವಿಷಯವು ಇದಕ್ಕೆ ಸಂವಾದಿಯಾಗಿದೆ.[೧೯]

ಶ್ರೀ ಮನ್ನಿಜಗುಣರು ಪರಮಾನುಭವಬೋಧೆಯ (ಸಂಧಿ ೫-೬-೫,೬)ರಲ್ಲಿ-
ಇದಿರಿಂಗೆ ಕೇಳಬರ್ಪುದು ವಾಚಿಕವೆನಿಕ್ಕು। ಮಿದಿರಿಂಗೆ ಕೇಳಬಾರದೆ ತನ್ನ॥
ರದನಚ್ಛಂದಗಳಲುಗೆ ಮಾಳ್ಪ ಜಪವಿಧಿಯದು ತಾನುಪಾಂಶುವೆಂದೆನಿಪುದು ॥ ೫ ॥
ಎನಿತು ಮಂತ್ರದ ಪದವನಿತನೆ ತನ್ನಯ ಮನದಲ್ಲುಚ್ಚರಿಸಲಂತದು ತಾನೆ॥ ವನಿತೆ
ಕೇಳ್ಮಾನಸ ಜಪವೆನಿಪುದು ಶಾಸ್ತ್ರದನುಮತವದು ಮುಮುಕ್ಷುಗೆ ಬೇಕು ॥ ೬ ॥

ಸಗರ್ಭ-ಅಗರ್ಭ ಜಪಗಳು:

ವಾಚಿಕ ಜಪಕ್ಕಿಂತಲೂ ಉಪಾಂಶು ಜಪವು ನೂರುಪಾಲು ಅಧಿಕ ಫಲವುಳ್ಳದ್ದಾಗಿದೆ. ಮಾನಸ ಜಪವು ಸಾವಿರ ಪಾಲು ಅಧಿಕ ಫಲವುಳ್ಳದ್ದಾಗಿದೆ. ಸಗರ್ಭ ಜಪದ ಫಲವು ಇದಕ್ಕಿಂತಲೂ ನೂರು ಪಾಲು ಅಧಿಕವಾಗಿದೆ.

ಪ್ರಾಣಾಯಾಮ ಸಮಾಯುಕ್ತಃ ಸಗರ್ಭೋ ಜಪ ಉಚ್ಯತೇ।
ಪ್ರಾಣಾಯಾಮೇನ ರಹಿತೋ ಹ್ಯಗರ್ಭೋ ಜಪ ಉಚ್ಯತೇ॥[೨೦]

ಪ್ರಾಣಾಯಾಮದ ಜೊತೆಗೆ ಮಾಡಲ್ಪಟ್ಟ ಜಪವು ಸಗರ್ಭವೆಂದು ಕರೆಯಲ್ಪಡುತ್ತದೆ. ಪ್ರಾಣಾಯಾಮವನ್ನು ಹೊರತುಪಡಿಸಿ ಮಾಡಲ್ಪಟ್ಟ ಜಪವು ಅಗರ್ಭವೆನಿಸುತ್ತದೆ. ಐದು, ಮೂರು ಅಥವಾ ಒಂದು ಪ್ರಾಣಾಯಾಮ ಮಾಡಿ ಸಗರ್ಭ ಅಥವಾ ಅಗರ್ಭ ಜಪವನ್ನು ಆಚರಿಸಬೇಕು. ಇವುಗಳಲ್ಲಿ ಸಗರ್ಭವು ಪ್ರಶಂಸನೀಯವಾಗಿದೆ. ಸಗರ್ಭ ಜಪಕ್ಕಿಂತಲೂ ಸಧ್ಯಾನ ಜಪವು ಸಾವಿರ ಸಲ ಅಧಿಕವಾಗಿದೆ.

ಪುರಶ್ಚರಣ ಕ್ರಮವು:

ದೀಕ್ಷಾಪೂರ್ವಂ ಗುರೋರ್ಲಬ್ಧ್ವಾ ಮಂತ್ರಮಾಜ್ಞಾಂ ಸಮಾಹಿತಃ।
ಸಂಕಲ್ಪ್ಯ ಚ ಜಪೇನ್ನಿತ್ಯಂ ಪುರಶ್ಚರಣಪೂರ್ವಕಮ್॥[೨೧]

ಸಮಾಹಿತ ಚಿತ್ತನಾದ ವ್ಯಕ್ತಿಯು ಗುರುವಿನಿಂದ ದೀಕ್ಷೆ ಪಡೆದು ಮಂತ್ರ ಹಾಗೂ ಅದರ ಉಪಯೋಗದ ಆಜ್ಞೆ ಪಡೆದು ಅದರಂತೆ ಪುರಶ್ಚರಣಪೂರ್ವಕ ಸಂಕಲ್ಪಾನುಸಾರ ನಿತ್ಯದಲ್ಲಿ ಜಪ ಮಾಡಬೇಕು.

ಯಾವ ವ್ಯಕ್ತಿಯು ಊಟ ಮಾಡದೆ ಎಚ್ಚರಿಕೆಯಿಂದ ಜೀವನದವರೆಗೆ ೧೦೦೮ ಸಲ ನಿತ್ಯ ಪಂಚಾಕ್ಷರ ಮಂತ್ರದ ಜಪಮಾಡುತ್ತಾನೆಯೋ ಅವನು ಪರಮಗತಿಯನ್ನು ಹೊಂದುತ್ತಾನೆ. ಮಂತ್ರದ ಪ್ರತ್ಯೇಕ ಅಕ್ಷರವನ್ನು ನಾಲ್ಕು ಪಟ್ಟುಮಾಡಿ ಅಷ್ಟು ಲಕ್ಷ ಸಲ

---

೧೯. ಶ್ರೀ ಸಿದ್ಧಾಂತಶಿಖಾಮಣಿ, ೮.೨೭-೨೯.

೨೦. ಚಂದ್ರಜ್ಞಾನಾಗಮ, ಕ್ರಿ.ಪಾ., ೮.೬೧.

೨೧. ಅದೇ, ೮.೪೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಹಾರ ವಿಹಾರಗಳಲ್ಲಿ ಸಂಯಮವನ್ನಿಟ್ಟು ಆದರ ಪೂರ್ವಕ ಜಪಮಾಡಲು ಅದಕ್ಕೆ ಪುರಶ್ಚರಣವೆನ್ನುತ್ತಾರೆ.[೨೨] ಪಂಚಾಕ್ಷರ ಪ್ರತ್ಯೇಕ ಅಕ್ಷರವನ್ನು ನಾಲ್ಕು ಪಟ್ಟು ಮಾಡಲು ೨೦ ಆಗುವುದು. ಆದ್ದರಿಂದ ಈ ಪಂಚಾಕ್ಷರಿ ಮಂತ್ರದ ೨೦ ಲಕ್ಷ ಸಲ ಜಪದ ಅವಶ್ಯಕತೆ ಇದೆ.

ಪಂಚಾಂಗ ಮತ್ತು ದಶಾಂಗವೆಂದು ಪುರಶ್ಚರಣವು ಎರಡು ವಿಧ. ಜಪ, ಹೋಮ, ತರ್ಪಣ, ಅಭಿಷೇಕ ಮತ್ತು ಬ್ರಾಹ್ಮಣ ಭೋಜನ ಇವು ಪಂಚಾಂಗ ಪುರಶ್ಚರಣದ ಅಂಗಗಳು. ದಶಾಂಗ ಪುರಶ್ಚರಣದಲ್ಲಿ ಪೂರ್ವದ ಪಂಚಾಂಗಗಳ ಜೊತೆಯಲ್ಲಿ ಪಟಲ, ಪದ್ಧತಿ, ಕವಚ, ಸಹಸ್ರನಾಮ ಮತ್ತು ಸ್ತೋತ್ರಗಳನ್ನು ಕೂಡಿಸಬೇಕು. ಯಾವ ಮಂತ್ರವನ್ನು ಎಷ್ಟು ಸಲ ಜಪಮಾಡಬೇಕು ಎಂಬುದು ಶಾಸ್ತ್ರದಲ್ಲಿ ನಿರ್ಧಾರಿತವಾಗಿರುತ್ತದೆ. ಮಂತ್ರವನ್ನು ಎಷ್ಟು ಜಪಮಾಡಲಾಗುತ್ತದೆಯೋ ಅದರ ದಶಾಂಶದಷ್ಟು ಹೋಮ, ಅದರ ದಶಾಂಶದಷ್ಟು ತರ್ಪಣ, ಅದರ ದಶಾಂಶದಷ್ಟು ಅಭಿಷೇಕ (ಮಾರ್ಜನ- "ಓಂ ನಮಃ ಶಿವಾಯ ಶಿವಮಭಿಷಿಂಚಾಮಿ ನಮಃ" -ಎಂದು ಉಚ್ಚರಿಸುತ್ತಾ ನಿರ್ದಿಷ್ಟ ಸಂಖ್ಯೆಯಲ್ಲಿ ದೇವತೆಯ ಸ್ವರೂಪ ಧ್ಯಾನಿಸುತ್ತಾ ಮಾರ್ಜನ ಮಾಡಬೇಕು). ಅದರ ದಶಾಂಶದಷ್ಟು ಬ್ರಾಹ್ಮಣ (ಜಂಗಮ) ಭೋಜನ ಮಾಡಿಸಬೇಕು. ಇದರ ಅಭಿಪ್ರಾಯವಿಷ್ಟು- ಇಷ್ಟಮಂತ್ರದ ಪುರಶ್ಚರಣಕ್ಕಾಗಿ ಒಂದು ಲಕ್ಷ ಜಪ ಮಾಡುವಂತಿದ್ದರೆ ಅದರ ಪೂರ್ತಿಯ ನಂತರ ಆ ಮಂತ್ರದ ೧೦ ಸಾವಿರ ಆಹುತಿಯೊಡನೆ ಹೋಮ ಮಾಡಬೇಕಾಗುವುದು. ೧೦೦೦ ಸಲ ತರ್ಪಣ, ೧೦೦ ಸಲ ಮಾರ್ಜನ. ಕೊನೆಯಲ್ಲಿ ೧೦ ಬ್ರಾಹ್ಮಣ (ಜಂಗಮ)ರಿಗೆ ಭೋಜನ ಮಾಡಿಸಿದ ನಂತರ ಈ ವಿಧಿಯು ಸಮಾಪ್ತವಾಗುತ್ತದೆ. ಹೋಮ, ತರ್ಪಣ, ಮಾರ್ಜನ ಅದೇ ಮಂತ್ರೋಚ್ಚಾರ ಮಾಡುತ್ತಾ ಮತ್ತು ಬ್ರಾಹ್ಮಣ (ಜಂಗಮ) ಭೋಜನವನ್ನು ಕೂಡ ಅವರೆಲ್ಲಾ ಮಂತ್ರ ಸ್ವರೂಪರೆಂಬ ಅಭಿಪ್ರಾಯದಿಂದ ಮಾಡಬೇಕೆಂಬುದು ನೆನಪಿನಲ್ಲಿಡಬೇಕಾದ ಸಂಗತಿಯಾಗಿದೆ.

ಜಪದಲ್ಲಿ ಬೆರಳು ಮುಂತಾದುವುಗಳ ಉಪಯೋಗ ಮತ್ತು ಅದರ ಫಲ:

ಜಪ ಮಾಡುವಾಗ ಸಂಖ್ಯೆಯನ್ನು ಗುರುತಿಸಲು ಬೆರಳುಗಳು, ಬೆರಳಿನಲ್ಲಿನ ಗೆರೆಗಳು, ಪುತ್ರಜೀವ ಮಾಲೆ, ಶಂಖಮಣಿ ಮಾಲೆ, ಹವಳಗಳ ಮಾಲೆ, ಸ್ಫಟಿಕ ಮಾಲೆ, ಮುತ್ತಿನ ಮಾಲೆ, ಚಿನ್ನದ ಗುಂಡುಗಳ ಮಾಲೆ, ಕಮಲಗೆಡ್ಡೆಗಳ ಮಾಲೆ, ದರ್ಭೆಯ ಗಂಟುಗಳು, ರುದ್ರಾಕ್ಷ ಮಾಲೆ ಇವುಗಳನ್ನು ಉಪಯೋಗಿಸಬಹುದು ಎಂದು ಸೂಚಿಸುವ ಚಂದ್ರಜ್ಞಾನಾಗಮವು ಅವುಗಳನ್ನು ಉಪಯೋಗಿಸಿ ಮಾಡುವ ಜಪದ ಫಲವನ್ನು ಹೇಳುತ್ತದೆ:

> ಅಂಗುಲ್ಯಾ ಜಪಸಂಖ್ಯಾನಾದೇಕಮೇಕಮುದಾಹೃತಮ್।
> ರೇಖಯಾಷ್ಟಗುಣಂ ವಿದ್ಯಾತ್ ಪುತ್ರಜೀವೈರ್ದಶಾಧಿಕಮ್॥

---

೨೨. ಅದೇ, ೮.೪೯-೫೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶತಂ ಸ್ಯಾಚ್ಛಂಖಮಣಿಭಿಃ ಪ್ರವಾಲೈಸ್ತು ಸಹಸ್ರಕಮ್।
ಸ್ಫಟಿಕೈರ್ದಶಸಹಸ್ರಂ ಮೌಕ್ತಿಕೈರ್ಲಕ್ಷಮುಚ್ಯತೇ॥
ಪದ್ಮಾಕ್ಷೈರ್ದಶಲಕ್ಷಂ ತು ಸೌವರ್ಣೈಃ ಕೋಟಿರುಚ್ಯತೇ।
ಕುಶಗ್ರಂಥ್ಯಾ ಚ ರುದ್ರಾಕ್ಷೈರನಂತಫಲಮುಚ್ಯತೇ॥[೨೬]

"ಬೆರಳುಗಳಿಂದ ಜಪ ಮಾಡಿದರೆ ಬೆರಳಿನ ಸಂಖ್ಯೆಗೆ ಅನುಗುಣವಾಗಿ ಫಲ ದೊರೆಯುತ್ತದೆ. ಬೆರಳಿನ ಗಣ್ಣಿನ ರೇಖೆಯನ್ನು ಉಪಯೋಗಿಸಿ ಜಪ ಮಾಡಿದರೆ ಎಂಟರಷ್ಟು, ಪುತ್ರಜೀವ ಮಾಲೆಯಿಂದ ಹತ್ತರಷ್ಟಕ್ಕಿಂತ ಹೆಚ್ಚು, ಶಂಖಮಣಿಗಳಿಂದ ನೂರರಷ್ಟು, ಹವಳಗಳಿಂದ ಸಾವಿರದಷ್ಟು, ಸ್ಫಟಿಕ ಮಣಿಗಳಿಂದ ದಶಸಹಸ್ರದಷ್ಟು, ಮುತ್ತುಗಳಿಂದ ಲಕ್ಷಪಟ್ಟು, ಕಮಲದ ಗೆಡ್ಡೆಗಳಿಂದ ದಶಲಕ್ಷ ಪಟ್ಟು, ಚಿನ್ನದ ಗುಂಡುಗಳಿಂದ ಕೋಟಿಪಟ್ಟು, ದರ್ಭೆಯ ಗಂಟುಗಳಿಂದ ಮತ್ತು ರುದ್ರಾಕ್ಷಗಳಿಂದ ಅನಂತವಾದ ಅಧಿಕಾಧಿಕ ಫಲವು ದೊರೆಯುತ್ತದೆ." ರುದ್ರಾಕ್ಷ ಮಾಲೆಯಿಂದ ಜಪ ಮಾಡುವುದು ಅತ್ಯಂತ ಫಲಪ್ರದವೆಂಬುದು ಇದರ ಮಥಿತಾರ್ಥ. ಜಪಮಾಲೆಯಲ್ಲಿರುವ ರುದ್ರಾಕ್ಷಗಳ ಸಂಖ್ಯೆಗೆ ಅನುಗುಣವಾದ ಫಲವೂ ಇದೆ:

ತ್ರಿಂಶದಕ್ಷೈಃ ಕೃತಾ ಮಾಲಾ ಧನದಾ ಜಪಕರ್ಮಣಿ।
ಸಪ್ತವಿಂಶತಿಸಂಖ್ಯಾಕೈರಕ್ಷೈಃ ಪುಷ್ಟಿಪ್ರದಾ ಭವೇತ್॥
ಪಂಚವಿಂಶತಿಸಂಖ್ಯಾಕೈಃ ಕೃತಾ ಮುಕ್ತಿಂ ಪ್ರಯಚ್ಛತಿ।
ಅಕ್ಷೈಸ್ತು ಪಂಚದಶಭಿರಭಿಚಾರಫಲಪ್ರದಾ॥[೨೭]

"ಜಪ ಮಾಡುವುದಕ್ಕಾಗಿ ಉಪಯೋಗಿಸುವ ರುದ್ರಾಕ್ಷ ಮಾಲೆಯಲ್ಲಿ ಮೂವತ್ತು ರುದ್ರಾಕ್ಷಗಳಿದ್ದರೆ ಅದು ಧನವನ್ನು ಕೊಡುತ್ತದೆ. ಇಪ್ಪತ್ತೇಳು ಇದ್ದರೆ ಅದು ಪುಷ್ಟಿಯನ್ನು ಕೊಡುತ್ತದೆ. ಇಪ್ಪತ್ತೈದು ರುದ್ರಾಕ್ಷಗಳಿದ್ದರೆ ಅದು ಮುಕ್ತಿಯನ್ನು ಕೊಡುತ್ತದೆ. ಹದಿನೈದು ರುದ್ರಾಕ್ಷಗಳಿದ್ದರೆ ಅದು ಅಭಿಚಾರದ ಫಲವನ್ನು ನೀಡುತ್ತದೆ." ಮತ್ತೆ ಜಪಮಾಲೆಯನ್ನು ಉಪಯೋಗಿಸಿಕೊಂಡು ಜಪಮಾಡುವಾಗ ಯಾವ ಯಾವ ಬೆರಳಿನಿಂದ ಎಣಿಕೆ ಮಾಡಿದರೆ ಯಾವ ಯಾವ ಫಲ ಎಂಬುದೂ ನಿರೂಪಿತವಾಗಿದೆ:

ಅಂಗುಷ್ಠಂ ಮೋಕ್ಷದಂ ವಿದ್ಯಾತ್ ತರ್ಜನೀ ಶತ್ರುನಾಶಿನೀ।
ಮಧ್ಯಮಾ ಧನದಾ ಶಾಂತಿಂ ಕರೋತ್ಯೇನ ಹ್ಯನಾಮಿಕಾ॥
ಕನಿಷ್ಠಾಽಽಕರ್ಷಣೇ ಪ್ರೋಕ್ತಾ ಜಪಕರ್ಮಣಿ ಗೀಷ್ಯತೇ॥[೨೮]

"ಹೆಬ್ಬೆರಳಿನಿಂದ ಎಣಿಕೆ ಮಾಡಿದರೆ ಮೋಕ್ಷ ಪ್ರಾಪ್ತಿ; ತರ್ಜನೀ ಬೆರಳಿನಿಂದಾದರೆ ಶತ್ರುನಾಶ; ಮಧ್ಯದ ಬೆರಳಿನಿಂದಾದರೆ ಧನಪ್ರಾಪ್ತಿ; ಅನಾಮಿಕಾ ಬೆರಳಿನಿಂದಾದರೆ ಶಾಂತಿ,

---

೨೬. ಅದೇ, ೮.೬೫-೭೧.

೨೭. ಅದೇ, ೮.೬೮-೬೯.

೨೮. ಅದೇ, ೮.೭೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕನಿಷ್ಠ ಬೆರಳಿನಿಂದಾದರೆ ಆಕರ್ಷಣೆ, ಹೀಗೆ ಫಲಗಳು ದೊರೆಯುತ್ತವೆ." ಹೀಗೆ ಮಂತ್ರಜಪದ ವಿಷಯದಲ್ಲಿ ವಿವಿಧ ಮಾರ್ಮಿಕ ಸೂಚನೆಗಳನ್ನು ನೀಡಿದ ಚಂದ್ರಜ್ಞಾನಾಗಮವು ಜಪಕಾಲದಲ್ಲಿ ವರ್ಜನೀಯವಾದ ವಿಷಯಗಳನ್ನೂ ತಿಳಿಸುತ್ತದೆ.

ಜಪಕಾಲದಲ್ಲಿ ವರ್ಜನೀಯವಾದವುಗಳು:

> ಉಷ್ಣೀಷೀ ಕಂಚುಕೀ ನಗ್ನೋ ಮುಕ್ತಕೇಶೋ ಗಲಾವೃತಃ।
> ಅಪವಿತ್ರಕರೋಽಶುದ್ಧೋ ವಿಲಪನ್ನ ಜಪೇತ್ ಕ್ವಚಿತ್॥
> ಕ್ರೋಧಂ ಮದಂ ಕ್ಷುಧಾಂ ತಂದ್ರಾಂ ನಿಷ್ಠೀವನವಿಜೃಂಭಣೇ।
> ದರ್ಶನಂ ಚ ಶ್ವನೀಚಾನಾಂ ವರ್ಜಯೇಜ್ಜಪಕರ್ಮಣಿ॥[೨೬]

"ಪೇಟವನ್ನು ಧರಿಸಿದವನು, ಅಂಗಿ ಮುಂತಾದ ಹೊಲಿದ ಬಟ್ಟೆಗಳನ್ನು ಧರಿಸಿದವನು, ನಗ್ನನು, ಕೂದಲನ್ನು ಹರಡಿಕೊಂಡವನು, ಕಂಠಕ್ಕೆ ವಸ್ತ್ರವನ್ನು ಸುತ್ತಿಕೊಂಡವನು, ಅಶುದ್ಧವಾದ ಕೈಯ್ಯುಳ್ಳವನು, ಅಶುದ್ಧನು, ಗೋಳಾಡುವವನು ಎಲ್ಲಿಯೂ ಜಪಮಾಡಬಾರದು. ಕೋಪ, ಮದ, ಹಸಿವು, ಆಲಸ್ಯ, ಉಗುಳುವುದು, ಆಕಳಿಸುವುದು, ನಾಯಿ-ನೀಚರ ದರ್ಶನ, ಇವುಗಳನ್ನು ಜಪಕಾಲದಲ್ಲಿ ವರ್ಜಿಸಬೇಕು." ಹೀಗೆ ಜಪಕಾಲದಲ್ಲಿ ಪೇಟ, ಹೊಲಿದ ಉಡುಪುಗಳು, ನಗ್ನತೆ ಮುಂತಾದವುಗಳನ್ನು ವರ್ಜಿಸಬೇಕು. ಕ್ರೋಧ ಮುಂತಾದವು ಭಕ್ತಿಗೆ ಹಾನಿಕಾರಕಗಳಾದ್ದರಿಂದ ಅವುಗಳನ್ನೂ ಜಪಕಾಲದಲ್ಲಿ ಬಿಡಬೇಕು. ಹಾಗೆ ನಿಯಮವಿದ್ದರೂ ಅಕಸ್ಮಾತ್ತಾಗಿ ವರ್ಜನೀಯವಾದುದು ಘಟಿಸಿದರೆ ಏನು ಮಾಡಬೇಕು ಎಂಬುದನ್ನೂ ಪ್ರಸ್ತುತ ಆಗಮವು ಹೇಳುತ್ತದೆ:

> ಆಚಾಮೇತ್ ಸಂಭವೇ ತೇಷಾಂ ಸ್ಮರೇತ್ ಸಾಂಬಂ ತ್ರಿಯಂಬಕಮ್।
> ಜ್ಯೋತೀಂಷಿ ಚ ಪ್ರಪಶ್ಯೇದ್ವಾ ಕುರ್ಯಾದ್ವಾ ಪ್ರಾಣಸಂಯಮಮ್॥[೨೭]

"ಆ ರೀತಿಯ ವರ್ಜನೀಯವಾದವುಗಳು ಘಟಿಸಿದರೆ ಆಚಮನ ಮಾಡಬೇಕು, ಶಕ್ತಿಸಮೇತನಾದ ಶಂಭುವನ್ನು ಸ್ಮರಿಸಬೇಕು, ಅಥವಾ ಸೂರ್ಯ, ಚಂದ್ರ, ನಕ್ಷತ್ರ ಮುಂತಾದ ತೇಜಸ್ಸಿನ ನಿಧಿಗಳನ್ನು ನೋಡಬೇಕು, ಪ್ರಾಣಾಯಾಮವನ್ನಾದರೂ ಮಾಡಬೇಕು." ಇವುಗಳಲ್ಲಿ ಯಾವುದನ್ನಾದರೂ ಆಚರಿಸಿದರೆ ದೋಷವು ಪರಿಹಾರವಾಗುತ್ತದೆ ಎಂದು ಇದರ ಆಶಯ.

ಇನ್ನೂ ಕೆಲವು ನಿಷೇಧಗಳು:

> ಆಶಾನಶ್ಚ ಶಯಾನಶ್ಚ ಗಚ್ಛನ್ನುತ್ಥಿತ ಏವ ವಾ।
> ರಥ್ಯಾಯಾಮಶಿವೇ ಸ್ಥಾನೇ ನ ಜಪೇತ್ತಿಮಿರಾಂತರೇ॥
> ಪ್ರಸಾರ್ಯ ನ ಜಪೇತ್ ಪಾದೌ ಕುಕ್ಕುಟಾಸನ ಏವ ವಾ।

---

೨೬. ಅದೇ, ೮.೭೭-೭೮

೨೭. ಅದೇ, ೮.೭೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾನಶಯ್ಯಾಧಿರೂಢೋ ವಾ ಚಿಂತಾವ್ಯಾಕುಲಿತೋಽಪಿ ವಾ॥
ಸದಾಚಾರೋ ಜಪನ್ ಜುಹ್ವನ್ ಧ್ಯಾಯನ್ ಭದ್ರಂ ಸಮಶ್ನುತೇ॥[೨೮]

"ಊಟ ಮಾಡುತ್ತಾ, ಮಲಗಿಕೊಂಡು, ನಡೆಯುತ್ತಾ, ನಿಂತುಕೊಂಡು, ರಸ್ತೆಯಲ್ಲಿ, ಅಶುಭ ಸ್ಥಾನದಲ್ಲಿ, ಕತ್ತಲಿನಲ್ಲಿ ಜಪ ಮಾಡಬಾರದು. ಕಾಲುಗಳನ್ನು ಚಾಚಿಕೊಂಡು, ಕುಕ್ಕುಟಾಸನದಲ್ಲಿ ಕುಳಿತು, ವಾಹನ ಅಥವಾ ಹಾಸಿಗೆಯನ್ನು ಹತ್ತಿ, ಚಿಂತಾಕ್ರಾಂತನಾಗಿ ಜಪವನ್ನು ಮಾಡಬಾರದು. ಉತ್ತಮ ಆಚಾರವನ್ನು ಹೊಂದಿದವನು ಜಪಿಸಿ, ಹೋಮಮಾಡಿ, ಧ್ಯಾನ ಮಾಡಿ ಶ್ರೇಯಸ್ಸನ್ನು ಹೊಂದುತ್ತಾನೆ."

ಹೀಗೆ ಚಂದ್ರಜ್ಞಾನಾಗಮವು ಮಂತ್ರಜಪದ ವಿಷಯದಲ್ಲಿ ಅತ್ಯಂತ ಪ್ರಾಯೋಗಿಕವಾದ ವಿಷಯಗಳನ್ನು ನಿರೂಪಿಸಿದೆ. ಇದು ಅತ್ಯಂತ ಬೋಧಪ್ರದವಾಗಿದ್ದು ಮಂತ್ರಜಪವನ್ನು ಕ್ರಮವರಿತು ಮಾಡಲು ಸಹಾಯಕವಾಗಿದೆ. ಜಪ ಮಾಡುವಾಗ ಆಗಬಹುದಾದ ಚಿಕ್ಕ ಚಿಕ್ಕ ಘಟನೆಗಳೆಡೆಗೂ ಗಮನ ಸೆಳೆದು ಅವುಗಳು ಆಗದಂತೆ ಎಚ್ಚರವಹಿಸಲು ಈ ಎಲ್ಲಾ ನಿರೂಪಣೆ ಅತ್ಯಂತ ಉಪಯುಕ್ತವಾಗಿದೆ. ಅಂತಿಮವಾಗಿ ಪ್ರಸ್ತುತ ಆಗಮವು ಪಂಚಾಕ್ಷರಮಂತ್ರದ ಮಹಿಮೆಯನ್ನು ವರ್ಣಿಸುತ್ತಾ ಅದರಲ್ಲಿ ಶ್ರದ್ಧೆಯನ್ನು ಬೆಳೆಸಲು ಸಹಾಯಕವಾಗಿದೆ.

ಪಂಚಾಕ್ಷರ ಮಂತ್ರದ ಮಹಿಮೆ:

ಸದಾಚಾರಾದಿಗಳು ಇಲ್ಲದವನು ಜಪಮಾಡಬಾರದು ಎಂದು ಹೇಳಿದ್ದರೂ ಅದು ವ್ಯಕ್ತಿಗತವಾದ ಎಚ್ಚರಿಕೆಗಾಗಿ ಹೇಳಿರುವ ಮಾತು. ಆದರೆ ಒಮ್ಮೆ ಅನಾಚಾರಿಯಾಗಿದ್ದು ಪಂಚಾಕ್ಷರ ಮಂತ್ರದ ಜಪವನ್ನು ಮಾಡುವ ಸಂಕಲ್ಪವನ್ನು ತೊಟ್ಟು ಜಪಮಾಡಿದರೆ ಅದು ಅಂಥವನಿಗೆ ತಾರಕವಾಗುತ್ತದೆ:

ಸದಾಚಾರವಿಹೀನಸ್ಯ ಪತಿತಸ್ಯಾಂತ್ಯಜಸ್ಯ ವಾ।
ಪಂಚಾಕ್ಷರಾತ್ ಪರಂ ನಾಸ್ತಿ ಪರಿತ್ರಾಣಂ ಕಲೌ ಯುಗೇ॥
ಗಚ್ಛತಸ್ತಿಷ್ಠತೋ ವಾಪಿ ಸ್ವೇಚ್ಛಯಾ ಕರ್ಮ ಕುರ್ವತಃ।
ಅಶುಚೇರ್ವಾ ಶುಚೇರ್ವಾಪಿ ಮಂತ್ರೋಽಯಂ ನ ಚ ನಿಷ್ಫಲಃ॥
ಅನಾಚಾರವತಾಂ ಪುಂಸಾಮವಿಶುದ್ಧಷಡಧ್ವನಾಮ್।
ಅನಾದಿಷ್ಟೋಽಪಿ ಗುರುಣಾ ಮಂತ್ರೋಽಯಂ ನ ಚ ನಿಷ್ಫಲಃ॥
ಅಂತ್ಯಜಸ್ಯಾಪಿ ಮೂಢಸ್ಯ ಮೂರ್ಖಸ್ಯ ಪತಿತಸ್ಯ ಚ।
ನಿರ್ಮರ್ಯಾದಸ್ಯ ನೀಚಸ್ಯ ಮಂತ್ರೋಽಯಂ ನ ಚ ನಿಷ್ಫಲಃ॥[೨೯]

"ಸದಾಚಾರವಿಲ್ಲದವನು, ಪತಿತನು, ಜಾತಿಭ್ರಷ್ಟನು, ಮುಂತಾದವರಿಗೆ ಪಂಚಾಕ್ಷರ ಮಂತ್ರದಷ್ಟು ತಾರಕವಾದ ಮಂತ್ರ ಇನ್ನೊಂದಿಲ್ಲ. ನಡೆಯುತ್ತಾ, ನಿಂತುಕೊಂಡು,

---

೨೮. ಅದೇ, ೮.೮೦-೮೧.

೨೯. ಅದೇ, ೮.೮೩-೮೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವೇಚ್ಛೆಯಿಂದ ಸಂಚರಿಸುತ್ತಾ, ಅಶುಚಿಯಾಗಿರುವಾಗ ಜಪಿಸಿದರೂ ಈ ಮಂತ್ರವು ನಿಷ್ಫಲವಾಗದು. ಅನಾಚಾರಿಗಳಿಗೆ, ಷಡಧ್ವಶುದ್ಧಿಯಿಲ್ಲದವರಿಗೆ, ಗುರುವಿನಿಂದ ಉಪದೇಶ ಪಡೆಯದಿರುವವರಿಗೆ, ಹೀಗಿರುವ ಯಾರಿಗೂ ಈ ಮಂತ್ರವು ನಿಷ್ಫಲವಾಗದು. ಅಂತ್ಯಜನಾಗಲಿ, ಮೂರ್ಖನಾಗಲಿ, ಪತಿತನಾಗಲಿ, ಮರ್ಯಾದೆಯಿಲ್ಲದವನಾಗಲಿ, ನೀಚನಾಗಲಿ, ಯಾರಿಗೂ ಈ ಮಂತ್ರವು ನಿಷ್ಫಲನಾಗದು." ಹೀಗಿದೆ ಈ ಮಂತ್ರದ ಮಹಿಮೆ. ಮೇಲೆ ಹೇಳಿದಂಥವರಿಗೂ ಅದು ನಿಷ್ಫಲವಲ್ಲವೆಂದ ಮೇಲೆ ಸದಾಚಾರಸಂಪನ್ನರಿಗೆ, ಶುಚಿಯಾದವರಿಗೆ, ಗುರುವಿನಿಂದ ಉಪದೇಶ ಪಡೆದವರಿಗೆ ಈ ಮಂತ್ರವು ಅತ್ಯಂತ ಶ್ರೇಷ್ಠ ಫಲವನ್ನು ನೀಡುತ್ತದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ ಎಂಬುದು ಪ್ರಸ್ತುತ ಆಗಮದ ಆಶಯ. ಈ ಆಶಯಕ್ಕೆ ಇನ್ನೊಂದು ರೂಪ ಕೊಟ್ಟು ಅಂತಿಮವಾಗಿ ಹೇಳುತ್ತದೆ:

> ಮಂತ್ರಾಂತರೇಷು ಸಿದ್ಧೇಷು ಮಂತ್ರ ಏಷ ನ ಸಿದ್ಧ್ಯತಿ।
> ಅಸ್ಮಿನ್ ಸಿದ್ಧೇ ಮಹಾಮಂತ್ರೇ ತೇಽಪಿ ಸಿದ್ಧಾ ಭವಂತಿ ಹಿ॥[೨೦]

"ಬೇರೆ ಮಂತ್ರಗಳು ಸಿದ್ಧಿಸಿದರೆ ಈ ಮಂತ್ರವು ಸಿದ್ಧಿಸುವುದಿಲ್ಲ. ಆದರೆ ಈ ಮಹಾಮಂತ್ರವೊಂದು ಸಿದ್ಧಿಸಿದರೆ ಮಿಕ್ಕೆಲ್ಲಾ ಮಂತ್ರಗಳು ಸಿದ್ಧಿಸಿದಂತೆಯೇ." ಯಾರಿಗೆ ಇದು ಸಿದ್ಧಿಸುತ್ತದೆ ಎಂಬುದನ್ನು ಪ್ರಸ್ತುತ ಆಗಮವು ಹೀಗೆ ತಿಳಿಸುತ್ತದೆ:

> ಸರ್ವಾವಸ್ಥಾಂ ಗತಸ್ಯಾಪಿ ಮಯಿ ಭಕ್ತಿಮತಃ ಸದಾ।
> ಸಿದ್ಧ್ಯತ್ಯೇಷ ನ ಸಂದೇಹೋ ನಾಪರಸ್ಯ ತು ಕಸ್ಯಚಿತ್॥[೨೧]

"ಎಲ್ಲಾ ಸ್ಥಿತಿಗಳಲ್ಲಿ ನನ್ನಲ್ಲಿ (ಶಿವನಲ್ಲಿ) ಭಕ್ತಿಯುಳ್ಳ ವ್ಯಕ್ತಿಗೆ ಈ ಮಹಾಮಂತ್ರವು ಸದಾ ಸಿದ್ಧಿಸುತ್ತದೆ. ಈ ಬಗ್ಗೆ ಸಂದೇಹವಿಲ್ಲ. ಬೇರೆಯವರಿಗೆ ಯಾರಿಗೂ ಅದು ಸಿದ್ಧಿಸದು."

ಇತಿ ಶಮ್

೦

---

೨೦. ಅದೇ, ೮.೯೨.

೨೧. ಅದೇ, ೮.೮೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೮. ಪಾದೋದಕ ಮತ್ತು ಪ್ರಸಾದ

-ಡಾ|| ಆರ್.ಎಸ್. ಸದಾಶಿವಯ್ಯ

ವೀರಶೈವ ಧರ್ಮದ ಮೂಲಪುರುಷರು ಅಷ್ಟಾವರಣಗಳಲ್ಲಿ ಪಾದೋದಕ, ಪ್ರಸಾದಗಳನ್ನು ಸೇರಿಸಿರುವುದರಲ್ಲಿ ಸಾಮಾಜಿಕ ಮತ್ತು ತಾತ್ವಿಕ ಉದ್ದೇಶವಿರುವಂತೆ ತೋರುತ್ತದೆ. ತಾವು ಬೋಧಿಸಿದುದು ಆಚರಣೆಯಲ್ಲಿ ಬರಬೇಕೆಂದು ಅವರು ಬಯಸಿದ್ದರು. ಮಾನವನಲ್ಲಿರುವ ದೇವತ್ವವನ್ನು ಗುರುತಿಸುವುದು ಮತ್ತು ಆ ಸಹಜ ಅರಿವಿನ ಮೂಲಕ ಮಾನವ ದೇವತ್ವಕ್ಕೇರಲು ಸಾಧ್ಯವೆಂಬುದನ್ನು ತೋರಿಸಿ ಕೊಡುವುದು, ಅವರ ತತ್ವಜ್ಞಾನದ ಮೂಲ ಗುರಿಯಾಗಿತ್ತು.

ಪರಾತ್ಪರ ವಸ್ತುವಿನೊಡನೆ ಒಂದಾಗುವಷ್ಟು ಎತ್ತರಕ್ಕೆ ಮಾನವ ಏರಬಹುದು. ಅಂತಹ ಎತ್ತರಕ್ಕೆ ಏರಿದ ಸಾಧಕನ ಆ ಅವಸ್ಥೆಯನ್ನು 'ಐಕ್ಯಸ್ಥಲ' ಎಂದು ನಿರ್ದೇಶಿಸಲಾಗಿದೆ. ಪಾದೋದಕದ ಪರಿಕಲ್ಪನೆಯನ್ನು ಪ್ರಾಯಃ ದೇವ ಮತ್ತು ಮಾನವನಲ್ಲಿರುವ ಏಕತೆಯನ್ನು ಸೂಚಿಸಲು ಮಾಡಿದ ಪ್ರಯತ್ನವನ್ನು ಕಾಣಬಹುದಾಗಿದೆ. ಪ್ರಕೃತ ಕೃಷ್ಣಾರ್ಜುನ ಸಂವಾದ ರೂಪದಲ್ಲಿರುವ ಭಗವದ್ಗೀತೆಯಂತೆ ರೇಣುಕಾಗಸ್ತ್ಯ ಸಂವಾದರೂಪದಲ್ಲಿರುವ ಸಿದ್ಧಾಂತಶಿಖಾಮಣಿಯಂತೆ ಬೃಹಸ್ಪತಿ ಅನಂತರುದ್ರ ಸಂವಾದರೂಪದಲ್ಲಿರುವ ಚಂದ್ರಜ್ಞಾನಾಗಮದಲ್ಲಿ ನಿರೂಪಿಸಿರುವ ಪಾದೋದಕ-ಪ್ರಸಾದ ಸ್ವರೂಪವನ್ನು ಪ್ರಸ್ತುತಪಡಿಸುವುದು ಈ ಲೇಖನದ ಉದ್ದೇಶ.

೧. ಪಾದೋದಕ:

ಪಾದೋದಕದ ಪದಶಃ ಅರ್ಥ ಗುರುವಿನ ಪಾದದ ನೀರು ಎಂದು. ಆದುದರಿಂದ ಅದು 'ಪವಿತ್ರವಾದ ನೀರು'. ಅತ್ಯಂತ ಪರಿಶುದ್ಧ ಮತ್ತು ಪವಿತ್ರ ಜೀವನವನ್ನು ಸಾಗಿಸುವ ಗುರು ಮತ್ತು ಜಂಗಮರ ಚಾರಿತ್ರ್ಯಶುದ್ಧಿಯ ಬಗ್ಗೆ ವೀರಶೈವರಿಗೆ ಅಪಾರ ನಂಬಿಕೆ. ಅಂತಹ ಸದ್ಧರ್ಮಶೀಲ ಪುಣ್ಯಪುರುಷರನ್ನೂ ಪವಿತ್ರಾತ್ಮರನ್ನೂ ಸಂಪರ್ಕಿಸಿದ ವಸ್ತುಗಳೆಲ್ಲವೂ ಪವಿತ್ರವಾಗುತ್ತವೆಂಬ ಭಾವನೆ ಸರ್ವತ್ರ ಇದೆ. ವೀರಶೈವರಿಗೆ ಗುರು, ಲಿಂಗ, ಜಂಗಮರು ಅತ್ಯಂತ ಪೂಜನೀಯರಾಗಿರುವುದರಿಂದ ಅವರ ಸ್ಪರ್ಶದಿಂದ ಪವಿತ್ರವಾದ ವಸ್ತುಗಳನ್ನು ಸ್ವೀಕರಿಸಬೇಕೆಂಬ ಭಾವನೆ ಇರುವುದು ಸಹಜ. ಅಂತಹ ವಸ್ತುಗಳಲ್ಲಿ 'ಪಾದೋದಕ' ಒಂದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚಂದ್ರಜ್ಞಾನಾಗಮ ಗುರು-ಲಿಂಗ-ಜಂಗಮರಿಗೆ ಸಂಬಂಧಿಸಿದ ಪಾದತೀರ್ಥದ ತ್ರೈವಿಧ್ಯವನ್ನು ತಿಳಿಸಿ, ಕ್ರಮವಾಗಿ ದೀಕ್ಷಾಪಾದೋದಕ, ಶಿಕ್ಷಾಪಾದೋದಕ ಮತ್ತು ಜ್ಞಾನಪಾದೋದಕವೆಂದು ಹೆಸರಿಸಿದೆ:

ಪಾದತೀರ್ಥಂ ತ್ರಿಧಾ ಶಂಭೋರ್ಗುರುಜಂಗಮಯೋರಪಿ।
ದೀಕ್ಷಾ ಶಿಕ್ಷಾ ಜ್ಞಾನಮಿತಿ ತ್ರಿಸಂಜ್ಞಂ ತದ್ಭವತ್ಯಹೋ॥[೧]

ಭವಬಂಧನದಿಂದ ಮುಕ್ತಿಪಡೆಯಲು ಬಯಸುವವರು ಗುರುವಿನ, ಇಷ್ಟಲಿಂಗದ, ವಿಶೇಷವಾಗಿ ಜಂಗಮನ ಪಾದೋದಕವನ್ನು ಸದಾ ಸೇವಿಸಬೇಕು:

ಪಾದತೀರ್ಥಂ ಸದಾ ಪೇಯಂ ಭವಬಂಧಮುಮುಕ್ಷುಭಿಃ।
ಗುರೋರಪೀಷ್ಟಲಿಂಗಸ್ಯ ಚರಸ್ಯಾಪಿ ವಿಶೇಷತಃ॥[೨]

ಸಾಧಕನಿಗೆ ಏಕಕಾಲದಲ್ಲಿ ಗುರು-ಜಂಗಮರು ದೊರೆಯದೆ ಪಾದಾಂಬು ಸ್ವೀಕಾರಕ್ಕೆ ತೊಂದರೆಯಾಗಬಹುದು. ಅದನ್ನು ಗಮನಿಸಿ, ಗುರುಜಂಗಮರು ದೊರೆಯದೆ ಇದ್ದಾಗ ಇಷ್ಟಲಿಂಗಪಾದೋದಕವನ್ನು ಗುರುಜಂಗಮರ ಪಾದೋದಕವೆಂದು, ಜಂಗಮ ದೊರೆಯದೆ ಕೇವಲ ಗುರು ದೊರೆತಾಗ ಗುರುಪಾದೋದಕವನ್ನು ಗುರುಜಂಗಮರ ಪಾದೋದಕವೆಂದು, ಗುರು ದೊರಕದೆ ಕೇವಲ ಜಂಗಮ ದೊರೆತಾಗ ಜಂಗಮಪಾದೋದಕವನ್ನು ಗುರುಜಂಗಮರ ಪಾದೋದಕವೆಂದು ಭಾವಿಸಿ ಸ್ವೀಕರಿಸಬೇಕೆಂದು ಕಳಕಳಿಯಿಂದ ಸೂಚಿಸುತ್ತದೆ ಚಂದ್ರಜ್ಞಾನಾಗಮ.[೩]

ಶಿವಸ್ವರೂಪನಾದ ಗುರುವಿಗೆ ಪತ್ರಪುಷ್ಪಾದಿಗಳನ್ನು ಸಮರ್ಪಿಸಿ, ಅವನ ಚರಣೋದಕವನ್ನು ಪರಮಪಾವನ ಪಂಚಾಕ್ಷರೀಮಂತ್ರಸಹಿತವಾಗಿ 'ಶತಧಾರಾ' ಮಂತ್ರದಿಂದ ಸಂಗ್ರಹಿಸಬೇಕು.[೪] ಆ ಗುರುಪಾದೋದಕವನ್ನು ಮಸ್ತಕದಲ್ಲಿ ಧಾರಣ ಮಾಡುವುದರಿಂದ ಮಹಾಫಲ ಪ್ರಾಪ್ತವಾಗುತ್ತದೆ. 'ಋತಂ ಸತ್ಯಂ' ಮಂತ್ರದೊಡನೆ ಅದನ್ನು ಪಾನ ಮಾಡಿದರೆ ಅನಂತಫಲ ಪ್ರಾಪ್ತವಾಗುತ್ತದೆ.[೫] ಇಷ್ಟಕರವೂ ಅನಿಷ್ಟಪರಿಹಾರಕವೂ ಶುಭಕರವೂ ಆದ ಇಷ್ಟಲಿಂಗದ ಪಾದೋದಕವು ಅಕಾಲಮೃತ್ಯುವನ್ನು ನಾಶಮಾಡುತ್ತದೆ, ಸರ್ವವಿಧವಾದ ರೋಗಗಳನ್ನು ವಿನಾಶಗೊಳಿಸುತ್ತದೆ, ಎಲ್ಲ ಪಾಪಗಳನ್ನು ಪರಿಹರಿಸುತ್ತದೆ, ಮಂಗಳಗಳಿಗೆ ಮಂಗಳವಾಗಿದೆ, ಎಲ್ಲ ಪಾವನ ವಸ್ತುಗಳನ್ನು

---

೧. ಚಂದ್ರಜ್ಞಾನಾಗಮ, ಕ್ರಿಯಾಪಾದ, ೫.೫.

೨. ಅದೇ, ಕ್ರಿಯಾಪಾದ, ೫.೬.

೩. ಅದೇ, ಕ್ರಿಯಾಪಾದ, ೫.೭-೮.

೪. ವಸೋಃ ಪವಿತ್ರಮಸಿ ಶತಧಾರಂ ವಸೋಃ ಪವಿತ್ರಮಸಿ ಶತಧಾರಮ್॥ ದೇವಸ್ತ್ವಾ ಸವಿತಾ ಪುನಾತು ವಸೋಃ ಪವಿತ್ರೇಣ ಶತಧಾರೇಣ ಸುಪ್ವಾ ಕಾಮಧುಕ್ಷಃ॥ (ಶುಕ್ಲಯಜುರ್ವೇದ, ಮಾಧ್ಯಂದಿನ ಸಂಹಿತಾ, ೧.೨).

೫. ಋತಂ ಸತ್ಯಂ ಪರಬ್ರಹ್ಮ ಪುರುಷಂ ಕೃಷ್ಣಪಿಂಗಲಮ್। ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ॥ (ತೈತ್ತಿರೀಯ ಆರಣ್ಯಕ, ೧೦.೧೩.೧).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪವಿತ್ರಗೊಳಿಸುತ್ತದೆ, ದುಷ್ಟಗ್ರಹಗಳನ್ನು ಉಪಶಮನಗೊಳಿಸುತ್ತದೆ, ಇಷ್ಟಸಿದ್ಧಿಯನ್ನು ಪ್ರದಾನಮಾಡುತ್ತದೆ, ಸರ್ವದುಃಖಗಳನ್ನು ದೂರಮಾಡುತ್ತದೆ, ಎಲ್ಲ ಉಪದ್ರವಗಳನ್ನು ನಾಶಪಡಿಸಿ ತತ್ಕಾಲದಲ್ಲಿ ಸರ್ವರಿಗೂ ಮುಕ್ತಿಯನ್ನು ಅನುಗ್ರಹಿಸುತ್ತದೆ ಎಂದು ಗುರುಲಿಂಗಜಂಗಮರ ಪಾದೋದಕ ವ್ಯವಸ್ಥೆಯನ್ನು ಚಂದ್ರಜ್ಞಾನಾಗಮ ಅಧಿಕಾರವಾಣಿಯಿಂದ ಸಾರಿದೆ.[೬]

ಗುರುಲಿಂಗಜಂಗಮರು ಒಬ್ಬನೇ ಪರಶಿವನ ಮೂರು ಭಾಗಗಳು. ಅವರ ಪಾದತೀರ್ಥವನ್ನು ಶಿರಸ್ಸಿನ ಮೇಲೆ ಪ್ರೋಕ್ಷಿಸಿಕೊಂಡರೆ ಎಲ್ಲ ತೀರ್ಥಗಳನ್ನು ಅಭಿಷೇಚಿಸಿಕೊಂಡ ಫಲವು ದೊರೆಯುತ್ತದೆ ಎಂದು ಪಾದೋದಕ ಮಹಿಮೆಯನ್ನು ಬಿತ್ತಿರಿಸಿದೆ.[೭]

ಸಿದ್ಧಾಂತಶಿಖಾಮಣಿ ಶಿವಾಗಮಸರಣಿಯನ್ನನುಸರಿಸಿ ಪಾದೋದಕ ತ್ರೈವಿಧ್ಯವನ್ನು ದೀಕ್ಷಾ-ಶಿಕ್ಷಾ-ಜ್ಞಾನಪಾದೋದಕವೆಂದು ಗುರುತಿಸಿ ಅವುಗಳಿಗೆ ಪಾರಮಾರ್ಥಿಕ ಅರ್ಥವನ್ನು ಅಂತರ್ಗತವಾಗಿ ಪ್ರತಿಪಾದಿಸಿದೆ. ಚಂದ್ರಜ್ಞಾನಾಗಮದಲ್ಲಿ ಆ ರೀತಿಯ ಆಧ್ಯಾತ್ಮಿಕಾರ್ಥ ಪ್ರತಿಪಾದನೆ ಕಂಠರವೇಣ ಎಲ್ಲಿಯೂ ಉಕ್ತವಾಗಿಲ್ಲದಿರುವುದರಿಂದ ಸಿದ್ಧಾಂತಶಿಖಾಮಣಿ ಪಾದೋದಕ ತ್ರೈವಿಧ್ಯಕ್ಕೆ ತಾತ್ವಿಕಾರ್ಥ ಪ್ರತಿಪಾದನೆ ಮಾಡುವಲ್ಲಿ ಶಿವಾಗಮಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಸಾಗಿದೆ ಎನ್ನಬಹುದು:

ದೀಕ್ಷಯಾಪಗತದ್ವೈತಂ ಯದ್‌ಜ್ಞಾನಂ ಗುರುಶಿಷ್ಯಯೋಃ।
ಆನಂದಸ್ಯೈಕ್ಯಮೇತೇನ ದೀಕ್ಷಾಪಾದೋದಕಂ ಸ್ಮೃತಮ್॥

ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ।
ಶಿಷ್ಯಸ್ಯೋದಕಶಬ್ದೇನ ತಯೋರೈಕ್ಯಂ ತು ದೀಕ್ಷಯಾ॥[೮]

ದೀಕ್ಷಾಪಾದೋದಕವು ವಿಜ್ಞಾನ ಆನಂದಗಳ ದ್ಯೋತಕವಾಗಿದೆ. ಜ್ಞಾನವೆಂಬುದು ಗುರುವಿನ ಲಕ್ಷಣ; ಆನಂದವೆಂಬುದು ಶಿಷ್ಯನ ಲಕ್ಷಣ. ದೀಕ್ಷಾಪಾದೋದಕದಲ್ಲಿ ಗುರುಶಿಷ್ಯರ ಸಮ್ಮಿಲನವಿದೆ. ಪಾದಶಬ್ದದಿಂದ ಗುರು, ಶಿಷ್ಯಶಬ್ದದಿಂದ ಉದಕ ಇವರಿಬ್ಬರ ಐಕ್ಯವೇ ದೀಕ್ಷೆ. ಇಗೇ ದೀಕ್ಷಾಪಾದೋದಕ. ಪರಮಾನಂದವು ನಿರ್ಮಲವಾದ 'ಪಾದ' ಶಬ್ದದಿಂದ ವಿದಿತವಾಗುತ್ತದೆ. ಉದಕಶಬ್ದದಿಂದ ಜ್ಞಾನವೇದ್ಯವಾಗುತ್ತದೆ. ದೀಕ್ಷೆಯಿಂದ ಇವೆರಡರ ಐಕ್ಯವಾಗುತ್ತದೆ.

ಗುರುಶಿಷ್ಯರ ಏಕತ್ವರೂಪಜ್ಞಾನವು ಶಿಕ್ಷೆಯಾಗಿ ಯೋಗಿಯನ್ನು ಜ್ಞಾನ ಮತ್ತು ಆನಂದಗಳ ಐಕ್ಯವನ್ನು ಕುರಿತು ಮನನಮಾಡಲು ಹಚ್ಚುತ್ತದೆ. ಅರ್ಥಾತ್ ಜ್ಞಾನಾನಂದಗಳ ಐಕ್ಯಜ್ಞಾನ ಮತ್ತು ಮನನಗಳ ಸಮರಸವೇ ಶಿಕ್ಷಾಪಾದೋದಕವೆನಿಸುತ್ತದೆ:

---

೬. ಚಂದ್ರಜ್ಞಾನಾಗಮ, ಕ್ರಿಯಾಪಾದ, ೫.೧೦-೧೪.

೭. ಅದೇ, ಕ್ರಿಯಾಪಾದ, ೫.೧೫-೧೯.

೮. ಸಿದ್ಧಾಂತಶಿಖಾಮಣಿ, ಸಂ. ಎನ್.ಆರ್. ಕರಿಬಸವಶಾಸ್ತ್ರಿ, ೧೯೨೧, ಮೈಸೂರು, ೧೯.೬,೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುರುಶಿಷ್ಯಮಯಂ ಜ್ಞಾನಂ ಶಿಕ್ಷಾ ಯೋಗಿನಮೀರ್ಯತೇ।
ತಯೋಸ್ಸಮರಸತ್ವಂ ಹಿ ಶಿಕ್ಷಾಪಾದೋದಕಂ ಸ್ಮೃತಮ್॥[೯]

ಪಾದೋದಕ ಶಬ್ದಕ್ಕೆ ಅನುಕ್ರಮವಾಗಿ ವಾಚ್ಯವಾದ ಜ್ಞಾನ, ಆನಂದಗಳು ಗುರುಶಿಷ್ಯ ಪದಕ್ಕೂ ವಾಚ್ಯವೆನಿಸಿವೆ. ಜ್ಞಾನ ಆನಂದಗಳ ಅಂದರೆ ಗುರುಶಿಷ್ಯರ ಸಮರಸವೇ ಪಾದೋದಕ. ಗುರುಶಿಷ್ಯ ಸೂಚಕವಾದ ಜ್ಞಾನ ಆನಂದಗಳ ಐಕ್ಯರೂಪಸಂಪತ್ತಿನಿಂದ ಗುರುಶಿಷ್ಯರಲ್ಲಿ ಸಾಮರಸ್ಯವುಂಟಾಗುವುದೇ ಜ್ಞಾನಪಾದೋದಕ:

ಸದೈಕ್ಯಸಂಪದಾನಂದೋ ಯೋಽಸೌ ಜ್ಞಾನಗುರುರ್ಮತಃ।
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನಪಾದೋದಕಂ ವಿದುಃ॥[೧೦]

ಈ ಪ್ರಕಾರವಾಗಿ ಸಿದ್ಧಾಂತಶಿಖಾಮಣಿ ಗುರುಶಿಷ್ಯರ ದ್ವೈತಭಾವವಡಗಿ, ತಾವಿಬ್ಬರೂ ಸಮಾನರು ಹಾಗೂ ಬಹುಮಟ್ಟಿಗೆ ಒಂದೇ ಎಂಬ ಭಾವನೆ ಗಟ್ಟಿಗೊಂಡಿರುವುದೇ ದೀಕ್ಷಾಪಾದೋದಕವೆಂದು, ಗುರುಶಿಷ್ಯರು ಸಮಾನರೆಂಬ ಅರಿವು ಪರಿಪೂರ್ಣ-ವಾಗಿರುವುದೇ ಶಿಕ್ಷಾಪಾದೋದಕವೆಂದು ಹಾಗೂ ಗುರುಶಿಷ್ಯರಿಬ್ಬರೂ ಸಮಾನರೆಂಬ ಅರಿವಿನಿಂದ ಉಂಟಾದ ಆನಂದ ಪ್ರಕಟವಾಗುವುದೇ ಜ್ಞಾನಪಾದೋದಕವೆಂದು ಆಧ್ಯಾತ್ಮಿಕ ಪರಿಭಾಷೆಯಲ್ಲಿ ತಿಳಿಸಿಕೊಡುತ್ತದೆ.

ಪಾದೋದಕ ಮತ್ತು ಪ್ರಸಾದಗಳಿಗೆ ವೀರಶೈವರು ಕೊಡುವ ಮಹತ್ವ ಅವುಗಳ ಬಗೆಗೆ ಅವರಿಗಿರುವ ಅಪಾರ ಗೌರವಾದರಗಳನ್ನು ವಚನಶಾಸ್ತ್ರದಲ್ಲಿ ಅನೇಕ ಕಡೆ ಉಲ್ಲೇಖಿಸಲಾಗಿದೆ. ಆ ಬಗ್ಗೆ 'ಕೂಡಲಚನ್ನಸಂಗಮದೇವ' ಅಂಕಿತದ ವಚನವೊಂದು ಹೀಗೆ ಹೇಳುತ್ತದೆ:

ಕರುಣಜಲ, ವಿನಯಜಲ, ಸಮತಾಜಲ:
ಕರುಣಜಲವೇ ಗುರುಪಾದೋದಕ;
ವಿನಯಜಲವೇ ಲಿಂಗಪಾದೋದಕ;
ಸಮತಾಜಲವೇ ಜಂಗಮಪಾದೋದಕ.
ಗುರುಪಾದೋದಕದಿಂದ ಸಂಚಿತಕರ್ಮನಾಸ್ತಿ.
ಲಿಂಗಪಾದೋದಕದಿಂದ ಪ್ರಾರಬ್ಧಕರ್ಮನಾಸ್ತಿ.
ಜಂಗಮಪಾದೋದಕದಿಂದ ಆಗಾಮಿಕರ್ಮನಾಸ್ತಿ.
ಇಂತೀ ತ್ರಿವಿಧೋದಕದಲ್ಲಿ ತ್ರಿವಿಧಕರ್ಮನಾಸ್ತಿ.
ಇದು ಕಾರಣ, ಕೂಡಲಚನ್ನಸಂಗಮದೇವಾ,
ತ್ರಿವಿಧೋದಕವ ನಿಮ್ಮ ಶರಣನೆ ಬಲ್ಲ.[೧೧]

---

೯. ಅದೇ, ೧೯.೧೭.

೧೦. ಅದೇ, ೧೯.೧೯.

೧೧. ಚನ್ನಬಸವಣ್ಣನವರ ವಚನಗಳು, ಸಂ॥ ಡಾ. ಆರ್.ಸಿ. ಹಿರೇಮಠ, ಕವಿಧಾ, ೧೯೭೧, ವಚನ. ೧೫೬, ಪು. ೩೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿತವಾಗಿರುವಂತೆ ಚನ್ನಬಸವಣ್ಣನು ದೀಕ್ಷಾ-ಪಾದೋದಕ, ಶಿಕ್ಷಾಪಾದೋದಕ, ಜ್ಞಾನಪಾದೋದಕವೆಂಬ ಮೂರು ಬಗೆಯನ್ನು ಹೇಳಿದ್ದಾನೆ; ಪಾದೋದಕವನ್ನು ಪಡೆದುಕೊಳ್ಳುವ ಕ್ರಿಯಾವರ್ತನೆಯನ್ನು ಶಿವಾಗಮಗಳ ಆಧಾರದಿಂದ ದೀರ್ಘವಾಗಿ ವರ್ಣಿಸಿದ್ದಾನೆ.

ಈ ಪಾದೋದಕದ ಪ್ರಭಾವ-ಪರಿಣಾಮಗಳನ್ನು ವಚನಕಾರ ಸಿದ್ಧರಾಮ ಹೀಗೆ ಹೇಳಿದ್ದಾನೆ:

ಗುರುಪಾದೋದಕದಿಂದ ಸ್ಥೂಲದೇಹಶುದ್ಧಿ;
ಕ್ರಿಯಾಪಾದೋದಕದಿಂದ ಸೂಕ್ಷ್ಮದೇಹಶುದ್ಧಿ;
ಜ್ಞಾನಪಾದೋದಕದಿಂದ ಕಾರಣದೇಹಶುದ್ಧಿ;
ಗುರುಪಾದೋದಕದಲ್ಲಿ ಇಷ್ಟಲಿಂಗಸಂಬಂಧ,
ಕ್ರಿಯಾಪಾದೋದಕದಲ್ಲಿ ಪ್ರಾಣಲಿಂಗಸಂಬಂಧ;
ಜ್ಞಾನಪಾದೋದಕದಲ್ಲಿ ಭಾವಲಿಂಗಸಂಬಂಧ.
ಅದು ಕಾರಣ ಪಾದೋದಕವೇ ಪ್ರತ್ಯಕ್ಷ ಪರಬ್ರಹ್ಮ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನ.[೨]

ವಚನಶಾಸ್ತ್ರದಲ್ಲಿ ಪಾದೋದಕದ ಪ್ರಕ್ರಿಯೆ, ವಿಧಿ-ವಿಧಾನ, ಕ್ರಿಯಾಭೇದದಿಂದ ಉಂಟಾಗುವ ಬಗೆ ಮುಂತಾದ ವಿವರಗಳನ್ನು ದೀರ್ಘವಾಗಿ ವಿವೇಚಿಸಲಾಗಿದೆ. ಶರಣರು ಪಾದೋದಕ ತ್ರೈವಿಧ್ಯವನ್ನು ಕೇವಲ ತಾತ್ವಿಕವಾದ ಜ್ಞಾನದ ನಿಲುವಿನಿಂದಷ್ಟೇ ನೋಡದೆ ಆಚರಣೆಯ ಮಾರ್ಗದಲ್ಲಿ ಮಹತ್ವಪೂರ್ಣವಾದ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ.

೨. ಪ್ರಸಾದ:

ಗುರು-ಲಿಂಗ-ಜಂಗಮರಿಗೆ ನೀಡಿ ಉಳಿದದ್ದು ಪ್ರಸಾದ. ಅದು ಶುದ್ಧ, ಸಿದ್ಧ ಪ್ರಸಿದ್ಧ ಎಂದು ಮೂರು ವಿಧ. ಮುಕ್ತಿ ಪಡೆಯಲು ಪ್ರಮುಖ ಸಾಧನವಾಗಿರುವ ಪ್ರಸಾದವೂ ಸಹ ಪಾದತೀರ್ಥದಂತೆ ಅವಶ್ಯ ಸ್ವೀಕರಣೀಯ. ಗುರು-ಲಿಂಗ-ಜಂಗಮರಲ್ಲಿ ಯಾರೊಬ್ಬರ ಪ್ರಸಾದ ದೊರೆತರೂ, ಅದರಲ್ಲಿ ಉಳಿದ ಇಬ್ಬರ ಪ್ರಸಾದವೂ ಸಂಬಂಧಿಸಿದೆ ಎಂಬ ನಂಬುಗೆ ಇರಬೇಕು. ನಮ್ಮ ಪಂಚೇಂದ್ರಿಯಗಳಿಂದ ಸೇವಿಸುವ ಯಾವುದೇ ವಿಷಯ ಅಥವಾ ವಸ್ತುವನ್ನಾದರೂ ಮೊದಲು ಆಯಾ ಇಂದ್ರಿಯ ಮುಖಗಳಲ್ಲಿರುವ ಆಚಾರಾದಿ ಲಿಂಗಗಳಿಗೆ ಸಮರ್ಪಿಸಿ, ತತ್ಪ್ರಸಾದವನ್ನು ಸ್ವೀಕರಿಸುವುದು ಸನಾತನಧರ್ಮವಾಗಿದೆ:

ಗುರುಲಿಂಗಜಂಗಮಾನಾಂ ಭುಕ್ತಶೇಷಃ ಪ್ರಸಾದಕಃ॥
ಶುದ್ಧಸಿದ್ಧಪ್ರಸಿದ್ಧಾಖ್ಯಃ ಸ ಹಿ ಮುಕ್ತ್ಯೇಕಸಾಧನಃ।
ದ್ವಯೋಸ್ತ್ರಯಾಣಾಂ ವಾ ಲಾಭೇ ಗ್ರಾಹ್ಯೋಽಯಂ ಪಾದತೀರ್ಥವತ್॥

---

೧೨. ಶ್ರೀ ಸಿದ್ಧರಾಮೇಶ್ವರ ವಚನಗಳು, ಸಂ॥ ಡಾ. ಆರ್.ಸಿ. ಹಿರೇಮಠ, ಕವಿಧಾ, ೧೯೬೮, ವಚನ. ೨೨೫, ಪು. ೬೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

> ಶಿವೇನ ಭುಕ್ತಂ ಭುಂಜೀಯಾತ್ ತತ್ಪೀತಂ ಹಿ ಜಲಂ ಪಿಬೇತ್।
> ಶಿವಾಘ್ರಾತಂ ಸದಾ ಜಿಘ್ರೇದೇಷ ಧರ್ಮಃ ಸನಾತನಃ॥[೧೩]

ಶಿವಾರ್ಪಿತವಾಗಿರುವ ವಿಷಯಗಳು ಪ್ರಸಾದವಾಗಿರುವುದರಿಂದ ಅವುಗಳಲ್ಲಿ ಪದಾರ್ಥದೋಷವು ಹಿಂಗಿರುತ್ತದೆ. ಅಂಥ ಪ್ರಸಾದ ಸೇವನೆಯಿಂದ ಕಾಮಕ್ರೋಧಾದಿಗಳಿಂದ ಬಿಡಲ್ಪಟ್ಟ ಮಾನವನ ಮನಸ್ಸು 'ಪ್ರಸಾದಸ್ತು ಪ್ರಸನ್ನತಾ' ಎಂಬಂತೆ ಪ್ರಸನ್ನವಾಗಿರುತ್ತದೆ. ಇದು ಶಿವಪ್ರಸಾದದ ಪ್ರಭಾವ. ಶಿವಾರ್ಪಣ ಮಾಡದೆ ಭುಂಜಿಸುವ ಸಾಧಕ ಪತಿತನಾಗುತ್ತಾನೆ ಎಂದು ಚಂದ್ರಜ್ಞಾನಾಗಮ ಎಚ್ಚರಿಕೆ ಗಂಟೆ ಭಾರಿಸಿದೆ.[೧೪]

ಆದ್ದರಿಂದ ಪತ್ರ, ಪುಷ್ಪ, ಜಲ, ಅನ್ನ, ಔಷಧಾದಿಗಳನ್ನು ಸದಾಶಿವನಿಗೆ ಸಮರ್ಪಿಸದೆ ಸೇವಿಸಬಾರದು:

> ಪತ್ರಂ ಪುಷ್ಪಂ ಫಲಂ ತೋಯಮನ್ನಪಾನಾದ್ಯಮೌಷಧಮ್।
> ಅಸಮರ್ಪ್ಯ ನ ಭುಂಜೀತ ಭಗವಂತಂ ಸದಾಶಿವಮ್॥[೧೫]

ಸಮರ್ಪಣೆ ಸ್ಥೂಲ-ಸೂಕ್ಷ್ಮವೆಂದು ಎರಡು ವಿಧವಾಗಿದೆ. ಶಬ್ದಸ್ಪರ್ಶಾದಿಗಳ ವಿಭಜನೆ ಮಾಡದೆ ಇಷ್ಟಲಿಂಗಕ್ಕೆ ಸಮರ್ಪಿಸುವ ಪದಾರ್ಥವನ್ನು ಸ್ಥೂಲಸಮರ್ಪಣೆ ಎನ್ನಲಾಗಿದ್ದು ಇದನ್ನು ಪೂಜೆಯ ಅಂಗವೆಂದು ಮಾನ್ಯಮಾಡಲಾಗಿದೆ. ಶಬ್ದಸ್ಪರ್ಶಾದಿ ವಿಷಯಗಳನ್ನು ಭಾವನಾರೂಪದಲ್ಲಿ ಪ್ರತ್ಯೇಕವಾಗಿ ಆಯಾಯ ಇಂದ್ರಿಯದಲ್ಲಿರುವ ಲಿಂಗಕ್ಕೆ ಸಮರ್ಪಿಸುವುದೇ ಸೂಕ್ಷ್ಮಸಮರ್ಪಣ:

> ಸಮರ್ಪಣಂ ದ್ವಿಧಾ ಪ್ರೋಕ್ತಂ ಸ್ಥೂಲಸೂಕ್ಷ್ಮವಿಭೇದತಃ।
> ಯಚ್ಛಬ್ದಾದ್ಯವಿಭಾಗೇನೈವೇಷ್ಟಲಿಂಗೇ ಸಮರ್ಪ್ಯತೇ॥
> ದ್ರವ್ಯಂತತ್ಸ್ಥೂಲಮಿತ್ಯುಕ್ತಮರ್ಚಾಂಗಂ ತತ್ಪ್ರಕೀರ್ತಿತಮ್।
> ಶಬ್ದಾದಿವಿಷಯಾ ಯತ್ರ ಭಾವೇನೈವ ನ ಚಾನ್ಯಥಾ॥
> ಸಮರ್ಪ್ಯತೇ ರೂಪಮೇವ ತದ್ಧಿ ಸೂಕ್ಷ್ಮಂ ಪ್ರಕೀರ್ತಿತಮ್।
> ಯದಾ ಯೇನೇಂದ್ರಿಯೇಣೈವ ವಿಷಯೋ ಹ್ಯುಪಭುಜ್ಯತೇ।
> ತಾನಿಂದ್ರಿಯಗತೇ ಲಿಂಗೇ ಹ್ಯರ್ಪಣಂ ಸೂಕ್ಷ್ಮಮೀರಿತಮ್॥[೧೬]

ಶಿವನಿಗೆ ಅರ್ಪಿಸಿ ಸ್ವೀಕರಿಸಿದ ವಸ್ತು ಮನಸ್ಸಿಗೆ ಪ್ರಸನ್ನತೆಯುಂಟುಮಾಡುವ ಕಾರಣದಿಂದ ಪರಮಾನಂದದಾಯಕ ಪ್ರಸಾದವೆಂದು ಪ್ರಸಿದ್ಧವಾಗಿದ್ದು ಅದನ್ನು ಋತ, ಸತ್ಯ, ಪರಬ್ರಹ್ಮ, ಅಮೃತವೆಂದು ಕೊಂಡಾಡುತ್ತಾರೆ. ಈ ಪ್ರಸಾದ ಮಹಿಮೆಯ ಗುಣಗಾನ ಮಾಡಲು ಯಾರಿಗೂ ಸಾಧ್ಯವಿಲ್ಲ. ಪರಮಪವಿತ್ರವಾದ ಗುರು-ಜಂಗಮರ ಪ್ರಸಾದವು ಪುರೋಡಾಶಕ್ಕೆ ಸಮಾನವಾಗಿದೆ; ಸದಾ ಪಾವಿತ್ರ್ಯವನ್ನುಂಟುಮಾಡುವುದಾಗಿದೆ:

---

೧೩. ಚಂದ್ರಜ್ಞಾನಾಗಮ, ಕ್ರಿಯಾಪಾದ, ೫.೨೦-೨೨.

೧೪. ಅದೇ, ಕ್ರಿಯಾಪಾದ, ೫.೨೩.

೧೫. ಅದೇ, ಕ್ರಿಯಾಪಾದ, ೫.೨೪.

೧೬. ಅದೇ, ಕ್ರಿಯಾಪಾದ, ೫.೨೮,೨೯-೩೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮರ್ಪಿತಃ ಪ್ರಸಾದೈಕಕಾರಣತ್ವಾನ್ಮಹೇಶಿತುಃ।
ಪ್ರಸಾದತ್ವೇನ ವಿಖ್ಯಾತಃ ಪರಮಾನಂದದಾಯಿಕಃ॥
ಋತಂ ಸತ್ಯಂ ಪರಂ ಬ್ರಹ್ಮಾಮೃತಮಿತ್ಯಪಿ ಗೀಯತೇ।
ಪ್ರಸಾದಸ್ತಸ್ಯ ಮಹಿಮಾ ಕೇನ ವಾ ವರ್ಣ್ಯತೇ ಕಥಮ್॥[೧೭]

ಚಂದ್ರಜ್ಞಾನಾಗಮದಂತೆ ಸೂಕ್ಷ್ಮಾಗಮವೂ ಸಹ ಮುಕ್ತಿಸಾಧನವಾದ ಪ್ರಸಾದತ್ರೈವಿಧ್ಯವನ್ನು ಪ್ರತಿಪಾದಿಸುತ್ತದೆ. ಪ್ರಸಾದವು ಶುದ್ಧ, ಸಿದ್ಧ, ಪ್ರಸಿದ್ಧವೆಂದು ಮೂರು ವಿಧ. ಗುರುವು ಸೇವಿಸಿ ಉಳಿದದ್ದು ಶುದ್ಧಪ್ರಸಾದ, ಮೂರು ಲಿಂಗಗಳ ಸ್ವರೂಪ ಮತ್ತು ಅವುಗಳ ಐಕ್ಯವನ್ನು ಅರಿತು ಅರ್ಪಿಸಿದ ಪ್ರಸಾದವೇ ಸಿದ್ಧಪ್ರಸಾದ. 'ಶಿವೋऽಹಂ' ಭಾವನೆಯಿಂದ ನಿಶ್ಚಲಮನಸ್ಕನಾಗಿ ಜಂಗಮಕ್ಕೆ ಅರ್ಪಿಸಿದ ಪ್ರಸಾದ ಪ್ರಸಿದ್ಧಪ್ರಸಾದ:

ಶುದ್ಧಸಿದ್ಧಪ್ರಸಿದ್ಧಾಖ್ಯಃ ಸ ಹಿ ಮುಕ್ತ್ಯೇಕಸಾಧನಃ।
ಗುರುಭುಕ್ತಪ್ರಸಾದೋ ಯಃ ಸ ಶುದ್ಧಃ ಪ್ರಕೀರ್ತಿತಃ॥
ಜ್ಞಾತ್ವಾ ಲಿಂಗತ್ರಯಂ ಸಮ್ಯಕ್ ತದೈಕ್ಯಂ ಚ ವರಾನನೇ।
ಲಿಂಗಾರ್ಪಿತಪ್ರಸಾದೋऽಯಂ ಸಿದ್ಧ ಇತ್ಯಭಿಧೀಯತೇ॥
ಶಿವೋऽಹಂಭಾವನಾಯುಕ್ತೋ ನಿಶ್ಚಲೀಕೃತಮಾನಸಃ।
ಚರಾರ್ಪಿತ ಪ್ರಸಾದೋऽಯಂ ಪ್ರಸಿದ್ಧಃ ಪರಿಕೀರ್ತಿತಃ॥[೧೮]

ಶಿವಾಗಮಾಭಿಪ್ರಾಯಾನುಸಾರವಾಗಿ ಸಿದ್ಧಾಂತಶಿಖಾಮಣಿ ಪ್ರಸಾದ ಶಬ್ದಕ್ಕೆ ಮೂರು ಅರ್ಥಗಳನ್ನು ಕೊಡುತ್ತದೆ. ಒಂದು ಮನಸ್ಸಿನ ನೈರ್ಮಲ್ಯ; ಇನ್ನೊಂದು ಶಿವನಿಗೆ ಅರ್ಪಿಸಿದ ಪದಾರ್ಥ, ಮತ್ತೊಂದು ಶಿವಾನುಗ್ರಹ. ಇವುಗಳಲ್ಲಿ ಮೊದಲನೆಯದು ಆಂತರಿಕ ಅರ್ಥವನ್ನು ಸೂಚಿಸಿದರೆ, ಎರಡನೆಯದು ಬಹಿರಂಗದ ಆಚರಣೆಯ ದ್ಯೋತಕವಾಗಿದೆ. ಬಹಿರಂಗದ ಆಚರಣೆಯಿಂದ ಅಂತರಂಗದ ಕಡೆಗೆ ತಿರುಗಿರುವ ಸೂಕ್ಷ್ಮದೃಷ್ಟಿಯನ್ನು ಇಲ್ಲಿ ಕಾಣಬಹುದು. ಬಾಹ್ಯಪ್ರಸಾದದ ಸ್ವೀಕಾರದಿಂದ ಮನಸ್ಸಿನ ಪ್ರಸನ್ನತೆ ಉಂಟಾಗುತ್ತದೆ. ಈ ಪ್ರಸನ್ನತೆಯನ್ನು ಉಂಟುಮಾಡುವಂತಹುದೇ ಪ್ರಸಾದ. ಅದಕ್ಕಾಗಿಯೇ ಬಾಹ್ಯಪದಾರ್ಥಗಳನ್ನು ಕೇವಲ ಪದಾರ್ಥಗಳನ್ನಾಗಿ ಸ್ವೀಕರಿಸದೆ ಗುರು-ಲಿಂಗ-ಜಂಗಮಕ್ಕೆ ಅರ್ಪಿಸಿ ಪ್ರಸಾದವನ್ನಾಗಿ ಪರಿವರ್ತಿಸಿ ಅದರಿಂದ ಪ್ರಸನ್ನತೆ ಪಡೆಯಬೇಕು:

ಮನಃಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ।[೧೯]

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ।
ಶಿವಸ್ಯ ಲಿಂಗರೂಪಸ್ಯ ಪ್ರಸಾದಾದೇವ ಸಿದ್ಧ್ಯತಿ॥
ಶಿವಪ್ರಸಾದೋ ಯದ್ದ್ರವ್ಯಂ ಶಿವಾಯ ವಿನಿವೇದಿತಮ್।
ನಿರ್ಮಾಲ್ಯಂ ತತ್ತು ಶೈವಾನಾಂ ಮನೋನೈರ್ಮಲ್ಯಕಾರಣಮ್॥[೨೦]

---

೧೭. ಅದೇ, ಕ್ರಿಯಾಪಾದ, ೫.೩೩-೩೪.

೧೮. ಸೂಕ್ಷ್ಮಾಗಮ, ಕ್ರಿಯಾಪಾದ, ೮.೨೨-೨೫.

೧೯. ಸಿದ್ಧಾಂತಶಿಖಾಮಣಿ, ೧೧.೨.

೨೦. ಅದೇ, ೧೧.೬-೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಕುರದಿಂದ ಬೀಜವು, ಬೀಜದಿಂದ ಅಂಕುರವು ಹೇಗೆ ಉತ್ಪನ್ನವಾಗುವುದೋ ಹಾಗೆ ಶಿವಾನುಗ್ರಹದಿಂದ ಭಕ್ತಿಯು ಉತ್ಪನ್ನವಾಗಿ ಮುಕ್ತಿಯನ್ನು ದಯಪಾಲಿಸುತ್ತದೆ:

ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ॥
ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ॥[೨೧]

ಅನ್ನಶುದ್ಧಿಯಿಂದ ಸಕಲಪ್ರಾಣಿಗಳ ತತ್ತ್ವಶುದ್ಧಿಯಾಗುವುದು. ಶಿವಾರ್ಪಣ ಮಾಡಿದ ಪದಾರ್ಥವೇ ಪರಿಶುದ್ಧವಾದ ಪ್ರಸಾದವೆನಿಸುತ್ತದೆ ಎಂದು ಅನ್ನಶುದ್ಧಿಯ ಮಹತ್ವವನ್ನು ಹೇಳುತ್ತದೆ ಸಿದ್ಧಾಂತಶಿಖಾಮಣಿ:

ಅನ್ನಶುದ್ಧ್ಯಾ ಹಿ ಸರ್ವೇಷಾಂ ತತ್ತ್ವಶುದ್ಧಿರುದಾಹೃತಾ।
ವಿಶುದ್ಧಮನ್ನಜಾತಂ ಹಿ ಯಚ್ಛಿವಾಯ ಸಮರ್ಪಿತಮ್॥[೨೨]

ಅಂದರೆ ಪ್ರಸಾದದಿಂದ ಪೋಷಿತವಾದ ದೇಹ ಪವಿತ್ರವಾಗುತ್ತದೆ. ಕರಣವೃತ್ತಿಗಳು ಅಡಗಿ ಅದು ಪ್ರಸಾದಕಾಯವಾಗುತ್ತದೆ. ವಿಷಯ ಸುಖಗಳನ್ನು ಗ್ರಹಿಸುವ ಪಂಚೇಂದ್ರಿಯಗಳು ವಿಷಯಸುಖವ್ಯಾಮೋಹವನ್ನು ಕಳೆದುಕೊಂಡು ಪ್ರಸಾದವನ್ನು ಗ್ರಹಿಸುವ ಲಿಂಗಮುಖವಾಗಿ ಪರಿಣಮಿಸುತ್ತವೆ. ಆದ್ದರಿಂದ ಆರೋಗ್ಯ ಕಾರಣವೂ, ಭವರೋಗವೈದ್ಯನೂ, ಸರ್ವಪಾಪಹರವೂ, ಪಾಪಿಗಳಿಗೆ ದುರ್ಲಭವೂ, ಪುಣ್ಯಾತ್ಮರಿಗೆ ಸುಲಭವೂ ಆದ ಶಿವಪ್ರಸಾದವನ್ನು ಸೇವಿಸಿ ಸಕಲಸಿದ್ಧಿಗಳನ್ನು ಪಡೆದು ಧನ್ಯರಾಗಬೇಕೆಂದು ಸಿದ್ಧಾಂತಶಿಖಾಮಣಿ ಪ್ರಸಾದ ಸ್ವೀಕಾರಸ್ಥಲದಲ್ಲಿ ಹಾಗೂ ಪ್ರಸಾದಿಸ್ಥಲದಲ್ಲಿ ಉಪದೇಶಿಸಿರುವುದು ಔಚಿತ್ಯಪೂರ್ಣವಾಗಿದೆ.

ಪ್ರಸಾದತತ್ತ್ವವನ್ನು ಶರಣರು (ವಚನಕಾರರು) ಬಹಳ ಸೂಕ್ಷ್ಮವಾಗಿ ವಿವೇಚಿಸಿದ್ದಾರೆ. ಆಚರಣೆಯ ಮಾರ್ಗದಲ್ಲಿ ಅದನ್ನು ಅನೇಕ ಬಗೆಗಳಾಗಿ ವಿಭಾಗಿಸಿದ್ದಾರೆ. ಈ ವಿಭಾಗ ಕ್ರಮದ ವಿವರಗಳಿಗೆ ಹೋಗದೆ ಇವುಗಳ ಹಿಂದಿರುವ ಉದ್ದೇಶವನ್ನು ಸಂಕ್ಷಿಪ್ತವಾಗಿ ಹೇಳಬಹುದು. ಪ್ರಸಾದದ ತಳಹದಿ ಅರ್ಪಣ. ಇದನ್ನು ವಚನಕಾರರು ಬಹುವ್ಯಾಪಕವಾದ ಅರ್ಥದಲ್ಲಿ ಕಂಡಿದ್ದಾರೆ. ಅರ್ಪಣತತ್ತ್ವ ಅಹಂಕಾರ ನಿರಸನಕ್ಕೆ ಸಾಧನ. ತನ್ನದೇನೆಂಬುದೇನನ್ನೂ ಉಳಿಸಿಕೊಳ್ಳದೆ ಎಲ್ಲವನ್ನೂ ಶಿವಾರ್ಪಣಬುದ್ಧಿಯಿಂದ ಮಾಡಬೇಕು. ಆಗ ಅದು ಬಂಧನಕ್ಕೆ ಕಾರಣವಾಗದೆ ಪ್ರಸಾದಕ್ಕೆ ಕಾರಣವಾಗುತ್ತದೆ. ಈ ಅರ್ಪಣೆಯಲ್ಲಿ ಕ್ರಿಯಾರ್ಪಣೆ, ಜ್ಞಾನಾರ್ಪಣೆ ಎಂದು ಎರಡು ಬಗೆ. ಇಷ್ಟ-ಪ್ರಾಣ-ಭಾವಲಿಂಗಗಳಿಗೆ, ಅಂತೆಯೇ ಇಷ್ಟ-ಪ್ರಾಣ-ಭಾವಸ್ವರೂಪರಾದ ಗುರು-ಲಿಂಗ-ಜಂಗಮರಿಗೆ ಅರ್ಪಿಸಿ ಆ ಪ್ರಸಾದವನ್ನು ಸ್ವೀಕರಿಸುವುದು 'ಕ್ರಿಯಾರ್ಪಣೆ' ಎನಿಸುತ್ತದೆ. ಎಲ್ಲ ಇಂದ್ರಿಯಗಳನ್ನು ಲಿಂಗಸ್ವರೂಪವನ್ನಾಗಿ ಮಾಡಿಕೊಂಡು ಏನನ್ನು ಸ್ವೀಕರಿಸಿದರೂ

---

೨೧. ಅದೇ, ೯.೧೧-೧೨.

೨೨. ಅದೇ, ೧೧.೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅದನ್ನು ಸಹಜವಾಗಿಯೇ ಪ್ರಸಾದವಾಗಿ ಪರಿವರ್ತಿಸಿಕೊಳ್ಳುವುದು ಜ್ಞಾನಾರ್ಪಣೆ. ಕ್ರಿಯಾಪ್ರಧಾನವಾದ ಆಚರಣೆಗೆ ಸಹಜಾರ್ಪಣೆ ಎಂದೂ ಜ್ಞಾನಪ್ರಧಾನವಾದ ಆಚರಣೆಗೆ ಸಂಬಂಧಾಚರಣೆಯೆಂದೂ ಕರೆಯುತ್ತಾರೆ. ಈ ಸಹಜ ಮತ್ತು ಸಂಬಂಧಾಚರಣೆ-ಗಳೆರಡರಿಂದಲೂ ಸಮನ್ವಿತವಾದದ್ದು ಶರಣರ ಪ್ರಸಾದಮಾರ್ಗ.

ಪಾದೋದಕದಂತೆ ಪ್ರಸಾದಕ್ಕೂ ಗುರು-ಲಿಂಗ-ಜಂಗಮರೇ ತ್ರಿಕೂಟಶಕ್ತಿಗಳಾಗಿ-ರುವುದರಿಂದ ಪ್ರಸಾದವೂ ತ್ರಿಮುಖರೂಪಿಯಾಗಿ ಲಭ್ಯವಾಗುತ್ತದೆ; ಶುದ್ಧಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧಪ್ರಸಾದ ಎಂದು. ಚನ್ನಬಸವಣ್ಣ ಇವುಗಳ ಸ್ವರೂಪವನ್ನು ಸ್ಪಷ್ಟಪಡಿಸುತ್ತಾನೆ:

ಶುದ್ಧಸಿದ್ಧಪ್ರಸಿದ್ಧಪ್ರಸಾದವೆಂಬುವರು ನೀವು ಕೇಳಿರೇ;
ಶುದ್ಧಪ್ರಸಾದ ಗುರುಮುಖದಿಂದ ಬಂದುದು;
ಸಿದ್ಧಪ್ರಸಾದ ಲಿಂಗಮುಖದಿಂದ ಬಂದುದು,
ಪ್ರಸಿದ್ಧಪ್ರಸಾದ ಜಂಗಮಮುಖದಿಂದ ಬಂದುದು,
ಇದರೊಳಗೆ ಆವುದು ಘನವೆಂಬೆ, ಆವುದು ಕಿರಿದೆಂಬೆ?
ಮಹಕ್ಕೆ ಮಹ, ಘನಕ್ಕೆ ಘನ, ಮಹಾಘನ ಪ್ರಸಾದ.
ಗುರುಪ್ರಸಾದದಿಂದ ತನುಶುದ್ಧವಾಯಿತ್ತು;
ಲಿಂಗಪ್ರಸಾದದಿಂದ ಮನಶುದ್ಧವಾಯಿತ್ತು;
ಜಂಗಮಪ್ರಸಾದದಿಂದ ಪ್ರಾಣಶುದ್ಧವಾಯಿತ್ತು;
ಶರಣರಸಂಗದಿಂದ ಪ್ರಸಾದಸಾಧ್ಯವಾಯಿತ್ತು;
ಕೂಡಲಚನ್ನಸಂಗಮದೇವಯ್ಯಾ
ಈ ತ್ರಿವಿಧ ಪ್ರಸಾದವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು![೨೩]

ಹೀಗೆ ಈ ತ್ರಿವಿಧ ಪ್ರಸಾದದ ಮಹತ್ವವನ್ನು ಪ್ರತಿಪಾದಿಸುವ ಅನೇಕ ನುಡಿಗಳು ಬರುತ್ತವೆ. ಈ ಮೂರು ಬಗೆಯ ಪ್ರಸಾದಗಳೂ ತತ್ವತಃ ಬೇರೆ ಬೇರೆಯಲ್ಲ. ಒಂದೇ ಶಕ್ತಿಯ ಮೂರು ರೂಪಗಳು.

೦

೨೩. ಚನ್ನಬಸವಣ್ಣನವರ ವಚನಗಳು, ಸಂ. ಡಾ. ಆರ್.ಸಿ. ಹಿರೇಮಠ, ಕವಿಧಾ, ೧೯೭೧, ವಚನ. ೭೧೮, ಪು. ೨೯೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೯. ಪಂಚಾಚಾರಮೀಮಾಂಸೆ

-ಡಾ. ಮಲ್ಲಿಕಾರ್ಜುನ ಪರಡ್ಡಿ

"ಏಕೇನ ಜನ್ಮನಾ ಮುಕ್ತಿಃ ವೀರಶೈವಸ್ಯ ಕಥ್ಯತೇ" ಎಂಬ ಸೂಕ್ತಿಯೊಂದು ವೀರಶೈವದ ಮಹತಿಯನ್ನು ನಿರ್ದೇಶಿಸುತ್ತಿದ್ದು, ಭಕ್ತಿಯ ಪ್ರಷ್ಠಭೂಮಿಯಲ್ಲಿ ಜ್ಞಾನಕ್ರಿಯೆಗಳ ಸುಮಧುರ ಸಮಾಗಮವು ಈ ಅದ್ಭುತ ಸಿದ್ಧಿಯ ಸಾಧನವಾಗಿದೆಯೆನ್ನಬಹುದು. 'ನುಡಿದಂತೆ ನಡೆ, ಇದೇ ಜನ್ಮ ಕಡೆ' ಎಂಬ ಲೋಕೋಕ್ತಿಯು ಇದನ್ನೇ ಸಮರ್ಥಿಸುವುದಿಲ್ಲವೆ? ಆದ್ದರಿಂದಲೇ ಹೀಗೆ ಹೇಳಗಾಗಿದೆ.

ಉಭಾಭ್ಯಾಮಪಿ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣಾಂ ಗತಿಃ।
ತಥೈವ ಜ್ಞಾನಕರ್ಮಭ್ಯಾಂ ಪ್ರಾಪ್ಯತೇ ಬ್ರಹ್ಮ ಶಾಶ್ವತಮ್॥[೧]

ಅಂದರೆ ಆಚರಣೆಯಿಲ್ಲದ ಜ್ಞಾನ ನಿಷ್ಫಲವೆಂಬುದು ಮನುವಿನ ಅಭಿಪ್ರಾಯ.

ಫಲಂ ಕತಕವೃಕ್ಷಸ್ಯ ಯದ್ಯಪ್ಯಂಬುಪ್ರಸಾದಕಮ್।
ನ ನಾಮಗ್ರಹಣಾದೇವ ತಸ್ಯ ವಾರಿ ಪ್ರಸೀದತಿ॥[೨]

ಆಂಗ್ಲವಿಮರ್ಶಕನ ಅಭಿಪ್ರಾಯವು ಇದೇ ಆಗಿದೆ. 'One may read all the books in the British museum, yet he may be illiterate.' ಒಟ್ಟಿನಲ್ಲಿ ಮುಕ್ತಿಸಾಧನವಾದ ವಿದ್ಯೆ ಅಂದರೆ ಆಧ್ಯಾತ್ಮವಿದ್ಯೆ ಕೇವಲ ವಾದದ ವಿಷಯವಾಗದೇ ನಿತ್ಯಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳದಿದ್ದರೆ ಬ್ರಹ್ಮಜ್ಞಾನಿಯಾಗಲಾರ. ಸದಾ ಮೌನಿಯಾದ ಬ್ರಹ್ಮಜ್ಞಾನಿಯನ್ನು ಕಂಡಾಗ ಶಿಷ್ಯರ ಸಂಶಯಗಳೆಲ್ಲಾ ದೂರವಾಗುತ್ತವೆ ಎಂದು ಉಪನಿಷತ್ತೊಂದು ನಿರೂಪಿಸುತ್ತದೆ:

ಚಿತ್ರಂ ವಟತರೋಃ ಮೂಲೇ ವೃದ್ಧಾಃ ಶಿಷ್ಯಾಃ ಯುವಾ ಗುರುಃ।
ಮೌನಂ ತಸ್ಯ ವ್ಯಾಖ್ಯಾನಂ ಶಿಷ್ಯಾಃ ಛಿನ್ನಸಂಶಯಾಃ॥

ಆದುದರಿಂದಲೇ ಶಿವಯೋಗಿ ಶಿವಾಚಾರ್ಯರ ಈ ಮಾತು ಅರ್ಥಪೂರ್ಣ-

ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್।
ಆಚಾರಂ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ॥[೩]

ಮುಂದುವರೆದು ಹೀಗೆ ಹೇಳಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್।[೪]

'ನುಡಿದಂತೆ ನಡೆಯದ ಜಾತಿಡೊಂಬರನ್ನು ಕೂಡಲಸಂಗಮದೇವ ಮೆಚ್ಚುವುದಿಲ್ಲ' ಎಂದು ಬಸವಣ್ಣನವರು ನಿಷ್ಠುರವಾದ ಸತ್ಯವನ್ನು ನುಡಿಯುತ್ತಾರೆ. ಈ ಅರ್ಥದಲ್ಲಿಯೇ ಸರ್ವಜ್ಞ ವಚನವನ್ನು ವ್ಯಾಖ್ಯಾನಿಸಬೇಕು.

ಖಂಡಿಸದೆ ಕರಣವನು ದುಡಿಸದೆ ದೇಹವನು
ಉಂಡುಂಡು ಸ್ವರ್ಗಕ್ಕೈದುವಡೆ ಅದನೇನು
ಹಡೆಯಾಡುವಳೆ ಸರ್ವಜ್ಞ.

ಕಾಡುಜೀವಿಯಾದ ಮನುಷ್ಯನು ಕ್ರಮೇಣ ನಾಡಜೀವಿಯಾದಾಗ ವ್ಯಷ್ಟಿಜೀವನದ ಹಾಗೂ ಸಮಷ್ಟಿಜೀವನದ ಹಿತದ ಪಾಲನೆ ಅನಿವಾರ್ಯವಾದಾಗ ನೀತಿಯ ಉದಯವಾಯಿತೆಂದು ಹೇಳಬಹುದು. ಆದುದರಿಂದ ಆಸ್ತಿಕ-ನಾಸ್ತಿಕವೆಂಬ ಭೇದವಿಲ್ಲದೆ ಪ್ರತಿಯೊಬ್ಬ ವ್ಯಕ್ತಿಯು ಧರ್ಮನಿರಪೇಕ್ಷವಾಗಿ ಆಚರಿಸಿದಾಗ ಮಾತ್ರ ವಿಶ್ವಶಾಂತಿ ಸಾಧ್ಯವಾಗುತ್ತದೆಂದರೆ ತಪ್ಪಾಗಲಾರದು. ಆದರೆ ನೀತಿಸಂಹಿತೆಯನ್ನು ಕೇವಲ ಪ್ರತಿಷ್ಠೆಗಾಗಿ ಆಚರಿಸುವ ವ್ಯಕ್ತಿಯ ನಡತೆ ಢಾಂಬಿಕ ವೃತ್ತಿಯಾಗುತ್ತದೆ, ಸದಾಚಾರವಾಗಲಾರದು. 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಬಸವಣ್ಣನವರು ಹೇಳಿದ್ದು ಇದೇ ಅರ್ಥದಲ್ಲಿ.

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।[೫]

ಒಟ್ಟಿನಲ್ಲಿ 'ಆಚಾರಃ ಪರಮೋ ಧರ್ಮಃ' ಎಂಬಂತೆ ಎಲ್ಲ ಧರ್ಮಗಳ ಮೂಲವೇ ಸದಾಚಾರವಾಗಿದ್ದು, ನೀತಿಯ ತಳಹದಿ ಇಲ್ಲದೆ ಯಾರ ಧರ್ಮವೂ ಸ್ಥಿರವಾಗಿ ಉಳಿಯಲು ಸಾಧ್ಯವಿಲ್ಲ. ಷಟ್‌ಸ್ಥಲಸಿದ್ಧಾಂತದ ಸಾಧನೆಯ ಪೂರ್ಣ ಪ್ರಯೋಜನ ದೊರೆಯಬೇಕಾದರೆ ವೀರಶೈವದ ಸಾಮಾಜಿಕ ಅಂಗವಾದ ಅಷ್ಟಾವರಣ ಹಾಗೂ ನೈತಿಕ ಭಾಗವಾದ ಪಂಚಾಚಾರಗಳ ಅನುಷ್ಠಾನ ಅನಿವಾರ್ಯವೆಂದರೆ ತಪ್ಪಾಗಲಾರದು.

ಭಾರತೀಯ ದರ್ಶನಗಳಲ್ಲಿ ನೀತಿಯ ಮಹತ್ವವನ್ನರಿಯಬಹುದು. ಆದುದರಿಂದಲೇ 'ಆಚಾರಹೀನಂ ನ ಪುನಂತಿ ವೇದಾಃ' ಎಂದು ಅರ್ಥಪೂರ್ಣವಾಗಿ ಸೂಚಿಸಲಾಗಿದೆ. ರಾಜಯೋಗದ ಆಚಾರ್ಯನಾದ ಪತಂಜಲಿಯು ಯೋಗಾಷ್ಟಾಂಗಗಳಲ್ಲಿ ಯಮ-ನಿಯಮಗಳೆಂಬ ನೈತಿಕಾಚರಣೆಯನ್ನು ನಿರೂಪಿಸುವ ಎರಡು ಅಂಗಗಳನ್ನು ಪ್ರಥಮವಾಗಿ ಮತ್ತು ಪ್ರಧಾನವಾಗಿ ನಿರೂಪಿಸಿದ್ದು ಗಮನಾರ್ಹ.

ಅಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾಃ ಯಮಾಃ।[೬]

ಅಂದರೆ ಸತ್ಯಾದಿ ಐದು ಯಮಗಳಿಂದ ಸಾಧಕನ ನೀತಿಮಟ್ಟವನ್ನು ನಿರ್ಧರಿಸಲಾಗುತ್ತಿದ್ದು ಈ ಐದನ್ನೇ ಜೈನದರ್ಶನದ ರತ್ನತ್ರಯದಲ್ಲಿ ಒಂದಾದ ಸಮ್ಯಕ್‌ಚಾರಿತ್ರ್ಯದ ಪಂಚಾಂಗಗಳೆಂದು ಗಣಿಸಲಾಗಿದೆ. ಮಾನವಧರ್ಮದ ಬುನಾದಿಗೆ ಅವಶ್ಯವಿರುವ ನೀತಿಸಂಹಿತೆಯನ್ನು ಬೇರೆ ಬೇರೆ ಸ್ಮೃತಿಕಾರರು ವಿಧವಿಧವಾಗಿ ಕೊಟ್ಟಿದ್ದರೂ, ವಿಶ್ವಮಾನ್ಯವೆನ್ನಬಹುದಾದ ನೀತಿನಿರೂಪಣೆಯನ್ನು ಶಿವಯೋಗಿ ಶಿವಾಚಾರ್ಯರು ಈ ರೀತಿ ಕೊಟ್ಟಿರುತ್ತಾರೆ-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ।
ದಾನಂ ಪೂಜಾ ಜಪೋ ಧ್ಯಾನಮಿತಿ ಧರ್ಮಸ್ಯ ಸಂಗ್ರಹಃ॥[೭]

ಮನುಸ್ಮೃತಿಯು ಧರ್ಮದ ದಶಲಕ್ಷಣ ನಿರೂಪಣೆ ಹೀಗೆ ಮಾಡಿದೆ.

ಧೃತಿಃಕ್ಷಮಾ ದಯಾಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್॥[೮]

ನೀತಿಯ ಸಪ್ತಸೂತ್ರಗಳನ್ನು ಬಸವಣ್ಣನವರು ಬಹುಸುಂದರವಾಗಿ ಹೀಗೆ ಉಲ್ಲೇಖಿಸುತ್ತಾರೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ಕೂಡಲಸಂಗದೇವನೊಲಿಸುವ ಪರಿ.[೯]

ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ನಿತ್ಯಾಚರಣೆಯನ್ನು ವೀರಶೈವದಲ್ಲಿ ಸರ್ವಾಚಾರ ಸಂಪತ್ತೆಂದು ಕರೆಯಲಾಗಿದ್ದು ಪಂಚಾಚಾರಗಳನ್ನು ನೈತಿಕ ವಿಭಾಗಕ್ಕೆ ಸೇರಿಸಲಾಗಿದೆ. ಇದರಿಂದ ವ್ಯಕ್ತಿ ಹಾಗೂ ಸಮಾಜಗಳಲ್ಲಿಯ ಸುಮಧುರ ಸಂಬಂಧ ಸಾಧ್ಯವಾಗುತ್ತದೆ. ವೀರಶೈವನೂ ಸಹ ಸಮಾಜಜೀವಿಯಾಗಿರುವುದರಿಂದಾಗಿ, ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಅವನು ಯಾವ ರೀತಿ ನಡೆದರೆ, ಪರಧರ್ಮ ಸಹಿಷ್ಣುತೆಯ ಜತೆ ಸ್ವಧರ್ಮನಿಷ್ಠೆಯಿಂದ ಕೂಡಿಕೊಂಡು ಲಿಂಗಾಂಗಸಾಮರಸ್ಯ ರೂಪದ ಮುಕ್ತಿಯನ್ನು ಪಡೆಯಲು ಶಕ್ತನಾಗುತ್ತಾನೆ? ಎಂಬುದು ಪಂಚಾಚಾರಗಳಿಂದ ವ್ಯಕ್ತವಾಗುತ್ತದೆ.

ಲಿಂಗದೀಕ್ಷೆಯಿಂದಾಗಿ ಪ್ರಾಣ-ಭಾವಲಿಂಗಸಹಿತ ಇಷ್ಟಲಿಂಗವನ್ನು ಧರಿಸಿದ ವೀರಶೈವನು ಅಷ್ಟಾವರಣ ಸಂಪನ್ನನೂ, ಪಂಚಾಚಾರ ಪರಾಯಣನೂ ಆಗುತ್ತಾನೆ. ಅವುಗಳಲ್ಲಿ ಶ್ರದ್ಧೆಯನ್ನು ಬೆಳೆಸುವ ಕಾರ್ಯವನ್ನು ಗುರೂಪದೇಶ ಮಾಡುತ್ತದೆ.

ಅಷ್ಟಾವರಣೇಷು ತ್ವಂ ಶ್ರದ್ಧಾಂ ಕುರು ಪ್ರಯತ್ನತಃ।
ಪ್ರವರ್ತಸ್ವ ಮಹಾಬುದ್ಧೇ ಪಂಚಾಚಾರೇಷ್ವಪಿ ಕ್ರಮಾತ್॥[೧೦]

ಷಟ್‌ಸ್ಥಲಾಂತರ್ಗತ ಏಕೋತ್ತರಶತಸ್ಥಲ ನಿರೂಪಣೆಯನ್ನು ಮಾಡುವ ಸಿದ್ಧಾಂತ-ಶಿಖಾಮಣಿ ಸ್ವತಂತ್ರವಾಗಿ ಪಂಚಾಚಾರವರ್ಣನೆಯನ್ನು ಮಾಡದಿದ್ದರೂ, ಅದಕ್ಕೆ ಆಧಾರಗ್ರಂಥಗಳಾದ ಶಿವಾಗಮಗಳಲ್ಲಿ ಪಂಚಾಚಾರಗಳ ಸ್ಪಷ್ಟನಿರೂಪಣೆಯನ್ನು ಕಾಣುತ್ತೇವೆ. ಆದಾಗ್ಯೂ ಪ್ರಸಂಗವಶಾತ್ ಅಂದರೆ ಸ್ಥಲನಿರೂಪಣಾವಸರದಲ್ಲಿ ಆಚಾರ-ಮೀಮಾಂಸೆ ಬಂದಿರುವುದನ್ನೂ ಅವಲೋಕಿಸಬಹುದು. ಆಯಾ ಆಚಾರನಿರೂಪಣೆಯ ಸಂದರ್ಭದಲ್ಲಿ ಈ ವಿಷಯ ಸ್ಪಷ್ಟವಾಗದಿರದು.

ಚಂದ್ರಜ್ಞಾನಾಗಮ ಕ್ರಿಯಾಪಾದ ನವಮ ಪಟಲದಲ್ಲಿ ಪಂಚಾಚಾರಗಳ ನಾಮನಿರ್ದೇಶ ಈ ರೀತಿ ಬಂದಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ॥[೧೧]

ಚಂದ್ರಜ್ಞಾನಾಗಮದಲ್ಲಿ ಪಂಚಾಚಾರಗಳ ಸಾಮಾನ್ಯಸ್ವರೂಪದ ನಿರೂಪಣೆಯನ್ನು ಹೀಗೆ ಮಾಡಲಾಗಿದೆ:

ಗುರುಣಾ ದತ್ತಲಿಂಗಾದ್ವೈ ನಾಸ್ತಿ ದೈವಂ ಮಹೀತಲೇ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ॥
ಧರ್ಮಾರ್ಜಿತೇನ ದ್ರವ್ಯೇಣ ಯತ್ ಸಂತರ್ಪಣಮನ್ವಹಮ್।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥
ಶಿವ ಏವ ಪರಂ ಬ್ರಹ್ಮ ಪಂಚಕೃತ್ಯಪರಾಯಣಮ್।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥
ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ।
ನ ಶೃಣೋತಿ ಚ ಯನ್ನಿಂದಾಂ ಸ ಗಣಾಚಾರ ಉಚ್ಯತೇ॥
ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[೧೨]

ಅರ್ಥಾತ್ ಗುರುವು ದಯಪಾಲಿಸಿದ (ಇಷ್ಟ)ಲಿಂಗವನ್ನು ಬಿಟ್ಟು ಈ ಭೂಮಿಯಲ್ಲಿ ಬೇರೊಂದು ದೈವವಿಲ್ಲವೆಂಬ ಭಾವಾನುಸಂಧಾನವೇ ಲಿಂಗಾಚಾರವೆಂದು ಹೇಳಬಹುದು. ಧರ್ಮಮಾರ್ಗದಿಂದ ಗಳಿಸಿದ ದ್ರವ್ಯದಿಂದ ಗುರು-ಲಿಂಗ-ಜಂಗಮರ ನಿತ್ಯಾರಾಧನೆ ಸದಾಚಾರವೆನಿಸುತ್ತದೆ. ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹವೆಂಬ ಐದು ಕೃತ್ಯಗಳಿಂದ ಕೂಡಿದ ಶಿವನೇ ಪರಬ್ರಹ್ಮನಾಗಿದ್ದು ಅವನನ್ನುಳಿದು ಬೇರೆ ಗತಿಯಿಲ್ಲವೆಂದು ಭಾವಿಸಿ ನಡೆಯುವುದೇ ಶಿವಾಚಾರ. ಶಿವನ, ಶಿವಭಕ್ತನ ಮತ್ತು ಶಿವಧರ್ಮದ ನಿಂದೆಯನ್ನು ಕೇಳದಿರುವುದೇ ಗಣಾಚಾರ. ಈ ಜಗತ್ತಿನಲ್ಲಿ ಶಿವಭಕ್ತರೆಲ್ಲಾ ಶ್ರೇಷ್ಠರಾಗಿದ್ದು ನಾನು ಅವರ ಸೇವಕನಾಗಿದ್ದೇನೆಂದು ಭಾವಿಸುವುದೇ ಭೃತ್ಯಾಚಾರವೆನಿಸುತ್ತದೆ.

ಷಟ್‌ಸ್ಥಲಚಕ್ರವರ್ತಿಯೆಂದು ವಿಖ್ಯಾತರಾದ ಚೆನ್ನಬಸವಣ್ಣನವರು 'ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನರಿತು...' ಎಂದು ಆಗಮಪ್ರಾಮಾಣ್ಯವನ್ನು ಒಪ್ಪಿದ ಸಂಗತಿಯು ಈ ಶ್ಲೋಕಗಳ ಸರಳಾನುವಾದದಂತಿರುವ ಅವರ ಕೆಳಗಿನ ವಚನದಿಂದಲೇ ವ್ಯಕ್ತವಾಗುತ್ತದೆ.

ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ,
ಸಜ್ಜನಕಾಯಕದಿಂದ ಗುರು ಲಿಂಗ ಜಂಗಮಕ್ಕೆ ಮಾಡಿ ನೀಡಿ
ಸತ್ಯನಾಗಿಹುದೆ ಸದಾಚಾರ
ಶಿವಭಕ್ತರಲ್ಲಿ ಜಾತಿವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ,
ಶಿವಾಚಾರ ನಿಂದೆಯನ್ನು ಕೇಳದಿಹುದೇ ಗಣಾಚಾರ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಶರಣರೇ ಹಿರಿಯರಾಗಿ ತಾನೇ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ
ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದನಿಕ್ಕಿ
ಸಲಹಯ್ಯಾ ಪ್ರಭುವೇ ಕೂಡಲ ಚೆನ್ನಸಂಗಮದೇವ.

ಈಗ ಅವುಗಳ ಸ್ವರೂಪವನ್ನು ಸವಿಸ್ತಾರವಾಗಿ ಪರಿಶೀಲಿಸೋಣ.

೧. ಲಿಂಗಾಚಾರ:

ಮೇಲೆ ಹೇಳಿದಂತೆ ಗುರುವಿನ ಅನುಗ್ರಹದಿಂದ ದೀಕ್ಷಿತನಾದ ಅಂದರೆ ಗುರುಕರಸಂಜಾತನಾದ ವೀರಶೈವನಿಗೆ ಈ ಆಚಾರವು ಪ್ರಾಣಸ್ವರೂಪವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಗುರುಕೃಪಾಲಬ್ಧವಾದ ಇಷ್ಟಲಿಂಗವನ್ನು ಅಂಗದ ಮೇಲೆ ಸದಾ ಧರಿಸಿಕೊಂಡಿರುವುದೇ ಲಿಂಗಾಚಾರವೆನಿಸುತ್ತದೆ. ತನ್ನ ಆತ್ಮಸ್ವರೂಪವಾದ ಲಿಂಗವನ್ನುಳಿದು ಅನ್ಯದೈವಕ್ಕೆರಗುವುದು ಪಾಪವೆಂಬ ಅಭಿಪ್ರಾಯ ಆಗಮೋಕ್ತಿಯಿಂದ ಸ್ಪಷ್ಟವಾಗುತ್ತದೆ. ಇಷ್ಟಲಿಂಗಧಾರಣೆ ವೀರಶೈವದ ವಿಶಿಷ್ಟಲಕ್ಷಣವೆಂದು ಪುರಾಣೋಕ್ತಿಯು ಸ್ಪಷ್ಟಪಡಿಸುತ್ತದೆ.

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ
ವಿನ್ಯಸ್ಯ ತಲ್ಲೀನಮನಃಪ್ರಚಾರಃ।
ಬಾಹ್ಯಕ್ರಿಯಾಸಂಕುಲನಿಃಸ್ಪೃಹಾತ್ಮಾ।
ಸಂಪೂಜಯತ್ಯಂಗ ಸ ವೀರಶೈವಃ॥[೧೩]

ದೀಕ್ಷಾಸಮಯದಲ್ಲಿ ಇಷ್ಟಲಿಂಗವನ್ನು ಶಿಷ್ಯಹಸ್ತದಲ್ಲಿರಿಸಿ ಗುರು ಹೀಗೆ ಎಚ್ಚರಿಸುತ್ತಾನೆ.

ಪ್ರಾಣವದ್‌ಧಾರಣೀಯಂ ತತ್ ಪ್ರಾಣಲಿಂಗಮಿದಂ ತವ।
ಕದಾಚಿತ್ ಕುತ್ರಚಿದ್ ವಾಪಿ ನ ವಿಯೋಜಯ ದೇಹತಃ॥
ಯದಿ ಪ್ರಮಾದಾತ್ ಪತಿತೇ ಲಿಂಗೇ ದೇಹಾನ್ಮಹೀತಲೇ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ॥[೧೪]

ಅಂದರೆ ಪ್ರಮಾದವಶಾತ್ ಇಷ್ಟಲಿಂಗ ಭೂಮಿ ಮೇಲೆ ಬಿದ್ದರೆ, ಕಳೆದುಹೋದರೆ ಪ್ರಾಣತ್ಯಾಗ ಮಾಡಿ ಮೋಕ್ಷವನ್ನು ಹೊಂದಬೇಕೆಂಬ ಗುರೂಪದೇಶದ ಮರ್ಮ ಸದಾ ಲಿಂಗಸಂಗಿಯಾಗಿರಬೇಕೆಂಬುದೇ ಆಗಿದೆ. ನಂಬಬಲ್ಲ ಪತಿವ್ರತೆಗೆ ಗಂಡನೊಬ್ಬನೇ ಆಗಿರುವಂತೆ ವೀರಶೈವನಿಗೆ ಲಿಂಗವೇ ಪರದೈವವಾಗಿದೆ. ಆದುದರಿಂದಲೇ 'ಲಿಂಗಪತಿ, ಶರಣಸತಿ' ಎಂಬ ಸೂಕ್ತಿ ಅರ್ಥಪೂರ್ಣವಾದುದು. 'ಅರಸನ ಕಂಡು ತನ್ನ ಪುರುಷನ ಮರೆಯಬಹುದೇ?' ಎಂದು ಶರಣರು ಯಥಾರ್ಥವಾಗಿ ಪ್ರಶ್ನಿಸಿದ್ದಾರೆ. ಇದನ್ನೇ ಶಿವಯೋಗಿ ಶಿವಾಚಾರ್ಯರು ಹೀಗೆ ವಿವರಿಸಿದ್ದಾರೆ.

ಪತಿವ್ರತಾಯಾ ಯಚ್ಛೀಲಂ ಪತಿರಾಗಾತ್ ಪ್ರಶಸ್ಯತೇ।
ತಥಾ ಶಿವಾನುರಾಗೇಣ ಸುಶೀಲೋ ಭಕ್ತ ಉಚ್ಯತೇ॥[೧೫]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೀಲಸಂಪಾದನಸ್ಥಲದ ಈ ಶ್ಲೋಕವು ಲಿಂಗಾಚಾರದ ಮಹತ್ವವನ್ನು ಸುಂದರವಾಗಿ ವಿವರಿಸುತ್ತದೆ. ಲಿಂಗಾಚಾರದ ಪ್ರಕಾರಾಂತರವನ್ನು ಚಂದ್ರಜ್ಞಾನಾಗಮ ವಿವರವಾಗಿ ನಿರೂಪಿಸುತ್ತದೆ.

ಕ್ರಿಯಾವೇಧಾಮನ್ವಭಿಖ್ಯದೀಕ್ಷಾಂತರ್ಗತಮೂರ್ತಯಃ।
ಏಕವಿಂಶತಿದೀಕ್ಷಾಶ್ಚ ಲಿಂಗಾಚಾರ ಇತಿ ಸ್ಮೃತಃ॥[೯೬]

ಅರ್ಥಾತ್ ಕ್ರಿಯಾ, ವೇಧಾ ಮತ್ತು ಮಂತ್ರವೆಂಬ ಮೂರು ದೀಕ್ಷೆಗಳು ಪ್ರತ್ಯೇಕ ಏಳು ಉಪವಿಭಾಗಗಳಾಗಿದ್ದು ೨೧ ಬಗೆಯ ದೀಕ್ಷೆಗಳು ಲಿಂಗಾಚಾರಾಂತರ್ಗತವಾಗಿರುತ್ತವೆ. ತ್ರಿವಿಧ ದೀಕ್ಷೆಯ ವಿವರಣೆಯನ್ನು ಸಿದ್ಧಾಂತಶಿಖಾಮಣಿಯ ಆರನೆಯ ಪರಿಚ್ಛೇದದ ೧೨-೧೮ರವರೆಗಿನ ಶ್ಲೋಕಗಳಲ್ಲಿ ಕಾಣಬಹುದಾದರೂ, ಚಂದ್ರಜ್ಞಾನಾಗಮದಲ್ಲಿ ಆ ೨೧ ದೀಕ್ಷೆಗಳ ನಾಮನಿರ್ದೇಶವನ್ನು ಕಾಣುತ್ತೇವೆ. ಕ್ರಿಯಾದೀಕ್ಷೆಯ ಏಳು ಭೇದಗಳ ಉಲ್ಲೇಖ ಈ ರೀತಿ ಇದೆ.

ಆಜ್ಞೋಪಮಾ ಚ ಕಲಶೈರಭಿಷೇಕಸ್ತತಃ ಪರಮ್।
ಸ್ವಸ್ತಿಕಾರೋಹಣಂ ಭೂತಿಪಟ್ಟಮಾಯತ್ತಮೇವ ಚ॥
ಸ್ವಾಯತ್ತಮಿತಿ ಸಪ್ತೈತಾಃ ಕ್ರಿಯಾದೀಕ್ಷಾಂತರಾ ಮತಾಃ॥[೯೭]

ಅಂದರೆ ಆಜ್ಞಾ, ಉಪಮಾ, ಕಲಶಾಭಿಷೇಕ, ಸ್ವಸ್ತಿಕಾರೋಹಣ ಭೂತಿಪಟ್ಟ, ಆಯತ್ತ ಮತ್ತು ಸ್ವಾಯತ್ತ ಎಂಬ ಏಳು ಉಪವಿಭಾಗಗಳು ಕ್ರಿಯಾದೀಕ್ಷೆಯಲ್ಲಿರುತ್ತವೆ. ಅವುಗಳ ಸ್ವರೂಪ ನಿರೂಪಣೆಯನ್ನು ಕಾರಣಾಗಮದಲ್ಲಿ ಕಾಣುತ್ತೇವೆ.

೧. ಆಜ್ಞಾದೀಕ್ಷೆ:

ಪರಿತ್ಯಜ್ಯ ಸದಾಚಾರಂ ಮಾ ಪ್ರವರ್ತಸ್ವ ಸರ್ವದಾ।
ಇತ್ಯಾಜ್ಞಾದೀಕ್ಷಯಾಽಽದಿಶ್ಯ ತತಸ್ತ್ವೇವಂ ವದೇದ್ ಗುರುಃ॥[೯೮]

ಅಂದರೆ ಸದಾಚಾರವನ್ನು ಬಿಟ್ಟು ಎಂದಿಗೂ ನಡೆಯಬೇಡವೆಂದು ಗುರುವು ಶಿಷ್ಯನಿಗೆ ಆಜ್ಞಾದೀಕ್ಷೆಯಿಂದ ಉಪದೇಶ ಮಾಡುತ್ತಾನೆ.

೨. ಉಪಮಾದೀಕ್ಷೆ:

ಪುರಾತನಕೃತಾಚಾರಸದೃಶಂ ಕುರ್ವಿತಿ ಸ್ಫುಟಮ್।
ಉಪಮಾದೀಕ್ಷಯಾಽಽದಿಶ್ಯ ಶಿಷ್ಯಪಾಪಾಪನುತ್ತಯೇ।
ಪ್ರಾಣಾನಾಯಮ್ಯ ವಿಧಿವತ್ ಪಂಚಗವ್ಯಾನಿ ಸಾಧಯೇತ್॥[೯೯]

ಅರ್ಥಾತ್ ಪುರಾತನರು ನಡೆಸುತ್ತಿದ್ದ ಆಚಾರಕ್ಕೆ ಸಮಾನವಾದ ಆಚಾರವು ನಿನ್ನದಾಗಬೇಕೆಂದು ಉಪಮಾದೀಕ್ಷೆಯಿಂದ ಗುರು ಉಪದೇಶಿಸುತ್ತಾನೆ:

೩. ಕಲಶಾಭಿಷೇಕದೀಕ್ಷೆ:

ಇದರ ವಿವರಣೆ ದೀರ್ಘವಾಗಿ ಬಂದಿದ್ದು ಪಂಚಕಲಶ ಸ್ಥಾಪನೆ ಜಲದಿವಾಸ, ಧಾನ್ಯಾದಿವಾಸ ಅಭಿಷೇಕ ಪೂಜೆಗಳಿಂದ ಲಿಂಗವನ್ನು ಸಂಸ್ಕರಿಸಿ ಕಲಶಾಭಿದೀಕ್ಷೆಯನ್ನು ನೀಡುತ್ತಾನೆ. ಅದರ ಸಂಕ್ಷಿಪ್ತವಾದ ಸ್ವರೂಪ ನಿರೂಪಣೆ ಈ ರೀತಿ ಇದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಕುಂಭೋದಕೈಃ ಶುದ್ಧೈಃ ಶಿಷ್ಯಂ ಸಂಸ್ಥಾಪಯೇದಪಿ।
ಪಂಚತತ್ತ್ವವಿಶುದ್ಧ್ಯರ್ಥಂ ಪಂಚಬ್ರಹ್ಮಮನೂನ್ ಜಪನ್॥[೨೮]

ಅಂದರೆ ಪೃಥಿವ್ಯಾದಿ ಐದು ತತ್ತ್ವಗಳ ಶೋಧನೆಗಾಗಿ ಅಂದರೆ ಪಂಚಭೂತಶುದ್ಧಿಗಾಗಿ ಐದು ಕಲಶಗಳಲ್ಲಿಯ ಶುದ್ಧಜಲದಿಂದ ಪಂಚಬ್ರಹ್ಮಮಂತ್ರಗಳ ಜಪವನ್ನು ಮಾಡುತ್ತ ಶಿಷ್ಯನಿಗೆ ಸ್ನಾನ ಮಾಡಿಸುವುದೇ ಕಲಶಾಭಿಷೇಕ.

೪. ಸ್ವಸ್ತಿಕಾರೋಹಣದೀಕ್ಷೆ:

ಷಡಧ್ವಶೋಧನದ್ವಾರಾ ಮಾಂಸಪಿಂಡನಿವೃತ್ತಯೇ।
ಸ್ವಸ್ತಿಕಾರೋಹಣಾಭಿಖ್ಯಾಂ ದೀಕ್ಷಾಂ ದದ್ಯಾದ್ಯಥಾವಿಧಿ॥[೨೯]

ಷಡಧ್ವಶೋಧನೆಯಿಂದ ಮಾಂಸಪಿಂಡ ಭಾವನೆಯನ್ನು ದೂರಮಾಡಲು ವಿಧಿಪೂರ್ವಕ ಸ್ವಸ್ತಿಕಾರೋಹಣದೀಕ್ಷೆಯನ್ನು ದಯಪಾಲಿಸಬೇಕು.

೫. ಭೂತಿಪಟ್ಟದೀಕ್ಷೆ:

ಅನಾದಿಮಲಸಂಹೃತ್ಯೈಭೂತಿಪಟ್ಟಾಖ್ಯದೀಕ್ಷಯಾ।
ಸ್ನಾನಮುದ್ಧೂಲನಂ ಭೂತ್ಯಾ ಧಾರಣಂ ಚಾಪಿ ಕಾರಯೇತ್॥[೩೦]

ಆಣವಾದಿ ಅನಾದಿಮಲತ್ರಯ ನಿವಾರಣೆಗಾಗಿ ಭೂತಿಪಟ್ಟದೀಕ್ಷೆಯ ಮೂಲಕ ಗುರು ಶಿಷ್ಯನಿಗೆ ಭಸ್ಮಸ್ನಾನ, ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಧಾರಣ ಮಾಡಿಸಬೇಕು.

೬. ಆಯತ್ತದೀಕ್ಷೆ ಮತ್ತು ೭. ಸ್ವಾಯತ್ತದೀಕ್ಷೆಗಳು:

ಮಧ್ಯಮಂಡಲನಿಕ್ಷಿಪ್ತಂ ಸೂತ್ರಪಂಚಕಲಕ್ಷಿತಮ್।
ಶಾಂತೇಶ್ವರಾಭಿಧಂ ಸರ್ವಮಂತ್ರನ್ಯಾಸೋಪಶೋಭಿತಮ್।
ಇಷ್ಟಲಿಂಗಂ ಸಮಾಧಾಯ ವಾಮಹಸ್ತೇಭಿಪೂಜ್ಯ ಚ।
ಸೌಮ್ಯ ತಲ್ಲಿಂಗಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್॥
ಗುರ್ವಂತೇವಾಸಿನೋರ್ಮಧ್ಯೇ ಗ್ರಾಹಯಿತ್ವಾ ಪಟಂ ತದಾ।
ಚೂರ್ಣಿಕಾಮಂಗಲಧ್ವಾನೈಃ ಪಠೇಯುರ್ಮಂಗಲಾಷ್ಟಕಮ್॥
ತತೋ ಮಾಹೇಶ್ವರೈಃ ಸಾರ್ಧಂ ಶಿಷ್ಯಮುದ್ದಿಶ್ಯ ದೇಶಿಕಃ।
ಅಂಗತ್ರಯೇಽಪಿ ದೃಢತೋ ಲಿಂಗವಾನ್ ಭವ ಸರ್ವದಾ॥
ಇತಿ ಬ್ರುವನ್ ಜವನಿಕಾಂ ವರ್ಜಯನ್ ಶಿಷ್ಯಮೂರ್ಧನಿ।
ಧ್ರುವಂ ತು ಇತಿ ಮಂತ್ರೇಣ ನಿಕ್ಷೇಪೇನ್ಮಂಗಲಾಕ್ಷತಾನ್॥
ಉತ್ತರಾಭಿಮುಖಃ ಶಿಷ್ಯಂ ವಾಮಭಾಗೇ ನಿಜಾಸನೇ।
ನಿವೇಶಯನ್ ತಸ್ಯ ದದ್ಯಾದ್ ದೀಕ್ಷಾಂ ಸ್ವಾಯತ್ತಸಂಜ್ಞಿತಾಮ್॥
ವಸ್ತ್ರೇಣಾಚ್ಛಾದಯನ್ ಶಿಷ್ಯಮಾತ್ಮಾನಂ ಚ ಗುರುಸ್ತದಾ।
ವಾಮಹಸ್ತಂ ತು ಶಿಷ್ಯಸ್ಯ ಮೂಲೇನೈವಾಭಿಮಂತ್ರ್ಯ ಚ॥
ಸಪ್ತವಾರಂ ಸುಸಂಪೂಜ್ಯ ಸ್ವವಾಮಕರಸಂಸ್ಥಿತಮ್।
ನಿಕ್ಷಿಪೇತ್ತತ್ರ ತಲ್ಲಿಂಗಂ ತ್ರಿಯಂಬಕಮನುಂ ಸ್ಮರನ್॥[೩೧]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಾತ್ ಮಧ್ಯಮಂಡಲದಲ್ಲಿ ಇರಿಸಲ್ಪಟ್ಟ ಪಂಚಸೂತ್ರಘಟಿತವಾದ, ಎಲ್ಲ ಮಂತ್ರಗಳ ನ್ಯಾಸದಿಂದ ಶೋಭಿತವಾದ, ಶಾಂತೇಶ್ವರ ಎಂದು ಕರೆಯುವ, ಇಷ್ಟಲಿಂಗವನ್ನು ತನ್ನ ಎಡಗೈಯಲ್ಲಿ ಸ್ಥಾಪಿಸಿ ಪೂಜಿಸಿದ ಮೇಲೆ ಈ ಇಷ್ಟಲಿಂಗವನ್ನು ತನ್ನ ಎಡಗೈಯಲ್ಲಿ ಸ್ಥಾಪಿಸಿ ಪೂಜಿಸಿದ ಮೇಲೆ "ಸೌಮ್ಯನೇ, ಈ ಇಷ್ಟಲಿಂಗವನ್ನು ನೋಡು" ಎಂದು ನುಡಿದು ಶಿಷ್ಯನಿಗೆ ಇಷ್ಟಲಿಂಗವನ್ನು ತೋರಿಸಬೇಕು. ಗುರು ಮತ್ತು ಶಿಷ್ಯನ ಮಧ್ಯದಲ್ಲಿ ಬಟ್ಟೆಯ ಒಂದು ಪರದೆಯನ್ನು ಹಿಡಿದು ಮಂಗಲವಾದ್ಯವನ್ನು ಬಾರಿಸುತ್ತ ಕೆಂಪುಬಣ್ಣವನ್ನು ಎರಚುತ್ತ ಎಲ್ಲರೂ ಮಂಗಲಾಷ್ಟಕವನ್ನು ಪಠಿಸಬೇಕು. ಅನಂತರ ಮಾಹೇಶ್ವರರ ಜೊತೆ ಗುರುವು ಶಿಷ್ಯನಿಗೆ ಹೇಳಬೇಕು- "ನೀನು ಸದಾ (ಸ್ಥೂಲ, ಸೂಕ್ಷ್ಮ ಮತ್ತು ಕಾರಣವೆಂಬ) ಅಂಗತ್ರಯದಲ್ಲಿ (ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂಬ) ತ್ರಿವಿಧ ಲಿಂಗಗಳುಳ್ಳವನಾಗು." ಹೀಗೆ ನುಡಿಯುತ್ತ ಪರದೆಯನ್ನು ಸರಿಸಿ ಶಿಷ್ಯನ ತಲೆಯ ಮೇಲೆ 'ಧ್ರುವಂ ತೇ' ಎಂಬ ಮಂತ್ರದಿಂದ ಮಂಗಲಾಕ್ಷತೆಯನ್ನು ಹಾಕಬೇಕು. ತಾನು ಉತ್ತರದಿಕ್ಕಿನ ಕಡೆ ಮುಖ ಮಾಡಿ ಕುಳಿತು ತನ್ನ ಆಸನದ ಎಡಭಾಗದಲ್ಲಿ ಶಿಷ್ಯನನ್ನು ಕುಳ್ಳಿರಿಸಿ ಗುರುವು ಸ್ವಾಯತ್ತದೀಕ್ಷೆಯನ್ನು ನೀಡಬೇಕು. ಗುರುವು ತನ್ನ ಮತ್ತು ಶಿಷ್ಯನ ಮೇಲೆ ವಸ್ತ್ರವನ್ನು ಹೊದ್ದುಕೊಂಡು ಶಿಷ್ಯನ ಎಡಗೈಯನ್ನು ಮೂಲಮಂತ್ರ (ಪಂಚಾಕ್ಷರೀ ಮಂತ್ರ)ದಿಂದ ಅಭಿಮಂತ್ರಿಸಿ; ತನ್ನ ಎಡಗೈಯಲ್ಲಿರುವ ಇಷ್ಟಲಿಂಗವನ್ನು ಏಳು ಸಲ ಪೂಜಿಸಿ, 'ತ್ರಿಯಂಬಕ' ಮಂತ್ರವನ್ನು ಸ್ಮರಿಸುತ್ತ ಆ ಇಷ್ಟಲಿಂಗವನ್ನು ಶಿಷ್ಯನ ಹಸ್ತದಲ್ಲಿರಿಸಬೇಕು.

ವೇಧಾದೀಕ್ಷೆಯಲ್ಲಿ ಸಮಯದೀಕ್ಷೆ, ಅಸಂಸಾರದೀಕ್ಷೆ, ತತ್ತ್ವದೀಕ್ಷೆ, ಜ್ಞಾನದೀಕ್ಷೆ, ಅನುಗ್ರಹದೀಕ್ಷೆ, ಅಧ್ಯಾತ್ಮದೀಕ್ಷೆ ಮತ್ತು ಶುದ್ಧವಿದ್ಯಾದೀಕ್ಷೆ ಎಂದು ಏಳು ಅವಾಂತರ ಭೇದಗಳಿವೆ.

> ಸಮಯಶ್ಚಾಪ್ಯಸಂಸಾರಸ್ತತ್ತ್ವಂ ಜ್ಞಾನಮನುಗ್ರಹಃ।
> ಅಧ್ಯಾತ್ಮಶುದ್ಧವಿದ್ಯೇ ಚ ಸಪ್ತ ವೇಧಾಂತರಾಃ ಸ್ಮೃತಾಃ॥[೨೩]

ಅವುಗಳ ಸ್ವರೂಪ ನಿರೂಪಣೆ ಇಂತಿದೆ.

೧. ಸಮಯದೀಕ್ಷೆ:

> ಪಾಣಾನಾಯಮ್ಯ ಚ ಗುರುಃ ಸಪ್ತೇಮಾಃ ಸಮಯಾದಿಕಾಃ।
> ಕರಿಷ್ಯ ಇತಿ ಸಂಕಲ್ಪ್ಯ ತನ್ಮೂರ್ಧಾನಾಂ ಸಮರ್ಚ್ಯ ಚ॥
> ಷಡಕ್ಷರೇಣ ಮನುನಾ ಹಸ್ತಂ ಸ್ವಸ್ಯ ಚ ದಕ್ಷಿಣಮ್।
> ಷಡ್ವಾರಮಭಿಮಂತ್ರ್ಯಾಥ ಶಿವಹಸ್ತಂ ವಿಭಾವ್ಯ ಚ।
> ತಂ ಶಿಷ್ಯಶಿರಸಿ ನ್ಯಸ್ಯ ಪಠೇದೇಕಾಗ್ರಮಾನಸಃ॥
> ಅಯಂ ಮೇ ಹಸ್ತ ಇತ್ಯೇವಂ ಮಂತ್ರಂ ಶಿಷ್ಯಂ ವಿಲೋಕಯನ್।
> ಭೋ ಶಿಷ್ಯೇತಿ ಚ ಸಂಬೋಧ್ಯ ಬ್ರೂಯಾದೇವಂ ವಿಚಕ್ಷಣಃ॥
> ಹಿತ್ವಾ ಬಂಧುಜನೇ ಪ್ರೀತಿಂ ತಾಂ ಭಕ್ತೇಷು ಸ್ಥಿರಾಂ ಕುರು।
> ಏವಂ ಸಮಯಮಾದಿಶ್ಯ ನಿಃಸಂಸಾರಾಂ ನಿಬೋಧಯೇತ್॥[೨೪]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ ಪ್ರಾಣಾಯಾಮವನ್ನಾಚರಿಸಿ ಸಮಯದೀಕ್ಷೆಯನ್ನು ಕೊಡುವ ಸಂಕಲ್ಪ ಮಾಡಿ ಶಿಷ್ಯನ ಮಸ್ತಕವನ್ನು ಪೂಜಿಸಬೇಕು. ನಂತರ ಷಡಕ್ಷರಮಂತ್ರದಿಂದ ತನ್ನ ಬಲಗೈಯನ್ನು ಆರು ಸಲ ಅಭಿಮಂತ್ರಿಸಿ ತನ್ನ ಹಸ್ತವೇ ಶಿವನ ಹಸ್ತವೆಂದು ಭಾವಿಸಿ ಅದನ್ನು ಶಿಷ್ಯನ ಮಸ್ತಕದ ಮೇಲಿರಿಸಬೇಕು. 'ಅಯಂ ಮೇ ಹಸ್ತೋ ಭಗವಾನ್' ಎಂಬ ಮಂತ್ರವನ್ನು ಪಠಿಸುತ್ತ 'ಬಾಂಧವರ ಮೇಲಿನ ಪ್ರೀತಿಯನ್ನು ಶಿವಭಕ್ತರಲ್ಲಿರಿಸಬೇಕು' ಎಂದು ಸಮಯದೀಕ್ಷೆಯನ್ನು ಉಪದೇಶಿಸಬೇಕು.

೨. ಅಸಂಸಾರ (ನಿಃಸಂಸಾರ)ದೀಕ್ಷೆ:

ದೇಹೇಂದ್ರಿಯಾದಿಸಂಸಾರಂ ಪರಿಹೃತ್ಯ ಸದಾ ಮಮ।
ಪೂಜೋಪಚಾರಃ ಸಂಸಾರ ಇತಿ ಭಾವಯ ಚೇತಸಿ॥[೨೫]

ದೇಹೇಂದ್ರಿಯಾದಿ ಸಂಸಾರವನ್ನು ತ್ಯಜಿಸಿ ಶಿವಪೂಜೆಯೇ ಸಂಸಾರವೆಂದು ಮನಸ್ಸಿನಲ್ಲಿ ಭಾವಿಸು ಎಂಬ ಉಪದೇಶವೇ ನಿಃಸಂಸಾರದೀಕ್ಷೆ.

೩. ನಿರ್ವಾಣದೀಕ್ಷೆ:

ಮಲತ್ರಯಸಮುದ್ಭೂತೇ ತಾಪತ್ರಯಭಯಾಕುಲೇ।
ದುರಂತೇ ದುರ್ಭವೋಪಾಂತೇ ಮನೋ ನ ಕುರು ಯತ್ನತಃ॥[೨೬]

ಆಣವ, ಕಾರ್ಮಿಕ ಮತ್ತು ಮಾಯಾಮಲವೆಂಬ ಮಲತ್ರಯದಿಂದ ಉಂಟಾಗುವ ಆದಿಭೌತಿಕ, ಆದಿದೈವಿಕ ಮತ್ತು ಅಧ್ಯಾತ್ಮಿಕವೆಂಬ ತಾಪತ್ರಯದ ಭಯದಿಂದ ವ್ಯಾಕುಲವಾದ ದುರಂತಕರವಾದ ಹಾಗೂ ದುಃಖಮಯವಾದ ಭವದ ಕಡೆ ಮನಸ್ಸನ್ನು ಪ್ರಯತ್ನಪೂರ್ವಕವಾಗಿ ತಿರುಗಿಸದಿರು ಎಂಬ ಉಪದೇಶವೇ ನಿರ್ವಾಣದೀಕ್ಷೆ ಎನಿಸುತ್ತದೆ.

೪. ತತ್ತ್ವದೀಕ್ಷೆ:

ಲಿಂಗಾಂಗತತ್ತ್ವಂ ವಿಜ್ಞಾಯ ಲಿಂಗಸಾಯುಜ್ಯವಾನ್ ಭವ।
ಉಪದಿಶ್ಯೈವಮಥ ಚ ದದ್ಯಾದಧ್ಯಾತ್ಮಸಂಜ್ಞಿತಾಮ್॥[೨೭]

ಲಿಂಗಾಂಗತತ್ತ್ವವನ್ನರಿತು ಲಿಂಗದೊಂದಿಗೆ ಸಾಯುಜ್ಯ ಹೊಂದು ಎಂದು ಉಪದೇಶ ಮಾಡುವುದೇ ತತ್ತ್ವದೀಕ್ಷೆ. ಈ ವಿಷಯದಲ್ಲಿ ಸಿದ್ಧಾಂತಶಿಖಾಮಣಿಯ ಸಂಸಾರಹೇಯ ಸ್ಥಲದಲ್ಲಿ ಹೀಗೆ ಹೇಳಲಾಗಿದೆ.

ನಿತ್ಯಾನಂದಚಿದಾಕಾರಮಾತ್ಮತತ್ತ್ವಂ ವಿಹಾಯ ಕಃ।
ವಿವೇಕೀ ರಮತೇ ದೇಹೇ ನಶ್ವರೇ ದುಃಖಭಾಜನೇ॥[೨೮]

೫. ಅಧ್ಯಾತ್ಮದೀಕ್ಷೆ:

ಪ್ರಾಣೇ ಲಿಂಗಂ ಪ್ರತಿಷ್ಠಾಪ್ಯ ಲಿಂಗೇ ಪ್ರಾಣಂ ನಿಧಾಯ ಚ।
ಲಿಂಗಂ ನಿರೀಕ್ಷಮಾಣಃ ಸನ್ ಲಿಂಗಪ್ರಾಣೀ ಸದಾ ಭವ।
ಆದಿಶ್ಯೈವಂ ತತೋ ದದ್ಯಾತ್ ತತ್ತ್ವಸಂಶೋಧನಾತ್ಮಿಕಾಮ್॥[೨೯]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ ನಿನ್ನ ಪ್ರಾಣದಲ್ಲಿ ಇಷ್ಟಲಿಂಗವನ್ನು ಪ್ರತಿಷ್ಠಾಪಿಸಿ ಲಿಂಗದಲ್ಲಿ ಪ್ರಾಣವನ್ನಿರಿಸಿ ಅಲ್ಲಿ ಆ ಇಷ್ಟಲಿಂಗವನ್ನು ನೋಡುತ್ತ ಲಿಂಗಪ್ರಾಣಿ (ಪ್ರಾಣಲಿಂಗಿ) ಆಗು. ಈ ರೀತಿ ಉಪದೇಶ ಮಾಡಿ ತತ್ತ್ವಶೋಧಿಸಿ ದೀಕ್ಷೆಯನ್ನು ಕೊಡಬೇಕು.

೬. ತತ್ತ್ವಶೋಧಿನೀದೀಕ್ಷೆ:

ಶಬ್ದಾದೀನ್ ವಿಷಯಾನ್ ಸರ್ವಾಂಸ್ತತ್ತದಿಂದ್ರಿಯಗೋಚರಾನ್।
ಆಚಾರಲಿಂಗಮುಖ್ಯೇಭ್ಯಃ ಷಡ್‌ಲಿಂಗೇಭ್ಯಃ ಸಮರ್ಪಯನ್॥
ವರ್ತಸ್ವ ಶುದ್ಧಧೀರ್ನಿತ್ಯಂ ಪ್ರಯತೋಽಪಿ ಜಿತೇಂದ್ರಿಯಃ।
ಉಪದಿಶ್ಯೈವಮಪಿ ಚ ದದ್ಯಾತ್ ತತ್ತ್ವೋಪದೇಶಿನೀಮ್।
ದದ್ಯಾದ್ದೀಕ್ಷಾಂ ವಿಧಾನಜ್ಞಃ ಕೃಪಾಪರವಶೋ ಗುರುಃ॥[೫೦]

ಅಂದರೆ ಕರಣಾದಿ ಪಂಚೇಂದ್ರಿಯ ಗೋಚರವಾಗುವ ಶಬ್ದಾದಿವಿಷಯಗಳನ್ನು ಆಚಾರಾದಿ ಷಡ್‌ಲಿಂಗಗಳಿಗೆ ಸಮರ್ಪಿಸಿ ಶುದ್ಧಬುದ್ಧಿಯಿಂದ ಇಂದ್ರಿಯಜಯ ಸಾಧಿಸಬೇಕು ಎಂದು ಗುರು ಮಾಡುವ ಉಪದೇಶ ತತ್ತ್ವಶೋಧಿನೀದೀಕ್ಷೆಯೆನಿಸುತ್ತದೆ.

೭. ತತ್ತ್ವಬೋಧಾದೀಕ್ಷೆ:

ಸಚ್ಚಿತ್ಸುಖನಿಜಾಕಾರಂ ಲಿಂಗಂ ಯದ್ ಬ್ರಹ್ಮಸಂಜ್ಞಿತಮ್।
ತದಸಿ ತ್ವಮುಪಾಸ್ವಾತಸ್ತದೇವಾಹಮಿತಿ ಧ್ರುವಮ್॥[೫೧]

ಇಷ್ಟಲಿಂಗವು ಸಚ್ಚಿದಾನಂದಸ್ವರೂಪವಾದ ಆತ್ಮಸ್ವರೂಪವಾಗಿದ್ದು ಬ್ರಹ್ಮವೆಂದು ಕರೆಯಲಾಗುತ್ತದೆ. ಅದುವೇ ನೀನಾಗಿರುತ್ತಿ (ತತ್ತ್ವಮಸಿ). ಆದುದರಿಂದ ಶಿವೋಽಹಂ ಎಂದು ಭಾವಿಸಿ ಲಿಂಗೋಪಾಸನೆಯನ್ನು ಮಾಡಬೇಕು.

ಸಪ್ತವಿಧಾ ಮಂತ್ರದೀಕ್ಷಾ

ಚಂದ್ರಜ್ಞಾನಾಗಮವು ಸಪ್ತವಿಧ ಮಂತ್ರದೀಕ್ಷೆಯ ನಾಮ ನಿರ್ದೇಶವನ್ನು ಹೀಗೆ ಮಾಡುತ್ತದೆ.

ದೃಢವ್ರತಮಹಿಂಸಾ ಚ ತಸ್ಮೈ ಪಂಚೇಂದ್ರಿಯಾರ್ಪಣಮ್।
ಏಕಾಗ್ರಚಿತ್ತಸಂಪತ್ತಿಃ ಪರಮತತ್ತ್ವೇ ಸದಾ ರತಿಃ॥
ಲಿಂಗೇ ನಿಜಮನೋಲೀನಂ ಸದ್ಯೋಗಮುಕ್ತಿಶ್ಚ ಶಾಶ್ವತೀ।
ಏವಂ ಸಪ್ತವಿಧಾ ದೀಕ್ಷಾ ಮನುದೀಕ್ಷಾಂತರಾಃ ಸ್ಮೃತಾಃ॥[೫೨]

ಮಂತ್ರದೀಕ್ಷೆಯಲ್ಲಿ ದೃಢವ್ರತದೀಕ್ಷೆ, ಅಹಿಂಸಾದೀಕ್ಷೆ, ಪಂಚೇಂದ್ರಿಯಾರ್ಪಣದೀಕ್ಷೆ, ಏಕಾಗ್ರಚಿತ್ತಸಂಪತ್ತಿದೀಕ್ಷೆ, ಪರತತ್ತ್ವರತಿ ದೀಕ್ಷೆ, ನಿಜಮನೋಲಯದೀಕ್ಷೆ ಹಾಗೂ ಸದ್ಯೋಮುಕ್ತಿದೀಕ್ಷೆಯೆಂದು ಏಳು ಅವಾಂತರ ಭೇದಗಳಿವೆ ಆದರೆ ಕಾರಣಾಗಮದ ಕ್ರಿಯಾಪಾದದಲ್ಲಿ ಏಕಾಗ್ರಮತಿದೀಕ್ಷೆ, ದೃಢವ್ರತದೀಕ್ಷೆ ಪಂಚೇಂದ್ರಿಯಾರ್ಪಣದೀಕ್ಷೆ, ಅಹಿಂಸಾದೀಕ್ಷೆ, ಲಿಂಗನಿಷ್ಠಾದೀಕ್ಷೆ, ಮನೋಲಯದೀಕ್ಷೆ ಮತ್ತು ಸದ್ಯೋಮುಕ್ತಿದೀಕ್ಷೆ ಎಂದು ಸಪ್ತವಿಧ ಮಂತ್ರದೀಕ್ಷೆಯ ನಿರೂಪಣೆಯನ್ನು ಕಾಣುತ್ತೇವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧. ಏಕಾಗ್ರಮತಿದೀಕ್ಷೆ:

ಇಷ್ಟಲಿಂಗಾತ್ ಪರಂ ವಸ್ತು ಶಿಷ್ಯ ತ್ವಂ ನಾವಲೋಕಯ॥[೩೩]

'ಶಿಷ್ಯ' ಇಷ್ಟಲಿಂಗಕ್ಕಿಂತಲೂ ಯಾವುದೇ ವಸ್ತು ದೊಡ್ಡದಾಗಿದೆಯೆಂದು ತಿಳಿಯಬೇಡ' ಎಂದು ಗುರು ಉಪದೇಶ ಮಾಡುತ್ತಾನೆ.

೨. ದೃಢವ್ರತದೀಕ್ಷೆ:

ಶರೀರಪಾತಪರ್ಯಂತಂ ನ ಜಹೀಹಿ ವ್ರತಾನ್ಯಪಿ।[೩೪]

ಶರೀರ ಬಿದ್ದುಹೋಗುವವರೆಗೂ ವ್ರತಗಳನ್ನು ಬಿಡಬೇಡವೆಂದು ಉಪದೇಶಿಸುವುದೇ ದೃಢವ್ರತದೀಕ್ಷೆಯಾಗಿದೆ.

೩. ಪಂಚೇಂದ್ರಿಯಾರ್ಪಣದೀಕ್ಷೆ:

ಸತ್ಯಹಂ ಮತ್ಪತಿರ್ಲಿಂಗಮಿತಿ ನಿಶ್ಚಿತ್ಯ ಚೇತಸಿ।
ಸದಾ ತನುಮನೋಭಾವಾನಿಷ್ಟಾದಿಭ್ಯಃ ಸಮರ್ಪಯ॥[೩೫]

ಲಿಂಗವೇ ಪತಿಯಾಗಿದ್ದು ನೀನು ಸತಿಯೆಂದು ಭಾವಿಸಿ ಶರೀರ ಮನೋಭಾವಗಳನ್ನು ಇಷ್ಟಾದಿಲಿಂಗತ್ರಯಕ್ಕೆ ಸಮರ್ಪಿಸಬೇಕೆಂದು ಉಪದೇಶ ಮಾಡುವುದೇ ಪಂಚೇಂದ್ರಿಯಾರ್ಪಣದೀಕ್ಷೆಯೆನಿಸುತ್ತದೆ.

೪. ಅಹಿಂಸಾದೀಕ್ಷೆ:

ಸರ್ವಾಣೀಮಾನಿ ಭೂತಾನ್ಯಪ್ಯಾತ್ಮವತ್ ಪರಿಭಾವಯನ್।
ಮಾ ಹಿಂಸೀರಿತ್ಯುಪಾದಿಶ್ಯ ಲಿಂಗನಿಷ್ಠಾಮುಪಾದಿಶೇತ್॥[೩೬]

ಎಲ್ಲ ಪ್ರಾಣಿಗಳನ್ನು ನಿನ್ನಂತೆಯೇ ಭಾವಿಸಿ ಅವುಗಳ ಹಿಂಸೆಯನ್ನು ಮಾಡಬೇಡವೆಂದು ಮಾಡುವ ಉಪದೇಶವೇ ಅಹಿಂಸಾದೀಕ್ಷೆಯೆನಿಸುತ್ತದೆ. ಮಾನವಧರ್ಮಕ್ಕೆ ಅಗತ್ಯವಿರುವ ನೀತಿಸಂಹಿತೆಯಲ್ಲಿ ಅಹಿಂಸೆಗೆ ಪ್ರಾಧಾನ್ಯವಿರುವುದನ್ನು ಕಾಣುತ್ತೇವೆ. ಧರ್ಮದ ದಶಲಕ್ಷಣಗಳಲ್ಲಿ ಅಹಿಂಸೆಗೆ ಸಿದ್ಧಾಂತಶಿಖಾಮಣಿ ಪ್ರಥಮಸ್ಥಾನವನ್ನು ಕೊಟ್ಟಿದ್ದು ರಾಜಯೋಗದ ಪ್ರಥಮಾಂಗವಾದ ಯಮದಲ್ಲಿ ಅಹಿಂಸೆ ಮೊದಲನೆಯದಾಗಿದೆ. 'ಅಹಿಂಸಾ ಪರಮೋ ಧರ್ಮಃ' ಎಂಬುದು ಜನಪ್ರಿಯ ಸೂಕ್ತಿಯಾಗಿದೆ. 'ಆತ್ಮವತ್ ಸರ್ವಭೂತೇಷು' ಎಂಬುದು ಗೀತೆಯ ಜನಪ್ರಿಯ ಸೂಕ್ತಿಯಾಗಿದೆ.

೫. ಲಿಂಗನಿಷ್ಠಾದೀಕ್ಷೆ:

ಆದಿಮಧ್ಯಾಂತರಹಿತಂ ಲಿಂಗಂ ಯದ್ ಬ್ರಹ್ಮಸಂಜ್ಞಿತಮ್।
ತನ್ನಿಷ್ಠೋ ಭವ ಸದ್‌ಬುದ್ಧೇ ಇತ್ಯುಪಾದಿಶ್ಯ ಸದ್ಗುರುಃ॥[೩೭]

ಅಂದರೆ ಪರಬ್ರಹ್ಮವೆಂದು ಕರೆಯಲ್ಪಡುವ ಆದಿ, ಮಧ್ಯ ಮತ್ತು ಅಂತ್ಯಗಳಿಲ್ಲದಿರುವ ಲಿಂಗದಲ್ಲಿಯೇ ನಿಷ್ಠೆಯನ್ನರಿಸಬೇಕೆಂದು ಉಪದೇಶಿಸುವುದೇ ಲಿಂಗನಿಷ್ಠಾದೀಕ್ಷೆ. ಈ ವಿಷಯವಾಗಿ ಸಿದ್ಧಾಂತಶಿಖಾಮಣಿಯ ಶ್ಲೋಕವಿದು-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಂ ಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಮ್।
ತದೇವ ಸರ್ವಭೂತಾನಾಮಂತಸ್ತ್ರಿಸ್ಥಾನಗೋಚರಮ್॥[೩೮]

೬. ಮನೋಲಯದೀಕ್ಷೆ:

ಲಿಂಗರೂಪಮಭಿಧ್ಯಾಯನ್ನಮನಸ್ಕಶ್ಚಿರಂ ಭವ।[೩೯]

ಇಷ್ಟಲಿಂಗದ ಧ್ಯಾನ ಮಾಡುವಾಗ ಸಂಕಲ್ಪ ವಿಕಲ್ಪರಹಿತನಾಗಿರಬೇಕು. ಇದುವೇ ಅಮನಸ್ಕಯೋಗದ ಲಕ್ಷಣವಾಗಿದೆ.

೭. ಸದ್ಯೋಮುಕ್ತಿದೀಕ್ಷೆ:

ಮಂತ್ರೋಪದೇಶವಿಧಿಯನ್ನು ಸವಿಸ್ತಾರವಾಗಿ ವಿವರಿಸಿ ಶಾಂಭವವ್ರತವೇ ಸದ್ಯೋಮುಕ್ತಿವ್ರತವಾಗಿದೆಯೆಂದು ಕಾರಣಾಗಮ ನಿರ್ಣಯಿಸುತ್ತದೆ.

ಅಯಿ ಪ್ರೋಕ್ತಂ ಮಯಾ ದೇವಿ ಸದ್ಯೋಮುಕ್ತಿಪ್ರದಂ ವ್ರತಮ್।
ಶೃಣು ವೇದೇಷ್ವನತೇಷು ವಿಸ್ತೃತೇಷ್ವಾಗಮೇಷು ಚ।
ನಾತಃ ಪರತರಂ ಕಿಂಚಿದ್ವಿದ್ಯತೇ ಮೋಕ್ಷಸಾಧನಮ್॥[೪೦]

ಹೀಗೆ 'ಗುರುವಿನ ಮೂಲಕ ಧಾರಣ ಮಾಡಿದ ಇಷ್ಟಲಿಂಗವನ್ನುಳಿದು ಅನ್ಯಸ್ಥಾವರಲಿಂಗಗಳನ್ನಾಗಲೀ ಇತರ ದೇವತೆಗಳನ್ನಾಗಲೀ ಸೇವಿಸದೇ ಇರುವುದು ಲಿಂಗಾಚಾರವು'[೪೧] ಎಂದು ಸಂಕ್ಷೇಪವಾಗಿ ಹೇಳಬಹುದಾದರೂ ಈ ಎಲ್ಲ ೨೧ ದೀಕ್ಷೆಗಳು ಗುರುವಿನ ಅನುಗ್ರಹದಿಂದ ಹಾಗೂ ಉಪದೇಶದ ಮೂಲಕ ಪ್ರಾಪ್ತವಾಗುತ್ತಿದ್ದು ಅವೆಲ್ಲವನ್ನು ಸಾಧಕನು ಪ್ರಯತ್ನಪೂರ್ವಕವಾಗಿ ತನ್ನ ನಿತ್ಯಜೀವನದಲ್ಲಿ ಅಳವಡಿಸಿಕೊಂಡರೆ ಲಿಂಗಾಂಗಸಾಮರಸ್ಯರೂಪದ ಗುರಿಯನ್ನು ಮುಟ್ಟಲು ಶಕ್ತನಾಗುತ್ತಾನೆ.

೨. ಸದಾಚಾರ:

'ಲಿಂಗಧಾರೀ ಸದಾಶುದ್ಧಃ'[೪೨] ಎಂಬ ಸೂಕ್ತಿಯ ಸಾರ್ಥಕತೆ ಸದಾಚಾರವನ್ನವಲಂಬಿಸಿದೆ. 'ದೇಹೋ ದೇವಾಲಯಃ ಪ್ರೋಕ್ತಃ' ಎಂಬ ಆಗಮೋಕ್ತಿಯಂತೆ ಮತ್ತು 'ಉಳ್ಳವರು ಶಿವಾಲಯ ಮಾಡುವರು...' ಎಂಬ ಬಸವಣ್ಣನವರ ವಚನದಂತೆ ದೇವಾಲಯದಂತಿರುವ ದೇಹದಲ್ಲಿ ಲಿಂಗದೇವನು ಸದಾ ವಾಸಿಸಬೇಕಾದರೆ ಅದು ನಿರ್ಮಲವಾಗಿರಬೇಕು. 'ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ?' ಎಂಬ ಬಸವಣ್ಣನವರ ವಚನವೂ ಇದೇ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತದೆ. ಇದಕ್ಕೆ ಅಂತಃಕರಣಶುದ್ಧಿ ಅನಿವಾರ್ಯ. ಸದಾಚಾರ ಎಲ್ಲರಿಗೂ ಅಲಂಕಾರಪ್ರಾಯವಾಗಿದ್ದು ಅದಿಲ್ಲದೇ ಯಾವ ಸಾಧನೆಯೂ ಸಫಲವಾಗಲಾರದು. ಆದುದರಿಂದಲೇ ಹೀಗೆ ಹೇಳಲಾಗಿದೆ.

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ॥
ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್॥[೪೩]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸದಾಚಾರಸಹಿತವಾದ ಜ್ಞಾನದಿಂದ ಮಾತ್ರ ಶಿವನು ಪ್ರಸನ್ನನಾಗುತ್ತಾನೆಂದು ಶಿವಯೋಗಿಶಿವಾಚಾರ್ಯರು ಸ್ಪಷ್ಟವಾಗಿ ನುಡಿಯುತ್ತಾರೆ.

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ॥[೪೪]

ಸದಾಚಾರದ ಸೂಕ್ಷ್ಮಪರಿಚಯವನ್ನು ಸೂಕ್ಷ್ಮಾಗಮವು ಈ ರೀತಿ ಮಾಡಿಕೊಟ್ಟಿದೆ.

ಸಜ್ಜನಃ ಶಿವಭಕ್ತಶ್ಚ ಯೇನ ಮಾರ್ಗೇಣ ಸರ್ವದಾ।
ತುಷ್ಟಸ್ತೋಷತೇ ದೇವಿ ಸದಾಚಾರಃ ಸ ವೈ ಸ್ಮೃತಃ॥[೪೫]

ಇದರ ಇನ್ನೊಂದು ಮುಖದ ಪರಿಚಯವನ್ನು ಚಂದ್ರಜ್ಞಾನಾಗಮದಲ್ಲಿ ಮಾಡಿಕೊಳ್ಳ-ಬಹುದು.

ಧರ್ಮಾರ್ಜಿತೇನ ದ್ರವ್ಯೇಣ ಯತ್ಸಂತರ್ಪಣಮನ್ವಹಮ್।
ಗುರುಲಿಂಗಜಂಗಮಾನಾಂ ಸದಾಚಾರ ಇತಿ ಸ್ಮೃತಃ॥[೪೬]

ಶಿವಾನುಭವ ಶಬ್ದಕೋಶದಲ್ಲಿ ಈ ಆಚಾರದ ಸರಳ ನಿರೂಪಣೆ ಇಂತಿದೆ. 'ಸತ್ಯಶುದ್ಧ ಕಾಯಕವನ್ನು ಮಾಡುತ್ತ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಪರಹಿತಾರ್ಥ ಮಾಡುವುದೇ ಸದಾಚಾರ'[೪೭] ಧರ್ಮಮಾರ್ಗದಿಂದ ಗಳಿಸಿದ ಸಂಪತ್ತೇ ಶಿವಲಿಂಗಾದಿ ಪೂಜೆಗೆ ಯೋಗ್ಯವಾಗುತ್ತಿದ್ದು ಅದರ ಸ್ವರೂಪವನ್ನು ಚೆನ್ನಬಸವಣ್ಣನವರ ವಚನವೊಂದರಲ್ಲಿ ಹೀಗೆ ಕಾಣಬಹುದು. 'ಸತ್ಯ ಶುದ್ಧ ಕಾಯಕದಲ್ಲಿ ತಂದು ಗುರುಲಿಂಗಜಂಗಮಕ್ಕೆ ಮಾಡಿ ನೀಡಿ ನಿತ್ಯವಾಗಿರುವುದೋ ಸದಾಚಾರ'. ಈ ಸತ್ಯಶುದ್ಧ ಕ್ರಿಯೆಯನ್ನು ಶಿವಶರಣರು ಕಾಯಕವೆಂದು ಕರೆದು ಅದಕ್ಕೆ ಕೈಲಾಸದ ಮಹತ್ವ ಕೊಟ್ಟಿದ್ದಾರೆ. ಅದನ್ನೇ ಆಚಾರ್ಯರು ಚೈತನ್ಯರೂಪಿಣೀ ವೃತ್ತಿಯೆಂದು ನಿರೂಪಿಸಿದ್ದಾರೆ. ಈ ತತ್ವ ವೀರಶೈವಧರ್ಮವು ಜಗತ್ತಿಗೆ ನೀಡಿದ ಅನುಪಮ ಕೊಡುಗೆಯಾಗಿದ್ದು ಇದರಿಂದ ಬಡತನ ನಿರ್ಮೂಲನೆಗೆ ಸರಿಯಾದ ಪರಿಹಾರ ದೊರೆಯುತ್ತದೆ. ಬಸವಣ್ಣನವರು 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೇ ಸತ್ಪಾತ್ರಕ್ಕೆ ಸಲ್ಲದೆಂದು' ನಿಷ್ಠುರವಾಗಿ ಹೇಳಿ ಸದಾಚಾರದ ಈ ಮುಖದ ಪರಿಚಯವನ್ನು ಬಹುಮಾರ್ಮಿಕವಾಗಿ ಮಾಡಿಕೊಟ್ಟಿದ್ದಾರೆ.

ಚಂದ್ರಜ್ಞಾನಾಗಮದ ಪ್ರಕಾರ ಸದಾಚಾರದಲ್ಲಿ ಅಷ್ಟವಿಧಶೀಲವಿರುತ್ತದೆ. ಅದರ ನಿರೂಪಣೆ ಇಂತಿದೆ.

ಅಂಕುರಂ ಪ್ರಥಮಂ ಜ್ಞೇಯಮುತ್ಪನ್ನಂ ಚ ದ್ವಿತೀಯಕಮ್।
ದ್ವಿದಲಂ ಚ ತೃತೀಯಂ ಸ್ಯಾತ್ ಪ್ರವೃದ್ಧಂ ಚ ಚತುರ್ಥಕಮ್॥
ಸಪ್ರಕಾಂಡಂ ಪಂಚಮಂ ಸ್ಯಾತ್ ಸಶಾಖಂ ಷಷ್ಠಮುಚ್ಯತೇ॥
ಸಪುಷ್ಪಂ ಸಪ್ತಮಂ ಜ್ಞೇಯಂ ಸಫಲಂ ಚಾಷ್ಟಮಂ ಭವೇತ್॥
ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್॥[೪೮]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂದರೆ ಸದಾಚಾರದಲ್ಲಿ ಅಂಕುರ, ಉತ್ಪನ್ನ, ದ್ವಿದಲ, ಪ್ರವೃದ್ಧ, ಸಪ್ರಕಾಂಡ, ಸಶಾಖ, ಸಪುಷ್ಪ ಮತ್ತು ಸಫಲವೆಂಬ ಎಂಟು ಶೀಲಗಳಿರುತ್ತವೆ. ಹೀಗೆ ಅಷ್ಟಶೀಲವುಳ್ಳ ಸದಾಚಾರವು ಕಲ್ಪವೃಕ್ಷವಾಗಿದ್ದು, ಸದ್ಭಕ್ತರಿಗೆ ಮನೋವಾಂಛಿತ ಫಲವನ್ನು ಕೊಡುತ್ತದೆ. ಅಂಕುರಾದಿ ಅಷ್ಟಶೀಲಗಳ ವಿವರಣೆಯನ್ನು ಅದೇ ಆಗಮದಲ್ಲಿ ೨೩-೩೧ ಶ್ಲೋಕಗಳಲ್ಲಿ ಕಾಣುತ್ತಿದ್ದು ಅದರ ವಿವರಣೆ ಹೀಗಿದೆ. ಎಲ್ಲ ಶೀಲಗಳ ಮೂಲಕಾರಣವಾದ ಅಂಕುರ ಗುರುಕರುಣೆಯಿಂದ ಷಡಧ್ವನ್ಯಾಸದ ವಿಧಿಯಿಂದ ಶೋಭಿತವಾಗಿರುತ್ತದೆ. ನನ್ನ ಶರೀರವೇ ಸಮಸ್ತ ಆರಾಧನೆಗೆ ಮೂಲಪ್ರಕೃತಿಯಾಗಿದೆ ಎಂಬ ಭಾವ ಉದಯವಾಗುವುದೇ ಈ ಶೀಲದ ಲಕ್ಷಣ. ಲಿಂಗದೀಕ್ಷೆಯಿಂದ ಪವಿತ್ರರಾದ ಪತ್ನೀಪುತ್ರಾದಿಗಳ ಜೊತೆಯೇ ವಾಸಿಸುವುದು ಉತ್ಪನ್ನಶೀಲವಾಗಿದೆ. ಭಸ್ಮಾದಿ ವೀರಶೈವ ಲಾಂಛನಗಳನ್ನು ಪ್ರಮಾದರಹಿತನಾಗಿ ನಿರಂತರ ಧಾರಣ ಮಾಡುವುದೇ ದ್ವಿದಲಶೀಲವೆನಿಸುತ್ತದೆ. ಶಿವಧರ್ಮದ ಮಹಿಮೆಯ ಸತತಚಿಂತನೆ ಪ್ರವೃದ್ಧಶೀಲನವೆನಿಸುತ್ತಿದ್ದು ಶಿವಭಕ್ತಿಯ ವೃದ್ಧಿ ಇದರಿಂದ ಉಂಟಾಗುತ್ತದೆ. ಇಷ್ಟಲಿಂಗದ ಪೂಜೆ ಇಲ್ಲದೆ ಭೋಜನ ಮಾಡದಿರುವ ಸಂಕಲ್ಪವೇ ಸಪ್ರಕಾಂಡಶೀಲವೆನಿಸುತ್ತದೆ. ಮುಂದುವರೆದು ಇಷ್ಟಲಿಂಗಕ್ಕೆ ಅರ್ಪಿಸದೆ ಯಾವುದೇ ದ್ರವ್ಯವನ್ನು ಸ್ವೀಕರಿಸದೇ ಇರುವುದು ಸಶಾಖಶೀಲವೆನಿಸುತ್ತದೆ. ಅದೇ ರೀತಿ ಶಿವನಿಗೆ ಅರ್ಪಿಸಿ ದೊರೆತ ಪ್ರಸಾದವನ್ನು ಎಂದೂ ತ್ಯಜಿಸದಿರುವುದೇ ಸಪುಷ್ಪಶೀಲವೆನಿಸುತ್ತದೆ. ಗುರುಲಿಂಗಜಂಗಮರಲ್ಲಿ ಏಕತೆಯ ಭಾವನೆಯೇ ಸಫಲಶೀಲವೆನಿಸುತ್ತದೆ.

೩. ಶಿವಾಚಾರ:

ಶಿವಭಕ್ತಪಾರಮ್ಯವನ್ನು ಅಂಗೀಕರಿಸಿದ ವೀರಶೈವಧರ್ಮವು ಶಿವನೇ ಪರಬ್ರಹ್ಮನು, ಜಗನ್ನಿಯಾಮಕನು ಎಂದೂ ಶಿವಲಾಂಛನಧಾರಿಗಳೆಲ್ಲ ಶಿವನೆಂದೂ ತಿಳಿದು ಸತ್ಕರಿಸುವುದೇ ಶಿವಾಚಾರವೆಂದು ತಿಳಿಸಿದ ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಆಗಮೋಕ್ತಿಯೊಂದನ್ನು ಯುಕ್ತಿಯುಕ್ತವಾಗಿ ಬಳಸಿದ್ದಾರೆ.

> ಶಿವ ಏವ ಪರಂ ಬ್ರಹ್ಮ ಪಂಚತತ್ತ್ವಪರಾಯಣಮ್।
> ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ॥[೪೮]

ಅದೇ ರೀತಿ "ಶಿವಭಕ್ತರಲ್ಲಿ ಜಾತಿಭೇದವನ್ನೆಣಿಸದೆ ಸಮಯಾಚಾರ ಉಳ್ಳವನಾಗಿ ಶಿವಾರ್ಪಣ ಬುದ್ಧಿಯಿಂದ ಆಚರಿಸುವುದೇ ಶಿವಾಚಾರವೆನಿಸುತ್ತದೆ."[೪೯] ಅತಿವರ್ಣಾಶ್ರಮ ಧರ್ಮವೆಂದು ಪ್ರಖ್ಯಾತವಾದ ವೀರಶೈವದಲ್ಲಿ ಲಿಂಗದೀಕ್ಷಾಪವಿತ್ರನಾದ ವ್ಯಕ್ತಿಯಲ್ಲಿ ಪೂರ್ವಾಶ್ರಮವನ್ನು ಗಣಿಸಲಾಗದೆಂದು ಸ್ಪಷ್ಟವಾಗಿ ನಿರ್ದೇಶಿಸಲಾಗಿದೆ. ಆದುದರಿಂದಲೇ ನೂರೊಂದು ಸ್ಥಲಗಳಲ್ಲಿ ಮುಖ್ಯವಾದ ಪೂರ್ವಾಶ್ರಯನಿರಸನಸ್ಥಲದಲ್ಲಿ ಹೀಗೆ ನಿರೂಪಿಸಲಾಗಿದೆ.

> ಶಿವಸಂಸ್ಕಾರಯೋಗೇನ ವಿಶುದ್ಧಾನಾಂ ಮಹಾತ್ಮನಾಮ್।
> ಕಿಂ ಪೂರ್ವಕಾಲಿಕೈರ್ಧರ್ಮೈಃ ಪ್ರಾಕೃತಾನಾಂ ಹಿ ತೇ ಮತಾಃ॥[೫೦]

ಈ ಸ್ಥಲದ ಲಕ್ಷಣವನ್ನು ಅಲ್ಲಿಯೇ ಈ ರೀತಿ ಉಲ್ಲೇಖಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವಜಾತಿಕುಲಜಾನ್ ಧರ್ಮಾನ್ ಲಿಂಗಾನಿಷ್ಠಾ ವಿರೋಧಿನಃ।
ತ್ಯಜನ್ ಮಾಹೇಶ್ವರೋ ಜ್ಞೇಯಃ ಪೂರ್ವಾಶ್ರಯನಿರಾಸಕಃ॥[೨]

ದ್ರವ್ಯ, ಕ್ಷೇತ್ರ, ಗೃಹ ಮೊದಲಾದ ಹದಿನಾರು ಪದಾರ್ಥಗಳನ್ನು ಶಾಸ್ತ್ರೋಕ್ತವಿಧಿಯಿಂದ ಶುದ್ಧಗೊಳಿಸುವುದೇ ಶಿವಾಚಾರವೆಂದು ಚಂದ್ರಜ್ಞಾನಾಗಮವು ಬೇರೊಂದೆಡೆ ನಿರೂಪಿಸುತ್ತದೆ-

ದ್ರವ್ಯಕ್ಷೇತ್ರಗೃಹಾದೀನಾಂ ಷೋಡಶಾನಾಂ ವಿಶೋಧನಮ್।
ಶಿವಶಾಸ್ತ್ರೋಕ್ತಮಾರ್ಗೇಣ ಶಿವಾಚಾರ ಇತಿ ಸ್ಮೃತಃ॥[೨೩]

ಆ ಷೋಡಶಶುದ್ಧಿಗಳ ನಾಮನಿರ್ದೇಶವಿಂತಿವೆ:

೧. ದ್ರವ್ಯಶುದ್ಧಿ, ೨. ಕ್ಷೇತ್ರಶುದ್ಧಿ, ೩. ಗೃಹಶುದ್ಧಿ, ೪. ಭಾಂಡಶುದ್ಧಿ, ೫. ತೃಣಶುದ್ಧಿ, ೬. ಕಾಷ್ಠಶುದ್ಧಿ, ೭. ವೀಟಿಕಾಶುದ್ಧಿ, ೮. ಪಾಕಶುದ್ಧಿ, ೯. ರಸಶುದ್ಧಿ, ೧೦. ಭವಶುದ್ಧಿ, ೧೧. ಭೂತಶುದ್ಧಿ, ೧೨. ಭಾವಶುದ್ಧಿ, ೧೩. ಮಾರ್ಗಶುದ್ಧಿ, ೧೪. ಕಾಲಶುದ್ಧಿ, ೧೫. ವಾಕ್‌ಶುದ್ಧಿ ಮತ್ತು ೧೬. ಜನಶುದ್ಧಿ. ಇವುಗಳ ಲಕ್ಷಣವನ್ನು ನವಮಪಟಲದ ೩೩-೪೯ ಶ್ಲೋಕಗಳಲ್ಲಿ ವಿವರಿಸಲಾಗಿದ್ದು ಅದನ್ನು ಈ ರೀತಿ ಸಂಗ್ರಹಿಸಬಹುದು.

೧. ಇತರ ಜನರ ಕೈಯಲ್ಲಿಯ ಫಲಮೂಲ ಮುಂತಾದವನ್ನು ಭಸ್ಮದ ಸಹಾಯದಿಂದ ಶುದ್ಧಗೊಳಿಸಿ ಅಥವಾ ಭಕ್ತನ ಕೈಯಲ್ಲಿರುವುದನ್ನು ಸ್ವೀಕರಿಸುವುದೇ ದ್ರವ್ಯಶುದ್ಧಿ.

೨. ನಂದೀಮುದ್ರೆಯಿಂದ ಅಂಕಿತವಾದ ಶಿಲೆ, ಕಾಷ್ಠ ಮುಂತಾದವುಗಳಿಂದ ಶೋಭಿಸುವುದೇ ಕ್ಷೇತ್ರಶುದ್ಧಿ.

೩. ಭಕ್ತರಿಂದ ನಿರ್ಮಿಸಲ್ಪಟ್ಟ ಅಥವಾ ಶಿವಲಿಂಗಾಕಿತವಾದ ಗೃಹವೇ ಗೃಹಶುದ್ಧಿಯೆನಿಸುತ್ತದೆ.

೪. ಅದೇ ರೀತಿ ಶಿವಭಕ್ತ ನಿರ್ಮಿತ ಅಥವಾ ಶಿವಲಿಂಗಾಂಕಿತ ಭಾಂಡಗ್ರಹಣವೇ ಭಾಂಡಶುದ್ಧಿ.

೫. ಭಕ್ತರಿಂದ ತರಲ್ಪಟ್ಟ ಅಥವಾ ಭಸ್ಮದ ಸಹಾಯದಿಂದ ಸಂಸ್ಕಾರಗೊಂಡ ತೃಣಾದಿಗ್ರಹಣವೇ ತೃಣಶುದ್ಧಿ.

೬. ಭಕ್ತರಿಂದ ತರಲ್ಪಟ್ಟ ಅಥವಾ ವಿಭೂತಿಯಿಂದ ಸಂಸ್ಕರಿಸಲ್ಪಟ್ಟ ಕಾಷ್ಠದ ಗ್ರಹಣವೇ ಕಾಷ್ಠಶುದ್ಧಿ.

೭. ಭಕ್ತರ ತೋಟದಲ್ಲಿ ಬೆಳೆದ ಅಥವಾ ಭಸ್ಮದಿಂದ ಸಂಸ್ಕರಿಸಲ್ಪಟ್ಟ ಪಾನ ಸುಪಾರಿ ಮತ್ತು ಚೂರ್ಣ (ಸುಣ್ಣ)ದಿಂದ ಕೂಡಿದ ತಾಂಬೂಲಗ್ರಹಣವೇ ವೀಟಿಕಾಶುದ್ಧಿ.

೮. ಶಿವದೀಕ್ಷೆ ಹೊಂದಿದ ವ್ಯಕ್ತಿಯು ತಯಾರಿಸಿದ ಮತ್ತು ಶಿವಭಕ್ತರಲ್ಲದವರು ನೋಡದೆ ಇರುವ ಭೋಜನದ ಗ್ರಹಣವೇ ಪಾಕಶುದ್ಧಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೯. ತುಪ್ಪ, ಮೊಸರು, ಹಾಲು, ಬೆಣ್ಣೆ ಮುಂತಾದವು ಎಮ್ಮೆಯ ಅಥವಾ ಕುರಿಯದಾಗಿದ್ದರೆ ತ್ಯಜಿಸಬೇಕು. ಆಕಳಿನದಾಗಿದ್ದರೆ ಮಾತ್ರ ಗ್ರಹಿಸಬೇಕು ಇದು ರಸಶುದ್ಧಿ.

೧೦. ಪುನರ್ಜನ್ಮಕ್ಕೆ ಕಾರಣೀಭೂತವಾದ ಕಾಮ್ಯಕರ್ಮಗಳ ಪರಿತ್ಯಾಗದಿಂದ ಸಂಸಾರಚಕ್ರ ವಿಚ್ಛೇದವಾಗುತ್ತದೆ. ಇದು ಭವಶುದ್ಧಿ.

೧೧. ಭೂತದಯೆ, ಪಂಚಭೂತಸಂಸ್ಕರಣ, ಪಂಚಭೂತದೋಷವರ್ಜನ ಭೂತಶುದ್ಧಿಯಾಗಿದೆ.

೧೨. ಎಲ್ಲ ಕಾಮನೆಗಳನ್ನು ದೂರಮಾಡಿ ಮನಸ್ಸಿನಲ್ಲಿ ಶಿವಭಾವನೆಯಿಂದ ಕೂಡಿಕೊಳ್ಳುವುದೇ ಭಾವಶುದ್ಧಿ.

೧೩. ಮಾರ್ಗದಲ್ಲಿಯ ಇರುವೆ ಮುಂತಾದ ಕ್ಷುದ್ರ ಪ್ರಾಣಿಗಳ ಹಿಂಸೆಯನ್ನು ಸಹ ಮಾಡದೆ ಸಾವಧಾನವಾಗಿ ಸಂಚರಿಸುವುದೇ ಮಾರ್ಗಶುದ್ಧಿ.

೧೪. ನಿಃಶಬ್ದವಾದ, ಮನೋಹರವಾದ ಹಾಗೂ ಶಾಸ್ತ್ರನಿರ್ದಿಷ್ಟವಾದ ಕಾಲದಲ್ಲಿ ಅಂದರೆ ಬ್ರಾಹ್ಮೀಮುಹೂರ್ತದಲ್ಲಿ ಇಷ್ಟಲಿಂಗಾರ್ಚನೆ ಮಾಡುವುದೇ ಕಾಲಶುದ್ಧಿ.

೧೫. ಅಸತ್ಯ, ಕಠೋರ, ಕುತ್ಸಿತ ಮುಂತಾದವುಗಳಿಂದ ಕೂಡಿದ ವಚನವನ್ನು ತ್ಯಜಿಸುವುದೇ ವಾಕ್‌ಶುದ್ಧಿಯೆನಿಸುತ್ತದೆ. ಪತಂಜಲಿಯು ತನ್ನ ಮಹಾಭಾಷ್ಯದಲ್ಲಿ ವಾಕ್‌ಶುದ್ಧಿಯ ದೀರ್ಘ ವಿವರಣೆಯನ್ನು ಕೊಟ್ಟಿರುವುದನ್ನು ನಾವಿಲ್ಲಿ ಗಮನಿಸಬಹುದು. 'ನುಡಿದರೆ ಮುತ್ತಿನ ಹಾರದಂತಿರಬೇಕು...' ಎಂಬ ಬಸವಣ್ಣನವರ ವಚನ ವಾಕ್‌ಶುದ್ಧಿಗೆ ಬರೆದ ಕಾವ್ಯಮಯ ವ್ಯಾಖ್ಯಾನ ಎಂದರೆ ತಪ್ಪಾಗದು.

೧೬. ಆಸನ, ಶಯನ, ಯಾನ, ಗೋಷ್ಠಿ ಮುಂತಾದವುಗಳಲ್ಲಿ ಸದಾ ಸರ್ವತ್ರ ಸದ್ಭಕ್ತರ ಸಂಗತಿಯೇ ಜನಶುದ್ಧಿ. ಇದೇ ಅಭಿಪ್ರಾಯದ ಪ್ರಮಾಣ ಶ್ಲೋಕವೊಂದನ್ನು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಉದಾಹರಿಸಿದ್ದಾರೆ.

ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಮ್॥

ಒಟ್ಟಿನಲ್ಲಿ ಎಲ್ಲವನ್ನೂ ಶಿವಮಯವಾಗಿ (ಸರ್ವಂ ಶಿವಮಯಂ ಜಗತ್) ಕಂಡು ಶಿವಸರ್ವೋತ್ತಮ ಭಾವನೆಯುಳ್ಳವನಾಗಿ ಶಿವಸಾಯುಜ್ಯಕ್ಕಾಗಿ ಸಾಧನೆ ಮಾಡುವುದೇ ಶಿವಾಚಾರವೆಂದು ಆಧ್ಯಾತ್ಮಿಕ ದೃಷ್ಟಿಯಿಂದ ಹೇಳಬಹುದು. 'ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ' ಎಂಬ ಗೀತೋಕ್ತಿಯು ಇದನ್ನೇ ಸಾರುತ್ತದೆ. ಆದುದರಿಂದಲೇ ಲಿಂಗದೇವನ ಭಕ್ತನಾದ ಪತಿ ಮತ್ತು ಮಾರಿಮಸಣಿಯ ಭಕ್ತೆಯಾದ ಸತಿ -ಇವರಿಬ್ಬರ ಸಹವಸತಿ ಪ್ರತಿಕೂಲದಾಂಪತ್ಯವೆನ್ನದೇ ಗತ್ಯಂತರವಿಲ್ಲ. ಶಿವಶರಣರು ಪ್ರತಿಪಾದಿಸಿದ ಅನುಕೂಲ ದಾಂಪತ್ಯಕ್ಕಾಗಿ ಇಬ್ಬರೂ ಶಿವಭಕ್ತರಾಗಬೇಕಾದುದು ಅನಿವಾರ್ಯ. 'ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೇ? ಆವಕುಲದವನಾದಡೇನು ಲಿಂಗವಿದ್ದವನೆ ....' ಮುಂತಾದ ವಚನಗಳಲ್ಲಿ ಬಸವಣ್ಣನವರು ಶಿವಾಚಾರದ ಕಾವ್ಯಮಯ ನಿರೂಪಣೆ ಮಾಡಿದ್ದರೆ, ಚೆನ್ನಬಸವಣ್ಣನವರು ಅದನ್ನೇ ಶಾಸ್ತ್ರೀಯವಾಗಿ ನಿರ್ದೇಶಿಸಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

'ಗುರುಮಾರ್ಗಾಚಾರದಲ್ಲಿ ನಿಂದ ಶಿವಲಾಂಛನಧಾರಿಗಳೆಲ್ಲಾ
ಪರಶಿವಲಿಂಗವೆಂದು ಭಾವಿಸಿ, ಅರ್ಥಪ್ರಾಣಾಭಿಮಾನವನು
ನೆಲೆ ಒಪ್ಪಿಸುವುದೇ ಶಿವಾಚಾರವೆಂಬೆನಯ್ಯಾ
ಶಿವಭಕ್ತರಲ್ಲಿ ಜಾತಿ ವರ್ಣ ಆಶ್ರಮವನರಸದೇ
ಅವರೊಕ್ಕುದ ಕೊಂಬುದೇ ಶಿವಾಚಾರ'

ಈ ವಿಷಯವಾಗಿ ಸಿದ್ಧಾಂತಶಿಖಾಮಣಿ ನವಮ ಪರಿಚ್ಛೇದದ ೨೭-೩೩ ಶ್ಲೋಕಗಳಲ್ಲಿ ವಿವರಣೆಯನ್ನು ಕೊಡುತ್ತಿದ್ದು ಒಂದು ಶ್ಲೋಕವನ್ನು ಉದಾಹರಿಸಬಹುದು.

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ॥[೫೪]

ಶಿವಶರಣರು ಉದಾಹರಿಸುವ ೬೩ ಪುರಾತನರಲ್ಲಿ ಎಲ್ಲ ವರ್ಣಗಳ ಸ್ತರಗಳ ಮತ್ತು ಲಿಂಗಗಳ ವ್ಯಕ್ತಿಗಳಿರುವುದನ್ನು ಕಾಣುತ್ತೇವೆ. 'ಹೊಲೆಯುಂಟೆ ಲಿಂಗವಿದ್ದೆಡೆ' ಎಂದು ಪ್ರಶ್ನಿಸುವ ಬಸವಣ್ಣನವರು ಶಿವಾಚಾರಾಂತರ್ಗತ ಸಮತಾವಾದದ ಹರಿಕಾರರೆನಿಸಿದರೂ ಶಿವಾಗಮಗಳ ವಿಶಾಲ ವಿಚಾರಸರಣಿಯಿಂದ ಪ್ರಭಾವಿತರಾಗಿರುವುದನ್ನು ಮರೆಯುವಂತಿಲ್ಲ. 'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ವಿಶ್ವಕುಟುಂಬ ಕಲ್ಪನೆಯ ಬೀಜವನ್ನು ಶಿವಾಚಾರದಲ್ಲಿಯೇ ಕಾಣುತ್ತೇವೆಂದರೆ ತಪ್ಪಾಗದು. ಭಗವದ್ಗೀತೆಯಲ್ಲಿಯೂ ಈ ಕ್ರಾಂತಿಯ ಪ್ರಾದುರ್ಭಾವವನ್ನು ಕಾಣುತ್ತೇವೆ.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಹು ಪಾಪಯೋನಯಃ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಮ್ ಗತಿಮ್॥[೫೫]

ಹೀಗೆ ಶಿವಾಚಾರದ ನಿತ್ಯಾಚರಣೆಯಿಂದ ಶಿವಸಾಯುಜ್ಯಪ್ರಾಪ್ತಿ ಸಾಧ್ಯವಾಗುತ್ತದೆಂದರೆ ತಪ್ಪಾಗದು.

ಏತದಾಚರಣಾತ್ಮರ್ತ್ಯಃ ಶಿವಸಾಯುಜ್ಯಮಶ್ನುತೇ।[೫೬]

೪. ಗಣಾಚಾರ:

ಪರಧರ್ಮ ಸಹಿಷ್ಣುತೆಯಿಂದ ಕೂಡಿದ ಸ್ವಧರ್ಮನಿಷ್ಠೆ ವೀರಶೈವದಲ್ಲಿ ವಿಶಿಷ್ಟವಾಗಿದ್ದರೂ ಸಮಾಜದಲ್ಲಿಯ ಸಮಾಜಘಾತುಕ ಶಕ್ತಿಗಳು ಕೆಲವೊಮ್ಮೆ ಶಿವಧರ್ಮ ಲಾಂಛನಗಳ ಮೇಲೆ ಆಕ್ರಮಣ ಮಾಡುವ ಪ್ರಸಂಗ ಸ್ವಾಭಾವಿಕ. ಅಂದರೆ ಸ್ವಧರ್ಮಾಚರಣೆಯಲ್ಲಿ ಅನೇಕ ಬಗೆಯ ವಿಘ್ನಗಳು ಉಂಟಾಗುವುದು ಸಹಜ. ಎಂಥಾ ಕಠಿಣ ಸ್ಥಿತಿಯಲ್ಲಿಯೂ ಶಿವಧರ್ಮವನ್ನಾಚರಿಸುತ್ತ ಆ ಧರ್ಮಾಚರಣೆಯ ಮಾರ್ಗದಲ್ಲಿ ಬರುವ ಅಡ್ಡಿಆತಂಕಗಳನ್ನು ನಿವಾರಿಸುವುದೇ ಭಕ್ತಗಣ ಆಚರಿಸುವುದಕ್ಕೆ ಗಣಾಚಾರವೆಂದು ಅರ್ಥಪೂರ್ಣವಾಗಿ ವಿವರಿಸಲಾಗಿದೆ. ಚಂದ್ರಜ್ಞಾನಾಗಮ ಗಣಾಚಾರದ ವ್ಯುತ್ಪತ್ತಿಯನ್ನು ಈ ರೀತಿ ಕೊಟ್ಟಿದೆ.

ಗಣಾಚಾರಮತೋ ವಕ್ಷ್ಯೇ ಭೋಗಮೋಕ್ಷೈಕಸಾಧನಮ್।
ಅನುಷ್ಠಿತೋ ಭಕ್ತಗಣೈರ್ಗಣಾಚಾರ ಇತೀರಿತಃ॥[೫೭]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಾವುದೇ ಧರ್ಮದ ಅನುಯಾಯಿಗಳಿಗೆ ಈ ಗಣಾಚಾರ ಅನಿವಾರ್ಯವಾಗುತ್ತದೆ. ಎಲ್ಲಿಯಾದರೂ ಅನ್ಯಾಯವಾಗುತ್ತಿದ್ದರೆ ಅದಕ್ಕೆ ಪ್ರತೀಕಾರ ಮಾಡುವುದು ಮಾನವತೆಯ ಲಕ್ಷಣ. ದ್ರೌಪದಿಯ ವಸ್ತ್ರಾಪಹರಣದ ಸಮಯದಲ್ಲಿ ಭೀಷ್ಮದ್ರೋಣಾದಿ ವಯೋಜ್ಞಾನಧರ್ಮವೃದ್ಧರೂ ಆ ಅನ್ಯಾಯವನ್ನು ಮೂಕಪ್ರೇಕ್ಷಕರಾಗಿ ನೋಡುತ್ತ ತಮ್ಮ ಕರ್ತವ್ಯವನ್ನೇ ಮರೆತಾಗ ಅದನ್ನು ತೀವ್ರವಾಗಿ ಪ್ರತಿಭಟಿಸಿ ಅಸಹಾಯನಾದ ವಿದುರನು ಮಾತ್ರ ಆ ದೃಶ್ಯವನ್ನು ನೋಡಲಾರದೆ ಹೊರಟು ಹೋಗುವಲ್ಲಿ ಗಣಾಚಾರದ ಪರಿಚಯವಾಗುತ್ತದೆ. ತನ್ನ ರಕ್ಷಣೆಗೆ ಒಳಪಟ್ಟ ಗುರುವಿನ ಹೋಮಧೇನುವನ್ನು ಮಾಯಾಸಿಂಹವು ಕೊಂದು ತಿನ್ನಲು ಸಿದ್ಧವಾದಾಗ ದಿಲೀಪ ಮಹಾರಾಜನು ತನ್ನನ್ನು ತಿಂದು ಆ ಧೇನುವನ್ನು ಬಿಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ.

ಸ ತ್ವಂ ಮದೀಯೇನ ಶರೀರವೃತ್ತಿಂ ದೇಹೇನ ನಿರ್ವರ್ತಯಿತುಂ ಪ್ರಸೀದ।
ದಿನಾವಸಾನೋತ್ಸುಕಬಾಲವತ್ಸಾ ವಿಸೃಜ್ಯತಾಂ ಧೇನುರಿಯಂ ಮಹರ್ಷೇಃ॥[೫೮]

ಅಂದರೆ 'ನೀನು ನನ್ನ ದೇಹವನ್ನು ಕಬಳಿಸಿ ನಿನ್ನ ಹಸಿವೆಯನ್ನು ಇಂಗಿಸಿಕೊಳ್ಳಬೇಕು ಹಾಗೂ ದಯಮಾಡಿ ಸಾಯಂಕಾಲವಾದ್ದರಿಂದ ಕರುವನ್ನು ನೋಡಲು ಹಂಬಲಿಸುತ್ತಿರುವ ಮಹರ್ಷಿ ಧೇನುವನ್ನು ಹಿಂಸಿಸದೇ ಬಿಟ್ಟು ಬಿಡು ಎಂದು ಪ್ರಾರ್ಥಿಸುವ ದಿಲೀಪನು ಕ್ಷತ್ರಿಯ ಕರ್ತವ್ಯದ ಪರಿಚಯ ಮಾಡಿಕೊಡುತ್ತಾನೆ. 'ಕ್ಷತಾತ್ ಕಿಲ ತ್ರಾಯತೇ ಇತಿ ಕ್ಷತ್ರಿಯಃ।' ಎಂದು ಶಬ್ದ ನಿರುಕ್ತಿಯಿಂದ ತೊಂದರೆಗೀಡಾದವರ ರಕ್ಷಣೆ ಮಾಡುವುದೇ ಕ್ಷತ್ರಿಯನ ಧರ್ಮವೆಂದು ಗಣಾಚಾರದ ಸುಂದರವಾದ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಗಣಾಚಾರದ ಸ್ವರೂಪವನ್ನು ಚಂದ್ರಜ್ಞಾನಾಗಮ ಈ ರೀತಿ ಸಾಮಾನ್ಯವಾಗಿ ಮಾಡಿಕೊಡುತ್ತದೆ.

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾದಿಕಸ್ಯ ಚ।
ನ ಶೃಣೋತಿ ಚ ಯನ್ನಿಂದಾಂ ಸ ಗಣಾಚಾರ ಉಚ್ಯತೇ॥[೫೯]

ಅಂದರೆ ಶಿವನ, ಶಿವಭಕ್ತನ, ಶಿವಧರ್ಮ ಮುಂತಾದವುಗಳ ನಿಂದೆಯನ್ನು ಕೇಳದಿರುವುದೇ ಗಣಾಚಾರವೆಂದು ಅದರ ಸಾಮಾನ್ಯಸ್ವರೂಪ ನಿರೂಪಣೆಯನ್ನು ಮಾಡಲಾಗಿದೆ. ಸೂಕ್ಷ್ಮಾಗಮದಲ್ಲಿ ಈ ಆಚಾರದ ಸ್ವರೂಪವನ್ನು ಈ ರೀತಿ ವಿವರಿಸಲಾಗಿದೆ.

ಗುರುಲಿಂಗಾದಿವಿಷಯಂ ನ ಶ್ರಾವ್ಯಂ ದೂಷಣಂ ಯದಿ।
ಶ್ರುತಂ ತಾನ್ ಶಿಕ್ಷಯಾಮೀತಿ ಗಣಾಚಾರಃ ಸ ಹಿ ಸ್ಮೃತಃ॥[೬೦]

ಸಿದ್ಧಾಂತಶಿಖಾಮಣಿ ಗಣಾಚಾರದ ಒಂದು ಮುಖದ ಪರಿಚಯವನ್ನು ಈ ರೀತಿ ಮಾಡಿಕೊಡುತ್ತದೆ.

ಯತ್ರ ಚಾಚಾರನಿಂದಾಸ್ತಿ ಕದಾಚಿತ್ತತ್ರ ನ ವ್ರಜೇತ್।
ಯದ್ಗೃಹೇ ಶಿವನಿಂದಾಽಸ್ತಿ ತದ್ಗೃಹಂ ತು ಪರಿತ್ಯಜೇತ್॥[೬೧]

ಮನುಸ್ಮೃತಿಯಲ್ಲಿಯೂ ಇದೇ ಅಭಿಪ್ರಾಯದ ಶ್ಲೋಕವೊಂದನ್ನು ಕಾಣುತ್ತೇವೆ.

ಗುರೋರ್ಯತ್ರ ಪರೀವಾದೋ ನಿಂದಾ ವಾಪಿ ಪ್ರವರ್ತತೇ।
ಕರ್ಣೌ ತತ್ರ ಪಿಧಾತವ್ಯೌ ಗಂತವ್ಯಂ ವಾ ತತೋಽನ್ಯತಃ॥[೬೨]

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಿದ್ಧಾಂತಶಿಖಾಮಣಿ ಗಣಾಚಾರದ ಪೂರ್ಣಪರಿಚಯವನ್ನು ಈ ರೀತಿ ಮಾಡಿಕೊಡುತ್ತದೆ.

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್।
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ಯದ್ಯಕ್ಷಮೋ ಭವೇತ್॥[೬೩]

ಅಂದರೆ ಎಲ್ಲಿ ಶಿವನಿಂದೆಯಾಗುತ್ತಿದೆಯೋ ಅಲ್ಲಿ ಅಂತ ಶಿವನಿಂದಕನನ್ನು ಘಾತಿಸಬೇಕು. ಇಲ್ಲವೇ ಶಪಿಸಬೇಕು. ಎರಡೂ ಸಾಧ್ಯವಾಗದಿದ್ದಾಗ ಆ ಸ್ಥಳವನ್ನು ತ್ಯಜಿಸಿ ದೂರಹೋಗಬೇಕು. ಆಧುನಿಕ ಕಾಲದಲ್ಲಿ ಘಾತಿಸುವುದು ಅಪರಾಧ (Crime) ಆಗುತ್ತದೆ. ಕಲಿಯುಗದಲ್ಲಿ ಶಾಪ ಕೊಡುವ ಶಕ್ತಿಯಿಲ್ಲವಾಗಿದೆ. ಆದುದರಿಂದ ಶಿವನಿಂದೆಯಾಗುವ ಸ್ಥಾನವನ್ನು ಬಿಟ್ಟು ಹೊರಟು ಹೋಗುವುದೊಂದೇ ಉಳಿದಿರುವ ಮಾರ್ಗವೆನ್ನಬಹುದು. ಗುರುನಿಂದೆ ಮಾಡುವವನಷ್ಟೇ ಕೇಳುವವನು ಪಾಪಿಯಾಗುತ್ತಾನೆಂಬ ಪಾರ್ವತಿಯ ಮಾತು ಅರ್ಥಪೂರ್ಣವಾದುದು.

ನ ಕೇವಲಂ ಯೋ ಮಹತೋಽಪಭಾಷತೇ ಶ್ರುಣೋತಿ
ತಸ್ಮಾದಪಿ ಯಃ ಸ ಪಾಪಭಾಕ್॥[೬೪]

ಯಾವುದೇ ಸ್ಥಿತಿಯಲ್ಲಿ ಶಿವನಿಂದೆಯನ್ನು ಕೇಳಬಾರದೆಂದು ನಿಶ್ಚಯಿಸಿದ ಪಾರ್ವತಿಯು ಶಿವನಿಂದಕ ವಟುವನ್ನು ಖಂಡಿಸಲಾಗಲೀ, ದಂಡಿಸಲಾಗಲೀ ಅಶಕ್ತಳಾಗಿ ಆ ಸ್ಥಳವನ್ನು ಬಿಟ್ಟು ಹೊರಟುಹೋಗುವಲ್ಲಿ ಈ ಗಣಾಚಾರದ ಆದರ್ಶವನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ಗುರುನಿಂದೆ ಶಿವನಿಂದೆ ಮಾಡುವ ದುಷ್ಟರ ವಿಷಯವಾಗಿ ಎರಡು ರೀತಿ ಪ್ರತಿಕ್ರಿಯೆ ಅಗತ್ಯವೆಂದು ತಿಳಿಯಬಹುದು.

ಖಲಾನಾಂ ಕಂಟಕಾನಾಂ ಚ ದ್ವಿವಿಧೈವ ಪ್ರತಿಕ್ರಿಯಾ।
ಉಪಾನನ್ಮುಖಭಂಗೋ ವಾ ದೂರತೋ ವಾ ವಿಸರ್ಜನಮ್॥
(ಸುಭಾಷಿತ)

ಈ ಗಣಾಚಾರದಲ್ಲಿ ೬೪ ಶೀಲಗಳಿರುತ್ತವೆಂದು ಚಂದ್ರಜ್ಞಾನಾಗಮವು ನಿರೂಪಿಸುತ್ತದೆ.

ಸರ್ವೋತ್ತಮೇ ಗಣಾಚಾರೇ ಸದ್ಯಃ ಸಿದ್ಧಿತರೇ ಪರೇ।
ಶೀಲಾನಿ ತು ಚತುಃಷಷ್ಟಿರ್ವರ್ತಂತೇ ತಾನಿ ಸಂಶೃಣು॥[೬೫]

೬೪ ಶೀಲಗಳ ದೀರ್ಘ ನಿರೂಪಣೆಯನ್ನು ನವಮ ಪಟಲದ ೫೩-೧೨೨ ಶ್ಲೋಕಗಳಲ್ಲಿ ಮಾಡಲಾಗಿದ್ದು, ಅವುಗಳನ್ನು ಈ ರೀತಿ ಸಂಗ್ರಹಿಸಬಹುದು. ಸಪ್ತವಾಚಿಕ ಶೀಲಗಳಲ್ಲಿ ೧. ಸತ್ಯ, ೨. ಪ್ರಿಯವಾದ ಸತ್ಯ, ೩. ವೇದಾಗಮಪುರಾಣಾಭ್ಯಾಸ, ೪. ಶಿವ-ಶಿವಭಕ್ತರ ವಿಶೇಷವಾಗಿ ಗುರುವಿನ ಅವಿಶ್ರಾಂತ ಪ್ರಶಂಸೆ, ೫. ಶಿವೇತರ ದೇವತಾಸ್ತುತಿ ಪರಿತ್ಯಾಗ, ೬. ಆತ್ಮಪ್ರಶಂಸಾ ತ್ಯಾಗ ಮತ್ತು ೭. ಯಾವುದೇ ವ್ಯಕ್ತಿಯ ನಿಂದೆಯನ್ನು ಮಾಡದಿರುವುದು- ಇವು ಏಳು ವಾಚಿಕಶೀಲಗಳು.

ಪಂಚವಿಧ ಪಾಣಿಗತ ಶೀಲಗಳು ಇಂತಿವೆ:

೧. ಗುರು-ಲಿಂಗ-ಜಂಗಮಗಳಿಗೆ ಶ್ರದ್ಧಾಪೂರ್ವಕ ಮಾಡುವ ಪ್ರಣಾಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೨. ಹಗಲು-ಇರುಳು ಪೂಜಾಸಾಮಗ್ರಿ ಕೂಡಿಸುವುದು.

೩. ಪ್ರತಿದಿನ ನಿಯಮಾನುಸಾರ ಜಪಮಾಲೆ ಹಿಡಿದು ಪಂಚಾಕ್ಷರ ಮಂತ್ರ ಜಪ ಮಾಡುವುದು.

೪. ಗುರು-ಮಾಹೇಶ್ವರ-ಶಿವ ಇವರೆಲ್ಲರ ಸಮಾರಾಧನೆ.

೫. ಗುರು-ಜಂಗಮ-ಶಿವಧರ್ಮ ರಕ್ಷಣೆಗಾಗಿ ಯಥಾಶಕ್ತಿ ಭಕ್ತಿಪೂರ್ವಕ ಮಾಡುವ ದಾನ.

ಚತುರ್ವಿಧ ಪಾದಗತಶೀಲಗಳು:

೧. ಗುರು-ಮಾಹೇಶ್ವರರ ಬಳಿ ಭಕ್ತಿಪೂರ್ವಕ ಗಮನ.

೨. ಗುರು-ಮಾಹೇಶ್ವರರಿಗೆ ಭಕ್ತಿಪೂರ್ವಕ ಪ್ರದಕ್ಷಿಣೆ ಹಾಕುವುದು.

೩. ಪೂಜಾಸಾಮಗ್ರಿಯನ್ನು ಕೂಡಿಸಲು ನದಿ-ಉಪವನ ಮುಂತಾದ ಸ್ಥಳಗಳಿಗೆ ಹೋಗುವುದು.

೪. ಗುರು ಹಾಗೂ ಇಷ್ಟಲಿಂಗದ ಪೂಜೆಗಾಗಿ ಸ್ಥಿರವಾದ ಆಸನದ ಮೇಲೆ ಕುಳಿತುಕೊಳ್ಳುವುದು.

ತ್ವಕ್ ಸಂಬದ್ಧಶೀಲಗಳು:

೧. ಇಷ್ಟಲಿಂಗವನ್ನು ತನ್ನ ಶರೀರದಿಂದ ಸ್ವಲ್ಪವೂ ಅಗಲದೆ ನಿತ್ಯಸ್ಪರ್ಶ ಮಾಡುವುದು.

೨. ಇಷ್ಟಲಿಂಗ ಸ್ಪರ್ಶದಿಂದ ಉಂಟಾಗುವ ರೋಮಾಂಚ.

ಚಕ್ಷುರ್ಗತಶೀಲಗಳು:

೧. ಅವಿಶ್ರಾಂತವಾಗಿ ಇಷ್ಟಲಿಂಗಾವಲೋಕನ.

೨. ಇಷ್ಟಲಿಂಗದ ದರ್ಶನದಿಂದ ಉಂಟಾಗುವ ಆನಂದಭಾಷ್ಪ.

ಜಿಹ್ವಾಗತಶೀಲ: ಶಿವಪ್ರಸಾದವನ್ನು ಪ್ರತಿದಿನ ಸ್ವೀಕರಿಸುವುದು.

ಘ್ರಾಣಗತಶೀಲ: ಶಿವಾರ್ಪಿತ ಗಂಧ-ಪುಷ್ಪಾದಿ ಸುಗಂಧವನ್ನು ಆಘ್ರಾಣಿಸುವುದು.

ಶ್ರೋತ್ರಗತಶೀಲಗಳು:

೧. ಗುರು-ಶಿವ ಭಕ್ತರ ಸ್ತೋತ್ರಗಳನ್ನು ಪ್ರತಿದಿನ ಶ್ರವಣ ಮಾಡುವುದು.

೨. ಶಿವಾದಿ ನಿಂದೆಯನ್ನು ಕೇಳದಿರುವುದು.

ಕಾಯಿಕಶೀಲಗಳು:

೧. ಗುರು, ಲಿಂಗ, ಜಂಗಮ ಪ್ರಸಾದದಿಂದ ಶರೀರಶುದ್ಧೀಕರಣ.

೨. ನಿಷಿದ್ಧ ವಿಷಯಗಳಿಂದ ಇಂದ್ರಿಯ ನಿಗ್ರಹ.

೩. ಅಸ್ಪೃಶ್ಯ ವಸ್ತು ಸ್ಪರ್ಶದಿಂದ ಉಂಟಾಗುವ ದೋಷವನ್ನು ಜಲ ಅಥವಾ ಭಸ್ಮ ಸ್ನಾನದಿಂದ ಪರಿಹರಿಸುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಆಸನ, ಶಯ್ಯಾ, ಗೋಷ್ಠಿ ಮುಂತಾದವುಗಳಲ್ಲಿ ಭವಿ ಸಂಪರ್ಕವನ್ನು ದೂರಮಾಡುವುದು.

೫. ಭಸ್ಮ-ರುದ್ರಾಕ್ಷ-ಲಿಂಗಗಳನ್ನು ಸದಾ ಶರೀರದ ಮೇಲೆ ಧರಿಸುವುದು.

ಮಾನಸಿಕಶೀಲಗಳು:

೧. ಬ್ರಹ್ಮಚರ್ಯ

೨. ಶಿವಭಕ್ತಿ ಕಾಮನೆಯಿಂದಾಗಿ ಇತರ ವಿಷಯಗಳ ಕಾಮನೆಯ ತ್ಯಾಗ.

೩. ಅಧರ್ಮದ ಬಗ್ಗೆ ಕ್ರೋಧವನ್ನಿರಿಸುವುದು ಮತ್ತು ಶತ್ರುವಿನ ಬಗ್ಗೆ ಕ್ರೋಧ ತಾಳದಿರುವುದು, ಅಂದರೆ ಅಕ್ರೋಧವೆಂಬ ಶೀಲ.

೪. ಧನಾದಿ ವಿಷಯ ಲೋಭವನ್ನು ಬಿಟ್ಟು ಶಿವಾರಾಧನೆಯಲ್ಲಿಯ ಲೋಭ ಅರ್ಥಾತ್ ಅಲೋಭವೆಂಬ ಶೀಲ.

೫. ಭಕ್ತರ ವಿಷಯದಲ್ಲಿ ಮೋಹವನ್ನಿರಿಸಿ ಹೆಂಡತಿ-ಮಕ್ಕಳಾದಿಗಳ ವಿಷಯಗಳಲ್ಲಿ ಅಮೋಹವೆಂಬುದು ಅಮೋಹಶೀಲ.

೬. ವ್ಯಕ್ತಿಗತ ಮಾತ್ಸರ್ಯವನ್ನುಳಿದು ಇಂದ್ರಿಯಗಳ ಬಗ್ಗೆ ಮಾತ್ಸರ್ಯವನ್ನಿರಿಸುವುದು ಅಮಾತ್ಸರ್ಯಶೀಲ.

೭. ಮಾಯಾವಿಜವಿಷಯಕಮದ, ಧನಾರ್ಜನೆಯಿಂದ ಉಂಟಾಗುವ ಮದವಲ್ಲ ಇದು ಅಮದಶೀಲ.

೮. ಗುರು-ಜಂಗಮರ ವಿಷಯಕ ಗುಣಾವಗುಣವಿಚಾರತ್ಯಾಗ.

೯. ಅಹಿಂಸಾಶೀಲ

೧೦. ದಯಾಶೀಲ

೧೧. ಇನ್ನೊಬ್ಬರ ದೋಷವನ್ನು ಎಣಿಸದೇ ತನ್ನ ಸ್ತುತಿ, ಪರನಿಂದೆ ವಿಷಯಕ ಸಂಕೋಚ, ಲಜ್ಜೆಯೆಂಬ ಶೀಲ.

೧೨. ಶತ್ರುಪುತ್ರ ವಿಷಯಕ ಭೇದಭಾವ ಪರಿತ್ಯಾಗ ಆರ್ಜವಶೀಲ.

೧೩. ನಿಗಮಾಗಮ ವಿಷಯಕ ವಿಶ್ವಾಸ ಶ್ರದ್ಧಾಶೀಲ.

೧೪. ಆಪತ್ಕಾಲದಲ್ಲಿಯೂ ಧರ್ಮಪಾಲನ ಧೃತಿಶೀಲ.

೧೫. ಅಪಕಾರಿಗಳಾದ ಶತ್ರುಗಳ ಬಗ್ಗೆ ದೋಷದೃಷ್ಟಿಯನ್ನಿರಿಸದೇ ಇರುವ ಕ್ಷಮಾಶೀಲ.

೧೬. ಭೋಗಾಸಕ್ತಿಚ್ಯುತಿಶೀಲ

೧೭. ಯಾವುದೇ ಕಾರ್ಯ ಮಾಡುವಲ್ಲಿ ಅಥವಾ ವಚನಪಾಲನದಲ್ಲಿ ಪ್ರಮಾದವಿಲ್ಲ-ದಿರುವಿಕೆ.

೧೮. ಶಿವನನ್ನು ಬಿಟ್ಟು ಬೇರೆ ಯಾವುದೇ ವಸ್ತುವಿನ ಬಗ್ಗೆ ಸಂಕಲ್ಪ ಮಾಡದೆ ಇರುವ ದಮವೆಂಬ ಶೀಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೯. ಅಸ್ತೇಯಶೀಲ

೨೦. ಸಂತುಷ್ಟಿಶೀಲ

೨೧. ಪರಮೇಶ್ವರ ನಾಮರೂಪಸ್ಮರಣ

೨೨. ಶಿವನಾಮ ಗುಣಾದಿಚಿಂತನ

೨೩. ಪಾದಸೇವನಶೀಲ

೨೪. ಶಿವನ ಆಹ್ವಾನ ಮುಂತಾದ ವಿಚಾರಗಳಿಂದ ಮಾನಸಿಕ ಪೂಜೆ.

೨೫. ಶಿವಚರಣ ಕಮಲಗಳಿಗೆ ಮನಸ್ಸಿನಲ್ಲಿ ಪ್ರಣಾಮ ಮಾಡುವುದು.

೨೬. ದಾಸ್ಯಶೀಲ

೨೭. ಸಖ್ಯಶೀಲ

೨೮. ಬಂಧ-ಮೋಕ್ಷಗಳ ಚಿಂತೆಯನ್ನು ಶಿವನಿಗೆ ಬಿಡುವುದೇ ಆತ್ಮಾರ್ಪಣಶೀಲ.

೨೯. ಪಂಚಾಕ್ಷರ ಮಂತ್ರದ ಮಾನಸಿಕ ಜಪ.

೩೦. ಶಿವದಿವ್ಯರೂಪಾನುಸಂಧಾನವೆಂಬ ಧ್ಯಾನಶೀಲ.

೩೧. ಮನಸ್ಸಿನಲ್ಲಿ ಶಿವಸ್ವರೂಪ ಪ್ರವಾಹವೆಂಬ ಧಾರಣಾಶೀಲ.

೩೨. ಶಿವಧ್ಯಾನದಲ್ಲಿ ಚಿತ್ತದ ಅಖಂಡಸ್ಥಿತಿಯೆಂಬ ಸಮಾಧಿಶೀಲ.

೩೩. ಸೋಽಹಂ ಎಂದು ಶಿವಧ್ಯಾನವನ್ನು ಮಾಡುತ್ತ ತಾನು ಮಾಡಿದ್ದೆಲ್ಲಕ್ಕೂ ಭಗವಂತನೇ ಕಾರಣವೆಂದು ಭಾವಿಸಿ ಆಚರಿಸುವುದು.

೩೪. ಶಿವನ ಸರ್ವವ್ಯಾಪಕತ್ವದ ಅನುಸಂಧಾನ.

೩೫. ಶಿವನಂದಾನುಭೂತಿ

ಈ ರೀತಿ ೬೪ ಶೀಲಗಳಿಂದ ಕೂಡಿದ ಸಾಧಕನು ಸ್ವಯಂ ಶಿವನಾಗಿ ಶಿವಸಾಯುಜ್ಯವನ್ನು ಪಡೆಯುತ್ತಾನೆ.

> ಯಶ್ಚತುಷಷ್ಟಿಶೀಲಾಢ್ಯಃ ಶಿವ ಏವ ನ ಚಾಪರಃ।
> ಏತದಭ್ಯಾಸಯೋಗೇನ ಶಿವಸಾಯುಜ್ಯಮಶ್ನುತೇ॥[೬]

ಈ ೬೪ ಶೀಲಗಳನ್ನು ಆಚರಿಸುವ ವ್ಯಕ್ತಿಯಲ್ಲಿ ನಿಷ್ಠೆ ಬಲವಾಗುತ್ತವೆ. ಆದರಿಂದಾಗಿ ಶಿವ, ಶಿವಭಕ್ತ, ಶಿವಧರ್ಮಗಳ ಬಗ್ಗೆ ನಿಂದೆಯನ್ನು ಕೇಳದಿರುವ ಛಲ ಅವನಲ್ಲಿ ಉದಯಿಸುತ್ತದೆ. ಗಣಾಚಾರನಿಷ್ಠನಾದವನು ಶಿವನಲ್ಲದೆ ಬೇರಲ್ಲ.

೫. ಭೃತ್ಯಾಚಾರ:

ವಿನಯಪರಾಕಾಷ್ಠೆಯನ್ನು ಈ ಆಚಾರದಲ್ಲಿ ಕಾಣಬಹುದು. ಪ್ರತಿಯೊಂದು ಸದ್ಗುಣವು ವಿನಯದಿಂದಲೇ ಶೋಭಿಸುತ್ತದೆಂಬುದಕ್ಕೆ 'ವಿದ್ಯಾ ವಿನಯೇನ ಶೋಭತೇ' ಎಂಬ ಸುಭಾಷಿತವೇ ಸಾಕ್ಷಿ. 'ಅನುತ್ಸೇಕಃ ಖಲು ವಿಕ್ರಮಾಲಂಕಾರಃ' ಎಂಬ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಲಿದಾಸೋಕ್ತಿಯ ಅಭಿಪ್ರಾಯವೂ ಇದೇ ಆಗಿದೆ. ಈ ಭೃತ್ಯಾಚಾರವೇ ತ್ರಿವಿಧ ದಾಸೋಹದ ತಳಹದಿಯಾಗಿದೆ ಎನ್ನಬಹುದು. ಭೃತ್ಯಾಚಾರವೆಂದರೆ ಸೇವಾವೃತ್ತಿಯಾಗಿದ್ದು ಅದರ ಸ್ವರೂಪವಿಂತಿದೆ.

ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀತಲೇ।
ತೇಷಾಂಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ॥[೬೭]

ಅಂದರೆ ಈ ಜಗತ್ತಿನಲ್ಲಿ ಎಲ್ಲ ಶಿವಭಕ್ತರು ಶ್ರೇಷ್ಠರಾಗಿದ್ದು, ನಾನವರ ಸೇವಕನೆಂದು ಭಾವಿಸಿ ವರ್ತಿಸುವುದೇ ಭೃತ್ಯಾಚಾರವೆನಿಸುತ್ತದೆ. ಇದೇ ಅಭಿಪ್ರಾಯವನ್ನು ಇನ್ನೊಂದು ಪ್ರಮಾಣಶ್ಲೋಕದಲ್ಲಿ ಕಾಣಬಹುದು.

ಶಿವತ್ವದ್ದಾಸದಾಸಾನಾಂ ದಾಸೋಽಸ್ಮೀತಿ ಯಾ ಮತಿಃ।
ತಾಂ ದತ್ವಾ ಕೃಪಯಾ ಪಾಹಿ ಜನ್ಮಜನ್ಮಾಂತರೇಷು ಮಾಮ್॥

'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಬಸವಣ್ಣನವರ ವಚನವು ಭೃತ್ಯಾಚಾರದ ಸುಂದರ ಮೀಮಾಂಸೆಯನ್ನು ಮಾಡುತ್ತದೆ. ಮುಗಿದ ಕರ, ಬಾಗಿದ ಶಿರಗಳಿಂದಾಗಿ ಬಸವಣ್ಣನವರು ವಿಶ್ವಬಂಧುವಾಗಿದ್ದಾರೆ, ಜಗಜ್ಜ್ಯೋತಿ ಎನಿಸಿದ್ದಾರೆ. ಭೃತ್ಯಾಚಾರದ ತಳಹದಿಯಾದ ಸೇವಾಧರ್ಮವು ಅಷ್ಟು ಸುಲಭವಲ್ಲವೆಂದು ಭೃತ್ಯ ತನ್ನ ಸುಭಾಷಿತವೊಂದರಲ್ಲಿ ತಿಳಿಸಿದ್ದಾನೆ.

'ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ।'

ಚಂದ್ರಜ್ಞಾನಾಗಮವು ಭೃತ್ಯಾಚಾರದಲ್ಲಿ ಭೃತ್ಯತ್ವ ಹಾಗೂ ವೀರಭೃತ್ಯತ್ವವೆಂದು ಎರಡು ಭೇದಗಳನ್ನು ಮಾಡಿದೆ.

ಭೃತ್ಯತ್ವಂ ವೀರಭೃತ್ಯತ್ವಂ ಭೃತ್ಯಾಚಾರೋ ದ್ವಿಧಾ ಮತಃ।[೬೮]

ಅವುಗಳ ವಿವರಣೆ ಇಂತಿದೆ:

ಗುರುಲಿಂಗಜಂಗಮಾನಾಂ ಕೈಂಕರ್ಯಾಚರಣಂ ಹಿ ಯತ್।
ಭೃತ್ಯತ್ವಮಿತಿ ನಿರ್ದಿಷ್ಟಂ ದೇವದೇವೇನ ಶಂಭುನಾ॥[೬೯]

ಅಂದರೆ ಗುರು, ಲಿಂಗ, ಜಂಗಮರಿಗೆ ಸದಾ, ನಿಷ್ಠನಾಗಿ ಭಕ್ತಿಭಾವದಿಂದ ನಿತ್ಯ ಸೇವೆ ಮಾಡುವುದೇ ಭೃತ್ಯತ್ವ.

ದೇಶಿಕಾಯ ತನುಂ ಚಿತ್ತಂ ಶಂಭವೇ ಚ ಧನಂ ತಥಾ।
ಜಂಗಮಾಯ ಸಮರ್ಪ್ಯೈವ ಮಹೋತ್ಸಾಹಸಮನ್ವಿತಃ॥
ಮುಕ್ತಿಮೇವ ಪರಾಂ ಕಾಂಕ್ಷಮಾಣೋ ಯದವತಿಷ್ಠತೇ।
ತನ್ಮತಂ ವೀರಭೃತ್ಯತ್ವಂ ಶಿವಾನುಗ್ರಹಸಾಧನಮ್॥[೭೦]

ಅಂದರೆ ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು ಹಾಗೂ ಜಂಗಮಕ್ಕೆ ಧನವನ್ನು ಸಮರ್ಪಿಸಿ ಮುಕ್ತಿಯ ಕಾಮನೆಯಿಂದ ಮಾತ್ರ ಶರೀರ ಧಾರಣೆ ಮಾಡುವ ಹಾಗೂ ಶಿವಾನುಗ್ರಹಕ್ಕೆ ಪಾತ್ರವಾಗುವ ಸ್ಥಿತಿಗೆ ವೀರಭೃತ್ಯತ್ವವೆನ್ನುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಂಚಾಚಾರಗಳಲ್ಲಿ ಒಂದೊಂದರ ಪರಿಪೂರ್ಣಾಚರಣೆಯಿಂದ ಸಿದ್ಧಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಏಕೆಂದರೆ ಒಂದೊಂದು ಆಚಾರದಲ್ಲಿಯೂ ಸರ್ವಾಚಾರ ಸಂಪತ್ತು ಅಡಗಿರುವುದನ್ನು ನೋಡಬಹುದು. ಉದಾಹರಣೆಗೆ ಲಿಂಗಾಚಾರದಲ್ಲಿ ಲಿಂಗನಿಷ್ಠೆಯಿಂದ ಕೂಡಿದ ಭಕ್ತನು ಶಿವಸರ್ವೋತ್ತಮ ಭಾವನೆಯಿಂದ ಕೂಡಿಕೊಂಡಿದ್ದು ಶಿವಾಚಾರದ ಸಾಧನೆ ಮಾಡುತ್ತಾನೆ. ಲಿಂಗಪೂಜೆಗೆ ಅವಶ್ಯವಾದ ಧನಾರ್ಜನೆಗೆ ಸದಾಚಾರವನ್ನವಲಂಬಿಸದೇ ಗತ್ಯಂತರವಿಲ್ಲ. ತನ್ನ ಶಿವಪೂಜಾದಿ ಧರ್ಮಾಚರಣೆಗೆ ಉಂಟಾಗುವ ಅಡ್ಡಿ ಆತಂಕಗಳ ನಿವಾರಣೆಗೆ ಗಣಾಚಾರಿಯಾಗಲೇ ಬೇಕಾಗುತ್ತದೆ. ಅದೇ ರೀತಿ ಶಿವನ ಮೂರು ರೂಪಗಳಾದ ಗುರು-ಲಿಂಗ-ಜಂಗಮಗಳ ವಿಷಯದಲ್ಲಿ ಸೇವಾವೃತ್ತಿಯಿಂದಾಗಿ ಭೃತ್ಯಾಚಾರ ಸ್ವಾಭಾವಿಕವಾಗಿ ಸಿದ್ಧಿಸುತ್ತದೆ. ಒಟ್ಟಾರೆ ಈ ಪಂಚಾಚಾರಗಳು ವೀರಶೈವ ಧರ್ಮ-ದರ್ಶನಗಳ ದರ್ಪಣವಾಗಿದ್ದು, ಈ ಮತದ ನೈತಿಕ ಮೌಲ್ಯವನ್ನು ಅಲ್ಲಿ ಕಾಣಬಹುದಾಗಿದೆ. ಇವು ಕಾಯೇನ ವಾಚಾ ಮನಸಾ ಅನುಸರಿಸಬೇಕಾದ ನೀತಿನಿಯಮಗಳು ವ್ಯಕ್ತಿಗತ ಹಾಗೂ ಸಮಾಜಗತ ಸಮೃದ್ಧಿ ಹಾಗೂ ಸಮುನ್ನತಿಗಳಿಗೆ ಅವಶ್ಯವಿರುವ ನೀತಿಸಂಹಿತೆ (Code of Conduct).

ಅಡಿಟಿಪ್ಪಣಿ

೧. ಲಘುಹಾರೀತ, ೭.೧೦-೧೧.

೨. ಮನಸ್ಮೃತಿ, ೬.೬೭.

೩. ಸಿದ್ಧಾಂತಶಿಖಾಮಣಿ, ೬.೬೫.

೪. ಅದೇ, ೬.೧೪.

೫. ಅದೇ.,

೬. ಯೋಗಸೂತ್ರಮ್.

೭. ಶ್ರೀ ಸಿದ್ಧಾಂತಶಿಖಾಮಣಿ, ೧೬.೫೯.

೮. ಮನುಸ್ಮೃತಿ, ೬.೯೨.

೯. ಬಸವಣ್ಣನವರ ವಚನಗಳು, ವಚನ. ೨೩೫.

೧೦. ಕಾರಣಾಗಮ, ೧.೧೨೮.

೧೧. ಚಂದ್ರಜ್ಞಾನಾಗಮ, ಕ್ರಿಯಾಪಾದ, ೯.೪.

೧೨. ಅದೇ, ಕ್ರಿಯಾಪಾದ, ೯.೫-೯.

೧೩. ಸ್ಕಂದ ಪುರಾಣಾಂತರ್ಗತ ಶಂಕರಸಂಹಿತೆ.

೧೪. ಸಿದ್ಧಾಂತಶಿಖಾಮಣಿ, ೬.೨೫-೨೬.

೧೫. ಅದೇ, ೧೩.೩೪.

೧೬. ಚಂದ್ರಜ್ಞಾನಾಗಮ, ೯.೧೧.

೧೭. ಅದೇ, ೯.೧೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೮. ಕಾರಣಾಗಮ, ೧.೪೪.
೧೯. ಅದೇ, ೧.೪೫.
೨೦. ಅದೇ, ೧.೭೫.
೨೧. ಅದೇ, ೧.೭೭.
೨೨. ಅದೇ, ೧.೮೩.
೨೩. ಅದೇ, ೧.೮೮-೯೫.
೨೩ಎ. ಚಂದ್ರಜ್ಞಾನಾಗಮ, ಕ್ರಿ.ಪಾ., ೯.೧೩.
೨೪. ಕಾರಣಾಗಮ, ಕ್ರಿ.ಪಾ., ೧.೯೮-೧೦೧.
೨೫. ಅದೇ, ೧.೧೦೨.
೨೬. ಅದೇ, ೧.೧೦೩.
೨೭. ಅದೇ, ೧.೧೦೪.
೨೮. ಶ್ರೀ ಸಿದ್ಧಾಂತಶಿಖಾಮಣಿ, ೫.೬೯.
೨೯. ಕಾರಣಾಗಮ, ೧.೧೦೫.
೩೦. ಅದೇ, ೧.೧೦೬-೧೦೭.
೩೧. ಅದೇ, ೧.೧೦೮.
೩೨. ಚಂದ್ರಜ್ಞಾನಾಗಮ, ಕ್ರಿ.ಪಾ., ೯.೩೪-೩೫.
೩೩. ಕಾರಣಾಗಮ, ಕ್ರಿ.ಪಾ., ೧.೧೧೨.
೩೪. ಅದೇ, ೧.೧೧೩.
೩೫. ಅದೇ, ೧.೧೧೪.
೩೬. ಅದೇ, ೧.೧೧೫.
೩೭. ಅದೇ, ೧.೧೧೬.
೩೮. ಸಿದ್ಧಾಂತಶಿಖಾಮಣಿ, ೬.೩೩.
೩೯. ಕಾರಣಾಗಮ, ಕ್ರಿ.ಪಾ., ೧.೧೧೧.
೪೦. ಅದೇ, ೧.೧೩೩.
೪೧. ಶಿವಾನುಭವಶಬ್ದಕೋಶ, ಪು. ೯೨.
೪೨. ಶ್ರೀ ಸಿದ್ಧಾಂತಶಿಖಾಮಣಿ, ೬.೫೩.
೪೩. ಚಂದ್ರಜ್ಞಾನಾಗಮ, ೯.೧೬-೧೭.
೪೪. ಶ್ರೀ ಸಿದ್ಧಾಂತಶಿಖಾಮಣಿ, ೧೬.೬೬.
೪೫. ಸೂಕ್ಷ್ಮಾಗಮ, ೮.೧೨.
೪೬. ಚಂದ್ರಜ್ಞಾನಾಗಮ, ೯.೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪೭. ಶಿವಾನುಭವಶಬ್ದಕೋಶ, ಪು. ೯೪.

೪೮. ಚಂದ್ರಜ್ಞಾನಾಗಮ, ೯.೨೦-೨೨.

೪೯. ಅದೇ, ೯.೭.

೫೦. ಶಿವಾನುಭವಶಬ್ದಕೋಶ, ಪು. ೯೪.

೫೧. ಶ್ರೀ ಸಿದ್ಧಾಂತಶಿಖಾಮಣಿ, ೧೦.೩೨.

೫೨. ಅದೇ, ೧೦.೩೧.

೫೩. ಚಂದ್ರಜ್ಞಾನಾಗಮ, ೯.೩೨.

೫೪. ಶ್ರೀ ಸಿದ್ಧಾಂತಶಿಖಾಮಣಿ, ೯.೨೯.

೫೫. ಭಗವದ್ಗೀತಾ, ೯.೩೨.

೫೬. ಚಂದ್ರಜ್ಞಾನಾಗಮ, ೯.೫೦.

೫೭. ಅದೇ, ೯.೫೧.

೫೮. ರಘುವಂಶ, ೨.೪೫.

೫೯. ಚಂದ್ರಜ್ಞಾನಾಗಮ, ೯.೮.

೬೦. ಸೂಕ್ಷ್ಮಾಗಮ, ೮.೧೪.

೬೧. ಸಿದ್ಧಾಂತಶಿಖಾಮಣಿ, ೯.೩೬.

೬೨. ಮನುಸ್ಮೃತಿ, ೨.೨೦೦.

೬೩. ಸಿದ್ಧಾಂತಶಿಖಾಮಣಿ, ೯.೩೮.

೬೪. ಕುಮಾರಸಂಭವ, ೫.೪೩.

೬೫. ಚಂದ್ರಜ್ಞಾನಾಗಮ, ಕ್ರಿಯಾಪಾದ, ೯.೫೨.

೬೬. ಅದೇ, ೯.೧೨೩.

೬೭. ಅದೇ, ೯.೧೧.

೬೮. ಅದೇ, ೯.೧೨೪.

೬೯. ಅದೇ, ೯.೧೨೪.

೭೦. ಅದೇ, ೯.೧೨೫-೧೨೬.

೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦. ಶೈವ-ವೀರಶೈವ ಪ್ರಭೇದಗಳು

-ಷಣ್ಮುಖಯ್ಯ ಅಕ್ಕೂರಮಠ

ಶೈವಧರ್ಮದ ಇತಿಹಾಸ: ಒಂದು ನೋಟ

ಶಿವೋದಾತಾ ಶಿವೋಭೋಕ್ತಾ ಶಿವಃ ಸರ್ವಮಿದಂ ಜಗತ್।
ಶಿವೋ ಯಜತಿ ಯಜ್ಞಶ್ಚ ಯಃ ಶಿವಃ ಸೋಽಹಮೇವ ಹಿ॥
ಶುಭಮಸ್ತು ಸರ್ವಜಗತಾಂ ಪರಹಿತನಿರತಾ ಭವಂತು ಭೂತಗಣಾಃ।
ದೋಷಾಃ ಪ್ರಯಾಂತು ಶಾಂತಿಃ ಸರ್ವತ್ರ ಸುಖೀ ಭವಂತು ಲೋಕಾಃ॥*

ಶಿವನೇ ಎಲ್ಲದಕ್ಕೂ ಕಾರಣ, ಜಗತ್ತು ಶಿವಮಯ, ಎಲ್ಲರೂ ಶಿವಸ್ವರೂಪಿಗಳು, ಜಗತ್ತಿಗೆ ಶುಭವಾಗಲಿ. ಲೋಕದ ಜನರು ಪರಹಿತದಲ್ಲಿ ತೊಡಗಲಿ, ಕಷ್ಟಗಳೆಲ್ಲ ಕಳೆದು ಜಗತ್ತಿನ ಜನಾಂಗವೆಲ್ಲ ಸುಖವಾಗಿರಲಿ ಎನ್ನುವ ಉದಾತ್ತ ಧ್ಯೇಯ, ಆಶಯವನ್ನು ಜಗತ್ತಿಗೆ ಸಂದೇಶ ನೀಡುವ ಶೈವಧರ್ಮ ಭಾರತದಲ್ಲಿ ಪ್ರಾಚೀನತಮವಾದುದು. ಇದು ಪ್ರಾಕ್ ವೈದಿಕ ಮತವೆಂದು ವಿದ್ವಾಂಸರ ಅಭಿಮತ. ಖ್ಯಾತ ಇತಿಹಾಸ ಸಂಶೋಧಕರಾದ ಸರ್ ಜಾನ್ ಮಾರ್ಷಲ್ಲರು "ಪ್ರಪಂಚದ ಧರ್ಮಗಳಲ್ಲಿ ಶೈವಧರ್ಮ ಪ್ರಾಚೀನತಮವಾದುದು. ಇದು ಮೊಹೆಂಜೋದಾರೋ-ಹರಪ್ಪ-ನಾಗರಿಕತೆಯ ಅವಶೇಷಗಳಿಂದ ತಿಳಿದುಬಂದಿರುವ ಸಂಗತಿ ಎಂದು ಹೇಳುತ್ತಾರೆ.

ಶೈವಧರ್ಮ ಜಗತ್ತಿನಾದ್ಯಂತ ಹರಡಿತ್ತೆಂದು ತಿಳಿದುಬರುತ್ತದೆ. ಸೈಂಧವ ಸಂಸ್ಕೃತಿ ಜನಾಂಗದಲ್ಲಿ, ಮೆಸೊಪೊಟೋಮಿಯಾ, ಬ್ಯಾಬಿಲೋನ, ಗ್ರೀಕ್, ಈಜಿಪ್ಟ್ ಮುಂತಾದ ನದೀ ಸಂಸ್ಕೃತಿಗಳ ಜನಾಂಗಗಳಲ್ಲಿ ಆಗ್ನೇಯ, ಏಷ್ಯಾದೇಶಗಳಲ್ಲಿ ನೇಪಾಳ-ಭೂತಾನ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಶಿವೋಪಾಸನೆ ಅಲ್ಲಲ್ಲಿ ಉಳಿದುಬಂದಿದೆ ಹಾಗೂ ಬೆಳೆದುಬಂದಿದೆ. ವೇದ-ಆಗಮ-ಪುರಾಣ, ಸ್ತೋತ್ರ ಸಾಹಿತ್ಯದಲ್ಲಿ ಶಿವಾರಾಧನೆಯ ವಿಷಯವಿದೆ. ಶಿವಪುರಾಣಗಳು ಪ್ರಸಿದ್ಧವಾಗಿವೆ. ಕಾಳಿದಾಸ-ಭೋಜ-ಬಾಣ-ಹರ್ಷ ಮೊದಲಾದ ಕವಿಗಳೂ ಹಾಗೂ ಶಂಕರಾ- ಚಾರ್ಯರು ಶಿವೋಪಾಸಕರು. ಕುಶಾನ, ಹೂಣ, ಚೋಳ, ಪಲ್ಲವ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ, ಕಾಕತೀಯ ರಾಜವಂಶಗಳ ಅರಸರು ಶಿವಭಕ್ತರಾಗಿದ್ದರು. ಭಾರತದ ಉದ್ದಗಲಕ್ಕೂ ಇರುವ ದ್ವಾದಶ

---

* ವಿವೃತ್ತಿ ವಿಮರ್ಶನಿ- ಅಭಿನವಗುಪ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಯೋತಿರ್ಲಿಂಗಗಳು, ಅಗಣಿತ ಶಿವಮಂದಿರಗಳು ಶಿವಮತದ ಜನಪ್ರಿಯತೆಗೆ ವ್ಯಾಪಕತೆಗೆ ಸಾಕ್ಷಿಗಳಾಗಿ ನಿದರ್ಶನಗಳಾಗಿ ನಿಂತಿವೆ. ಬುದ್ಧನು ತನ್ನ ಉಪದೇಶದಲ್ಲಿ "ಶಿವವಿಜ್ಞ" ಎಂದು ಹೇಳಿದ್ದಾನೆ.

ಅಶೋಕನು ಕ್ರಿ.ಪೂ. ೨೫೦ರಲ್ಲಿ ನೇಪಾಳಕ್ಕೆ ಹೋದಾಗ ಪಶುಪತಿನಾಥನ ದೇವಾಲಯದ ಉತ್ತರಭಾಗದಲ್ಲಿ ಬೌದ್ಧವಿಹಾರವನ್ನು ಕಟ್ಟಿಸಿದ. ಅವನ ನಿಧನಾನಂತರ ಅವನ ಮಗಳು ಚಾರುಮತಿ, ಮಗ ಜತಾಕ, ಇವನ ಪತ್ನಿ ಈಶಾನದೇವಿ ಶಿವದೇವಾಲಯವನ್ನು ಕಟ್ಟಿಸಿ ಅಶೋಕೇಶ್ವರನೆಂದು ಹೆಸರಿಟ್ಟಿದ್ದಾರೆ. ನೇಪಾಳದಲ್ಲಿ ಈಗಲೂ ಈ ದೇವಾಲಯವನ್ನು ನೋಡಬಹುದಾಗಿದೆ. ಭಾರತದಲ್ಲಿ ರಾಜಮಹಾರಾಜರು ಶಿವಭಕ್ತರಾಗಿದ್ದರು. ಉತ್ತರಭಾರತದ ಕನಿಷ್ಕ, ಪುಷ್ಯಭೂತಿ, ಹರ್ಷ ಚಕ್ರವರ್ತಿಗಳು ಶಿವನ ಪರಮಾರಾಧಕರಾಗಿದ್ದರು.

ಇತಿಹಾಸ ಪೂರ್ವಕಾಲದಿಂದ ಶಿವನನ್ನು ಉಗ್ರ-ಸೌಮ್ಯ, ಭೀಕರ-ಸುಂದರ ಕಠೋರ-ಕರುಣಾಮಯ ರೂಪಗಳಲ್ಲಿ ಭಾರತದ ಒಳಗೂ-ಹೊರಗೂ ಅಸಂಖ್ಯರು ಆರಾಧಿಸುತ್ತಾ ಬಂದಿದ್ದಾರೆ. ಉತ್ತರ ಕಾಶ್ಮೀರದಲ್ಲಿ ವಸುಗುಪ್ತ-ಕಲ್ಲಟರ-ಸ್ಪಂದ ಶಾಸ್ತ್ರ ಮತ್ತು ಸೋಮಾನಂದನ ಪ್ರತ್ಯಭಿಜ್ಞ ಶಾಸ್ತ್ರಗಳೂ, ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಅಪ್ಪರ್, ತಿರುಜ್ಞಾನ ಸಂಬಂಧಿ, ಸೌಂದರನಂಬಿ, ಸಿರಿಯಾಳ ಶೆಟ್ಟಿ, ಮಾಣಿಕ್ಯ ವಾಚಕರ್, ನಂಬಿಯಾಂಡಾರ್ ಮೊದಲಾದ ಪುರಾತನರಿಂದ ರೂಪುಗೊಂಡ ಶೈವಸಿದ್ಧಾಂತ, ಶಿವಮತದ ವೃಕ್ಷದ ಶಾಖೆಗಳಾಗಿ ಒಡಮೂಡಿದವು. ಸಂಸ್ಕೃತದಲ್ಲಿ ಸದ್ಯೋಜ್ಯೋತಿ, ಭೋಜರಾಜ, ರಾಜಾನಕ ರಾಮಕಂಠ, ಶ್ರೀಕಂಠ ಸೂರಿ, ಸೋಮಶಂಭು, ಅಘೋರಶಿವ, ತ್ರಿಲೋಚನ ಶಿವಾಚಾರ್ಯ ಮೊದಲಾದ ಶೈವಾಚಾರ್ಯರು, ತಮಿಳಿನಲ್ಲಿ ಉಯ್ಯವಂದದೇವರ್, ಮೆಯ್ಯಕಂಡದೇವರ್, ಅರುಳ್‌ನಂದಿ, ಮನವಾಸಗಂ, ಕಡಂದದೇವರ್, ಉಮಾಪತಿ ಶಕ್ಕೀರರ್ ಮುಂತಾದ ಶಿವಜ್ಞಾನ ಸಿದ್ಧರೂ, ಅನೇಕ ಉದ್ಗ್ರಂಥಗಳನ್ನು ರಚಿಸಿ ಶಿವಮತದ ಪ್ರಚಾರಕ್ಕೆ ಕಾರಣರಾಗಿದ್ದಾರೆ. ಸಂಸ್ಕೃತದ ವ್ಯಾಕರಣಾಚಾರ್ಯ ಪಾಣಿನಿ ೧೪ ಸೂತ್ರಗಳ ಮೂಲಕ ಸಂಸ್ಕೃತದ ವ್ಯಾಕರಣವನ್ನು ರಚಿಸಿದ. ಈ ಸೂತ್ರಗಳು ಮಾಹೇಶ್ವರಸೂತ್ರಗಳೆಂದು ಪ್ರಸಿದ್ಧವಾಗಿವೆ. ಈ ಸೂತ್ರಗಳಿಗೆ ನಂದಿಕೇಶ್ವರ ಶಿವಾಚಾರ್ಯರು ಶೈವಸಿದ್ಧಾಂತದ ಪರವಾಗಿ ಭಾಷ್ಯ ಬರೆದಿದ್ದಾರೆ.

ಶೈವಧರ್ಮ ೭ ಮತ್ತು ೧೨ನೇ ಶತಮಾನದ ಮಧ್ಯಂತರದಲ್ಲಿ ಭಾರತದ ಉತ್ತರ-ದಕ್ಷಿಣ ಭಾಗಗಳಲ್ಲಿ ಪ್ರಚಾರವಾಗಿತ್ತು. ಲಕುಲೀಶ-ಪಾಶುಪತ, ರಸೇಶ್ವರ ಕಾಶ್ಮೀರಶೈವಗಳು ಉತ್ತರಭಾರತದ ಗುಜರಾತ್, ಮಧ್ಯಪ್ರದೇಶ, ಬಿಹಾರ್, ಬಂಗಾಲ್, ನೇಪಾಳ್ ಕಾಶ್ಮೀರಗಳಲ್ಲೂ; ಕಾಳಾಮುಖ, ತಮಿಳುಶೈವ ಹಾಗೂ ವೀರಶೈವಗಳು ದಕ್ಷಿಣದಲ್ಲೂ ಪ್ರಚಾರ ಪಡೆದಿದ್ದವು. ಶೈವಮತದ ಪ್ರಾಚೀನತೆಯನ್ನು ಚರ್ಚಿಸುವ ಶ್ರೀ ವಿ.ಆರ್. ರಾಮಚಂದ್ರ ದೀಕ್ಷಿತ್ ಅವರು ಗೋರಖಪುರದಿಂದ ಪ್ರಕಟವಾಗುತ್ತಿರುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲ್ಯಾಣ 'ಶಿವಾಂಕ'ದಲ್ಲಿ ಬರೆದ ಲೇಖನದಲ್ಲಿ ಶೈವಸಂಪ್ರದಾಯದ ಲಿಂಗಪೂಜೆ, ಲಿಂಗಧಾರಣಾದಿಗಳು ಆರ್ಯಸಂಸ್ಕೃತಿಗಿಂತ ಬಹುಪ್ರಾಚೀನವೆಂದು ತಿಳಿಸುತ್ತಾರೆ.[೧]

ಆಫ್ರಿಕಾ ಮೊದಲಾದ ದೇಶಗಳಲ್ಲಿರುವ ಶಿವನ ಮೂರ್ತಿಶಿಲ್ಪ-ಶಿವದೇವಾಲಯಗಳನ್ನು ಕುರಿತು ಫ್ರಾನ್ಸ್ ದೇಶದ ಲೂಯಿ ಬರೆದ ಗ್ರಂಥದ ಆಧಾರದಿಂದ ಕಾಶಿಯ ಬಾಬೂ ಬೇಚುಸಿಂಹರು ರಚಿಸಿರುವ "ನಿರ್ಮಾಲ್ಯ ರತ್ನಾಕರ" ಎಂಬ ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ: "ಉತ್ತರ ಆಫ್ರಿಕಾ ಖಂಡದ ಈಜಿಪ್ಟಿನಲ್ಲಿರುವ ಮೆಂಚಿಸ್‌ನಲ್ಲಿ ನಂದಿವಾಹನ ತ್ರಿಶೂಲ, ಸರ್ಪ, ವ್ಯಾಘ್ರ ಚರ್ಮಾಂಬರಧಾರಿ ಶಿವನ ವಿಗ್ರಹವಿದೆ. ಅಲ್ಲ ಈ ವಿಗ್ರಹಕ್ಕೆ ಆಸಿರಿಸ್ ಎಂಬ ಹೆಸರಿದೆ. ಟರ್ಕಿದೇಶದ ಬ್ಯಾಬಿಲೋನ್‌ನಲ್ಲಿ ೧೨೦೦ ಘನಹಸ್ತ ಎತ್ತರದ ಶಿವಲಿಂಗವಿದೆ. ಮುಸಲ್ಮಾನರ ಪುಣ್ಯಕ್ಷೇತ್ರ ಮಕ್ಕಾದಲ್ಲಿ ಮಕ್ಕೇಶ್ವರಲಿಂಗ ಪ್ರಸಿದ್ಧವಾಗಿದೆ. ಅಮೆರಿಕಾದ ಬ್ರೆಜಿಲ್‌ನಲ್ಲಿ ಶಿವಲಿಂಗ ಮತ್ತು ವಿಘ್ನೇಶ್ವರ ಮೂರ್ತಿಗಳಿವೆ. ಗ್ರೀಸ್ ದೇಶಕ್ಕೆ ಸೇರಿದ ಕಾರಿಂಥ್‌ನಲ್ಲಿ ಪಾರ್ವತಿವಿಗ್ರಹ, ಸ್ಕಾಟ್‌ಲೆಂಡ್‌ನ ಗ್ಲಾಸ್ಗೋ ಪಟ್ಟಣಗಳಲ್ಲಿ ಶಿವಲಿಂಗ, ಕಾಬೂಲ್, ಬಲಖ್, ಬುಖಾರ ಮುಂತಾದ ಕಡೆಗಳಲ್ಲಿ ಶಿವಲಿಂಗಗಳು ನೋಡಲು ಸಿಕ್ಕುತ್ತವೆ ಎನ್ನುವ ವಿಷಯ ತಿಳಿಸುತ್ತಾರೆ. ಈ ಎಲ್ಲ ಕಾರಣಗಳಿಂದ ಶೈವಧರ್ಮ ಜಗತ್ತಿನಾದ್ಯಂತ ಹರಡಿತ್ತು ಎಂಬುದು ಗಮನಿಸಬೇಕಾದ ಅಂಶ.[೨]

ಹೀಗೆ ಶೈವಧರ್ಮದ ಪ್ರಭಾವ ಸಿಂಧೂಕಣಿವೆಯಿಂದ ಬಂಗಾಳದವರೆಗೂ, ಪೂರ್ಣ ಭಾರತದ ಮೇಲೂ, ಸಾಗರದಾಚೆಗೆ ಮಧ್ಯಏಷಿಯಾ ಜಗತ್ತಿನಾದ್ಯಂತ ಹರಡಿರುವುದು ಕಂಡುಬರುತ್ತದೆ. ಈ ಸತ್ವಪೂರ್ಣ ಪ್ರಾಚೀನ ಮತದ ಉಗಮ ವಿಕಾಸಕ್ಕೆ ವಿಸ್ತಾರವಾದ ಚರಿತ್ರೆ ಇದೆ.

'ಶಿವ' ಎಂಬ ಹೆಸರು ಋಗ್ವೇದದಲ್ಲಿ ಕಂಡುಬರುವುದಿಲ್ಲ. ಅಲ್ಲಿ ರುದ್ರ ಉಗ್ರದೇವತಾ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಯಜುರ್ವೇದದ ರುದ್ರಾಧ್ಯಾಯದಲ್ಲಿ ರುದ್ರ, ಸೋಮ, ಶಿವ ಎನ್ನುವ ಪರ್ಯಾಯ ನಾಮಗಳಿಂದ ಉಲ್ಲೇಖಗೊಂಡಿದ್ದಾನೆ. ರುದ್ರನ ಸೌಮ್ಯರೂಪವೇ ಶಿವ, ರುದ್ರ-ಶಿವರ ಕಲ್ಪನೆಗಳಿಗೆ ಹೊಸರೂಪವನ್ನು ನೀಡುತ್ತದೆ ಶತರುದ್ರೀಯ. ಋಗ್ವೇದದಲ್ಲಿ ರುದ್ರನು ಯಜುರ್ವೇದ ಕಾಲಕ್ಕೆ ಶಿವನಾಗಿ ಮುಂದೆ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಪರತತ್ವರೂಪ ಹೊಂದಿ, ಮಹಾಭಾರತದಲ್ಲಿ ಪಶುಪತಿ, ಮಹೇಶ್ವರ, ಪರಮೇಶ್ವರ, ಶಿವ-ಶಂಕರನೆಂಬ ಪರ್ಯಾಯ ಪದಗಳಿಂದ ಆರಾಧಿಸಲ್ಪಡುತ್ತಾನೆ.

ಭಾರತೀಯ ಸಾಹಿತ್ಯದಲ್ಲಿ ವೇದಗಳಿಗೆ ಹೊಯ್‌ಕೈಯ್ಯಾಗಿ ನಿಲ್ಲುವ ಆಗಮ ಸಾಹಿತ್ಯದಲ್ಲಿ ಶಿವೋಪಾಸನೆ, ಶಿವತತ್ವ, ಮುಖ್ಯ ವಿಷಯವಾಗಿದೆ. ಬಹುಪಾಲು ಆಗಮಗಳು ಉಮಾ-ಮಹೇಶ್ವರರ ಸಂವಾದರೂಪದಲ್ಲಿ ರಚನೆಯಾಗಿದೆ. ಶೈವಧರ್ಮದ

---

೧. ಕರ್ನಾಟಕ ಶಿವಾಂಕ, ಪು. ೧೬೮.

೨. ಉದ್ಧೃತ: ವೀರಶೈವಾಗಮ ಪ್ರಯೋಗರತ್ನಾಕರ, ಪು, ೧೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಪಾದಕ ಶಿವನೇ ಎಂದು ಆಗಮಗಳು ಘೋಷಿಸುತ್ತವೆ. "ಕೃತಯುಗದಲ್ಲಿ 'ಕೇದಾರ'ವೆಂಬ ಮೂಲಸ್ಥಾನ, ತ್ರೇತಾಯುಗದಲ್ಲಿ 'ವಾರಣಾಸಿ' ಎಂಬ ಮೂಲಸ್ಥಾನ, ದ್ವಾಪರದಲ್ಲಿ 'ವಿರುಪಾಕ್ಷ'ನೆಂಬ ಮೂಲಸ್ಥಾನ, ಕಲಿಯುಗದಲ್ಲಿ 'ಪರ್ವತ'ವೆಂಬ ಮೂಲಸ್ಥಾನ ನಾನಾಸ್ಥಾನಂಗಳ ಮೆಟ್ಟಿದೆ, ಜಂಗಮವೆ ಲಿಂಗವೆಂದು ನಂಬಿದೆ ಕೂಡಲ ಸಂಗಮದೇವಾ" ಎನ್ನುವ ಈ ವಚನ ಯುಗಯುಗಗಳಲ್ಲೂ ಶೈವಧರ್ಮ ಪ್ರಚಲಿತವಿತ್ತೆಂದು ಸೂಚಿಸುತ್ತದೆ.

ಶೈವರಲ್ಲಿ ಉಗ್ರ ಆಚರಣೆಗಳಿದ್ದವೆಂದು ಮೆಗಾಸ್ತನೀಸನು ತಿಳಿಸಿದರೆ, ೫ನೇ ಶತಮಾನದ ಆದಿಭಾಗದಲ್ಲಿ ಜಾವಾದ್ವೀಪದಲ್ಲಿ ಪಾಶುಪತರು ನೆಲಸಿದ್ದನ್ನು ಚೀನಿಯಾತ್ರಿಕ ಫಾಹಿಯಾನ್ ತಿಳಿಸುತ್ತಾನೆ.[೩]

ಭಾರತದಲ್ಲಿ ಪ್ರಾಚೀನತಮವಾದ ಈ ಶೈವಧರ್ಮದ ಉಗಮ-ಬೆಳವಣಿಗೆ ಅವಸಾನವನ್ನು ತಿಳಿಸುವ ಪದ್ಮಪುರಾಣದ ಒಂದು ಶ್ಲೋಕ ಪ್ರಸಿದ್ಧವಾಗಿದೆ-

> ಉತ್ಪನ್ನನ್ನಾ ದ್ರಾವಿಡೇ ಚಾಹಂ ವೃದ್ಧಿಂ ಕರ್ನಾಟಕೇ ಗತಾ।
> ಕ್ವಚಿತ್ ಕ್ವಚಿತ್ ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ॥[೪]

"ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಅಭಿವೃದ್ಧಿಹೊಂದಿ, ಅಲ್ಪ-ಸ್ವಲ್ಪ ಮಹಾರಾಷ್ಟ್ರದಲ್ಲುಳಿದ, ಗುಜರಾತದಲ್ಲಿ ಅವಸಾನ ಹೊಂದಿತು" ಎಂದು ಶೈವಧರ್ಮದ ಇತಿಹಾಸವನ್ನೇ ಸ್ಥೂಲವಾಗಿ ಸೂಚಿಸುತ್ತದೆ.

ಈ ಶೈವಧರ್ಮದಲ್ಲಿ ಅನೇಕ ಪ್ರಭೇದಗಳು ಸಮಾವೇಶಗೊಂಡಿವೆ. ಅವು ಆಚರಣೆ-ಸಂಪ್ರದಾಯಗಳಿಂದ ಬಂದಿವೆ. ಈ ಪ್ರಭೇದಗಳು ಕಾಲಗತಿಯಲ್ಲಿ ಸಾಗಿಬಂದಿವೆ. ಕಾಲಕಾಲಕ್ಕೆ ಶೈವಧರ್ಮಕ್ಕೆ ಬಂದ ಜನಾಂಗಗಳ ಆಚರಣೆಯ ಪದ್ಧತಿಯನ್ನು ತಿಳಿಸುತ್ತದೆ. ಇವುಗಳ ಅಧ್ಯಯನ ಶೈವಧರ್ಮದ ವಿಕಾಸದ ಅಧ್ಯಯನವೂ ಹೌದು. ಈ ಆಚರಣೆಯ ಪದ್ಧತಿಗಳನ್ನು ಗಮನಿಸಿದಾಗ ಇತಿಹಾಸ, ಸಮಾಜಶಾಸ್ತ್ರ, ಮನಶ್ಶಾಸ್ತ್ರ, ಆರಾಧನಾಶಾಸ್ತ್ರ (Rituals) ಸಂಸ್ಕೃತಿಗಳನ್ನು ಗುರುತಿಸಬಹುದಾಗಿದೆ. ಯಾವುದೇ ಒಂದು ಧರ್ಮ ಸಂಕೀರ್ಣವ್ಯವಸ್ಥೆ, ಅದರಲ್ಲಿ ನಂಬಿಕೆ, ನಡವಳಿಕೆ, ಆಚರಣೆಗಳ ಸಂಹಿತೆ ಇರುತ್ತದೆ. ಭಾರತದಲ್ಲಿ ಧರ್ಮಗಳು ಬೆಳೆದುಬಂದ ಮುಖ ಅನಂತ, ತತ್ವಜ್ಞಾನದ ಅನಂತ ಸ್ರೋತಸ್ಸುಗಳು ಹರಿದುಬಂದಿವೆ. ಇವು ಮಾನವ ಬುದ್ಧಿಯ ಪ್ರತಿರೂಪಗಳು.

ಶೈವ ಮಹಾಮತದ ಪ್ರಭೇದಗಳನ್ನು (Cults)=(Systems of Religious Worship) ಶಿವಾಗಮಗಳಲ್ಲಿ, ಪುರಾಣಗಳಲ್ಲಿ, ಶಾಸನಗಳಲ್ಲಿ, ಸಿದ್ಧಾಂತಗ್ರಂಥಗಳಲ್ಲಿ, ಭಾಷ್ಯಗಳಲ್ಲಿ ಹಾಗೂ ಕನ್ನಡದ ವಚನಸಾಹಿತ್ಯದಲ್ಲಿ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

---

೩. ಉದ್ಧೃತ : ಯುಗಯಾತ್ರೀಯ ಭಾರತೀಯ ಸಂಸ್ಕೃತಿ, ಸಂಪುಟ-೪, ಪು. ೫೩-೫೫.

೪. ಪದ್ಮಪುರಾಣ, ೧.೪೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೈವಮತದಲ್ಲಿ ತಾತ್ವಿಕ ದೃಷ್ಟಿಯಿಂದ ಎಂಟು ಪ್ರಭೇದಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.

ಶೈವತತ್ವ ಪ್ರಭೇದಗಳು:

೧. ದ್ವೈತ ಪಾಶುಪತ, ೨. ದ್ವೈತಶೈವ ಸಿದ್ಧಾಂತ, ೩. ದ್ವೈತಾದ್ವೈತ ಲಕುಲೀಶ ಪಾಶುಪತ, ೪. ವಿಶಿಷ್ಟಾದ್ವೈತಶೈವ, ೫. ವಿಶೇಷಾದ್ವೈತ, ೬. ನಂದಿಕೇಶ್ವರ ಶೈವ, ೭. ರಸೇಶ್ವರಶೈವ, ೮. ಕಾಶ್ಮೀರಶೈವ.

ಈ ಎಲ್ಲ ತಾತ್ವಿಕ ಪ್ರಭೇದಗಳಿಗೂ ೨೮ ಶೈವಾಗಮಗಳೇ ಆಧಾರ. ಎಲ್ಲ ಪ್ರಭೇದಗಳು ದ್ವೈತ-ಅದ್ವೈತ ಭಾವನೆ ಉಳ್ಳವುಗಳಾಗಿವೆ. ಶೈವಸಂಪ್ರದಾಯದಲ್ಲಿ ಕಾಶ್ಮೀರದ ಪ್ರತ್ಯಭಿಜ್ಞಾದರ್ಶನ, ವೀರಶೈವರ ವಿಶೇಷಾದ್ವೈತ, ತಮಿಳುನಾಡಿನ ಶೈವಸಿದ್ಧಾಂತ ಇಂದಿಗೂ ಪ್ರಚಾರದಲ್ಲಿವೆ. ಉಳಿದ ಶೈವಪ್ರಭೇದಗಳು ಎಲ್ಲೂ ಕಂಡುಬರುವುದಿಲ್ಲ. ಶಿವಾಗಮದಲ್ಲಿ ಮುಖ್ಯವಾಗಿ ಉಲ್ಲೇಖವಾಗುವ ಪ್ರಭೇದಗಳಲ್ಲಿ (Divisions) ಶೈವ-ಪಾಶುಪತ-ಕಾಪಾಲ-ಕಾಳಾಮುಖ ಸಂಪ್ರದಾಯಗಳು (Traditions) ಕೆಲವು ಕಡೆ ಕಂಡರೆ, ಮತ್ತೆ ಕೆಲವು ಕಡೆ ಶೈವ-ಪಾಶುಪತ ಸೋಮ-ಲಾಕುಳ ಸಂಪ್ರದಾಯಗಳನ್ನು ಕಾಣುತ್ತೇವೆ. ಸುಪ್ರಭೇದಾಗಮ, ಸಿದ್ಧಾಂತಶಿಖಾಮಣಿಗಳಲ್ಲಿ, ವಾಮ-ದಕ್ಷಿಣ-ಮಿಶ್ರ-ಸಿದ್ಧಾಂತವೆಂಬ ನಾಲ್ಕುವಿಧ ಶೈವದ ಶಾಖೆಗಳನ್ನು ಗುರುತಿಸಲಾಗಿದೆ. ವಾಮವು ಶಕ್ತಿಪ್ರಧಾನ, ದಕ್ಷಿಣ ಭೈರವಾತ್ಮಕ, ಮಿಶ್ರಸಪ್ತಮಾತೃಪರ, ಸಿದ್ಧಾಂತ ವೇದಸಮ್ಮತವೆಂದು ಸಿದ್ಧಾಂತಶಿಖಾಮಣಿ ಈ ಶಾಖೆಗಳ ಲಕ್ಷಣಗಳನ್ನು ಸೂಚಿಸುತ್ತದೆ. ಮಾಧವಾಚಾರ್ಯನ ಸರ್ವದರ್ಶನ ಸಂಗ್ರಹದಲ್ಲಿ ಲಕುಲೀಶ ಪಾಶುಪತ, ಶೈವ-ಪ್ರತ್ಯಭಿಜ್ಞಾನ, ರಸೇಶ್ವರ ಎಂದು ಶೈವಪ್ರಭೇದಗಳನ್ನು ತಿಳಿಸುತ್ತಾನೆ. ಸಿದ್ಧಾಂತ ಶಿಖಾಮಣಿಯಲ್ಲೂ-

ಆಗಮಾ ಬಹುಧಾ ಪ್ರೋಕ್ತಾಃ ಶಿವೇನ ಪರಮಾತ್ಮನಾ।
ಶೈವಂ ಪಾಶುಪತಂ ಸೋಮಂ ವಾಕುಲಂ ಚೇತಿ ಭೇದತಃ॥[೫]

ಎಂದು ನಾಲ್ಕು ಪ್ರಭೇದಗಳನ್ನು ತಿಳಿಸುತ್ತದೆ. ಬ್ರಹ್ಮಸೂತ್ರಗಳಿಗೆ ಶಾಂಕರ ಭಾಷ್ಯದ ಮೇಲೆ 'ಭಾಮತಿ'ನಾಮಕ ಟೀಕೆಯನ್ನು ಬರೆದ ವಾಚಸ್ಪತಿಮಿಶ್ರರು ಭಾಮತೀ ಗ್ರಂಥದ ೨ನೇ ಅಧ್ಯಾಯ, ೨ನೇ ಪಾದದ ೩೭ನೇ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ ಶೈವ-ಪಾಶುಪತ-ಕಾರುಣಿಕ-ಸಿದ್ಧಾಂತಿ-ಕಾಪಾಲಿಕ ಮತಗಳೆಂದು ಶೈವಪ್ರಭೇದಗಳನ್ನು ತಿಳಿಸುತ್ತಾರೆ. "ಶೈವಂ ಸಪ್ತವಿಧಂ ಜ್ಞೇಯಂ" ಎಂದು ತಿಳಿಸಿ, ಮುಖ್ಯವಾಗಿ ಶೈವದಲ್ಲಿ ಶೈವಂ ಚ ವೀರಶೈವಂ ಚ ದ್ವಿವಿಧಂ ಶೈವಮೀರಿತಂ" ಎಂದು ವೀರಶೈವಪ್ರಕಾಶಿಕೆ[೬] ತಿಳಿಸುತ್ತದೆ.

ಈ ಎಲ್ಲ ವಿವರಣೆಗಳಿಂದ ಈ ಶೈವಸಂಪ್ರದಾಯಗಳು ನಾಲ್ಕರಿಂದ ಏಳರವರೆಗೆ ಅವುಗಳ ವ್ಯಾಪ್ತಿ ಹೆಚ್ಚಾಗಿ ಕಂಡುಬರುತ್ತದೆ. ಕೆಲವು ಕಡೆ ನಾಮಾಂತರಗಳಿಂದ ಬೇರೆ ಬೇರೆ ಹೆಸರುಗಳ ಉಲ್ಲೇಖ ಕಂಡುಬರುತ್ತದೆ. ಶೈವಶಾಖೆಗಳಲ್ಲಿ ಹೆಚ್ಚಾಗಿ

---

೫. ಶ್ರೀ ಸಿದ್ಧಾಂತಶಿಖಾಮಣಿ, ೫.೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತಿಪಾದಿತವಾಗಿರುವ ಪಾಶುಪತ-ಕಾಪಾಲಿಕ-ಕಾಳಾಮುಖ-ಮತ್ತು ಶೈವ ಈ ನಾಲ್ಕು ಮುಖ್ಯವೆಂದು ತೋರುತ್ತದೆ; ಇವುಗಳ ಕಾಲ ಕ್ರಿ.ಪೂ. ೨ನೇ ಶತಮಾನ. ಪಾಶುಪತ ಅಥವಾ ಮಾಹೇಶ್ವರ ಎಂಬ ವಿಭಾಗವು ಕಾಪಾಲಿಕ-ಕಾಳಾಮುಖ ಶೈವಶಾಖೆಗಳ-ನ್ನೊಳಗೊಂಡ ವ್ಯಾಪಕವಾದ ಅರ್ಥದಲ್ಲಿ ಬಳಕೆಯಾದಂತೆ ಕಂಡುಬರುತ್ತದೆ. ಶಂಕರಾಚಾರ್ಯರು ಪಶುಪತಿ ಮತದವರನ್ನು ಮಾಹೇಶ್ವರರೆಂದು ಕರೆದಿದ್ದಾರೆ.

ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಶೈವಧರ್ಮದ ಸಂಪ್ರದಾಯಗಳನ್ನು ಹೆಸರಿಸಿದ್ದಾರೆ. ಕಾಪಾಲಿಕ-ಕಾಳಾಮುಖ-ಪಾಶುಪತ-ಶೈವ ಎಂದು ರಾಮಾನುಜಾ-ಚಾರ್ಯರು ಗುರುತಿಸುತ್ತಾರೆ. ಮಧ್ವಾಚಾರ್ಯರು ಪಾಶುಪತ ಎಂಬ ಶೈವಭಾಗವನ್ನು ಎಲ್ಲಾ ಶೈವಶಾಖೆಗಳಿಗೂ ಅನ್ವಯವಾಗುವಂತೆ ತಿಳಿಸಿದ್ದಾರೆ. ಸುಪ್ರಭೇದಾಗಮದಲ್ಲಿ ಶೈವ-ಪಾಶುಪತ-ಸೋಮ-ಲಾಕುಳ ಎಂಬ ವಿಭಾಗಗಳ ಹೆಸರು ಬರುತ್ತವೆ. ಕಾಪಾಲಿಕ ಎನ್ನುವ ಹೆಸರಿಗೆ ಬದಲಾಗಿ 'ಸೋಮ' ಎಂದು ಈ ಆಗಮವು ಕರೆದಿದೆ. ಇವರಿಗೆ ಮಹಾವ್ರತಧಾರಿಗಳೆನ್ನುವ ಹೆಸರೂ ಉಂಟು. ಹಾಗೆಯೇ ಕಾಳಾಮುಖ ಎಂಬ ಹೆಸರು ಕಾಲದಮನ, ಕಾರುಣಿಕ, ಲಾಕುಳ ಎಂದು ಬೇರೆ ಬೇರೆ ಹೆಸರು ಪಡೆದಿರುವುದನ್ನು ಕಾಣುತ್ತೇವೆ.[೭] ಆದರೆ ಪಾಶುಪತ ಎಂಬ ಹೆಸರು ಎಲ್ಲ ಆಗಮಗಳಲ್ಲಿ ಹಾಗೆಯೇ ಉಳಿದುಕೊಂಡು ಬಂದಿದೆ. ಮಹಾಭಾರತದ ಶಾಂತಿಪರ್ವದಲ್ಲಿ "ಸಾಂಖ್ಯಂ ಯೋಗಂ ಪಾಂಚರಾತ್ರಂ ವೇದಾಃ ಪಾಶುಪತಸ್ತಥಾ" ಎನ್ನುವ ಮಾತನ್ನು ನೆನೆದರೆ, ಪಾಶುಪತ ಶೈವಶಾಖೆಗಳಲ್ಲಿ ಪ್ರಾಚೀನವೆಂದು ತಿಳಿದುಬರುತ್ತದೆ.

ಶೈವಧರ್ಮದ ಇತಿಹಾಸದಲ್ಲಿ ಶಿವಾಗಮಗಳು ಆಧಾರ ಗ್ರಂಥಗಳಾಗಿ ನಿಲ್ಲುತ್ತವೆ. ಆಗಮಗಳ ಮೂಲತತ್ತ್ವಗಳನ್ನು ಆಧರಿಸಿ ಅನೇಕ ಶೈವಶಾಖೆಗಳು ರೂಪುಗೊಂಡಿವೆ. ದೇಶ-ಕಾಲ-ನಂಬಿಕೆ, ವಿಚಾರ-ಆಚಾರ ಸಂಪ್ರದಾಯ ಆಚರಣೆಗಳಿಗೆ ಅನುಗುಣವಾಗಿ ಭಿನ್ನವೆಂದು ತೋರಿದರೂ ಇವೆಲ್ಲ ಶೈವಮಹಾವೃಕ್ಷದ ರೆಂಬೆಕೊಂಬೆಗಳೆಂಬುದು ಗಮನಿಸಬೇಕಾದ ಅಂಶ. ಈ ಎಲ್ಲ ಶಾಖೆಗಳ ಸಂಕೀರ್ಣ ಮಹಾಸೌಧವೇ ಶೈವಧರ್ಮ. ಇಲ್ಲಿ ಕೆಲವು ಪ್ರಮುಖ ಶೈವಶಾಖೆಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವುದು ಸೂಕ್ತವೆನಿಸುತ್ತದೆ.

ಪಾಶುಪತ:

ಇದು ಶೈವಧರ್ಮದ ಪ್ರಾಚೀನ ಶಾಖೆ. ಪಶುಪತಿ ಈ ತತ್ತ್ವವನ್ನು ಹೇಳಿದನೆಂದು ಹೇಳುತ್ತಾರೆ. ಇದಕ್ಕೆ ನಕುಲೀಶ ಅಥವಾ ಲಕುಲೀಶ ಮತವೆಂದೂ ಕರೆಯುವ ವಾಡಿಕೆ ಇದೆ. ಪಶು-ಪತಿ-ಪಾಶದ ವಿಚಾರ ಇಲ್ಲಿ ಆರಂಭವಾಗಿ ಮುಂದೆ ಬೇರೆಬೇರೆ ಶಾಖೆಗಳಿಗೆ ಹಬ್ಬಿತು ಎಂದು ಹೇಳುತ್ತಾರೆ. ಸರ್ವದರ್ಶನ ಸಂಗ್ರಹದಲ್ಲಿ ಈ ಮತದ ಆಚರಣೆಯ ವಿಧಾನ ಹೀಗಿದೆ: ಈ ಮಾರ್ಗವನ್ನು ಅನುಸರಿಸುವವರು ಸನ್ಯಾಸಿಗಳು,

---

೬. ವೀರಶೈವ ಪ್ರಕಾಶಿಕೆ, ಲ.೨.

೭. ವಿವರಗಳಿಗೆ ನೋಡಿ: ಕರ್ನಾಟಕ ಲಾಕುಳ ಶೈವರ ಇತಿಹಾಸ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯೋಗಮಾರ್ಗಾವಲಂಬಿಗಳು, ತ್ರಿಕಾಲಸ್ನಾನ, ಬೂದಿಯಲ್ಲಿ ಶಯನ, ಉಚ್ಚಸ್ವರದಲ್ಲಿ ದೇವರ ಸ್ತುತಿಮಾಡುವುದು, ಹುಚ್ಚರಂತೆ ನಟಿಸುವುದು ಇತ್ಯಾದಿ. ಆದರೆ ಶ್ರೀಪತಿ ಪಂಡಿತರ ಅಭಿಪ್ರಾಯ ಬೇರೆ ಇದೆ. ಅವರ ಪ್ರಕಾರ ಹಣೆಯ ಮೇಲೆ, ಭುಜದಲ್ಲಿ ಅಥವಾ ಎದೆಯಮೇಲೆ ಲಿಂಗಧರಿಸಿ ತ್ರಿಕಾಲದಲ್ಲಿ ಭಕ್ತಿಯಿಂದ ಪೂಜಿಸುವವರು ಪಾಶುಪತರು ಅಥವಾ ವೀರಶೈವರು ಎಂದು ತಿಳಿಸುತ್ತಾರೆ. ಆನಂದಗಿರಿಯ ಶಂಕರದಿಗ್ವಿಜಯದಲ್ಲಿ- "ಲಲಾಟೇ ಭುಜದ್ವಯೇ ಹೃನ್ನಾಭಿಷು ಲಿಂಗಧಾರಿಣಾಃ ಪಾಶುಪತಾಃ" ಎನ್ನುವ ವಿಚಾರವಿದೆ.

"ಶಿವಲಿಂಗಂ ಕರೇ, ಕಂಠೇಧೃತ್ವಾ ವಕ್ಷಸ್ಥಲೇಪಿ ವಾ।
ತ್ರಿಕಾಲಂ ಅರ್ಚಯೇತ್ ಭಕ್ತ್ಯಾ ಮಹಾಪಾಶುಪತೋ ಹಿ॥

ಇದು ಶ್ರೀಕರಭಾಷ್ಯದಲ್ಲಿ ಶ್ರೀಪತಿ ಪಂಡಿತರ ಅಭಿಪ್ರಾಯ. ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿದಾಗ "ಪಶುಪತಿ ಮತಸಾರೇ ಪಂಡಿತಶ್ಲಾಘನೀಯಾ" ಎನ್ನುವ ಸಿದ್ಧಾಂತಶಿಖಾಮಣಿಯ ವಾಕ್ಯವನ್ನು ಅವಲೋಕಿಸಿದಾಗ ಹಿಂದಿನ ಪಾಶುಪತ ಮತವೇ ವೀರಶೈವವೆಂದೂ, ವೀರಶೈವಧರ್ಮದ ಪರ್ಯಾಯ ನಾಮವೆಂಬುದು ವ್ಯಕ್ತವಾಗುತ್ತದೆ.

ಕಾಳಾಮುಖ:

ಈ ಶೈವ ಶಾಖೆ ಪಾಶುಪತಮತದ ಒಂದು ಭಾಗವೆಂದು ಹೇಳುತ್ತಾರೆ. ಕಾಳಾಮುಖರು ಹಣೆಯಮೇಲೆ ಕಪ್ಪು ಗೆರೆಗಳನ್ನು ಧರಿಸುತ್ತಿದ್ದುದರಿಂದ ಇವರನ್ನು ಕಾಳಾಮುಖರೆಂದು ಕರೆಯುತ್ತಾರೆ. ಕರ್ನಾಟಕದಲ್ಲಿ ೧೦ ರಿಂದ ೧೩ನೇ ಶತಮಾನದವರೆಗೆ, ಇದು ಪ್ರಮುಖ ಧರ್ಮವಾಗಿತ್ತೆಂದು ಹೇಳುತ್ತಾರೆ. ಈ ಸಂಪ್ರದಾಯದ ಮಠಗಳು, ಶಿವದೇವಾಲಯಗಳು ಕರ್ನಾಟಕದ ನಗರ ಹಾಗೂ ಗ್ರಾಮಗಳಲ್ಲಿದ್ದವು ಎನ್ನುವ ವಿಚಾರ ಶಾಸನಗಳಿಂದ ತಿಳಿದುಬರುತ್ತದೆ. ೧೩-೧೪ನೇ ಶತಮಾನದಲ್ಲಿ ಈ ಸಂಪ್ರದಾಯದ ಮಠಗಳು ವೀರಶೈವ ಮಠಗಳಾದವು, ಈ ಸಂಪ್ರದಾಯದ ಗುರುಗಳು ವೀರಶೈವರಾದರು. ಶೈವಶಾಖೆಗಳನ್ನು ಬಹುಪಾಲು ಆಗಮಗಳು ೪ ರಿಂದ ೭ ರವರೆಗೆ ಹೇಳುತ್ತವೆ. ಶೈವಮತದ ಹಲವಾರು ಶಾಖೆಗಳು ವೀರಶೈವದಲ್ಲಿ ವಿಲೀನಗೊಂಡು ವಿಕಾಸಸ್ವರೂಪವನ್ನು ಪಡೆದವು. ಶೈವ-ತೈವೆರಗಾದ, ಪಾಶುಪತ ಪಥವ ನರಿಯ ಕಾಳಾಮುಖ ಕಂಗೆಟ್ಟ, ಮಹಾವ್ರತಿ ಮದವೇರಿದ ಸನ್ಯಾಸಿ ಪಾಷಂಡಿಯಾದ ಕಾಪಾಲಿ ಮರುಳಾಗಿ ತಿರುಗಿದ ಈ ಆರು ಭಕ್ತಿಪಂಥಕ್ಕೆ ಸಲ್ಲವು" ಎಂದು ಹೇಳುತ್ತಾನೆ ಚನ್ನಬಸವಣ್ಣ. ಅಂದರೆ ಈ ಸಂಪ್ರದಾಯಗಳೆಲ್ಲ ಕ್ರಮೇಣ ವೀರಶೈವದಲ್ಲಿ ವಿಲೀನಗೊಂಡವು ಎನ್ನುವ ವಿಚಾರ ತಿಳಿಸುತ್ತಾನೆ.[೮]

ಕಾಪಾಲಿಕ:

ಇದು ಪ್ರಾಚೀನ ಶೈವಶಾಖೆ. ಇದನ್ನು 'ಸೋಮ' ಎಂದೂ ಕರೆಯುತ್ತಾರೆ. ಈ ಸಂಪ್ರದಾಯದವರು ಕೊರಳಲ್ಲಿ ಎಲುಬಿನ ಮಾಲೆ ಧರಿಸುತ್ತಿದ್ದರು. ನರಕಪಾಲದಲ್ಲಿ

---

೮. ಚನ್ನಬಸವಣ್ಣನವರ ವಚನಗಳು, ಸಂ. ಆರ್.ಸಿ. ಹಿರೇಮಠ, ೫೪೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಊಟ ಮಾಡುತ್ತಿದ್ದರು. ಸ್ಮಶಾನವಾಸಿಗಳಾಗಿದ್ದರು. ಸುರಾಪಾನ, ಮಾಂಸಭಕ್ಷಣೆ ಮಾಡುತ್ತಿದ್ದರು. ಕರ್ನಾಟಕದಲ್ಲಿ ಐಹೊಳೆ-ಪಟ್ಟದಕಲ್ಲು-ಬಳ್ಳಿಗಾವಿ ಇವು ಕಾಪಾಲಿಕ ಶೈವರ ಕೇಂದ್ರಗಳಾಗಿದ್ದವು.

ಕಾಶ್ಮೀರಶೈವ:

ಇದು ಪ್ರಾಚೀನ ಶೈವಸಂಪ್ರದಾಯ ತತ್ವಪ್ರಧಾನವಾದುದು. ಇದಕ್ಕೆ ಆಗಮಗಳೇ ಪ್ರಮಾಣ. ಈ ಶೈವಶಾಖೆಯಲ್ಲಿ ಎರಡು ಸಂಪ್ರದಾಯಗಳಿವೆ. ೧. ವಸುಗುಪ್ತನ ಶಿವಸೂತ್ರಸಂಪ್ರದಾಯ ೨. ಸೋಮಾನಂದನ ಪ್ರತ್ಯಭಿಜ್ಞಾ. ಒಂದು ದ್ವೈತಪರ -ಇನ್ನೊಂದು ಶಿವಾದ್ವೈತ ಪರ. ಪ್ರತ್ಯಭಿಜ್ಞಾನ ಎಂದರೆ ಮರೆತು ಹೋದ ಸ್ವಸ್ವರೂಪ ಜ್ಞಾನವನ್ನು ಪಡೆಯುವುದು (ಗ್ರಹಣಸ್ಮರಣಯೋಃ ಐಕ್ಯಂ ಪ್ರತ್ಯಭಿಜ್ಞಾ). ಇಲ್ಲಿ ಪಶು-ಪತಿ- ಪಾಶಗಳ ವಿಚಾರವಿದೆ. ಅಂದರೆ ಪರಮಾತ್ಮ ಜೀವಾತ್ಮನಿಂದ ಬೇರೆಯಾಗಿ, ಜೀವನು ಪಶುವಾಗಿ, ಅಜ್ಞಾನಜಡನಾಗಿ 'ಪಾಶ' ಎಂದರೆ ಸಂಸಾರ ಬಂಧನದಲ್ಲಿ ಸಿಲುಕಿ, ಸ್ವಸ್ವರೂಪವನ್ನು ಅರಿಯಲು ಅಶಕ್ಯನಾಗಿದ್ದಾನೆ. ಈ ಜ್ಞಾನವನ್ನು ಪುನರ್‌ಗ್ರಹಿಸುವುದೇ ಪ್ರತ್ಯಭಿಜ್ಞಾನ. ಪಶು-ಪಾಶ-ಪತಿಗಳ ವಿಚಾರ ಭೇದಕ್ಕೆ 'ತ್ರಿಕ' ಎನ್ನುವ ಹೆಸರೂ ಇದೆ.

ಇಲ್ಲಿಯವರೆಗೆ ಶೈವಧರ್ಮದ ಪ್ರಮುಖ ಶಾಖೆಗಳ ಸ್ಥೂಲಪರಿಚಯವನ್ನು ಅರಿತಂತಾಗಿದೆ. ಈ ಶಾಖೆಗಳಲ್ಲದೆ ಪ್ರತಿಯೊಂದು ಆಗಮದಲ್ಲೂ ವಿಭಿನ್ನಶೈವ-ವೀರಶೈವ ಪ್ರಭೇದಗಳೂ ಇವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಚಂದ್ರಜ್ಞಾನಾಗಮದಲ್ಲಿ ಶೈವ-ವೀರಶೈವ ಪ್ರಭೇದಗಳನ್ನು ವಿವರಿಸುವುದು ಈ ಲೇಖನದ ಆಶಯವಾಗಿದೆ.

ಚಂದ್ರಜ್ಞಾನಾಗಮದಲ್ಲಿ ಶೈವ-ವೀರಶೈವ ಪ್ರಭೇದಗಳು

ಶೈವಾಗಮಗಳಲ್ಲಿ ಚಂದ್ರಜ್ಞಾನಾಗಮವು ವೈಶಿಷ್ಟ್ಯಪೂರ್ಣವಾದುದು. ವೀರಶೈವರ 'ಅಷ್ಟಾವರಣ'ವೇ ಅಂಗ, 'ಪಂಚಾಚಾರ'ವೇ ಪ್ರಾಣ, ಷಟ್‌ಸ್ಥಲವೇ ಆತ್ಮವಾಗಿರುವ ಈ ತತ್ವಗಳ ಸಮ್ಯಕ್ ಸ್ವರೂಪವನ್ನು ಈ ಚಂದ್ರಜ್ಞಾನಾಗಮ ಚಿತ್ರಿಸುತ್ತದೆ. ವೀರಶೈವರ ಆಚಾರ-ವಿಚಾರ-ಸಂಸ್ಕೃತಿಯ ಬಗೆಗೆ ಹೊಸಬೆಳಕನ್ನು ಚೆಲ್ಲುತ್ತದೆ, ಅಲ್ಲದೆ ವೀರಶೈವರ ಧರ್ಮಶಾಸ್ತ್ರ ಎನ್ನುವ ಅಗ್ಗಳಿಕೆಗೆ ಪಾತ್ರವಾಗಿದೆ. ಈ ಆಗಮವು ಬೃಹಸ್ಪತಿ ಹಾಗೂ ಅನಂತ ರುದ್ರರ ಸಂವಾದ ರೂಪದಲ್ಲಿದೆ. ಕ್ರಿಯಾಪಾದ ೧೦ನೇ ಪಟಲದ ೪ನೇ ಶ್ಲೋಕದಿಂದ -೪೮ ಶ್ಲೋಕಗಳವರೆಗೆ ಶೈವ-ವೀರಶೈವಪ್ರಭೇದಗಳನ್ನು ತಿಳಿಸಲಾಗಿದೆ. ಆಗಮಗಳಲ್ಲಿ ಹಿಂದೆಯೇ ತಿಳಿಸಿದಂತೆ ಅನೇಕ ಪ್ರಭೇದಗಳಿವೆ. ಕೆಲವು ಆಗಮಗಳಲ್ಲಿ ನಾಲ್ಕು, ಕೆಲವು ಆಗಮಗಳಲ್ಲಿ ಏಳು ಮತ್ತೆ ಕೆಲವು ಆಗಮಗಳಲ್ಲಿ ಹತ್ತು ಉಳಿದ ಆಗಮಗಳಲ್ಲಿ ಇನ್ನು ಹೆಚ್ಚು ಪ್ರಭೇದಗಳಿವೆ. ಇವುಗಳನ್ನೆಲ್ಲ ಸಂಗ್ರಹಿಸಿ, ಸಂಶಯ ಬಾರದಂತೆ ಎಂಟು ಶಾಖೆಗಳಲ್ಲಿ ಅಳವಡಿಸಿ ವಿವರಿಸಲಾಗಿದೆ ಎನ್ನುವ ವಿಚಾರ ಈ ಆಗಮದಲ್ಲಿದೆ. ಅಂದರೆ ಈ ಆಗಮ ಶೈವಧರ್ಮದ ಎಂಟು ಪ್ರಭೇದಗಳನ್ನು ವಿವರಿಸುತ್ತದೆ:

ಅನಾದಿಶೈವಂ ಪ್ರಥಮಮಾದಿಶೈವಂ ದ್ವಿತೀಯಕಮ್।
ಪೂರ್ವಶೈವಂ ತೃತೀಯಂಸ್ಯಾನ್ಮಿಶ್ರಶೈವಂ ಚತುರ್ಥಕಮ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶುದ್ಧಶೈವಂ ಪಂಚಮಂ ಸ್ಯಾತ್, ಷಷ್ಠ ಂವ್ಯೆ ಮಾರ್ಗಶೈವಕಮ್।
ಸಾಮಾನ್ಯಂ ಸಪ್ತಮಂ ಜ್ಞೇಯಂ ವೀರಶೈವಮಥಾಷ್ಟಮಮ್॥[೯]

ಅನಾದಿ, ಆದಿ, ಪೂರ್ವ, ಮಿಶ್ರ, ಶುದ್ಧ, ಮಾರ್ಗ, ಸಾಮಾನ್ಯ, ವೀರಶೈವ ಎಂದು ಎಂಟು ಪ್ರಭೇದಗಳನ್ನು ಚಂದ್ರಜ್ಞಾನಾಗಮ ತಿಳಿಸುತ್ತದೆ.

೧. ಅನಾದಿಶೈವ:

ಶಿವನೇ ಅನಾದಿಶೈವ, ಅವನು ಕಾಲಾತೀತ, ಆದಿರಹಿತ ಮತ್ತು ಅವನ ಗಣ (ಪರಿವಾರ)[೧೦]

೨. ಆದಿಶೈವ:

ಕೌಶಿಕ, ಕಶ್ಯಪ, ಭರದ್ವಾಜ, ಅತ್ರಿ ಹಾಗೂ ಗೌತಮ- ಈ ಐವರು ಮಹರ್ಷಿಗಳು ಶಿವನ ಸದ್ಯೋಜಾತಾದಿ ಪಂಚಮುಖಗಳಿಂದುದಯಿಸಿದ ಪಂಚಬ್ರಹ್ಮರಿಂದ ದೀಕ್ಷೆ ಪಡೆದುಕೊಂಡರು. ವೇಧಾ-ಮನು-ಕ್ರಿಯಾದೀಕ್ಷೆಗಳಿಂದ ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಲ್ಲಿ, ಇಷ್ಟ-ಪ್ರಾಣ-ಭಾವಲಿಂಗಗಳ ಸಂಯೋಗದ ಶಿವಜ್ಞಾನ ಪಡೆದು, ಇಷ್ಟಲಿಂಗವನ್ನು ಪೂಜಿಸಿ ಜೀವನ್ಮುಕ್ತರಾದರು. ಈ ಆಚಾರ್ಯರು ಲೋಕವಂದ್ಯರು.[೧೧]

೩. ಪೂರ್ವಶೈವ:

"ಕಾನೀನಾಸ್ತು ಶಿವದ್ವಿಜಾಃ ಅನೂಢಾಸುಹಿಕನ್ಯಾಸು ಪ್ರಭೂತಾಃ" ಅಂದರೆ ಪೂರ್ವಶೈವರು ಕಾನೀನ ಶಿವದ್ವಿಜರು. ಮದುವೆಯಾಗದ (Out of wedlock) ಕನ್ಯೆಯರಿಂದ ಹುಟ್ಟಿದವರು. ಶಿವಸಂಸ್ಕಾರವಿಲ್ಲದವರು. ಪೂರ್ವಶೈವದ ದೀಕ್ಷೆ ಪಡೆದು ಶಿವದೇವಾಲಯದ ಪೂಜಾದಿ ಸೇವಾಕಾರ್ಯಗಳಲ್ಲಿ ನಿಯುಕ್ತರು. ಇವರಲ್ಲಿ ದೀಕ್ಷೆ ಪಡೆದವರು ಸ್ಥಾವರಲಿಂಗದ ಅಭಿಷೇಕ, ಪುಣ್ಯಾರ್ಚನೆಯನ್ನು ತಮ್ಮ ಕಲ್ಯಾಣಕ್ಕಾಗಿ ಮಾಡುವರು. ಇವರಿಗೆ ಸ್ಥಾವರ ದೇವತಾಪ್ರತಿಷ್ಠೆ ಮೊದಲಾದ ವಿಧಿಗಳ ಹಕ್ಕೂ ಇಲ್ಲ. ದೀಕ್ಷೆ ಪಡೆಯದವರು ದೇವರ ಪೂಜೆಗೆ ಬಿಲ್ವಪತ್ರೆ, ಹೂವತ್ತಿ ತರುವುದು, ಪ್ರತಿನಿತ್ಯ ದೇವಾಲಯದ ಕಸ ಗುಡಿಸಿ, ಪರಿಸರವನ್ನು ನಿರ್ಮಲವಾಗಿಡುವುದು, ದೇವಾಲಯದ ರಕ್ಷಣೆ ಮಾಡುವುದು, ದೇವಾಲಯಕ್ಕೆ ಬಂದ ಭಕ್ತರ ಕಲ್ಯಾಣಕ್ಕಾಗಿ ಹಣ್ಣು-ಕಾಯಿ ಮಂಗಳಾರತಿ ಪೂಜೆ ಮಾಡುವ ಇವರು 'ತಮ್ಮಡಿ'ಗಳು. 'ದೇವಲಕ'ರೆನಿಸಿದ ಇವರಿಗೆ ಹೆಚ್ಚಿನ ಅಧಿಕಾರವಿಲ್ಲ. ದೇವಾಲಯ ಸೇವೆಯಲ್ಲಿದ್ದಾಗ ಮಾತ್ರ ಇವರು ಸ್ಪರ್ಶರು. ಉಳಿದ ಕಾಲದಲ್ಲಿ ಹೊರಗೆ ಇವರನ್ನು ಮುಟ್ಟುವುದೇ ಪಾಪಕರ. ಉತ್ತಮರು ಶಿವದೀಕ್ಷೆ ಇಲ್ಲದ ದೇವರ ಎಡೆಯನ್ನು ಸೇವಿಸುವ ಇವರನ್ನು 'ಮಲಿನ'ರೆಂದು ಭಾವಿಸುತ್ತಿದ್ದರು. ಆದರೂ ಹೊರಗಿನ ಶಿವಾಲಯ ಸೇವೆಯಲ್ಲಿರುವ ಕಾರಣ ಇವರೂ ಶೈವರೇ.[೧೨]

---

೯. ಚಂದ್ರಜ್ಞಾನಾಗಮ, ಕ್ರಿ.ಪಾ. ೧೦.೪-೫.
೧೦. ಅದೇ, ಪು. ೧೦೦.
೧೧. ಅದೇ,ಕ್ರಿಯಾಪಾದ-೧೦. ೬-೧೦.
೧೨. ಅದೇ, ೧೦.೧೧-೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಮಿಶ್ರಶೈವ:

ಇವರು ಶಿವಲಿಂಗದ ಜೊತೆಗೆ ಸಮಾನ ಭಾವನೆಯಿಂದ ಸೂರ್ಯ, ಅಂಬಿಕೆ, ವಿಷ್ಣು, ಗಣಪತಿ ಮೂರ್ತಿಗಳನ್ನು ಒಂದೇ ಪೀಠದ ಮೇಲೆ ಇಟ್ಟು ಪೂಜಿಸುವರು. ಇವರ ಭಕ್ತಿ ಏಕನಿಷ್ಠವಾಗಿರುವುದಿಲ್ಲ, ಮಿಶ್ರವಾಗಿರುತ್ತದೆ. ಇವರಿಗೆ ಶಿವದೀಕ್ಷೆ ಇಲ್ಲ. ಇವರು ಭಸ್ಮ-ರುದ್ರಾಕ್ಷಗಳನ್ನು ಧರಿಸುವುದರಿಂದ ಇವರು ಶೈವರು. ಇವರು 'ಅಂತಃಶಾಕ್ತಂ ಬಹಿಃ ಶೈವಂ ಸಭಾಮಧ್ಯೇತು ವೈಷ್ಣವಮ್' ಎನ್ನುವಂತೆ ಹಲವು ದೈವಭಕ್ತರು.[೧೩]

೫. ಶುದ್ಧಶೈವ:

ಶುದ್ಧಶೈವರು ಭಸ್ಮ-ರುದ್ರಾಕ್ಷ ಧಾರಣೆ ಮಾಡುತ್ತಾರೆ. ಶೈವಪುರಾಣ ಪದ್ಧತಿಯಲ್ಲಿ ದೀಕ್ಷಿತರು. ಶಿವಲಿಂಗಪೂಜೆಯಲ್ಲಿ ಆಸಕ್ತರು, ಸದಾಶಿವ ಚಿಂತಕರು, ಶಿವನಲ್ಲಿ ಹೆಚ್ಚು ನಿಷ್ಠೆಯುಳ್ಳವರು, ಶಿವಾನುಭವಿಗಳು.[೧೪]

೬. ಮಾರ್ಗಶೈವ:

ಮಾರ್ಗವೆಂದರೆ ಮೋಕ್ಷಕ್ಕೆ ಕೊಂಡೊಯ್ಯುವ ದಾರಿ. ಇವರು ವೈದಿಕ, ಆಗಮಿಕ ಮತ್ತು ಆಗಮೋತ್ತರವೆಂದು ಮೂರು ದೀಕ್ಷೆಗಳನ್ನು ಪಡೆದ ಷಟ್‌ಸ್ಥಲಜ್ಞಾನ ಸಂಪನ್ನರು. ಆರು ಹೊತ್ತು 'ಶಿವಲಿಂಗ' ಪೂಜೆ ಮಾಡುವ ವ್ರತಶೀಲರು. (ಅರುಣೋದಯ-ಸೂರ್ಯೋದಯ, ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ, ರಾತ್ರಿ) ಪ್ರತಿದಿನ ೨೧೬೦೦ ಷಡಕ್ಷರ ಮಂತ್ರ ಜಪಿಸಿ, ಲಿಂಗಾಂಗಸಾಮರಸ್ಯದ ಅನುಭವ ಪಡೆಯುವವರು. ಮಾರ್ಗಶೈವರ ಆಚರಣೆ ವಿಶಿಷ್ಟವಾದುದು. ಮಾರ್ಗಶೈವ ಆದಿಶೈವಾಚರಣೆಯಂತೆ ಕಂಡರೂ, ಇಲ್ಲಿ ಮೂರು ವಿಧ ದೀಕ್ಷೆಗಳ ವಿಧಾನವೇ ಹಿರಿದು. ಶೀಘ್ರಮುಕ್ತಿ ಕೊಡುವ ಕರ್ಮ-ಜ್ಞಾನಗಳ ಸಮುಸಮುಚ್ಚಯದ ಷಟ್‌ಸ್ಥಲಾಚರಣೆ, ಆರು ಕಾಲ ಶಿವಲಿಂಗ ಪೂಜೆ ಮತ್ತು ಷಡಕ್ಷರಿ ಮಂತ್ರ ಜಪದ ನಿರಂತರ ಅನುಷ್ಠಾನ ಮಾರ್ಗಶೈವರ ಹಿರಿಮೆಯಾಗಿದೆ.[೧೫]

೭. ಸಾಮಾನ್ಯಶೈವ:

ಇವರು ಶಾಕ್ತ, ಸೌರ, ಗಾಣಪತ್ಯ ಮತ್ತು ಕೌಮಾರ ಮತಗಳ ಆಚರಣೆ ಉಳ್ಳವರು. ವರ್ಣ ಮೊದಲಾದ ಆರು ಅಧ್ವಗಳ ಶೋಧನೆಯಿಂದ ಶರೀರವನ್ನು ಸಂಸ್ಕರಿಸಿ ಶಿವಮಂತ್ರವಲ್ಲದೆ, ಗಾಯತ್ರಿ ಮಂತ್ರದ ಜಪದ ಸಾಧನೆ ಉಳ್ಳವರು.[೧೬] (ವಿ.ಸೂ: ಆರು ಅಧ್ವಗಳ ಸಂಸ್ಕಾರ ದೀಕ್ಷಾ ವಿವರ ಅಭಿನವ ಗುಪ್ತನ ತಂತ್ರಾಲೋಕದಲ್ಲಿದೆ).

೮. ವೀರಶೈವ:

ಶೈವಧರ್ಮದ ಕೊನೆಯ ಶಾಖೆಯೇ ವೀರಶೈವವೆಂದು ಚಂದ್ರಜ್ಞಾನಾಗಮ ಸ್ಪಷ್ಟಪಡಿಸುತ್ತದೆ. ವೀರಶೈವರಲ್ಲಿ ಎರಡು ವಿಧ, ಶ್ರೌತ-ತಾಂತ್ರಿಕವೆಂದು. ವರ್ಣಾಶ್ರಮ

---

೧೩. ಅದೇ, ೧೦.೧೯-೨೨.
೧೪. ಅದೇ, ೧೦.೨೩-೨೪.
೧೫. ಅದೇ, ೧೦.೨೫-೨೭.
೧೬. ಅದೇ, ೧೦.೨೮-೨೯.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಧಾನವಾದುದು ಶ್ರೌತ (ವೈದಿಕ) ಅತಿವರ್ಣಾಶ್ರಮ ಪ್ರಧಾನವಾದುದು ತಾಂತ್ರಿಕ. ಜನ್ಮದಿಂದ ಬಂದ ಜಾತಿಯ ತಾರತಮ್ಯವನ್ನು ಮೀರಿದ (ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ) ಶಿವಾಗಮಗಳ ವಿಚಾರಭಾಗದಲ್ಲಿ ಉಕ್ತವಾಗಿರುವುದು ವೀರಶೈವಮತ, ಸ್ವತಂತ್ರವಾದುದು. ಆದಿಶೈವ ಮತಕ್ಕೆ ಇದು ಸಮಾನವಾದಂತೆ ಕಂಡರೂ ಕೆಲವು ವಿಷಯಗಳಲ್ಲಿ ಅದಕ್ಕಿಂತ ವಿಭಿನ್ನ. ಶೈವಾಗಮಗಳ ಪೂರ್ವಭಾಗದಲ್ಲಿ ಪ್ರತಿಪಾದಿತವಾದ ಆದಿಶೈವ, ಗುರುಮುಖದಿಂದ ಪಡೆದ ಸ್ಥಾವರಲಿಂಗವನ್ನು ತನ್ನ ಪ್ರಾಣಕ್ಕೆ ಸಮಾನವೆಂದು ತಿಳಿದರೂ, ಅವನು ಅದನ್ನು ಎದುರಿಟ್ಟು ಪೂಜಿಸುತ್ತಾನೆ. ಆಗಮಗಳ ಉತ್ತರಭಾಗದಲ್ಲಿ ಪ್ರತಿಪಾದಿತ ವೀರಶೈವ, ವೇಧಾ-ಮನು-ಕ್ರಿಯಾದೀಕ್ಷೆಯ ಕ್ರಮದಲ್ಲಿ ಗುರುಕಾರುಣ್ಯದಿಂದ ಪಡೆದ ಮಂತ್ರ ಮೂರ್ತಿ ಇಷ್ಟಲಿಂಗವನ್ನು ಸದಾ ಅಂಗದ ಮೇಲೆ ಧರಿಸಿ ಪೂಜಿಸುತ್ತಾನೆ. ತನ್ನ ಪ್ರಾಣಸ್ವರೂಪವಾದ ಅದನ್ನು ಅಗಲಿ ಒಂದು ನಿಮಿಷವೂ ಇರುವುದಿಲ್ಲ. ಅಕಸ್ಮಾತ್ ಅದರ ವಿಯೋಗವಾದಲ್ಲಿ ತನ್ನ ಪ್ರಾಣವನ್ನು ಹುಲ್ಲುಕಡ್ಡಿಯಂತೆ ಭಾವಿಸಿ ಆತ್ಮಾರ್ಪಣೆಗೆ ಸಿದ್ಧನಾಗುವ ಅವನ ವೀರವ್ರತ ಅನನ್ಯವಾದುದು. ಅವನ ನೈಷ್ಠಿಕ ಭಕ್ತಿ-ಭಾವ ಮಹೋನ್ನತವಾದುದು.[೧೭] ಇಂತಹ ಕಠಿಣ ವ್ರತದ ಆಚರಣೆಯಿಂದಾಗಿ ಅವನು ನಿಜವಾದ ಅರ್ಥದಲ್ಲಿ ವೀರಶೈವನೆಂದೇ ಪ್ರಸಿದ್ಧ. ಶೈವಭೇದಗಳು ಅನೇಕವಾಗಿದ್ದರೂ ಶೈವಮತ ಒಂದೇ ಆಗಿದೆ. ಶೈವ ಮಹಾವೃಕ್ಷದ ಕೊಂಬೆ-ರೆಂಬೆಗಳು ಅಸಂಖ್ಯವಾಗಿದ್ದರೂ, ಮೂಲವೃಕ್ಷ ಒಂದೇ ಆಗಿದೆ.

ದೇಶ-ಕಾಲ, ಸಂಪ್ರದಾಯ, ನಂಬಿಕೆ, ಆಚರಣೆಗಳ ಭೇದದಿಂದ ಶೈವಶಾಖೆಗಳು ಬೇರೆ ಬೇರೆ ಹೆಸರುಗಳನ್ನು ಪಡೆದಿವೆ. ಆದರೂ ಆ ಹೆಸರುಗಳು ಅನ್ವರ್ಥಕವಾಗಿವೆ. ಅನಾದಿಕಾಲದಿಂದ ನಡೆದುಬಂದ ಸೃಷ್ಟಿಯೊಂದಿಗೆ ಈ ಶಿವಾಚಾರವೂ ಸಾಗಿಬಂದಿರುವುದರಿಂದ ಅದು 'ಅನಾದಿ' ಎನಿಸಿದೆ. **(ಅನಾದಿಸರ್ಗ-ಸಂಚಾರಾತ್ ಅನಾದೀದಂ ನಿಗದ್ಯತೆ)**[೧೮] ಎಲ್ಲ ಮತಗಳಿಗೂ ಮೊದಲನೆಯದಾದುದರಿಂದ 'ವೀರಶೈವ' ಎನಿಸಿತು. (ಮತಾನಾಹ ಸರ್ವೇಷಾಂ ಅದ್ಯತ್ವಾದಪಿ ಗೀಷ್ಯತೇ).[೧೯] ಮುಕ್ತಿಮಾರ್ಗಕ್ಕೆ ಪ್ರಧಾನವಾದದ್ದರಿಂದ ಮಾರ್ಗಶೈವವಾಯಿತು (ಮುಕ್ತಿಮಾರ್ಗ-ಪ್ರಧಾನತ್ವಾತ್ ಮಾರ್ಗಶೈವಮಿತಿ ಶೃತಮ್)[೨೦] ಶಿವನೇ ಸರ್ವಸ್ವವೆಂದು ಭಾವಿಸಿ, ಶಿವಭಕ್ತಿ ಸಂಪನ್ನರೂ, ಅನ್ಯದೈವದ ನಿರಾಕರಣೆ ಉಳ್ಳವರು 'ಶುದ್ಧಶೈವರು'. (ದೇವತಾಂತರ ಸಂಬಂಧ ವರ್ಜನಾತ್ ಶುದ್ಧಮಿತ್ಯಪಿ).[೨೧] ಸ್ಮಾರ್ತಕರ್ಮಗಳ ಸಂಬಂಧದಿಂದ 'ಮಿಶ್ರಶೈವ'ವಾಯಿತು (ಸ್ಮಾರ್ತಕರ್ಮಾಭಿಸಂಬಂಧಾನ್ ಮಿಶ್ರಮಿತ್ಯಪಿ).[೨೨]

---

೧೭. ಅದೇ, ೧೦.೩೦-೩೪.
೧೮. ಅದೇ, ೧೦.೫೯
೧೯. ಅದೇ, ೧೦.೫೯.
೨೦. ಅದೇ, ೧೦.೬೦.
೨೧. ಅದೇ, ೧೦.೬೦.
೨೨. ಅದೇ, ೧೦.೬೧.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗದ ಮೇಲೆ ಗುರು ಕೊಟ್ಟ ಪ್ರಾಣಸಮಾನ ಇಷ್ಟಲಿಂಗವನ್ನು ಸದಾ ಧರಿಸಿ, ಪೂಜಿಸುವ ವೀರವ್ರತದಿಂದಾಗಿ, ವೀರಶೈವ ಎಂದು ಹೆಸರಾಯಿತು (ವೀರವ್ರತ ಸಮಾಯೋಗಾತ್ ವೀರಶೈವಮಿತಿ ಸ್ಮೃತಮ್).[೨೩]

ವೀರಶೈವ ಪ್ರಭೇದಗಳು[೨೪]

ವೀರಶೈವಧರ್ಮ ಸನಾತನಧರ್ಮ, ಶೈವಧರ್ಮ ಒಂದು ಪ್ರಭೇದ. ಇದಕ್ಕೆ ಶೈವಧರ್ಮದಷ್ಟೇ ಪ್ರಾಚೀನ ಇತಿಹಾಸವಿದೆ. ವೀರಶೈವಧರ್ಮದ ಗಂಗೆಯ ಗಂಗೋತ್ರಿ ಶೈವಮತ. ಶೈವಧರ್ಮದ ಅಧ್ಯಯನದಿಂದ ವೀರಶೈವಧರ್ಮದ ಮೂಲ ನೆಲೆಯನ್ನು ಗುರುತಿಸುವುದು ಸಾಧ್ಯವಾಗುತ್ತದೆ. ವೀರಶೈವಧರ್ಮದ ಪ್ರಾಚೀನತೆ-ಪರಂಪರೆಗಳನ್ನು ಅರಿತುಕೊಳ್ಳಲು ಶೈವಧರ್ಮದ ಅಧ್ಯಯನ ಅನಿವಾರ್ಯವಾಗುತ್ತದೆ. ಶೈವಧರ್ಮದ ಇತಿಹಾಸದೊಂದಿಗೆ ವೀರಶೈವಧರ್ಮದ ಇತಿಹಾಸವೂ ಹಾಸುಹೊಕ್ಕಾಗಿದೆ. ಶೈವಮತದ ಪ್ರಭೇದಗಳೆಂಬ ಕೆಲವು ಉಪನದಿಗಳು ಕಾಲಾನಂತರದಲ್ಲಿ ವೀರಶೈವವೆಂಬ ನದಿಗೆ ಸಂಗಮಿಸಿ ವೀರಶೈವಧರ್ಮದ ನದಿ ವಿಸ್ತಾರವಾದುದು ಇತಿಹಾಸ; ಒಂದು ರೀತಿಯಲ್ಲಿ ವೀರಶೈವಧರ್ಮದ ವಿಕಾಸರೂಪ ಅದೇ ಕೊನೆಯ ಸ್ವರೂಪವೆಂದು ಹೇಳಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ಸಾಮಾನ್ಯವಾಗಿ ಎಲ್ಲ ವೀರಶೈವ ಆಗಮಗಳಲ್ಲೂ ವೀರಶೈವದ ಮೂರು ಭೇದಗಳು ಉಕ್ತವಾಗಿರುವುದು ಕಂಡುಬರುತ್ತದೆ. ಪಾರಮೇಶ್ವರ, ಸೂಕ್ಷ್ಮ, ವಾತುಲ ಹೀಗೆ ಎಲ್ಲ ಪ್ರಮುಖ ಆಗಮಗಳಲ್ಲಿ ವೀರಶೈವದ ಮೂರು ಪ್ರಭೇದಗಳು ಉಕ್ತವಾಗಿದ್ದು ಅವುಗಳ ಲಕ್ಷಣಗಳು ಬಹುಮಟ್ಟಿಗೆ ಒಂದೇ ವಿಧವಾಗಿವೆ. ಚಂದ್ರಜ್ಞಾನಾಗಮವು ವೀರಶೈವದ ಮೂರು ಪ್ರಭೇದಗಳನ್ನು ತಿಳಿಸುತ್ತದೆ.[೨೫] ಅವುಗಳೆಂದರೆ-

ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಹಾಗೂ ನಿರಾಭಾರಿ ವೀರಶೈವ. ಅವುಗಳ ಲಕ್ಷಣಗಳು ಹೀಗಿವೆ-

೧. ಸಾಮಾನ್ಯ ವೀರಶೈವ: ಇಷ್ಟ-ಪ್ರಾಣ-ಭಾವಲಿಂಗಗಳನ್ನು ಏಕೋಭಾವದಿಂದ ಅರ್ಚಿಸಿ ಗುರು, ಲಿಂಗ, ಜಂಗಮರಲ್ಲಿ ಸಮಭಾವ ಹೊಂದಿ ತ್ರಿಕಾಲ ಶಿವಪೂಜೆಯನ್ನು ದೊರೆತಷ್ಟು ಹೂ-ಪತ್ರೆ ಮೊದಲಾದ ಪೂಜಾಪರಿಕರಗಳಿಂದ ಪೂಜಿಸಿ, ಸಂತುಷ್ಟನಾಗಿರುವವನು ಸಾಮಾನ್ಯ ವೀರಶೈವ.[೨೬]

೨. ವಿಶೇಷ ವೀರಶೈವ: ವಿಶೇಷ ವೀರಶೈವ ಧರ್ಮಾಚರಣೆ ವಿಶಿಷ್ಟವಾದುದು. ಪ್ರತಿದಿನ ಇಷ್ಟಲಿಂಗ ಪೂಜೆಯ ನಂತರ ಒಬ್ಬರು-ಇಬ್ಬರು ಇಲ್ಲವೆ ಮೂವರು ಜಂಗಮರಿಗೆ ತಪ್ಪದೆ ಪ್ರಸಾದ ಮಾಡಿಸಿ, ಶೇಷಪ್ರಸಾದವನ್ನು ಸೇವಿಸುವುದು ಮತ್ತು ಪ್ರತಿದಿನ ತಪ್ಪದೆ

---

೨೩. ಅದೇ, ೧೦.೬೧.

೨೪. ಅದೇ, ಕ್ರಿ.ಪಾ., ೧೦.೩೦-೪೮.

೨೫. "ಸಾಮಾನ್ಯಶ್ಚ ವಿಶೇಷಶ್ಚ ನಿರಾಭಾರೀತಿ ಚ ತ್ರಿಧಾ" ಅದೇ, ೧೦.೩೫.

೨೬. ಅದೇ, ಕ್ರಿ.ಪಾ., ೧೦.೩೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಿನಕ್ಕೆ ಆರು ವೇಳೆಯಲ್ಲಿ ಇಷ್ಟಲಿಂಗವನ್ನು ಪೂಜಿಸುವುದು ಬಿಲ್ವಪತ್ರ, ಕರವೀರ, ಮಲ್ಲಿಕಾ, ಉತ್ಪಲ, ಪುನ್ನಾಗ ಮೊದಲಾದ ವಿವಿಧಪುಷ್ಪಗಳಲ್ಲಿ ಒಂದು, ಎರಡು ಅಥವಾ ಮೂರು ಪುಷ್ಪಗಳನ್ನು ನಿಯಮದಂತೆ ಅರ್ಪಿಸಿ, ಪೂಜಿಸಬೇಕು. ಜೀವನಪರ್ಯಂತ ನಿತ್ಯನೇಮಗಳ ಪಾಲನೆ ಮಾಡಬೇಕು. ವ್ರತ ಲೋಪವಾದರೆ ಪ್ರಾಣತ್ಯಾಗ ಮಾಡಲು ಸಿದ್ಧನಾಗಬೇಕು. ಇವನೇ ವಿಶೇಷ ವೀರಶೈವ.[೨೭]

೩. ನಿರಾಭಾರಿ ವೀರಶೈವ: ಇವನು ಅತ್ಯಾಶ್ರಮೀ. ಹೆಂಡತಿ ಮಕ್ಕಳ ಪೋಷಣೆಯ ಭಾರ ಹೊತ್ತಿರುವುದಿಲ್ಲ. ಆದ್ದರಿಂದ ಇವನು ವಿರಕ್ತ, ನಿರಾಭಾರಿ. ಮಂಡೆಬೋಳು ಅಥವಾ ಜಡೆಯನ್ನು ಬಿಟ್ಟಿರಬಹುದು. ಕೈಯ್ಯಲ್ಲಿ ದಂಡ ಹಿಡಿದು ಕಾವಿ, ಕಪನಿ ಧರಿಸಿ, ನಿರ್ಭಯ ಹಾಗೂ ಸ್ವತಂತ್ರನಾಗಿ ಲೋಕಸಂಚಾರ ಮಾಡುವವನು. ವೈದಿಕಾಚರಣೆಯ ವೀರಶೈವ ಸನ್ಯಾಸಿ, ಶಿಖಾಯಜ್ಞೋಪವೀತ ಧರಿಸಿದವನು. ದಂಡ ಕಷಾಯಧಾರಿ, ಲಿಂಗಾಂಗಿ ಸ್ವತಂತ್ರ. ವೈದಿಕ ವೀರಶೈವ ಸನ್ಯಾಸಿಗಳ ಆಚರಣೆಯಲ್ಲಿ ಇಷ್ಟಲಿಂಗ ಅಂಗದಿಂದ ಅಗಲಿದಾಗ, ಪ್ರಾಣತ್ಯಾಗ ಮಾಡುವ, ವೀರವ್ರತದ ಆಚರಣೆ ಸಮಾನವಾಗಿರುವುದು. ವಿಶೇಷ ನಿರಾಭಾರಿ, ನಿಸ್ಪೃಹ, ನಿಜಲಿಂಗೈಕ್ಯ, ಭಿಕ್ಷಾನ್ನತೃಪ್ತ, ನಿರ್ಭಯ, ಮೌನಿ, ಭೂತದಯಾಯುಕ್ತ, ಸದಾ ಭಸ್ಮರುದ್ರಾಕ್ಷಧಾರಕ, ಶಿವ ಷಡಕ್ಷರಮಂತ್ರ ಜಪಾಸಕ್ತ, ಶಿವಾನುಭವ ಚರಮೂರ್ತಿ. ಆದಿಶೈವ, ಪೂರ್ವಶೈವ, ಶುದ್ಧಶೈವ, ಮಾರ್ಗಶೈವ ಮತ್ತು ವೀರಶೈವರು ಶಿವಾದ್ವೈತವಾದಿಗಳು. ಅದು ಶ್ರುತಿ ಸಮ್ಮತ. ಮಿಶ್ರಶೈವನಿಗೆ ಶುದ್ಧದ್ವೈತಮತ ಪರಿಕಲ್ಪಿತವಾಗಿದೆ. ಸಾಮಾನ್ಯ ವೀರಶೈವನದು ಶಕ್ತಿವಿಶಿಷ್ಟಾದ್ವೈತ ಮತವೆಂದು ತೋರುತ್ತದೆ.[೨೮]

ಆದಿಶೈವ, ಮಾರ್ಗಶೈವ ಮತ್ತು ವೀರಶೈವನಿಗೆ ಪ್ರೇತಕರ್ಮದ ಸೂತಕವಿಲ್ಲ, ಶವದ ಅಗ್ನಿಸಂಸ್ಕಾರ ಇವರಿಗೆ ಸಮ್ಮತವಾದುದಲ್ಲ. ಆದರೆ ಪೂರ್ವಶೈವ, ಮಿಶ್ರಶೈವ ಮತ್ತು ಶುದ್ಧಶೈವರು ಪ್ರೇತಕರ್ಮಶೀಲರು. ಆದ್ದರಿಂದ ಅವರಿಗೆ ಶಾಂಭವೀದೀಕ್ಷೆ ಸಲ್ಲದು.[೨೯]

ಈ ಎಲ್ಲ ಶೈವ ಹಾಗೂ ವೀರಶೈವ ಪ್ರಭೇದಗಳು ಆಚಾರಭೇದಗಳಿಂದ ವಿಭಿನ್ನವಾಗಿವೆ. ಆದರೆ ಎಲ್ಲವೂ ಶೈವಮತದ ಅಂಗಗಳಾಗಿವೆ. ಶೈವಾಗಮಗಳ ಪೂರ್ವಭಾಗದಲ್ಲಿ ಇಷ್ಟಲಿಂಗ ಸಂಸ್ಕೃತಿಯ ವಿವೇಚನೆ ಇಲ್ಲ. ಆದರೆ ಉತ್ತರ ಭಾಗದಲ್ಲಿ ಶಾಂಭವದೀಕ್ಷೆ, ಸ್ಥೂಲ-ಸೂಕ್ಷ್ಮ-ಕಾರಣ ಶರೀರಗಳಿಗೆ ಇಷ್ಟಲಿಂಗ, ಭಾವಲಿಂಗಗಳ ಪರಿಕಲ್ಪನೆಯ ಸಂಬಂಧ ತಾತ್ವಿಕವಾಗಿದೆ. ವೀರಶೈವದಲ್ಲಿ ಷಟ್‌ಸ್ಥಲದ ಜ್ಞಾನಮಾರ್ಗವಿದೆ ಅಷ್ಟಾವರಣ, ಪಂಚಾಚಾರಗಳ ಆಚರಣೆ ನಿರಂತರವಾಗಿದೆ. ಕರ್ಮ-ಜ್ಞಾನಮಾರ್ಗಗಳ ಸಮನ್ವಯವಿದೆ. ಇವುಗಳ ಅನುಷ್ಠಾನದಿಂದ ಪಶುಪ್ರಿಯನಾದ ಜೀವನು ಆಣವ-ಮಾಯಾ-ಕಾರ್ಮಿಕ ಮಲತ್ರಯಗಳಿಂದ ಕೂಡಲೇ ಮುಕ್ತನಾಗುತ್ತಾನೆ. ವೈದಿಕಾಚರಣೆಯ

---

೨೭. ಅದೇ, ಕ್ರಿ.ಪಾ., ೧೦.೩೬-೪೧.

೨೮. ಅದೇ, ಕ್ರಿ.ಪಾ., ೧೦.೪೯-೫೦.

೨೯. ಅದೇ, ೧೦. ೫೨-೫೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(ವೈದಿಕ ವೀರಶೈವ) ವರ್ಣಾಶ್ರಮ ಧರ್ಮನಿಷ್ಠ. ಇವನು ಶಿವದೇವಾಲಯಗಳಲ್ಲಿ ಸ್ಥಾವರ ಶಿವಲಿಂಗ ಪ್ರತಿಷ್ಠೆ ಮೊದಲಾದ ಕಾರ್ಯಗಳಲ್ಲಿ ಆಚಾರ್ಯನಾಗಿ ಪೂಜ್ಯನಾದವನು. (ವೀರಶೈವ ಜಂಗಮರು, ಭಾರತದ ಜ್ಯೋತಿರ್ಲಿಂಗಗಳಲ್ಲೂ, ಶೈವದೇವಾಲಯಗಳಲ್ಲೂ ಇಂದಿಗೂ ಅರ್ಚಕರಾಗಿ ಪೂಜ್ಯರಾಗಿದ್ದಾರೆ. ಉದಾ: ಶ್ರೀಶೈಲ-ಕೇದಾರ-ಮಲೆಯ ಮಹದೇಶ್ವರ, ಎಡೆಯೂರು.)

ಇಲ್ಲಿಯವರೆಗೆ ಚಂದ್ರಜ್ಞಾನಾಗಮದ ಶೈವ-ವೀರಶೈವ ಪ್ರಭೇದಗಳನ್ನು ನಿರೂಪಿಸಲಾಗಿದೆ. ಲೇಖನದ ಪರಿಮಿತಿಯನ್ನು ಅನುಲಕ್ಷಿಸಿ, ವಿಸ್ತಾರವಾದ ವಿವರಣೆಗೆ ಹೋಗದೆ, ಸಂಕ್ಷಿಪ್ತವಾಗಿ, ಬೇರೆ ಬೇರೆ ಆಗಮಗಳಲ್ಲಿ, ಪುರಾಣಗಳಲ್ಲಿ ವಚನಸಾಹಿತ್ಯದಲ್ಲೂ ಶೈವ-ವೀರಶೈವ ಪ್ರಭೇದಗಳನ್ನು ನೋಡಬಹುದಾಗಿದೆ. ಪಾರಮೇಶ್ವರಾಗಮ[೩೦]ದಲ್ಲಿ ವೀರಶೈವಾದಿಭೇದೇನ 'ಶೈವ ಸಪ್ತವಿಧಂ' ಎಂದು ಶೈವದ ಸಪ್ತಪ್ರಭೇದಗಳನ್ನು ತಿಳಿಸುತ್ತದೆ. ವೀರಶೈವ ಮೊದಲುಗೊಂಡು ಅವು ಹೀಗಿವೆ: ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಎಂದು. ಇದೇ ಆಗಮದ[೩೧] ಶೈವಮತದ ಶಾಖೆಗಳನ್ನು ಸೋಪಾನಕ್ರಮದಲ್ಲಿ ನಿರೂಪಿಸಲಾಗಿದೆ. ಅವು: ಅನಾದಿಶೈವ, ಆದಿಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಮತ್ತು ವೀರಶೈವ, ಇದೇ ಆಗಮದ[೩೨] ಶುದ್ಧ-ಮಿಶ್ರ-ಮಾರ್ಗ, ಅವಾಂತರ, ಮಹಾಶೈವ, ಅನುಶೈವ, ಅವಾಂತರಶೈವ, ತುರ್ಯಶೈವ (ವೀರಶೈವ) ಲಕ್ಷಣಗಳ ವಿವರಣೆ ಇದೆ.

ಶೈವಾಗಮಗಳಲ್ಲಿ ವೀರಶೈವತತ್ವವನ್ನು ಸಮ್ಯಕ್‌ರೀತಿಯಲ್ಲಿ ಪ್ರತಿಪಾದಿಸುವ ಸೂಕ್ಷ್ಮಾಗಮದಲ್ಲಿ ಶೈವದ ಏಳು ಪ್ರಭೇದಗಳ ನಿರೂಪಣೆ ಇದೆ.[೩೩] ಅವುಗಳು ಹೀಗಿದೆ:

ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಪ್ರವರಶೈವ, ಅಂತ್ಯಶೈವ ಎಂದು ಇವುಗಳ ಲಕ್ಷಣಗಳ ನಿರೂಪಣೆಯೂ ಇದೆ. ಪಾಶುಪತಾಗಮದಲ್ಲಿ[೩೪] ಶೈವದಲ್ಲಿ ಎರಡು ವಿಧ: ಶೈವ-ವೀರಶೈವ ಮತ್ತು ಶೈವದಲ್ಲಿ ಅನಾದಿ, ಆದಿ, ಮಹಾ, ಅನು, ಅವಾಂತರ, ಪ್ರವರ ಮತ್ತು ಅಂತ್ಯವೆಂದು ಏಳು ಪ್ರಭೇದಗಳನ್ನು ತಿಳಿಸುತ್ತದೆ. ಸೂಕ್ಷ್ಮಾಗಮದ ಶೈವಶಾಖೆಗಳನ್ನೇ ಈ ಆಗಮವೂ ಉಲ್ಲೇಖಿಸಿದೆ. ಸುಪ್ರಭೇದಾಗಮ[೩೫]ದಲ್ಲಿ ಸಾಮಾನ್ಯ-ಮಿಶ್ರ-ಶುದ್ಧ-ವೀರಶೈವ ಎಂದು ನಾಲ್ಕು ಪ್ರಭೇದಗಳ ವಿವರಣೆ ಇದೆ.

ಆಶ್ಚರ್ಯದ ಸಂಗತಿ ಎಂದರೆ ಎಲ್ಲ ಆಗಮಗಳಿಗಿಂತ 'ವೀರಾಗಮ'ದಲ್ಲಿ ೨೮ ಶೈವಪ್ರಭೇದಗಳ ನಿರೂಪಣೆ ಇದೆ.[೩೬] ೧. ಶುದ್ಧಶೈವ, ೨. ಕ್ರಿಯಾಶೈವ, ೩. ರೂಪಶೈವ,

---

೩೦. ಪಾರಮೇಶ್ವರ, ಕ್ರಿ.ಪಾ., ೭.೫-೨೭.
೩೧. ಅದೇ, ೯.೮೪-೯೧.
೩೨. ಅದೇ, ೧೭.೪-೨೮.
೩೩. ಸೂಕ್ಷ್ಮಾಗಮ, ೭.೫-೬.
೩೪. ಶಿವಾಗಮ ಸೌರಭ, ಪು. ೬೩.
೩೫. ಅದೇ, ಪು. ೫೭.
೩೬. ವೀರಾಗಮ, ಕನ್ನಡ ಟೀಕೆ, ೧.೫೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪. ಮಿಶ್ರಮಾರ್ಗಶೈವ, ೫. ಮಾರ್ದವಶೈವ, ೬. ತಾಂತ್ರ್ಯಶೈವ, ೭. ಉನ್ಮತ್ತಶೈವ, ೮. ಸ್ವರಶೈವ, ೯. ಗುಣಶೈವ, ೧೦. ಬಿಂಬಶೈವ, ೧೧. ಭಕ್ತಶೈವ, ೧೨. ಕರ್ಮ ಕ್ರಿಯಾಶೈವ, ೧೩. ಮತಶೈವ, ೧೪. ಆತಿಥ್ಯಶೈವ, ೧೫. ಲಾಕ್ಷಣಿಕಶೈವ, ೧೬. ವ್ರತಶೈವ, ೧೭. ಪಾಕಕ್ರಿಯಾಶೈವ, ೧೮. ಅನುಕೂಲಶೈವ, ೧೯. ಪ್ರತಿಕೂಲಶೈವ, ೨೦. ಕರಶೈವ, ೨೧. ವಿಭೂತಿಶೈವ, ೨೨. ದೀಕ್ಷಾಶೈವ, ೨೩. ಮಂತ್ರಶೈವ, ೨೪. ಆಚಾರಶೈವ, ೨೫. ಜಾತಿಶೈವ, ೨೬. ಕ್ರಿಯೋಪಾಧಿಶೈವ, ೨೭. ಭೋಗಶೈವ ಮತ್ತು ೨೮. ಮಹಾತ್ಮ್ಯಶೈವ ಎಂಬ ಭೇದಗಳು ಶಿವ ಸಮಯ, ಶಿವಾಚಾರ, ಶಿವಪಥಗಳೆನಿಸಿವೆ.[೩೭]

ಎಲ್ಲ ಆಗಮಗಳಿಗಿಂತ ಹೆಚ್ಚು ಶೈವಪ್ರಭೇದಗಳನ್ನು ತಿಳಿಸುವ 'ವೀರಾಗಮ' ಅದು ಅನ್ವರ್ಥಕವಾಗಿ, ವೀರಶೈವಾಗಮವಾಗಿ ಕೀರ್ತಿತವಾಗಿದೆ. ಇಪ್ಪತ್ತೆಂಟು ಶಿವಾಗಮಗಳಲ್ಲಿ ವೀರಶೈವಾಚಾರವನ್ನು ಪ್ರತಿಪಾದಿಸುವ ಪೂರ್ವಭಾಗಗಳು ಈಗ ನಮಗೆ ದೊರೆಯುತ್ತಿಲ್ಲ. ಕಿರಣ-ಕಾರಣ-ಸೂಕ್ಷ್ಮ, ಮಕುಟ, ಪಾರಮೇಶ್ವರ, ಚಂದ್ರಜ್ಞಾನಾಗಮ, ವಾತುಲ ಮತ್ತು ವೀರಾಗಮಗಳ ಉತ್ತರ ಭಾಗಗಳು ನಮಗೆ ದೊರಕುತ್ತವೆ. ಅಲ್ಲೂ ಶೈವಭೇದಗಳನ್ನು ಸಕ್ರಮವಾಗಿ ವಿವರಿಸಿಲ್ಲ. ಕೆಲವು ಆಗಮಗಳು ಸಾಂದರ್ಭಿಕವಾಗಿ ಹೇಳುತ್ತವೆ.

ಪುರಾಣಗಳಲ್ಲಿ ಶೈವಪ್ರಭೇದಗಳು:

ಶಿವಪುರಾಣ, ಸ್ಕಾಂದಪುರಾಣ ಹಾಗೂ ಲಿಂಗಪುರಾಣಗಳಲ್ಲಿ ಶೈವಪ್ರಭೇದಗಳ ಪ್ರಸ್ತಾಪವಿಲ್ಲ. ಆದರೆ ಕೂರ್ಮಪುರಾಣದಲ್ಲಿ ವೈದಿಕ, ತಾಂತ್ರಿಕ ಹಾಗೂ ಮಿಶ್ರವೆಂದು ಮೂರು ಪ್ರಕಾರದ ಉಲ್ಲೇಖವಿದೆ. ವಾಮನಪುರಾಣದಲ್ಲಿ ಶೈವ, ಪಾಶುಪತ, ಕಾಳಾಮುಖ, ಕಾಪಾಲವೆಂದು ನಾಲ್ಕು ಶೈವಪ್ರಭೇದಗಳ ವಿವರಣೆ ಇದೆ. ಮಹಾಭಾರತದ ಶಾಂತಿಪರ್ವದಲ್ಲಿ "ಸಾಂಖ್ಯಂ ಯೋಗಂ ಪಾಂಚರಾತ್ರಂ ವೇದಾಃ ಪಾಶುಪತಸ್ತಥಾ" ಎನ್ನುವ ಉಕ್ತಿಯನ್ನು ಗಮನಿಸಿದಾಗ ಐದು ಪ್ರಭೇದಗಳ ವಿಚಾರ ತಿಳಿದುಬರುತ್ತದೆ. ಶೈವಶಾಖೆಯ 'ಪಾಶುಪತ'ದ ಹೆಸರು ಇಲ್ಲಿ ಬರುವುದರಿಂದ ಶೈವಶಾಖೆಗಳಲ್ಲಿ ಇದು ಪ್ರಾಚೀನವೆಂದು ತಿಳಿದುಬರುತ್ತದೆ.[೩೮]

ಶಾಸನಗಳಲ್ಲಿ ಶೈವಪ್ರಭೇದಗಳು:

ಕ್ರಿ.ಶ. ೧೨೬೧ರ ಆಂಧ್ರದ ಮಲ್ಕಾಪುರದ ಶಾಸನಗಳಲ್ಲಿ ಪಾಶುಪತ, ಶಾಲನಲ, ಶಿವಶಾಸನ, ಶೈವ ಎಂಬ ಪ್ರಭೇದಗಳ ಉಲ್ಲೇಖವಿದ್ದರೆ, ತ್ರಿಪುರಾಂತಕ ಶಾಸನ (ಕ್ರಿ.ಶ.೧೨೪೦) ವೀರವ್ರತ, ಮಹೇಶ್ವರ, ಶೈವ, ಪಾಶುಪತ, ಮಹಾವ್ರತ, ಕಾಳಾಮುಖ, ವಿಮಲ, ಭೈರವ, ಕಾಪಾಲಿಕವೆಂಬ ಒಂಬತ್ತು ಪ್ರಭೇದಗಳನ್ನು ತಿಳಿಸುತ್ತದೆ.[೩೯]

---

೩೭. ಶೈವಾಗಮಗಳಲ್ಲಿ ವೀರಶೈವ, ಪು. ೧೬೫-೧೬೯.

೩೮. "ಹಿಂದುತ್ವ"; ರಾಮದಾಸಗೌಡ, ವಾರಾಣಸಿ, ಪು, ೬೮೮-೬೯೨.

೩೯. ವಿಶ್ವಪ್ರಭೆ, ಮೂರು ಸಾವಿರ ಮಠ, ಹುಬ್ಬಳ್ಳಿ, ಪು. ೭೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಚನವಾಙ್ಮಯದಲ್ಲಿ ಶೈವಪ್ರಭೇದಗಳು:

ಕನ್ನಡದ ವಚನಕಾರರು, ಶೈವಪ್ರಭೇದಗಳನ್ನು ಬೇರೊಂದು ರೀತಿಯಲ್ಲಿ ತಿಳಿಸುತ್ತಾರೆ. ಅಕ್ಕಮಹದೇವಿ ಜಾತಿಶೈವ-ಅಜಾತಿಶೈವರೆಂದು ಎರಡು ಬಗೆಗಳನ್ನು ಹೆಸರಿಸುತ್ತಾಳೆ. ಇಲ್ಲಿ ಜಾತಿಶೈವರು ಫಲಕಾಮರಾಗಿ ಪೂಜೆ ಮಾಡುತ್ತಾರೆ. ಅಜಾತಿಶೈವರು ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನಗಳನ್ನು ಅರ್ಪಿಸುತ್ತಾರೆ. ಅಂದರೆ ಅಜಾತಿಶೈವರು ವೀರಶೈವರನ್ನು, ಜಾತಿಶೈವರು ಉಳಿದ ಶೈವರನ್ನು ಸೂಚಿಸುತ್ತದೆ.[೪೦] ಈ ಜಾತಿಶೈವರನ್ನು ಚನ್ನಬಸವಣ್ಣ ಭವಿಶೈವರೆಂದು ಕರೆದಿದ್ದಾನೆ.[೪೧] ಮೋಳಿಗೆ ಮಾರಯ್ಯ ಶುದ್ಧಶೈವ; ಪೂರ್ವಶೈವ; ಮಾರ್ಗಶೈವ ಮತ್ತು ಆದಿಶೈವಗಳನ್ನು ಹೇಳುತ್ತಾನೆ.[೪೨] ಆದಯ್ಯನು ಶುದ್ಧ-ಮಿಶ್ರ-ಸಂಕೀರ್ಣ-ಪೂರ್ವ-ಮಾರ್ಗಶೈವಗಳನ್ನು ಹೆಸರಿಸುತ್ತಾನೆ. ಈ ಶೈವಮತಗಳು ಕರ್ಮ ಭಕ್ತಿಯನ್ನು ಹೇಳುತ್ತವೆ. ನಿರ್ಮಲಭಕ್ತಿಯನ್ನಲ್ಲ ಎನ್ನುತ್ತಾನೆ.

ದೇಹದ ಮೇಲಿನ ಲಿಂಗವನ್ನು ಕೆಲವೊಮ್ಮೆ ಧರಿಸಿ, ಮತ್ತೆ ಕೆಲವು ವೇಳೆ ತೆಗೆದಿರಿಸುವವನು ಶುದ್ಧಶೈವ. ಬ್ರಹ್ಮ-ವಿಷ್ಣು-ರುದ್ರರನ್ನು ಒಂದೇ ಎಂದು ಭಾವಿಸುವವನು ಮಿಶ್ರಶೈವ. ಶಿವನನ್ನೇ ಶ್ರೇಷ್ಠನೆಂದು ಭಾವಿಸಿದರೂ ಇತರ ದೈವಗಳನ್ನು ಪೂಜಿಸುವವನೇ 'ಸಂಕೀರ್ಣಶೈವ'. ದೂರದಿಂದ ನಮಸ್ಕರಿಸಿ, ನೈವೇದ್ಯ ಮಾಡಿದರೂ ಶೇಷವನ್ನು ಭುಂಜಿಸದಿರುವವನು 'ಪೂರ್ವಶೈವ'ನೆಂದು ವಿವರಣೆ ನೀಡುತ್ತಾನೆ. ಇಲ್ಲಿ ಮೊದಲು ನಾಲ್ಕು ಪ್ರಭೇದಗಳ ವಿವರಣೆ ನೀಡಿ, ಮಾರ್ಗಶೈವದ ಬಗ್ಗೆ ಏನೂ ತಿಳಿಸುವುದಿಲ್ಲ. ಕಾರಣ ತಿಳಿಯದು.[೪೩]

ಚೆನ್ನಬಸವಣ್ಣ ಶೈವ-ಜಡಶೈವ-ಭವಿಶೈವ-ಶುದ್ಧಶೈವ ಎಂದು ನಾಲ್ಕು ಶಾಖೆಗಳನ್ನು ತಿಳಿಸುತ್ತಾನೆ. ಪ್ರಸಾದಿ ಭೋಗಣ್ಣ 'ಶೈವನಾರು ವೀರಶೈವ ಮೂರು' ಎಂದು ಹೇಳುತ್ತಾನೆ. ಶೈವ ಆರು ಯಾವುವು? ಮೂರು ವೀರಶೈವ ಯಾವುವು? ಅವುಗಳ ವಿವರಣೆ ಕೊಟ್ಟಿಲ್ಲ. ಅರಿವಿನ ಮಾರಿತಂದೆಯ ವಚನವೊಂದರಲ್ಲಿ ಶೈವಪ್ರಭೇದಗಳ ಶಾಖೆಗಳಿಗೆ ಗುರುವಾದವನು ಅನುಸರಿಸಬೇಕಾದ ನಿಯಮವನ್ನು ತಿಳಿಸುವ ವಿಚಾರವಿದೆ. ೧. ವೀರಶೈವ ಗುರುವಾಗಿ ಶುದ್ಧಶೈವಕ್ಕೆ ಹೊರಗಾಗಿರಬೇಕು, ೨. ಶುದ್ಧಶೈವ ಗುರುವಾಗಿ ಮಾರ್ಗಶೈವಕ್ಕೆ ಹೊರಗಾಗಿರಬೇಕು, ೩. ಮಾರ್ಗಶೈವ ಗುರುವಾಗಿ ಪೂರ್ವಶೈವಕ್ಕೆ ಹೊರಗಾಗಿರಬೇಕು. ಇಂತೀ ಶೈವಂಗಳಲ್ಲಿ ಸನ್ನದ್ಧವಾಗಿ ತಿಳಿದು, ಅಂಗ-ಲಿಂಗ ಆತ್ಮದಲ್ಲಿ ನಿಂದು ಸಂಯೋಗ ಮಾಡಬೇಕು. ಮಾಡಿದಲ್ಲಿ ಕೂಡಿದ ಕಾರಣ, ವೀರಶೈವವೆಂಬ ಹೆಸರಾಯಿತ್ತೆ ಸದಾಶಿವಲಿಂಗವನರಿತಲ್ಲಿ. ೧೨ನೇ ಶತಮಾನದ ಆಂಧ್ರದ ಶಾಸನಗಳಲ್ಲಾಗಲೀ, ವಚನಕಾರರಾಗಲಿ, ಪುರಾಣಗಳಲ್ಲಾಗಲೀ, ಶೈವಾಗಮಗಳಲ್ಲಿ ಕಂಡುಬರುವ

---

೪೦. ಅಕ್ಕನ ವಚನಗಳು, ಎಲ್. ಬಸವರಾಜು, ವಚನ. ೨೪೮.

೪೧. ಚನ್ನಬಸವಣ್ಣನವರ ವಚನಗಳು, ಆರ್.ಸಿ. ಹಿರೇಮಠ, ವಚನ. ೪೬೬.

೪೨. ಮೋಳಿಗೆ ಮಾರಯ್ಯ, ರಾಣಿ ಮಹಾದೇವಿ ವಚನಗಳು: ಉತ್ತಂಗಿ ಚನ್ನಪ್ಪ, ಪು. ೪೭.

೪೩. ಆದಯ್ಯ ವಚನಗಳು, ಉತ್ತಂಗಿ ಚನ್ನಪ್ಪ, ಪು. ೪೫-೪೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೈವಶಾಖೆಗಳನ್ನೇ ಅಲ್ಪ-ಸ್ವಲ್ಪ ನಾಮಾಂತರಗಳಿಂದ ಉಲ್ಲೇಖಿಸಿದ್ದಾರೆಂದು ಭಾವಿಸಬಹುದಾಗಿದೆ.

ಕೊನೆಯದಾಗಿ ಧರ್ಮ ಒಂದು ಭೌತಿಕ ವಸ್ತುವಲ್ಲ. ಅದು ಭಾವನೆಗಳ ಸಮುದಾಯ ನಂಬಿಕೆ, ಆಚಾರ ವಿಚಾರಗಳ ಕಂತೆ. ಇದು ಎಲ್ಲ ಕಾಲಕ್ಕೂ ಒಂದೇ ರೀತಿಯಾಗಿರುವುದಿಲ್ಲ. ಕಾಲಕಾಲಕ್ಕೆ ಸನ್ನಿವೇಶ-ಸಂದರ್ಭಕ್ಕನುಗುಣವಾಗಿ ಬದಲಾಗುತ್ತಿರುತ್ತದೆ. ಒಂದು ಕಾಲಕ್ಕೆ ಧರ್ಮಕ್ಕೊಂದು ಹೆಸರು ಅಂಕಿತವಾಗಿ ಬರುತ್ತದೆ. ಅನ್ವರ್ಥಕವಾಗಿಯೂ ಬರಬಹುದು; ಮುಂದೆ ಆ ಧರ್ಮದ ಸ್ವರೂಪ ಬದಲಾದಾಗಲೂ, ವಿಕೃತವಾದಾಗಲೂ ಅದೇ ಹೆಸರು ಮುಂದುವರಿಯುತ್ತದೆ. ಇದು ಜಗತ್ತಿನ ಎಲ್ಲ ಧರ್ಮಗಳಿಗೂ ಅನ್ವಯಿಸುವ ಮಾತು.

ಶೈವಸಂಪ್ರದಾಯದ ಅನೇಕ ಶಾಖೋಪಶಾಖೆಗಳು (Divisions and Subdivisions) ಈಗ ನಾಮಾವಶೇಷವಾಗಿವೆ. ಶಿವಲಿಂಗ ಪೂಜೆಯ ಕೆಲವು ಪದ್ಧತಿಗಳು ಈಗ ಪ್ರಚಲಿತವಾಗಿಲ್ಲ, ಲುಪ್ತವಾಗಿವೆ. ಆರು ಹೊತ್ತು ಪೂಜೆ ಮಾಡುವ ಇಷ್ಟಲಿಂಗಪೂಜಾ ವ್ರತವ ಮಾರ್ಗಶೈವರು ಈಗ ಕಂಡುಬರುವುದಿಲ್ಲ. ಮದುವೆಯಾಗದ ಕನ್ಯೆಯಿಂದ ಹುಟ್ಟಿದವರು ಸಮಾಜದಲ್ಲಿ ದೇವಾಲಯಗಳಲ್ಲಿ ಅವರ ಸ್ಥಾನಮಾನಗಳನ್ನು ತಿಳಿಸುವ ಪೂರ್ವ 'ಶೈವಪದ್ಧತಿ' ಎಲ್ಲೂ ಕಂಡುಬರುವುದಿಲ್ಲ. ಆದರೆ ಇವೆಲ್ಲ ಇಂದು ಒಂದು ಧರ್ಮದ ಇತಿಹಾಸ, ಸಮಾಜಶಾಸ್ತ್ರ, ನಂಬಿಕೆ-ನಡವಳಿಕೆ, ಪೂಜಾಪದ್ಧತಿಯ ದೇವತಾಶಾಸ್ತ್ರಗಳ ಅಧ್ಯಯನದ ವಿಷಯಗಳಾಗುತ್ತವೆ. ಆಗಮಗಳಲ್ಲಿ ಅನೇಕ ಶೈವಪ್ರಭೇದಗಳ ಸಮಗ್ರ ವಿವರಣೆ ಕಂಡುಬರುವುದಿಲ್ಲ. ಕೇವಲ ಹೆಸರುಗಳು ಮಾತ್ರ ಇವೆ. ಸೋಮ-ಲಾಕುಳ ಪ್ರಭೇದಗಳ ಸ್ಪಷ್ಟ ವಿವರಣೆ ಕಂಡುಬರುವುದಿಲ್ಲ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೂ ಹಾಗೂ ಇತರರು ಲಿಂಗಧಾರಣೆಯಿಂದ ಶೈವ (ವೀರಶೈವ)ರಾಗುವ ಅವಕಾಶ ಶೈವಧರ್ಮದಲ್ಲಿದೆ.

(ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಯೇಚಾನ್ಯಜಾತಯಃ ಲಿಂಗಧಾರಣ ಮಾತ್ರೇಣ ಶಿವ ಏವ ನ ಸಂಶಯಃ).

ಸಾಮಾಜಿಕವಾಗಿ ಹಿಂದುಳಿದ ಕೀಳುಜಾತಿಯವರನ್ನು ಶಿವಭಕ್ತರನ್ನಾಗಿ ಮಾಡುವ, ಅವರೆಲ್ಲ ಪವಿತ್ರಾತ್ಮರಾಗಿ ಸರ್ವಸಮಾನತೆಯಿಂದ ಬಾಳುವ ಅಧಿಕಾರ, ಆತ್ಮಗೌರವ, ಶೈವಧರ್ಮದಲ್ಲಿದೆ. ಇದೇ ಮಾತು ವೀರಶೈವಕ್ಕೂ ಅನ್ವಯವಾಗುತ್ತದೆ. ಇಷ್ಟಲಿಂಗ-ಧಾರಿಯಾಗಿ ಶಿವಭಕ್ತನಾದರೂ ಸಾಕು ಯಾರೇ ಆಗಲಿ ಅವನು ಅನಾಯಾಸವಾಗಿ ಭವಸಾಗರ ದಾಟುತ್ತಾನೆ. ("ಭಕ್ತಿಮಾತ್ರೇಣ ದುಃಖಾಂಬುಧಿಂ ತರೇತ್" ಪಾರಮೇಶ್ವರಾಗಮ).

ಶಿವಸಾಯುಜ್ಯದಾಯಕವಾದ ಅಲ್ಪಕ್ರಿಯಾ, ಬಹುಫಲದಾಯಕವಾದ ವೀರಶೈವಧರ್ಮಕ್ಕೆ ಸಮಾನವಾದ ಧರ್ಮ ಜಗತ್ತಿನಲ್ಲಿಯೇ ಇಲ್ಲವೆಂದು (ನ ವೀರಶೈವ ಸದೃಶಂ ಮತಮಸ್ತಿ ಜಗತ್ರಯೇ) ವೀರಶೈವಧರ್ಮದ ವೈಶಿಷ್ಟ್ಯವನ್ನು ಪಾರಮೇಶ್ವರಾಗಮವೇ ಸಾರಿ ಹೇಳುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಹಾಯಕ ಸಾಹಿತ್ಯ

೧. ಚಂದ್ರಜ್ಞಾನಾಗಮ-ಸೂಕ್ಷ್ಮಾಗಮ-ಪಾರಮೇಶ್ವರಾಗಮ-ಕಿರಣಾಗಮ-ಮಕುಟಾಗಮಗಳು. ಶೈವಭಾರತೀ ಶೋಧ ಪ್ರತಿಷ್ಠಾನಮ್, ಜಂಗಮವಾಡೀಮಠ, ವಾರಾಣಸಿ.

೨. ಶೈವಾಗಮಗಳಲ್ಲಿ ವೀರಶೈವ ಸಂ: ಡಾ. ಎಂ. ಶಿವಕುಮಾರಸ್ವಾಮಿ.

೩. ಶಿವಾಗಮ ಸೌರಭ ಸಂ: ಎಂ.ಜಿ. ನಂಜುಂಡಾರಾಧ್ಯ.

೪. ವೀರಶೈವಾಗಮ ಪ್ರಯೋಗರತ್ನಂ ಸಂ: ಎಂ.ಜಿ. ನಂಜುಂಡಾರಾಧ್ಯ.

೫. ವೈಷ್ಣವ-ಶೈವ ಔರ್ ಅನ್ಯಧಾರ್ಮಿಕಮತ (ಹಿಂದಿ): ರಾಮಕೃಷ್ಣ ಗೋಪಾಲ ಭಂಡಾರಕರ.

೬. ಭಾರತೀಯ ಸಂಸ್ಕೃತಿ ದರ್ಶನ ಸಂ: ಅ.ನ. ಕೃಷ್ಣರಾಯ.

೭. ದರ್ಶನ-ದಿಗ್ದರ್ಶನ (ಹಿಂದಿ) ರಾಹುಲ ಸಾಂಕೃತ್ಯಾಯನ.

೮. ಯುಗಯಾತ್ರಿ ಭಾರತೀಯ ಸಂಸ್ಕೃತಿ (ಸಂ-೪)

೯. ವಚನಗಳಲ್ಲಿ ಶೈವ ಹಾಗೂ ವೀರಶೈವ -ಡಾ. ಜಯಶ್ರೀ ದಂಡೆ.

೧೦. ವೀರಶೈವ ಉಗಮ ಮತ್ತು ಪ್ರಗತಿ -ಟಿ.ಎನ್. ಮಲ್ಲಪ್ಪ.

೧೧. ಕಲ್ಯಾಣ 'ಶಿವಾಂಕ' -ಗೋರಖಪುರ.

೧೨. ವಿಶ್ವಪ್ರಭೆ- ಸಂ: ಜಿ.ಹೆಚ್. ಹೆನ್ನೆರಡುಮಠ.

೧೩. The Saivagamas- M. Arunachalam.

೧೪. 'ಹಿಂದುತ್ವ' (ಹಿಂದಿ) ರಾಮದಾಸಗೌಡ, ವಾರಣಾಸಿ.

೧೫. An out line of history of Saiva philosophy -Kanti Chandra Panday.

೧೬. ಆಗಮ ಪರಿಜ್ಞಾನ- ವಿದ್ಯಾವಾಚಸ್ಪತಿ ಶಂಭುಲಿಂಗ ಶಿವಾಚಾರ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೧. ವೀರಶೈವರ ಅಂತ್ಯೇಷ್ಟಿವಿಧಿ

-ಕೋ.ರಂ. ಬಸವರಾಜು

'ಮರಣಂ ಪ್ರಕೃತಿಃ ಶರೀರಿಣಾಮ್।
ವಿಕೃತಿಃ ಜೀವನಮುಚ್ಯತೇ ಬುಧೈಃ॥'[೧]

ಶೈವನಾದ ಕಾಳಿದಾಸ ಮಹಾಕವಿಯ ಮಾತಿದು. ಪ್ರಕೃತಿಯಿಂದ ವಿಕೃತಿಗೆ, ಪುನಃ ವಿಕೃತಿಯಿಂದ ಪ್ರಕೃತಿಗೆ ಸಾಗುವುದೇ ಜೀವಿಯ ಅನಂತಯಾತ್ರೆಯ ರಹಸ್ಯ, ಬದುಕಿನ ಆವರ್ತನ. ಆದ್ದರಿಂದಲೇ ಶರೀರಿಗಳಿಗೆ ಪ್ರಕೃತಿಯೇ ಮರಣ, ವಿಕೃತಿಯೇ ಜೀವನ. ಇದನ್ನೇ ಆದಯ್ಯನೆಂಬ ಶರಣರು "ಹುಟ್ಟುವುದೇ ಬಂಧ; ಸಾವುದೇ ಮೋಕ್ಷ" ಎಂದಿದ್ದಾರೆ. ಈ ಎರಡೂ ಮಾತುಗಳ ಹಿನ್ನೆಲೆಯಲ್ಲಿ "ಸ್ಥಾವರದಿಂದ ಹುಟ್ಟಿ, ಜಂಗಮದಲ್ಲಿ ಇದ್ದು ಮತ್ತೆ ಸ್ಥಾವರದಲ್ಲಿಯೇ ಲೀನವಾಗುವ ಮಹಾಕ್ರಿಯೆಯೇ ವೀರಶೈವಧರ್ಮದ ರಹಸ್ಯ"ವೆನ್ನಬಹುದು.

ಮನುಷ್ಯನು ತಾನು ಹುಟ್ಟುವ ಪೂರ್ವದಲ್ಲಿ ಸ್ಥಾವರವೇ ಆಗಿರುತ್ತಾನೆ. ನಂತರ ಹುಟ್ಟಿದ ಮೇಲೆ ನಾಮರೂಪಜ್ಞಾನ ಕ್ರಿಯಾದಿಗಳನ್ನು ಪಡೆದುಕೊಂಡು ಜಂಗಮನಾಗುತ್ತಾನೆ. ಕೊನೆಗೆ ಸತ್ತಮೇಲೆ ಸ್ಥಾವರವೇ[೨] ಆಗುತ್ತಾನೆ. ಆದ್ದರಿಂದಲೇ ಸ್ಥಾವರಲಿಂಗಕ್ಕೆ ಮಾಡುವಂತೆ ಲಿಂಗಶರೀರಕ್ಕೂ ಪೂಜಾದಿಗಳನ್ನು ಸ್ಥಾವರಲಿಂಗಕ್ಷೇತ್ರದಂತೆ ಸಮಾಧಿಸ್ಥಳವನ್ನು ಲಿಂಗಮುದ್ರಾದಿಗಳ ಸ್ಥಾಪನೆಯಿಂದ ಜಡತ್ವವನ್ನು ಕಳೆದು ಶುದ್ಧಿಯನ್ನು ಮಾಡುತ್ತೇವೆ. ಹೀಗೆ ಈ ಸ್ಥಾವರದಲ್ಲಿ ಲೀನವಾಗುವ ಪುನರಾವೃತ್ತಿ ರಹಿತವಾದ ಸಮಾಧಿಕ್ರಿಯೆಯನ್ನೇ ಅಂತ್ಯೇಷ್ಟಿವಿಧಿ ಎಂದು ಕರೆಯಬಹುದು.

ಶಬ್ದಾರ್ಥಪರಿಭಾವನೆ:

ಅಂತ್ಯ + ಇಷ್ಟಿ = ಅಂತ್ಯೇಷ್ಟಿ. 'ಅಂತ್ಯ' ಎಂದರೆ 'ಪೂರ್ವಸ್ಮಿನ್ ಸತಿ ಯಸ್ಮಾತ್ ಪರೋ ನಾಸ್ತಿ ಸಃ ಅಂತ್ಯಃ' ಎಂಬಂತೆ 'ಹಿಂದಿನದು ಇದ್ದು ಅದಕ್ಕಿಂತಲೂ ಮುಂದಿನದು

---

೧. ರಘುವಂಶ, ೮.೮೭

೨. 'ಸ್ಥಾವರಂ ಜಂಗಮಂ ಚೇತಿ ಲಿಂಗಂ ದ್ವಿವಿಧಮುಚ್ಯತೇ' -ಎಂಬ ಆಗಮೋಕ್ತಿಗನುಗುಣವಾಗಿ ಇಲ್ಲಿ ಸ್ಥಾವರ ಜಂಗಮವೆಂಬೆರಡೂ ಲಿಂಗವಾಚಕಗಳಾಗಿವೆ. ಅದರಂತೆ 'ಸ್ಥಾವರ' ಎಂಬ ಶಬ್ದವೂ ಕೂಡ ಎರಡರ್ಥದಲ್ಲಿ ಬಳಸಲ್ಪಟ್ಟಿದೆಯಿಲ್ಲಿ. ಮೊದಲನೆಯ ಸ್ಥಾವರ ಶಬ್ದಕ್ಕೆ ಮುವತ್ತಾರು ತತ್ತ್ವಗಳ ವ್ಯಕ್ತರೂಪವಾದ ಮಹಾಲಿಂಗವೆಂದು ಎರಡನೆಯ ಸ್ಥಾವರ ಶಬ್ದಕ್ಕೆ ಅವ್ಯಕ್ತರೂಪವಾದ ಜಗತ್ಕಾರಣವಾದ ಪರಶಿವಲಿಂಗವೆಂದು ಅರ್ಥ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲದುದು' ಎಂದರ್ಥ. ಇಷ್ಟಿ ಎಂದರೆ ಸಂಸ್ಕಾರ, ಪೂಜೆ, ಯಾಗ ಎಂಬ ಮೊದಲಾದ ಅರ್ಥಗಳಿವೆ. ನಮ್ಮ ವೀರಶೈವ ಧರ್ಮಕ್ಕೆ ಅನ್ವಯಿಸಿ ಹೇಳುವುದಾದರೆ "ಏಕೇನ ಜನ್ಮನಾ ಮುಕ್ತಿಃ ವೀರಾಣಾಂ ತು ಮಹೇಶ್ವರೀ" ಎಂಬ ಶಿವಾಗಮ ಪ್ರಮಾಣದಂತೆ ಶಿವಾನುಗ್ರಹದಿಂದ ಶುದ್ಧಾತ್ಮರೆನಿಸಿ ಲಿಂಗವ ಪೂಜಿಸಿದ ಕಾರಣ ಪುನರ್ಜನ್ಮವಿಲ್ಲ. ಹಾಗಾಗಿ ಇದೇ ಅಂತ್ಯಜನ್ಮ. ಆದ್ದರಿಂದ ಈ ಜನ್ಮದ ಅವಸಾನಾಂತ್ಯದಲ್ಲಿ ಮಾಡುವ ಸಂಸ್ಕಾರ ಅಥವಾ ಪೂಜೆಗೆ ಅಂತ್ಯೇಷ್ಟಿ ಎಂದು ಹೆಸರು.

ಇಷ್ಟಿ ಪದಕ್ಕೆ ಯಾಗ ಎಂಬ ಅರ್ಥವೂ ಇದೆ. ಮೃತಶರೀರವೂ ಒಂದು ಹವಿಸ್ಸೇ. ಈ ಹವಿರ್ಪ್ರದಾನದಿಂದ ಭೂದೇವಿಯನ್ನು ಆರಾಧಿಸಬೇಕೆಂಬುದಾಗಿ ಈ ವೈದಿಕಮಂತ್ರ ಹೇಳುತ್ತದೆ. "ಮಹೀಂ ದೇವೀಂ ವಿಷ್ಣುಪತ್ನೀಂ ಅಜೂರ್ಯಾಂ ಪ್ರಾಚೀಮೇನಾಂ ಹವಿಷಾಯಜಾಮಃ" ಆದ್ದರಿಂದ ಇದಕ್ಕೂ ಅಂತ್ಯೇಷ್ಟಿ ಎಂದು ಹೆಸರು.

ಇನ್ನು 'ವಿಧಿ' ಶಬ್ದಕ್ಕೆ 'ಶಾಸ್ತ್ರೋಕ್ತ ವ್ಯವಸ್ಥಾ' 'ವಿಧಾಯಕವಾಕ್ಯಂ' 'ಅಜ್ಞಾನಾರ್ಥ ಜ್ಞಾಪಕೋ (ವೇದ) ಆಗಮ ವಿಭಾಗಃ' 'ಇಷ್ಟಸಾಧನತಾಬೋಧಕಪ್ರತ್ಯಯ ಸಮಭಿವ್ಯಾಹೃತ ವಾಕ್ಯಂ' ಮುಂತಾದ ಅರ್ಥಗಳಿವೆ.

ಆದ್ದರಿಂದ ಈ ಎಲ್ಲಾ ಅರ್ಥಗಳನ್ನು ಕ್ರೋಢೀಕರಿಸಿ 'ಇಷ್ಟ ಸಾಧನೆಯ ಅರಿವಿನಲ್ಲಿ ನಂಬಿಕೆಯುಳ್ಳ ಆಗಮಶಾಸ್ತ್ರೋಕ್ತ ವಿಧಾಯಕ ರೂಪವಾದ ಅಂತ್ಯಸಂಸ್ಕಾರದ ವ್ಯವಸ್ಥೆಗೆ "ಅಂತ್ಯೇಷ್ಟಿವಿಧಿ" ಎಂದು ಕರೆಯಬಹುದು.

ಶಬ್ದದ ಪರ್ಯಾಯ ಪದಗಳು:

ಅಂತ್ಯೇಷ್ಟಿವಿಧಿ ಎಂಬುದಕ್ಕೆ ಅವಸಾನವಿಧಿ, ಔರ್ಧ್ವದೇಹಿಕವಿಧಿ, ಪಿತೃಮೇಧವಿಧಿ, ಶಿವಮೇಧವಿಧಿ (ವಿಶಿಷ್ಟಪಿತೃಮೇಧ) ನಿರ್ಯಾಣಯಾಗ (ಯಾಗಂ ನಿರ್ಯಾಣ ಸಂಜ್ಞಕಂ) ಮುಂತಾದ ಪರ್ಯಾಯ ನಾಮಗಳಿವೆ. ಇವುಗಳಲ್ಲಿ 'ಶಿವಮೇಧ' ಎಂಬುದಕ್ಕೆ ವಿಶೇಷವಾಗಿ ಒತ್ತುಕೊಟ್ಟು ಚಂದ್ರಜ್ಞಾನಾಗಮ ಮತ್ತು ಇತರ ಶಿವಾಗಮಗಳಲ್ಲಿ ಪದನಿಷ್ಪತ್ತಿಯನ್ನು ಹೀಗೆ ಹೇಳಲಾಗಿದೆ-

ಶಿವೇ ಪರೇ ಪ್ರವಿಷ್ಟಾನಾಂ ಮೇಧ ಆರಾಧನಾತ್ಮಕಃ।
ಶಿವಮೇಧ ಇತಿಖ್ಯಾತಃ ಕರಣೀಯೋ ಮುಮುಕ್ಷುಭಿಃ॥[೬]

ಪರಶಿವನಲ್ಲಿ ಲೀನರಾದವರಿಗಾಗಿ ಮಾಡುವ ಆರಾಧನೆಗೆ ರೂಢಿಯಲ್ಲಿ ಶಿವಮೇಧ ಎಂದು ಹೆಸರು. ಮೋಕ್ಷಾಭಿಲಾಷಿಗಳು ಈ ಶಿವಾರಾಧನೆಯನ್ನು ಅವಶ್ಯ ಮಾಡಬೇಕು.

ವಿಷಯ ವಿಭಾಗ:

ಚಂದ್ರಜ್ಞಾನಾಗಮದ ಚರ್ಯಾಪಾದದ ಐದು ಪಟಲಗಳಲ್ಲಿ ಅಂತ್ಯೇಷ್ಟಿವಿಧಿಯ ವಿಷಯವನ್ನು ನಿರೂಪಿಸಲಾಗಿದೆ. ಈ ಅಂತ್ಯೇಷ್ಟಿವಿಧಿಯ ಕ್ರಿಯಾಕಲಾಪಗಳನ್ನೆಲ್ಲಾ ಐದು ವಿಧಿಗಳನ್ನಾಗಿ ಅಧ್ಯಯನದ ದೃಷ್ಟಿಯಿಂದ ಭಾಗ ಮಾಡಬಹುದು. ೧. ಶಿವಮೇಧಾ

---

೬. ಚಂದ್ರಜ್ಞಾನಾಗಮ, ಚ.ಪಾ., ೧.೭.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಶಂಸಾವಿಧಿ, ೨. ಉತ್ಕ್ರಾಂತಿಸಮಯಾಚಾರವಿಧಿ, ೩. ಸಮಾಧಿರಚನಾ ಮತ್ತು ನಿಕ್ಷೇಪವಿಧಿ, ೪. ಔರ್ಧ್ವದೇಹಿಕವಿಧಿ, ಮತ್ತು ೫. ಪ್ರಕೀರ್ಣಕವಿಧಿ. ಈ ಕ್ರಮವು ಇತರ ಶಿವಾಗಮಗಳಲ್ಲಿಯೂ ಸಾಮಾನ್ಯತಃ ಏಕರೂಪವಾಗಿರುತ್ತದೆ.

೧. ಶಿವಮೇಧಪ್ರಶಂಸಾವಿಧಿ:

ಈ ವಿಧಿಯಲ್ಲಿ ಶಿವಮೇಧದ ಪ್ರಶಂಸೆ, ಶಿವವ್ರತಿಗಳನ್ನು ಖನನಮಾಡಬೇಕೇ ವಿನಾ ದಹನ ಮಾಡಬಾರದು ಎಂಬೆರಡು ವಿಷಯಗಳ ನಿರೂಪಣೆಯಿದೆ.

ವೇದಪುರಾಣ ಧರ್ಮಶಾಸ್ತ್ರಗಳಲ್ಲಿ ಪ್ರಾಕೃತರಿಗೆ ಹೇಳಿರುವ ಪಿತೃಮೇಧಕ್ಕಿಂತಲೂ[೪] ಅಪ್ರಾಕೃತರಾದ ಶಿವವ್ರತಿಗಳಿಗೆ ಆಗಮೋಕ್ತವಾದ ಶಿವಮೇಧವೇ ಶ್ರೇಷ್ಠವಾದುದು. ಈ ಶಿವಮೇಧಕ್ಕೆ 'ವಿಶಿಷ್ಟಪಿತೃಮೇಧಾ' ಎಂದು ಹೆಸರು. "ವಿಶಿಷ್ಟಃ ಪಿತೃಮೇಧೋಽಯಂ ಶಿವಮೇಧ ಇತೀರ್ಯತೇ".[೫]

ಶಿವಲಿಂಗಧಾರಿಗಳಾದ ದ್ವಿಜರು (ಶಾಂಭವವ್ರತಿಗಳು) ಗೃಹಸ್ಥರಾಗಿರಲಿ ಯತಿಗಳಾಗಿರಲಿ ಅವರು ಪುನರಾವೃತ್ತಿರಹಿತರಾದ್ದರಿಂದ ಖನನ (ಸಮಾಧಿ)[೬] ಮಾಡಬೇಕೇ ಹೊರತು ದಹನ ಮಾಡಬಾರದು. ಹಾಗೊಂದು ವೇಳೆ ದಹನ ಮಾಡಿದರೆ ಕರ್ತನಿಗೆ ಬ್ರಹ್ಮಹತ್ಯಾದೋಷ ಪ್ರಾಪ್ತವಾಗುವುದು.

'ಶಿವಲಿಂಗಧರೋ ವಿಪ್ರೋ ವಿಪನ್ನಸ್ತಂ ನ ದಾಹಯೇತ್।
ಯದಿ ವಾ ದಾಹಯೇತ್ತಸ್ಯ ಬ್ರಹ್ಮಹತ್ಯಾ ಸದಾ ಭವೇತ್॥'
'ಗೃಹೀವಾಽಥ ಯತಿರ್ವಾಪಿ ಲಿಂಗಧಾರೀ ತನುಂ ತ್ಯಜೇತ್।
ನ ದಹೇತ್ ತಸ್ಯ ದೇಹಂ ತು ಸಮಾಧೌ ಗೋಪಯೇತ್ ತದಾ॥'[೭]

ಶಾಂಭವವ್ರತಿನೋ ದೇಹಂ ದಹೇದ್ ಯೋ ಮೂಢಚೇತನಃ।
ನರಕೋ ದಹ್ಯತೇ ಸೋಽಯಂ ಸರ್ವದಾ ಯಮಕಿಂಕರೈಃ॥"[೮]

ಈ ವಿಷಯದಲ್ಲಿ ನಂದಿಕೇಶ್ವರ ಶಿವಾಚಾರ್ಯರು ತಮ್ಮ ಲಿಂಗಧಾರಣ ಚಂದ್ರಿಕೆಯ ಉತ್ತರಭಾಗದಲ್ಲಿ ವಿಶೇಷವಾಗಿ ವಿಚಾರ ಮಾಡಿದ್ದಾರೆ. ತತ್ರಾಪಿ ವೇದಾಗಮೇತಿಹಾಸ ಪುರಾಣಾದಿ ವಾಕ್ಯಗಳನ್ನು ಉಪಬೃಂಹಣ ಮಾಡಿಕೊಂಡು ಆಕ್ಷೇಪ ಸಮಾಧಾನಗಳೊಂದಿಗೆ ಖನನ ಅಥವಾ ಭೂನಿಕ್ಷೇಪ ವಿಧಿಯನ್ನು ಬಲವಾಗಿ ಶಾಸ್ತ್ರೀಯವಾಗಿ ಸಮರ್ಥಿಸಿದ್ದಾರೆ,

---

೪. ಶುಕ್ಲಯಜುರ್ವೇದದ ಮಾಧ್ಯಂದಿನ ಸಂಹಿತೆಯಲ್ಲಿ, ಗರುಡಪುರಾಣದಲ್ಲಿ, ಧರ್ಮಸಿಂಧು, ನಿರ್ಣಯಸಿಂಧು, ಮುಂತಾದ ಧರ್ಮಶಾಸ್ತ್ರ ಸಂಗ್ರಹ ಗ್ರಂಥಗಳಲ್ಲಿ ಪಿತೃಮೇಧದ ವಿಶೇಷ ವಿಚಾರವು ಹೇಳಲ್ಪಟ್ಟಿದೆ.

೫. ಚಂದ್ರಜ್ಞಾನಾಗಮ, ಚ.ಪಾ., ೧.೭.

೬. ವೈದಿಕ ಪಿತೃಮೇಧದಲ್ಲಿಯೂ ಪ್ರಾಕೃತರಾದ ಗೃಹಸ್ಥರಿಗೆ ದಹನ ವಿಧಿಯೂ, ಅಪ್ರಾಕೃತ ಸಂನ್ಯಾಸಿಗಳಿಗೆ ಖನನವಿಧಿ, ತ್ಯಾಗವಿಧಿ (ಜಲಸಮಾಧಿ)ಗಳು ಹೇಳಲ್ಪಟ್ಟಿವೆ. "ಗಂಗಾಯಾಂ ತ್ಯಜೇತ್ ಅಥವಾ ಗರ್ತೇ ಪೂರಯೇತ್".

೭. ಚಂದ್ರಜ್ಞಾನಾಗಮ, ಚ.ಪಾ., ೧.೯,೧೩.

೮. ಮಕುಟಾಗಮ, ಚ.ಪಾ., ೧.೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಥಾಪಿಸಿದ್ದಾರೆ. ಅದು ಪ್ರತ್ಯೇಕವಾದ ಪ್ರಬಂಧವಾಗುವಷ್ಟು ವಿಸ್ತಾರವಾಗಿದೆ. ಎಲ್ಲ ಉದಾಹರಣೆಗಳೂ ಹಾಗೂ ಆಧಾರಗಳು ಅಲ್ಲಿ ಸಂಗ್ರಹೀತವಾಗಿವೆ.[೯] ಅವರ ಅಭಿಪ್ರಾಯಗಳ ಸಾರವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ದಹನ ವಿಧಿಗಿಂತಲೂ ಖನನವಿಧಿಯೇ ಶ್ರೇಷ್ಠವಾದುದು:

(i) ಪೃಥಿವಿಯು (ನಿವೃತ್ತಿಕ್ರಮದಿಂದ) ಮೊದಲನೆಯ ತತ್ತ್ವವೂ, ಪ್ರತ್ಯಕ್ಷತತ್ತ್ವವೂ, ಪ್ರಧಾನತತ್ತ್ವವೂ, ಸರ್ವತತ್ತ್ವಮಯವೂ ಹಾಗೂ ಸಮಸ್ತ ಜೀವರಾಶಿಗಳಿಗೂ ಆಧಾರಭೂತತತ್ವವೂ ಆದ್ದರಿಂದ ವಸ್ತುವನ್ನು ಆ ಭೂತದ ಗರ್ಭದಲ್ಲಿಯೇ ಗೋಪನ ಮಾಡುವುದು ವಿಹಿತ.

"ಕರ್ದಮೇನ ಪ್ರಜಾಃ ಭೂತಾ ಮಯಿ ಸಂಭವ ಕರ್ದಮ"

ಹೇಕರ್ದಮ[೧೦] (ಪೃಥಿವಿಯೆ!) ಸಮಸ್ತಜೀವರಾಶಿಗಳೂ ನಿನ್ನಿಂದಲೇ ಹುಟ್ಟಿದವು. ಮರಣ ಹೊಂದಿದ ಮೇಲೆ ನಿನ್ನ ಗರ್ಭದಲ್ಲಿ ಇರಿಸಲ್ಪಟ್ಟವು. ಮೃತ್ತಿಕೆಯಿಂದ ಆಚ್ಛಾದಿಸಿ ನನ್ನ ಪಾಪಗಳನ್ನು ಕಳೆದು ನನ್ನನ್ನು ಕಾಪಾಡು.

(ii) ಅತ್ಯಾಶ್ರಮಿಗಳ ದೇಹ ಮತ್ತು ಧರಿಸಿದ ಲಿಂಗಗಳೆರಡೂ ಪಾರ್ಥಿವವಾಗಿರುವುದರಿಂದ (ಪೃಥಿವಿಗೆ ಸಂಬಂಧಿಸಿದ್ದರಿಂದ) ಅಂಗ-ಲಿಂಗಗಳೆರಡನ್ನೂ ಭೂಮಿಯಲ್ಲಿಯೇ ನಿಕ್ಷೇಪಮಾಡಬೇಕು (ಹೂಳಬೇಕು).

'ಶರೀರಂ ಪಾರ್ಥಿವಂ ಬಾಹ್ಯಂ ಲಿಂಗಂ ಯತ್ತದ್ಧಿ ಪಾರ್ಥಿವಂ।
ಉಭಯಂ ಪಾರ್ಥಿವಂ ಯಸ್ಮಾತ್ ಗೋಪ್ಯಂ ರಂಧ್ರೇ ತು ಪಾರ್ಥಿವೇ॥'[೧೧]

'ಶರೀರಂ ಪಂಚಭೂತಾಖ್ಯಂ ತತ್ತ್ವಂ ತತ್ತ್ವೇನ ಯೋಜಯೇತ್।
ತತ್ರಾಪಿ ಪೃಥಿವೀತತ್ತ್ವೇ ಯೋಜನಂ ಮೋಕ್ಷಸಾಧನಮ್॥'[೧೨]

ಈ ಶರೀರಕ್ಕೆ ಪಂಚಭೌತಶರೀರ ಎಂದು ಹೆಸರು. ಸತ್ತಮೇಲೆ ಆಯಾಯಾ ತತ್ತ್ವಗಳಲ್ಲಿ ಸೇರಿಸಬೇಕು. ಆದರಲ್ಲಿಯೂ ಪೃಥ್ವೀತತ್ತ್ವದಲ್ಲಿ ಸೇರಿಸುವುದರಿಂದ ಎಲ್ಲಾ ತತ್ತ್ವಗಳೊಡನೆ ಸೇರಿದಂತಾಗಿ ಮೋಕ್ಷಪ್ರಾಪ್ತಿಯಾಗುವುದು.[೧೦]

'ಬ್ರಹ್ಮಚಾರೀ ಗೃಹಸ್ಥೋವಾ ವಾನಪ್ರಸ್ಥೋ ಯತಿಸ್ತು ವಾ।
ಯಸ್ಸುಲಿಂಗಾಂಗಸಂಯುಕ್ತೋ ಸ ಏವಾತ್ಯಾಶ್ರಮೀ ಭವೇತ್॥'[೧೩]

ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ ಯಾರೇ ಆಗಿರಲಿ ಯಾವ ಆಶ್ರಮದಲ್ಲಿರಲಿ ಲಿಂಗಧಾರಿಯಾದವನು ಅತ್ಯಾಶ್ರಮೀ ಎನಿಸಿಕೊಳ್ಳುತ್ತಾನೆ. ಮತ್ತು

---

೯. ಆಸಕ್ತರು ಲಿಂಗಧಾರಣಚಂದ್ರಿಕೆಯ ಉತ್ತರಭಾಗವನ್ನು ನೋಡುವುದು.

೧೦. ಕರ್ದಮ ಪದವ ಉಪಲಕ್ಷಣೆಯಿಂದ ಅಪ್-ತೇಜೋ-ವಾಯು-ಆಕಾಶಾದಿಗಳನ್ನು ಗ್ರಹಿಸಬೇಕು.

೧೧. ವಾತುಲಾಗಮ.

೧೨. ಪಾರಾಶರಸ್ಮೃತಿ.

೧೩. ವಾತುಲಾಗಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(iii) ಲಿಂಗ ವ್ರತಿಗಳ ದೇಹವು ರುದ್ರಾಗ್ನಿ ಅಥವಾ ಶಿವಾಗ್ನಿಯಿಂದ ಮೊದಲೇ ದಗ್ಧವಾಗಿರುವಾಗ ಪುನಃ ಅದನ್ನು ದಹನಮಾಡಲು ಸಾಧ್ಯವಿಲ್ಲ.

'ಶಿವಭಕ್ತೋ ಮೃತೋ ಯಸ್ತು ದಹನಾದಿರ್ನ ವಿದ್ಯತೇ।
ದಗ್ಧಸ್ಯ ದಹನಂ ನಾಸ್ತಿ ಪಕ್ವಸ್ಯ ಪಚನಂ ನಹಿ॥
ಜ್ಞಾನಾಗ್ನಿದಗ್ಧದೇಹಾನಾಂ ನ ಚ ದಾಹೋ ನ ಚ ಕ್ರಿಯಾ॥'[೧೪]

(iv) ಉತ್ಕ್ರಾಂತಿ ಪೂರ್ವದಲ್ಲಿಯೇ ತನ್ನಲ್ಲಿ ಅಗ್ನಿಯನ್ನು ಆರೋಪಿಸಿಕೊಳ್ಳಲಾಗಿದೆ.

(v) ದಹನವು ಕೇವಲ ಪಿತೃಲೋಕ ಸಾಧನವಾದರೆ ಖನನವು ಶಿವಸಾಯುಜ್ಯವನ್ನು ತಂದುಕೊಡುತ್ತದೆ.

ಸಮಾಧಿಸಂಸ್ಕ್ರಿಯಾ ಸಾಕ್ಷಾತ್ ಮತ್ಸಾನ್ನಿಧ್ಯಪ್ರದಾಯಿನೀ।
ದಹನಂ ಪ್ರಥಿತಂ ಲೋಕೇ ಪಿತೃಲೋಕೈಕಸಾಧನಮ್॥[೧೫]

(vi) ಶಿವವ್ರತಿಯ ದೇಹವನ್ನು ದಹನ ಮಾಡಿದರೆ ಶಿವಾಲಯವನ್ನು ಶಿವಲಿಂಗವನ್ನು ಹಾಗೂ ಶಿವನನ್ನೇ ದಹನ ಮಾಡಿದಂತಾಗುತ್ತದೆ.

(vii) ಮಹಾಭಾರತ, ಸದಾನಂದೋಪನಿಷತ್ತು, ಸ್ಕಾಂದಪುರಾಣ, ಪದ್ಮಪುರಾಣ, ಶಿವರಹಸ್ಯ, ವೀರಾಗಮಾದಿ ಪ್ರಮಾಣಗ್ರಂಥಗಳಲ್ಲಿ ಖನನವಿಧಿಯೇ ಶ್ರೇಷ್ಠವೆಂದು ಪ್ರತಿಪಾದಿಸಿರುವುದರಿಂದ ದಹನ ವಿಧಿಗಿಂತಲೂ ಖನನ ವಿಧಿಯೇ ಶ್ರೇಷ್ಠ ಹಾಗೂ ವಿಹಿತ.[೧೬]

(viii) ಜ್ಞಾನರೂಪವಾದ ಅಥವಾ ಭಾವನಾತ್ಮಕವಾದ ಬಯಲು ಸಮಾಧಿಯನ್ನು[೧೭] ಒಪ್ಪುವ ವಚನಕಾರರೂ ಸಹ ಖನನವಿಧಿಯನ್ನೇ ಒಪ್ಪಿದ್ದಾರೆ.

ಬಸವಣ್ಣನವರು-

'ದೇವರ ಪಾದಕ್ಕೆ ಸಂದಲ್ಲಿ
ಆತನ ಶರೀರವ ಸಮಾಧಿಯಲ್ಲಿ ನಿಕ್ಷೇಪವಂ ಮಾಡಿ
ಲಿಂಗಭಕ್ತರಿಗೆ ವಿಭೂತಿವೀಳೆಯವಂ ಕೊಡುವುದು
ಸದಾಚಾರ.'[೧೮]

---

೧೪. ಲಿಂಗಧಾರಣ ಚಂದ್ರಿಕಾ.
೧೫. ಮಕುಟಾಗಮ, ಚ.ಪಾ., ೧.೨೩.
೧೬. ನಿಕ್ಷಿಪೇದ್ಭೂಮೌ ಶರೀರಂ ಜೀವ ವರ್ಜಿತಂ। -ಮಹಾಭಾರತ
ಲಿಂಗಕಾಯಸ್ಯ ದಹನಂ ತು ವಿವರ್ಜಯೇತ್। -ಸ್ಕಾಂದಪುರಾಣ
ಲಿಂಗಾಂಗೀ ಯದಿ ವಾ ಮುಕ್ತೋ ದಗ್ಧುಂ ನಾರ್ಹತಿಕರ್ಮಣಾ। -ಪದ್ಮಪುರಾಣ
೧೭. ಬಯಲು ಸಮಾಧಿಯೆಂದರೆ- ಶಿವಯೋಗಿಗಳು ತಾವೇ ಏಕಾಂತ ಸ್ಥಳದಲ್ಲಿ ಹಿಟ್ಟುಕಲ್ಲಿನ ಗೋಮುಖಾಕಾರದ ಗುಹೆಯನ್ನು ಮಾಡಿಕೊಂಡು ತ್ರಿಕೋಣೆಯಲ್ಲಿ ಪದ್ಮಾಸನ ಹಾಕಿಕೊಂಡು ಜ್ಯೋತಿರ್ಲಿಂಗವನ್ನು ಅನಿಮಿಷಸ್ಥಾನಕ್ಕೆ ತಂದುಕೊಂಡು ಇಷ್ಟಲಿಂಗದೊಡನೆ ಪ್ರಾಣಲಿಂಗದಲ್ಲಿ ಬಯಲಾಗುವುದು. ಪ್ರಭುಲಿಂಗಲೀಲೆ ಹಾಗೂ ಶೂನ್ಯಸಂಪಾದನೆಯಲ್ಲಿ ಬರುವ ಅನಿಮಿಷಯ್ಯ-ಅಲ್ಲಮರ ಪ್ರಸಂಗ ನೋಡಿ.
೧೮. ಸಂ. ೧, ವಚನ ೧೨೩೦.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಚನ್ನಬಸವಣ್ಣನವರು-

'ಅಟ್ಟುದನುಡುವರೆ ಸುಟ್ಟುದ ಸುಡುವರೆ
ಬೆಂದನುಲಿಯ ಸಂಧಿಸಬಹುದೆ?'

ಎಂದು ಹೇಳಿ 'ದಗ್ಧಸ್ಯ ದಹನಂ ನಾಸ್ತಿ.....' ಈ ಶ್ಲೋಕವನ್ನೇ ಉದಾಹರಿಸಿದ್ದಾರೆ.

ಅಂಬಿಗರ ಚೌಡಯ್ಯನವರು-

'ಸತ್ತಡೆ ಸಂಗಡ ಹೂಳಿಸಿಕೊಂಬ ಲಿಂಗವು
ತನ್ನ ಕೊರಳಲ್ಲಿ ಹತ್ತೆಯಾಗಿ ಕಟ್ಟಿರಲು
ನಾನು ಸತ್ಯಶುದ್ಧ ಶಿವಭಕ್ತನೆಂದರಿಯದೆ' ಎಂದಿದ್ದಾರೆ.

ಈ ಎಲ್ಲಾ ಕಾರಣಗಳಿಂದ ದಹನ ವಿಧಿಗಿಂತಲೂ ಖನನವಿಧಿಯೇ (ಸುಡುವುದಕ್ಕಿಂತಲೂ ಹೂಳುವುದೇ) ಶ್ರೇಷ್ಠವಾದದ್ದು ಎಂದು ಧಾರಾಳವಾಗಿ ಹೇಳಬಹುದು.

ಉತ್ಕ್ರಾಂತಿ ಸಮಯಾಚಾರವಿಧಿ:

'ಉತ್ಕ್ರಾಂತಿ' ಎಂದರೆ ಜೀವಿಯ ಒಂದು ಮರಣಾವಸ್ಥೆ.

"ಹೃತ್ಪುಂಡರೀಕಸ್ಥಸ್ಯ ಪಂಚಮಹಾಭೂತಪ್ರಾಣೇಂದ್ರಿಯಮನಃಪ್ರಭೃತಿ-ಚತುರಂಗಬಲಪರಿವೃತಸ್ಯ ಜೀವಾಖ್ಯಸ್ಯ ರಾಜ್ಞಃ ಸ್ವರ್ಗನರಕಶಿವಲೋಕಾದಿ-ರಾಷ್ಟ್ರದರ್ಶನಾರ್ಥಂ ನಾಡೀದ್ವಾರಾ ದೇಹಾಖ್ಯಾತಃ ಪುರಾದ್‌ಬಹಿಃ ನಿರ್ಗಮನರೂಪಾ ಉತ್ಕ್ರಾಂತಿಃ"

ಹೃದಯಕಮಲ ಮಧ್ಯದ ಕರ್ಣಿಕಾವಾಸನಾದ ಜೀವನು ಪಂಚಮಹಾಭೂತ ಪ್ರಾಣ-ಇಂದ್ರಿಯ-ಮನಸ್ಸೆಂಬ ಚತುರಂಗಬಲ ಸೈನ್ಯಸಮೇತನಾಗಿ ಸ್ವರ್ಗ, ನರಕ, ಶಿವಲೋಕ ಮುಂತಾದ ರಾಷ್ಟ್ರದರ್ಶನಕ್ಕಾಗಿ ದೇಹವೆಂಬ ಪಟ್ಟಣದಿಂದ ನಾಡಿ ಎಂಬ ಮಾರ್ಗವಾಗಿ ಹೊರಹೊರಡುವ ಅವಸ್ಥೆಗೆ ಉತ್ಕ್ರಾಂತಿ ಎಂದು ಹೆಸರು.

ಯಮನಿಯಮಾದ್ಯಷ್ಟಾಂಗಯೋಗಸಿದ್ಧರಾದ ಯೋಗಿಗಳಿಗೆ ರೇಚಕಾದಿ ಪ್ರಾಣಾಯಾಮದ ಬಲದಿಂದ ಸುಷುಮ್ನಾನಾಡಿಯ ಮುಖಾಂತರ ಶಿರೋರಂಧ್ರದ ಮಾರ್ಗವಾಗಿಯೂ; ಪೂರ್ತಕರ್ಮಿಗಳಿಗೂ ಇಷ್ಟಕರ್ಮಿಗಳಿಗೂ[೧೯] ವಾಮನಾಸಾಪುಟದ (ಮೂಗಿನ ಎಡಹೊಳ್ಳೆಯ) ಈಡಾ ಎಂಬ ನಾಡಿಯ ಮಾರ್ಗವಾಗಿಯೂ; ಬ್ರಹ್ಮರುದ್ರಾದಿ ಮೂರ್ತಿಯ ಉಪಾಸಕರಿಗೆ ದಕ್ಷಿಣ ನಾಸಾಪುಟದ (ಬಲಹೊಳ್ಳೆ) ಪಿಂಗಳಾನಾಡಿಯ ಮಾರ್ಗವಾಗಿಯೂ, ಪಾಪಿಗಳಿಗೆ ಗುದಗುಹ್ಯಗಳ ಮಾರ್ಗವಾಗಿಯೂ, ಸಾಮಾನ್ಯ ಜೀವಜಾಲಕ್ಕೆ ಶ್ರೋತ್ರ-ನೇತ್ರ-ಜಿಹ್ವೆ-ನಾಸಿಕ-ತ್ವಕ್ ಇಂದ್ರಿಯಗಳ ಮಾರ್ಗವಾಗಿಯೂ ಜೀವನ ಉತ್ಕ್ರಾಂತಿಯಾಗುವುದು. ಆದರೆ ಕಾಳಿದಾಸ ಅವರವರ ಕರ್ಮಗಳಿಗನುಗುಣವಾಗಿ

---

೧೯. ಕೆರೆ, ಬಾವಿ, ಉದ್ಯಾನ, ಅರವಂಟಿಗೆ, ಅನ್ನಸತ್ರಾದಿ ಲೋಕೋಪಕಾರಕ ಕರ್ಮ ಮಾಡುವವರಿಗೆ ಪೂರ್ತಕರ್ಮಿಗಳೆಂದೂ; ಅಶ್ವಮೇಧ ಜ್ಯೋತಿಷ್ಟೋಮಾದಿ ಯಾಗಗಳನ್ನು (ಇಷ್ಟಿ) ಮಾಡುವವರಿಗೆ ಇಷ್ಟಕರ್ಮಿಗಳೆಂದೂ ಹೆಸರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಿನ್ನಭಿನ್ನ ಮಾರ್ಗಗಳಲ್ಲಿ ಜೀವಿಗಳು ಹೋಗುತ್ತಾರೆನ್ನುತ್ತಾನೆ. "ಪರಲೋಕಜುಷಾಂ ಸ್ವಕರ್ಮಭಿಃ ಗತಯೋ ಭಿನ್ನಪಥಾ ಹಿ ದೇಹಿನಾಂ॥[೨೦]

ಆದರೆ ವಿಶಿಷ್ಟವಾದ ಶಿವದೀಕ್ಷಾಸಂಪನ್ನರಾದವರು ಹೃದಯಮಧ್ಯದಲ್ಲಿರುವ ಮಹಾಲಿಂಗದಲ್ಲಿಯೇ ಲೀನವಾಗಿ ಪೂರ್ಣರೂಪದಲ್ಲಿ ಜೀವನ್ಮುಕ್ತಿಯು ಸಿದ್ಧಿಸುತ್ತಾಗಿ ಗಗನದಂತೆ ಗಮನಾಗಮನವಿಲ್ಲದುದರಿಂದ ಅವರುಗಳಿಗೆ ನಾಡಿಮಾರ್ಗದ ನಿಯಮವಿರುವುದಿಲ್ಲ. ಅವರಿಗೆ ಕಾಶಿಯಲ್ಲಾಗಲೀ ಹೀನಾಶ್ರಯದಲ್ಲಾಗಲೀ ಅರಿವು ಮರೆವುಗಳಿಂದಾಗಲಿ ಯಾವ ಪ್ರಕಾರದಿಂದ ಪ್ರಯಾಣ ಮಾಡಿದರೂ ನಿಜಮೋಕ್ಷವು ನಿಶ್ಚಯವು. ಅಲ್ಲದೆ ಕಾಶಿಯಲ್ಲಿ ಮೃತರಾದ ಯತಿಗಳಿಗೆ ದೇವತ್ವವೇ ಪ್ರಾಪ್ತವಾಗುತ್ತದೆ.

ಕಾಶ್ಯಾಂ ಮೃತಾನಾಂ ಸರ್ವೇಷಾಂ ಯತೀನಾಂ ಲಿಂಗಧಾರಿಣಾಮ್।
ದೇವತ್ವಮೇವ ಭವತಿ ಪಿತೃತ್ವಂ ನೈವ ವಿದ್ಯತೇ॥[೨೧]

ಇಂಥ ಉತ್ಕ್ರಾಂತಿ ವಿಧಿಯಲ್ಲಿ ಮರಣಾವಸ್ಥೆಯ ದೃಷ್ಟಿಯಿಂದ ಎರಡು ವಿಧ. (ಅ) ಉತ್ಕ್ರಾಂತಿಪೂರ್ವ ಸಮಯಾಚಾರವಿಧಿ (ಆ) ಉತ್ಕ್ರಾಂತ್ಯುತ್ತರ ಸಮಯಾಚಾರ ವಿಧಿ.

(ಅ) ಉತ್ಕ್ರಾಂತಿಪೂರ್ವ ಸಮಾಯಾಚಾರವಿಧಿ:

ಉತ್ಕ್ರಮಣೇಚ್ಛವಾದ ಮನುಷ್ಯನು ನಿರಂತರವಾದ ಪ್ರಣವಪಂಚಾಕ್ಷರ ಜಪಮಾಡುತ್ತಾ ಮನಸ್ಸನ್ನು ಪರಶಿವನಲ್ಲಿ ನೆಲಗೊಳಿಸಬೇಕು. ನಂತರ ನಿಮಿತ್ತಗಳಿಂದ ತನ್ನ ಮರಣವನ್ನು ತಿಳಿದು ಸುಖೋತ್ಕ್ರಮಣಕ್ಕಾಗಿ ಭಸ್ಮದಿಂದಲಾಗಲೀ ಜಲದಿಂದಾಗಲೀ ಸ್ನಾನ ಮಾಡಿ ಶ್ವೇತವಸ್ತ್ರವನ್ನು ಧರಿಸಿ ಆಗಮೋಕ್ತರೀತ್ಯಾ ತತ್‌ಸ್ಥಾನಗಳಲ್ಲಿ ಭಸ್ಮರುದ್ರಾಕ್ಷಧಾರಣೆ ಮಾಡಿಕೊಂಡು ಕುಶಾಸನದಲ್ಲಿ (ದರ್ಭೆಯ ಹಾಸಿಗೆಯಲ್ಲಿ) ಕುಳಿತು "ಯಾತೇ ಅಗ್ನೇ........." ಮಂತ್ರದಿಂದ ತನ್ನಲ್ಲಿ ಅಗ್ನಿಯನ್ನು ಆರೋಪಿಸಿಕೊಂಡು 'ಅಗ್ನಿರಿತಿ ಭಸ್ಮ......' ಮಂತ್ರದಿಂದ ಸರ್ವಾಂಗಗಳಿಗೂ ಭಸ್ಮ ಸ್ಪರ್ಶಮಾಡಿ ನಂತರ ಆರೋಪಿತವಾದ ಅಗ್ನಿಯನ್ನು ಷಡಧ್ವಶುದ್ಧಿ[೨೩]ಗಳಿಂದ ಜಲದಲ್ಲಿ ಹೋಮ ಮಾಡಬೇಕು. ನಂತರ ಶಿವಸಾಯುಜ್ಯಸಿದ್ಧಿಗಾಗಿ, ಗೋ ಸುವರ್ಣ, ಭೂಮಿ, ಶಿವಲಿಂಗ ಇವುಗಳನ್ನು ವೀರಮಾಹೇಶ್ವರರಿಗೆ ದಾನಮಾಡಬೇಕು.[೨೪]

---

೨೦. ರಘುವಂಶ, ೮.

೨೧. ಕಾಶ್ಯಾಂ- ಎಂದರೆ ಕಾಶೀಕ್ಷೇತ್ರದಲ್ಲಿ.

೨೨. ಇಲ್ಲಿಂದ ಮುಂದೆ ನೇರವಾಗಿ ಪಠ್ಯವನ್ನೇ ಸರಳವಾಗಿ ಅನುವಾದಿಸಿದೆ.

೨೩. ಷಡಧ್ವಶುದ್ಧಿ : ವರ್ಣ, ಪದ, ಮಂತ್ರ, ಕಲಾ, ಭುವನ, ತತ್ವ.

೨೪. "ಲಿಂಗಾಂಗಸಂಬಂಧಿಯಾದ ಶರಣನು ತನ್ನಂತ್ಯಕಾಲದಲ್ಲಿ ಕ್ರಿಯಾಚಾರ ಬಾಂಧವರನ್ನು ಕರೆಸಿಕೊಂಡು ಅವರೊಡನೆ ತನ್ನ ಸ್ಥಿತಿಗತಿಗಳನ್ನು ಹೇಳಿಕೊಂಡು ಅವರ ಸಾಕ್ಷಿಯಾಗಿ ವಿಭೂತಿ ವೀಳೆಕೊಟ್ಟು ಅವರಪ್ಪಣೆಯಂ ಪಡೆದು ಅತ್ಯಂತ ಸಂಭ್ರಮದಿಂದ ಮನೆಯೊಳಗೆ ಮದುವೆ ಮಾಂಗಲ್ಯವಾದ ಹಾಗೆ ಹರುಷಮಂ ತಾಳ್ದು ಅವರ ಕೂಡ ಜಂಗಮ ಮಹಾಪಾದ ಪೂಜೆಯಂ ಮಾಡಿಸಿ ತೀರ್ಥಪ್ರಸಾದವನ್ನು ಪಡೆದು ಅವರಿಗೆ ತೃಪ್ತಿಯಂ ಮಾಡಿಸಿ ತಾನು ಮತ್ತೆ ಸತ್‌ಕ್ರಿಯಾ ಸಮರಸಗಣಂಗಳ ಕೂಡೆ ಸಹಭೋಜನಮಂ ಮಾಡುವುದು" ಎಂದಿದೆ. ವೀರಶೈವಧರ್ಮಸಿಂಧು-ಮೂಲಸಂಸ್ಕೃತ-ಪಂಡಿತಾರಾಧ್ಯರು, ಕನ್ನಡಕ್ಕೆ-ಪಾಲ್ಕುರಿಕೆ ಸೋಮಾರಾಧ್ಯ).

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಒಂದೊಂದು ದಾನವೂ ಒಂದೊಂದರ ಸಿದ್ಧಿಗಾಗಿವೆ. ಸುಖೋತ್ಕ್ರಾಂತಿ ಸಿದ್ಧಿಗಾಗಿ ಗೋದಾನ, ಹಿರಣ್ಯಗರ್ಭನಿಂದ ಸೇವಿತನಾದ ಮಹಾದೇವನ ತೃಪ್ತಿಗಾಗಿ ಸುವರ್ಣದಾನ, ಜನನ ಮರಣಗಳ ಆವರ್ತದಿಂದ ಮುಕ್ತಿಗಾಗಿ ಶಿವಲಿಂಗ ಅಥವಾ ಸಜ್ಜಿಕೆದಾನ, ಶತರುದ್ರರೂಪನಾದ ವಿಶ್ವನಾಥನ ತೃಪ್ತಿಗಾಗಿ ಭೂದಾನ ಮಾಡಬೇಕು. ನಂತರ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಕಾರಣವಾದ ತತ್ತ್ವಗಳನ್ನು ಆಯಾಯ ಲಿಂಗತತ್ತ್ವಗಳಲ್ಲಿ ವಿಲೀನಗೊಳಿಸಬೇಕು. ಅದು ಹೇಗೆಂದರೆ- 'ಆಯುಷಃ ಪ್ರಾಣಮ್......' ಎಂಬ ಮಂತ್ರವನ್ನು ಪಠಿಸುತ್ತಾ ಗುರುದತ್ತವಾದ ಲಿಂಗವೇ ನಾಮರೂಪಕ್ರಿಯೆಗಳಿಂದ ಎನ್ನ ಸರ್ವಾಂಗ ಹಾಗೂ ಸರ್ವೇಂದ್ರಿಯಗಳಲ್ಲಿ ಆಚಾರಾದಿಲಿಂಗರೂಪದಲ್ಲಿ ಬೆಳಗುತ್ತಿದೆ ಎಂಬುದನ್ನು ಆ ಗುರೂಪದೇಶದಿಂದ ತಿಳಿದು ಪರಿಭಾವಿಸುತ್ತಾ ಅದ್ವೈತಾನಂದವನ್ನು ಅನುಭವಿಸಬೇಕು. ಇದಕ್ಕೆ ಸರ್ವಾಂಗಲಿಂಗ ಸಾಹಿತ್ಯವಿಧಿ ಎಂದು ಹೆಸರು.

ಅನಂತರ ಆತ್ಮಾಶ್ರಮಾಚರಣೆಯಲ್ಲಿ, ಅಷ್ಟಾವರಣಸಂಪನ್ನತೆಯಲ್ಲಿ, ಪಂಚಾಚಾರ ಪರಿಪಾಲನೆಯಲ್ಲಿ ಮನೋವಾಕ್ ಕರ್ಮಗಳಲ್ಲಿ ಉಂಟಾಗಿರಬಹುದಾದ ದೋಷಗಳ ನಿವೃತ್ತಿಗಾಗಿ ಹಾಗೂ ಪೂತಾತ್ಮನಾಗಿ ಶಿವಸಾಯುಜ್ಯವನ್ನು ಪಡೆಯಲು ಗುರು-ಜಂಗಮರನ್ನು ಪೂಜಿಸಿ ಅವರ ಪಾದೋದಕವನ್ನು ಪಾನ ಮಾಡಬೇಕು.[೨೫]

ತದನಂತರ ಪರಶಿವನಲ್ಲಿ ಲೀನವಾಗುವುದಕ್ಕಾಗಿ 'ಪ್ರಾಯೋಪವೇಶ'[೨೫] ಎಂಬ ವ್ರತವನ್ನು ಕೈಗೊಳ್ಳಬೇಕು. ಪ್ರಾಣ ಹೋಗುವ ಸಮಯದಲ್ಲಿ ಅವನ ಮಕ್ಕಳಾಗಲಿ, ಶಿಷ್ಯರಾಗಲಿ, ಬಂಧುಗಳಾಗಲಿ ಷಡಕ್ಷರಮಂತ್ರವನ್ನು ಮತ್ತು ಉಪನಿಷನ್ಮಂತ್ರಗಳನ್ನು ಬಲಗಿವಿಯಲ್ಲಿ ಕೇಳಿಸಬೇಕು. ಆಮೇಲೆ ಉತ್ಕ್ರಾಂತಿ ಸಮಯ ಹತ್ತಿರವಾದಾಗ ಅರ್ಥಾತ್ ವಾಕ್‌ಮನಸ್ಸಿನೊಡನೆ, ಮನಸ್ಸು ಪ್ರಾಣದೊಡನೆ, ಪ್ರಾಣತೇಜಸ್ಸಿನಲ್ಲಿ, ತೇಜಸ್ಸು ಪರಾಶಕ್ತಿಯಲ್ಲಿ ಸೇರಿಹೋದಾಗ 'ಶಿಖಿಕರ್ಪೂರನ್ಯಾಯ'ದಂತೆ ಲಿಂಗದಲ್ಲಿ ಅಂಗಲೀನವಾದುದರ ಸಂಕೇತವಾಗಿ ಬೃಹದಾರಣ್ಯಕೋಪನಿಷತ್ತಿನ 'ಅಣುಃ ಪಂಥಾ ವಿತತಃ ಪುರಾಣೋ...'[೨೬] ಎಂಬ ಮಂತ್ರವನ್ನು ಪಠಿಸುತ್ತಾ ಕರ್ಪೂರವನ್ನು ಬೆಳಗಬೇಕು.

(ಆ) ಉತ್ಕ್ರಾಂತ್ಯುತ್ತರ ಸಮಯಾಚಾರವಿಧಿಃ

ಉತ್ಕ್ರಮಣವಾದ ನಂತರ ಸತ್ತವನ ಪರವಾಗಿ ಕರ್ತನು[೨೭] ಅಥವಾ ಕರ್ತಳು ಸ್ನಾನಮಾಡಿ ಶ್ವೇತವಸ್ತ್ರ ಧರಿಸಿ ವಿಭೂತಿರುದ್ರಾಕ್ಷಧಾರಣೆ ಮಾಡಿಕೊಂಡು

---

೨೫. ಪ್ರಾಣತ್ಯಾಗ ಮಾಡಲು ದೃಢಸಂಕಲ್ಪ ಮಾಡಿ ನಿಶ್ಚಿತವಾದೊಂದು ಸ್ಥಾನದಲ್ಲಿ ಕುಳಿತುಕೊಳ್ಳುವುದು.

೨೬. ಅಣುಃ ಪಂಥಾ ವಿತತಃ ಪುರಾಣೋ ಮಾಂ ಸ್ಪೃಷ್ಟೋಽನುವಿತ್ತೋ ಮಯೈವ।
ತೇನ ಧೀರಾ ಅಪಿಯಂತಿ ಬ್ರಹ್ಮವಿದಃ ಸ್ವರ್ಗಂ ಲೋಕಮಿತ್ತೋ ಊರ್ಧ್ವಂ ವಿಮುಕ್ತಾಃ॥
-ಬೃಹದಾರಣ್ಯಕೋಪನಿಷತ್

೨೭. ಈ ಕೆಳಗಿನವರು ಕರ್ತೃತ್ವಕ್ಕೆ ಪಾತ್ರರು-
ಮಗ, ಮಗನಮಗ, ಮಗಳಮಗ, ದತ್ತುಮಗ, ದತ್ತುಮಗನಮಗ, ಗಂಡ, ಹೆಂಡತಿ, ಸಪತ್ನಿ, ಮಗಳು, ಮಗಳಮಗಳು, ತಮ್ಮ, ತಮ್ಮನಮಗ, ತಂದೆ, ತಾಯಿ, ಸೊಸೆ, ಅಕ್ಕ, ತಂಗಿ, ಅವಳಗಂಡ, ಮಗ, ಮಗಳು, ಸಹೋದರಿತಮ್ಮ, ತಾಯಿಯ ತಮ್ಮ, ಸಗೋತ್ರದಿಂದ, ಶಿಷ್ಯ, ಪುರೋಹಿತ, ಸೇವಕ, ಗುರು, ಸಹಪಾಠಿ, ಸ್ನೇಹಿತ, ರಾಜಾ ಮುಂತಾದವರು. ಇವರನ್ನೆಲ್ಲಾ ಸೇರಿಸಿ ೩ ಗುಂಪು ಮಾಡಬಹುದು. ಪುತ್ರ, ಪೌತ್ರ, ಪ್ರಪೌತ್ರ; ಬಾಂಧವರು, ಮತ್ತು ಇತರರು ಎಂಬುದಾಗಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಮಾಹೇಶ್ವರರನ್ನು ಆಹ್ವಾನಿಸಿ ಅವರಿಗೆ ಪ್ರಾಜಾಪತ್ಯವಿಧಿ[೧೮] ಯಂತೆ ಯಥಾಶಕ್ತಿ ಗೋ, ಭೂ, ಹಿರಣ್ಯಾದಿಗಳನ್ನು ದಾನಮಾಡಬೇಕು. ನಂತರ ಅವರ ಅಪ್ಪಣೆ ಪಡೆದು ಮೃತನ ಶರೀರವನ್ನು ಜಂಗಮಪಾದೋದಕದೊಂದಿಗೆ ಷಟ್‌ಸಂಮಾರ್ಜನೆ[೧೯]ಗೊಳಿಸಿ ರಂಗವಲ್ಲಿ ಹಾಕಿ ವಿಭೂತಿಶಯ್ಯೆಮಾಡಿ ಅದರ ಮೇಲಿಟ್ಟು ಭವಿಯದರ್ಶನವಾಗದಂತೆ ತೆರೆಹಾಕಿ ಬಲಗಿವಿಯಲ್ಲಿ ಮುವತ್ತಾರು ಸಾರಿ ಪ್ರಣವಪಂಚಾಕ್ಷರಿಯನ್ನು ಕೇಳಿಸಬೇಕು. ವೀರಮಾಹೇಶ್ವರರು ಶತರುದ್ರೀಯ ಪಂಚರುದ್ರಾದಿಗಳನ್ನು ವಚನಾದಿಗಳನ್ನು ಪಠಿಸುತ್ತಿರಬೇಕು.

ಹಗಲಿನಲ್ಲಾಗಲಿ ರಾತ್ರಿಯಲ್ಲಿಯಾಗಲಿ ಸಿದ್ಧಿಯನ್ನು (ಮರಣವನ್ನು) ಹೊಂದಿದ ಲಿಂಗಶರೀರಕ್ಕೆ ಮರಣ ಹೊಂದಿದ ೧೦ ಘಂಟೆಯೊಳಗಾಗಿ (೨೪ ಘಂಟೆಗೆ) ಸಂಸ್ಕಾರ ಮಾಡಬೇಕು. ಇಲ್ಲದಿದ್ದರೆ ಪರ್ಯುಷಿತವಾಗುತ್ತದೆ.

ತದನಂತರ ಕರ್ತನು ಸಂಕಲ್ಪಮಾಡಿ ಮೃತನ ಲಿಂಗಶರೀರವನ್ನು ಇಷ್ಟಲಿಂಗಸಹಿತ ಸ್ನಾನ ಮಾಡಿಸಿ, ಪವಮಾನಸೂಕ್ತದಿಂದ[೨೦] ಅಭಿಮಂತ್ರಿಸಿ ಪುನಃ ಶ್ರೀರುದ್ರಾದಿಗಳನ್ನು ಪಠಿಸುತ್ತಾ ಶುದ್ಧೋದಕದಿಂದ ಸ್ನಾನಮಾಡಿಸಿ ವಿಭೂತಿರುದ್ರಾಕ್ಷಿಗಳಿಂದಲಂಕರಿಸಿ ಷಟ್‌ಸಮ್ಮಾರ್ಜಿತವೂ, ರಂಗವಲ್ಲ್ಯಲಂಕೃತವೂ, ಭಿತ್ತ್ಯಾಶ್ರಯ (ಗೋಡೆಯ ಒರಗು)ವೂ ಆದ ಸ್ಥಳದಲ್ಲಿ ಕುಳ್ಳಿರಿಸಬೇಕು. ಲಿಂಗಶರೀರಿಯ ಕರಸ್ಥಲದಲ್ಲಿ ಇಷ್ಟಲಿಂಗವನ್ನಿಟ್ಟು ಸಂಪೂಜಿಸಿ ನಂತರ ಸಜ್ಜಿಕೆಯಲ್ಲಿಡಬೇಕು. ತರುವಾಯ ಕಸ್ತೂರಿಚಂದನಾದಿ ಪರಿಮಳ ದ್ರವ್ಯಗಳಿಂದ ಅಲಂಕರಿಸಬೇಕು. ಅನಂತರ ಸಾಲಂಕೃತವಾದ ವಿಮಾನದಲ್ಲಿ ಕುಳ್ಳಿರಿಸಿ ಮಹೋಕ್ಷ, ವೃಷಭ, ನಂದೀಶ ನಂದಿಕೇಶ್ವರರೆಂಬ ಹೆಸರಿನ ನಾಲ್ವರು ವಾಹಕರನ್ನು ಕರೆಯಿಸಿ ನಿಕ್ಷೇಪ ಮಾಡಲು ಶಿವಾಲಯ ಸಮೀಪ, ಶಿವಾಲಯದ ತೋಟ, ಬಿಲ್ವವೃಕ್ಷದ ಬುಡ ಅಥವಾ ಶಿವತೀರ್ಥ ಮುಂತಾದ ಶುದ್ಧದೇಶಕ್ಕೆ ಒಯ್ಯಬೇಕು.[೨೧]

---

೧೮. ಗುರುತಲ್ಪಗಮನಾದಿ ದೋಷಗಳ ಪರಿಹಾರಕ್ಕಾಗಿ ಮಾಡಿಕೊಳ್ಳುವ ಪ್ರಾಯಶ್ಚಿತ್ತ ವಿಧಿ. ಮೊದಲನೆಯ ಮೂರು ದಿನಗಳು ಹಗಲಿನಲ್ಲಿ ಒಮ್ಮೆ ಮಾತ್ರ ಊಟ ಮಾಡುವುದು. ಎರಡನೆಯ ಮೂರು ದಿನಗಳು ರಾತ್ರಿಯಲ್ಲಿ ಮಾತ್ರ ಊಟ ಮಾಡುವುದು. ಕೊನೆಯ ಮೂರು ದಿನಗಳು ಉಪವಾಸ ಮಾಡುವುದು.

೧೯. ಗೋಮಯ, ಗೋಮೂತ್ರ, ಗೋಕ್ಷೀರ, ಗೋದಧಿ, ಗೋಘೃತ, ಗೋರೋಜನ.

೨೦. ಯಾ ತೇ ಅಗ್ನೇ ರುದ್ರಿಯಾ ತನೂಸ್ತಯಾ ನಃ ಪಾಹಿ।
ಯಾ ತೇ ಅಗ್ನೇ ಗುರಾಶಯಾ..... ತಸ್ಯಾಸ್ತೇ ಸ್ವಾಹಾ॥
ಇತ್ಯಾದಿಗಳು.....

೨೧. ಇವಲ್ಲದೆ ನದೀತೀರ, ಬಹುವೃಕ್ಷವನ (ತೋಪು); ಜೀರ್ಣಗೋಷ್ಠ (ಹಳೆಯ ಕೊಟ್ಟಿಗೆ), ಚತುಷ್ಪಥ (ಚೌಕಿ) ಪುಷ್ಪವಾಟೀ (ಹೂದೋಟ) ಪರ್ವತದ ತಪ್ಪಲು -ಮುಂತಾದವುಗಳೂ ಸಮಾಧಿಗೆ ಯೋಗ್ಯವಾದವುಗಳೆಂಬುದಾಗಿ ಪಾರಮೇಶ್ವರಾದಿ ಆಗಮಗಳಲ್ಲಿ ಹೇಳಿದೆ.

೨೨. ಚಂದ್ರಜ್ಞಾನಾಗಮ, ಚ.ಪಾ., ೨.೧೪-೧೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩. ಸಮಾಧಿರಚನಾ ವಿಧಿ ಮತ್ತು ನಿಕ್ಷೇಪವಿಧಿ:

ಮೂವತ್ತಾರು ತತ್ತ್ವಗಳ ಹಾಗೂ ಇನ್ನೂರಹದಿನಾರು ಸಕೀಲಸಂಬಂಧವುಳ್ಳ ಸಮಾಧಿರಚನೆಯ ಬಗ್ಗೆ ಹಾಗೂ ನಿಕ್ಷೇಪ ವಿಷಯದಲ್ಲಿ ಚಂದ್ರಜ್ಞಾನಾಗಮವು ವಿವರವಾಗಿ ಹೇಳಿಲ್ಲ. ಆದರೂ ಸೂಚ್ಯವಾಗಿ

'ಸಮಾಧಿಂ ಕಾರಯಿತ್ವಾ ತಾಂ ತನುಂ ತತ್ರ ಯಥಾವಿಧಿ।
ನಿಧಾಯ ಪೂರಯೇತ್ ಗರ್ತಂ ಭಸ್ಮನಾ ಮೃತ್ಸ್ನಯಾಪಿ ಚ॥'[೩೩]

ಎಂದಿದೆ. ಈ ಶ್ಲೋಕದಲ್ಲಿರುವ "ಯಥಾವಿಧಿ ಸಮಾಧಿಂ ಕಾರಯಿತ್ವಾ, ಮತ್ತು ಯಥಾವಿಧಿ ತನುಂ ತತ್ರ ನಿಧಾಯ" -ಎಂಬ ವಾಕ್ಯಗಳ ಆಧಾರದಿಂದ ಸಮಾಧಿಗೆ ಯೋಗ್ಯವಾದ ಸ್ಥಾನ, ಗರ್ತ, ಸೋಪಾನ, ತ್ರಿಕೋಣಗಳ ಅಳತೆ, ಬೀಜಾಕ್ಷರ ಲಿಖಿತ ತಗಡುಗಳ ಸಂಬಂಧ, ಮೃತ್ತಿಕಾದಾನ ಕೊಡುವಾಗ ಹೇಳುವ ಪುಷ್ಪಾಂಜಲಿ ಸ್ತವನ ಇತ್ಯಾದಿ ಅಂಶಗಳನ್ನು ಆಯ್ದು ಇಲ್ಲಿ ಯೋಜಿಸಿಕೊಳ್ಳಬೇಕಾಗುತ್ತದೆ.[೩೪]

೪. ಔರ್ಧ್ವದೇಹಿಕವಿಧಿ:

ಗರ್ತವನ್ನು ವಿಭೂತಿ ಅಥವಾ ಮಣ್ಣಿನಿಂದ ಮುಚ್ಚಿ ಮೇಖಲಾತ್ರಯವುಳ್ಳ (ಮೂರು ಹಂತವುಳ್ಳ) ಸಮಾಧಿಯನ್ನು ರಚಿಸಬೇಕು. ಅನಂತರ ಕರ್ತೃವು ವಸ್ತ್ರವನ್ನು ಧರಿಸಿ ಸಚೇಲಸ್ನಾನ ಮಾಡಬೇಕು. ನಂತರ (ಬ್ರಾಹ್ಮಣ ಸ್ವರ್ಣಘಾತಾದಿಗಳಿಂದುಂಟಾದ ಮೇರುಪರ್ವತ ಗಾತ್ರದ ಅನಂತ ಪಾಪಗಳು ಕೇಶಗಳನ್ನಾಶ್ರಯಿಸಿಕೊಂಡಿರುವುದರಿಂದ) ತಲೆ, ಗಡ್ಡಮೀಸೆಗಳನ್ನು ಬೋಳಿಸಿಕೊಳ್ಳಬೇಕು. ಆಮೇಲೆ ಸ್ನಾನಾದಿಗಳನ್ನು ಮಾಡಿ[೩೫] ವಿಭೂತಿ ರುದ್ರಾಕ್ಷಿಗಳನ್ನು ಧಾರಣೆ ಮಾಡಿಕೊಂಡು ಶಿವಗಣಂಗಳ ಅಪ್ಪಣೆ ಪಡೆದು ೫ ಅಥವಾ ೯ ವೃಷಭಗಳಿಂದ ಕೂಡಿದ ಲಿಂಗವೊಂದನ್ನು ಪಿತೃವಿನ (ಮೃತ್ಯ) ಅಂಕಿತದಲ್ಲಿ ದಿವ್ಯರೂಪಪ್ರಾಪ್ತಿಗಾಗಿ ಸಮಾಧಿಯ ಮೇಲೆ ಸ್ಥಾಪಿಸಬೇಕು. ಅದಾದ ಮೇಲೆ ಗೋ, ಭೂಮಿ, ತಿಲ, ತುಪ್ಪ, ವಸ್ತ್ರ, ಧಾನ್ಯ, ಬೆಲ್ಲ, ಬೆಳ್ಳಿ, ಉಪ್ಪು -ಈ ಹತ್ತು ವಿಧ ದಾನಗಳನ್ನು ಕೊಡಬೇಕು. ತದನಂತರ ಮಣ್ಣು ಹಾಕುವಾಗ (ಘಟ್ಟನಾ) ಉಂಟಾದ ಸಂತಾಪದ ಶಮನಕ್ಕಾಗಿ ಕ್ಷೀರಾದಿಗಳನ್ನು ತರ್ಪಣ ಮಾಡಬೇಕು. ಹೀಗೆ ಹತ್ತು ದಿನಗಳವರೆವಿಗೂ ಮಾಡಬೇಕು. ಆನಂತರ ದೀಪಸಂಹಿತ ಬಂಧುಗಳೊಡನೆ ಮನೆಗೆ ಬಂದು 'ನಗ್ನಪ್ರಚ್ಛಾದನಾ'[೩೬] ಎಂಬ ಆರಾಧನೆಯನ್ನು ಮಾಡಬೇಕು.

---

೩೩. ಚಂದ್ರಜ್ಞಾನಾಗಮ, ಚ.ಪಾ., ೪.೪.

೩೪. ವಿಧಿಗಳ ವಿವರವನ್ನು ಆಸ್ಥಾನವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರವರ 'ಅಂತ್ಯೇಷ್ಟಿವಿಧಿ' - ಎನ್ನುವ ಗ್ರಂಥವನ್ನು ನೋಡಬಹುದು.

೩೫. ಬ್ರಾಹ್ಮಣಸ್ವರ್ಣಘಾತಾದಿ ಪಾಪಾನಿ ವಿವಿಧಾನಿ ಚ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ ವಪಾಮ್ಯಹಂ॥
ಮೇಹಮಂದರ ತುಲ್ಯಾನಿ ಪಾಪಾನಿ ವಿವಿಧಾನಿ ಚ
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ ವಪಾಮ್ಯಹಂ॥ - ಚಂ.ಆ, ಚ.ಪಾ.,೪.೫-೬

೩೬. ಚಂದ್ರಜ್ಞಾನಾಗಮ, ಚ.ಪಾ., ೪.೫-೧೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಾಧಿಯ ಮೇಲೆ ಸ್ಥಾಪಿತವಾದ ಲಿಂಗವನ್ನು ಅಲುಗಾಡಿಸಬಾರದು. ಒಂದು ವೇಳೆ ಜಂತುಗಳಿಂದಲೋ ಪ್ರಾಣಿಗಳಿಂದಲೋ ಅಲುಗಾಡಿಸಲ್ಪಟ್ಟರೆ ಪ್ರಾಣಾಯಾಮ ಜಪಗಳಿಂದ ಪುನಃಸ್ಥಾಪಿಸಬೇಕು. ಹೀಗೆ ತರ್ಪಣ ಮತ್ತು ಪೂಜೆಗಳನ್ನು ೧೦ ದಿನಗಳವರೆಗೆ ಮಾಡಬೇಕು.

ನಂತರ ಏಕೋದ್ದಿಷ್ಟವಿಧಿಯನ್ನನುಸರಿಸಿ ೧-೩-೫-೭-೯-೧೧ನೆಯ ದಿನಗಳಲ್ಲಿ ನವಾರಾಧನೆಯನ್ನು ಮಾಡಬೇಕು. ೧೧ನೆಯ ದಿನ ಸಮಾಧಿಯ ಮೇಲಿನ ಲಿಂಗವನ್ನು ತೆಗೆದು ಬಟ್ಟೆಯಲ್ಲಿಟ್ಟು ಪೃಥಿವೀ ಯಚ್ಛ... ಎಂಬ ಮಂತ್ರವನ್ನು ಪಠಿಸುತ್ತಾ ತೀರ್ಥವನ್ನೆರೆಯಬೇಕು. ನಂತರ ಎಳ್ಳು ಮತ್ತು ನೆಲ್ಲಿಯನ್ನು ಬೆರೆಸಿದ ನೀರಿನಿಂದ ಸ್ನಾನಮಾಡಿ ಗಾಣಪತ್ಯ ಹೋಮ ಆನಂದಹೋಮಗಳನ್ನು ಮಾಡಬೇಕು. ನಂತರ ವಿಪ್ರನೊಬ್ಬನನ್ನು ಅರ್ಚಿಸಿ ಲಿಂಗವನ್ನು ವಿಸರ್ಜಿಸಬೇಕು. ಇದಕ್ಕೆ ವೃಷೋತ್ಸರ್ಗಾರಾಧನೆ ಎಂದು ಹೆಸರು.[೩೭]

ನಂತರ ಅದೇ ೧೧ನೆಯ ದಿನದಲ್ಲಿ ರುದ್ರಹೋಮ (ಆರಾಧನೆ)ವನ್ನು ಮಾಡಬೇಕು. ರುದ್ರಹೋಮವೆಂದರೆ ಆಚಾರಾದಿ ಷಡ್ಲಿಂಗಾಶ್ರಿತರೂ ಭಕ್ತಾದಿಷಟ್‌ಸ್ಥಲ ಸಮಾಶ್ರಿತರೂ ಆದ ಖಡ್ಗೇಶ ಮುಂತಾದ[೩೮] ಐವತ್ತು (೪+೬+೧೦+೧೨+೧೬+೨) ಮಂದಿ ರುದ್ರರನ್ನು

---

೩೭. ವಸ್ತುವನ್ನು ಭೂಮಿಯಲ್ಲಿ ನಿಕ್ಷೇಪಮಾಡಿ ದೀಪಸಹಿತ ಬಂಧುಗಳೊಡನೆ ಮನೆಯನ್ನು ಪ್ರವೇಶ ಮಾಡಿದ ನಂತರ ಮಾಡುವ ಒಂದು ವಿಧಿ ನಗ್ನಪ್ರಚ್ಛಾದನ.

೩೮. ಅದೇ, ಚ.ಪಾ., ೪-೩೨-೩೫;

ಈ ಶ್ಲೋಕಗಳಲ್ಲಿ ಹೇಳಿದ ಒಟ್ಟು ೫೦ ರುದ್ರರ ಹೆಸರುಗಳು ಮಕುಟಾಗಮ, ಚರ್ಯಾಪಾದ, ೬.೧೪-೨೦ರಲ್ಲಿ ಬಂದಿವೆ. ಅವುಗಳನ್ನು ಕ್ರಮವಾಗಿ ಷಡ್ಲಿಂಗಗನ್ನು (ಷಟ್‌ಸ್ಥಲಗಳನ್ನು) ಆಶ್ರಯಿಸಿದಂತೆ ಹೀಗೆ ಯೋಚಿಸಬಹುದು:

೧. ಆಚಾರಲಿಂಗಸ್ಥಲಾಶ್ರಿತ (ಭಕ್ತಸ್ಥಲಾಶ್ರಿತ) ರುದ್ರರು- ಖಡ್ಗೇಶ, ಬಕೇಷ ಶ್ವೇತೇಶ, ಭೃಂಗೀಶ = ೪

೨. ಗುರುಲಿಂಗಾಶ್ರಿತ (ಮಾಹೇಶ್ವರಸ್ಥಲಾಶ್ರಿತ)ರು- ಛಗಲಂಡೇಶ, ದ್ವಿರಂಡೇಶ (ದ್ವಿಪಂಡೇಶ) ಮಹಾಕಾಲೀಶ್ವರ, ಭುಜಂಗೇಶ, ಪಿನಾಕೀಶ, ದಾರುಕೇಶ = ೬

೩. ಶಿವಲಾಂಗಶ್ರಿತ (ಪ್ರಸಾದಿಸ್ಥಲಾಶ್ರಿತ)ರು ಅರ್ಧನಾರೀಶ, ಉಮಾಕಾಂತ, ಆಷಾಢೀಶ, ದಂಡೀಶ, ಅತ್ರೀಶ, ಮಿತ್ರೇಶ, ಮೇಷೇಶ, ಲೋಹಿತೇಶಶ್ವರ, ಶಿಖೀಶ್ವರ, ಕ್ರೋಧೇಶ....... = ೧೦

೪. ಚರಲಿಂಗಾಶ್ರಿತ (ಪ್ರಾಣಲಿಂಗಿಸ್ಥಲಾಶ್ರಿತ)ರು - ಚಂಡ, ಪಂಚಾಂತಕೇಶ್ವರ, ಶಿವೋತ್ತಮ, ಏಕರುದ್ರೇಶ, ಕೂರ್ಮೇಶ, ಏಕನೇತ್ರ, ಚತುರಾನನೇಶ್ವರ, ಅಜೇಶ, ಶರ್ವ, ಸೋಮೇಶ್ವರ, ಲಾಂಗಲೀಶ, ಸಂವರ್ತಕೇಶ... = ೧೨

೫. ಪ್ರಸಾದಲಿಂಗಾಶ್ರಿತ (ಶರಣಸ್ಥಲಾಶ್ರಿತ)ರು - ಶ್ರೀಕಂಠ, ಅನಂತೇಶ, ಸೂಕ್ಷ್ಮೇಶ, ತ್ರಿಮೂರ್ತೀಶ, ಅಮರೇಶ, ಅರ್ಘೇಶ, ಭಾರಭೂತೇಶ್ವರ, ಅತಿಥೀಶ, ಸ್ಥಾಣ್ವೀಶ, ಹರ, ಝಿಂಟೀಶ್ವರ, ಭೌತಿಕೇಶ, ಸದ್ಯೋಜಾತೇಶ, ಅನುಗ್ರಹೇಶ್ವರ, ಅಕ್ರೂರೇಶ, ಮಹಾಸೇನ..... = ೧೬

೬. ಮಹಾಲಿಂಗಾಶ್ರಿತ (ಐಕ್ಯಸ್ಥಲಾಶ್ರಿತ)ರು - ಲಕುಲೀಶ ಮತ್ತು ಶಿವೇಶ್ವವ = ೨

ಒಟ್ಟು = ೫೦

ಇದರೊಂದಿಗೆ ಪ್ರಪಂಚಸಾರ, ೩.೩೯-೪೪ ರೊಂದಿಗೆ ಹೋಲಿಸಿರಿ. ಮೇಲಿನ ಪಟ್ಟಿಗೂ ಇಲ್ಲಿನ ಪಟ್ಟಿಗೂ ಬಹುಮಟ್ಟಿನ ಸಾಮ್ಯವಿದ್ದು, ಕೆಲವು ಹೆಸರುಗಳು ಭಿನ್ನವಾಗಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(ರುದ್ರರೂಪರಾದ ಮಾಹೇಶ್ವರರನ್ನು) ಅರ್ಚಿಸುವುದು. ಒಂದು ವೇಳೆ ೫೦ ಮಂದಿ ರುದ್ರರನ್ನು ಅರ್ಚಿಸಲು ಸಾಧ್ಯವಾಗದಿದ್ದಲ್ಲಿ ೧೨,೧೦,೬,೪, ಅಥವಾ ೨ ಮಾಹೇಶ್ವರರನ್ನಾದರೂ ರುದ್ರರೂಪರೆಂದು ಭಾವಿಸಿ ಸತ್ತವನಿಗೆ ರುದ್ರತ್ವವನ್ನು ತಂದುಕೊಡಲು ಅರ್ಚನೆ ಮಾಡಬೇಕು.

೧೨ನೆಯ ದಿನ ಕಲಾ ಮತ್ತು ತತ್ತ್ವಾರಾಧನೆಯನ್ನು ಮಾಡಬೇಕು. ಮಹೇಶ, ಸದಾಶಿವ, ಶಿವರೆಂಬ ಪಿತೃಗಳನ್ನು ನಂದಿ ಮತ್ತು ಮಹಾಕಾಲರೆಂಬ ವಿಶ್ವೇದೇವರನ್ನು ಆಹ್ವಾನಿತರಾದ ಮಾಹೇಶ್ವರರಲ್ಲಿ (ಜಂಗಮರಲ್ಲಿ) ಆರೋಪಿಸಿಕೊಂಡು

"ನಂದಿಕೇಶ್ವರ ಮಹಾಕಾಲಸಂಜ್ಞಿನೋರ್ವಿಶ್ವದೇವಯೋಃ।
ಪಿತುಃ ಪಿತಾಮಹಾದೀನಾಂ ಮಹೇಶಾದಿ ಸ್ವರೂಪಿಣಾಂ॥
ಷಟ್‌ತ್ರಿಂಶತಾಂ ಚ ತತ್ತ್ವಾನಾಂ ಕಲಾನಾಮಷ್ಟತ್ರಿಂಶತಾಂ
ಆರಾಧನಂ ಕರಿಷ್ಯಾಮಿ"

ಎಂದು ಸಂಕಲ್ಪ ಮಾಡಿಕೊಂಡು ಪಾತ್ರೆಯಲ್ಲಿ ಕಲೆಗಳನ್ನು ಮತ್ತು ತತ್ತ್ವಗಳನ್ನು ಆಹ್ವಾನಿಸಿ ಸಂಯೋಜಿಸಬೇಕು.[೬೮]

ಇದರಿಂದ ಮೃತನಿಗೆ ವರ್ಗತ್ರಯೈಕ್ಯ ಸಿದ್ಧಿಯೂ, ಶಿವಸ್ವರೂಪವೂ ಚತುರ್ಥದ (ಪ್ರೇತಭಾವದ) ನಿವೃತ್ತಿಯೂ ಪ್ರಾಪ್ತವಾಗುವುದು. ಈ ತತ್ತ್ವ ಸಂಯೋಜನೆ ಕಲಾಸಂಯೋಜನೆ ಷೋಡಷಾರಾಧನೆಯನ್ನು ಮಾಡಿ ನಂತರ ಏಕೋದ್ದಿಷ್ಟವಿಧಿಯಿಂದ ಮಾಡಬೇಕು. ಇದನ್ನು ಪ್ರತಿವರ್ಷವೂ ಮಾಡಬೇಕು. ಇದಕ್ಕೆ ಪ್ರತ್ಯಾಬ್ಧಿಕ ಎಂದು ಹೆಸರು.

೫. ಪಕೀರ್ಣಕ ವಿಧಿ:

ಚಂದ್ರಜ್ಞಾನಾಗಮದ ಪ್ರಕೀರ್ಣಕವಿಧಿಯಲ್ಲಿ ಶೈವಶ್ರಾದ್ಧದಲ್ಲಿ (ಶಿವವೇಧದಲ್ಲಿ) ಬರುವ ಪಿತೃಗಣಗಳಾರು? ಗ್ರಾಹ್ಯದ್ರವ್ಯಗಳಾವುವು? ತತ್ತ್ವಸಂಯೋಜನೆಯ ಕರ್ತ ಯಾರು? ಆರಾಧನಾ ಪ್ರಭೇದ ಎಷ್ಟು ವಿಧ? ಎಂಬೀ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಆದರೆ ಈ ವಿಷಯಗಳೆಲ್ಲವೂ ಸಾಂದರ್ಭಿಕವಾಗಿ ಹಿಂದಿನ ವಿಧಿಗಳಲ್ಲಿಯೇ ತಿಳಿಸಲ್ಪಟ್ಟಿರುವುದರಿಂದ ಪ್ರಸ್ತುತ ವಿಧಿಯಲ್ಲಿ ಪ್ರಧಾನವಾಗಿ ಈ ಅಂತ್ಯೇಷ್ಟಿವಿಧಿಯ ವಿಷಯದಲ್ಲಿ ಸಿದ್ಧಾಂತಶಿಖಾಮಣಿಕಾರರ ಅಭಿಪ್ರಾಯ ವಚನಕಾರರ ಸಹಾಯಕ ವಿರೋಧವಾದ ಹಾಗೂ ವಿಕಲ್ಪವಾದ ಅಭಿಪ್ರಾಯಗಳು, ಅಂತ್ಯೇಷ್ಟಿಯ ಪ್ರಾಂತೀಯ ಬೇಧಗಳು ಮುಂತಾದ ವಿಷಯಗಳನ್ನು ಚಿಂತಿಸಲಾಗಿದೆ.

ಸಿದ್ಧಾಂತಶಿಖಾಮಣಿಯಲ್ಲಿ ಅಂತ್ಯೇಷ್ಟಿ ವಿಚಾರ:

ಈ ವಿಷಯದಲ್ಲಿ ಸಿದ್ಧಾಂತಶಿಖಾಮಣಿಯಲ್ಲಿ ನೇರವಾಗಿ ಏನನ್ನೂ ಹೇಳಿಲ್ಲ. ಆದರೂ ಕೊನೆಯ ಪರಿಚ್ಛೇದದಲ್ಲಿ ಶ್ರೀ ರೇಣುಕಭಗವತ್ಪಾದರು ಲಂಕೆಯಲ್ಲಿ ವಿಭೀಷಣನನ್ನು ಅನುಗ್ರಹಿಸಿ ಅಲ್ಲಿ ಮುಕ್ಕೋಟಿ ಲಿಂಗಗಳನ್ನು ಸ್ಥಾಪನೆ ಮಾಡಿ ಕುಲ್ಯಪಾಕಕ್ಕೆ ಬರುತ್ತಾರೆ.

---

೬೮. ಈ ವಿಧಿಯ ಬಗ್ಗೆ ವಿಶೇಷ ವಿಚಾರವನ್ನು 'ಲಿಂಗಧಾರಣ ಚಂದ್ರಿಕೆ'ಯ ಉತ್ತರ ಭಾಗವನ್ನು ನೋಡಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲ್ಲಿ ಸೋಮನಾಥಮಂದಿರವನ್ನು ಪ್ರವೇಶಿಸಿ ನೆರೆದ ಶಿವಭಕ್ತರಿಗೆ ಲೀಲಾಭಾವಗಳಿಂದ ಆಶ್ಚರ್ಯವನ್ನುಂಟುಮಾಡುತ್ತಾ ಪರಮೇಶ್ವರನನ್ನು ಸ್ತುತಿಸಲಾಗಿ "ಲಿಂಗಾತ್ತತಃ ಶಂಕರಃ"

"ವತ್ಸಾಗಚ್ಛ ಮಹಾನುಭಾವ ಭವತೋ ಭಕ್ತ್ಯಾ ಪ್ರಸನ್ನೋಽಸ್ಮ್ಯಹಂ"

"ಎಲೈ ಮಹಾನುಭಾವನಾದ ಮಗನೆ! ನಿನ್ನ ಭಕ್ತಿಯಿಂದ ಪ್ರಸನ್ನನಾಗಿರುವೆ ಬಾ" ಎಂದು ಉನ್ನತ ಸ್ವರದಿಂದ ಕರೆಯುತ್ತಾನೆ ಸೋಮನಾಥ. ಆಗಲ್ಲಿದ್ದ ಭಕ್ತಜನರಿಗೆ ಆಶ್ಚರ್ಯವಾಯಿತು. ದೇವದುಂದುಬಿ ಮೊಳಗಿತು. ದೇವಗಣ ಪ್ರಮಥಗಣರಿಂದ ಪುಷ್ಪವೃಷ್ಟಿಯಾಯಿತು. ಶಿವಯೋಗಿಗಳೆಲ್ಲರೂ ಸ್ತುತಿ ಮಾಡಿದರು." ಕೂಡಲೇ ಲಿಂಗದೊಳಗಾದರು. "ಜ್ಯೋತಿರ್ಲಿಂಗಂ ಪರಮಮವಿಶತ್ ಸ್ವಪ್ರಕಾಶಂ ತದಾನೀಂ॥" ಇದಕ್ಕೆ ಆಗಮಗಳಲ್ಲಿ 'ಅದರ್ಶನ ಅಥವಾ ಅದೃಶ್ಯ ವಿಧಿ' ಎನ್ನುತ್ತಾರೆ.[೪೦] ಶರಣರು ಇದನ್ನು 'ಬಯಲುಸಮಾಧಿ' ಎಂದು ಕರೆದಿದ್ದಾರೆ. ಷಣ್ಮುಖ ಶಿವಯೋಗಿಗಳು.

'ಪರಮನಪ್ಪಣೆಯಿಂದೆ ಧರೆಗಿಳಿದು ಬಂದು
ಗುರುಲಿಂಗಜಂಗಮದ ಭಕ್ತಿಯನಳವಡಿಸಿಕೊಂಡು
ಷಟ್‌ಸ್ಥಲಬ್ರಹ್ಮದ ಅನುವನರಿದು
ನೂರೊಂದು ಕುಳಸ್ಥಳಂಗಳ ಕರತಳಾಮಳಕವಾಗಿ ತಿಳಿದು
ನಿಜೈಕ್ಯ ಪಥದಲ್ಲಿ ನಿರ್ವಯಲಾದರು ಬಸವಣ್ಣ ಮೊದಲಾದ
ಅಸಂಖ್ಯಾತಮಹಾಗಣಂಗಳು

ಅದೆಂತೆಂದೊಡೆ:

ಸಂಗನಬಸವಣ್ಣನು ಕಪ್ಪಣಿಸಂಗಯ್ಯನೊಳಗೆ ಬಯಲಾದನು
ಅಕ್ಕಮಹದೇವಿ ಪ್ರಭುದೇವರು
ಶ್ರೀಶೈಲ ಕದಳಿಯ ಜ್ಯೋತಿರ್ಮಯಲಿಂಗದೊಳಗೆ ಬಯಲಾದರು
ಹಡಪದಪ್ಪಣ್ಣ ನೀಲಲೋಚನೆ ತಾಯಿ ಮೊದಲಾದ
ಕೆಲವು ಗಣಂಗಳು ತಮ್ಮ ಲಿಂಗದಲ್ಲಿ ಬಯಲಾದರು
ಚನ್ನಬಸವಣ್ಣ ಮಡಿವಾಳ ಮಾಚಿದೇವ
ಕಿನ್ನರಿಯಬ್ರಹ್ಮ ತಂದೆ ಮೊದಲಾದ
ಉಳಿದ ಗಣಂಗಳು ಉಳುವೆಯ ಮಹಾಮನೆಯಲ್ಲಿ
ಮಹಾಘನಲಿಂಗದೊಳಗೆ ಬಯಲಾದರು
..............................ಅಖಂಡೇಶ್ವರಾ.

---

೪೦. ಮಧ್ವಾಚಾರ್ಯರ ಚರಿತ್ರೆಯಲ್ಲಿಯೂ ಇದೇ ರೀತಿ ಬಯಲಾದ ಸಂಗತಿಯು ಬರುತ್ತದೆ. ಮಧ್ವಾಚಾರ್ಯರು ಕೊನೆಗಾಲದಲ್ಲಿ ಶಿಷ್ಯರಿಗೆ ಪಾಠ ಮಾಡುತ್ತಾ ಇರುತ್ತಾರೆ. ಆಕಾಶದಿಂದ ಪುಷ್ಪವೃಷ್ಟಿಯಾಗುತ್ತದೆ. ಆ ಪುಷ್ಪರಾಶಿಯಲ್ಲಿ ಮುಚ್ಚಿ ಹೋಗುತ್ತಾರೆ. ಸ್ವಲ್ಪ ಸಮಯದ ನಂತರ ಆ ಪುಷ್ಪರಾಶಿಯನ್ನು ಬಗಿದು ನೋಡಿದಾಗ ಅದೃಶ್ಯರಾಗಿರುತ್ತಾರೆ- ಈ ಸಂಗತಿ ಮಧ್ವವಿಜಯದಲ್ಲಿ ಉಕ್ತವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಚನಕಾರರ ಅಭಿಪ್ರಾಯ:

ಅಂತ್ಯೇಷ್ಟಿವಿಚಾರದಲ್ಲಿ ವಚನಕಾರರಲ್ಲಿ ಆಗಮದ ಅಭಿಪ್ರಾಯಕ್ಕೆ ಸಹಮತ ಹಾಗೂ ವಿರೋಧಮತಗಳೆರಡೂ ವ್ಯಕ್ತವಾಗಿವೆ.

ಸಹಮತಕ್ಕೆ: "ಪಾಲ್ಕುರಿಕೆ ಸೋಮೇಶ್ವರನು, ಮಗ್ಗೆಯ ಮಾಯಿದೇವಯ್ಯಗಳು, ಚಿಕ್ಕಮಾದಣ್ಣಗಳು, ಕದಿರೆ ರೇಮಯ್ಯಗಳು, ಸಮಾಧಿಸೋಮಯ್ಯಗಳು, ಅಜಗಣ್ಣನು, ನಿಂಬಿಯಕ್ಕನು, ರಾಘವಾಂಕನು, ನಮಃಶಿವಾಯನ ಶಿಷ್ಯಕಲಿತ ಹಿಮಗಿರೀಶ್ವರನು, ಹಾಳಪ್ಪಯ್ಯಗಳು ಇಂತಿವರು ಮೊದಲಾದ ಶಿವಶರಣರು ಶಿವನು ಕರೆದಡೆ ಒಲ್ಲದೆ ಸಮಾಧಿಕ್ರಿಯವಧಿಕವೆಂದು ಮೆರೆದರು ಧಾರುಣಿಯೊಳು"

(ಗುರು ಬಸವಕವಿಯ ಸಪ್ತಕಾವ್ಯಗಳ ಓಲೆಕಟ್ಟಿನ ಕಡೆಯಲ್ಲಿನ ೧೫೫-೧೫೬ನೇ ಗರಿಗಳಲ್ಲಿನ ಲೇಖ).[೪೧]

ಷಣ್ಮುಖ ಶಿವಯೋಗಿಗಳು ತಮ್ಮ ದೀರ್ಘವಾದ ಒಂದು ವಚನದಲ್ಲಿ ತನುವ ಬಿಡುವ ಸಮಯದಲ್ಲಿ ತೋರುವ ನಿಮಿತ್ತ ಮೊದಲುಗೊಂಡು ಉತ್ಕ್ರಮಣವಿಧಿಯ ಕ್ರಿಯೆಗಳವರೆಗೆ ವಿವರವಾಗಿ ಹೇಳಿದ್ದಾರೆ.

....

ಶರಣನು ತನ್ನವಸಾನಕಾಲದ ಎಚ್ಚರಿಕೆಯನರಿದು
ಗೋವು ಮಲಗುವಷ್ಟು ಧರಣಿಯ ಸಾರಣೆಯ ಮಾಡುವುದು
ಗೋಮಯ ಗೋಮೂತ್ರ ಗೋಕ್ಷೀರ ಗೋದಧಿ, ಗೋಘೃತ
ಗೋರೋಚನ ಎಂಬ ಷಡುಸಮ್ಮಾರ್ಜನೆಯ ಮಾಡುವುದು
ಶಿವಜಂಗಮದ ಧೂಳಪಾದಾರ್ಚನೆ ಧೂಳಪಾದಾರ್ಚನೆಯ
ಉದಕಮಂ ಮಾಡಿ ಸಮ್ಮಾರ್ಜನೆಯ ಮಾಡುವುದು
ರಂಗವಲ್ಲಿಯ ತುಂಬುವುದು ಭಸ್ಮವ ತಳೆವುದು.
ಪಾದೋದಕ ಪ್ರಸಾದಮಂ ಸಲಿಸಿ
ಶಿವಗಣಂಗಳಿಗೆ ವಂದನೆಯ ಮಾಡಿ
ಆ ಸಮ್ಮಾರ್ಜನೆಯ ಮಾಡಿದ ಗದ್ದುಗೆಯ ಮೇಲೆ ಮುಹೂರ್ತವ ಮಾಡಿ
"ಓಂ ನಮಃ ಶಿವಾಯ" ಎಂಬ ಪ್ರಣವಸ್ಮರಣೆಯ ಮಾಡುವುದು
ಹಸ್ತದಲ್ಲಿ ಇಷ್ಟಲಿಂಗವ ಹಿಡಿದುಕೊಂಡು
ಇರವಂತಿಗೆ ಸೇವಂತಿಗೆ ಮೊಲ್ಲೆ ಮಲ್ಲಿಗೆ
ಜಾಜಿಕರವೀರ ಸುರಹೊನ್ನೆ ಸಂಪಿಗೆ
ಮರುಗ ಪಚ್ಚೆ ದವನ ಬಿಲ್ವಪತ್ರೆ
ಮೊದಲಾದ ಸಮಸ್ತ ಪುಷ್ಪಪತ್ರೆಗಳ ಧರಿಸಿ
ಆ ಶಿವಲಿಂಗವನು ಮನವೊಲಿದು ಕಂಗಳ ತುಂಬಿ ನೋಡುತ್ತಾ

---

೪೧. ಬಸವಪಥ- ಸಂ. ೨೧, ಸಂಚಿಕೆ ೧೦, ಜನವರಿ-೨೦೦೦ -ಪ್ರೊ.ಸಿ. ಮಹಾದೇವಪ್ಪ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಭಕ್ತರು ಬಂದಡೆ ಶರಣಾರ್ಥಿ ಎಂದು
ಮಜ್ಜನವ ನೀಡಿಸಿ ವಿಭೂತಿಯ ಧರಿಸಿ
ಪುಷ್ಪ ಪತ್ರೆಗಳ ಧರಿಸಿ ಎಂದು ಅವರ ಪಾದವಿಡಿದು
ಶರಣಾರ್ಥಿ ಸ್ವಾಮಿಗಳಿಗೆ ಎಂದು ಹೇಳಿ
ಶಿವಾರ್ಪಣವ ಮಾಡಿ ಎಂದು ಬಿನ್ನಹವ ಮಾಡುವುದು.
ಮದುವೆ ಮಾಂಗಲ್ಯ ಆರ್ತಿ ಉತ್ಸಾಹ ಶಿಶುವಿನ ಹೆಸರಿಡುವ ಹಾಗೆ
ಹರುಷ ಪರುಷ ಧೈರ್ಯವೇ ಭೂಷಣವಾಗಿ ವಿರೋಧಂಗಳಮಾಡದೆ
"ಓಂ ನಮಃ ಶಿವಾಯ" ಎಂಬ ಮಂತ್ರ ಭೋರ್ಗರೆಯೆ
ನಿರ್ಮಲ ನೈಷ್ಠಿಕದಿಂದೆ
ಶಿವಜಂಗಮದ ಪಾದವನು ಮಸ್ತಕದ ಮೇಲೆ ಇಡಿಸುವುದು
ಹಿತವಂತರಾದವರು ವೀರಶೈವಪರಮ ವಚನಂಗಳಂ ಕೇಳಿಸುವುದು
ಎಡಬಲದಲ್ಲಿರ್ದ ಸಕಲ ಭಕ್ತರು ಮಹೇಶ್ವರರು
"ಓಂ ನಮಃ ಶಿವಾಯ" ಎಂಬ ಮಂತ್ರವನ್ನು
ಆ ಶರಣನ ಕರ್ಣಂಗಳಲ್ಲಿ ಉಚ್ಚರಿಸುವುದು.
ಈ ಹಡಗದ ಹಗ್ಗವ ಮತ್ತೊಂದು ಹಡಗಕ್ಕೆ ಹಾಕಿ ಬಿಗಿದಡೆ
ಹಡಗಕ್ಕೆ ಹಡಕಗೂಡಿ ಸಮುದ್ರದ ತೆರೆಯೋಪಾದಿಯಲ್ಲಿ
ಹಡಗವ ಬಿಟ್ಟು ಪ್ರತಿಹಡಗದೊಳಗೆ ಮೂರ್ತವ ಮಾಡಿದಂತೆ
ಮಂತ್ರಮಂತ್ರವು ಸಂಬಂಧವಾಗಿ
ಉರಿಕರ್ಪುರ ಕೊಂಡಂತಾಯಿತ್ತು ಶರಣನ ದೇಹಪ್ರಾಣವು
ಇದು ಗುಹ್ಯಕ್ಕೆ ಗುಹ್ಯ ಗೋಪ್ಯಕ್ಕೆ ಗೋಪ್ಯ
ರಹಸ್ಯಕ್ಕೆ ಅತಿರಹಸ್ಯ ನೋಡಾ ಅಖಂಡೇಶ್ವರಾ॥"[೪೨]

ಮೂರು ಸಾವಿರ ಮುಕ್ತಿಮುನಿ ಎಂಬ ವಚನಕಾರನು ತನ್ನ ಒಂದು ನೀಳ್‌ವಚನದಲ್ಲಿ ಈ ವಿಧಿಯನ್ನು ಖಂಡಿಸಿದ್ದಾನೆ. ಆ ಬಹುದೊಡ್ಡ ವಚನದಿಂದ ಅಲ್ಪಭಾಗವನ್ನು ಇಲ್ಲಿ ಉದ್ಧರಿಸಲಾಗಿದೆ.

ವಿರೋಧಮತಕ್ಕೆ..... ನಮ್ಮ ಗುರುವು, ಜಂಗಮವು, ತಂದೆ, ತಾಯಿ, ಸತಿ, ಸುತ,
ಒಡಹುಟ್ಟಿದರು ಸತ್ತರು ನಮಗೆ ಗತಿ ಯಾವುದೆಂದು
ಲಿಂಗಜಂಗಮದಾರ್ಚನಾರ್ಪಣಗಳನುಳಿದು
ಶೋಕಾಗ್ನಿಯ ಜ್ವಾಲೆಯನೆಬ್ಬಿಸಿ ಮಹಾದುಃಖಾಬ್ಧಿಯಲ್ಲಿ ಮುಳುಗಾಡುತ್ತಾ
ಅಂಧಮಾಡಿ ಗುಂಟಕೆಯನಿಕ್ಕ ಗೂಟವ ಬಡಿದು
ಶಿವಾನಂದಲೋಲುಪ್ತಿಯೆಂಬ ಸ್ತೋತ್ರಧ್ಯಾನ ಮಂಗಳಾರತಿ ಪುಷ್ಪಪತ್ರಿಯ

---

೪೨. ವಚನಸಂಪುಟ-೯, ಷಣ್ಮುಖಶಿವಯೋಗಿಗಳವರ ವಚನ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘನಸನ್ಮಾನ ನಿಜೋತ್ಸಾಹದ ಕೈವಲ್ಯ ಶುಭಸಂತೋಷವನರಿಯದೆ
ಅಯ್ಯಯ್ಯೋ ಅಪ್ಪಪ್ಪ ಅವ್ವವ್ವ ಅಣ್ಣಣ್ಣ ಅಕ್ಕಕ್ಕ
ಮಗಳೆ ಮಗಳೆ ಮಗನೆ ಮಗನೆ ಗುರುವೆ ಗುರುವೆ ಸ್ವಾಮಿ ಸ್ವಾಮಿ
ಹೇಂಗೆ ನಿಮ್ಮ ಕಳೆಕೊಂಡು ಹೇಂಗೆ ಜೀವಿಸಲೆಂದು
ಲಿಂಗಸಾವಧಾನವನುಳಿದು ಬೆಬ್ಬೊಯ ಹೊಡಹೊಡೆದು
ಎಡೆಎಡೆಯ ಬಡಿಬಡಿದು ಕಿರಾತರಂತೆ ಮಣ್ಣಿನೊಳು ಮುಚ್ಚಿ
ಗುಟ್ಟಿಯ ಮಾಡಿ ಪುತುಮೆಗಳನಿಟ್ಟು ಪೂಜಿಸಿ
ತಾಸನಾದಿಲಿಂಗಮಂತ್ರಭೋಗೋಪಭೋಗದೊಡನೆ ಸಲಿಸುವ
ತೀರ್ಥಪ್ರಸಾದವ ತೋರಿ ವಸ್ತ್ರಾಭರಣಗಳನಿಟ್ಟು
ಕುಂಡಗೋಳಕರಂತೆ ನಿಜಸಂಗನ ನಿಲವನರಿಯದೆ
ಸತ್ತ ದಿನ ಮೂರು ಐದು ಒಂಭತ್ತು ತಿಂಗಳು
ವರುಷ ಹನ್ನೆರಡು ವರುಷ ಪರಿಯಲ್ಲಿವಿಡಿದು
ಲಿಂಗ ಬಾಹ್ಯರಂತೆ ಎಡೆಹುಡಿಯನಿಟ್ಟ ಪರಮಾನ್ನಪಾಯಸಗಳ ಮಾಡಿ
ಕೊಡಗಳನ್ನಿಟ್ಟು ಪೂಜಿಸಿ ಘನಗುರುಲಿಂಗಜಂಗಮದ ತೀರ್ಥವ ತೋರಿ
ಸುಳಿಬಾಳೆ ಎಲಿಯ ಹಾಸಿ ದೇವಾದಿದೇವರ ದೇವಜಂಗಮಕ್ಕೆ ಅಲ್ಪಸ್ವಲ್ಪ
ನೀಡಿ ಆ ಸುಳಿಬಾಳೆ ಎಲೆಯೊಳಗೆ ಮಿತಿತಪ್ಪಿ
ಪಶುವಿನ ಮುಂದೆ ಇಟ್ಟ ಹಾಂಗೆ ಮಡುಗಿ
ತಮ್ಮ ಹೆತ್ತವರ ಸತ್ತವರ ಹೆಸರುಗೊಂಡ
ಗಂಡ ಗುರುಲಿಂಗಜಂಗಮಪ್ರಸಾದಿಯಾಗಿ ಹೆಂಡತಿ ಮಕ್ಕಳೊಡಹುಟ್ಟಿದರೆಲ್ಲ
ಶ್ರೀ ಗುರುವಿತ್ತ ಲಿಂಗವಿಲ್ಲದವರು ಕೇವಲ ಲಿಂಗವ
ಕೊಟ್ಟಿಕೊಂಡವರು ಕೆಲವರು
ಆ ಸತ್ತವರ ನೆನಹಿನಿಂದ ಸಮಸ್ತ ಉಪಚಾರವ ಮಾಡಿ
ಮನವೆಲ್ಲ ಸತ್ತವರೊಡಗೂಡಿ
ಲಿಂಗ ನೈವೇದ್ಯವ ಮಾಡಿದೆವೆಂಬುದೆ ಶುದ್ಧ ಅನಾಚಾರ ಕ್ರಿಯೆಯು
ಶ್ರಮಿಸಿದುದೆ ಶ್ರಾದ್ಧ ಪ್ರೇತವಾದುದೇ ಪ್ರೇದ್ಧ
ಇಂತೀ ಪ್ರೇದ್ಧವೆಂಬುದಿಲ್ಲವಾಗಿ ಶ್ರಾದ್ಧವೆಂಬುದಿಲ್ಲ
ಶ್ರಾದ್ಧಪ್ರೇದ್ಧಗಳೆಂಬುದಿಲ್ಲವಾಗಿ ತದ್ದಿನಗಳೆಂಬುದಿಲ್ಲ
ತದ್ದಿನಂಗಳೆಂಬುದಿಲ್ಲವಾಗಿ ಸಂಕಲ್ಪಭುಂಜನೆ ಇಲ್ಲ
ಅದೇನು ಕಾರಣವೆಂದರೆ:
ಪ್ರಾಣಲಿಂಗಸಂಗದಿಂ ಲಿಂಗಪ್ರಾಣವಾಯಿತ್ತಾಗಿ
ಶಿವಪ್ರಸಾದ ಸೇವ್ಯದಿಂ ಪ್ರಸಾದಕಾಯವಾಯಿತ್ತಾಗಿ
....
....ಸೌರಾಷ್ಟ್ರ ಸೋಮೇಶ್ವರಾ।।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೀರಶೈವರಿಗೆ ಇವುಗಳಿರುವುದಿಲ್ಲ:

(i) ನಿಮಿತ್ತಗಳಿಲ್ಲ:

ಪ್ರಾಣವು ಉತ್ಕ್ರಮಣವಾಗುವಾಗ ಸಾಮಾನ್ಯರಿಗಾಗಲಿ ಪ್ರಾಜ್ಞರಿಗಾಗಲೀ ಅನೇಕ ನಿಮಿತ್ತಗಳು ಗೋಚರವಾಗುತ್ತವೆ.[೪೩] ಚಂದ್ರಜ್ಞಾನಾಗಮದಲ್ಲಿಯೂ "ಉತ್ಕ್ರಾಂತಿಂ ಭಾವಿನೀಂ ಜ್ಞಾತ್ವಾ ನಿಮಿತ್ತೈಃ ಸಮನಂತರಂ"[೪೩ಎ] ಎಂದು ಹೇಳಿದೆ. ಆದರೆ ನಿಮಿತ್ತಗಳಾವುವು ಎಂಬುದನ್ನು ಹೇಳಿಲ್ಲ. ಏಕೆಂದರೆ ಶಿವಯೋಗಸಂಪನ್ನರಾದ ವೀರಶೈವರಿಗೆ ನಿಮಿತ್ತವೆಂದರೆ ಛಾಯಾದಿಪುರುಷದರ್ಶನಾದಿಗಳಲ್ಲ. ಏಕೆಂದರೆ ಹಗಲಿರುಳು ಓಂ ನಮಃ ಶಿವಾಯ ಎಂಬ ಊರ್ಧ್ವಪ್ರಣವದ ನಾದದೊಳಗಾದ ಸುನಾದವನ್ನು ಎಡೆತೆಡೆಯಿಲ್ಲದೆ ಕೇಳುವುದರಿಂದ ಜಾಗ್ರತ್‌ಸ್ವಪ್ನ-ಸುಷುಪ್ತಿಯೆಂಬ ಮೂರವಸ್ಥೆಗಳು ತುರ್ಯಾವಸ್ಥೆಯಲ್ಲಿ ಹರಿದುಹೋಗುತ್ತವೆ. ಹೀಗೆ 'ಓಂ ನಮಃ ಶಿವಾಯ' ಎಂಬ ಪ್ರಣವನಾದವನ್ನು ಕೇಳಿದವರಿಗೆ ಸ್ವಪ್ನವು ಎಂದಿಗೂ ತೋರದು. ಆದರೆ ತನುವನ್ನು ಬಿಡುವ ೧೨ ಗಂಟೆಯ ಮುನ್ನಾವಸರದಲ್ಲಿ ದಶವಿಧನಾದಗಳು[೪೪] ನುಡಿಯದೆ ಘೋಷನಿರ್ಘೋಷವಾಗುತ್ತೆ. ಆಗ ಅಂಗುಲ ಪ್ರಮಾಣವಾಗಿ ವಸ್ತುವು ಅಂಗುಷ್ಟಕ್ಕೆ ಬರುತ್ತದೆ. ಅನಂತರ ವೃಕ್ಷವನೇರಿದ ಸರ್ಪದಂತೆ ಬ್ರಹ್ಮರಂಧ್ರದ ಕೊನೆಗೇರುತ್ತದೆ. ಶಿವಯೋಗಿಗಳಾದವರಿಗೆ ಇದೇ ನಿಮಿತ್ತ.[೪೫]

(ii) ಪಿಂಡಪ್ರದಾನಾದಿಗಳಿಲ್ಲ:

> ಅಪಸವ್ಯಂ ತಿಲಾನ್ ಪಿಂಡಂ ವಿಕಿರಂ ಜಾಗ್ನಿಕರ್ಮ ಚ।
> ಅರ್ಘ್ಯಪಾತ್ರಂ ಚ ಮತಿಮಾನ್ ಶೈವಶ್ರಾದ್ಧೇಷು ವರ್ಜಯೇತ್ ||[೪೫ಎ]

ವೀರಶೈವರಾದವರು ಸತ್ತಾಗ ಮಾಡುವ ಶೈವಶ್ರಾದ್ಧದಲ್ಲಿ ಎಡದಿಂದ ಬಲಕ್ಕೆ ಜನಿವಾರವನ್ನು ಬದಲಾಯಿಸುವಂತೆ ಶಿವದಾರವನ್ನು ಅಪಸವ್ಯ ಮಾಡುವುದಾಗಲೀ, ಅಕ್ಷತೆಗೆ ಬದಲಾಗಿ ತಿಲ (ಎಳ್ಳನ್ನು) ಉಪಯೋಗಿಸುವುದನ್ನಾಗಲಿ, ಪ್ರೇತತ್ವವೇ ಇಲ್ಲದುದರಿಂದ ಪಿಂಡ ಹಾಕುವುದಾಗಲೀ ಅಕ್ಕಿಯನ್ನು ಎರಚುವುದಾಗಲೀ, ಆಹಿತಾಗ್ನಿಯನ್ನೊಯ್ಯುವುದಾಗಲೀ ಅರ್ಘ್ಯಪಾತ್ರೆಯನ್ನು ಕೊಂಡೊಯ್ಯುವುದಾಗಲಿ ಮಾಡಕೂಡದು. ಇವು ನಿಷಿದ್ಧ.

---

೪೩. ಶಿವಪುರಾಣದ ಉಮಾಸಂಹಿತೆಯ ೨೫-೨೮ನೇ ಅಧ್ಯಾಯಗಳಲ್ಲಿ, ಸ್ಕಾಂಧಪುರಾಣದ ಸೂತಸಂಹಿತೆಯ ೪-೧-೪೭ನೇ ಅಧ್ಯಾಯಗಳಲ್ಲಿ ಹಾಗೂ ಗರುಡಪುರಾಣದಲ್ಲಿಯೂ, ಧರ್ಮಶಾಸ್ತ್ರಗಳಲ್ಲಿಯೂ ನೋಡಬಹುದು.

೪೩ಎ. ಚಂದ್ರಜ್ಞಾನಾಗಮ, ಚ.ಪಾ., ೨.೫.

೪೪. ದಶವಿಧನಾದಗಳೆಂದರೆ: ಶರಧಿ, ನಿಝರ, ಮೇಘ, ಮುರಜ, ಭೇರಿ, ಕಹಳೆ, ಘಂಟೆ, ಶಂಖ, ವೀಣೆ, ಭ್ರಮರ ನಾದ.

೪೫. ಷಣ್ಮುಖ ಶಿವಯೋಗಿಗಳವರ ವಚನದ ಸಾರಾಂಶ.

೪೫ಎ. ಚಂದ್ರಜ್ಞಾನಾಗಮ, ಚ.ಪಾ., ೫.೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

(iii) ವಿಶ್ವೇದೇವತೆಗಳ ಆವಾಹನಾದಿಗಳಿಲ್ಲ:

ವಿಶ್ವೇದೇವಾವಾಹನಂ ಚ ನಾಭಿಶ್ರವಣಕೀರ್ತನಮ್।
ಪ್ರದಕ್ಷಿಣವಿಸರ್ಗೇ ವಾ ಸೀಮಾಂತ ಗಮನಂ ನಹಿ॥[೪೬]

ವಿಶ್ವೇದೇವತೆಗಳನ್ನು ಆವಾಹನೆ ಮಾಡುವುದು, ಹೊಗಳುವುದು ಕೀರ್ತನೆ ಮಾಡುವುದು, ಪ್ರದಕ್ಷಿಣೆ ಹಾಕುವುದು, ಸೀಮಾಂತಕ್ಕೆ ಗಮಿಸುವುದು ಇವು ನಿಷಿದ್ಧ. ಆದರೆ ಅದೇ ಚಂದ್ರಜ್ಞಾನಾಗಮದಲ್ಲಿ ತತ್ತ್ವಸಂಯೋಜನೆ ಮಾಡುವಾಗ ಉತ್ತರಶೈವದಲ್ಲಿ ವಿಶ್ವೇದೇವತೆಗಳಿಂದ ನಂದಿಕೇಶ್ವರ ಮಹಾಕಾಲರನ್ನು ಆರಾಧಿಸುತ್ತೇನೆಂದು ಸಂಕಲ್ಪಮಾಡಬೇಕೆಂದಿದೆ.

"ನಂದಿಕೇಶ್ವರಮಹಾಕಾಲಸಂಜ್ಞಿನೋರ್ವಿಶ್ವದೇವಯೋಃ।
ಪಿತುಃ ಪಿತಾಮಹಾದೀನಾಂ ಮಹೇಶಾದಿ ಸ್ವರೂಪಿಣಾಂ॥
ಷಟ್‌ತ್ರಿಂಶತಾಂ ಚ ತತ್ತ್ವಾನಾಂ ಕಲಾನಾಮಷ್ಟತ್ರಿಂಶತಾಂ।
ಆರಾಧನಂ ಕರಿಷ್ಯಾಮೀತ್ಯೇವಂ ಸಂಕಲ್ಪಮಾಚರೇತ್॥"[೪೭]

(iv) ಮರಣಸೂತಕವಿರುವುದಿಲ್ಲ:

ನ ತಸ್ಯ ಸೂತಕಂ ವತ್ಸ ಪ್ರಾಣಲಿಂಗಾಂಗಿಸಂಗಿನಃ।
ಜನನೋತ್ಥ ಮೃತೋತ್ಥಂ ವಾ ವಿದ್ಯತೇ ನಾತ್ರಸಂಶಯಃ॥

"ಯತೀನಾಂ ಚ ವನಸ್ಥಾನಾಂ ನೈಷ್ಠಿಕಾನಾಂ ಚ ವರ್ಣಿನಾಮ್।
ಜನಿಜಂ ಮೃತಿಜಂ ವಾಪಿ ನಾಶೌಚಮಿಹ ವಿದ್ಯತೇ॥"[೪೮]

ಯತಿಗಳಿಗೆ ವಾನಪ್ರಸ್ಥಾಶ್ರಮಿಗಳಿಗೆ ಬ್ರಹ್ಮಚಾರಿಗಳಿಗೆ ವರ್ಣಿಗಳಿಗೆ (ಅತ್ಯಾಶ್ರಮಿಗಳಿಗೆ) ಜನನದ ಅಥವಾ ಮರಣದ ಸೂತಕವಿಲ್ಲ. ಇಲ್ಲಿ ಯದ್ಯಪಿ ಈ ಪಟಲದ ಪ್ರಾರಂಭದಲ್ಲಿ ಅಲ್ಪ, ಅಧಿಕ, ಅಪೂರ್ಣ, ಪೂರ್ಣ, ಶೌಚಗಳನ್ನು ಹೇಳಿದ್ದರೂ "ವಾಕ್ಯಸ್ಯಾನ್ಯಸ್ಯಸನ್ನಿಧೇಃ" ಎಂಬ ಅರ್ಥನಿಯಾಮಕದನ್ವಯ ಇದರ ಹಿಂದಿನ ಶ್ಲೋಕಗಳನ್ನನುಸರಿಸಿ ವಿಪ್ರ, ವಿಶ (ವೈಶ್ಯ) ಕ್ಷತ್ರಿಯ ಶೂದ್ರವರ್ಣದವರಿಗೇ ಹೊರತು ಅತ್ಯಾಶ್ರಮಿಗಳಿಗಲ್ಲ ಎಂದು ತಿಳಿಯುವುದು. ಮತ್ತು ಇಲ್ಲಿ ಸೂತಕವಿಲ್ಲವೆಂದರೆ ಲಿಂಗಾರ್ಚನಾದಿಗಳನ್ನು ಬಿಡಬಾರದು ಎಂಬುದು ತಾತ್ಪರ್ಯಾರ್ಥವೇ ವಿನಾ ಸ್ನಾನಾದಿ ಶುದ್ಧಕರ್ಮಗಳನ್ನು ಬಿಡಬಾರದೆಂದಲ್ಲ.

(ಈ) ಆಗಮಾಚರಣೆಯೊಂದಿಗೆ ಶರಣರಾಚರಣೆ:

ಆಗಮೋಕ್ತವಾದ ಅಂತ್ಯೇಷ್ಟಿವಿಧಿಯ ಕ್ರಿಯೆಗಳೊಂದಿಗೆ ಕಾಲಾಂತರದಲ್ಲಿ ಶರಣರ ಆಚರಣೆಗಳೂ ಮೇಲನಗೊಂಡಿರುತ್ತವೆ. ಇದಕ್ಕೆ 'ಸಮಯ' 'ಸಂಪ್ರದಾಯ' ಹಾಗೂ ಪ್ರಾಂತೀಯ ಭೇದಗಳೂ ಬಹುಮಟ್ಟಿಗೆ ಕಾರಣವೆನಿಸುತ್ತದೆ.

---

೪೬. ಅದೇ, ಚ.ಪಾ., ೪.೨೯.
೪೭. ಅದೇ, ಚ.ಪಾ., ೪.೪೧-೪೨.
೪೮. ಅದೇ, ಚ.ಪಾ., ೬.೧೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಉದಾ: ಶ್ರೀ ಗುರುಬಸವಲಿಂಗಾಯ ಎಂಬ ಬರೆಹವುಳ್ಳ ತಗಡುಗಳ ಸಂಬಂಧ. ಮೃತ್ತಿಕಾದಾನ ಮಾಡುವಾಗ ಹೇಳುವ ಕನ್ನಡಪುಷ್ಪಾಂಜಲಿಸ್ತವನ. ಸಮಾಧಿಯ ಮುಂದೆ ಸ್ವಲ್ಪದೂರದಲ್ಲಿ ಶಿವದೂತರ ಆಗಮನ. ರುದ್ರಾಧ್ಯಾಯ ಪಠಣದ ಜೊತೆಗೆ ವಚನಪಠಣ ಇತ್ಯಾದಿ.

ಒಟ್ಟಿನಲ್ಲಿ ಶಿವನನ್ನು ಕಾಣುವ ಸಂಸ್ಕಾರಕ್ಕೆ ದೀಕ್ಷೆ ಎನ್ನುವಂತೆ ಶಿವಸಾಯುಜ್ಯವನ್ನು ಪಡೆಯುವ ಸಂಸ್ಕಾರಕ್ಕೆ ಅಂತ್ಯೇಷ್ಟಿವಿಧಿ ಎನ್ನಬಹುದು. ಹಾಗೂ ಸ್ಥಾವರದಿಂದ ಹುಟ್ಟಿದ ಜೀವಿಯು ಪುನರಾವೃತ್ತಿರಹಿತನಾಗಿ ಸ್ಥಾವರದಲ್ಲಿಯೇ ವಿಲೀನಗೊಳ್ಳುವ ಮಂಗಳ ಮಹಾಕ್ರಿಯೆಯೇ ಅಂತ್ಯೇಷ್ಟಿವಿಧಿ ಎನ್ನಬಹುದು.

ಆದ್ದರಿಂದ "ಸಮಾಧಿರ್ಮೋಕ್ಷಧರ್ಮೋಽಯಂ" ಅಲ್ಲವೆ? ಕೊನೆಯಲ್ಲೊಂದು ಶಿವಶಾಸನದ ಎಚ್ಚರಿಕೆ:

"ಶಿವಭಕ್ತೌ ಶಿವಾಚಾರೇ ಶಿವಮೇಧೇ ಶಿವವ್ರತೇ।
ಶ್ರದ್ಧಾಹೀನೋ ವಸೇನ್ನಿತ್ಯಂ ನರಕೇ ಕಾಲಮಕ್ಷಯಮ್॥"

ಶಿವಭಕ್ತರಲ್ಲಿ, ಶಿವಪೂಜೆಯಲ್ಲಿ, ಶಿವವ್ರತದಲ್ಲಿ ಹಾಗೂ ಶಿವಮೇಧ (ಸಮಾಧಿ ಕ್ರಿಯೆಯಲ್ಲಿ)ದಲ್ಲಿ ಯಾರು ಶ್ರದ್ಧೆಯನ್ನು ತೋರುವುದಿಲ್ಲವೋ ಅಂಥವರು ನರಕದಲ್ಲಿ ಅನಂತಕಾಲ ವಾಸಮಾಡಬೇಕಾಗುವುದು.

○

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೨. ಆಶೌಚ ಮತ್ತು ಪ್ರಾಯಶ್ಚಿತ್ತಗಳು

-ವಿದ್ವಾನ್ ಬಿ. ರಾಜಶೇಖರಯ್ಯ

೧. ಪೀಠಿಕೆ:

ಜೀವಾತ್ಮನ ಶುದ್ಧತೆಗೆ ಸಂಸ್ಕಾರವು ಅತ್ಯಂತ ಮುಖ್ಯವಾದುದು. ಸಂಸ್ಕಾರವೆಂದರೆ, 'ಶುದ್ಧಗೊಳಿಸುವುದು' ಎಂದರ್ಥ. ಶಿಶುವ ಗರ್ಭದಲ್ಲಿರುವಾಗಲೇ ಸಂಸ್ಕಾರವು ಪ್ರಾರಂಭಗೊಂಡು, ಸಮಾಧಿಯಾಗುವವರೆಗೂ ಒಂದಲ್ಲ ಒಂದು ರೀತಿಯ ಸಂಸ್ಕಾರವು ಜೀವಿಗೆ ಅವಶ್ಯ ಸಂಭವಿಸುತ್ತಿರುತ್ತದೆ. ಆದ್ದರಿಂದ- "ಮಾನವ ಜೀವನವನ್ನು ಒಂದು ವೈಜ್ಞಾನಿಕ ವ್ಯವಸ್ಥೆಗೆ ಒಳಪಡಿಸಿ, ಮಾನವನನ್ನು ದೈವೀಶಕ್ತಿಯುಕ್ತನನ್ನಾಗಿ ಪರಿವರ್ತಿಸುವ ಒಂದು ಅದ್ಭುತವಾದ ಪವಿತ್ರ ಭಾವನೆಯೇ ಎಲ್ಲ ಸಂಸ್ಕಾರಗಳ ಹಿನ್ನೆಲೆಯಾಗಿರುತ್ತದೆನ್ನ-ಬಹುದು. ಅಂದರೆ, ಶರೀರಶುದ್ಧಿ, ಅಂತರಶುದ್ಧಿ, ಬೌದ್ಧಿಕಶುದ್ಧಿ -ಇತ್ಯಾದಿಗಳನ್ನು ಉಂಟುಮಾಡಿ, ಮಾನವನ ಪರಿಪೂರ್ಣವಾದ ವ್ಯಕ್ತಿತ್ವವನ್ನು ಅತ್ಯಂತ ಪವಿತ್ರಗೊಳಿಸಿ, ಅವನನ್ನು ನಿರಂತರವಾಗಿ ಶಿವಾಚಾರ ಸಂಪತ್ಸಂಪನ್ನನನ್ನಾಗಿಸುವುದೇ ಸಂಸ್ಕಾರ" -ಎಂಬುದು ಸಂಸ್ಕಾರಪದದ ವಿಶಾಲಾರ್ಥವಾಗಿರುತ್ತದೆ. ಅಂತೆಯೇ ದಶ ಅಥವಾ ಷೋಡಶ-ಸಂಸ್ಕಾರಗಳನ್ನು ಶಾಸ್ತ್ರಜ್ಞರು ವಿಧಿಸಿರುವರು. ಗರ್ಭಸ್ಥ ಶಿಶುವಿಗೆ ಲಿಂಗಧಾರಣೆ, ಗರ್ಭವತಿ ತಾಯಿಗೆ ಸೀಮಂತಾದಿವಿಧಿವಿಧಾನ, ಜಾತಸಂಸ್ಕಾರ, ಲಿಂಗಧಾರಣೆ, ನಾಮಕರಣ, ಚೌಲ, ಅಕ್ಷರಾಭ್ಯಾಸ, ದೀಕ್ಷಾಸಂಸ್ಕಾರ, ವಿವಾಹಸಂಸ್ಕಾರ -ಇತ್ಯಾದಿ ಇತ್ಯಾದಿ ಸಂಸ್ಕಾರಗಳಿಂದ ಜೀವಾತ್ಮನ ಶುದ್ಧೀಕರಣವಾಗುತ್ತಿರುತ್ತದೆ. ಇವುಗಳಲ್ಲೆಲ್ಲ ಮುಖ್ಯವಾದುದೆಂದರೆ, ಮಲತ್ರಯವನ್ನು ನಿರ್ಮೂಲನ ಮಾಡಿ, ಶಿವಜೀವೈಕ್ಯವನ್ನು ದೊರಕಿಸಿಕೊಡುವ ಕ್ರಿಯಾದೀಕ್ಷೆ, ಮನೂದೀಕ್ಷೆ, ವೇಧಾದೀಕ್ಷೆಗಳೆಂಬ ದೀಕ್ಷಾತ್ರಯ. ಒಟ್ಟಿನಲ್ಲಿ ಈ ಎಲ್ಲಾ ಸಂಸ್ಕಾರಗಳು ಜೀವಾತ್ಮನನ್ನು ಪ್ರತ್ಯಕ್ಷ ಹಾಗೂ ಪರೋಕ್ಷ ರೀತಿಯಲ್ಲಿ ಪರಿಶುದ್ಧಗೊಳಿಸುತ್ತವೆಂಬುದು ಶಾಸ್ತ್ರ ಸಿದ್ಧಾಂತ.

ಇಂತಹ ಈ ಸಂಸ್ಕಾರಗಳ ಆಚರಣೆ ನಮಗೆ ಹೇಗೆ ಮುಖ್ಯವೋ, ಹಾಗೆಯೇ ಆಶೌಚವಿಧಿಯೂ ಮತ್ತು ಪ್ರಾಯಶ್ಚಿತ್ತವಿಧಿಯೂ ಅಷ್ಟೇ ಮುಖ್ಯ. ಆಶೌಚದ ಪ್ರಕಾರಗಳಲ್ಲೆಲ್ಲಾ ಅವಸಾನವಿಧಿಯು ಅಥವಾ ಅಂತ್ಯೇಷ್ಟಿವಿಧಿಯು ಅತ್ಯಂತ ಪ್ರಮುಖ-ವಾದುದು. ಏಕೆಂದರೆ, ಲಿಂಗಾಂಗಸಂಗಿಯಾದ ವೀರಶೈವನಿಗೆ ಸಮಾಧಿಕ್ರಿಯೆಯೇ ವಿದ್ಯುಕ್ತವಾದುದು. ಈ ರೀತಿ ವಿಧ್ಯುಕ್ತಸಮಾಧಿಯನ್ನು ಮಾಡುವುದರಿಂದ, ಅಂಗನಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರೇತತ್ವಾದಿಗಳು ಎಂದಿಗೂ ಸಂಭವಿಸುವುದಿಲ್ಲವೆಂಬುದು ಸಿದ್ಧಾಂತ - ಅಂತೆಯೇ ಮಕುಟಾಗಮದ ಅಪ್ಪಣೆ ಹೀಗಿರುತ್ತದೆ-

"ಶಾಂಭವವ್ರತನಿಷ್ಠಾನಾಂ ಪ್ರೇತತ್ವಂ ನ ಹಿ ವಿದ್ಯತೇ।
ಪ್ರೇತತ್ವೇನ ವಿಮುಕ್ತಸ್ಯ ಕರ್ಮಲೋಪೋ ನ ಶಂಕ್ಯತೇ॥"[೧]

ಅಂದಮೇಲೆ, ಷೋಡಶಸಂಸ್ಕಾರಗಳಂತೆ ಆಶೌಚವಿಧಿಯೂ ಸಹ ಅತ್ಯಂತ ಮುಖ್ಯವೆಂಬುದು ಇದರಿಂದ ವೇದ್ಯವಾಗುತ್ತದೆ. ಆದ್ದರಿಂದ ಆಶೌಚಾಚರಣೆಯು ಅತ್ಯಂತ ಅನಿವಾರ್ಯ.

೨. ಆಶೌಚಪದದ ನಿಷ್ಪತ್ತಿ ಮತ್ತು ಅರ್ಥವಿವರಣೆ:

'ಆಶೌಚ'ವೆಂಬ ಈ ಪದದಲ್ಲಿ 'ಆ' ಎಂಬ ಉಪಸರ್ಗ, 'ಶೌಚ' ಎಂಬ ಪದ -ಹೀಗೆ ಎರಡು ಅಂಶಗಳಿರುತ್ತವೆ. 'ಶುಚೇಃ ಭಾವಃ ಶೌಚಂ' ಎಂಬುದು ಶೌಚಪದದ ನಿಷ್ಪತ್ತಿ. 'ಸ್ವಚ್ಛತೆ, ನೈರ್ಮಲ್ಯ, ಶುದ್ಧತೆ, ಮಡಿಯಾಗಿರುವಿಕೆ, ಮಲವಿಸರ್ಜನೆ' ಇತ್ಯಾದಿ ಶೌಚಪದದ ಅರ್ಥಗಳು. 'ಶುದ್ಧತೆ' ಎಂಬ ಅರ್ಥದಲ್ಲಿ ಗಾರುಡಪುರಾಣದಲ್ಲಿ ಪಂಚಶೌಚ ಅಥವಾ ಕೆಲವು ಶೌಚಗಳನ್ನು ಹೀಗೆ ತಿಳಿಸಲಾಗಿದೆ.

"ಸರ್ವೇಷಾಮೇವ ಶೌಚಾನಾಂ ಅರ್ಥಶೌಚಂ ವಿಶಿಷ್ಯತೇ।
ಯೋಽರ್ಥಾರ್ಥೈರಶುಚಿಃ ಶೌಚಾನ್ನ ಮೃದಾವಾರಿಣಾ ಶುಚಿಃ॥
ಸತ್ಯಶೌಚಂ ಮನಃಶೌಚಂ ಶೌಚಮಿಂದ್ರಿಯನಿಗ್ರಹಃ।
ಸರ್ವಭೂತದಯಾಶೌಚಂ ಜಲಶೌಚಂ ತು ಪಂಚಮಮ್॥
ಯಸ್ಯ ಸತ್ಯಂ ಚ ಶೌಚಂ ಚ ತಸ್ಯ ಸ್ವರ್ಗೋ ನ ದುರ್ಲಭಃ॥"[೨]

ಹಾಗೆಯೇ ಇದೇ ಪುರಾಣದ ೨೧೫ನೆಯ ಅಧ್ಯಾಯದಲ್ಲಿ-

"ಯಾವತಾ ಶುದ್ಧಿಂ ಮನ್ಯೇತ ತಾವಚ್ಛೌಚಂ ಸಮಾಚರೇತ್।
....
ಶೌಚಂ ತು ದ್ವಿವಿಧಂ ಪ್ರೋಕ್ತಂ ಬಾಹ್ಯಮಾಭ್ಯಂತರಂ ತಥಾ।
ಮೃಜ್ಜಲಾಭ್ಯಾಂ ಸ್ಮೃತಂ ಬಾಹ್ಯಂ ಭಾವಶುದ್ಧಿರಥಾಂತರಂ॥
ಅಭಕ್ಷ್ಯಪರಿಹಾರಸ್ತು ಸಂಸರ್ಗಂ ಚಾಪ್ಯನಿಂದಿತೈಃ।
ಸ್ವಧರ್ಮೇ ಚ ವ್ಯವಸ್ಥಾನಂ ಶೌಚಮೇತತ್ ಪ್ರಕೀರ್ತಿತಮ್॥[೩]

ಎಲ್ಲ ಶೌಚಗಳಲ್ಲಿ ಅರ್ಥಶೌಚವೇ ಶ್ರೇಷ್ಠ. ಸತ್ಯಶೌಚ, ಮನಃಶೌಚ, ಇಂದ್ರಿಯ-ನಿಗ್ರಹಶೌಚ, ಸರ್ವಭೂತದಯಾಶೌಚ, ಜಲಶೌಚ -ಎಂಬವು ಐದು ಶೌಚಗಳು. ಸತ್ಯ ಮತ್ತು ಶೌಚ ಉಳ್ಳವನಿಗೆ ಸ್ವರ್ಗವು ಬಹಳ ಸುಲಭ. ಶುದ್ಧಿಯನ್ನು ಬಯಸುವುದರಿಂದ ಶೌಚವನ್ನು ಆಚರಿಸಬೇಕು. ಅಭಕ್ಷ್ಯ ವಸ್ತುವನ್ನು ಭಕ್ಷಿಸದೇ ಇರುವುದು, ಸಾತ್ವಿಕರೊಡನೆ

---

೧. ಮಕುಟಾಗಮ, ಚರ್ಯಾಪಾದ, ೧.೩೦.

೨. ಗರುಡಪುರಾಣ, ಅಧ್ಯಾಯ ೧೧೧.

೩. ಅದೇ, ಅಧ್ಯಾಯ ೨೧೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪರ್ಕ, ತಮ್ಮ ತಮ್ಮ ಧರ್ಮವನ್ನು ನಿಷ್ಠೆಯಿಂದಾಚರಿಸುವುದು - ಇದೇ ಶೌಚ. ಈ ಶೌಚವು ಬಾಹ್ಯ ಮತ್ತು ಆಂತರ (ಆಭ್ಯಂತರ) ಎಂದು ಎರಡು ವಿಧ. ಮಣ್ಣು, ನೀರು ಇತ್ಯಾದಿಗಳಿಂದ ಬಾಹ್ಯಶುದ್ಧಿಯಾದರೆ, ಭಾವಶುದ್ಧಿಯಿಂದ ಆಂತರಶುದ್ಧಿಯಾಗುತ್ತದೆ ಇತ್ಯಾದಿ.

ಆದರೆ ಪ್ರಕೃತ ವಿಷಯಕ್ಕೆ ಸಂಬಂಧಿಸಿದಂತೆ ಶೌಚಪದವು ಒಂದು ಪಾರಿಭಾಷಿಕ ಪದವಾಗಿದ್ದು, 'ಸೂತಕ, ಮೈಲಿಗೆ' ಎಂಬಿತ್ಯಾದಿ ಅರ್ಥಗಳಲ್ಲಿ ಪ್ರಯುಕ್ತವಾಗಿರುತ್ತದೆ. ಇದನ್ನು ಸ್ಪಷ್ಟಪಡಿಸಿ ಕೊಡುವ ಸಲುವಾಗಿಯೇ ಶೌಚಪದಕ್ಕೆ 'ಅ' ಎಂಬ ಉಪಸರ್ಗವನ್ನು ಸೇರಿಸಲಾಗಿದೆ. ಅಂದರೆ ಶೌಚ, ಆಶೌಚ ಈ ಎರಡೂ ಪದಗಳೂ ಸಹ ಸೂತಕಾದಿ ಅರ್ಥದಲ್ಲಿ ಪ್ರಯುಕ್ತವಾಗಿರುವುದು ಕಂಡುಬಂದರೂ, 'ಆಶೌಚ' ಪದವೇ ಗ್ರಂಥಗಳಲ್ಲಿ ಹೆಚ್ಚು ಪ್ರಯುಕ್ತವಾಗಿದೆ.

ಜನನ-ಮರಣಗಳಿಂದಾಗುವ ಸೂತಕಾದಿಗಳನ್ನು ಹೋಗಲಾಡಿಸಿಕೊಳ್ಳುವ ವಿಧಿವಿಧಾನವೇ 'ಆಶೌಚವಿಧಿ'. ಅಂದರೆ, 'ಅಶುದ್ಧತೆಯನ್ನು ದೂರಮಾಡಿಕೊಂಡು, ಶುದ್ಧತೆಯನ್ನು ಪಡೆಯುವುದು' ಎಂಬ ಅರ್ಥದಲ್ಲಿಯೇ 'ಆಶೌಚ' ಪದದ ಬಳಕೆ ಇರುತ್ತದೆ. ಆದ್ದರಿಂದ 'ಆಶೌಚ' ಪದಕ್ಕೆ 'ಸೂತಕ, ಮೈಲಿಗೆ' ಎಂಬ ಅರ್ಥವೇ ಪ್ರಕೃತಕ್ಕೆ ಯುಕ್ತವಾದುದು. ಅಂದರೆ- "ನಿತ್ಯಕರ್ಮಗಳ ಪರಿತ್ಯಾಗ, ಸ್ನಾನಾದಿಗಳಿಂದ ದೂರವಾಗತಕ್ಕ, ಕೇವಲ ವ್ಯಕ್ತಿಗತವಾದ ಒಂದು ವಿಶಿಷ್ಟ ವಿಧಿವಿಧಾನವೇ 'ಆಶೌಚ' ಎನ್ನಬಹುದು." ಹಳ್ಳಿಗಳಲ್ಲಿ ಜನನ-ಮರಣಾದಿಗಳು ಸಂಭವಿಸಿದ ಸಂದರ್ಭಗಳಲ್ಲಿ ಸುಮಾರು ಹತ್ತರಿಂದ ಹನ್ನೆರಡು ದಿವಸಗಳವರೆಗೆ ದೇವರ ದೀಪ ಹಚ್ಚದಿರುವುದು ಇತ್ಯಾದಿಗಳು ಈಗಲೂ ರೂಢಿಯಲ್ಲಿರುವುದನ್ನು ನಾವು ಇಂದಿಗೂ ಮನಗಾಣಬಹುದಾಗಿದೆ. ಇದೇ 'ಆಶೌಚ, ಸೂತಕ, ಮೈಲಿಗೆ' ಇತ್ಯಾದಿ.

೩. ಪ್ರಾಯಶ್ಚಿತ್ತಪದದ ನಿಷ್ಪತ್ತಿ ಮತ್ತು ಅರ್ಥವಿವರಣೆ:

ಈ 'ಪ್ರಾಯಶ್ಚಿತ್ತ' ಪದದಲ್ಲಿ 'ಪ್ರಾಯಃ' ಮತ್ತು 'ಚಿತ್ತಂ' ಎಂಬ ಎರಡು ಪದಗಳು ಸೇರಿರುತ್ತವೆ. ಈ ಎರಡೂ ಪದಗಳ ಸಂಯೋಗದಿಂದಲೇ 'ಪ್ರಾಯಶ್ಚಿತ್ತ' ಪದವಾಗಿರುತ್ತದೆ.

'ಪ್ರಾಯೋ ನಾಮ ತಪಃ ಪ್ರೋಕ್ತಂ ಚಿತ್ತಂ ನಿಶ್ಚಯ ಉಚ್ಯತೇ।
ತಪೋನಿಶ್ಚಯಸಂಯುಕ್ತಂ ಪ್ರಾಯಶ್ಚಿತ್ತಮಿತಿ ಸ್ಮೃತಮ್॥'
(ತಪೋನಿಶ್ಚಯಯೋರ್ಯೋಗಾತ್ ಪ್ರಾಯಶ್ಚಿತ್ತಂ ಪ್ರಕೀರ್ತಿತಮ್)
(ತಪೋನಿಶ್ಚಯಸಂಯೋಗಾತ್ ಪ್ರಾಯಶ್ಚಿತ್ತಮಿತೀರಿತಮ್॥)[೪]

ಎಂಬ ಈ ಹೇಳಿಕೆಯ ಆಧಾರದ ಮೇಲೆ ಈ ಪದವನ್ನು ಹೀಗೆ ವಿಶ್ಲೇಷಿಸಬಹುದು- 'ಪ್ರಾಯಃ ಎಂದರೆ ತಪಸ್ಸು; ಚಿತ್ತಂ- ಎಂದರೆ ನಿಶ್ಚಯ' ಅರ್ಥಾತ್ ೧. ಒಂದು ನಿಶ್ಚಿತವಾದ ತಪಸ್ಸು ೨. ದೈಹಿಕಶ್ರಮದ ಜಪ, ತಪಸ್, ಕೃಚ್ಛ್ರ, ಅತಿಕೃಚ್ಛ್ರ, ಚಾಂದ್ರಾಯಣಾದಿ

---

೪. ಮನುಸ್ಮೃತಿ, ೧೧.೪೪ ಮತ್ತು ಹೇಮಾದ್ರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವ್ರತಗಳ ಆಚರಣೆ ೩. ಪಶ್ಚಾತ್ತಾಪವನ್ನು ಹೊಂದಿದ ಮನಸ್ಸು ೪. ತಾನು ಮಾಡಿದ ತಪ್ಪನ್ನು ಅರಿತು ಉಪವಾಸಾದಿಗಳಿಂದ ಆತ್ಮಶುದ್ಧಿ ಮಾಡಿಕೊಳ್ಳುವುದು' -ಇತ್ಯಾದಿ ಅರ್ಥಗಳನ್ನು ಈ ಪದಕ್ಕೆ ಗ್ರಹಿಸಬಹುದು. ತಾತ್ಪರ್ಯವೆಂದರೆ-.'ಯಾವುದಾದರೊಂದು ಪಾಪದ ಪರಿಹಾರಕ್ಕಾಗಿ ಕೈಗೊಳ್ಳಲೇಬೇಕಾದ ಅತ್ಯವಶ್ಯವಿಧಿವಿಧಾನ, ಧಾರ್ಮಿಕಕ್ರಿಯೆ, ಪಾಪಪರಿಹಾರಕ್ಕಾಗಿ ದೇಹಮನಸ್ಸುಗಳನ್ನು ದಂಡಿಸಿ ಆಚರಿಸುವ ಧಾರ್ಮಿಕ ವಿಧಿ' ಎಂಬುದು ಈ ಪ್ರಾಯಶ್ಚಿತ್ತಪದದ ವಿಸ್ತೃತವಾದ ಅರ್ಥವಾಗಿರುತ್ತದೆ. ಕರ್ಮಗಳಲ್ಲಿ ಔದಾಸೀನ್ಯ, ಅಕಾರ್ಯಕಾರಣ, ಚಾಪಲ್ಯ -ಇತ್ಯಾದಿಗಳು ಪಾಪಕರ್ಮ ಪ್ರಚೋದಕಗಳು. ಇಂತಹ ಪಾಪಕರ್ಮಿಯ ಆತ್ಮಶುದ್ಧಿಗಾಗಿ ಹೇಳಿರುವ ವಿಧಿಗಳೇ ಪ್ರಾಯಶ್ಚಿತ್ತಗಳು.

ಪಾಪಕಾರ್ಯವು ತನ್ನಿಂದಾದರೂ ಆಗಿರಬಹುದು ಅಥವಾ ಬೇರೆಯವರಿಂದ-ಲಾದರೂ ಆಗಿರಬಹುದು. ಈ ಎರಡೂ ರೀತಿ ಪಾಪದ ಪರಿಹಾರಕ್ಕೆ ಯೋಗ್ಯ ಪ್ರಾಯಶ್ಚಿತ್ತಗಳು ವಿಧಿವಿಹಿತವಾಗಿರುತ್ತವೆ. 'ಮಾತುಃ ಪಾಪಸ್ಯ ಭರತಃ ಪ್ರಾಯಶ್ಚಿತ್ತ-ಮಿವಾಕರೋತ್' ಎಂಬ ರಾಮಾಯಣದ ಈ ವಾಕ್ಯವನ್ನು ಪರಿಶೀಲಿಸುವುದಾದರೆ, ತನ್ನ ತಾಯಿಯಾದ ಕೈಕೇಯಿ ಆಚರಿಸಿದ ಪಾಪಕಾರ್ಯ ಸಂಬಂಧವಾದ ಪಾಪವನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ, ತಾನೂ ಸಹ ರಾಮನಂತೆ ವನೌಕಸನಾಗಿ ಪ್ರಾಯಶ್ಚಿತ್ತ ಮಾಡಿಕೊಂಡಂತೆಯೇ, ತನ್ನ ಅತ್ಯಂತ ನಿಕಟವರ್ತಿಗಳು ಆಚರಿಸಿದ ಪಾಪಕ್ಕೆ ವ್ಯಕ್ತಿಯು ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದೆಂಬುದು ಇದರಿಂದ ನಿಶ್ಚಿತವಾಗುತ್ತದೆ.

೪. ಆಶೌಚದ ಆಚರಣೆ ಯಾರಿಗೆ ಉಂಟು? ಮತ್ತು ಯಾರಿಗೆ ನಿಷಿದ್ಧ?

ಆಗಮಗಳಲ್ಲಿ ಹಾಗೂ ಶಾಸ್ತ್ರಗಳಲ್ಲಿ ಆಶೌಚದಾಚರಣೆಯನ್ನು ಕೆಲವರಿಗೆ ನಿಷೇಧಿಸಲಾಗಿದೆ, ಮತ್ತೆ ಕೆಲವರಿಗೆ ನಿಯತವಾಗಿ ವಿಧಿಸಲಾಗಿದೆ. ಚಂದ್ರಜ್ಞಾನಾಗಮ-ದಲ್ಲಿ ಹೀಗೆ ಹೇಳಲಾಗಿದೆ-

'ಯತೀನಾಂ ಚ ವನಸ್ಥಾನಾಂ ನೈಷ್ಠಿಕಾನಾಂ ಚ ವರ್ಣಿನಾಮ್।
ಜನಿಜಂ ಮೃತಿಜಂ ವಾಪಿ ನಾಶೌಚಮಿಹ ವಿದ್ಯತೇ॥'[೫]

ಸಂನ್ಯಾಸಿಗಳಿಗೆ, ವಾನಪ್ರಸ್ಥಾಶ್ರಮಿಗಳಿಗೆ ಮತ್ತು ನೈಷ್ಠಿಕಬ್ರಹ್ಮಚಾರಿಗಳಿಗೆ ಜನನ-ಮರಣ ಸಂಬಂಧವಾದ ಸೂತಕವಿರುವುದಿಲ್ಲ. ಹಾಗೆಯೇ ಮಕುಟಾಗಮದಲ್ಲಿ ಹೀಗೆ ಹೇಳಲಾಗಿದೆ-

'ಶಾಂಭವವ್ರತಶುದ್ಧಾನಾಂ ಮತ್ಸೇವಾಭಿರತಾತ್ಮನಾಮ್।
ಮುಕ್ತಿಭಾಜಾಂ ತನುತ್ಯಾಗಹೇತುಕಾಶೌಚಸಂಗಮಃ॥
ಯದ್ಯಪ್ಯಸಂಭಾವ್ಯ ಏವ ಪ್ರಾಣಿದೋಷಾಪ್ರಕಾಶನಾತ್॥
ತಥಾಪಿ ತೇಷಾಂ ಸಂಸಾರಸಂಬದ್ಧ ತನುಯೋಗಿನಾಂ।
ದೇಹೋತ್ಪತ್ತಿವಿನಾಶೋತ್ಥಮಾಶೌಚಮಿಹ ವಿದ್ಯತೇ।
ಯತೀನಾಂ ತದ್ಧಿ ಸಂಸಾರಯೋಗಾಭಾವಾನ್ನ ಯುಜ್ಯತೇ॥

---

೫. ಚಂದ್ರಜ್ಞಾನಾಗಮ, ಚ.ಪಾ., ೬.೧೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಸ್ಮಾತ್ ಸಂಸಾರಸಂಪರ್ಕೋ ಹೇತುರಾಶೌಚಸಂಗತೇ।
ತದ್ಯೋಗಾದಸ್ತಿವ್ರತಿನಾಮಾಶೌಚಮಿತಿ ನಿಶ್ಚಿಸು॥'[೫]

ವಸ್ತುತಃ ಶಿವವ್ರತಿಗಳಿಗೆ, ಶಿವಸೇವಾ ತತ್ಪರರಿಗೆ, ಆದ್ದರಿಂದಲೇ ಮುಕ್ತಿಭಾಜನರಾಗಿರತಕ್ಕ ಇವರಿಗೆ ಜನನ-ಮರಣ ಸಂಬಂಧವಾದ ಸೂತಕವು ಸಂಭವಿಸುವುದೇ ಇಲ್ಲವಾದರೂ, ಇವರು ಸಂಸಾರ ಸಂಬಂಧವಾದ ಶರೀರಭಾಜನರಾಗಿರುವುದರಿಂದ ಮಾತ್ರವೇ ಜನನ-ಮರಣಾದಿ ಸಂಬಂಧವಾದ ಸೂತಕವುಂಟು. ಆದರೆ, ಸಂನ್ಯಾಸಿಗಳಿಗೆ ಮಾತ್ರ ಆಶೌಚವಿರುವುದಿಲ್ಲ. ಏಕೆಂದರೆ, ಇವರಿಗೆ ಸಂಸಾರಯೋಗವಿರುವುದಿಲ್ಲ. ಆದ್ದರಿಂದ, ಆಶೌಚಾಚರಣೆಗೆ ಮುಖ್ಯ ಕಾರಣವೆಂದರೆ ಸಂಸಾರ ಸಂಪರ್ಕವೇ ಆಗಿರುತ್ತದೆ. ಅಂದರೆ, ಶಿವವ್ರತನಿಷ್ಠನಾಗಿದ್ದರೂ, ಸಂಸಾರಿಯಾಗಿರುವುದರಿಂದ, ಈ ಶಿವವ್ರತಿಗೆ ಆಶೌಚವುಂಟು.

ಹೀಗೆ ಸೂತಕದ ಸಂಪರ್ಕ ಸಂಭವಿಸಿದರೂ, ಈ ಸೂತಕದ ಸಂದರ್ಭ- ಗಳಲ್ಲಿಯೂ ಸಹ, ಶಿವವ್ರತಿಗೆ, ಇಷ್ಟಲಿಂಗಾರ್ಚನೆಗೆ ಮಾತ್ರ ಯಾವುದೇ ಅಡ್ಡಿ ಇರುವುದಿಲ್ಲ. ಈ ಬಗ್ಗೆ ಹೀಗೆ ಪ್ರಮಾಣಗಳನ್ನು ಮನಗಾಣಬಹುದು-

೧. **'ಸ್ವಕರ್ಮಕಾಲೇ ಸಂಶುದ್ಧಿಃ ಸರ್ವಶಾಸ್ತ್ರೇಷು ಚೋದಿತಾ।**
ಅತಃ ಸಂಧ್ಯಾಮರ್ಚನಮಪ್ಯಾಶೌಚೇನ ಪರಿತ್ಯಜೇತ್॥'[೬]

೨. **'ಆಶೌಚೇ ವಿದ್ಯಮಾನೇಽಪಿ ನಾಂತರಾಯೋಽರ್ಚನಸ್ಯ ತು।**
ಮದರ್ಚಾವಿಘ್ನವಿಚ್ಛೇತ್ರೀ ದೀಕ್ಷಾಸಾಮರ್ಥ್ಯಯೋಗತಃ॥'[೭]

೩. **'ನ ತಸ್ಯ ಸೂತಕಂ ಕಿಂಚಿತ್ ಪ್ರಾಣಲಿಂಗಾಂಗಸಂಗಿನಃ।**
ಜನನೋತ್ಥಂ ಮೃತೋತ್ಥಂ ಚ ವಿದ್ಯತೇ ಪರಮಾರ್ಥತಃ॥
ಲಿಂಗಾರ್ಚನರತಸ್ಯಾಪಿ ಋತೌ ನಾರ್ಯಾ ನ ಸೂತಕಮ್।
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ॥
ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ।
ಶಿವಪಾದಾಂಬು ಸಂಸ್ಪರ್ಶಾತ್ ಸರ್ವಪಾಪಂ ಪ್ರಣಶ್ಯತಿ॥'[೮]

ಇತ್ಯಾದಿ ಇತ್ಯಾದಿ.

ತಾತ್ಪರ್ಯವೆಂದರೆ- ಲಿಂಗಾಂಗಸಂಗಿಯಾದ ವೀರಶೈವನಿಗೆ ಅಥವಾ ಶಿವವ್ರತಿಗೆ ವಸ್ತುತಃ ಇಷ್ಟಲಿಂಗಪೂಜಾಸಂಬಂಧವಾದ ಸೂತಕವಿರುವುದಿಲ್ಲ. ಅಂದರೆ, ಸೂತಕದ ಸಂದರ್ಭಗಳಲ್ಲಿಯೂ ಸಹ ಇಷ್ಟಲಿಂಗಾರ್ಚನೆಯನ್ನು ಬಿಡಲೇಬಾರದು. ಏಕೆಂದರೆ, ಇಷ್ಟಲಿಂಗದ ಮುಖಾಂತರ ಸ್ವೀಕರಿಸುವ ಇಷ್ಟಲಿಂಗಪಾದೋದಕವು ಸರ್ವಪಾಪಗಳನ್ನು

---

೬. ಮಕುಟಾಗಮ, ಚ.ಪಾ., ೧೦.೫-೭.

೭. ಚಂದ್ರಜ್ಞಾನಾಗಮ, ಚ.ಪಾ., ೬.೧೬.

೮. ಮಕುಟಾಗಮ, ಚ.ಪಾ., ೧೦.೮.

೯. ಶ್ರೀ ಸಿದ್ಧಾಂತಶಿಖಾಮಣಿ, ೯.೪೩-೪೫.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಾಶಮಾಡುವುದಲ್ಲದೆ, ಸನ್ಮುಕ್ತಿಪ್ರದವೂ ಆಗಿರುತ್ತದೆ. ಆದ್ದರಿಂದ, ಇಂತಹ ಸಂದರ್ಭಗಳಲ್ಲಿಯೂ ಸಹ ಅವಶ್ಯ ಕರ್ತವ್ಯವೇ ಆದ ಇಷ್ಟಲಿಂಗಪೂಜೆಯನ್ನು ಬಿಡಬಾರದು. ಈ ಇಷ್ಟಲಿಂಗಪಾದೋದಕವು ಸರ್ವಪಾಪಗಳ ನಿವಾರಕವಾದರೂ, ಸಂಸಾರಿಯಾಗಿರುವುದರಿಂದ ಲೌಕಿಕವಾದ ಆಶೌಚವನ್ನು ಅನುಸರಿಸಲೇಬೇಕು.

ಕಾರಣಾಗಮ, ಮಕುಟಾಗಮಾದಿಗಳಲ್ಲಿಯೂ ಸಹ ಆಶೌಚ, ಪ್ರಾಯಶ್ಚಿತ್ತಗಳ ಬಗ್ಗೆ ಹೆಚ್ಚಿನ ವಿವರಣೆ ಇದ್ದರೂ ಸಹ, ಪ್ರಕೃತ ವಿಷಯವಾಗಿರುವ ಚಂದ್ರಜ್ಞಾನಾಗಮದ ಆಧಾರದ ಮೇಲೆ ಇನ್ನು ಮುಂದೆ ಆಶೌಚ ಮತ್ತು ಪ್ರಾಯಶ್ಚಿತ್ತಗಳನ್ನು ವಿವರಿಸಲಾಗುವುದು.

೩. ಚಂದ್ರಜ್ಞಾನಾಗಮಾನುಸಾರ ಆಶೌಚ ಮತ್ತು ಆಶೌಚಶುದ್ಧಿ:

ಆಶೌಚವು ಜನಿಜ(ಜನನದಿಂದಾದುದು) ಮತ್ತು ಮೃತಿಜ (ಮರಣದಿಂದಾದುದು) -ಎಂದು ಎರಡು ವಿಧ. ಈ ಆಶೌಚವು ಅಂದರೆ ಈ ಎರಡೂ ರೀತಿಯ ಆಶೌಚವು ಪುನಃ ೧. ಅಲ್ಪಾಶೌಚ, ೨. ಅಧಿಕಾಶೌಚ, ೩. ಪೂರ್ಣಾಶೌಚ ಮತ್ತು ೪. ಅಪೂರ್ಣಾ ಶೌಚ -ಎಂದು ಪ್ರತ್ಯೇಕ ನಾಲ್ಕು ನಾಲ್ಕು ವಿಧವುಂಟು.

ಕಾಲದ ಅಲ್ಪತ್ವ ಅಥವಾ ಅಧಿಕತ್ವವನ್ನಾಶ್ರಯಿಸಿ ಅಲ್ಪಾಶೌಚ, ಅಧಿಕಾಶೌಚಗಳು ಸಂಭವಿಸುತ್ತವೆ. ಒಂದು ದಿನ ಅಥವಾ ರಾತ್ರಿಗಳವರೆಗೆ ಇರುವ ಆಶೌಚ ಅಪೂರ್ಣಾಶೌಚವೆನಿಸಿದರೆ, ಹತ್ತು - ಹನ್ನೆರಡು ದಿನಗಳವರೆಗೆ ಇರುವುದು ಪೂರ್ಣಾಶೌಚವೆನಿಸುತ್ತದೆ. ತಾಯಿಗೆ ಗರ್ಭಸ್ರಾವವಾದರೆ ಆ ಜನಿಜಾಶೌಚವು ಅಂದರೆ ಜಾತಾಶೌಚವು, ಜ್ಞಾತಿಗಳಿಗೆ ಅಂದರೆ ತಂದೆಯ ವಂಶಜರಿಗೆ ಹೊರತಾಗಿ, ತಾಯಿ, ತಂದೆಯರಿಗೆ ಮೂರು ದಿನಗಳು ಆಶೌಚವುಂಟು. ತಾಯಿಗೆ ಒಂದು ಮಾಸದ ಅವಧಿಯೂ ಆಗಬಹುದು. ವಿಪ್ರರಿಗೆ ಹತ್ತು ದಿನ, ಕ್ಷತ್ರಿಯರಿಗೆ ಹನ್ನೆರಡುದಿನ, ವೈಶ್ಯರಿಗೆ ಹದಿನೈದು ದಿನ, ಶೂದ್ರರಿಗೆ ಒಂದು ತಿಂಗಳು -ಹೀಗೆ ದಿನ ನಿರ್ಣಯವುಂಟು. ವಸ್ತುತಃ ಹತ್ತು ದಿನ ಕಳೆದ ಬಳಿಕ ಆಶೌಚವು ಸ್ವಾಭಾವಿಕವಾಗಿಯೇ ಕಳೆದಂತೆಯೇ ಸರಿ. ಜಾತಾಶೌಚ-ಮರಣಾಶೌಚಗಳೆರಡೂ ಸಹ ಜ್ಞಾತಿಗಳಾದವರಿಗೆ ಕೇವಲ ಸ್ನಾನದಿಂದ ಕಳೆದುಹೋಗುತ್ತದೆ. ಆದರೆ ಸೋದರ ದಂಪತಿಗಳಿಗೆ ಹತ್ತು ದಿನಗಳವರೆಗೆ. ದೀಕ್ಷೆ ಪಡೆಯದವನು ಮೃತಿಹೊಂದಿದರೆ, ತಾಯಿತಂದೆಯರಿಗೆ ಮೂರು ದಿನ ಮಾತ್ರ; ಆದರೆ ದೀಕ್ಷಿತನಾದವನು ಮೃತನಾದರೆ ಹತ್ತು ದಿನಗಳು. ಒಟ್ಟಾರೆ ಆಶೌಚದ ಅವಧಿಯೆಂದರೆ- ಏಳು ದಿನಗಳಿಂದ ಹತ್ತು ದಿನಗಳು, ಅಥವಾ ಮೂರರಿಂದ ಹದಿನಾಲ್ಕು ದಿನಗಳು ಅಥವಾ ಇಪ್ಪತ್ತೊಂದು ದಿನಗಳು ಇತ್ಯಾದಿ.

ಮಾವ ಮೊದಲಾದವರ ಸಂಬಂಧಿ ಮರಣಾಶೌಚವು ಮೂರು ದಿನಗಳು. ಸಂಬಂಧಕ್ಕನುಗುಣವಾಗಿ ಮೂರು ದಿನ, ಮೂರು ತಿಂಗಳು, ಆರು ತಿಂಗಳು ಅಥವಾ ಒಂದು ವರ್ಷ ಹೀಗಿರುವುದುಂಟು. ಲಿಂಗಾಂಗಿಯಾದ ದ್ವಿಜನು (ವಿಪ್ರ=ಮಾಹೇಶ್ವರ=ಲಿಂಗಾಂಗಿ) ಶವವನ್ನನುಸರಿಸಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದಲ್ಲಿ ಆತನು ಸ್ನಾನಮಾಡಿ, ಭಸ್ಮೋದ್ಧೂಲನ, ಆರು ಪ್ರಾಣಾಯಾಮ, ಶಿವದರ್ಶನಾದಿಗಳಿಂದ ಶುದ್ಧನಾಗುವನು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಜ್ಞ, ವಿವಾಹ, ದಾನ, ಸಂಗ್ರಾಮ, ದೇಶವಿಪ್ಲವ, ಆಪತ್ತು, ದೈವಸಂಬಂಧಿ, ರಾಜಕೀಯಸಂಬಂಧಿ, ಸಂಘಸಂಬಂಧಿ ಕಾರ್ಯಗಳಲ್ಲಿ ನಿಯುಕ್ತನಾದವನಿಗೆ ಕೂಡಲೇ ಶುದ್ಧಿಯುಂಟು.

ಇದಿಷ್ಟು ಶುದ್ಧಿಯ ವಿಚಾರವಾದರೆ, ಪ್ರಾಯಶ್ಚಿತ್ತದ ಬಗ್ಗೆ ಚಂದ್ರಜ್ಞಾನಾಗಮದ ಚರ್ಯಾಪಾದದ ಏಳು ಮತ್ತು ಎಂಟನೆಯ ಪಟಲಗಳಲ್ಲಿ ಸುವಿಸ್ತಾರವಾಗಿ ಹೇಳಲಾಗಿದೆ- ಈ ಅಂಶವನ್ನು ಇನ್ನು ಮುಂದೆ ಹೀಗೆ ತಿಳಿಯಬಹುದು.

೬. ಚಂದ್ರಜ್ಞಾನಾಗಮಾನುಸಾರ ಪ್ರಾಯಶ್ಚಿತ್ತ ವಿಧಿ:

'ತಪ್ತಕೃಚ್ಛ್ರ'ವೆಂಬ ಒಂದು ಪ್ರಾಯಶ್ಚಿತ್ತ ವಿಧಾನವುಂಟು. ಇದರ ಲಕ್ಷಣವೆಂದರೆ-

'ತಪ್ತಕ್ಷೀರಘೃತಾಂಬೂನಾಂ ಏಕೈಕಂ ಪ್ರತ್ಯಹಂ ಪಿಬೇತ್।
ಏಕರಾತ್ರೋಪವಾಸಶ್ಚ ತಪ್ತಕೃಚ್ಛ್ರ ಇತೀರ್ಯತೇ॥'[೧೧]

ಕಾಯಿಸಿದ ಹಾಲು, ತುಪ್ಪ, ನೀರು -ಇವುಗಳಲ್ಲಿ ಒಂದೊಂದನ್ನು ಪ್ರತಿನಿತ್ಯ ಪಾನ ಮಾಡಬೇಕು ಮತ್ತು ಒಂದು ರಾತ್ರಿ ಉಪವಾಸ ಮಾಡಬೇಕು. ಇದೇ 'ತಪ್ತಕೃಚ್ಛ್ರವ್ರತ'. ಅಂದರೆ ಇದು ನಾಲ್ಕು ದಿನಗಳ ಅವಧಿಯದ್ದು.

ದೀಕ್ಷೆಯಿಂದ ಪರಿಶುದ್ಧನಾಗಿ, ಸಂಸಾರಬಂಧನದಿಂದ ಮುಕ್ತನಾದವನು ಮರಣ ಹೊಂದಿದರೆ ಅಂತಹವನು ತಪ್ಪದೆ ಮೋಕ್ಷ ಹೊಂದುವನು. ಇಂತಹ ವ್ಯಕ್ತಿ ಮರಣ ಹೊಂದಿದ್ದಾದರೆ ಅಥವಾ ಗೋ-ಬ್ರಾಹ್ಮಣರಿಂದ ಹತನಾದವನಾದರೆ, ಆಗ ಇವನ ಲಿಂಗಶರೀರವನ್ನು ಹೊರುವುದು, ಖನನ ಮಾಡುವುದು -ಇತ್ಯಾದಿ ಕ್ರಿಯೆಗಳನ್ನು ಆಚರಿಸತಕ್ಕವರು ಈ ಮೇಲ್ಕಂಡ ತಪ್ತಕೃಚ್ಛ್ರ ವ್ರತದಿಂದ ಪರಿಶುದ್ಧರಾಗುವರು. ವಸ್ತುತಃ ಶಿವಾಶ್ರಮಿಗಳಿಗೆ ಶುಷ್ಕೋಪವಾಸ (ಸಂಪೂರ್ಣ ನಿರಾಹಾರ) ವಿಹಿತವಾಗಿರುವುದಿಲ್ಲ. ಏಕೆಂದರೆ, ಇವರು ಲಿಂಗಭೋಗೋಪಭೋಗಿಗಳಷ್ಟೆ! ಈ ನಿಮಿತ್ತ ಉಪವಾಸವೆಂದರೆ ನಕ್ತ (ರಾತ್ರಿ) ಭೋಜನವೆಂದರ್ಥ.

ಶಿವಾಚಾರಸಂಪನ್ನನಾದ ವೀರಶೈವದ್ವಿಜನು [ಜನ್ಮಸಂಸ್ಕಾರ ಮತ್ತು ದೀಕ್ಷಾಸಂಸ್ಕಾರ -ಎಂಬ ಎರಡು ರೀತಿಯ ಪ್ರಮುಖ ಸಂಸ್ಕಾರಗಳನ್ನು ಪಡೆಯುವ ವೀರಶೈವನಿಗೆ 'ದ್ವಿಜ' ಪದವು ಅನ್ವರ್ಥವಾಗುವುದು.] ಪಾಪಿಗಳೊಂದಿಗೆ ಎಂದಿಗೂ ಸಹವಾಸ ಮಾಡಬಾರದು. ಒಂದು ವೇಳೆ ಒಂದು ವರ್ಷದ ಅವಧಿಯವರೆಗೆ ಸಹವಾಸ ಮಾಡಿದರೂ, ಇಂತಹವನು ಪ್ರಾಯಶ್ಚಿತ್ತದಿಂದ ಶುದ್ಧಗೊಳ್ಳುತ್ತಾನೆ. ಆದರೆ ಇದಕ್ಕೂ ಹೆಚ್ಚು ಕಾಲ ಸಹವಾಸವುಳ್ಳವನಿಗೆ ಪ್ರಾಯಶ್ಚಿತ್ತವೆಂಬುದೇ ಇರುವುದಿಲ್ಲ. ಇದರ ವಿವರವೆಂದರೆ- ಐದು ದಿನಗಳ ಸಹವಾಸಕ್ಕೆ 'ಕೃಚ್ಛ್ರ'ವೆಂಬ ಪ್ರಾಯಶ್ಚಿತ್ತ; ಇದನ್ನು ಮೂರು ರಾತ್ರಿಗಳು ಆಚರಿಸಬೇಕು. ಹತ್ತು ದಿನಗಳ ಸಹವಾಸಕ್ಕೆ 'ಪ್ರಾಜಾಪತ್ಯ'ವೆಂಬ ಪ್ರಾಯಶ್ಚಿತ್ತ; ಹನ್ನೆರಡು ದಿನಗಳ ಸಹವಾಸಕ್ಕೆ 'ಸಾಂತಪನ'ವೆಂಬ ಪ್ರಾಯಶ್ಚಿತ್ತ; ಹದಿನೈದು ದಿನಗಳ ಸಾಂಗತ್ಯಕ್ಕೆ 'ದಶರಾತ್ರ'ವೆಂಬ

---

೧೧. ಚಂದ್ರಜ್ಞಾನಾಗಮ, ಚ.ಪಾ., ೭.೪.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಯಶ್ಚಿತ್ತ; ಒಂದು ತಿಂಗಳ ಸಾಂಗತ್ಯಕ್ಕೆ 'ಪರಾಕ'ವೆಂಬ ಪ್ರಾಯಶ್ಚಿತ್ತ; ಎರಡು ಮಾಸಗಳವರೆಗಾದರೆ 'ಚಾಂದ್ರಾಯಣ'ವೆಂಬ ಪ್ರಾಯಶ್ಚಿತ್ತ; ಆರು ತಿಂಗಳವರೆಗಾದರೆ 'ಚಾಂದ್ರಾಯಣದ್ವಯ'; ಒಂದು ವರ್ಷವಾದರೆ 'ಕೃಚ್ಛ್ರ ಚಾಂದ್ರಾಯಣ'ವನ್ನು ಪ್ರಯತ್ನಪೂರ್ವಕವಾಗಿಯೇ ಈತನು ಆಚರಿಸಬೇಕು. ದಿನಸಂಖ್ಯೆಗಳಿಗನುಸಾರವಾಗಿ ರಾತ್ರಿ ಭೋಜನವನ್ನು ಆಚರಿಸಿದರೂ ಆಚರಿಸಬಹುದು.

ಪ್ರಾಣಿದಷ್ಟನಾದಲ್ಲಿ ಪ್ರಾಯಶ್ಚಿತ್ತವೆಂದರೆ- ಶೃಗಾಲದಷ್ಟನಾದರೆ ಒಂದು ನೂರು ಸಾರಿ ಗಾಯತ್ರೀ ಮಂತ್ರವನ್ನು ಜಪಿಸಬೇಕು. ಶುನಕದಷ್ಟನಾದಲ್ಲಿ ಒಂದು ಸಾರಿ ವೃಷಭಮೂರ್ತಿಯನ್ನು (ವೃಷಭಸ್ವರೂಪಿ ಎತ್ತನ್ನು) ಪ್ರದಕ್ಷಿಣೆ ಮಾಡಿ, ಕೂಡಲೇ ಸ್ನಾನಮಾಡಬೇಕು. ಚಂಡಾಲ, ಗೋವು, ವಿಪ್ರ -ಇತ್ಯಾದಿಗಳಿಂದ ಹತನಾಗಿ ಮೃತನಾದಲ್ಲಿ ಅಥವಾ ವಿಷಪಾನದಿಂದ ಮೃತನಾದರೆ ಅಂತಹವನ ದೇಹವನ್ನು ಮಂತ್ರವರ್ಜಿತ ರೀತಿಯಲ್ಲಿ, ಅಂದರೆ, ವಿಧ್ಯುಕ್ತರೀತಿಯಲ್ಲಲ್ಲದೆ, ಸಾಮಾನ್ಯ ರೀತಿಯಲ್ಲಿ ಖನನಮಾಡಿ, ಬಳಿಕ ಹೀಗೆ ಹೊತ್ತು ಖನನಮಾಡಿದವರು 'ಪ್ರಾಜಾಪತ್ಯ' ಪ್ರಾಯಶ್ಚಿತ್ತದಿಂದ ಶುದ್ಧಿ ಹೊಂದುವರು. ಈ ರೀತಿ ಮರಣಹೊಂದಿದವರ ಪುತ್ರರು ಒಂದು ವರ್ಷದ ಬಳಿಕ ಪ್ರಾಯಶ್ಚಿತ್ತವನ್ನು ಅನುಸರಿಸಿ ವಿಧಿಪೂರ್ವಕ ಔರ್ಧ್ವದೈಹಿಕ ಕ್ರಿಯೆಗಳನ್ನು ಆಚರಿಸಬೇಕು.

ಚಕ್ರವಾಕ, ಕುಕ್ಕುಟ (=ಕೋಳಿ), ಶುಕ (=ಗಿಳಿ), ಪಾರಾವತ (=ಪಾರಿವಾಳ), ನಕ್ರ (=ಮೊಸಳೆ), ಅಹಿ (=ಸರ್ಪ), ಟಿಟ್ಟಿಭ -ಇತ್ಯಾದಿ ಪ್ರಾಣಿ-ಪಕ್ಷಿಗಳನ್ನು ಹಿಂಸಿಸಿದವನು ರಾತ್ರಿಭೋಜನದಿಂದ (ಹಗಲು ಉಪವಾಸವಿದ್ದು) ಶುದ್ಧನಾಗುವನಲ್ಲದೆ, ವೀರಮಾಹೇಶ್ವರರಿಗೆ (ದ್ವಿಜರಿಗೆ) ಹಿರಣ್ಯ (ದಕ್ಷಿಣೆ) ನೀಡಬೇಕು. ನಕುಲ (=ಮುಂಗಸಿ), ಮೂಷಕ (=ಇಲಿ), ಗೋಧಾ (=ಹಲ್ಲಿ ಅಥವಾ ಉಡ), ಗೃಧ್ರ (=ಹದ್ದು), ಕೂರ್ಮ (=ಆಮೆ), ಶಲ್ಯಕ (?), ಕಾಕಾ (=ಕಾಗೆ), ಉಲೂಕ (=ಗೂಬೆ), ಬಕ (=ಕೊಕ್ಕರೆ) -ಇತ್ಯಾದಿ ಪ್ರಾಣಿಗಳನ್ನು ಹಿಂಸಿಸಿದರೆ, ಮೂರು ರಾತ್ರಿ ಉಪವಾಸ ಮಾಡುವುದರಿಂದ ಶುದ್ಧಿ.

ಚಂಡಾಲನೊಂದಿಗೆ, ನಾಯಿ ಮಾಂಸ ಭಕ್ಷಕನೊಂದಿಗೆ ಸಂಭಾಷಣೆ ನಡೆಸಿದಲ್ಲಿ, ಅಂತಹವನು ಪ್ರಾಣಾಯಾಮ ಮಾಡಿ, ಸಾವಿತ್ರೀ ಮಂತ್ರವನ್ನು ಜಪಿಸಬೇಕು. ಚಂಡಾಲನನ್ನು ಮುಟ್ಟಿದ್ದಾದರೆ ಸ್ನಾನಮಾಡಿ, ಸೂರ್ಯದರ್ಶನ ಮಾಡಬೇಕು. ಚಂಡಾಲನೊಡನೆ ಮಲಗಿದ್ದಲ್ಲಿ ಮೂರು ರಾತ್ರಿಗಳು ಕೇವಲ ರಾತ್ರಿಭೋಜನ ಮಾಡಿ ಶುದ್ಧಿ ಹೊಂದಬೇಕು. ಇತರರು ಒಂದು ವೇಳೆ ಸ್ಪರ್ಶ ಮಾಡಿದ ತಾಮ್ರ, ಕಂಚು ಪಾತ್ರೆಗಳು ಭಸ್ಮದಿಂದ ಶುದ್ಧಿಗೊಳ್ಳುತ್ತವೆ ಮತ್ತು ವಸ್ತ್ರ (ಬಟ್ಟೆ)ಗಳು ಜಲಪ್ರಕ್ಷಾಳನದಿಂದ ಶುದ್ಧಿಗೊಳ್ಳುತ್ತವೆ. ಆದರೆ ಮೃಣ್ಮಯ (ಮಣ್ಣಿನ) ಪಾತ್ರೆಗಳನ್ನು ಮಾತ್ರ ಎಸೆದು ಬಿಡಬೇಕು.

ಒಂದು ವೇಳೆ ಅನ್ನದ ರಾಶಿಯನ್ನೇನಾದರೂ ಶ್ವ (=ನಾಯಿ), ಕಾಕ (=ಕಾಗೆ), ಗೃಧ್ರ (=ಹದ್ದು) -ಇತ್ಯಾದಿ ಮುಟ್ಟಿದರೆ, ಸ್ಪೃಷ್ಟವಾದ ಭಾಗವನ್ನು ತೆಗೆದುಹಾಕಿ ಉಳಿದ ಭಾಗವನ್ನು ಭಸ್ಮಜಲದಿಂದ ಪ್ರೋಕ್ಷಿಸಿ, ಬೆಂಕಿಹಚ್ಚಿದ (ಉರಿಯುತ್ತಿರುವ) ದರ್ಭೆಯ ತುದಿಯಿಂದ ಸ್ಪರ್ಶಿಸಿ ಸ್ವೀಕರಿಸಬಹುದು. ಕೇಶ (=ಕೂದಲು), ಕೀಟ ಇತ್ಯಾದಿಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂಪರ್ಕವಿಲ್ಲದ್ದಲ್ಲಿ, ಹಿಂದಿನಂತೆಯೇ ಆ ಭಾಗವನ್ನು ತೆಗೆದು ಭಸ್ಮಜಲವನ್ನು ಪ್ರೋಕ್ಷಿಸುವುದು. ಇತರರು ಮುಟ್ಟಿದ ತೈಲ, ಕ್ಷೀರಾದಿಗಳು ಕಾಯಿಸುವಿಕೆಯಿಂದ ಶುದ್ಧಿಗೊಳ್ಳುತ್ತವೆ. ಮರದ ಪಾತ್ರೆಗಳನ್ನು ತತ್‌ಕ್ಷಣವೇ ತೊಳೆಯುವುದರಿಂದ ಅವು ಶುದ್ಧಿಯಾಗುತ್ತವೆ. ಸ್ತ್ರೀಯ ಶುದ್ಧಿಯಾದರೋ ಮಾಸಿಕ ಋತುಚಕ್ರದಿಂದ ಮತ್ತು ನದಿಯ ಶುದ್ಧಿಯಾದರೋ ಜಲಪ್ರವಾಹದ ವೇಗದಿಂದ.

ಒಂದು ವೇಳೆ ಬಾವಿಯ ನೀರು ದೂಷಿತವಾದಲ್ಲಿ ಆ ಬಾವಿಯಿಂದ ಒಂದುನೂರು ಕುಂಭದಷ್ಟು ನೀರನ್ನು ಹೊರತೆಗೆದು, ಆ ಬಾವಿಯಲ್ಲಿ ಪಂಚಗವ್ಯವನ್ನು ಪ್ರೋಕ್ಷಿಸುವುದರಿಂದ ಅದರ ಶುದ್ಧಿಯುಂಟು. ಭೂಮಿಯ ಶುದ್ಧಿಯಾದರೋ ಸದಾಕಾಲ-ದಹನ (=ಸುಡುವಿಕೆ), ಖನನ (=ಅಗೆಯುವಿಕೆ), ಧಾವನ (=ಗುಡಿಸುವಿಕೆ), ಉಪಲೇಪನ (=ಸಾರಿಸುವಿಕೆ), ವೃಷ್ಟಿ (=ಮಳೆ), ಗೋವುಗಳ ಪಾದಗಳ ಸಂಪರ್ಕ -ಇತ್ಯಾದಿಗಳಿಂದ ಶುದ್ಧಿ ಹೊಂದುತ್ತಲೇ ಇರುತ್ತದೆ.

ಶವದಿಂದ ದೂಷಿತವಾದ ಗೃಹವನ್ನು ಶುದ್ಧಿಮಾಡಲು ಎಲ್ಲೆಡೆ ಜಲವನ್ನು ಪ್ರೋಕ್ಷಿಸಿ, ಗೋಮಯದಿಂದ ಸಾರಿಸಿ, ಧೂಪದ ಹೊಗೆ ಕೊಡುವುದು. ನಮ್ಮ ಶರೀರದಲ್ಲಿನ ಪವಿತ್ರವಸ್ತುಗಳೆನಿಸಿರತಕ್ಕವು ಬಹುಮಟ್ಟಿಗೆ ನಮ್ಮ ನಾಭಿಯ ಮೇಲ್ಭಾಗದಲ್ಲಿರುತ್ತವೆ. ನಾಭಿಯ ಕೆಳಭಾಗದ ಅವಯವಗಳ ಮುಖಾಂತರ ಅಪವಿತ್ರವಾದ ಮಲಾದಿಗಳು ಶರೀರದಿಂದ ಹೊರಬರುತ್ತವೆ. ವಸ್ತುತಃ ನಮ್ಮ ಶರೀರದಲ್ಲಿರುವ ಹನ್ನೆರಡು ಮಲಗಳೆಂದರೆ-

'ವಸಾಶುಕ್ರಮಸೃಙ್ಮಜ್ಜಾಮೂತ್ರವಿಟ್ಕರ್ಣವಿಣ್ಣಖಾಃ।
ಶ್ಲೇಷ್ಮಾಶ್ರುದೂಷಿಕಾಸ್ವೇದೋ ದ್ವಾದಶೈತೇ ನೃಣಾಂ ಮಲಾಃ॥'[೧೧]

೧. ವಸಾ (=ಕೊಬ್ಬು), ೨. ಶುಕ್ರ (=ವೀರ್ಯ ಅಥವಾ ಸ್ತ್ರೀಯಲ್ಲಿ ಶೋಣಿತ), ೩. ಅಸೃಕ್ (=ರಕ್ತ), ೪. ಮಜ್ಜಾ (=ಮೇದಸ್ಸು), ೫. ಮೂತ್ರ, ೬. ವಿಟ್ (=ಮಲ), ೭. ಕರ್ಣವಿಟ್ (=ಕಿವಿಯ ಮಲ = ಗುಗ್ಗೆ), ೮. ನಖ (=ಉಗುರು), ೯. ಶ್ಲೇಷ್ಮ (=ಕಫ), ೧೦. ಅಶ್ರು (=ಕಣ್ಣೀರು), ೧೧. ದೂಷಿಕಾ (=ಕಣ್ಣಿನ ಪಿಸುರು), ೧೨. ಸ್ವೇದ (=ಬೆವರು). ಇವುಗಳಲ್ಲಿ ಮಲ-ಮೂತ್ರ ವಿಸರ್ಜನೆಯ ಶುದ್ಧಿಗಾಗಿ ಮಣ್ಣು (ಬಹುಮಟ್ಟಿಗೆ ಹುತ್ತದ ಮಣ್ಣು), ನೀರುಗಳನ್ನು ಉಪಯೋಗಿಸಬೇಕು. ಈ ಹನ್ನೆರಡು ಮಲಗಳ ಪೈಕಿ, ಮೊದಲ ಆರು ಮಲಗಳ ಶುದ್ಧಿಯಾದರೋ ಮಣ್ಣು-ಜಲಗಳಿಂದ, ಅನಂತರದ ಆರು ಮಲಗಳ ಶುದ್ಧಿಯು ಜಲದಿಂದ ಮಾತ್ರ. ಚಂಡಾಲನು ಮುಟ್ಟಿದ ಬಟ್ಟೆಯನ್ನು ಒಗೆದು ಶುದ್ಧಿಮಾಡಿಕೊಳ್ಳಬೇಕು.

ಹೀಗೆ ಇಲ್ಲಿಯವರೆಗೆ ಸಾಮಾನ್ಯ ರೀತಿಯ ಪ್ರಾಯಶ್ಚಿತ್ತ ವಿವರಣೆಯಾಯ್ತು. ಇನ್ನು ಮುಂದೆ ಮಹಾಪಾಪ-ಉಪಪಾಪಗಳ ಸಂಬಂಧವಾದ ಪ್ರಾಯಶ್ಚಿತ್ತವನ್ನು ನೋಡಲಾಗುವುದು.

---

೧೧. ಅದೇ, ಚ.ಪಾ., ೭.೨೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾಪಾಪವನ್ನು ಆಚರಿಸಿದವನು ಶ್ರೀ ಗುರುವಿನ ಸನ್ನಿಧಿಯನ್ನು ಸೇರಿ, ಅಲ್ಲಿ ದಂಡದ ದ್ರವ್ಯವನ್ನಿತ್ತು, ಶ್ರೀ ಗುರುವಿನಿಂದ (ಪಾದೋದಕ-ಪ್ರಸಾದ ಸ್ವೀಕರಿಸುವುದರ ಮುಖಾಂತರ) ಶುದ್ಧಿಯನ್ನು ಪಡೆಯಬೇಕು. ಅಗಮ್ಯಸ್ಥಾನಕ್ಕೆ ಗಮನ ಮಾಡಿದ್ದಾದರೆ, ಅವನು ಚಾಂದ್ರಾಯಣವ್ರತದಿಂದ ಶುದ್ಧಿಹೊಂದುವನು. ಒಂದು ವೇಳೆ ಚಂಡಾಲ ಸ್ತ್ರೀಗಮನ ಮಾಡಿದರೆ, ಜುಟ್ಟನ್ನು ಬೋಳಿಸಿಕೊಂಡು ಮೂರು ವರ್ಷಗಳು ಭಿಕ್ಷಾನ್ನ ಭೋಜಿಯಾಗಿರಬೇಕು. ಮತ್ತು ಗೋದ್ವಯ (ಹಸು-ಕರು ಅಥವಾ ಎರಡು ಗೋವು)ವನ್ನು ದಾನಮಾಡಿ ಶುದ್ಧಿ ಪೊಂದಬೇಕು. ತಂದೆಯ ಪತ್ನಿ ಅಂದರೆ ತಾಯಿ, ಸಹೋದರರ ಪತ್ನಿ, ಗುರುಪತ್ನಿ, ಸೊಸೆ -ಇವರನ್ನು ಸೇರಿದಲ್ಲಿ ಮೂರು ಪ್ರಾಜಾಪತ್ಯ ವ್ರತವನ್ನು ಮಾಡಿ, ದಕ್ಷಿಣೆ ಸಹಿತ ಎರಡು ಗೋವುಗಳನ್ನು ದಾನ ಮಾಡಬೇಕು. ತನ್ನನ್ನು ಬಯಸದ ಬ್ರಾಹ್ಮಣ (ಉತ್ತಮ ಜಾತಿಯ) ಸ್ತ್ರೀಯನ್ನು ಸೇರಿದಲ್ಲಿ, ಕೃಚ್ಛ್ರಚಾಂದ್ರಾಯಣವನ್ನಾ-ಚರಿಸಬೇಕು. ಒಂದು ವೇಳೆ ತನ್ನನ್ನು ಬಯಸಿದ ಉತ್ತಮಜಾತಿಯ ಸ್ತ್ರೀಯನ್ನು ಸೇರಿದಲ್ಲಿ, ಚಾಂದ್ರಾಯಣದ ಅರ್ಧವ್ರತವನ್ನು (ಅರ್ಧಚಾಂದ್ರಾಯಣ ವ್ರತವನ್ನು) ಆಚರಿಸಬೇಕು. ಒಮ್ಮೆ ಮಾತ್ರ ಸೇರಿದಲ್ಲಿ ತಪ್ತಕೃಚ್ಛ್ರವ್ರತವನ್ನಾಚರಿಸಬೇಕು. ಬ್ರಾಹ್ಮಣಿಯಲ್ಲಿ ಒಮ್ಮೆ ಸೇರಿದಲ್ಲಿ ಕೃಚ್ಛ್ರವ್ರತವನ್ನಾಚರಿಸಬೇಕು. ಒಂದು ವೇಳೆ ಆಕೆ ಗರ್ಭ ಧರಿಸಿದಲ್ಲಿ ಸಾಂತಪನವ್ರತವನ್ನಾಚರಿಸಬೇಕು. ರಾಣಿಯಲ್ಲಿ ಸೇರಿ ಆಕೆ ಗರ್ಭವತಿಯಾದರೆ, ಪರಾಕವ್ರತವನ್ನು ಆಚರಿಸಬೇಕು. ವೈಶ್ಯಸ್ತ್ರೀಯಲ್ಲಿ ಸೇರಿ, ಆಕೆ ಗರ್ಭಧರಿಸಿದಲ್ಲಿ ಮೂರು ದಿನಗಳು ಉಪವಾಸ ಮಾಡಬೇಕು. ಶೂದ್ರ ಸ್ತ್ರೀಯನ್ನು ಸೇರುವಿಕೆಯಿಂದ ಗರ್ಭಧರಿಸಿದಲ್ಲಿ, ಆತನು ಒಂದು ತಿಂಗಳು ವ್ರತನಿಷ್ಠನಾಗಬೇಕು. ಪಾಪಿಷ್ಠಳಾದ ಗರ್ಭಿಣೀ ಸ್ತ್ರೀಯನ್ನು ಸೇರಿದಲ್ಲಿ ಮತ್ತು ರಜಸ್ವಲೆಯಾದ ಸ್ತ್ರೀಯನ್ನು ಸೇರಿದಲ್ಲಿ ಅತಿಕೃಚ್ಛ್ರವ್ರತವನ್ನಾಚರಿಸಬೇಕು. ಪಶುಗಮನ, ವೇಶ್ಯಾದಿಗಮನಮಾಡಿದಲ್ಲಿ ಸಹ ಪ್ರಾಜಾಪತ್ಯವ್ರತವನ್ನಾಚರಿಸಬೇಕು.

ಸ್ತ್ರೀಗೂ ಸಹ ಪ್ರಾಯಶ್ಚಿತ್ತವುಂಟು. ಹೇಗೆಂದರೆ- ತಾನು ಬಯಸದೇ ಇದ್ದರೂ, ಪಾಪಕರ್ಮಿಯಿಂದ ಒಮ್ಮೆ ಉಪಭುಕ್ತಳಾದರೆ, ಆಗ ತಾನು ಪ್ರಾಜಾಪತ್ಯವನ್ನಾ-ಚರಿಸಬೇಕು. ಮತ್ತು ಮಾಸಿಕ ರಜೋದರ್ಶನದಿಂದ ಶುದ್ಧಳಾಗುವಳು.

ಒಂದು ವೇಳೆ ತಾನು ಪಾದುಕೆಗಳಿಂದ ತಾಡಿತನಾದಲ್ಲಿ ಚಾಂದ್ರಾಯಣವ್ರತ-ವನ್ನಾಚರಿಸಬೇಕು. ಬಂದೀಗೃಹ (ಸೆರೆಮನೆ)ದಲ್ಲಿ ಭೋಜನ ಮಾಡಿದ್ದಾದರೆ, ಕೃಚ್ಛ್ರಸಾಂತಪನವ್ರತವನ್ನಾಚರಿಸಬೇಕು. ವಿಟ್ (ಮಲ), ಮೂತ್ರ, ರೇತಸ್‌ಗಳ ಸಂಪರ್ಕವುಳ್ಳ ಅನ್ನಭೋಜನ, ಚಂಡಾಲನ ಮನೆಯ ಅನ್ನ ಭೋಜನ, ಗೋಮಾಂಸ ಭಕ್ಷಣೆ ಮಾಡಿದಲ್ಲಿ ಕೃಚ್ಛ್ರಚಾಂದ್ರಾಯಣವ್ರತವನ್ನಾಚರಿಸಬೇಕು. ಶೂದ್ರರ ಮನೆಯ ಅನ್ನ, ಸೂತಕವುಳ್ಳ ಗೃಹದ ಅನ್ನ, ಹೆಂಜಲನ್ನು ಇತ್ಯಾದಿ ಸೇವಿಸಿದ್ದಾದರೆ ಕೃಚ್ಛ್ರವ್ರತವನ್ನಾಚರಿಸಿ, ಬ್ರಹ್ಮಕೂರ್ಚದಿಂದ ಶುದ್ಧಿಹೊಂದಿಸಿಕೊಳ್ಳಬೇಕು ಅಂದರೆ (ಬೆಂಕಿ ಹತ್ತಿಸಿದ) ದರ್ಭಾಗ್ರದಿಂದ ನಾಲಗೆಯನ್ನು ಸ್ವಲ್ಪ ಸುಟ್ಟುಕೊಳ್ಳಬೇಕು.

ಏಕೋದ್ದಿಷ್ಟವಿಧಿಯ ಸಮಾರಾಧನೆಯಲ್ಲಿ ಭೋಜನ ಮತ್ತು ತತ್ಸಂಯೋಜನೆಯ ವಿಧಿಯ ಸಮಾರಾಧನೆಯಲ್ಲಿ ಭೋಜನ ಮಾಡಿದಲ್ಲಿ ಷಡಕ್ಷರ ಮಹಾಮಂತ್ರವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಹಸ್ರ ಸಾರಿ ಜಪಿಸಿ, ಶುದ್ಧಿ ಪಡೆಯಬೇಕು. ವರ್ಷಾಬ್ದದ ಆರಾಧನೆಯ ಸಂಬಂಧವಾದ ಭೋಜನ ಮಾಡಿದಲ್ಲಿ ನೂರು ಸಾರಿ ಪ್ರಣವಸಹಿತ ಪಂಚಾಕ್ಷರ ಮಹಾಮಂತ್ರವನ್ನು ಜಪಿಸಬೇಕು.

ಸುರಾಪಾನ, ಲಶುನ (=ಬೆಳ್ಳುಳ್ಳಿ), ಬಿಳಿಬದನೆಕಾಯಿ, ಗೃಂಜಿನ (=ಈರುಳ್ಳಿ ಅಥವಾ ಬೆಳ್ಳುಳ್ಳಿಯ ವಿಶೇಷ), ಪಲಾಂಡು (=ಈರುಳ್ಳಿ), ವೃಕ್ಷನಿರ್ಯಾಮ (=ಮರದ ತೊಗಟೆ, ಬೇರು ಇತ್ಯಾದಿ?), ದೇವಸ್ವ (=ದೇವತೆಗಳ ಸಂಬಂಧವಾದ ಅನ್ನ, ದ್ರವ್ಯಾದಿ), ಶಿಲೀಂಧ್ರ (=ನಾಯಿಕೊಡೆ ಅಥವಾ ಹಣಬೆ) -ಇತ್ಯಾದಿಗಳನ್ನು ತಿಂದವನು, ಪಂಚಗವ್ಯವನ್ನು ಅನುಪ್ರಾಶನಮಾಡಿ (ಸೇವಿಸಿ), ಮೂರು ದಿನ ರಾತ್ರಿಭೋಜನ ಮಾಡಬೇಕು.

ಕ್ಷೌರ ಮಾಡಿಸಿಕೊಂಡವನು, ವಾಂತಿ ಮಾಡಿಕೊಂಡವನು, ಪ್ರೇತದ ಧೂಮಪಾನ ಮಾಡಿದವನು, ಮೈಥುನ, ದುಃಸ್ವಪ್ನ, ದುರ್ಜನಸ್ಪರ್ಶ ಇತ್ಯಾದಿ ಎಸಗಿದವನು ಸ್ನಾನ ಮಾಡುವುದರಿಂದ ಶುದ್ಧಿಹೊಂದುವನು.

ಹೀಗೆ ಪ್ರಾಯಶ್ಚಿತ್ತಕ್ಕಾಗಿ ಪ್ರೋಕ್ತವಾದವುಗಳಲ್ಲಿ ಅಯುತ (ಹತ್ತು ಸಾವಿರ) ಸಂಖ್ಯೆಯ ಸಾವಿತ್ರೀಮಂತ್ರ ಜಪ, ಎರಡುನೂರು ಪ್ರಾಣಾಯಾಮ, ನದಿಯಲ್ಲಿ ಹನ್ನೆರಡು ಸಾರಿ ಸ್ನಾನ ಮಾಡುವುದು ಮತ್ತು ಎರಡು ಯೋಜನ ದೂರದಲ್ಲಿರುವ (ಒಂದು ಯೋಜನ= ೯ ಮೈಲಿ, ಎರಡು ಯೋಜನ= ೧೮ ಮೈಲಿ), ತೀರ್ಥಕ್ಷೇತ್ರದ ಯಾತ್ರೆ (ಅಂದರೆ ಕೇವಲ ಕಾಲ್ನಡಿಗೆಯಿಂದ) -ಈ ನಾಲ್ಕು ಸಹ ಕೃಚ್ಛ್ರಪ್ರಾಜಾಪತ್ಯಕ್ಕೆ ಸಮಾನಗಳು.

ಹೀಗೆ ಮಹಾಪಾಪ, ಉಪಪಾಪಗಳ ಪ್ರಾಯಶ್ಚಿತ್ತದ ಬಳಿಕ ರಹಸ್ಯ ಪಾತಕದ ಸಂಬಂಧವಾದ ಪ್ರಾಯಶ್ಚಿತ್ತಗಳನ್ನು ಹೀಗೆ ತಿಳಿಯಬಹುದು-

ಮಹಾಪಾತಕದ ದೂರೀಕರಣಕ್ಕಾಗಿ ಒಂದು ಸಾವಿರದ ಒಂದುನೂರ ಹತ್ತುಸಾರಿ ಗಾಯತ್ರೀ ಮಹಾಮಂತ್ರವನ್ನು ಜಪಿಸಬೇಕು ಮತ್ತು ವಾಮದೇವ ಮಂತ್ರವನ್ನು ಮೂರು ಸಾರಿ ಆವರ್ತನ ಮಾಡುವುದರಿಂದ ಶುದ್ಧಿಯುಂಟಾಗುತ್ತದೆ. ಪುರುಷಸೂಕ್ತವನ್ನು ಆವರ್ತನ ಮಾಡಿ ಪಠಿಸುವುದರಿಂದ ಸರ್ವವಿಧ ದೋಷಗಳು ನಾಶಗೊಳ್ಳುತ್ತವೆ. ಶ್ರೀ ರುದ್ರದ ಏಕಾದಶ ಅನುವಾಕಗಳನ್ನು ಪಠಿಸುವುದರಿಂದಲೂ ಶುದ್ಧಿಯುಂಟು. ಅಂತೆಯೇ ಪಂಚಾಕ್ಷರ (ಪ್ರಣವ ಸಹಿತಪಂಚಾಕ್ಷರ) ಮಹಾಮಂತ್ರವನ್ನು ಜಪಿಸುವುದರಿಂದಲೂ ಸಹ ಪರಿಶುದ್ಧಿಯುಂಟು. ಅಥರ್ವಶಿರೋಮಂತ್ರ, ನೀಲರುದ್ರಮಂತ್ರಗಳನ್ನು ಒಮ್ಮೆಯಾದರೂ ಜಪಿಸಿದರೂ, ಸಮಸ್ತ ಪಾಪಗಳಿಂದಲೂ ಬಿಡುಗಡೆ ದೊರೆಯುತ್ತದೆ. ತ್ರಿಸುಪರ್ಣಸೂಕ್ತವನ್ನು ಮೂರು ಸಾರಿ ಪಠಿಸುವುದರಿಂದಲೂ ಸಹ ಸರ್ವಪಾಪ-ಗಳಿಂದಲೂ ವಿಮುಕ್ತಿಯುಂಟು.

ಇದಿಷ್ಟು ಚಂದ್ರಜ್ಞಾನಾಗಮಾನುಸಾರ ಆಶೌಚ ಮತ್ತು ಪ್ರಾಯಶ್ಚಿತ್ತಗಳ ಬಗ್ಗೆ ಒಂದು ನೋಟವಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ಉಪಸಂಹಾರ:

ಬಹುಮಟ್ಟಿಗೆ ನಮ್ಮ ನಿತ್ಯಜೀವನದ ವ್ಯವಹಾರಗಳ ವಿಧಿವಿಧಾನಗಳನ್ನು ಧರ್ಮಶಾಸ್ತ್ರ ಬೋಧಿಸುತ್ತವೆ. ಈ ಧರ್ಮಶಾಸ್ತ್ರಸಂಬಂಧಿ ಗ್ರಂಥಗಳಾದ ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ ಮೊದಲಾದ ಸ್ಮೃತಿ ಗ್ರಂಥಗಳು, ನಿರ್ಣಯ ಸಿಂಧು, ವ್ಯವಹಾರಮಯೂಖ ಮೊದಲಾದ ಕೃತಿಗಳಲ್ಲಿ ಆಶೌಚದ ನಾನಾವಿಧ ಪ್ರಕಾರಗಳು, ಇದರ ಪರಿಹಾರೋಪಾಯಗಳು, ಪ್ರಾಯಶ್ಚಿತ್ತ ವಿಧಾನಗಳು, ಅವುಗಳ ಆಚರಣೆಯ ರೀತಿ-ನೀತಿಗಳು ಇತ್ಯಾದಿ ಅಂಶಗಳನ್ನು ಸವಿಸ್ತಾರವಾಗಿ ವಿವರಿಸಿರುವುದನ್ನು ಅರಿಯಬಹುದು.

ವಸ್ತುತಃ ನಿತ್ಯವೂ ತ್ರಿಕಾಲ ಇಷ್ಟಲಿಂಗಪೂಜೆ, ಜಪ-ತಪ ಇತ್ಯಾದಿಗಳನ್ನು ಆಚರಿಸುವವನಾಗಿದ್ದರೂ, ವೀರಶೈವ ತಾನು ಕೇವಲ ಸಂಸಾರಬಂಧನದಲ್ಲಿ ಸಿಲುಕಿರುವ ಕಾರಣದಿಂದಲೇ ಉಕ್ತ ಆಶೌಚಗಳನ್ನು ಅವಶ್ಯ ಆಚರಿಸಬೇಕೆಂಬುದು ಮುಖ್ಯತತ್ತ್ವ. ಇದರಿಂದ ಆಂತರಿಕಶುದ್ಧಿ, ಮಾನಸಿಕಶುದ್ಧಿ, ದೈಹಿಕಶುದ್ಧಿಗಳು ಅವಶ್ಯ ಸಂಭವಿಸುತ್ತ-ವೆಂಬುದು ನಿರ್ವಿವಾದ. ಇದು ಕೇವಲ ಲೋಕಾಚಾರವಾಗಿರುವುದರಿಂದ, ಸಮಾಜಜೀವಿಯಾದ ಪ್ರತಿಯೊಬ್ಬ ವೀರಶೈವನೂ ಇವುಗಳನ್ನು ಆಚರಿಸುವುದು ಸೂಕ್ತ.

ಇಂತಹ ವೀರಶೈವನು ಬಹುಮಟ್ಟಿಗೆ ಯಾವುದೇ ಪಾಪಕಾರ್ಯಕ್ಕೆ ಮನಸ್ಸು ಕೊಡುವವನಲ್ಲವಾದರೂ, ಗ್ರಹಚಾರವಶಾತ್, ಆಕಸ್ಮಿಕ ಸಂದರ್ಭಗಳ ಒತ್ತಡದಿಂದಾಗಿ, ತನಗೆ ತಿಳಿಯದೆಯೇ ಕೆಲವು ಅನಿರೀಕ್ಷಿತ, ಅನೂಹ್ಯ ಪಾಪಕಾರ್ಯಗಳು ತನ್ನಿಂದ ಸಂಘಟಿಸಬಹುದು. ಇವುಗಳ ಪರಿಹಾರಕ್ಕಾಗಿ, ತನ್ಮುಖಾಂತರ ಆತ್ಮಶುದ್ಧಿಗಾಗಿ ಮತ್ತು ತನ್ನ ಪ್ರಮುಖ ಧ್ಯೇಯವಾಗಿರುವ ಶಿವಜೀವೈಕ್ಯ ಮೋಕ್ಷಸಿದ್ಧಿಗಾಗಿ, ವಿಧ್ಯುಕ್ತಪ್ರಾಯಶ್ಚಿತ್ತ-ಗಳನ್ನು ಆಚರಿಸುವುದು ವಿಹಿತವಾದುದು. ಆದರೆ, ಕಾಲ-ದೇಶ-ವರ್ತಮಾನ-ಪರಿಸ್ಥಿತಿಗಳಿಗನುಸಾರವಾಗಿ, ಕೃಚ್ಛ್ರಾದಿಪ್ರಾಯಶ್ಚಿತ್ತಗಳನ್ನು ಆಚರಿಸುವುದು ವಸ್ತುತಃ ಅಸಾಧ್ಯವೇ ಹೌದು. ಈ ಪ್ರಾಯಶ್ಚಿತ್ತಗಳ ಅನುಷ್ಠಾನದಲ್ಲಿ, ಯಥಾಶಕ್ತಿ ಆಚರಿಸ-ಬಹುದೆಂಬ ಹೇಳಿಕೆಗಳನ್ನು ಸ್ಮೃತಿಗಳು ಹೇಳಿದ್ದರೂ, ಇವುಗಳ ಆಚರಣೆ ಕೆಲವೊಮ್ಮೆ ಅಸಾಧ್ಯವೇ ಆಗಬಹುದು. ಆದ್ದರಿಂದ, ತಾನು ತನ್ನ ಯಥಾಶಕ್ತಿ ಇಷ್ಟಲಿಂಗಪೂಜೆ, ಷಡಕ್ಷರ ಮಹಾಮಂತ್ರ ಜಪ, ದೇವತಾರ್ಚನೆ, ದೇವತಾದರ್ಶನ, ಗುರುಪೂಜೆ, ಗುರುದರ್ಶನ, ಗುರುವಿನಿಂದ ಪಾದೋದಕ-ಪ್ರಸಾದ-ಆಶೀರ್ವಾದಾದಿಗಳನ್ನು ಪಡೆಯುವುದು ಇತ್ಯಾದಿಗಳ ಮುಖಾಂತರ ಎಂತಹ ಘೋರತಮಪಾಪಗಳನ್ನೂ ಸಹ ಪರಿಹರಿಸಿಕೊಳ್ಳಬಹುದೆಂಬುದು ಪ್ರಾಯಶ್ಚಿತ್ತದ ಅತ್ಯಂತ ಸುಲಭ ವಿಧಾನವೆಂಬುದು ನನ್ನ ಸ್ವಂತ ಅಭಿಪ್ರಾಯ. ಆದ್ದರಿಂದ,

'ಯಃ ಶ್ರದ್ಧಯೈವಾಚರತಿ ವಿಹಿತಂ ಶಿವಶಾಸನೇ।
ಸ ಶ್ರೀಕಂಠಪ್ರಸಾದೇನ ಶಿವಸಾಯುಜ್ಯಮೃಚ್ಛತಿ॥'[೧೨]

ಹೀಗೆ ಶ್ರದ್ಧೆ, ಭಕ್ತಿ, ನಿಷ್ಠೆಗಳಿಂದ ವಿಧ್ಯುಕ್ತಪ್ರಾಯಶ್ಚಿತ್ತಗಳನ್ನು ಯಥಾಶಕ್ತಿ ಆಚರಿಸತಕ್ಕ ವೀರಶೈವನಿಗೆ ಶಿವಕಾರುಣ್ಯವು ದೊರಕಿ, ತಪ್ಪದೆ ಶಿವಸಾಯುಜ್ಯ ಸಂಭವಿಸುತ್ತದೆ.

---

೧೨. ಅದೇ, ಚ.ಪಾ., ೮.೨೨.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೮. ಅನುಬಂಧ-ಆಶೌಚ ಕೃಚ್ಛ್ರಾದಿವ್ರತಗಳ ಅರ್ಥವಿವರಣೆ ಇತ್ಯಾದಿ.

೧. ಆಶೌಚ : [ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಆಶೌಚಪ್ರಕರಣ ವ್ಯಾಖ್ಯಾನದ ಪೀಠಿಕೆ]

'ಆಶೌಚಶಬ್ದೇನ ಚ ಕಾಲಸ್ನಾನಾದ್ಯಪನೋದ್ಯಃ, ಪಿಂಡೋದಕದಾನಾದಿವಿಧೇಃ ಅಧ್ಯಯನಾದಿಪರ್ಯುದಾಸಸ್ಯ ಚ ನಿಮಿತ್ತಭೂತಃ ಪುರುಷಗತಃ ಕಶ್ಚನ ಅತಿಶಯಃ ಕಥ್ಯತೇ, ನ ಪುನಃ ಕರ್ಮಾನಧಿಕಾರಮಾತ್ರಮ್॥'

(ಪರ್ಯುದಾಸ = ನಿಷೇಧ).

೨. ಪಾಪಕ್ಕೆ ಕಾರಣ ಮತ್ತು ಪ್ರಾಯಶ್ಚಿತ್ತಗಳ ಅವಶ್ಯಕತೆ-

[ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಪದ್ಯ-೨೧೯,೨೨೦]

'ವಿಹಿತಸ್ಯಾನನುಷ್ಠಾನಾನ್ನಿಂದಿತಸ್ಯ ಚ ಸೇವನಾತ್।
ಅನಿಗ್ರಹಾಚ್ಚೇಂದ್ರಿಯಾಣಾಂ ನರಃ ಪತನಮೃಚ್ಛತಿ॥
ತಸ್ಮಾತ್ತೇನೇಹ ಕರ್ತವ್ಯಂ ಪ್ರಾಯಶ್ಚಿತ್ತಂ ವಿಶುದ್ಧಯೇ।
ಏವಮಸ್ಯಾಂತರಾತ್ಮಾ ಚ ಲೋಕಶ್ಚೈವ ಪ್ರಸೀದತಿ॥'

೩. ಪ್ರಾಯಶ್ಚಿತ್ತಗಳ ಫಲಃ

[ಮನುಸ್ಮೃತಿ, ಅಧ್ಯಾಯ-೩, ಪದ್ಯ ೩೨೭]

'ಕೃಚ್ಛ್ರಕೃದ್ಧರ್ಮಕಾಮಸ್ತು ಮಹತೀಂ ಶ್ರಿಯಮಾಪ್ನುಯಾತ್।
ಯಥಾಗುರುಕ್ರತುಫಲಂ ಪ್ರಾಪ್ನೋತಿ ಸುಸಮಾಹಿತಃ॥'

೪. ಯಥಾಶಕ್ತಿಪ್ರಾಯಶ್ಚಿತ್ತದ ಆಚರಣೆಯ ಬಗ್ಗೆ-

[ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೦೯]

'ಅನುಕ್ತನಿಷ್ಕೃತೀನಾಂ ತು ಪಾಪಾನಾಮಪನುತ್ತಯೇ।
ಶಕ್ತಿಂ ಚಾವೇಕ್ಷ್ಯ ಪಾಪಂ ಚ ಪ್ರಾಯಶ್ಚಿತ್ತಂ ಪ್ರಕಲ್ಪಯೇತ್॥'

೫. ಕೃಚ್ಛ್ರ-(ಸಾಮ್ಯಕೃಚ್ಛ್ರ)

[ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಪದ್ಯ-೩೨೧]

'ಪಿಣ್ಯಾಕಾಚಾಮತಕ್ರಾಂಬುಸಕ್ತೂನಾಂ ಪ್ರತಿವಾಸರಮ್।
ಏಕರಾತ್ರೋಪವಾಸಶ್ಚ ಕೃಚ್ಛ್ರಃ ಸೌಮ್ಯೋಽಯಮುಚ್ಯತೇ॥'

ಅನ್ನದ ಉಂಡೆ (ತುತ್ತು ಅಥವಾ ಹಿಂಡಿ), ಆಚಮನ, ತಕ್ರ [ಮೊಸರು ಮುಕ್ಕಾಲು ಭಾಗ, ನೀರು ಕಾಲು ಭಾಗ], ಅಂಬು (ನೀರು), ಸಕ್ತು (ಗಂಜಿ) -ಇವುಗಳನ್ನು ಐದು ದಿನಗಳವರೆಗೆ ಸ್ವೀಕರಿಸಿ, ಆರನೆಯ ದಿನ ರಾತ್ರಿ ಉಪವಾಸವಿರುವುದು.

೬. ಅತಿಕೃಚ್ಛ್ರಃ [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೧೩]

'ಏಕೈಕಂ ಗ್ರಾಸಮಶ್ನೀಯಾತ್ ತ್ರ್ಯಹಾಣಿ ತ್ರೀಣಿ ಪೂರ್ವವತ್।
ತ್ರ್ಯಹಂ ಚೋಪವಸೇದಂತ್ಯ ಮತಿಕೃಚ್ಛ್ರಂ ಚರನ್ ದ್ವಿಜಃ॥'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೊದಲ ಮೂರು ದಿನಗಳು ಒಂದೊಂದೇ ತುತ್ತು ಊಟ, ಬಳಿಕ ಮೂರು ದಿನಗಳು ಪ್ರಾತಃಕಾಲ ಮಾತ್ರ, ಆನಂತರದ ಮೂರು ದಿನ ಸಾಯಂಕಾಲ ಮಾತ್ರ, ಬಳಿಕದ ಮೂರುದಿನ ಅಯಾಚಿತಭೋಜನ, ಬಳಿಕ ಮೂರು ದಿನ ಉಪವಾಸ. [ಅಯಾಚಿತ= ಬೇಡದೆ ತಾನೇ ಬೇರೆಯವರು ತಂದು ನೀಡಿದ ಅನ್ನ]

೭. ತಪ್ತಕೃಚ್ಛ್ರ: [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೧೪]

'ತಪ್ತಕೃಚ್ಛ್ರಂ ಚರನ್ ವಿಪ್ರೋ ಜಲಕ್ಷೀರಘೃತಾನಿಲಾನ್।
ಪ್ರತಿತ್ರ್ಯಹಂ ಪಿಬೇದುಷ್ಣಾನ್ ಸಕೃತ್‌ಸ್ನಾಯೀ ಸಮಾಹಿತಃ॥'

[ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಪದ್ಯ-೩೧೭]

ತಪ್ತಕ್ಷೀರಘೃತಾಂಬೂನಾಂ ಏಕೈಕಂ ಪ್ರತ್ಯಹಂ ಪಿಬೇತ್।
ಏಕರಾತ್ರೋಪವಾಸಶ್ಚ ಸಪ್ತಕೃಚ್ಛ್ರ ಉದಾಹೃತಃ॥'

೮. ಪ್ರಾಜಾಪತ್ಯ: [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೧೧]

'ತ್ರ್ಯಹಂ ಪ್ರಾತಸ್ತ್ರ್ಯಹಂ ಸಾಯಂ ತ್ರ್ಯಹಮದ್ಯಾದಯಾಚಿತಮ್।
ತ್ರ್ಯಹಂ ಪರಂ ಚ ನಾಶ್ನೀಯಾತ್ ಪ್ರಾಜಾಪತ್ಯಂ ಚರನ್ ದ್ವಿಜಃ॥'

೯. ಸಾಂತಪನ: [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೧೨]

'ಗೋಮೂತ್ರಂ ಗೋಮಯಂ ಕ್ಷೀರಂ ದಧಿ ಸರ್ಪಿಃ ಕುಶೋದಕಮ್।
ಏಕರಾತ್ರೋಪವಾಸಶ್ಚ ಕೃಚ್ಛ್ರಂ ಸಾಂತಪನಂ ಸ್ಮೃತಮ್॥'

ಒಂದೊಂದು ದಿನ ಈ ಒಂದೊಂದನ್ನು ಸೇವಿಸಿ, ಏಳನೆಯ ದಿನ ಪೂರ್ಣ ಉಪವಾಸ.

೧೦. ಚಾಂದ್ರಾಯಣ: [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೩೨೧೭

'ಏಕೈಕಂ ಹ್ರಾಸಯೇತ್ಪಿಂಡಂ ಕೃಷ್ಣೇ ಶುಕ್ಲೇ ಚ ವರ್ಧಯೇತ್।
ಉಪಸ್ಪೃಶಂಸ್ತ್ರಿಷವಣಂ ಏತಚ್ಚಾಂದ್ರಾಯಣಂ ಸ್ಮೃತಮ್॥'

[ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಪದ್ಯ-೩೨೩]

'ತಿಥಿವೃದ್ಧ್ಯಾ ಚರೇತ್ ಪಿಂಡಾನ್ ಶುಕ್ಲೇ ಶಿಖ್ಯಂಡಸಂಮಿತಾನ್।
ಏಕೈಕಂ ಹ್ರಾಸಯೇತ್ಕೃಷ್ಣೇ ಪಿಂಡಂ ಚಾಂದ್ರಾಯಣಂ ಚರನ್॥'

ಶುಕ್ಲಪ್ರತಿಪದೆಯಿಂದ ಆರಂಭಿಸಿ ಒಂದೊಂದೇ ತುತ್ತಿನಂತೆ ಹೆಚ್ಚಿಸುತ್ತಾ ಹುಣ್ಣಿಮೆಯಂದು ಹದಿನೈದು ತುತ್ತು ಊಟ, ಹಾಗೆಯೇ, ಕೃಷ್ಣ ಪ್ರತಿಪದೆಯಿಂದ ಒಂದೊಂದು ತುತ್ತು ಕಡಿಮೆಯಾಗುತ್ತಾ (೧೪, ೧೩, ... ಇತ್ಯಾದಿ) ಅಮಾವಾಸ್ಯೆಯ ದಿನ ಒಂದು ತುತ್ತು ಭೋಜನ, ತ್ರಿಕಾಲಸ್ನಾನ, ಹಗಲು ನಿರಾಹಾರ, ರಾತ್ರಿ ಮಾತ್ರ ಮೇಲ್ಕಂಡಂತೆ ಸೇವನೆ. (ತುತ್ತಿನ ಪ್ರಮಾಣ-ನವಿಲಿನ ಮೊಟ್ಟೆಯ ಗಾತ್ರದಷ್ಟು).

೧೧. ಪರಾಕ: [ಮನುಸ್ಮೃತಿ, ಅಧ್ಯಾಯ-೧೧, ಪದ್ಯ-೨೧೫]

'ಯತಾತ್ಮನೋಽಪ್ರಮತ್ತಸ್ಯ ದ್ವಾದಶಾಹಮಭೋಜನಮ್।
ಪರಾಕೋ ನಾಮ ಕೃಚ್ಛ್ರೋಽಯಂ ಸರ್ವಪಾಪಾಪನೋದನಃ॥'

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

[ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ-೩, ಪದ್ಯ-೩೨೦]

'ದ್ವಾದಶಾಹೋಪವಾಸೇನ ಪರಾಕಃ ಪರಿಕೀರ್ತಿತಃ||'

೧೨. ಏಕೋದ್ದಿಷ್ಟ: [ಚಂದ್ರಜ್ಞಾನಾಗಮ, ಚರ್ಯಾಪಾದ, ಪಟಲ-೪, ಪದ್ಯ-೨೮]

"ಕ್ರಿಯತೇ ಯದೇಕಮುದ್ದಿಶ್ಯ ಚೈಕೋದ್ದಿಷ್ಟಂ ಪ್ರಕೀರ್ತಿತಮ್।'

ಓರ್ವ ವ್ಯಕ್ತಿಯನ್ನು ಉದ್ದೇಶಿಸಿ ಮಾಡುವ ಆರಾಧನೆ.

೧೩. ತತ್ತ್ವಸಂಯೋಜನೆ: [ಚಂದ್ರಜ್ಞಾನಾಗಮ, ಚರ್ಯಾಪಾದ, ಪಟಲ-೪, ಪದ್ಯ-೪೩]

'ಷಟ್‌ತ್ರಿಂಶತಾಂ ಚ ತತ್ತ್ವಾನಾಂ ಕಲಾನಾಮಷ್ಟತ್ರಿಂಶತಾಮ್।
ಆರಾಧನಂ ಕರಿಷ್ಯಾಮೀತ್ಯೇವಂ ಸಂಕಲ್ಪಮಾಚರೇತ್||'

ಶಿವಾದಿಭೂಮ್ಯಂತ ಮೂವತ್ತಾರು ತತ್ತ್ವಗಳನ್ನು ನಿವೃತ್ತಿ ಮೊದಲಾದ ಮೂವತ್ತೆಂಟು ಕಲೆಗಳನ್ನು ಆಹ್ವಾನಿಸಿ ಆರಾಧಿಸುವುದು.

೧೪. ಷಡಕ್ಷರ ಮಹಾಮಂತ್ರ: 'ಓಂ ನಮಃ ಶಿವಾಯ'

೧೫. ಗಾಯತ್ರೀ ಮಂತ್ರ ಅಥವಾ ಸಾವಿತ್ರೀ ಮಂತ್ರ:

ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।
ಧೀಯೋಯೋನಃ ಪ್ರಚೋದಯಾತ್||

೧೬. ವಾಮದೇವ ಮಂತ್ರ:

ವಾಮದೇವಾಯ ನಮೋ ಜ್ಯೇಷ್ಠಾಯ ನಮಃ ಶ್ರೇಷ್ಠಾಯ
ನಮೋ ರುದ್ರಾಯ ನಮಃ ಕಾಲಾಯ ನಮಃ
ಕಲವಿಕರಣಾಯ ನಮೋ ಬಲವಿಕರಣಾಯ ನಮೋ ಬಲಾಯ ನಮೋ
ಬಲಪ್ರಮಥನಾಯ ನಮಃ ಸರ್ವಭೂತದಮನಾಯ ನಮೋ
ಮನೋನ್ಮನಾಯ ನಮಃ||

೧೭. ಪುರುಷಸೂಕ್ತ: ಸಹಸ್ರ ಶೀರ್ಷಾ ಪುರುಷಃ।........

೧೮. ರುದ್ರೈಕಾದಶಕ: (ಶ್ರೀ ರುದ್ರಾಧ್ಯಾಯ)

ನಮಸ್ತೇ ರುದ್ರಮನ್ಯವ ಉತೋತ ಇಷವೇ ನಮಃ।....

ಇತ್ಯಾದಿ ೧೧ ಅನುವಾಕಗಳು ಪೂರ್ತ।

೧೯. ಅಥರ್ವಶಿರಸ್: (ಅಥರ್ವಶಿರ ಉಪನಿಷತ್)

ಶ್ರುತಿರಾಥರ್ವಣೀ ಸೂಕ್ಷ್ಮಾ ಸೂಕ್ಷ್ಮಾರ್ಥಸ್ಯ ಪ್ರಕಾಶಿನೀ।
ಅಥರ್ವಪಾತಕಾಸ್ತೋಽಪಿ ಯಾಸ್ಯಂತಿ ಪರಮಾಂ ಗತಿಮ್||
ಅಥರ್ವಶಿರಸಾಮರ್ಥಮನರ್ಥಪ್ರೋತವಾಚಕಮ್।
ಸರ್ವಾಧಾರಮನಾಧಾರಂ ಸ್ವಮಾತ್ರೈಪದಾಕ್ಷರಮ್||

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಓಂ ಭದ್ರಂ ಕರ್ಣೇಭಿರಿತಿ ಶಾಂತಿಃ।।
ಓಂ ದೇವಾಹ ವೈ ಸ್ವರ್ಗಂ ಲೋಕಮಾಯಂಸ್ತೇ.....।।

೨೦. ನೀಲರುದ್ರಃ (ನೀಲರುದ್ರೋಪನಿಷತ್)

ಅಪಶ್ಯಂತ್ವಾವರೋಹಂತಂ ದಿವಿತಃ ಪೃಥಿವೀಮತಃ।
ಅಪಶ್ಯಂ ಯದ್ರುಮಸ್ಯಂತಂ ನೀಲಗ್ರೀವಂ ಶಿಖಂಡಿನಮ್।।
....

೨೧. ತ್ರಿಸುಪರ್ಣಮಂತ್ರಃ

ಬ್ರಹ್ಮಮೇತು ಮಾಂ। ಮಧುಮೇತು ಮಾಂ।
ಬ್ರಹ್ಮ ಮೇವ ಮಧುಮೇತು ಮಾಂ।..........

೨೨. ದಶರಾತ್ರಿ (ಕೃಚ್ಛ್ರ): ಹತ್ತುದಿನಗಳು ಹಗಲಲ್ಲಿ ಭೋಜನ ಮಾಡದೆ ರಾತ್ರಿ ಮಾತ್ರ ನಿರ್ದಿಷ್ಟ ರೀತಿಯಲ್ಲಿ ಭೋಜನ ಮಾಡುವುದು.

೨೩. ಪ್ರಾಣಾಯಾಮಮಂತ್ರಃ

ಓಂ ಭೂಃ, ಓಂ ಭುವಃ, ಓಂ ಸುವಃ, ಓಂ ಮಹಃ, ಓಂ ಜನಃ,
ಓಂ ತಪಃ, ಓಂ ಸತ್ಯಂ, ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ
ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್।। ಓಂ ಆಪೋ
ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಃಸುವರೋಂ।।

೨೪. ಗಾರ್ಹಸ್ಥ್ಯ ಬ್ರಹ್ಮಚರ್ಯ – ನೈಷ್ಠಿಕಬ್ರಹ್ಮಚರ್ಯ–

ಗೃಹಸ್ಥನು ಮಾಸಿಕ ಮೈಲಿಗೆಯ ದಿನಗಳು, ಅಷ್ಟಮೀ ಮೊದಲಾದ ಕೆಲವು ನಿರ್ದಿಷ್ಟ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಸುಖವನ್ನನುಭವಿಸುವುದು ಗಾರ್ಹಸ್ಥ ಬ್ರಹ್ಮಚರ್ಯ.

ಸ್ತ್ರೀಯ ಮುಖವನ್ನು ನೋಡುವುದಿರಲಿ, ಸ್ತ್ರೀಯ ಚಿತ್ರವನ್ನೂ ಸಹ ನೋಡದಿರುವುದು, ಮನಸ್ಸಿನಲ್ಲಿ ಭಾವಿಸದಿರುವುದು ಇತ್ಯಾದಿ ನಿಷ್ಠೆಯೇ ನೈಷ್ಠಿಕ ಬ್ರಹ್ಮಚರ್ಯ.

ಅವಲೋಕಿಸಿರುವ ಗ್ರಂಥಗಳು

೧. ಚಂದ್ರಜ್ಞಾನಾಗಮ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೨. ಕಾರಣಾಗಮ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೩. ಮಕುಟಾಗಮ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೪. ಸೂಕ್ಷ್ಮಾಗಮ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೫. ಸಿದ್ಧಾಂತಶಿಖಾಮಣಿ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೬. ಭಾರತೀಯದರ್ಶನ (ಕರ್ನಾಟಕ ಸರ್ಕಾರ)

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ಶಕ್ತಿವಿಶಿಷ್ಟಾದ್ವೈತ (ಮೈಸೂರು ಸರ್ಕಾರ)
೮. ಮನುಸ್ಮೃತಿ (ಚೌಖಂಬಾ ಸೀರೀಸ್, ಬನಾರಸ್)
೯. ಯಾಜ್ಞವಲ್ಕ್ಯಸ್ಮೃತಿ (ಚೌಖಂಬಾ ಸೀರೀಸ್, ಬನಾರಸ್)
೧೦. ವೈದಿಕಶಿವಪೂಜಾ ವಿಧಿ (ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್)
೧೧. ವೀರಶೈವಪೂರ್ವ ಪ್ರಯೋಗರತ್ನ (ಎಂ.ಜಿ. ನಂಜುಂಡಾರಾಧ್ಯರು)
೧೨. ವೀರಶೈವ ಆಗಮ ಪ್ರಯೋಗರತ್ನ (ಎಂ.ಜಿ. ನಂಜುಂಡಾರಾಧ್ಯರು)
೧೩. ಸಸ್ವರವೇದ ಮಂತ್ರಾಃ (ರಾಮಕೃಷ್ಣಾಶ್ರಮ)
೧೪. ಸಸ್ವರಮಹಾನ್ಯಾಸಾದಿ ಮಂತ್ರಾಃ (ರಾಮಕೃಷ್ಣಾಶ್ರಮ)

ೞ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೩. ವೀರಶೈವರ ದೈನಂದಿನ ಆಚರಣೆಗಳು

-ಶ್ರೀಕರದೇವರು ಹಿರೇಮಠ

ವೇದಾಗಮಗಳು ವೀರಶೈವ ಸಿದ್ಧಾಂತದ ಆಧಾರಗ್ರಂಥಗಳಾಗಿವೆ. ಅತ್ಯಂತ ನಿರ್ದುಷ್ಟವೂ, ವೈಜ್ಞಾನಿಕವೂ ಆದ "ಶಕ್ತಿ-ವಿಶಿಷ್ಟ-ಅದ್ವೈತ ಸಿದ್ಧಾಂತ"ದಿಂದ ಭಾರತೀಯ ದರ್ಶನಗಳಲ್ಲಿ ವಿಶೇಷವಾದ ಸ್ಥಾನವನ್ನು ಹೊಂದಿರುವ ವೀರಶೈವದರ್ಶನವು ಶೈವಾಗಮಗಳ ಉತ್ತರಭಾಗಗಳಲ್ಲಿ ವ್ಯವಸ್ಥಿತವಾಗಿ ಹೇಳಲ್ಪಟ್ಟಿದೆ. ಪ್ರಸ್ತುತ ಪ್ರಬಂಧದ ವಿಷಯಕ್ಕೆ ಆಧಾರಗ್ರಂಥವಾದ "ಚಂದ್ರಜ್ಞಾನಾಗಮ"ವು ೨೮ ಶೈವಾಗಮಗಳಲ್ಲಿ ವಿಶಿಷ್ಟವಾಗಿದೆ. ಈ ಗ್ರಂಥದಲ್ಲಿ ವೀರಶೈವ ತತ್ತ್ವಜ್ಞಾನದ ಮುಖ್ಯ ಅಂಶಗಳಾದ ಅಷ್ಟಾವರಣ, ಪಂಚಾಚಾರ ಮುಂತಾದ ವಿಷಯಗಳ ವಿಸ್ತೃತ ವಿವರಣೆಯಿದೆ.

ಮತಸಂಬಂಧೀ ದೈನಂದಿನ ಆಚರಣೆಗಳಿಗೆ 'ಆಹ್ನಿಕ' ಎಂದು ಹೆಸರು. 'ಆಹ್ನಿಕ'ದ ಆಚರಣೆ ಏಕೆ? ಅದರಿಂದಾಗುವ ಪ್ರಯೋಜನವೇನು? ಎಂದರೆ-

"ಆವಣ ಮಲವೇ ಮೊದಲಾದ ಪಾಶಗಳಿಂದ ಬಂಧಿತನಾದ ಜೀವನ ಮುಕ್ತಿಗೆ ಆಹ್ನಿತವು ಸಾಧನವಾಗಿದೆ"ಯೆಂದು ಮಕುಟಾಗಮವು ತಿಳಿಸುತ್ತದೆ.

ಆಹ್ನಿಕಂ ತು ಪ್ರವಕ್ಷ್ಯಾಮಿ ಶಾಂಭವಾನಾಮನುತ್ತಮಮ್।
ಶೃಣುಷ್ವಾವಹಿತೋ ಭೂತ್ವಾ ಭವಪಾಶನಿಕೃಂತನಮ್॥೧

ಮಾನವಜನ್ಮವನ್ನು ಹೊಂದಿದ ಮೇಲೆ ಧರ್ಮದ ಆಚರಣೆಯು ಅವಶ್ಯ ಹಾಗೂ ಅನಿವಾರ್ಯ. ಮಾನವನು ಇತರ ಪ್ರಾಣಿಗಳಂತೆ ಸೃಷ್ಟಿಧರ್ಮವನ್ನನುಸರಿಸಿ ನಡೆಯುವುದಿಲ್ಲ. ಸೃಷ್ಟಿಧರ್ಮವನ್ನೂ ಮೀರಿ ತನ್ನ ಆತ್ಮೋನ್ನತಿಯನ್ನು ಮಾಡಿಕೊಳ್ಳಲು ಆತ ಸಮರ್ಥನಾಗಿದ್ದಾನೆ. ಅದಕ್ಕಾಗಿಯೇ ಈಶ್ವರನು ಈ ಜಗತ್ತಿನಲ್ಲಿ 'ಧರ್ಮ' ಎಂಬ ಕಟ್ಟಳೆಯನ್ನು ಕಲ್ಪಿಸಿದ್ದಾನೆ. ಪ್ರಾಣಿಗಳು ಸ್ವಾಭಾವಿಕವಾಗಿ ನಿಸರ್ಗವನ್ನು ಅತಿಕ್ರಮಿಸುವುದಿಲ್ಲ. ಆದ್ದರಿಂದ ಅವುಗಳಿಗೆ ಧರ್ಮದ ಬಂಧನವಿಲ್ಲ. ಮಾನವನು ಸೃಷ್ಟಿಯ ನಿಯಮವನ್ನು ಉಲ್ಲಂಘಿಸುವವನಾದ್ದರಿಂದ ಆತನ ನಡತೆಯ ನಿಯಮನಕ್ಕೆ 'ಧರ್ಮ'ವು ಇದೆ.

"ಹಲವು ಜನ್ಮಗಳಲ್ಲಿ ಮಾಡಿರುವ ಪುಣ್ಯಗಳ ಸಂಗ್ರಹದಿಂದ ಮಾನವಜನ್ಮವು ಪ್ರಾಪ್ತಿಯಾಗಿರುತ್ತದೆ. (ಅಧರ್ಮಿಯಾದ ಮಾನವನು ತನ್ನ ಮರಣ ಕಾಲದಲ್ಲಿ) ನಾನು ಧರ್ಮವನ್ನು ಮಾಡಲಿಲ್ಲ. ನಾನು ಮಾಡಿದ್ದೇನು ಎಂದು ಮುಂತಾಗಿ ಪಶ್ಚಾತ್ತಾಪ ಪಡುತ್ತಾನೆ" ಎಂದು ಗರುಡಪುರಾಣದಲ್ಲಿ ಮಾನವಜನ್ಮದ ಸಾಫಲ್ಯದ ಕುರಿತು ಹೇಳಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹತಾ ಪುಣ್ಯಯೋಗೇನ ಮಾನುಷಂ ಜನ್ಮ ಲಭ್ಯತೇ।
ತತ್ಪ್ರಾಪ್ಯ ನ ಕೃತೋ ಧರ್ಮಃ ಕೀದೃಶಂ ಹಿ ಮಯಾಕೃತಮ್॥[೨]

ಅದಕೆಂದೇ ಬಸವಣ್ಣನವರು ಕೂಡ-

ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು
ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವ.[೩]

ಎಂದು ಹೇಳುತ್ತ ಮನುಷ್ಯಜನ್ಮದ ಕ್ಷಣಿಕತೆಯನ್ನು ತಿಳಿಸುತ್ತ ಧರ್ಮಾಚರಣೆಯನ್ನು ತಿಳಿಸಿದ್ದಾರೆ.

ಓರ್ವ ಸುಭಾಷಿತಕಾರನು ಕೂಡ "ಈ ದೇಹಗಳು ನಶ್ವರ, ಸಿರಿಸಂಪತ್ತು ಅಶಾಶ್ವತವಾದವುಗಳೆಂದೂ ಮೃತ್ಯುವು ಸದಾ ತನ್ನ ಹತ್ತಿರದಲ್ಲೇ ಇದೆಯೆಂದು ತಿಳಿದು ಧರ್ಮವನ್ನು ಆಚರಿಸಬೇಕೆಂದು" ಮನಮುಟ್ಟುವಂತೆ ಹೇಳುತ್ತಾನೆ.

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ।
ನಿತ್ಯಂ ಸಂನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ॥[೪]

ಪ್ರತಿಕ್ಷಣವೂ, ಪ್ರತಿನಿತ್ಯವೂ ನಾವು ಆಚರಿಸುವ ಧರ್ಮಕಾರ್ಯಗಳು (ಆಹ್ನಿಕ) ಈ ಪಾರ್ಥಿವ ಶರೀರಾಂತರ್ಗತ ಚೈತನ್ಯರೂಪೀ ಶಿವನ ಸಾಕ್ಷಾತ್ಕಾರಕ್ಕೂ, ಮರಣಾನಂತರದಲ್ಲಿ ಉತ್ತಮಾವಸ್ಥೆಯನ್ನು ಪಡೆಯಲಿಕ್ಕೂ ಉತ್ತಮ ಸಾಧನವಾಗಿದೆ.

ಶ್ರೀ ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಗೆ ದರ್ಶನಭಾಗ್ಯವಿತ್ತಾಗ ಮಹರ್ಷಿಗೆ ಅವರು ಕೇಳುವ ಪ್ರಶ್ನೆಯೆಂದರೆ- "ನಿತ್ಯಕ್ರಿಯೆಗಳು ನಿರ್ವಿಘ್ನವಾಗಿ ಸಾಗುತ್ತಿವೆಯಷ್ಟೇ?" ಎಂದು

ನಿರ್ವಿಘ್ನಂ ವರ್ತಸೇ ಕಿಂ ನು ನಿತ್ಯಾ ತೇ ನಿಯಮಕ್ರಿಯಾಃ।[೫]

ಹೀಗಿದ್ದ ಮೇಲೆ ಅಗಸ್ತ್ಯನಂತಹ ಮಹರ್ಷಿಗೆ ಶ್ರೀ ಭಗವತ್ಪಾದ ರೇಣುಕಾಚಾರ್ಯರಂಥ ದೈವಿಪುರುಷರು ನಿತ್ಯಕ್ರಿಯೆಗಳು ನಿರ್ವಿಘ್ನವಾಗಿ ಸಾಗುತ್ತಿವೆಯೆ? ಎಂದು ಕೇಳಬೇಕಾದರೆ ನಿತ್ಯಕ್ರಿಯೆ (ಆಹ್ನಿಕ)ಗಳ ಮಹತ್ವವನ್ನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆಯಿಲ್ಲ.

ಕ್ಷೇಮೇಂದ್ರನ ಮಾತುಗಳಲ್ಲಿ ಧರ್ಮದ ವ್ಯಾಖ್ಯಾನವನ್ನು ಹೇಳಬೇಕೆಂದರೆ- "ಧರ್ಮವು ಇಹಾಮುತ್ರಗಳಲ್ಲಿ ಸುಖಪ್ರದವಾದುದು; ಅದುವೇ ಮೋಹಾಂಧಕಾರವನ್ನು ತೊಲಗಿಸುವದರಲ್ಲಿ ಸೂರ್ಯನಂತಿರುವುದು. ಧರ್ಮವೆಂಬುದು ಸರ್ವಾಪತ್ತುಗಳನ್ನು ಹೋಗಲಾಡಿಸುವುದರಲ್ಲಿ ಸಮರ್ಥವಾಗಿದೆ. ಧರ್ಮವೇ ಸಜ್ಜನರ ಅಮೂಲ್ಯನಿಧಿಯು. ಯಾವ ಸ್ಥಳದಲ್ಲಿ ಬಂಧುಬಳಗದವರಿರುವುದಿಲ್ಲವೋ ಅಂತಹ ದೊಡ್ಡ ದಾರಿಯಲ್ಲಿ (ಪರಲೋಕ ಮಾರ್ಗದಲ್ಲಿ) ಆ ಧರ್ಮವೇ ಮಾನವನ ಬಂಧುವಾಗಿರುವುದು; ಅದುವೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಿಜವಾದ ಗೆಳೆಯನೂ ಸಂಸಾರವೆಂಬ ವಿಶಾಲವಾದ ಮರುಭೂಮಿಯಲ್ಲಿ ಕಲ್ಪವೃಕ್ಷವೂ ಆಗಿರುವುದು. ಆದ್ದರಿಂದ ಧರ್ಮಕ್ಕಿಂತಲೂ ಶ್ರೇಷ್ಠವಾದುದು ಅನ್ಯದಾವುದೂ ಇಲ್ಲ."

ಧರ್ಮಃ ಶರ್ಮ ಪರತ್ರ ಚೇಹಚ ನೃಣಾಂ ಧರ್ಮೋऽನ್ಧಕಾರೇ ರವಿಃ
ಸರ್ವಾಪತ್ಪ್ರಶಮಕ್ಷಮಃ ಸುಮನಸಾಂ ಧರ್ಮೋ ನಿಧಿರ್ಮೂಲ್ಯವಾನ್।
ಧರ್ಮೋ ಬಂಧುರಬಾಂಧವೇ ಪೃಥುಪಥೇ ಧರ್ಮಃ ಸುಹೃನ್ನಿಶ್ಚಲಃ
ಸಂಸಾರೋರುಮರುಸ್ಥಲೇ ಸುರತರುರ್ನಾಸ್ತ್ಯೇವ ಧರ್ಮಾತ್ಪರಃ॥

ಅಧಿಕಾರಿ: ಯಾವುದೇ ಕಾರ್ಯವನ್ನು ಮಾಡಲು ವ್ಯಕ್ತಿಯು ಮೊದಲು ಅಧಿಕಾರಿಯಾಗಬೇಕು. ಅಧಿಕಾರಿ ಎಂದರೆ ಅರ್ಹತೆ ಉಳ್ಳವನು. ವಾಹನಚಾಲನೆಗೆ ಲೈಸನ್ಸ್ ಹೊಂದಿದವನು, ವಿದ್ಯಾಲಯದಲ್ಲಿ ಪಾಠ ಮಾಡಲು ಪದವಿ ಹಾಗೂ ಬೋಧನಾ ಕುಶಲತೆಯನ್ನು ಹೊಂದಿದವನು ಹೇಗೆ ಅಧಿಕಾರಿಗಳೋ ಹಾಗೆಯೇ ವೀರಶೈವ ಆಹ್ನಿಕಗಳನ್ನು ಆಚರಿಸಲು ಯಾರು ಅಧಿಕಾರಿಗಳು? ಎಂದರೆ- ವೀರಶೈವನ ಅಂತಿಮ ಲಕ್ಷ್ಯವೆಂದರೆ ಪಾಶಗಳ ನಾಶದಿಂದ ಮುಕ್ತಿಯನ್ನು ಪಡೆಯುವುದು. ಈ ಪಾಶನಾಶವು ಶಿವಪ್ರಸಾದದಿಂದಾಗುವುದು. ಅಂಥ ಪ್ರಸಾದವು ಶಾಂಭವದೀಕ್ಷೆಯನ್ನು ಹೊಂದಿದವನು ಮಾತ್ರ ಪಡೆಯಲು ಸಾಧ್ಯ. ಆದ್ದರಿಂದ, ವೀರಶೈವ ಆಹ್ನಿಕಗಳನ್ನು ಆಚರಿಸಲು ಸದ್ಗುರುವಿನಿಂದ ಪಡೆಯುವ ಶಿವದೀಕ್ಷೆಯೇ ಅರ್ಹತೆ, ಅಧಿಕಾರ ಮತ್ತು ಮಾರ್ಗ. ದೀಕ್ಷೆಯನ್ನು ಹೊಂದಿದವನೇ ಅಧಿಕಾರಿ ಎಂದು ತಿಳಿಯಬೇಕು.

ಅನಂತಜನ್ಮಮರಣಕಾರಣಾತ್ ಪಾಶಸಂಚಯಾತ್।
ಮುಮುಕ್ಷುರಾಚರೇದ್ದೀಕ್ಷಾಂ ಶಾಂಭವೀಂ ಪಾಶಕೃಂತಿನೀಮ್।
ನ ವಿನಾ ತತ್ಪ್ರಸಾದೇನ ಪ್ರಾಣಿನಾಂ ಬಂಧವಿಚ್ಯುತಿಃ।
ಲಭ್ಯತೇ ತತ್ಪ್ರಸಾದೋऽಪಿ ನಾನಯಾ ದೀಕ್ಷಯಾ ವಿನಾ॥[೬]

ಪ್ರಾತಃಕಾಲದ ಕರ್ಮಗಳು: ಮೋಕ್ಷಾಪೇಕ್ಷಿಗಳಾಗಿ ಸದ್ಗುರುವಿನಿಂದ ಶಾಂಭವದೀಕ್ಷೆಯನ್ನು ಹೊಂದಿ ಪವಿತ್ರ ಇಷ್ಟಲಿಂಗಧಾರಿಗಳಾದ ವೀರಶೈವರು ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಪ್ರಪ್ರಥಮವಾಗಿ ತನ್ನ ಇಷ್ಟಲಿಂಗವನ್ನು ತನ್ನೆರಡೂ ಕಣ್ಣುಗಳಿಗೆ ಒತ್ತಿಕೊಳ್ಳಬೇಕು. ನಂತರ ಚರಾಚರ ಪ್ರಪಂಚಕ್ಕೆ ಆದಿದಂಪತಿಗಳಾದ ಪಾರ್ವತೀಪರಶಿವರನ್ನು ಧ್ಯಾನಿಸಬೇಕು. ತದನಂತರ ಅಂದಿನ ಕಾರ್ಯಗಳನ್ನು ಕುರಿತು ಯೋಚಿಸಬೇಕು.

ಬ್ರಾಹ್ಮೇ ಮುಹೂರ್ತ ಉತ್ಥಾಯ ನೇತ್ರಯೋರಿಷ್ಟಲಿಂಗಕಮ್।
ಸ್ಪರ್ಶಯನ್ನೀಶ್ವರಂ ಸಾಂಬಂ ಧ್ಯಾತ್ವಾ ಕಾರ್ಯಂ ವಿಚಾರ್ಯ ಚ॥[೭]

ನಿದ್ರೆಯಿಂದ ಎದ್ದು ನಿತ್ಯಕಾರ್ಯಗಳಿಗೆ ಅಣಿಯಾಗುವುದಕ್ಕೆ ಬ್ರಾಹ್ಮೀ ಮುಹೂರ್ತವು ಅತ್ಯಂತ ಪ್ರಶಸ್ತವಾದ ಕಾಲವೆಂದು ಆಗಮಾದಿ ಎಲ್ಲ ಧರ್ಮಶಾಸ್ತ್ರಗಳ ಒಮ್ಮತವಿದೆ.

ಬ್ರಾಹ್ಮೀ ಮುಹೂರ್ತವೆಂದರೆ ಅರುಣೋದಯಕ್ಕೆ ೪೮ ನಿಮಿಷ ಮುಂಚೆ. ಅರುಣೋದಯವು ಸೂರ್ಯೋದಯಕ್ಕಿಂತ ೯೬ ನಿಮಿಷ (೪ ಗಳಿಗೆ: ೧ ಗಳಿಗೆ= ೨೪ ನಿಮಿಷ) ಮುಂಚೆ ಆಗುವುದು. ಉದಾಹರಣೆಗಾಗಿ: ಬೆಳಿಗ್ಗೆ ೫.೩೦ಕ್ಕೆ ಸೂರ್ಯೋದಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮಯವೆಂದು ತಿಳಿದರೆ ಅರುಣೋದಯವು ೩.೫೪ಕ್ಕೆ ಆಗುವುದು. ಬ್ರಾಹ್ಮೀ ಮುಹೂರ್ತವು ಅರುಣೋದಯಕ್ಕೆ ೪೮ ನಿಮಿಷ ಮುಂಚೆ ಅಂದರೆ ೩.೦೬ ನಿಮಿಷಕ್ಕೆ ಎಂದು ತಿಳಿಯಬೇಕು.

ಬ್ರಾಹ್ಮೀ ಮುಹೂರ್ತದ ಕಾಲವು ರಾತ್ರಿಯ ಮನಸ್ಸಿನ, ಶರೀರದ ಜಡತೆಯನ್ನು ಕಳೆದು ಹೊಸದಿನದ ಕಾರ್ಯಗಳಿಗಾಗಿ ನವಚೈತನ್ಯ ತುಂಬುವ ಕಾಲ. ಈ ಸಮಯವು ಮನಸ್ಸು ಪ್ರಫುಲ್ಲಿತವಾಗಿ ಧ್ಯಾನ, ಪೂಜೆ, ತತ್ತ್ವಚಿಂತನೆ ಇತ್ಯಾದಿ ಕಾರ್ಯಗಳಿಗೆ ಅತ್ಯಂತ ಪ್ರಶಸ್ತವಾಗಿರುತ್ತದೆ. ಇಂಥ ಸಮಯದಲ್ಲಿಯೇ ಮೋಕ್ಷಕಾರಣವಾದ ಪುರುಷಾರ್ಥಗಳನ್ನು ಕುರಿತು ಚಿಂತಿಸಬೇಕೆಂದು ಸ್ಮೃತಿ ಮುಂತಾದ ಧರ್ಮಗ್ರಂಥಗಳ ಅಭಿಮತವಿದೆ. ಹಾಗೆಯೇ ಈ ಸಂಧ್ಯಾಸಮಯ (ಸೂರ್ಯೋದಯ ಮತ್ತು ಸೂರ್ಯಾಸ್ತ)ದಲ್ಲಿ ಯಾವ ಕಾರ್ಯಗಳನ್ನು ಆಚರಿಸಬಾರದೆಂದು ಕೂಡ ಕಾರಣಾಗವು ತಿಳಿಸುತ್ತದೆ. "ಭೋಜನ, ಸ್ತ್ರೀಸಹವಾಸ, ಅಧ್ಯಯನ ಮತ್ತು ನಿದ್ದೆ- ಈ ನಾಲ್ಕು ಕರ್ಮಗಳನ್ನು ಯೋಚಿಸಬಾರದೆಂದು" ಕಾರಣಾಗಮವು ತಿಳಿಸಿ ಸಂಧ್ಯಾಸಮಯದಲ್ಲಿ ಶಿವಭಕ್ತನು ನಿದ್ದೆಯನ್ನು ಮಾಡುತ್ತಿದ್ದಲ್ಲಿ ಅವನು ಪ್ರಾಣಾಯಾಮ ಹಾಗೂ ೧೦೮ ಬಾರಿ ಪಂಚಾಕ್ಷರೀ ಮಂತ್ರಜಪವನ್ನು ಆಚರಿಸಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಹೇಳುತ್ತದೆ.

ತಥಾ ಚತ್ವಾರಿ ಕರ್ಮಾಣಿ ಸಂಧ್ಯಾಯಾಂ ನ ಸಮಾಚರೇತ್।
ಭುಕ್ತಿಂ ಚ ಕಾಮಿನೀಸಕ್ತಿಮಧೀತಿಂ ಸುಪ್ತಿಮೇವ ಚ॥
ಉದಯತ್ಯಸ್ತಮಯತಿ ರವೌ ಸುಪ್ಯತಿ ಚೇನ್ನರಃ।
ಪ್ರಾಣಾನಾಯಮ್ಯ ಚ ಜಪೇನ್ಮೂಲಮಷ್ಟೋತ್ತರಂ ಶತಮ್॥[೮]

ಬ್ರಾಹ್ಮೀ ಮುಹೂರ್ತದಲ್ಲಿ ಎದ್ದ ಶಿವಭಕ್ತನು ನೋಡಬೇಕಾದ ಹಾಗೂ ನೋಡಬಾರದ ವ್ಯಕ್ತಿ, ವಸ್ತುಗಳನ್ನು ಕುರಿತು ಹೇಳಿ ಅವುಗಳ ಫಲಾಫಲಗಳನ್ನು ಕುರಿತು ಹೀಗೆ ಉಲ್ಲೇಖವಿದೆ. "ಶಿವಭಕ್ತನನ್ನು, ಯಾಗಾದಿಗಳನ್ನು ಆಚರಿಸುವ ಬ್ರಹ್ಮಜ್ಞಾನಿಯನ್ನು, ಆತ್ಮಸಂಯಮಿಯನ್ನು, ಇಷ್ಟಲಿಂಗಧಾರೀ ವೀರಶೈವರನ್ನು ನೋಡುವುದರಿಂದ ಇಚ್ಛಿತ ಫಲಪ್ರಾಪ್ತಿಯಾಗುವುದು" ಎಂದೂ "ಭಸ್ಮ, ರುದ್ರಾಕ್ಷ, ಬಿಲ್ವವೃಕ್ಷಗಳನ್ನು, ಶಿವಭಕ್ತರನ್ನು ನೋಡಬೇಕೆಂದು" ಹಾಗೂ "ಮೋಸಗಾರ, ಧರ್ಮಭ್ರಷ್ಟ, ಕ್ರೂರಿ, ನಾಸ್ತಿಕ, ದೇವನಿಂದಕ, ಭೀರುಸ್ವಭಾವದವ ಮತ್ತು ಯಾಚಕ ಇವರನ್ನು ನೋಡಕೂಡದೆಂದು ವಿಧಿ-ನಿಷೇಧಗಳನ್ನು ಮಕುಟಾಗಮದಲ್ಲಿ ಹೇಳಿದೆ.

ಇದೇ ಮಾತನ್ನು ಅಲ್ಲಮಪ್ರಭುವಿನ ವಚನದಲ್ಲಿ ಹೇಳುವುದಾದರೆ-

ಮುಂದು ಜಾವದೊಳೆದ್ದು
ಲಿಂಗದಂಘ್ರಿಯ ಮುಟ್ಟಿ
ಸುಪ್ರಭಾತ ಸಮಯದೊಳು
ಸದ್ಭಕ್ತರ ಮುಖವ ನೋಡುವುದು
ಹುಟ್ಟಿದುದಕೆ ಇದುವೇ ಸಫಲ ನೋಡಾ
ಗುಹೇಶ್ವರಾ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೀಗೆ ದಿನದ ಮಂಗಲಾರಂಭಕ್ಕೆ ಸುಮೂಹರ್ತವಾದ ಬ್ರಾಹ್ಮೀಕಾಲದಲ್ಲಿ ಎದ್ದ ಶಿವಭಕ್ತನು ನಂತರ ಮಾಡಬೇಕಾದ ಶೌಚವಿಧಿಯನ್ನು ವಿವರಿಸಿದೆ.

ಶೌಚವಿಧಿ: ಶೌಚಕ್ರಿಯೆಗಳಿಗೆ ಶಿವಭಕ್ತನು ತನ್ನ ಮನೆಯಿಂದ ಆಗ್ನೇಯ ದಿಕ್ಕಿಗೆ ಹೋಗಬೇಕು. ಶೌಚಕ್ರಿಯೆಗೆ ಮುನ್ನ ಯಜ್ಞೋಪವೇತ ಹಾಗೂ ಶಿವಸೂತ್ರಗಳನ್ನು ತಲೆಯ ಮೇಲೆ ಇರಿಸಿಕೊಂಡು ಬಟ್ಟೆಯಿಂದ ಸುತ್ತಿಕೊಳ್ಳಬೇಕು. ಜಲವನ್ನು ಒಂದು ಸ್ಥಾನದಲ್ಲಿರಿಸಿ ವಿಧಿವತ್ತಾಗಿ ಮಲ-ಮೂತ್ರಗಳನ್ನು ವಿಸರ್ಜಿಸಿ ಶೌಚಕ್ರಿಯೆಯನ್ನು ಮುಗಿಸಬೇಕೆಂದು ಚಂದ್ರಜ್ಞಾನಾಗಮದಲ್ಲಿ ಹೇಳಿದೆ.

ಬಹಿರ್ವಿದಿಶಾಮಾಗ್ನೇಯೀಂ ಗಚ್ಛೇದಾರಾದತಂದ್ರಿತಃ||
ಶಿವಸೂತ್ರಂ ಯಜ್ಞಸೂತ್ರಂ ಮೂರ್ಧ್ನಿ ವಿನ್ಯಸ್ಯ ವಾಸಸಾ|
ಪ್ರಾವೃತ್ಯ ಚ ಶಿರೋಽನ್ಯತ್ರ ಜಲಪಾತ್ರಂ ನಿಧಾಯ ಚ||
ವಿಸೃಜ್ಯ ಚೈವ ವಿಣ್ಮೂತ್ರೇ ಶೌಚಂ ಕುರ್ಯಾದ್ವಿಧಾನತಃ|[೯]

ಕಾರಣಾಗಮವೂ ಕೂಡ ಶೌಚಾದಿವಿಧಿಗಳಿಗೆ ಆಗ್ನೇಯೀ ದಿಕ್ಕಿಗೇ ಹೋಗಬೇಕೆಂದು ಸೂಚಿಸಿ ಜಲಪಾತ್ರೆಯನ್ನು, ಒಂದು ಬಾಣವನ್ನು ಬಿಟ್ಟಾಗ ಅದು ಎಷ್ಟು ದೂರದಲ್ಲಿ ಹೋಗಿ ಬೀಳುತ್ತದೆಯೋ ಅಷ್ಟು ದೂರದಲ್ಲಿ ಇಡಬೇಕೆಂದು ಹೇಳುತ್ತದೆ.[೧೦] ಆದರೆ ಮಕುಟಾಗಮವು ದಿಕ್ಕಿನ ವಿಶೇಷವನ್ನು ಹೇಳದೇ ಕೇವಲ ಮನೆಯಿಂದ ದೂರಕ್ಕೆ ಹೋಗಬೇಕೆಂದು ಮಾತ್ರ ತಿಳಿಸುತ್ತದೆ. ಮತ್ತು ಯಜ್ಞೋಪವೀತ ಹಾಗೂ ಶಿವಸೂತ್ರಗಳನ್ನು ಕುತ್ತಿಗೆಯ ಹಿಂಭಾಗಕ್ಕೆ ನೇತಾಡುವಂತೆ ಬಿಡಬೇಕೆಂದು ಹೇಳಿದೆ.[೧೧] ಮಲಮೂತ್ರ-ವಿಸರ್ಜಿಸುವಾಗ ಮೇಲೆ ಕೆಳಗೆ ನೋಡಕೂಡದು. ಹಾಗೂ ಬ್ರಹ್ಮಜ್ಞಾನಿಗೆ, ಅಗ್ನಿಗೆ, ಸೂರ್ಯನಿಗೆ, ಚಂದ್ರನಿಗೆ ಎದುರಾಗಿ ಕುಳಿತುಕೊಳ್ಳಬಾರದು.[೧೨] ಶೌಚದ ನಂತರ ಮಣ್ಣು ಹಾಗೂ ನೀರನ್ನು ಉಪಯೋಗಿಸಿ ಕೈಕಾಲು ತೊಳೆದುಕೊಂಡು ಶುಚಿಯಾಗಬೇಕು. ಅಶುಚಿ ವ್ಯಕ್ತಿಯು ಅಧೋಗತಿಯನ್ನು ಹೊಂದುತ್ತಾನೆ.[೧೩] ಪವಿತ್ರನಿರಲಿ ಅಥವಾ ಅಪವಿತ್ರನಿರಲಿ ಶಿವನಾಮಸ್ಮರಣೆ ಮಾಡಿದರೆ ಸಾಕು ಆತ ಬಹಿರಂಗ ಹಾಗೂ ಅಂತರಂಗ ಶುಚಿಯನ್ನು ಹೊಂದುತ್ತಾನೆಂದು ಉಭಯಶುಚಿತ್ವ ಸಾಧನೆಯನ್ನು ಕಾರಣಾಗಮದಲ್ಲಿ ವಿವರಿಸಿದೆ.

ದಂತಧಾವನ: ಹಲ್ಲುಜ್ಜಲು ರಸಭರಿತವಾದ ನಾರುಗಳಿಂದ ಕೂಡಿರುವ ಅಥವಾ ಮುಳ್ಳನ್ನು ಹೊಂದಿರುವ ಯಾವುದೇ ಮರದ ಕೊಂಬೆಯು ಯೋಗ್ಯ. ಇಂಥ ಕಟ್ಟಿಗೆಗಳು ಸಿಗದಿದ್ದ ಪಕ್ಷದಲ್ಲಿ ನೀರನ್ನು ೧೨ ಬಾರಿ ಚೆನ್ನಾಗಿ ಮುಕ್ಕಳಿಸಿ ನಂತರ ಆಚಮನವನ್ನು ಮಾಡಬೇಕೆಂದು ಚಂದ್ರಜ್ಞಾನಾಗಮವು ಹೇಳುತ್ತದೆ.

ತತೋ ದಂತಾನ್ ಧಾವಯೇಚ್ಚ ಕ್ಷೀರಿಕಂಟಕಿಶಾಖಯಾ|
ಅಲಾಭೇ ದಂತಕಾಷ್ಠಾನಾಂ ಸದಾಚಾರಸಮನ್ವಿತಃ||
ಅಪಾಂ ದ್ವಾದಶಗಂಡೂಷೈಃ ಕುರ್ಯಾದಾಸ್ಯವಿಶೋಧನಮ್|
ಆಚಮ್ಯ ಚಾಥ.........||[೧೪]

ವೀರಶೈವನು ಆಚಮನವನ್ನು ಮಾಡಿ ಪೂರ್ವಾಭಿಮುಖನಾಗಿ ನಿಂತು ನಿತ್ಯವೂ ದಂತಧಾವನ ಕ್ರಿಯೆಯನ್ನು ಹೀಗೆ ಆಚರಿಸಬೇಕು. 'ಮಧುವಾತಾ ಋತಾಯತೇ' ಎಂಬ ಮಂತ್ರದಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದಂತಕೂರ್ಚ (ಹಲ್ಲುಜ್ಜಲು ಉಪಯೋಗಿಸುವ ಕಾಷ್ಠ)ವನ್ನು ಅಭಿಮಂತ್ರಿಸಿ ಆ ಕೂರ್ಚವನ್ನು ಕುರಿತು ಶ್ರದ್ಧೆಯಿಂದ, "ಹೇ ವನಸ್ಪತಿಯೆ! ಆಯಸ್ಸು, ಬಲ, ಕೀರ್ತಿ, ಯಶಸ್ಸು, ಸಂತಾನ, ಪಶುಸಂಪತ್ತು, ಧನ ಇತ್ಯಾದಿಗಳನ್ನು ಕರುಣಿಸು" ಎಂದು ಮಂತ್ರದೊಂದಿಗೆ ಪ್ರಾರ್ಥನೆಯನ್ನು ಮಾಡಿದ ನಂತರ ಹಲ್ಲುಜ್ಜಿಕೊಳ್ಳಬೇಕು. ದಂತಧಾವನಕ್ಕೆ ಬಿಲ್ವವೃಕ್ಷವನ್ನು ಹೊರತುಪಡಿಸಿ ಇತರ ಯಾವುದೇ ಕ್ಷೀರಯುಕ್ತ (ರಸಭರಿತ), ನಾರುಗಳುಳ್ಳ ಯೋಗ್ಯ ಮರದ ಶಾಖೆಯು ಯೋಗ್ಯ. ಇದು ಕಾರಣಾಗಮದಲ್ಲಿ ಹೇಳಿದ ವಿಧಿವಿಧಾನ.[೧೫]

ಮಕುಟಾಮಗದಲ್ಲಿ ಕೇವಲ, "ವೀರಶೈವರು ಮಾವು ಮೊದಲಾದ ಮರಗಳ ಶಾಖೆಗಳ ಕಾಷ್ಠದಿಂದ ಹಲ್ಲುಜ್ಜಿ ಮುಖಮಾರ್ಜನ ಮಾಡಿಕೊಂಡು ಆಚಮನ ಮಾಡಬೇಕೆಂದು" ಸಂಕ್ಷಿಪ್ತವಾಗಿ ದಂತಧಾವನ ವಿಧಿಯನ್ನು ಹೇಳಿದೆ.[೧೬]

ಸ್ನಾನವಿಧಿ: ಸ್ನಾನಕ್ಕೆ ನದಿಗಳು, ಕೊಳಗಳು, ಸರೋವರ, ನೀರಿನ ಚಿಲುಮೆ ಮುಂತಾದ ನೈಸರ್ಗಿಕ ಜಲಸ್ಥಾನಗಳಲ್ಲಿ ಸ್ನಾನ ಮಾಡುವುದು ಉಚಿತ.[೧೭]

ಸ್ನಾನಕ್ಕಾಗಿ ನೀರಿಗಿಳಿಯುವ ಮುಂಚೆ ಯಜ್ಞೋಪವೀತವನ್ನು ಶಿಖೆಗೆ ಕಟ್ಟಬೇಕು. ನಂತರ ನೀರಿಗಿಳಿದು ಆ ನೀರನ್ನು ಪವಿತ್ರ ಶಿವತೀರ್ಥವೆಂದು ಮನದಲ್ಲಿ ಭಾವಿಸಿ ಸ್ನಾನವನ್ನು ಮಾಡಬೇಕು. ನಂತರ ಪಂಚಬ್ರಹ್ಮಮಂತ್ರಗಳಿಂದ ಮೂರು ಬಾರಿ 'ಅಘಮರ್ಷಣ' ಕ್ರಿಯೆಯನ್ನಾಚರಿಸಬೇಕು. ಅಘಮರ್ಷಣ ಎಂದರೆ 'ಪಾಪಗಳ ನಾಶ' (ಅಘಸ್ಯ ಮರ್ಷಣಃ) ಎಂದರ್ಥ. ಬಲಗೈಯಲ್ಲಿ ನೀರಿನ ಪಾತ್ರೆ ಹಿಡಿದು ಎಡಗೈಯಿಂದ ಮುಚ್ಚಿ 'ಋತಂ ಚ ಸತ್ಯಂ ಚ' ಮುಂತಾದ ಋಗ್ವೇದದ ಅಘಮರ್ಷಣ ಸೂಕ್ತದ ಮೂರು ಮಂತ್ರಗಳನ್ನು ಜಪಿಸುತ್ತಾ ತನ್ನ ಬಲಭಾಗದಿಂದ ಆರಂಭಿಸಿ ತನ್ನ ಸುತ್ತಲೂ ಚೆಲ್ಲಬೇಕು. ಇದೇ ಅಘಮರ್ಷಣ ಕ್ರಿಯೆ. ತದನಂತರ ದೇವಗಣ, ಋಷಿಗಣ, ಪಿತೃಗಣಗಳಿಗೆ ತರ್ಪಣವನ್ನು ನೀಡಿ[೧೮] ನೀರಿನಿಂದ ಹೊರಬಂದು ಒದ್ದೆ ವಸ್ತ್ರವನ್ನು ತ್ಯಾಗಮಾಡಿ ಶುಭ್ರ, ಸ್ವಚ್ಛ ವಸ್ತ್ರಧಾರಣ ಮಾಡಬೇಕು.

ಸೋಪವೀತಃ ಶಿಖಾಂ ಬದ್ಧ್ವಾ ಪ್ರವಿಶ್ಯ ಚ ಜಲಾಂತರಮ್।
ಶಿವತೀರ್ಥಂ ವಿಧಾಯಾಥ ತನ್ಮಧ್ಯೇ ಸ್ನಾನಮಾಚರೇತ್॥
ಶಿವಬ್ರಹ್ಮಾಂಗವಿದ್ಯಾಂಗೈಃ ಸ್ನಾನಂ ಕೃತ್ವಾ ವಿಧಾನತಃ।
ಪಂಚಬ್ರಹ್ಮ ಶಿವಾಂಗೈಶ್ಚ ತ್ರಿಃ ಪಠೇದಘಮರ್ಷಣಮ್॥
ದೇವಾದೀಂಸ್ತರ್ಪಯಿತ್ವಾಥ ಶಿವತೀರ್ಥಂ ತು ಸಂಹರೇತ್।
ಅಥಾರ್ದ್ರವಸನೇ ತ್ಯಕ್ತ್ವಾ ಬಿಭೃಯಾದ್ ಧೌತವಾಸಸೀ॥[೧೯]

ಶಿವಮಂದಿರಗಳ ಹತ್ತಿರವಿರುವ ತೀರ್ಥಗಳಲ್ಲಿ ಸ್ನಾನ ಮಾಡುವುದು ಶಿವಾನುಗ್ರಹಕ್ಕೆ ಸಾಧನ ಎಂದು ಹೇಳಿ ಸ್ನಾನದಿಂದ ರೂಪ, ತೇಜಸ್ಸು, ಬಲ, ಶೌರ್ಯ, ಆಯುವೃದ್ಧಿ, ಆರೋಗ್ಯ, ಬುದ್ಧಿಮತ್ತೆ ಮತ್ತು ದುಃಸ್ವಪ್ನನಾಶ ಮುಂತಾದ ಲಾಭಗಳಾಗುತ್ತವೆ ಎಂದು ಕಾರಣಾಗಮವು ಸ್ನಾನವಿಧಿಯ ಪ್ರಯೋಜನಗಳನ್ನು ಹೇಳುತ್ತದೆ.

ರೂಪಂ ತೇಜೋ ಬಲಂ ಶೌರ್ಯಮಾಯುರ್ಧೃತಿರರೋಗತಾ।
ಮೇಧಾದುಃಸ್ವಪ್ನನಾಶಶ್ಚ ಗುಣಾಃ ಸ್ನಾನಸ್ಯ ಕೀರ್ತಿತಾಃ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮದಾಲಯಸಮೀಪೇ ತು ಯತ್ತೋಯಂ ಪರಿತಿಷ್ಠತೇ।
ಶಿವಗಂಗೇತಿ ವಿಜ್ಞೇಯಾ ತತ್ರ ಸ್ನಾತ್ವಾ ಲಭೇತ ಮಾಮ್॥[೨೦]

ವೀರಶೈವನಿಗೆ ಸ್ನಾನವು ಕೇವಲ ಶರೀರಶುದ್ಧಿಗೋಸ್ಕರವಾದ ಬಹಿರಂಗ ಕ್ರಿಯೆಯಾಗದೇ ಅಂತರಂಗಶುದ್ಧಿಗೋಸ್ಕರವೂ ಪ್ರಯೋಜನಕಾರಿಯಾಗಬೇಕೆಂದು ಸ್ನಾನದಲ್ಲಿ ಸಾಮಾನ್ಯವಾಗಿ ಆಗಮಗಳು ೧. ಮಲಸ್ನಾನ ಮತ್ತು ೨. ಮಂತ್ರಸ್ನಾನ ಎಂದು ಎರಡು ವಿಧವನ್ನು ಉಪದೇಶಿಸಿವೆ. "ಮಲಸ್ನಾನ"ವೆಂದರೆ ಶರೀರಶುದ್ಧಿಗೋಸ್ಕರ ಆಚರಿಸುವ ವಾರುಣಸ್ನಾನ (ಜಲಸ್ನಾನ). "ಮಂತ್ರಸ್ನಾನ"ವೆಂದರೆ ದೇವತಾಸಂಕಲ್ಪ, ಮಂತ್ರಪಠನ, ಮಾರ್ಜನ, ಅಘಮರ್ಷಣ ಮತ್ತು ದೇವತಾತರ್ಪಣ ಈ ಐದು ಅಂಗಗಳಿಂದ ಕೂಡಿದ ವಾರುಣಸ್ನಾನದಲ್ಲೇ ಅಂತರ್ಗತವಾದ ಕ್ರಿಯೆ. ಇದು ಮನೋವ್ಯಾಪಾರವಾದ ಕಾರಣ ಇದನ್ನು (ಮಂತ್ರಸ್ನಾನ) ಅಂತರಂಗಶುದ್ಧಿಕ್ರಿಯೆ ಎಂದು ತಿಳಿಯಬಹುದು.

ನದ್ಯಾದಿಕಾನ್ ಸಮಾಗಮ್ಯ ಸ್ನಾನಂ ಕುರ್ಯಾದ್ವಿಶೇಷತಃ।
ಮಲಸ್ನಾನಮಿದಂ ಪ್ರೋಕ್ತಂ ಮಂತ್ರಸ್ನಾನಮಥ ಶೃಣು॥
ಸಂಕಲ್ಪಃ ಸೂಕ್ತಪಠನಂ ಮಾರ್ಜನಂ ಚಾಘಮರ್ಷಣಮ್।
ದೇವತಾತರ್ಪಣಂ ಚೈವ ಸ್ನಾನಂ ಪಂಚಾಂಗಮುಚ್ಯತೇ॥[೨೧]

ಪರಿಶುದ್ಧವಾದ ಶರೀರ ಮತ್ತು ಅಂತಃಕರಣಗಳಲ್ಲಿ ಕೇವಲ ಸತ್ಕರ್ಮವ್ಯಾಪಾರವೇ ಜರುಗುವುದು. ಆದ್ದರಿಂದಲೇ "ಸಾರ್ಧತ್ರಿಶತಿಕಾಲೋತ್ತರಾಗಮ"ದ 'ವಾರುಣಸ್ನಾನ ಪ್ರಕರಣ'ದಲ್ಲಿ ಸ್ನಾನವನ್ನು ಶುಭಕರ ಹಾಗೂ ಪಾಪನಾಶಿನಿ ಎಂದು ಸ್ನಾನಮಹಿಮೆಯನ್ನು ಹೊಗಳಲಾಗಿದೆ.

ಅತಃ ಪರಂ ಪ್ರವಕ್ಷ್ಯಾಮಿ ಸ್ನಾನಂ ಪಾಪಹರಂ ಶುಭಮ್॥[೨೨]

ಭಸ್ಮಸ್ನಾನ-ತ್ರಿಪುಂಡ್ರಧಾರಣ:

ಪವಿತ್ರವಾದ ಸ್ನಾನದ ನಂತರ ಶರೀರ ಮನಸ್ಸುಗಳಂತೆಯೇ ನಿರ್ಮಲ, ಶುಭ್ರವಾದ ಬಟ್ಟೆಗಳನ್ನು ಧರಿಸಿದ ವೀರಶೈವನು ಉತ್ತರ ಅಥವಾ ಪೂರ್ವಾಭಿಮುಖನಾಗಿ ಕುಳಿತು ಇಷ್ಟಲಿಂಗ ಜಲಾಭಿಷೇಕವನ್ನು ಆಚರಿಸಿ ಸಕಲದೋಷ ನಿವೃತ್ತಿಗಾಗಿ ಭಸ್ಮಸ್ನಾನವನ್ನು ಮಾಡಿಕೊಳ್ಳಬೇಕು.

ಮಜ್ಜಯಿತ್ವೇಷ್ಟಲಿಂಗಂ ಚ ಗೃಹೀತ್ವಾ ಭಸಿತಂ ತತಃ।
ಭಸ್ಮಸ್ನಾನಂ ತತಃ ಕುರ್ಯಾತ್ ಸರ್ವದೋಷನಿವೃತ್ತಯೇ॥[೨೩]

ಭಸ್ಮಸ್ನಾನಕ್ಕಿಂತ ಪೂರ್ವದಲ್ಲಿ ಆಚಮನ, ಸಂಕಲ್ಪಗಳನ್ನು ಕೂಡ ಮಾಡಬೇಕೆಂದು ಮಕುಟಾಗಮ ಹೇಳುತ್ತದೆ.[೨೪]

ಭಸ್ಮಸ್ನಾನವು ದ್ವಿವಿಧವಾಗಿದೆ. ೧. ಉದ್ಧೂಲನ ಮತ್ತು ೨. ಅವಗುಂಠನ. ಮಂಗಲಮಯ ಭಸ್ಮದ ಒಣಪುಡಿಯನ್ನು ತೆಗೆದುಕೊಂಡು ಶರೀರದ ತುಂಬ ಧರಿಸಿಕೊಳ್ಳಬೇಕು. ಇದಕ್ಕೆ 'ಉದ್ಧೂಲನ' ಎಂದು ಹೆಸರು. ನಂತರ ಭಸ್ಮಕ್ಕೆ ಜಲಮಿಶ್ರಣ ಮಾಡಿ ಕಲಸಿ ಅದನ್ನು ಕೂಡ ಇಡೀ ಶರೀರಕ್ಕೆ ಧರಿಸಿಕೊಳ್ಳಬೇಕು ಇದಕ್ಕೆ "ಅವಗುಂಠನ"

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂದು ಹೆಸರು. ಅವಗುಂಠನ ಎಂದರೆ ಪರದೆ, ಮುಸುಕು ಎಂದರ್ಥ. ಸಜಲ ಭಸ್ಮದಿಂದ ನಮ್ಮ ಇಡೀ ಶರೀರಕ್ಕೆ ಪರದೆಯಂತೆ ಧರಿಸಿಕೊಳ್ಳುವುದೇ 'ಭಸ್ಮಾವಗುಂಠನ'.

ಸರ್ವಾಂಗೋದ್ಧೂಲನಂ ಕುರ್ಯಾಚ್ಛುಷ್ಕೇಣ ಸಿತಭಸ್ಮನಾ।
ಸಜಲೇನ ಚ ತೇನಾಥ ಸರ್ವಾಂಗಮವಗುಂಠಯೇತ್॥[೨೫]

ನಂತರ ಮೂಲಮಂತ್ರದಿಂದ ಅಭಿಮಂತ್ರಿಸಿದ ಸಜಲಭಸ್ಮವನ್ನು ಉಕ್ತ ೩೨ ಸ್ಥಾನಗಳಲ್ಲಿ ತ್ರಿಪುಂಡ್ರಧಾರಣ ಮಾಡಬೇಕು.

ಮೂಲತೋ ಮಂತ್ರಿತೇನಾಥ ಸಜಲೇನೈವ ಭಸ್ಮನಾ।
ಬಿಭೃಯಾಚ್ಚ ತ್ರಿಪುಂಡ್ರಾಣಿ ದ್ವಾತ್ರಿಂಶತ್ ಸ್ಥಾನಕೇಷು ಹಿ॥[೨೬]

ಅಷ್ಟಾವರಣಗಳಲ್ಲಿ ಒಂದಾದ, ವೀರಶೈವರ ಲಾಂಛನಗಳಲ್ಲಿ ವಿಶೇಷವಾದ ಭಸ್ಮವು ಆಹ್ನಿಕದ ಒಂದು ಅನಿವಾರ್ಯ ಅಂಗ. "ಧಿಗ್ಭಾಲರಹಿತಂ ಭಸ್ಮಂ ಧಿಗ್ಗ್ರಾಮ-ಶಿವಾಲಯಮ" ಎಂದು ಭಸ್ಮವಿಲ್ಲದ ಶಿವಭಕ್ತನ ಲಲಾಟವನ್ನು ಶಿವಾಲಯವಿಲ್ಲದ ಹಾಳು ಗ್ರಾಮದಂತೆ ಎಂದು ಹೋಲಿಸಿದ್ದಾರೆ.

"ಯಾರು ಭಸ್ಮವನ್ನು ಧರಿಸದೇ ಶಿವನನ್ನು ಪೂಜಿಸುವನೋ ಅವನು ದುರ್ಭಾಗ್ಯನೂ, ಶಿವದ್ವೇಷಿಯೂ ಎಂದು ಕರೆಸಿಕೊಳ್ಳುವನು. ಆತನು ನರಕವನ್ನು ಹೊಂದುವನು. ಭಸ್ಮ ಧರಿಸದಿರುವವನು ಎಲ್ಲ ಕರ್ಮಗಳಿಂದಲೂ ಬಹಿಷ್ಕೃತನಾಗುವನು. ಭಸ್ಮವನ್ನು ಧರಿಸದೇ ಆಚರಿಸಿದ ಕರ್ಮವು ಸಕಲರೀತಿಯಿಂದಲೂ ನಿಷ್ಫಲವಾಗುವುದು" ಎಂದು ಶಿವರಹಸ್ಯದಲ್ಲಿ ಹೇಳಲಾಗಿದೆ.

ವಿಭೂತಿಧಾರಣಂ ತ್ಯಕ್ತ್ವಾ ಯಃ ಶಿವಂ ಪೂಜಯಿಷ್ಯತಿ।
ಸ ದುರ್ಭಗಃ ಶಿವದ್ವೇಷ್ಟಾ ಸ ದ್ವೇಷೋ ನರಕಪ್ರದಃ॥
ಸರ್ವಕರ್ಮ ಬಹಿರ್ಭೂತೋ ಭಸ್ಮಧಾರಣವರ್ಜಿತಃ।
ಭಸ್ಮನಾ ರಹಿತಂ ಕರ್ಮ ವೃಥಾ ಭವತಿ ಸರ್ವಥಾ॥[೨೭]

ಬಸವಣ್ಣನವರು ಕೂಡ ಭಸ್ಮದ ಮಹತಿಯನ್ನು ತಿಳಿಸುತ್ತ,

ಸಕಲಕ್ರಿಯೆಗಳಿಗಿದು ಕವಚ,
ಸಕಲವಶ್ಯಕ್ಕಿದು ಶುಭತಿಲಕ,
ಸಕಲಸಂಪದಕ್ಕೆ ತಾಣವಿದು,
ಅಘಟಿತಘಟಿತವೆನಿಸುವ ಅನುಪಮ ತ್ರಿಪುಂಡ್ರ
ಅಣುಮಾತ್ರ ವಿಭೂತಿಯ ಪಣೆಯೊಳಿಡೆ
ಎಣಿಕೆಯಿಲ್ಲದ ಭವನಾಶ ಪರಿವುದು
ತ್ರಿಣಯ ನೀನೊಲಿದು ಧರಿಸಿದೆಯೆಂದೆನೆ;
ಆನುಧರಿಸಿ ಬದುಕಿದೆ ಕೂಡಲಸಂಗಯ್ಯಾ.[೨೮]

ಎಂದು ಭಸ್ಮವು ಭವನಾಶನವನ್ನು ಮಾಡಿ ಸಕಲಸಂಪದವನ್ನು ನೀಡುವುದೆಂದು ಆಗಮವಾಕ್ಯಗಳ ಸಮರ್ಥನೆಯನ್ನು ಮಾಡಿದ್ದಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಸ್ಮಸ್ನಾನ, ತ್ರಿಪುಂಡ್ರಧಾರಣೆಯ ನಂತರ ವಿಧಿವತ್ತಾಗಿ ರುದ್ರಾಕ್ಷಧಾರಣವನ್ನು ಮಾಡಿಕೊಂಡು ಸಂಧ್ಯಾವಂದನೆಯನ್ನು ಆಚರಿಸಬೇಕು.[೨೯]

ಸಂಧ್ಯಾವಂದನ:

ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಮಯಗಳನ್ನು ಸಂಧಿ ಸಮಯ ಅಥವಾ ಸಂಧ್ಯಾಕಾಲ ಎಂದು ಕರೆಯುತ್ತಾರೆ. ಈ ಕಾಲಗಳಲ್ಲಿ ಸಕಲಪ್ರಪಂಚವನ್ನು ತನ್ನ ಜ್ಯೋತಿಸ್ವರೂಪ ಪ್ರಕಾಶದಿಂದ ಬೆಳಗುವ ಸೂರ್ಯನನ್ನು ಗಾಯತ್ರೀ ಮಂತ್ರದಿಂದ ಉಪಾಸಿಸುವುದೇ 'ಸಂಧ್ಯಾವಂದನ'.

ಸೂರ್ಯನು ಶಿವನ ಶರೀರವೇ ಆಗಿದ್ದಾನೆ ಹಾಗೂ ಗಾಯತ್ರೀ ಮಂತ್ರದ ದೇವತೆಯ ರೂಪದಲ್ಲಿ ಸಾಕ್ಷಾತ್ ಶಿವನಿದ್ದಾನೆ. ಆದ್ದರಿಂದ ಅಂಥ ಸೂರ್ಯನಿಗೆ ಮೂರು ಬಾರಿ ಅರ್ಘ್ಯವನ್ನರ್ಪಿಸಿ ಗಾಯತ್ರೀ ಜಪವನ್ನಾಚರಿಸಬೇಕು.[೩೦]

ಪ್ರತಿ ವೀರಶೈವನು ತನ್ನ ಇಷ್ಟಲಿಂಗಪೂಜಾ ಸಮಯದಲ್ಲಿ ಸಂಧ್ಯಾವಂದನವನ್ನು ಆಚರಿಸಬೇಕು. ಪಂಚಾಕ್ಷರ ಮಹಾಮಂತ್ರದ ಸಹಿತ ಗಾಯತ್ರೀ ಮಂತ್ರವನ್ನು ಜಪಿಸಬೇಕು. ನಂತರ ಸೂರ್ಯನಿಗೆ ಅಭಿಮುಖನಾಗಿ ಸೌರಮಂಡಲದ ಮಧ್ಯದಲ್ಲಿರುವ ಪರಶಿವನ ಧ್ಯಾನವನ್ನು ಮಾಡಬೇಕು. ತದನಂತರ ಪೂರ್ವ ಅಥವಾ ಉತ್ತರಾಭಿಮುಖನಾಗಿ ನಿಂತುಕೊಂಡು ಜಗದಾದಿ ದಂಪತಿಗಳಾದ ಪಾರ್ವತೀಪರಮೇಶ್ವರರನ್ನು ಧ್ಯಾನಿಸಬೇಕು. ಇದಾದನಂತರ ಗುರುಧ್ಯಾನ ಹಾಗೂ ದೈವಚಿಂತನೆಯನ್ನು ಮಾಡಿ,

> ಶಿವೋ ಮಹೇಶ್ವರಶ್ಚೈವ ರುದ್ರಃ ಶಂಭುರುಮಾಪತಿಃ।
> ಸಂಸಾರವೈದ್ಯಃ ಸರ್ವಜ್ಞಃ ಪರಮಾತ್ಮೇತಿ ಚಾಷ್ಟಕಮ್॥[೩೦೨]

ಎಂಬ ಶಿವನಾಮಾಷ್ಟಕವನ್ನು ಜಪಿಸಬೇಕು.

> ಸಂಧ್ಯಾದ್ವಯಮುಪಾಸೀತ ಸಾವಿತ್ರೀಮೂಲಮಂತ್ರಗಮ್।
> ಅರ್ಘ್ಯಂ ನಿರ್ವರ್ತಯೇತ್ ಪಶ್ಚಾದರುಣೋದಯಕಾಲಿಕೀಮ್॥
> ಜಪಿತ್ವಾಥ ಚ ಸಾವಿತ್ರೀಂ ಪ್ರಸಿದ್ಧಾಂ ಮಂತ್ರಮಾತರಮ್।
> ಉಪತಿಷ್ಠೇನ್ಮಹಾದೇವಂ ಭಾನುಮಂಡಲಮಧ್ಯಗಮ್॥
> ಷಡಕ್ಷರೀಂ ಜಪೇಚ್ಚಾಪಿ ಸಮಾಹಿತಮನಾ ಯಥಾ॥
> ಧ್ಯಾಯೇದ್ ದೇವಂ ಚ ದೇವೀಂ ಚ ಪ್ರಾಙ್ಮುಖೋ ವಾಪ್ಯುದಙ್ಮುಖಃ।
> ಸ್ವಗುರುಂ ಚ ಪುನರ್ದೇವಂ ತತೋ ನಾಮಾಷ್ಟಕಂ ಜಪೇತ್॥[೩೧]

ಅಂತಃಕರಣದಲ್ಲಿ ಬೆಳಗುವ ಜ್ಞಾನಸೂರ್ಯನ ಉಪಾಸನೆಯನ್ನು ಮನಃಪೂರ್ವಕವಾಗಿ ಆಚರಿಸುವುದೇ ವೀರಶೈವರು ಮಾಡುವ ಸಂಧ್ಯಾವಂದನ ಎಂದು ಸುಪ್ರಭೇದಾಗಮದಲ್ಲಿ ಸಂಧ್ಯಾವಂದನ ಕುರಿತು ಹೇಳಿದೆ.

ಗಾಯತ್ರೀ ಮಂತ್ರಾರ್ಥ:

> ಓಂ ಭೂರ್ಭುವಃ ಸುವಃ ತತ್ಸವಿತುರ್ವರೇಣ್ಯಂ ಭರ್ಗೋ
> ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇದು ಗಾಯತ್ರಿ ಮಂತ್ರ. ಇದರ ಅರ್ಥ- ಓಂ ಭೂಃ=ಭೂಲೋಕ, ಭುವಃ=ಅಂತರಿಕ್ಷ ಲೋಕ, ಸುವಃ=ಅಂತರಿಕ್ಷದಲ್ಲಿ ತೀವ್ರಗತಿಯಿಂದ ಚಲಿಸುವ ಸಮಸ್ತ ಆಕಾಶಗಂಗೆಗಳು, ತತ್=ವೇದಾಗಮಗಳಲ್ಲಿ ಉಕ್ತವಾದ ಆ ಪರಶಿವ, ಸವಿತುಃ=ಸಮಸ್ತ ಬ್ರಹ್ಮಾಂಡಕ್ಕೆ ಕಾರಣನಾದ ಸೂರ್ಯನಿಗೆ, ವರೇಣ್ಯಂ=ವಂದನೀಯ, ಭರ್ಗಃ=ತೇಜಸ್ಸು, ದೇವಸ್ಯ=ದೇವತೆಯ, ಧೀಮಹಿ= (ನಾವು) ಧ್ಯಾನವನ್ನು ಮಾಡುತ್ತೇವೆ. ಧಿಯಃ=ಬುದ್ಧಿಯನ್ನು, ಯಃ=ಯಾವ (ದಿವ್ಯಪ್ರಕಾಶವು), ನಃ=ನಮ್ಮೆಲ್ಲರನ್ನು. ಪ್ರಚೋದಯಾತ್=(ಪರಮಪದ ಪ್ರಾಪ್ತಿಯತ್ತ) ಪ್ರೇರೇಪಿಸಲಿ.

ಗಾಯತ್ರೀ ಮಂತ್ರಕ್ಕೆ ಹಲವು ಪರ್ಯಾಯ ನಾಮಗಳಿವೆ.

* ಸೂರ್ಯನಿಗೆ ಸಂಬಂಧಿಸಿದ ಕಾರಣ 'ಸಾವಿತ್ರಿ'.
* ವೇದಗಳಿಗೆ ಸಂಬಂಧವಿರುವ ಹಾಗೂ ಬ್ರಹ್ಮ (ಶಿವ)ಪ್ರಾಪ್ತಿಗಾಗಿ ಉಪಾಸಿಸುವ ಕಾರಣ 'ಬ್ರಹ್ಮಗಾಯತ್ರೀ'.
* ದೀಕ್ಷಾಸಂದರ್ಭದಲ್ಲಿ ಶ್ರೀ ಗುರುವಿನಿಂದ ಉಪದೇಶಿಸುವ ಕಾರಣ 'ಗುರುಮಂತ್ರ'.
* ವೇದಗಳ ಜನನಿಯಾದ ಕಾರಣ 'ವೇದಮಾತಾ'.
* ಸಮಸ್ತ ದೇವತೆಗಳಿಗೆ ಕೂಡ ಜನನಿಯಾದ ಕಾರಣ 'ದೇವಮಾತಾ' ಹಾಗೂ
* ಗಾಯತ್ರಿ ಛಂದಸ್ಸಿನಲ್ಲಿರುವ ಕಾರಣ 'ಗಾಯತ್ರೀ' ಎಂದು ವಿವಿಧ ನಾಮಗಳಿಂದ ಗಾಯತ್ರೀ ಮಂತ್ರವು ಪ್ರಸಿದ್ಧವಿದೆ.

ಲಿಂಗದ ಹೃದಯದಲ್ಲಿ ಸರ್ವದೇವತೆಗಳಲ್ಲಿ ಶ್ರೇಷ್ಠಳಾದ ಗಾಯತ್ರಿಯು ನೆಲೆಸಿದ್ದಾಳೆ.

ಹೃದಯೇ ಚೈವ ಗಾಯತ್ರೀ ಸರ್ವದೇವೋತ್ತಮೋತ್ತಮಾ।[೬೨]

ಸೂರ್ಯಮಂಡಲದ ಸ್ವಾಮಿ ಹಾಗೂ ಸಾವಿತ್ರೀ (ಗಾಯತ್ರೀ) ದೇವತೆಯು ಸಾಕ್ಷಾತ್ ಪರಶಿವನೇ ಆಗಿದ್ದಾನೆ. ಆದ್ದರಿಂದ ಸಂಧ್ಯಾವಂದನೆಯಲ್ಲಿ ಶಿವಸ್ವರೂಪನೇ ಆಗಿರುವ ಸವಿತೃವಿನ ಉಪಾಸನೆಯನ್ನು ಗಾಯತ್ರೀ ಜಪದೊಂದಿಗೆ ಆಚರಿಸಬೇಕು. ಸಂಧ್ಯಾಸಮಯದಲ್ಲಿ ಅನ್ಯದೈವೋಪಾಸನೆಯನ್ನು ಮಾಡಿದಲ್ಲಿ ಉಪಾಸಕನ ಆಯುಸ್ಸು, ವಿದ್ಯೆ, ಯಶಸ್ಸು ಮತ್ತು ಬಲಗಳು ನಷ್ಟವಾಗುತ್ತವೆ.[೬೩]

ಬಸವಣ್ಣನವರು ಕೂಡ,

ಉಪ್ಪರಗುಡಿ ನಂದಿವಾಹನ ಸದ್ಯೋಜಾತನ ಬಾಗಿಲ ಮುಂದೆ
ಸಾರುತ್ತೈದಾವೆ ನೋಡಾ ಶ್ರುತಿಗಳೂ ನಾಲ್ಕು ವೇದವೂ
ಹುಸಿಯದೆ
"ಭರ್ಗೋ ದೇವಸ್ಯ ಧೀಮಹಿ" ಎಂದುದಾಗಿ
ಕೂಡಲಸಂಗನಿಲ್ಲದಿಲ್ಲೆಂದುದು ವೇದ.[೬೪]

ಎಂದು ಹೇಳುತ್ತ ಪರಶಿವನೇ ಆ ಜ್ಯೋತಿಸ್ವರೂಪ ದೇವತೆಯೆಂದು ಸಾರಿದ್ದಾರೆ. "ದೇವೀಭಾಗವತ"[೬೫] ಹಾಗೂ "ರುದ್ರಗಾಯತ್ರೀ"[೬೬] ಮುಂತಾದ ಗ್ರಂಥಗಳು ಕೂಡ ಗಾಯತ್ರಿಯು ಸಾಕ್ಷಾತ್ ಪರಶಿವಸ್ವರೂಪವೇ ಹೊರತು ಬೇರಲ್ಲ ಎಂದು ಪ್ರತಿಪಾದಿಸಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೂರ್ಯೋದಯದವರೆಗೂ ಗಾಯತ್ರೀ ಮಂತ್ರವನ್ನು ಜಪಿಸಿ ಸೂರ್ಯೋದಯ ಸಮಯದಲ್ಲಿ ಶಿವಪೂಜೆಯನ್ನು ಆಚರಿಸಬೇಕು. ತದನಂತರ ಸಾಂಗಷಡಕ್ಷರಿಯನ್ನೂ, ಶ್ರೀ ರುದ್ರಾಧ್ಯಾಯವನ್ನು ಜಪಿಸಬೇಕು. ಸರ್ವಯಜ್ಞಗಳಲ್ಲಿ ಜಪಯಜ್ಞವೇ ಸರ್ವಶ್ರೇಷ್ಠವಾಗಿದೆ.[೬೭]

ಹೋಮವಿಧಿ:

ಪಂಚಾಕ್ಷರ ಜಪ ಹಾಗೂ ರುದ್ರಾಧ್ಯಾಯದ ಪಠನಗಳ ನಂತರ ಯಜ್ಞಶಾಲೆಯನ್ನು ಪ್ರವೇಶಿಸಿ ಶಿವಸಂಸ್ಕಾರದಿಂದ ಪವಿತ್ರವಾದ ಅಗ್ನಿಯಲ್ಲಿ ಹೋಮವನ್ನು ಆಚರಿಸಬೇಕು. ಪಾಕಕಾರ್ಯಗಳಿಗಾಗಿ ಉಪಯೋಗಿಸುವ ಗೃಹ್ಯಾಗ್ನಿಯನ್ನು ಕೂಡ ಸಂಸ್ಕಾರಗಳ ಮೂಲಕ 'ಶಿವಾಗ್ನಿ'ಯನ್ನಾಗಿ ಪರಿವರ್ತಿಸಿ ಉಪಯೋಗಿಸಬೇಕು. ಹಾಗೆಯೇ ಶಿವಾರ್ಚನೆಗೆ ಉಪಯೋಗಿಸುವ 'ವೈತಾನಿಕ' ಅಗ್ನಿಯನ್ನು ಕೂಡ ಶಿವಾಗ್ನಿಯನ್ನಾಗಿ ಪರಿವರ್ತಿಸಬೇಕು. ಇಂಥ ಸಂಸ್ಕರಿತ ಶಿವಾಗ್ನಿಯಲ್ಲಿಯೇ ನಿತ್ಯ ಆಚರಿಸುವ ಸರ್ವಕರ್ಮಗಳನ್ನು ಮಾಡಬೇಕು. ವೈಶ್ವದೇವ ಮುಂತಾದ ಗೃಹ್ಯಾಗ್ನಿಗೆ ಸಂಬಂಧಿಸಿದ ಅಗ್ನಿಕಾರ್ಯಗಳನ್ನು ಗೃಹ್ಯಶಿವಾಗ್ನಿಯಲ್ಲಿಯೇ ಆಚರಿಸಬೇಕು.

ಶ್ರೀ ರುದ್ರಾದೀಂಶ್ಚ ಜಪ್ತ್ವಾಥ ವಹ್ನ್ಯಗಾರಂ ಪ್ರವಿಶ್ಯ ತು।
ಹೋಮಂ ಶಿವಾಗ್ನೌ ಕುರ್ವೀತ ಶೈವಸಂಸ್ಕಾರಸಂಸ್ಕೃತೇ॥
ಸ್ಥಾಲೀಪಾಕೇ ಪ್ರವೃತ್ತೇ ತು ಗೃಹ್ಯಾಗ್ನಿಂ ಪುರತೋಽಪಿ ವಾ।
ಶೈವಂ ಸಂಪಾದ್ಯ ಸಂಸ್ಕಾರೈಸ್ತತ್ರ ನಿರ್ವರ್ತಯೇತ್ ಕ್ರಿಯಾಃ॥
ವೈತಾನಿಕಂ ಚ ವಿಧಿನಾ ಶೈವಂ ಸಂಪಾದಯೇನ್ಮಖೀ।
ನಿತ್ಯಮೌಪಾಸನಂ ಕರ್ಮ ಶ್ರೌತಂ ತತ್ರೈವ ಚೇಷ್ಯತೇ॥
ವೈಶ್ವದೇವಾದಿಗಾರ್ಹ್ಯಾಣಿ ಗೃಹ್ಯಶೈವೇ ಸಮಾಚರೇತ್॥[೬೮]

ಹೋಮಯೋಗ್ಯ ಸಮಿತ್ತುಗಳು- ಮುತ್ತುಗ (ಪಲಾಶ), ಕಗ್ಗಲಿಮರ (ಖದಿರ), ಅರಳಿಮರ (ಅಶ್ವತ್ಥ), ಬನ್ನಿಮರ (ಶಮೀ), ಅತ್ತೀಮರ (ಉದುಂಬರ) ಇವುಗಳು ಅಗ್ನಿಕಾರ್ಯಕ್ಕೆ ಯೋಗ್ಯವಾದ ಸಮಿತ್ತುಗಳು. ಕೆಲವು ವಿದ್ವಾಂಸರು ಉತ್ತರಣೆ (ಅಪಾಮಾರ್ಗ), ಗರಿಕೆ (ದೂರ್ವಾ), ದರ್ಭೆ (ಕುಶ) ಇವುಗಳನ್ನು ಕೂಡ ಸಮಿತ್ತುಗಳೆಂದು ಅಂಗೀಕರಿಸಿದ್ದಾರೆ. ಸಮಿತ್ತುಗಳು ತೊಗಟೆಯಿಂದ ಕೂಡಿದ್ದು ೧೦-೧೨ ಅಂಗುಲಗಳಷ್ಟು ಉದ್ದದವುಗಳು ಪ್ರಶಸ್ತವಾದವುಗಳು. ಅರ್ಧಂಬರ್ಧ ಒಣಗಿದ, ಒಂದೇ ಅಳತೆ ಕತ್ತರಿಸಿದ, ತೋರ್ಬೆರಳಿನಷ್ಟು ದಪ್ಪವಾಗಿರುವ, ಗುಂಡಗಿನ (ಮಧ್ಯ ಸೀಳದೇ ಇರುವ), ಕತ್ತರಿಸಿದ ನಂತರ ನೆಲದ ಮೇಲೆ ಬೀಳದೇ ಇರುವ, ಇನ್ನೊಂದು ಕೊಂಬೆ ಇಲ್ಲದೇ ಇರುವ, ಹುಳಗಳು ತಿನ್ನದೇ ಇರುವ ಸಮಿತ್ತುಗಳು ಉತ್ತಮವಾದವುಗಳು. ಹೋಮಕಾಷ್ಠಗಳನ್ನು ಸಮಿತ್ತು (ಸಮಿಧ), ಪವಿತ್ರ, ವೇದ, ಇಧ್ಮ ಮತ್ತು ಪರಿಧಿ ಎಂದು ಪ್ರಮಾಣಕ್ಕನು- ಸಾರವಾಗಿ ವಿಂಗಡಿಸಲಾಗಿದೆ.

ಸಮಿಧೋ ಹೋಮಯೋಗ್ಯಾಸ್ತು ವಕ್ಷ್ಯಾಮಿ ಶೃಣು ಗೀಷ್ಪತೇ।
ಪಾಲಾಶಖಾದಿರಾಶ್ವತ್ಥಶಮ್ಯುದುಂಬರಜಾ ಸಮಿತ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಪಾಮಾರ್ಗದೂರ್ವಾಶ್ಚ ಕುಶಶ್ಚೇತ್ಯಪರೇ ವಿದುಃ॥
ಸತ್ವಚಃ ಸಮಿಧಃ ಕಾರ್ಯಾ ಋಜುಃಶ್ಲಕ್ಷ್ಣಸಮಾಸ್ತಥಾ।
ಶಸ್ತಾ ದಶಾಂಗುಲಾಸ್ತಾಸ್ತು ದ್ವಾದಶಾಂಗುಲಕಾಸ್ತಥಾ॥
ಆರ್ದ್ರಾಃ ಶುಷ್ಕಾಃ ಸಮಚ್ಛೇದ್ಯಾಸ್ತರ್ಜನ್ಯಂಗುಲವರ್ತುಲಾಃ।
ಅಪಾತಿತಾಶ್ಚಾದ್ವಿಶಾಖಾಃ ಕ್ರಿಮಿದೋಷವಿವರ್ಜಿತಾಃ॥
ಸಮಿತ್ಪವಿತ್ರಂ ವೇದಶ್ಚ ತ್ರಯಂ ಪ್ರಾದೇಶಸಮ್ಮಿತಮ್।
ಇಧ್ಮಸ್ತು ದ್ವಿಗುಣಃ ಕಾರ್ಯಸ್ತ್ರಿಗುಣಃ ಪರಿಧಿಃ ಸ್ಮೃತಃ॥
ಸ್ಮಾರ್ತೇ ಪ್ರಾದೇಶ ಇಧ್ಮೋ ವಾ ದ್ವಿಗುಣಃ ಪರಿಧಿಃ ಸ್ಮೃತಃ॥[೩೯]

ಹವಿಸ್ಸನ್ನು ಅರ್ಪಿಸುವಲ್ಲಿ ಹೋಮಾಗ್ನಿಯ ಕೆಲವು ನಿಷಿದ್ಧ ಅಂಗಗಳನ್ನು ಚಂದ್ರಜ್ಞಾನಾಗಮದಲ್ಲಿ ಹೇಳಲಾಗಿದೆ. ಅಗ್ನಿಯ ಕಿವಿಯಲ್ಲಿ ಹವಿಸ್ಸನ್ನು ನೀಡುವುದರಿಂದ ರೋಗಪ್ರಾಪ್ತಿಯು, ನಾಸಿಕದಲ್ಲಿ ಹವಿಸ್ಸನ್ನು ನೀಡುವುದರಿಂದ ಮನೋಕ್ಷಯ (ಮನೋದೌರ್ಬಲ್ಯ)ವು, ಚಕ್ಷುವಿನಲ್ಲಿ ನೀಡುವುದರಿಂದ ಮೃತ್ಯುವು, ಕೇಶದಲ್ಲಿ ನೀಡುವುದರಿಂದ ದಾರಿದ್ರ್ಯವೂ, ಶಿರಸ್ಸಿನಲ್ಲಿ ಆಹುತಿ ನೀಡುವುದರಿಂದ ಪಾಪವೂ ಉಂಟಾಗುತ್ತವೆ. ಆದ್ದರಿಂದ ಹೋಮಾಗ್ನಿಯ ನಾಲಿಗೆಯಲ್ಲಿಯೇ ಹವಿಸ್ಸನ್ನು ಅರ್ಪಿಸಬೇಕು. ಸರಿಯಾಗಿ ಬೆಂಕಿ ಹತ್ತಿಕೊಳ್ಳದೇ ಉರಿಯುತ್ತಿರುವ ಸಮಿತ್ತು ಅಗ್ನಿಯ ಕರ್ಣವೆಂದು, ಧೂಮದಿಂದ ಆವೃತವಾದ ಅಗ್ನಿಕುಂಡವು ನಾಸಿಕವೆಂದು, ಅಗ್ನಿಯ ಹ್ರಸ್ವಜ್ವಾಲೆಗಳಿರುವ ಭಾಗವನ್ನು ನೇತ್ರವೆಂದು, ಸುಟ್ಟ ಸಮಿತ್ತುಗಳ ಭಸ್ಮವನ್ನು ಶಿರವೆಂದು, ಎಲ್ಲಿ ಅಗ್ನಿಯು ಜಾಜ್ವಲ್ಯಮಾನವಾಗಿ ಉನ್ನತ ಜ್ವಾಲೆಗಳಿಂದ ಪ್ರಜ್ವಲಿಸುತ್ತಿರುವುದೋ ಅದೇ ಭಾಗವನ್ನು ನಾಲಿಗೆಯೆಂದು ಅಗ್ನಿಯ ವಿವಿಧ ಅಂಗಗಳನ್ನು ಅರಿಯಬೇಕು. ಹೋಮಕಾರ್ಯದ ನಂತರ ಅಗ್ನಿಗೆ ಅಭಿವಂದಿಸಿ ಆ ದಿನದ ಪ್ರಥಮ ಭಾಗದ[೪೦] ಕಾರ್ಯಗಳನ್ನು ಸಮಾಪ್ತಗೊಳಿಸಬೇಕು.

ಅಗ್ನೇರಂಗಾನಿ ವಕ್ಷ್ಯಾಮಿ ನ ಹೋತವ್ಯಂ ಚ ಯೇಷು ವೈ।
ಅಗ್ನಿಕರ್ಣೇ ಹುತೋ ರೋಗೋ ನಾಸಿಕಾಯಾಂ ಮನಃಕ್ಷಯಃ॥
ಚಕ್ಷುಷೋರ್ನಿಧನಂ ಪ್ರೋಕ್ತಂ ಕೇಶೇ ದಾರಿದ್ರ್ಯಕೃದ್ ಭವೇತ್।
ಹುತಂ ಶಿರಸಿ ಪಾಪಂ ಸ್ಯಾತ್ ತಸ್ಮಾಜ್ಜಿಹ್ವಾಸು ಹೋಮಯೇತ್॥
ಯತ್ರ ಕಾಷ್ಠಂ ತು ತಚ್ಛ್ರೋತ್ರಂ ಯತ್ರ ಧೂಮಸ್ತು ನಾಸಿಕಾ।
ಯತ್ರಾಲ್ಪಜ್ವಲನಂ ನೇತ್ರಂ ಯತ್ರ ಭಸ್ಮಾನಿ ತಚ್ಛಿರಃ॥
ಯತ್ರೈವ ಜ್ವಲಿತೋ ವಹ್ನಿರ್ಜಿಹ್ವಾ ತತ್ರೈವ ಕೀರ್ತಿತಾ॥
ಅಗ್ನಿಕಾರ್ಯಂ ವಿಧಾಯೈವ ಕರ್ತವ್ಯಮಭಿವಾದನಮ್।
ಆದ್ಯಮಷ್ಟಾಂಶಕಂ ತ್ವೇಭಿಃ ಕೃತ್ಯೈರಹ್ನಃ ಸಮಾಪಯೇತ್॥[೪೧]

ಅಗ್ನಿಕಾರ್ಯದ ನಂತರ ವೀರಶೈವನು ಗುರು-ಜಂಗಮರಿಗೆ ವಿಧಿವತ್ತಾಗಿ ನಮಸ್ಕರಿಸಬೇಕು. ನಮಸ್ಕಾರವಿಧಿಯನ್ನು ಮಕುಟಾಗಮದಲ್ಲಿ ಈ ರೀತಿ ಹೇಳಲಾಗಿದೆ. ಇಷ್ಟಲಿಂಗದ ಪೆಟ್ಟಿಗೆ (ಕರಡಿಗೆಯನ್ನು) ಭದ್ರವಾಗಿ ಬಲಗೈಯಲ್ಲಿ ಹಿಡಿದುಕೊಂಡು ಎಡಗೈಯನ್ನು ಗುರುವಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾದಗಳ ಎರಡೂ ಅಂಗುಷ್ಠಗಳ ಕೆಳಗೆ ಆಧಾರದಂತೆ ಇರಿಸಿ ತನ್ನೆರಡೂ ಕಣ್ಣುಗಳನ್ನು ಶ್ರೀ ಗುರುವಿನ ಎರಡೂ ಪಾದಾಂಗುಷ್ಠಗಳಿಗೆ ಸ್ಪರ್ಶಿಸಬೇಕು. ಎಡಗಣ್ಣನ್ನು ಎಡಪಾದದ ಅಂಗುಷ್ಠಕ್ಕೂ ಬಲಗಣ್ಣನ್ನು ಬಲಪಾದಾಂಗುಷ್ಠಕ್ಕೂ ಸ್ಪರ್ಶಿಸಿ ೩ ಬಾರಿ ನಮಸ್ಕಾರವನ್ನು ಮಾಡಬೇಕು.

ದಕ್ಷಹಸ್ತೇನ ಸಂಗೃಹ್ಯ ನಿಶ್ಚಲೋ ಲಿಂಗಪೇಟಿಕಾಮ್।
ಪಾದಾಂಗುಷ್ಠೌ ಗುರೋಃ ಸವ್ಯಹಸ್ತೇನ ಪರಿಗೃಹ್ಯ ಚ॥
ಸಂಸ್ಪರ್ಶಯೇನ್ನೇತ್ರಯೋಸ್ತ್ರಿರ್ಗುರ್ವಾದೀನ್ ಶರಣಂ ವ್ರಜೇತ್॥[೨]

ಗುರು-ಜಂಗಮರ ಪಾದಕ್ಕೆ ನಮಸ್ಕರಿಸುವುದು ಅತ್ಯಂತ ಪವಿತ್ರಕಾರ್ಯಗಳಲ್ಲೊಂದು. ಬಸವಣ್ಣ ಕೂಡ "ನಿಮ್ಮ ಶ್ರೀಪಾದವ ಮುಟ್ಟಿ ಕರ್ಮ ಹರಿಯಿತು" ಎಂದು ಹೇಳಿ ಪಾದಸ್ಪರ್ಶನದಿಂದ ಕರ್ಮಪಾಶವು ಹರಿದು ಪರಮಾರ್ಥಪ್ರಾಪ್ತಿಯಾಗುವುದೆಂದು ಗುರು-ಜಂಗಮ ನಮನದ ಮಹತಿಯನ್ನೈದಿದ್ದಾರೆ.

ದಿನದ ಎರಡು-ಮೂರು ಹಾಗೂ ನಾಲ್ಕನೇ ಅವಧಿಯ ಕಾರ್ಯಗಳು:

ಒಂದು ದಿನದಲ್ಲಿ ಎಂಟು ಭಾಗಗಳನ್ನು ಮಾಡಿ ಪ್ರಥಮ ಅವಧಿಯ ಕಾರ್ಯಗಳನ್ನು ತಿಳಿಸಿ ಈಗ ೨, ೩ ಹಾಗೂ ೪ನೇ ಭಾಗದ ಕರ್ತವ್ಯಗಳನ್ನು ತಿಳಿಸುತ್ತದೆ.

ದಿನದ ೨ನೇ ಭಾಗದಲ್ಲಿ ವೇದ, ಆಗಮಗಳು, ಉಪನಿಷತ್ತುಗಳು ಮುಂತಾದವುಗಳ ಅಧ್ಯಾಪನ ಹಾಗೂ ಅಧ್ಯಯನವನ್ನು ಮಾಡಬೇಕು. ಹಾಗೆಯೇ ಹೋಮಕಾರ್ಯಗಳಿಗೆ ಸಮಿತ್ತುಗಳನ್ನು, ಪೂಜಾಕಾರ್ಯಕ್ಕೆ ಹೂ, ಬಿಲ್ವ, ಗಂಧ ಮುಂತಾದ ಸಾಮಗ್ರಿಗಳನ್ನು ಸಂಗ್ರಹಿಸಬೇಕು. ಇದು ಎರಡನೇ ಅವಧಿಯ ಕರ್ತವ್ಯ.

ಭಾಗೇ ದ್ವಿತೀಯೇ ನಿಗಮಾನಭ್ಯಸೇದಾಗಮಾನಪಿ।
ಅಧ್ಯಾಪಯೇಚ್ಚ ಶಾಸ್ತ್ರಾಣಿ ಸಮಿಧಾದೀನಿ ಚಾಹರೇತ್॥
ಪುಷ್ಪಾಣಿ ಬಿಲ್ವಪತ್ರಾಣಿ ಶ್ರೀಗಂಧಪ್ರಮುಖಾನಿ ಚ॥[೩]

ಪ್ರಥಮ ಭಾಗದಲ್ಲಿ ಇಷ್ಟಲಿಂಗಪೂಜೆಯಿಂದ "ಕರ್ಮಯಜ್ಞ"ವನ್ನು, ದ್ವಿತೀಯ ಭಾಗದಲ್ಲಿ ವೇದಾಗಮಗಳ ಅಧ್ಯಯನದಿಂದ "ಜ್ಞಾನಯಜ್ಞ"ವನ್ನು ಮತ್ತು ಹೋಮ-ಪೂಜಾ ಕಾರ್ಯಗಳಿಗೆ ಸಾಮಗ್ರಿ ಸಂಗ್ರಹದ ಮೂಲಕ "ತಪೋಯಜ್ಞ"ವನ್ನು ಇಲ್ಲಿ ಉಪದೇಶಿಸಲಾಗಿದೆ.

ದಿನದ ಮೂರನೇ ಅವಧಿಯಲ್ಲಿ ತನ್ನ ಹಾಗೂ ಕುಟುಂಬ ಜೀವನಪೋಷಣೆಗೆ ಉದ್ಯೋಗವನ್ನು ಮಾಡಬೇಕು. ನಾಲ್ಕನೆಯ ಅವಧಿಯಲ್ಲಿ ಸ್ನಾನ, ಭಸ್ಮಸ್ನಾನ, ತ್ರಿಪುಂಡ್ರಧಾರಣೆ, ರುದ್ರಾಕ್ಷಧಾರಣೆಯನ್ನು ಮಾಡಿ ಗಾಯತ್ರೀ ಹಾಗೂ ಪಂಚಾಕ್ಷರ ಮಂತ್ರಸಹಿತವಾದ ಸಂಧ್ಯಾವಂದನೆಯನ್ನು ಮಾಡಬೇಕು. ನಂತರ ಗುರ್ವೀ, ಮಹತೀ ಅಥವಾ ಲಘ್ವೀ ಈ ಮೂರರಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ತನ್ನ ಶಕ್ತ್ಯಾನುಸಾರ ಇಷ್ಟಲಿಂಗಪೂಜೆಯನ್ನು ಭಕ್ತಿಭಾವದಿಂದ ಆಚರಿಸಬೇಕು. ತನ್ನ ಹಾಗೂ ಕುಟುಂಬದ ಉತ್ತರೋತ್ತರ ಶ್ರೇಯಸ್ಸನ್ನು ಬಯಸುವ ಗೃಹಸ್ಥನು ಪಂಚಯಜ್ಞಗಳನ್ನು ಆಚರಿಸಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಥಸಿದ್ಧ್ಯೈ ಚ ಕುರ್ವೀತ ಯತ್ನಂ ಭಾಗೇ ತೃತೀಯಕೇ।
ಚತುರ್ಥೇ ಚ ತಥಾ ಭಾಗೇ ಮಧ್ಯಾಹ್ನಸ್ನಾನಮಾಚರೇತ್॥
ಭಸ್ಮಸ್ನಾನಂ ವಿಧಾಯಾಥ ತ್ರಿಪುಂಡ್ರಾಣಿ ಯಥಾವಿಧಿ।
ಯಥಾಸ್ಥಾನಂ ಚ ರುದ್ರಾಕ್ಷಾನ್ ಧೃತ್ವಾ ಚ ತದನಂತರಮ್॥
ಸಂಧ್ಯಾದ್ವಯಮುಪಾಸೀತ ಸಾವಿತ್ರೀ ಮೂಲಮಂತ್ರಗಮ್।
ಕರ್ತವ್ಯಾ ಪಂಚಯಜ್ಞಾಶ್ಚ ಗೃಹಿಣಾ ಸ್ವಹಿತೈಷಿಣಾ॥
ತತೋ ಮಾಧ್ಯಾಹ್ನಿಕೀ ಪೂಜಾ ಗುರ್ವೀ ವಾ ಮಹತೀ ಲಘುಃ।
ಕರ್ತವ್ಯಾ ತು ಯಥಾಶಕ್ತಿ ಭಕ್ತಿಸಂಸಕ್ತಚೇತಸಾ॥[೪೪]

ಪೂಜಾವಿಧಗಳು-ಕಾಲ:

ಅರುಣೋದಯ, ಸೂರ್ಯೋದಯ, ಸಂಗವಕಾಲ, ಮಧ್ಯಾಹ್ನ, ಸಾಯಂಕಾಲ ಹಾಗೂ ಅರ್ಧರಾತ್ರಿ ಈ ಆರು ಸಮಯಗಳಲ್ಲಿ ಅಥವಾ ಸೂರ್ಯೋದಯ, ಮಧ್ಯಾಹ್ನ ಮತ್ತು ಅರ್ಧರಾತ್ರಿ ಈ ಮೂರು ಕಾಲಗಳಲ್ಲಾಗಲಿ ಶಿವಭಕ್ತನು ಎಲ್ಲ ಆಪತ್ತುಗಳಿಂದ ಕಾಪಾಡುವ ಇಷ್ಟಲಿಂಗವನ್ನು ಪೂಜಿಸಬೇಕು. ಉಪವಾಸವಿದ್ದು ಮಾಡುವ ಇಷ್ಟಲಿಂಗಪೂಜೆಗೆ 'ಅವಸರಾ ಪೂಜಾ' ಎಂದು ಹೆಸರು. ವ್ಯಕ್ತಿ ಶಕ್ತ್ಯಾನುಸಾರ ಮಾಡುವ ಪೂಜೆಗಳೆಂದರೆ ಮಹತೀ, ಗುರ್ವೀ ಹಾಗೂ ಲಘ್ವೀ.

ಷಟ್ಸು ಕಾಲೇಷು ಸಂಪೂಜ್ಯಂ ತ್ರಿಸಂಧ್ಯಮಥವಾ ಪುನಃ।
ಇಷ್ಟಲಿಂಗಂ ಮಹೇಶಸ್ಯ ಸರ್ವಾನಿಷ್ಟನಿಷೂದನಮ್॥
ಅರುಣಸ್ಯೋದಯೇ ಭಾನೋರುದಯೇ ಸಂಗವೇ ತಥಾ।
ಮಧ್ಯಾಹ್ನೇ ಚ ತಥಾ ಸಾಯಮರ್ಧರಾತ್ರೌ ಬೃಹಸ್ಪತೇ॥
ಷಟ್ಕಾಲಮರ್ಚನೀಯಂ ಸ್ಯಾಚ್ಛಿವಲಿಂಗಮನಾಮಯಮ್॥
ಅಭೋಜನೇ ತ್ವವಸರಾ ವಿಧೇಯಾ ಹ್ಯನ್ಯಥಾ ಪರಾ।
ಲಘುರ್ಗುರುರ್ವಾ ಮಹತೀ ಪೂಜಾ ಶಕ್ತ್ಯನುಸಾರತಃ॥[೪೫]

ದಿನಕ್ಕೆ ಕನಿಷ್ಠ ಮೂರುಬಾರಿಯಾದರೂ ಇಷ್ಟಲಿಂಗಪೂಜೆಯನ್ನು ಆಚರಿಸಬೇಕೆಂಬ ಮಾತನ್ನು ಪುಷ್ಟೀಕರಿಸುತ್ತ ಚನ್ನಬಸವಣ್ಣನು,

ಉದಯಕಾಲ, ವಿಚಿತ್ರಕಾಲ, ಅಸ್ತಮಾನಕಾಲದಲ್ಲಿ
ತನ್ನ ಇಷ್ಟಲಿಂಗಕ್ಕೆ ಷೋಡಶೋಪಚಾರವ ಮಾಡದವನು
ಭಕ್ತನಲ್ಲ, ಶರಣನಲ್ಲ, ಲಿಂಗೈಕ್ಯನಲ್ಲ
ಅವನು ಕೇಳಾ! ಪಂಚಮಹಾಪಾತಕ, ವಿಘಾತಕ ಲಿಂಗಚೋರಕ;
ಇಂತೆಂದುದು ಕೂಡಲ ಚನ್ನಸಂಗನ ವಚನ.[೪೬]

ಎಂದು ಹೇಳಿರುವನು.

ಮಧ್ಯಾಹ್ನದ ಪೂಜೆಯ ನಂತರ ಮನೆಗೆ ಆಗಮಿಸಿದ ಅತಿಥಿಯ ಸತ್ಕಾರವನ್ನು ಮಾಡಬೇಕು. ಅತಿಥಿಯು ಪಂಡಿತನೇ ಇರಲಿ ಮೂರ್ಖನೇ ಇರಲಿ, ಶತ್ರುವೇ ಇರಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಿತ್ರನೇ ಇರಲಿ ಆತನನ್ನು ಅತಿಥಿರೂಪದಲ್ಲಿರುವ ಸಾಕ್ಷಾತ್ ಶಂಭುವೇ ಎಂದು ತಿಳಿಯಬೇಕು. ಮನೆಗೆ ಆಗಮಿಸಿದ ಮಾಹೇಶ್ವರ ಅಥವಾ ಜಂಗಮನನ್ನು ಭಕ್ತಿಭಾವದಿಂದ ಪೂಜಿಸಬೇಕು. ಆತನ ಭೋಜನಸಮಾಪ್ತಿಯ ನಂತರವೇ ಮನೆಯ ಯಜಮಾನನು ಪ್ರಸಾದವನ್ನು ಸ್ವೀಕರಿಸಬೇಕು.

ಪಂಡಿತೋ ವಾಽಥವಾ ಮೂರ್ಖಃ ಪ್ರಿಯೋ ವಾ ದ್ವೇಷ್ಯ ಏವ ವಾ।
ಸಂಪ್ರಾಪ್ತೋ ಯಸ್ತು ಪೂಜಾಂತೇ ಸ ವೈ ಶಂಭುರ್ನ ಸಂಶಯಃ॥
ಮಾಹೇಶ್ವರಂ ಹಿ ಸದ್ಭಕ್ತ್ಯಾ ಪೂಜಯೇತ್ ಗೃಹಮಾಗತಮ್।
ಜಂಗಮಂ ಚ ಸಮಾರಾಧ್ಯ ಪ್ರಸಾದಮುಪಭುಜ್ಯ ಚ॥[೪೭]

ಪ್ರಸಾದ ಸ್ವೀಕಾರದ ನಂತರ ಭುಂಜಿಸಿದ ಆಹಾರವು ಚೆನ್ನಾಗಿ ಜೀರ್ಣವಾಗುವ ಸಲುವಾಗಿ ಯಾವುದೇ ಚಿಂತೆ ಇಲ್ಲದೇ ಸುಖವಾಗಿ ಕುಳಿತುಕೊಳ್ಳಬೇಕು. ಜೊತೆಗೆ ಶಿವಸ್ತೋತ್ರ, ಪುರಾಣ ವಾಚನ ಮುಂತಾದವುಗಳನ್ನು ಮಾಡಬೇಕು. ತದನಂತರ ಸಾಯಂಕಾಲದವರೆಗೆ ಜೀವನೋಪಾಯಕ್ಕೆ ಅರ್ಥಸಂಗ್ರಹಕ್ಕೆ ತೊಡಗಬೇಕು.

ಸುಖಮಾಸ್ತಾಯ ನಿಶ್ಚಿಂತಸ್ತದನ್ನಂ ಪರಿಣಾಮಯನ್।
ಸ್ತೋತ್ರಾಣಿ ಚ ಮಹೇಶಸ್ಯ ಪುರಾಣಾನಿ ಪಠೇತ್ ಪುನಃ॥
ಆಸಾಯಮಥ ಕುರ್ವೀತ ಯತ್ನಂ ಪೋಷ್ಯಾರ್ಥಸಿದ್ಧಯೇ॥[೪೮]

ಸಾಯಂ ವಿಧಿ:

ಸಾಯಂಕಾಲ ಜಲಸ್ನಾನ ಅಥವಾ ಭಸ್ಮಸ್ನಾನವನ್ನು ಮಾಡಿ ಎರಡು ವಿಧದ (ಗಾಯತ್ರೀ ಜಪ ಹಾಗೂ ಪಂಚಾಕ್ಷರೀ ಜಪ) ಸಂಧ್ಯಾವಂದನೆಯನ್ನು ಮಾಡಬೇಕು. ಅಗ್ನಿಕಾರ್ಯ ಹಾಗೂ 'ವೈಶ್ವದೇವ'[೪೯] ವಿಧಿಯೊಂದಿಗೆ ರಾತ್ರಿಯ ಪೂಜೆಯನ್ನು ಆಚರಿಸಬೇಕು. ನಂತರ ಅತಿಥಿಸತ್ಕಾರ, ಪ್ರಸಾದ ಸ್ವೀಕಾರ ಮಾಡಬೇಕು. ಸ್ವೀಕರಿಸಿದ ಆಹಾರವು ಪ್ರಸಾದದ ಅನುಭೂತಿಯನ್ನುಂಟು ಮಾಡಲು ಶಿವಸ್ತೋತ್ರ ಮುಂತಾದವುಗಳ ಪಠನವನ್ನು ಮಾಡಬೇಕು.

ಸಾಯಂ ತು ವಾರುಣಂ ಸ್ನಾನಂ ನಿರ್ವರ್ತ್ಯಾಗ್ನೇಯಮೇವ ವಾ।
ಉಪಾಸ್ಯ ಪಶ್ಚಿಮೇ ಸಂಧ್ಯೇ ವಹ್ನಿಕಾರ್ಯಂ ಸಮಾಪ್ಯ ಚ॥
ವೈಶ್ವದೇವಂ ವಿಧಾಯಾಥ ರಾತ್ರಿಪೂಜಾಂ ಸಮಾಚರೇತ್॥
ಅತಿಥಿಂ ಚ ಸಮಾರಾಧ್ಯ ಪ್ರಸಾದಮುಪಭುಜ್ಯ ಚ।
ಪಠನ್ ಸ್ತೋತ್ರಾಣಿ ವೈ ಶಂಭೋಸ್ತದನ್ನಂ ಪರಿಣಾಮಯನ್॥[೫೦]

ಮಲಗುವ ಕ್ರಮ: ದಿನದ ಎಲ್ಲ ವಿಧಿಗಳ ಆಚರಣೆಯ ನಂತರ ಪ್ರಸನ್ನ ಮನಸ್ಕನಾಗಿ ಶಿವನ ಧ್ಯಾನವನ್ನು ಮಾಡುತ್ತ ತನ್ನ ಮನಸ್ಸಿಗೆ ಹಿತವೆನಿಸುವ ಸುಖವಾದ ನಿದ್ರೆಯನ್ನು ಹೊಂದುವಂತಹ ಹಾಸಿಗೆಯ ಮೇಲೆ ಮಲಗಿಕೊಳ್ಳಬೇಕು.

ಆದಿಶಯ್ಯಾಂಽಭಿರುಚಿತಾಂ ಶಯ್ಯಾಂ ಶಂಭುಂ ಶುಚಿಃ ಸ್ಮರನ್।
ಧ್ಯಾಯನ್ ಶಯೀತ ನಿಶ್ಚಿಂತಸ್ತತೋ ನಿದ್ರಾಸುಖಂ ವ್ರಜೇತ್॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತತಃ ಶಯ್ಯಾಂ ಸುಖಕರೀಮಧಿಶಯ್ಯ ಶುಚಿಸ್ತು ಮಾಮ್।
ಧ್ಯಾಯನ್ ಶಯೀತ ಚ ಸುಖಮುತ್ಸೃಷ್ಟಾಖಿಲಚಿಂತನಃ॥[೯೦]

ಹೀಗೆ ಮೇಲೆ ಹೇಳಿದ ವೀರಶೈವರಿಗೆ ಯೋಗ್ಯವಾದ ಆಹ್ನಿಕವನ್ನು ಆಚರಿಸಿದ ಪ್ರತಿಯೊಬ್ಬನೂ ಸಕಲದುರಿತಗಳಿಂದ ಮುಕ್ತನಾಗುವನು. ನಾಸ್ತಿಕತೆಯಿಂದಲಾಗಲಿ, ಮೂರ್ಖತನದಿಂದಾಗಲಿ ಈ ಶಿವಧರ್ಮದ ಅನುಷ್ಠಾನವನ್ನು ಮಾಡದೇ ಹೋದಲ್ಲಿ ಅಂಥವನು ಈ ಜನ್ಮದಲ್ಲಿ ನಿಂದ್ಯನಾಗಿ ಮತ್ತೆ ಜನನ-ಮರಣರೂಪೀ ಸಂಸಾರಚಕ್ರದಲ್ಲಿ ಸಿಲುಕಿ ಹೀನಯೋನಿಗಳಲ್ಲಿ ಜನ್ಮ ಹೊಂದುತ್ತಾನೆ.[೯೨]

ಉಲ್ಲೇಖಗಳು ಮತ್ತು ಟಿಪ್ಪಣಿಗಳು

೧. ಮಕುಟಾಗಮ, ಕ್ರಿ.ಪಾ., ೨.೨.

೨. ಗರುಡಪುರಾಣ, ೨.೨೪.

೩. ಸಮಗ್ರ ವಚನ ಸಂಪುಟ, ೧.೧೭೨.

೪. ಸಮಯೋಚಿತ ಪದ್ಯಮಾಲಿಕಾ.

೫. ಸಿದ್ಧಾಂತ ಶಿಖಾಮಣಿ, ೪.೩೩.

೬. ಚಂದ್ರಜ್ಞಾನಾಗಮ, ಕ್ರಿ.ಪಾ., ೧.೪೫-೪೬.

೭. ಅದೇ, ಕ್ರಿ.ಪಾ. ೧.೩.

೮. ಕಾರಣಾಗಮ, ಕ್ರಿ.ಪಾ., ೩.೪-೫.

೯. ಚಂದ್ರಜ್ಞಾನಾಗಮ, ಕ್ರಿ.ಪಾ. ೧೧.೩-೪.

೧೦. ತತೋ ಗ್ರಾಮಾದ್ ಬಹಿರ್ಯಾಯಾದಾಗ್ನೇಯೀಂ ವಿದಿಶಂ ನರಃ।
ಶರಕ್ಷೇಪಮಿತಾಂ ತತ್ರ ಜಲಪಾತ್ರಂ ನಿಧಾಯ ವೈ॥
-ಕಾರಣಾಗಮ, ಕ್ರಿ.ಪಾ., ಪ-೩, ಶ್ಲೋ-೮.

೧೧. ಬಹಿರ್ಗಚ್ಛೇದಪಿ ತತೋ ದೂರಾದಾವಸಥಾದ್ ಬುಧಃ।
ಉಪವೀತಂ ಲಿಂಗಸೂತ್ರಂ ಪೃಷ್ಠತಃ ಕಂಠಲಂಬಿತಮ್।
ಕೃತ್ವಾ ಪ್ರಾವೃತ್ಯ ಚ ಶಿರೋ ವಿಣ್ಮೂತ್ರೋತ್ಸರ್ಗಮಾಚರೇದ್॥
-ಮಕುಟಾಗಮ, ಕ್ರಿ.ಪಾ., ಪ-೨, ಶ್ಲೋ-೬.

೧೨. ....ಸೋರ್ಧ್ವಂ ಚ ನಾಥಶ್ಚೈವ ವಿಲೋಕಯನ್।
ಸೋಮಮಗ್ನಿಮಥಾದಿತ್ಯಂ ಕುರ್ವನ್ನಾಭಿಮುಖಂ ದ್ವಿಜಃ॥
-ಕಾರಣಾಗಮ, ಕ್ರಿ.ಪಾ., ಪ-೨, ಶ್ಲೋ-೯-೧೦.

೧೩. ತತೋ ಯಾವನ್ಮನಃಶುದ್ಧಿರ್ಮೃತ್ಸ್ನಯಾ ಚ ಜಲೇನ ಚ।
ಶೌಚಂ ಕುರ್ಯಾತ್ ಪ್ರಯತ್ನೇನ ಶೌಚಹೀನೋ ಪತತ್ಯಧಃ॥
-ಮಕುಟಾಗಮ, ಕ್ರಿ.ಪಾ., ಪ-೨, ಶ್ಲೋ-೭.

೧೪. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೫-೬.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೫. ಆಚಮ್ಯ ಪ್ರಾಙ್ಮುಖೋ ನಿತ್ಯಮಾಚರೇದ್ ದಂತಧಾವನಮ್।
ಮಧುರಿತ್ಯಾದಿಮಂತ್ರೇಣ ಶಾಖಾಂ ಸಮಭಿಮಂತ್ರ್ಯ ಚ॥
ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶುವಸೂನಿ ಚ।
ಬ್ರಹ್ಮ ಪ್ರಜ್ಞಾಂ ಚ ಮೇಧಾಂ ಚ ತ್ವಂ ನೋ ದೇಹಿ ವನಸ್ಪತೇ।
ಇತಿ ಸಂಪ್ರಾರ್ಥ್ಯ ಮಂತ್ರೇಣ ಧಾವಯೇಚ್ಛಾಖಯಾ ತಥಾ॥
ಸರ್ವೇ ಕಂಟಕಿನಃ ಶಸ್ತಾಃ ಕ್ಷೀರಿಣೋ ದಂತಧಾವನೇ।
ನ ಬಿಲ್ವಶಾಖಯಾ ಕುರ್ಯಾದ್ ದಂತಶುದ್ಧಿ ಕದಾಚನ॥
-ಕಾರಣಾಗಮ, ಕ್ರಿ.ಪಾ., ಪ-೩, ಶ್ಲೋ-೧೮-೨೦.

೧೬. ತತ ಆಮ್ರಾದಿಭಿಃ ಕಾಷ್ಠೈರ್ದಂತಧಾವನಮಾಚರೇತ್।
ಪ್ರಕ್ಷಾಲ್ಯ ಚ ಮುಖಂ ಧೀಮಾನಾಚಮ್ಯ ಚ ತತಃ ಪರಮ್॥
-ಮಕುಟಾಗಮ, ಕ್ರಿ.ಪಾ., ಪ-೨, ಶ್ಲೋ-೯.

೧೭. ಮಹಾನದ್ಯೋ ದೇವಖಾತಾಸ್ತಟಾಕಾಶ್ಚ ಸರಾಂಸಿ ಚ।
ಗರ್ತಪ್ರಸ್ರವಣಾದೀನಿ ಶಸ್ತಾನಿ ಸ್ನಾನಕರ್ಮಣಿ॥
-ಕಾರಣಾಗಮ, ಕ್ರಿ.ಪಾ., ಪ-೩, ಶ್ಲೋ-೨೧.

೧೮. ಹೃದಯೇನ ತತೋ ವಿದ್ವಾನ್‌ಪಿತೃದೇವತಾಂಶ್ಚ ತರ್ಪಯೇತ್।
-ಸಾರ್ಧತ್ರಿಶತಿಕಾಲೋತ್ತರಾಗಮ, ಪ-೩, ಶ್ಲೋ-೯.

೧೯. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೭-೯.

೨೦. ಕಾರಣಾಗಮ, ಕ್ರಿ.ಪಾ., ೩.೨೨-೨೩.

೨೧. ಅದೇ, ಕ್ರಿ.ಪಾ., ೩.೨೪-೨೫.

೨೨. ಸಾರ್ಧತ್ರಿಶತಿಕಾಲೋತ್ತರಾಗಮ, ೩.೧.

೨೩. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೧೦.

೨೪. ಆಚಮ್ಯ ಚೈವ ಸಂಕಲ್ಪ್ಯ ಭಸ್ಮಸ್ನಾನಂ ಸಮಾಚರೇತ್॥
-ಮಕುಟಾಗಮ, ಕ್ರಿ.ಪಾ., ೨-೧೨.

೨೫. ಅದೇ, ಕ್ರಿ.ಪಾ., ೧೧.೧೧.

೨೬. ಅದೇ, ಕ್ರಿ.ಪಾ., ೧೧.೧೨.

೨೭. ಶಿವರಹಸ್ಯ, ಸಪ್ತಮಾಂಶ, ೧೩.೬೭-೬೮.

೨೮. ಸಮಗ್ರ ವಚನಸಂಪುಟ, ೧.೧೩೮೩.

೨೯. (ಭಸ್ಮ ಹಾಗೂ ರುದ್ರಾಕ್ಷ ಕುರಿತು ಪ್ರಸ್ತುತ ಗ್ರಂಥದಲ್ಲಿರುವ ವಿಶೇಷ ಪ್ರಬಂಧಗಳನ್ನು ಗಮನಿಸಿ).

೩೦. ತತೋ ಮಧ್ಯಪುಷೇ ಸೂರ್ಯಯಾರ್ಘ್ಯತ್ರಿತಯಮರ್ಪಯೇತ್।
ಅಥ ಮದ್ದೇವತಾಂ ದೇವೀಂ ಸಾವಿತ್ರೀಂ ಪ್ರಯತೋ ಜಪೇತ್॥
-ಮಕುಟಾಗಮ, ಕ್ರಿ.ಪಾ., ೨.೨೩.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೩೦ಎ. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೫೯.

೩೧. ಅದೇ, ಕ್ರಿ.ಪಾ., ೧೧,೧೬-೧೮.

೩೨. ಅದೇ, ಕ್ರಿ.ಪಾ., ೩.೭.

೩೩. ಸವಿತುರ್ಮಂಡಲಸ್ವಾಮೀ ಸಾವಿತ್ರೀದೇವತಾಽಸ್ಮ್ಯಹಮ್॥
ಸಂಧ್ಯಾಕಾಲೇ ಮದಸ್ಯಾ ತು ದೇವತಾ ಯದ್ಯುಪಾಸ್ಯತೇ।
ಚತ್ವಾರಿ ತಸ್ಯ ನಶ್ಯಂತಿ ಹ್ಯಾಯುಃ ಪ್ರಜ್ಞಾ ಯಶೋ ಬಲಮ್॥
-ಕಾರಣಾಗಮ, ಕ್ರಿ.ಪಾ., ಪ-೩, ಶ್ಲೋ-೫೫-೫೬.

೩೪. ಸಮಗ್ರ ವಚನ ಸಂಪುಟ, ೧.೫೨೯.

೩೫. ಪರಬ್ರಹ್ಮರೂಪಾ ಚ ನಿರ್ವಾಣಪದದಾಯಿನೀ।
ಬ್ರಹ್ಮತೇಜೋಮಯೀ ಶಕ್ತಿಸ್ತದಧಿಷ್ಠಾತೃದೇವತಾ॥
-ದೇವೀಭಾಗವತ, ೮,೧,೪೨.

೩೬. ಗಾಯತ್ರೀ ಸಾ ಮಹೇಶಾನೀ ಪರಬ್ರಹ್ಮಾತ್ಮಿಕಾ ಮತಾ।
-ರುದ್ರಗಾಯತ್ರೀ

೩೭. ಜಪೇತ್ ಭಾನೂದಯಾಂತಂ ಚ ಸಾವಿತ್ರೀಂ ಯತಮಾನಸಃ।
....॥
....
ಜಪೇತ್ ಷಡಕ್ಷರೀಂ ಸಾಂಗಾಂ ಶ್ರೀರುದ್ರಾದೀನ್ ವಿಶೇಷತಃ॥
-ಕಾರಣಾಗಮ, ಕ್ರಿ.ಪಾ., ಪ-೩, ಶ್ಲೋ-೬೦,೬೧.

೩೮. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೪೭-೪೯.

೩೯. ಅದೇ, ಕ್ರಿ.ಪಾ., ೧೧.೫೦-೫೩.

೪೦. ೨೪ ತಾಸುಗಳ ಒಂದು ದಿನದ ಅವಧಿಯಲ್ಲಿ ೬ ಭಾಗಗಳನ್ನು ಮಾಡಿ ೪ ತಾಸುಗಳ ಬೆಳಗಿನ ಅವಧಿ ಎಂದು ತಿಳಿಯಬೇಕು.

೪೧. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೫೪-೫೭.

೪೨. ಮಕುಟಾಗಮ, ಕ್ರಿ.ಪಾ., ೨.೩೪.

೪೩. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೫೮.

೪೪. ಅದೇ, ಕ್ರಿ.ಪಾ., ೧೧.೫೯-೬೨.

೪೫. ಅದೇ, ಕ್ರಿ.ಪಾ., ೧೧.೬೩-೬೫.

೪೬. ಸಮಗ್ರ ವಚನ ಸಂಪುಟ, ೩,೧೭೪.

೪೭. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೬೬-೬೭.

೪೮. ಅದೇ, ಕ್ರಿ.ಪಾ., ೧೧.೬೮.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೪೯. ಭೋಜನಕ್ಕೆ ಮೊದಲು ಗೋವು ಮುಂತಾದ ಪ್ರಾಣಿಗಳಿಗೆ ಹಾಗೂ ಅತಿಥಿಗಳ ಭೋಜನದ ಸಲುವಾಗಿ ಆಹಾರವನ್ನು ಪ್ರತ್ಯೇಕವಾಗಿ ತೆಗೆದಿಡುವ ವೈದಿಕ ಕ್ರಿಯೆಗೆ 'ವೈಶ್ವದೇವ' ಎಂದು ಕರೆಯುತ್ತಾರೆ. [ನೋಡಿ- ಕಾರಣಾಗಮ (ಶೈವಭಾರತೀಶೋಧ ಪ್ರತಿಷ್ಠಾನ ಪ್ರಕಟಿತ) ೧.೩.೭೭ರ ಅಡಿಟಿಪ್ಪಣಿ, ಪು. ೫೧].

೫೦. ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೬೯-೭೦.

೫೧. ಮಕುಟಾಗಮ, ಕ್ರಿ.ಪಾ., ೨.೪೯.

೫೨. ಶಾಂಭವಾನಾಮನುಷ್ಠೇಯೋ ಧರ್ಮಸ್ತೇ ವಿನಿಬೋಧಿತಃ।
ಏವಂ ಸಮಾಚರನ್ ಮರ್ತ್ಯೋ ಮುಚ್ಯತೇ ಸರ್ವಕಿಲ್ಬಿಷೈಃ॥
ನಾಸ್ತಿಕ್ಯಾದಥ ಬಾಲಿಶ್ಯಾದ್ ಯೋ ಧರ್ಮಂ ನ ನಿಷೇವತೇ।
ಸ ಗರ್ಹಾಮಿಹ ಸಂಪ್ರಾಪ್ಯ ಹೀನಯೋನಿಷು ಜಾಯತೇ॥
-ಚಂದ್ರಜ್ಞಾನಾಗಮ, ಕ್ರಿ.ಪಾ., ೧೧.೭೨-೭೩.

೦

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಮ್ಮ ಲೇಖಕರು

ಡಾ|| ಎಂ. ಶಿವಕುಮಾರಸ್ವಾಮಿ
ನಂ. ೮೮, ೪ನೇ ಕ್ರಾಸ್ ಡಯಾಗೋನಲ್ ರಸ್ತೆ
೮ನೇ ಮುಖ್ಯರಸ್ತೆ, ಆರ್.ಪಿ.ಸಿ. ಬಡಾವಣೆ
ಬೆಂಗಳೂರು-೫೬೦ ೦೪೦

ವಿದ್ವಾನ್ ಜಿ.ವಿ. ಶಿವಸ್ವಾಮಿ
'ಜ್ಞಾನಸದನ' ನಂ. ೨೩೦೬,
೩ನೇ 'ಬಿ' ಮುಖ್ಯರಸ್ತೆ, ವಿಜಯನಗರ ೨ನೇ ಹಂತ
ಬೆಂಗಳೂರು-೫೬೦ ೦೪೦

ಡಾ|| ಸಿ. ಶಿವಕುಮಾರಸ್ವಾಮಿ
ರೀಡರ್, ಸಂಸ್ಕೃತ ವಿಭಾಗ
ಬಸವೇಶ್ವರ ಪ್ರಥಮದರ್ಜೆ ಕಾಲೇಜು
ರಾಜಾಜಿನಗರ, ಬೆಂಗಳೂರು-೫೬೦ ೦೧೦

ಶ್ರೀ ಸಿದ್ಧರಾಮ ದೇವರು ಹಿರೇಮಠ
ಹಿಪ್ಪರಗಿ, ತಾ|| ಜಮಖಂಡಿ
ಜಿಲ್ಲಾ: ಬಾಗಲಕೋಟೆ

ಷ|| ಬ್ರ|| ಡಾ|| ಮಹಾದೇವ ಶಿವಾಚಾರ್ಯರು
ಬಬಲೇಶ್ವರ ಮಠ
ಬಬಲೇಶ್ವರ
ಜಿಲ್ಲಾ: ಬಿಜಾಪುರ

ಶ್ರೀ ಶಂಭುಲಿಂಗ ದರೂರ
ತಾ|| ಅಥಣಿ, ಜಿ|| ಬೆಳಗಾಂ
ದರೂರ -೫೯೧೨೬೧

ಡಾ|| ಆರ್.ಎಸ್. ಸದಾಶಿವಯ್ಯ
ರೀಡರ್, ಸಂಸ್ಕೃತ ವಿಭಾಗ
ಕಲ್ಪತರು ವಿಜ್ಞಾನ ಕಾಲೇಜು
ತಿಪಟೂರು-೫೭೨೨೦೨

ಡಾ|| ಮಲ್ಲಿಕಾರ್ಜುನ ಪರಡ್ಡಿ
ಜಯನಗರ, ಧಾರವಾಡ.

ಶ್ರೀ ಷಣ್ಮುಖಯ್ಯ ಅಕ್ಕೂರುಮಠ
ನಂ. ೬೮, 'ದೇವಗಂಗೋತ್ರಿ'
ಶಂಕರಮಠ ರಸ್ತೆ, ಶಂಕರಪುರ
ಬೆಂಗಳೂರು-೫೬೦೦೦೪

ವಿದ್ವಾನ್ ಬಿ. ರಾಜಶೇಖರಯ್ಯ
೧೫೯೩, ೧ನೇ ಕ್ರಾಸ್, ವಿದ್ಯಾನಗರ
ಮಂಡ್ಯ-೫೭೧೪೦೧

ವಿದ್ವಾನ್ ಕೋ.ರಂ. ಬಸವರಾಜು
ಸಹಪ್ರಾಧ್ಯಾಪಕರು
ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು
ಸಿದ್ಧಗಂಗಾಮಠ-೫೭೨೧೦೫

ಶ್ರೀ ಶ್ರೀಕರದೇವರು ಹಿರೇಮಠ
ವಿದ್ಯಾವಾಚಸ್ಪತಿ ಶ್ರೀ ಶಂಭುಲಿಂಗಸ್ವಾಮಿಗಳ
ಮಠ, ಜೋರಾಪುರ ಪೇಟೆ, ಹಿರೇಮಠ ರಸ್ತೆ,
ಬಿಜಾಪುರ-೫೮೬೧೦೧

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

ವೀರಶೈವ ಅನುಸಂಧಾನ ಸಂಸ್ಥಾನದ ಪ್ರಕಟಣೆಗಳು

೧. ಮಕುಟಾಗಮ

ಅನುವಾದಕರು : ಡಾ|| ಸಿ. ಶಿವಕುಮಾರ ಸ್ವಾಮಿ

೨. ಸಿದ್ಧಾಂತ ಶಿಖಾಮಣಿ ವಿಚಾರ ದೀಪ್ತಿ

ಸಂಪಾದಕರು : ಡಾ|| ಎಂ. ಶಿವಕುಮಾರ ಸ್ವಾಮಿ

೩. ಶೈವಾಗಮಗಳಲ್ಲಿ ವೀರಶೈವ

ಸಂಪಾದಕರು : ಡಾ|| ಎಂ. ಶಿವಕುಮಾರ ಸ್ವಾಮಿ

೪. ಕಾರಣಾಗಮ

ಅನುವಾದಕರು : ಡಾ|| ಮಲ್ಲಿಕಾರ್ಜುನ ಪರಡ್ಡಿ

೫. ಪಾರಮೇಶ್ವರಾಗಮ

ಸಂಪಾದಕರು ಮತ್ತು ಅನುವಾದಕರು :

ಡಾ|| ಎಂ. ಶಿವಕುಮಾರ ಸ್ವಾಮಿ

೬. ಸೂಕ್ಷ್ಮಾಗಮ

ಅನುವಾದಕರು : ಷಣ್ಮುಖಯ್ಯ ಅಕ್ಕೂರಮತ